THE MYSORE
REVENUE & AGRICULTURAL GAZETTE.

ವಾಲ್ಯೂಂ ೪.] ಸೋಮವಾರ, ೧ನೆ ನವೆಂಬರ್ ೧೯೦೯. [ನಂ. ೧.

Contents.

1. Extract from the Dewan's Dasara Address, 1909.
2. Camphor.
3. Revenue Appeals.
4. Threshing Grains.
5. The Mysore Health Exhibition.
6. Oil Seeds.
7. Malaria Conference.
8. Indian Raiyats and Agricultural Improvements.
9. Occasional Notes.
   (i) Honorary Organisers of Co-operative Societies. (ii) Depot of Agricultural Implements.

ಅನುಕ್ರಮಣಿಕೆ.

೧. ಚಾಲ್ತಿಸಾಲ್ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್‌ರವರು ಮಾಡಿದ ಉಪನ್ಯಾಸ.
೨. ಕರ್ಪೂರ.
೩. ರೆವಿನ್ಯೂ ಅಪೀಲುಗಳು.
೪. ಕಣದಲ್ಲಿ ಪೈರನ್ನು ಒಕ್ಕಿ ಕಾಳುಮಾಡುವದು.
೫. ಮೈಸೂರಿನಲ್ಲಿ ನಡೆದ ಆರೋಗ್ಯ ವಸ್ತು ಪ್ರದರ್ಶನ.
೬. ಎಣ್ಣೆಬೀಜಗಳು.
೭. ವಿಷಮಜ್ವರ ಸಂಬಂಧವಾದ ಮಹಾಸಭೆಯು.
೮. ಇಂಡಿಯಾದೇಶದ ರೈತರು ಮತ್ತು ವ್ಯವಸಾಯಸಂಬಂಧವಾದ ತಿದ್ದುಪಾಟುಗಳು.
೯. ವಿವಿಧ ವೃತ್ತಾಂತಗಳು.
   (i) ಕೋಆಪರೇಟೀವ್ ಸೊಸೈಟಿಗಳ ಗೌರವಸ್ಥಾಪಕರು. (ii) ವ್ಯವಸಾಯ ಮುಟ್ಟುಗಳ ಕೋಠಿ.

xtract from the Dewan's Dasara Address, 09.

ಚಾಲ್ತಿಸಾಲ್ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್‌ರವರು ಮಾಡಿದ ಉಪನ್ಯಾಸ.

ರಾಗಿಯ, ಬೆಳೆಗೆ ಸೊಪ್ಪಿನ ಗೊಬ್ಬರವನ್ನು ಉಪಯೋಗಿಸುವದರ

ವ್ಯವಸಾಯ ಇಲಾಖೆ.

ಪ್ರಯೋಜನ; ಬತ್ತದ ಸಾಗುವಳಿ ಮಾಡುವ ವಿಧಾನಗಳು; ಅದಕ್ಕೆ ಬೇಕಾದ ಗೊಬ್ಬರ; ಬತ್ತವನ್ನೂ ಕಡಲೆಯನ್ನೂ ಬದಲಾಯಿಸಿ ಸಾಗುವಳಿ ಮಾಡುವುದರಿಂದ ಉಂಟಾಗುವ ಪ್ರಯೋಜನ; ವರ್ಷದಲ್ಲಿ ಸದಾ ಕಬ್ಬಿನ ಬೆಳೆ ಒಂದನ್ನೇ ಇಡುವುದರ ಕ್ರಮ; ಅದನ್ನು ಬತ್ತ, ನೆಲಗಡಲೇಕಾಯಿ, ಕಡಲೆ, ಇವುಗಳ ಜೊತೆಗೆ ಬದಲಾಯಿಸಿ ಪೈರು ಮಾಡುವುದರ ಪ್ರಯೋಜನ: ಇವೇ ಮೊದಲಾದ ವಿಷಯಗಳನ್ನು ತಿಳಿದುಕೊಳ್ಳುವುದಕ್ಕೋಸ್ಕರ ಹೆಬ್ಬಾಳದ ವ್ಯವಸಾಯ ಪರೀಕ್ಷಾಕ್ಷೇತ್ರದಲ್ಲಿ ಅಜಮಾಯಿಷಿಗಳನ್ನು ನಡೆಸಲಾಯಿತು. ಈ ಅಜಮಾಯಿಷಿಯಿಂದ ಕಂಡುಬಂದ ಅಂಶಗಳ ರಿಪೋರ್ಟು ಬಂದ ತರುವಾಯ ಇವುಗಳನ್ನು ಫಾಯಿಷ್ಮಾಡಲಾಗುವುದು. ಬೇರೆ ಬೇರೆ ರಕಂ ಭತ್ತ, ಕಬ್ಬು, ಇವುಗಳ ಸಾಗುವಳಿಯಲ್ಲಿಯೂ ಅಜಮಾಯಿಷಿ ನಡೆಯಿತು.

ರೆವಿನ್ಯೂ ಕಮಿಷನರವರು ಕೆಲವು ರಕಂ ಬತ್ತ, ನೆಲಗಡಲೆಕಾಯಿ, ಹುಲ್ಲು, ಇವುಗಳ ಬಿತ್ತನೆ ಕಾಳುಗಳನ್ನು ಇತರ ಕಡೆಗಳಿಂದ ತರಿಸಿಕೊಂಡು ಅಜಮಾಯಿಷಿ ಬಗ್ಗೆ ಜಮೀನ್ದಾರರಿಗೆ ಹಂಚಿದರು; ಮತ್ತು ಕೆಲವು ವ್ಯವಸಾಯದ ಮುಟ್ಟುಗಳನ್ನು ಪ್ರದರ್ಶಿಸುವುದಕ್ಕೂ, ಉಪಯೋಗಿಸಿ ತೋರಿಸುವುದಕ್ಕೂ, ಬೇಕಾದವರಿಗೆ ತರಿಸಿಕೊಡುವುದಕ್ಕೂ ತಕ್ಕ ಏರ್ಪಾಡುಗಳನ್ನು ಮಾಡಿದರು. ಮಾರೀಕಣಿವೆ ಕೆರೆ ಕೆಳಗಣ ಕೆಲವು ಜಮೀನುಗಳಲ್ಲಿ ಅಜಮಾಯಿಷಿ ತರೀಕ್ ಹಿಪ್ಪನೇರಳೆ ಪೈರು ಇಡಿಸಿದೆ.

ಇಷ್ಟೇ ಅಲ್ಲದೆ ಮೇಲ್ಕಂಡ ಪರೀಕ್ಷಾಕ್ಷೇತ್ರದಲ್ಲಿ ಸಕ್ಕರೆ ಮಾಡುವ ವಿಧಾನವನ್ನು ಜನಗಳಿಗೆ ತೋರಿಸಿ ಕೊಡುವ ಉದ್ದಿಶ್ಯ ಒಂದು ಪ್ರದರ್ಶನವನ್ನು ಏರ್ಪಡಿಸಿ ಸೆಂಟ್ರಿಫ್ಯೂಗಲ್ ಎಂಬ ಎಂತ್ರದಿಂದ ಸಕ್ಕರೆ ತಯಾರ್ಮಾಡಿದ್ದಲ್ಲದೆ, ಚೌಕವಾದ ಕೆಲವು ಕೊಪ್ಪರಿಗೆಗಳನ್ನು ಸಾಲಾಗಿಟ್ಟು ಕಬ್ಬಿನ ಹಾಲನ್ನು ಒಂದರಿಂದ ಇನ್ನೊಂದಕ್ಕೆ ಬಿಟ್ಟುಕೊಂಡು ಇವುಗಳಿಗೆ ತಕ್ಕಂತೆ ಉರಿ ಹೆಚ್ಚು ಕಮ್ಮಿ ಮಾಡಿ ಹಾಲನ್ನು ಕುದಿಸುವುದರಿಂದ ಪ್ಯಾಟೆಯಲ್ಲಿ ಮಾರಾಟಕ್ಕೆ ಬರುತ್ತಿರುವ ನಾಟು ಸಕ್ಕರೆಗಿಂತ ಬಹು ಶುಭ್ರವಾದ ಸಕ್ಕರೆಯನ್ನು ತಯಾರ್ಮಾಡಬಹುದೆಂದು ತೋರಿಸಲಾಯಿತು. ಕಾರ್ಬಿಯಿಂ

ಒಳ್ಳೇ ಬೆಲ್ಲವನ್ನೂ ತಯಾರ್ ಮಾಡಲಾಯಿತು. ಮೇಲ್ಕಂಡ ಪ್ರದರ್ಶನ ವನ್ನು ಅನೇಕ ರೈತಾಬಿ ಜನರು ನೋಡಿಕೊಂಡು ಹೋದರು. ಈ ಇಲಾಖೆಯುವರು ಕಬ್ಬಿನ ಬೆಳೆ, ಸಕ್ಕರೆ ತಯಾರಿ, ಈ ವಿಷಯಗಳಲ್ಲಿ ಕಂಡು ಹಿಡಿದಿರುವ ಅಂಶಗಳನ್ನು ಜನಗಳಿಗೆ ಸುಲಭವಾಗಿ ತಿಳಿಸುವ ಹಾಗೆ ಒಂದು ಪುಸ್ತಕವನ್ನು ಕನ್ನಡದಲ್ಲಿಯೂ ಇಂಗ್ಲೀಷಿನಲ್ಲಿಯೂ ತಯಾರ್ಮಾಡಿಸಿ ಕ್ಷಿಪ್ರದಲ್ಲಿಯೇ ಛಾಪಿಸಲಾಗುತ್ತದೆ.

ವ್ಯವಸಾಯ ಪರೀಕ್ಷಾಕ್ಷೇತ್ರದಲ್ಲಿ ಉಪಯೋಗಿಸುತ್ತಿರುವ ಹೊಸ ತರಹೆಯ ವ್ಯವಸಾಯದ ಮುಟ್ಟುಗಳು ಬೇಕೆಂದು ಅನೇಕರು ಅಪೇಕ್ಷಿಸಿದರು; ಆದಕಾರಣ ಅಂಥಾ ಮುಟ್ಟುಗಳನ್ನು ಇತರ ಡಿಸ್ಟ್ರಿಕ್ಟುಗಳಲ್ಲಿಯೂ ಪ್ರದರ್ಶಿಸಬೇಕೆಂದು ಉದ್ದೇಶಿಸಿದೆ. ಲ್ಯಾಬೊರೇಟರಿ ಯಾ ಶೋಧನಾಲಯದಲ್ಲಿ ಸೊಪ್ಪಿನ ಗೊಬ್ಬರ, ಕಬ್ಬು, ಕಾಫಿ, ವಿವಿಧ ಭೂಗುಣಗಳು, ಮತ್ತು ಯಾವಯಾವ ತರಹೆ ಜಮೀನಿನಲ್ಲಿ ನೀರು ಎಷ್ಟೆಷ್ಟು ಇರುತ್ತದೆ ಎಂಬೀವಿಷಯಗಳಲ್ಲಿ ಆಜಮಾಯಿಷಿ ನಡೆಸಿತು.

ಬೂಜು ವಗೈರೆ ಸಸ್ಯಣಗಳನ್ನು ಕುರಿತ ಶಾಸ್ತ್ರ.

ಈ ಬಾಬಿನಲ್ಲಿ ಅಡಿಕೆಯ ಮರಗಳಿಗೆ ತಗಲುವ ಕೊಳೇರೋಗದ ವಿಚಾರವಾಗಿ ನಡೆಸಿದ ಅಜಮಾಯಿಷಿಯೇ ಮುಖ್ಯವಾದುದು. ಈಶಾಸ್ತ್ರಜ್ಞರಾದ ಡಾಕ್ಟರ್ ಕೋಲ್ಮನ್ನವರು ಸದರಿ ರೋಗವು ಪ್ರಾಪ್ತವಾಗಿದ್ದಕಡೆಗಳಲ್ಲೆಲ್ಲಾ ವಿಶೇಷವಾಗಿ ಸಂಚಾರಮಾಡಿ ಸಾಗರ, ತೀರ್ಥಹಳ್ಳಿ ತಾಲ್ಲೂಕುಗಳಲ್ಲಿಯೂ, ಯಡೆಹಳ್ಳಿ ಸಬ್ ತಾಲ್ಲೂಕಿನಲ್ಲಿಯೂ ಅಜಮಾಯಿಷಿಗಳನ್ನು ನಡೆಸಿದರು. ಸದರೀ ರೋಗವು ವ್ಯಾಪಿಸಿದ ಕಡೆಯಲ್ಲಿಯೇ ಅಜಮಾಯಿಷಿ ಮಾಡುವಬಗ್ಗೆ ಸಾಗರ ತಾಲ್ಲೂಕು ತಾಳಗುಪ್ಪೆಯಲ್ಲಿ ಒಂದು ಸಣ್ಣ ಶೋಧನಾಲಯವನ್ನು ಏರ್ಪಡಿಸಿದ್ದರು. ಈ ಅಜಮಾಯಿಷಿಯಲ್ಲಿ ತೋರಬಂದ ಎಲ್ಲಾ ವಿಷಯಗಳನ್ನೂ ಪ್ರಚುರಪಡಿಸಲು ಇನ್ನೂ ಕೆಲವು ಕಾಲ ಬೇಕು ; ಆದರೂ ರೋಗತಗಲಿದ ಮರಗಳಮೇಲೆ ಔಷಧವನ್ನು ಚಿಮುಕಿಸಿದರೆ ಸದರೀ ರೋಗವು ಬಹಳಮಟ್ಟಿಗೆ ಕಮ್ಮಿಯಾಗುತ್ತೆಂದು ಈಗಲೇ ತಿಳಿದುಬಂದಿದೆ. ಹೀಗೆ ಔಷಧ ಎರಚುವುದಕ್ಕಾಗಿ ಒಂದು ಹೊಸ ಸಾಧನವನ್ನು ತಯಾರ್ಮಾಡಿಸಿ ಉಪಯೋಗಿಸಿದ್ದ

ರಲ್ಲಿ ಸದರಿ ಕೆಲಸವು ಬಹು ತೃಪ್ತಿಕರವಾಗಿ ನಡೆಯಿತು. ಇದರ ಬೆಲೆಯೂ ಅಷ್ಟು ಜಾಸ್ತಿಯಾಗುವುದಿಲ್ಲ

ಉರಲಗೆಡ್ಡೆಗೆ ತಗಲುವ ಬಂಗಡಿರೋಗದ ವಿಚಾರವಾಗಿ ಅಜಮಾಯಿಷಿ ನಡೆಸಿದುದರಲ್ಲಿ ಸದರೀ ರೋಗವು ಸೂಕ್ಷ್ಮಕ್ರಿಮಿಗಳಿಂದ ಹುಟ್ಟುತ್ತದೆಯೇ ಹೊರತು ಹಿಂದೆ ತಿಳಿದುಕೊಂಡಿದ್ದಂತೆ ಸಸ್ಯಾಣುಗಳಿಂದ ಹುಟ್ಟುವುದಿಲ್ಲವೆಂದು ಕಂಡುಬಂತು. ಈ ವಿಚಾರವಾಗಿ ಈಚೆಗೆ ಒಂದು ಪತ್ರಿಕೆಯನ್ನು ಪ್ರಕಟಿಸಿರುತ್ತದೆ. ಅಡಕೆ ಮರಕ್ಕೆ ತಗಲುವ ಅಣಬೆ ರೋಗವನ್ನೂ, ವೀಳ್ಯದೆಲೆಗೆ ತಗಲುವ ಎಲೆರೋಗವನ್ನೂ ಪರಿಶೋಧಿಸುತ್ತಿರುವುದಲ್ಲದೆ, ಗಂಧದ ಮರಕ್ಕೆ ತಗಲುವ ಸ್ಪೈಕ್‌ರೋಗದ ವಿಚಾರವಾಗಿಯೂ ಶೋಧನೆ ಷುರುಮಾಡಿದೆ.

ಕ್ರಿಮಿಶಾಸ್ತ್ರಭಾಗದಲ್ಲಿ ಅನೇಕ ಕ್ರಿಮಿಗಳನ್ನು ಶೇಖರಿಸಿ ಅವುಗಳ ಗುಣ, ಸ್ವಭಾವ, ವಗೈರೆಗಳನ್ನು ಪರಿಶೋಧನೆ ಮಾಡುತ್ತಿರುವುದಲ್ಲದೆ ಸೊರಬ ತಾಲ್ಲೂಕಿನಲ್ಲಿ ಬತ್ತದ ಪೈರನ್ನು ವಿಶೇಷವಾಗಿ ನಷ್ಟಪಡಿಸುತ್ತಿರುವ ಒಂದು ವಿಧ ಮಿಡಿತೆಯನ್ನೂ, ಪೈರುಗಳನ್ನು ನಾಶಮಾಡುವ ಕಂಬಳೀಹುಳವನ್ನೂ ತುಂಬಾ ನಿಗೇಕೊಟ್ಟು ಅಜಮಾಯಿಷಿ ಮಾಡುತ್ತಿದೆ. ಇನ್ನು ಕೆಲವು ತಿಂಗಳನಂತರ ಪೈರುಗಳನ್ನು ನಾಶಪಡಿಸುವ ಸಸ್ಯಾಣುಗಳ ಮತ್ತು ಕ್ರಿಮಿಗಳ ವಿಚಾರವಾಗಿ ಜನರಿಗೆ ತಿಳಿಯುವಂತೆ ಅಲ್ಲಲ್ಲಿ ಉಪನ್ಯಾಸಗಳನ್ನು ಕೊಡುವ ಏರ್ಪಾಡು ಮಾಡಬೇಕೆಂದು ಯೋಚಿಸಿದೆ. ಈ ಉಪನ್ಯಾಸಗಳಲ್ಲಿ ಹೇಳುವ ಅಂಶಗಳನ್ನು ಮ್ಯಾಜಿಕ್ ಲ್ಯಾಂಟರ್ನ್ ಚಿತ್ರಗಳ ಮೂಲಕ ತೋರಿಸಿಕೊಡಲಾಗುವುದು. ಹೀಗೆ ಮಾಡುವುದರಿಂದ ರೈತಾಬಿಜನರಿಗೆ ಇಂಥಾ ವಿಷಯಗಳಲ್ಲಿ ಇನ್ನೂ ಹೆಚ್ಚು ಆಸಕ್ತಿ ಉಂಟಾದೀತೆಂದು ಸರಕಾರದವರು ನಂಬುತ್ತಾರೆ.

—o—

Camphor. *
ಕರ್ಪೂರ.

ಇಂಡಿಯಾ ದೇಶದಲ್ಲಿ ಲಾಭಕರವಾಗಿ ಬೆಳೆಯಬಹುದಾದ ಹೊಸ

*ಇಂಡಿಯನ್ ರಿವ್ಯೂ, ಸೆಪ್ಟಂಬರ್ ೧೯೦೯.

ಜಾತಿಯ ಮರಗಳ ಪೈಕಿ ಕರ್ಪೂರದ ಮರವೂ ಒಂದು. ಕರ್ಪೂರಕ್ಕೆ ಗಿರಾಕಿಯು ಹೆಚ್ಚಾಗುತ್ತಲೇ ಇರುವುದರಿಂದ, ಕಳೆದ ೧೦ ವರ್ಷಗಳಲ್ಲಿ ಇದರ ಬೆಲೆಯು ಬಹಳವಾಗಿ ಏರಿರುತ್ತದೆ. ಸಧ್ಯದಲ್ಲಿ ಕರ್ಪೂರವು ವಿಶೇಷವಾಗಿ ಜಪಾನೀಯರ ರಾಜ್ಯಗಳಲ್ಲಿ ಮಾತ್ರವೆ ತಯಾರಾಗುತ್ತದೆ. ಮತ್ತು ಸರಕು ಅಷ್ಟು ಜಾಸ್ತಿಯಾಗಿಯೂ ತಯಾರಾಗುತ್ತಿಲ್ಲ. ಆದುದರಿಂದ ಇನ್ನೂ ಕೆಲವು ವರ್ಷಗಳವರಿವಿಗೂ ಕರ್ಪೂರವನ್ನು ಜಾಸ್ತಿಯಾಗಿ ನಮ್ಮ ಸೀಮೆಯಲ್ಲಿ ತಯಾರು ಮಾಡಿದರೂ, ಇದರ ಬೆಲೆಯು ತಗ್ಗುವದಕ್ಕಾಗಲಿ, ಈ ಕಸಬಿನಿಂದ ಆದಾಯ ಬಾರದಿರುವುದಕ್ಕಾಗಲಿ, ಅವಕಾಶವಿರಲಾರದು.

ಈ ಮರವು ಸಾಮಾನ್ಯವಾಗಿ ಏಷ್ಯಾ ಖಂಡದ ಪೂರ್ವದಿಕ್ಕಿನ ಇಳಿಜಾರು ಭೂಮಿಯಲ್ಲಿ ಬೆಳೆಯುತ್ತದೆ. ಫಾರ್ಮೋಸಾ ದ್ವೀಪದ ಬೆಟ್ಟಗಳಲ್ಲಿ ಸಮುದ್ರ ಮಟ್ಟದಿಂದ ೨೦೦೦ ಅಡಿ ಎತ್ತರದವರಿವಿಗೂ ಸ್ವೇಚ್ಛೆಯಾಗಿ ಬೆಳೆಯುತ್ತದೆ. ಈ ಮರವು ಸುಮಾರು ೧೦೦ ಅಡಿಯಷ್ಟು ಎತ್ತರವಾಗಿಯೂ ಇದರ ಕಾಂಡವು ಎರಡು ಮೂರಡಿ ದಪ್ಪನಾಗಿಯೂ ಇರುವುದುಂಟು. ಇದರ ಎಲೆಯನ್ನು ಕೈಯಿಂದ ಕಿವುಚಿದರೆ ಬಲವಾದ ವಾಸನೆಯು ಹೊರಡುತ್ತದೆ. ಇದರ ಮರದಲ್ಲಿಯೂ ಒಳ್ಳೆಯ ವಾಸನೆ ಇರುತ್ತದೆ. ಇದರಿಂದ ಚೀಣಾ ಜಪಾನ್ ದೇಶಗಳಲ್ಲಿ ಕುರ್ಚಿ ಮೊದಲಾದ ಸಾಮಾನುಗಳನ್ನು ಮಾಡುತ್ತಾರೆ.

ಕರ್ಪೂರದ ಗಿಡವು ತೆಗ್ಗಾದ ಭೂಮಿಗಳಲ್ಲಿಯೂ ಉನ್ನತ ಪ್ರದೇಶಗಳಲ್ಲಿಯೂ ಮತ್ತು ಹಲ ವಿಧವಾದ ಹವಾಗಳಲ್ಲಿಯೂ ಬೆಳೆಯುತ್ತದೆ. ಸಿಲೋನ್ ದ್ವೀಪದಲ್ಲಿ, ಸಮುದ್ರ ಮಟ್ಟಕ್ಕಿಂತ ೧೦೦ ಅಡಿ ಎತ್ತರವಾದ ಪ್ರದೇಶದಲ್ಲಿಯೂ ಬೆಳೆದಿರುತ್ತದೆ. ೫೦೦೦ ಅಡಿ ಯಷ್ಟು ಎತ್ತರವಾದ ಭೂಮಿಯಲ್ಲಿಯೂ ಬೆಳೆದಿರುತ್ತದೆ. ಇದು ವಿಶೇಷ ಮಳೆಯಾಗುವ ಪ್ರಾಂತ್ಯದಲ್ಲಿ ನೀರು ನಿಲ್ಲದ ಮರಳು ಮಿಶ್ರವಾದ ಜೇಡು ಭೂಮಿಯಲ್ಲಿ ಬಹಳ ಜಾಗ್ರತೆಯಾಗಿ ಬೆಳೆಯುವುದು.

ಸಸಿಗಳನ್ನು ೫ ವಿಧವಾಗಿ ತೆಯಾರಿಸಬಹುದು.

(೧) ಬೀಜದಿಂದ,

(೨) ರೆಂಬೆಯನ್ನು ಬಗ್ಗಿಸಿ ನೆಲದಲ್ಲಿ ಹೂಳುವುದರಿಂದ,
(೩) ರೆಂಬೆಯ ತುಂಡುಗಳನ್ನು ಹೂಳುವುದರಿಂದ,
(೪) ಬೇರಿನ ತುಂಡುಗಳನ್ನು ಹೂಳುವುದರಿಂದ,
(೫) ಮರದ ಬುಡದಲ್ಲಿ ಹೊರಡುವ ಮೊಳಕೆಗಳಿಂದ,

ಇವುಗಳಲ್ಲಿ ಬೀಜದಿಂದ ಸಸಿಯನ್ನು ತಯಾರಿಸುವುದೆ ಸರ್ವೋತ್ತಮವಾದ ವಿಧಾನ. ಆದರೆ, ಬೀಜಗಳನ್ನು ೩—೪ ತಿಂಗಳು ಇಟ್ಟರೆ ಸಾರವು ಕಡಿಮೆಯಾಗಿಬಿಡುವುದರಿಂದ ಯಾವಾಗಲೂ ಒಳ್ಳೆ ಬಲಿತ ಹೊಸ ಬೀಜಗಳನ್ನೆ ಬಿತ್ತನೆಗೆ ಉಪಯೋಗಿಸಬೇಕು. ಇಂಥಾ ಬೀಜಗಳನ್ನು ನವಂಬರ್ ತಿಂಗಳಲ್ಲಿ ಜರ್ಮನ್ ದೇಶದಿಂದ ತರಿಸಿಕೊಳ್ಳುವುದು ಉತ್ತಮ.

ಕರ್ಪೂರವನ್ನು ತಯಾರುಮಾಡುವುದಕ್ಕೆ ಎರಡು ಸುಲಭವಾದ ಕ್ರಮಗಳುಂಟು.

(೧) ಒಂದು ದೊಡ್ಡ ಪಾತ್ರೆಯಲ್ಲಿ ನೀರು ತುಂಬಿ ಅದರಲ್ಲಿ ಕರ್ಪೂರಪೆಳೆಗಳನ್ನು ಹಾಕಿ ಒಲೆಯಮೇಲಿಟ್ಟು ಉರಿ ಹಾಕಬೇಕು. ನೀರು ಕುದಿಯಲಾರಂಭಿಸಿದೊಡನೆ ಆ ಪಾತ್ರೆಯಮೇಲೆ ಒಂದು ತಾಂಬ್ರದ ಮುಚ್ಚಳವನ್ನು ಮುಚ್ಚಬೇಕು. ಈ ಮುಚ್ಚಳವನ್ನು ಮಾತ್ರ ಯಾವಾಗಲೂ ತಣ್ಣಗಿರುವಂತೆ ಇಟ್ಟಿರಬೇಕು. ಹೀಗೆ ಮಾಡಿದರೆ ಸ್ವಲ್ಪ ಹೊತ್ತಿನಮೇಲೆ ಆ ಮುಚ್ಚಳದ ಒಳಗಡೆಯಲ್ಲಿ ಕರ್ಪೂರದ ಪುಡಿಯು ಮೆತ್ತಿಕೊಳ್ಳುತ್ತದೆ. ಇದನ್ನು ಕೆರೆದುಕೊಳ್ಳಬಹುದು. ಈ ಪುಡಿಯನ್ನು ಗಾಳಿಗೆ ತೆರೆದಿಟ್ಟರೆ ಹರಳುಗಳಾಗುತ್ತವೆ.

(೨) ಮತ್ತೊಂದು ಕ್ರಮವೇನಂದರೆ—ಕಡ್ಡಿಗಳನ್ನೂ ಎಲೆಗಳನ್ನೂ ಒಂದು ಬಿದುರು ಗೂಡೆಯಲ್ಲಿ ಹಾಕಿ ಗೂಡೆಯನ್ನು ನೀರಿರುವ ಒಂದು ದೊಡ್ಡ ಪಾತ್ರೆಯಲ್ಲಿ ತೇಲು ಬಿಟ್ಟು ಅದನ್ನು ಒಲೆಯಮೇಲಿಟ್ಟು ಕಾಯಿಸಬೇಕು. ಆ ಗೂಡೆಯಮೇಲೆ, ಆವಿಯನ್ನು ಘನಿ ಮಾಡುವದಕ್ಕೋಸ್ಕರ ತಣ್ಣೀರಿನ ಮಡಿಕೆಯನ್ನು ಇಟ್ಟಿರಬೇಕು. ಮಡಿಕೆಯ ನೀರನ್ನು ಮಾತ್ರ ಆಗಾಗ್ಯೆ ಬದಲಾಯಿಸುತ್ತಿರಬೇಕು. ಕೆಲವು ಘಂಟೆಗಳಕಾಲ ಹೀಗೆ ಕಾಯಿಸಿದಮೇಲೆ, ಗೂಡೆಯೊಳಗಿರುವ ಎಲೆಗಳನ್ನು ಹೊರಕ್ಕೆ ತೆಗೆದರೆ ಕರ್ಪೂರವು ಗೂಡೆಯ ಪಕ್ಕಗಳಿಗೆ ಅಂಟಿಕೊಂಡಿರುತ್ತದೆ.

ಪ್ರಪಂಚದಲ್ಲಿ ಸಾಲೀಯಾನ ಸುಮಾರು ೪| ಲಕ್ಷ ಮಣುವಿನಷ್ಟು ಕರ್ಪೂರವು ಹಾಲಿ ಖರ್ಚಾಗುತ್ತಿದೆಯೆಂತಲೂ, ಇದರ ಬೆಲೆ ಮಣ ಒಂದಕ್ಕೆ ಸುಮಾರು ೬೫ ರೂಪಾಯಿಗಳೆಂತಲೂ ಅಂದಾಜಾ ಹೇಳಬಹುದು. ಇಂಡಿಯಾ ದೇಶದಲ್ಲಿ ಕರ್ಪೂರಕ್ಕೆ ಗಿರಾಕಿ ಏನೂ ಕಡಿಮೆ ಇಲ್ಲವಾದ್ದರಿಂದ ಇದಕ್ಕೆ ತಕ್ಕಷ್ಟು ಕರ್ಪೂರವನ್ನಾದರೂ ಸ್ಥಳದಲ್ಲಿ ತಯಾರಿಸಲು ಪ್ರಯತ್ನಪಡಬಹುದು.

Revenue Appeals.

ರೆವಿನ್ಯೂ ಅಪೀಲುಗಳು.

೧೯೦೮—೦೯ನೆ ಇಸವಿಯ ಅಪೀಲ್ ನಂ ೧೬.

ಅಪೀಲುವಾದಿ.		ಅಪೀಲು ಪ್ರತಿವಾದಿ.
ಜವರೆ ಗೌಡ.	*vs.*	ನರಸಿಂಹಯ್ಯ.

ಮೊಕದ್ದಮೆಯ ವಿನ್ಯಾಸ.—ಕೃಷ್ಣರಾಜಪೇಟೆ ತಾಲ್ಲೂಕು ಸರ್ವಮಾನ್ಯ ಮಾಚವಳಲು ಗ್ರಾಮದ ಪಟೇಲ್ ಜವರೆಗೌಡನೆಂಬಾತನು ತನ್ನ ಖಾತೆ ಮೇಲೆ ೧೯೦೪-೦೫ನೆ ಸಾಲಿಗೆ ಬಾಕಿ ನಿಂತ ಕಂದಾಯದ ಮೊಬಲಗನ್ನು ಕೊಡಲು ತಪ್ಪಿದ್ದರಿಂದ, ಇನಾಂದಾರನು ಲ್ಯಾಂಡ್ ರೆವಿನ್ಯೂ ಕೋಡು ೯೭ನೆ ಸೆಕ್ಷನ್ ಮೇರೆ ಸಹಾಯ ಕೊಡಬೇಕೆಂದು ಡಿವಿಜನ್ ಆಫೀಸರವರಲ್ಲಿ ಕೇಳಿಕೊಂಡನು.

ಡಿವಿಜನ್ ಆಫೀಸರಿಂದ ಬಾಕೀದಾರನ ಮೇಲೆ ತಗಾದೆ ನೋಟೀಸು ಜಾರಿ, ವಗೈರೆ ಕ್ರಮಗಳು ಜರಗಿ, ಎರಡು ಖುಷ್ಕಿ ಜಮೀನುಗಳು ಹರಾಜು ಆಗಿ, ಅವನ್ನು ಹರಾಜಿನಲ್ಲಿ ಅಕ್ಕಿ ಹೆಬ್ಬಾಲದ ಬರಗತ ನರಸಿಹ್ಮಯ್ಯನೆಂಬಾತನು ೧೯ ರೂಪಾಯಿಗಳಿಗೆ ಪಡೆದನು. ಇದಾದ ನಾಲ್ಕು ದಿನಗಳಲ್ಲಿ ಜವರೆಗೌಡನು ಈ ಹರಾಜು ತನ್ನ ಗೈರ್ ಹಾಜರಿಯಲ್ಲಿ ಮೋಸದಿಂದ ನಡೆದಿರುತ್ತೆಂತಲೂ, ಬಾಕಿ ಮೊಬಲಗು ಇನಾಂದಾರನಿಗೆ ಆಗಲೆ ಪಾವತಿಯಾಗಿರುವದಾಗಿಯೂ, ಈ ಭಾಗ ವಿಚಾರಣೆಯಾಗಬೇಕೆಂದೂ ಅ

ದುವರಿವಿಗೆ ನೋಟೀಸಿನಲ್ಲಿ ಕಂಡ ಹಣವನ್ನು ತಾಲ್ಲೂಕು ಕಛೇರಿಯಲ್ಲಿ ಡಿಪಾಜಿಟ್ಟಿನಲ್ಲಿ ಇಟ್ಟಿರುವವಾಗಿಯೂ ಡಿವಿಜನ್ ಆಫೀಸರವರಲ್ಲಿ ಅರ್ಜಿಕೊಟ್ಟು ೮೪ ರೂಪಾಯಿಗಳನ್ನು ತಾಲ್ಲೂಕು ಖಜಾನೆಗೆ ರವಾನಿಸಿದನು. ಅವಲ್ಯಾಪ್ರು) ಹರಾಜು ಕಾಯಂಬಗ್ಗೆ ಕಟ್ಟನ್ನು ಡಿವಿಜನ್ ಆಫೀಸರವರಲ್ಲಿಗೆ ಕಳುಹಿಸಿಕೊಡಲು, ಇವರು ಅರ್ಜಿದಾರ ಜವರೇಗೌಡನು ಎಷ್ಟು ಮೊಬಲಗನ್ನು ಪಾವತಿ ಮಾಡಿರುತ್ತಾನೆಂಬ ವಿಷಯದಲ್ಲಿ ಇನಾಂದಾರನ ವಿಚಾರಣೆಯಾಗಿಲ್ಲವೆಂಬ ಆಧಾರದ ಮೇಲೆ ೨ ಸರ್ವೆನಂಬರುಗಳ ಹರಾಜನ್ನು ಕ್ಯಾನ್ಸಲ್ ಮಾಡಿದರು. ಅಪೀಲಿನಲ್ಲಿ ಡೆಪ್ಯುಟಿ ಕಮಿಷನರವರು ಒಂದು ಸರ್ವೆನಂಬರಿನ ಹರಾಜನ್ನು ಖಾಯಂಮಾಡಿ ಇದರಿಂದಲೇ ಬಾಕಿಹಣ ಪ್ರಾಪ್ತಿ ಫಡಚಾ ಆದ್ದರಿಂದ ಮತ್ತೊಂದರ ಹರಾಜನ್ನು ಕ್ಯಾನ್ಸಲ್ ಮಾಡಿದರು.

ಗೌರ್ನಮೆಂಟಿನವರ ತೀರ್ಮಾನ.— ಈ ಮೊಕದ್ದಮೆಯಲ್ಲಿ ಲ್ಯಾಂಡ್ ರೆವಿನ್ಯೂ ಕೋಡ್ ೯೮ನೆ ಸೆಕ್ಷನ್ ಮೇರೆ ಡೆಪ್ಯುಟಿ ಕಮಿಷನರವರೇ ಖುದ್ದಾಗಿ ಒಂದು ಫೂಟ್ ದರ್ಯಾಫ್ತಿಯನ್ನು ಮಾಡಿ ಇನಾಂದಾರನನ್ನು ಸಹ ವಿಚಾರಣೆ ಮಾಡಬೇಕಾಗಿತ್ತು. ಈ ಕ್ರಮ ಜರುಗಿರುವದಿಲ್ಲವಾಗಿ ಮುಂದೆ ನಡೆದಿರುವ ನಡವಳಿಕೆಗಳೆಲ್ಲಾ ರದ್ದಾಗತಕ್ಕವು. ಆದಪ್ರಯುಕ್ತ ಹರಾಜನ್ನು ಕ್ಯಾನ್ಸಲ್ ಮಾಡಿರುತ್ತೆ.

Threshing Grains. *

ಕಣದಲ್ಲಿ ಪೈರನ್ನು ಒಕ್ಕಿ ಕಾಳುಮಾಡುವುದು.

ತೆನೆಗಳನ್ನು ಕಾಳುಮಾಡುವುದರಲ್ಲಿ ಮೂರು ಬಗೆಯುಂಟು. (೧) ಎತ್ತುಗಳಿಂದ ತುಳಿಸುವುದು; (೨) ಕೋಲಿನಿಂದ ಬಡಿಯುವುದು; (೩) ಕಲ್ಲುಗುಂಡನ್ನು ಉರುಳಿಸುವುದು. ಇವುಗಳಪೈಕಿ ಮೂರನೆಯ ಕ್ರಮವು ನೂತನವಾದುದರಿಂದ ಅದರ ವಿಷಯವನ್ನು ಇಲ್ಲಿ ಸ್ವಲ್ಪಮಟ್ಟಿಗೆ ಪ್ರಸ್ತಾಪಿಸುವೆವು.

೧೮೭೬—೭೮ ನೆಯ ಇಸವಿಯಲ್ಲಿ ರಸ್ತೆಯ ಕಾಮಗಾರಿಗಳಿಗೋ

* ಒಕ್ಕಲಿಗರ ಪತ್ರಿಕೆ, ೨೩—೧೦—೧೯.

ಸ್ಕರ ಕಲ್ಲುಗುಂಡುಗಳು ವಿಶೇಷವಾಗಿ ಉಪಯೋಗಿಸಲ್ಪಡುತ್ತಿದ್ದುವು. ಕಡಪಾ ಡಿಸ್ಟ್ರಿಕ್ಟ ಪ್ರೊದತೂರು ತಾಲ್ಲೂಕು ಶೆಟ್ಟಿಪಲ್ಲಿ ಎಂಬ ಗ್ರಾಮದಲ್ಲಿ ಒಬ್ಬ ಬುದ್ಧಿವಂತನಾದ ರೈತನು ಒಂದು ದಿವಸ ಒಂದು ಕಲ್ಲುಗುಂಡು ಜೋಳದ ತೆನೆಯ ರಾಶಿಯಮೇಲೆ ಉರುಳಿಕೊಂಡು ಹೋಗಲು ಕಾಳು ತೆನೆ ಸಹ ಚನ್ನಾಗಿ ಪ್ರತ್ಯೇಕವಾದುದನ್ನು ನೋಡಿದನು. ಆ ಮೇಲೆ ಅವನು ಜೋಳದ ತೆನೆಯನ್ನು ಚಕ್ರಾಕಾರವಾಗಿ ೩ ಅಡಿ ಅಗಲ ಒಂದು ಮೊಳ ಎತ್ತರಕ್ಕೆ ಹರಡಿ ಅದರಮೇಲೆ ಒಂದು ಜೊತೆ ಎತ್ತು ಕಟ್ಟಿದ್ದ ಕಲ್ಲುಗುಂಡನ್ನು ಉರುಳಿಸಿದನು. ಅನೇಕಜೊತೆ ಎತ್ತುಗಳಿಂದ ತೆನೆಗಳನ್ನು ತುಳಿಸುವುದಕ್ಕಿಂತ ಕಲ್ಲುಗುಂಡನ್ನು ಉರುಳಿಸುವುದು ಬಹು ಲಾಭಕರವಾದುದೆಂದು ಈ ಪರೀಕ್ಷೆಯಿಂದ ಕಂಡುಕೊಂಡನು.

ಹೊಸ ರಸ್ತೆಗಳನ್ನು ಮಾಡುವಾಗ ಕಲ್ಲಿನ ಜಲ್ಲಿಯ ಮೇಲ್ಗಡೆ ಎಳೆಯುವ ಸಾಧಾರಣವಾದ ಕಲ್ಲುಗುಂಡನ್ನು ಈ ರೀತಿ ಕಾಳನ್ನು ಪ್ರತ್ಯೇಕಿಸುವುದಕ್ಕೆ ಉಪಯೋಗಿಸಬಹುದು. ಈ ಗುಂಡು ಸಾಮಾನ್ಯವಾಗಿ ಒಂದು ಗಜ ಉದ್ದವೂ, ಒಂದೂವರೆ ಅಡಿಯಿಂದ ಎರಡು ಅಡಿಯವರಿವಿಗೂ ಸುತ್ತಳತೆಯುಳ್ಳದ್ದೂ ಆಗಿರುವುದು. ಇಂತಹ ಗುಂಡು ಒಂದು ೧೦೦೦ ದಿಂದ ೧,೫೦೦ ಪೌಂಡುಗಳು ಭಾರವಿರುವುದು. ಇದನ್ನು ಮೊದಲು ಕೊಂಡು ಕೊಳ್ಳಬೇಕಾದರೆ ಬೆಲೆಯು ಜಾಸ್ತಿಯಾಗಿ ಕಂಡುಬರುವುದು. ಆದರೆ, ಗ್ರಾಮದಲ್ಲಿ ಕೆಲವರು ಸೇರಿ ಒಂದು ಕಲ್ಲನ್ನು ಕೊಂಡು ಇಟ್ಟುಕೊಳ್ಳಬಹುದು. ಒಂದು ಗುಂಡಿಗೆ ೨೦ ರೂಪಾಯಿಗಳು ಕ್ರಯವಾಗುವುದು.

ಬರೀ ತೆನೆಗಳನ್ನು ಚಕ್ರಾಕಾರವಾಗಿ ಕಣದಲ್ಲಿ ಎಂಟು ಅಂಗುಲ ಮಂದಕ್ಕೆ ಹಾಸಿಬಿಟ್ಟು ಅದರಮೇಲೆ ಕಲ್ಲುಗುಂಡನ್ನು ಸುತ್ತಲೂ ಉರುಳಿಸಬೇಕು. ಅಥವ ಮಧ್ಯಭಾಗದಲ್ಲಿ ಸ್ಥಳಬಿಟ್ಟು ಸುತ್ತಲೂ ತೆನೆಯನ್ನು ಹರಡಿ ಎತ್ತುಗಳು ಗಾಣವನ್ನು ಎಳೆದುಕೊಂಡು ಸುತ್ತುವಂತೆ ಗುಂಡನ್ನು ಎಳೆದುಕೊಂಡು ತೆನೆಯಮೇಲೆ ಸುತ್ತುತಿರುಗುವಂತೆ ಮಾಡಬೇಕು. ಎತ್ತುಗಳು ಸುತ್ತು ತಿರುಗುತ್ತಿರುವಾಗ ಇಬ್ಬರು ಮನುಷ್ಯರು ತೆನೆಯಬಳಿ ನಿಂತುಕೊಂಡು ಅದನ್ನು ಗಳುವಿನಿಂದ ತಿರುವಿಹಾಕುತ್ತಿರಬೇಕು. ಕಾಳು ತೆನೆಯಿಂದ ಚನ್ನಾಗಿ ಬಿಟ್ಟು ಬರುವವರಿವಿಗೂ ಈ ರೀತಿ ಮಾಡಬೇ

ಕು. ಕಾಳು ಪುಡಿಯಾಗಿ ಹಿಟ್ಟಾಗದಂತೆ ತೆನೆಯಮೇಲೆ ಸ್ವಲ್ಪ ನೀರನ್ನು ಚಿಮುಕಿಸಬೇಕು. ಗುಂಡು ಉದ್ದವಾಗಿರುವುದರಿಂದಲೂ ಮತ್ತು ಆ ಉದ್ದವಾದ ಪದಾರ್ಥವನ್ನು ಸುತ್ತುತಿರುಗುವಂತೆ ಮಾಡುವುದರಿಂದಲೂ, ತೆನೆಗಳು ಚೆನ್ನಾಗಿ ಉಜ್ಜಲ್ಪಡುವವು. ಈ ಉಜ್ಜುವ ಕ್ರಮದಿಂದಲೇ ಕಾಳುಗಳು ಸುಲಭವಾಗಿ ಪ್ರತ್ಯೇಕಿಸಲ್ಪಡುವವು.

ಗುಂಡನ್ನು ಉರುಳಿಸುವಾಗ ಕಾಳು ಉಜ್ಜಲ್ಪಟ್ಟ ತೆನೆಗಳಿಂದ ಬಿಡುಗಡೆಯಾಗುವುದು, ಮತ್ತು ಕಾಳು ತೆನೆಗಿಂತ ಭಾರವಾದುದರಿಂದ ಕ್ರಮೇಣ ಒಂದು ಕಡೆಗೆ ಬಂದು ನಿಂತುಕೊಳ್ಳುವುದು. ಗುಂಡು ಉರುಳಿಸಿದುದೆಲ್ಲ ಮುಗಿದ ಮೇಲೆ ಪ್ರತ್ಯೇಕವಾದ ಈ ಕಾಳನ್ನೇ ಬೇರೆ ತೆಗದಿಟ್ಟುಕೊಳ್ಳಬಹುದು. ತೆನೆಯಲ್ಲಿ ಇನ್ನೂ ಕಾಳು ಉಳಿದಿದ್ದರೆ ಅದನ್ನು ದೊಣ್ಣೆಯಿಂದ ಬಡಿಯುವುದರಿಂದಾಗಲಿ ಅಥವ ಎತ್ತುಗಳಿಂದ ತುಳಿಸುವುದರಿಂದಾಗಲಿ ಪ್ರತ್ಯೇಕ ಪಡಿಸಿಕೊಳ್ಳಬೇಕು. ಉರುಳುವ ಗುಂಡನ್ನೂ ಎತ್ತುಗಳನ್ನೂ ಒಂದೇತಡವೆಗೆ ಉಪಯೋಗಿಸಬಹುದು. ಹ್ಯಾಗಂದರೆ—ಗುಂಡನ್ನು ಎರಡು ಜೊತೆ ಎತ್ತುಗಳು ಎಳೆಯುತ್ತಿದ್ದರೆ ಹಿಂದುಗಡೆ ನಾಲ್ಕು ಜೊತೆ ಎತ್ತುಗಳು ತೆನೆಗಳನ್ನು ತುಳಿಯುತ್ತಾ ಬರುವವು. ಬರೀ ಗುಂಡಿನಿಂದಲೇ ಪ್ರತ್ಯೇಕವಾಗುವ ಕಾಳಿಗಿಂತ ನಾಲ್ಕರಷ್ಟು ಕಾಳುಗಳು ಈ ಕ್ರಮದಿಂದ ಪ್ರತ್ಯೇಕವಾಗುವವು.

ಈ ಉಭಯಕ್ರಮಗಳಿಂದಲೂ ಉಂಟಾಗುವ ಲಾಭವನ್ನು ಈ ಪ್ರಕಾರ ಗೊತ್ತುಮಾಡಿದ್ದಾರೆ. ಉರುಳುವ ಗುಂಡನ್ನು ಉಪಯೋಗಿಸಿ ೯೮೧೨ ಪೌಂಡು ಧಾನ್ಯವನ್ನು ಪ್ರತ್ಯೇಕ ಮಾಡುವುದಕ್ಕೆ ೪ ಎತ್ತುಗಳನ್ನೂ ಹನ್ನೊಂದುಮಂದಿ ಗಂಡಾಳನ್ನೂ ಇಬ್ಬರು ಹುಡುಗರನ್ನೂ ಬಿಟ್ಟರು. ಇವರಿಗೆಲ್ಲಾ ರೂ. ೩—೧೦—೦ ಖರ್ಚಾಯಿತು. ೬೪೪೨ ಪೌಂಡು ಧಾನ್ಯವನ್ನು ಎತ್ತುಗಳಿಂದ ತುಳಿಸಿ ಪ್ರತ್ಯೇಕಮಾಡುವುದಕ್ಕೆ ೪ ಜೊತೆ ಎತ್ತುಗಳನ್ನೂ ಏಳುಮಂದಿ ಗಂಡಾಳನ್ನೂ ಇಬ್ಬರು ಹುಡುಗರನ್ನೂ ಬಿಟ್ಟರು. ಇವರಿಗೆಲ್ಲಾ ರೂ. ೬—೨—೦ ಖರ್ಚಾಯಿತು. ಆದುದರಿಂದ ಸಾವಿರ ಪೌಂಡು ಧಾನ್ಯವನ್ನು ಪ್ರತ್ಯೇಕಿಸುವುದಕ್ಕೆ ಉರುಳುವ ಗುಂಡನ್ನು ಉಪಯೋಗಿಸಿದ್ದರಿಂದ ೪ ಆಣೆ ೧೧ ಕಾಸೂ, ಎತ್ತುಗಳನ್ನು ಉ

ಪಯೋಗಿಸಿದ್ದರಿಂದ ೧೪ ಆಣೆ ೬ ಕಾಸೂ ಖರ್ಚುಬಿದ್ದಂತೆ ಆಯಿತು. ಆ ದುದರಿಂದ ಕಲ್ಲು ಗುಂಡನ್ನು ಉಪಯೋಗಿಸುವುದೇ ಬಹಳ ಲಾಭಕರವೆಂಬು ದು ಸ್ಪಷ್ಟವಾಯಿತು.

ಕಡಪಾ ಡಿಸ್ಟ್ರಿಕ್ಟ ಪ್ರೊದ್ದಟೂರು ತಾಲ್ಲೂಕಿನಲ್ಲಿ ಗುಂಡನ್ನು ಮೊದಲು ಉಪಯೋಗಿಸುವುದಕ್ಕೆ ಆರಂಭವಾದ ಲಾಗಾಯಿತು ಅದನ್ನು ಬ ಹುಮಂದಿ ಉಪಯೋಗಿಸುತ್ತಾ ಬಂದಿದ್ದಾರೆ. ಆದರೆ ಅದರ ಬೆಲೆಯು ಸ್ವಲ್ಪ ಹೆಚ್ಚಾಗಿರುವುದರಿಂದ ಇನ್ನೂ ಹೆಚ್ಚುಮಂದಿ ಅದನ್ನು ಉಪಯೋ ಗಿಸುವುದಕ್ಕೆ ಅನನುಕೂಲವಾಗಿದೆ. ಆದರೆ ಗ್ರಾಮಸ್ಥರು ಕೆಲವರು ಸೇ ರಿ ಒಂದು ಗುಂಡನ್ನು ಕೊಂಡು ಇಟ್ಟರೆ ಸುಲಭವಾಗುವುದು. ಇದಕ್ಕೆ ಎತ್ತುಗಳು ಕಡಿಮೆಯಾಗಿ ಬೇಕಾದರೂ ಆಳುಗಳು ಹೆಚ್ಚಾಗಿಬೇಕು. ಒಂ ದು ಜೊತೆ ಎತ್ತನ್ನು ಇಟ್ಟುಕೊಂಡಿರುವವನು ಅವುಗಳನ್ನು ತೆಗೆದುಕೊಂ ಡು ತನ್ನ ನೆರೆಯವನ ಕಣಕ್ಕೆ ಹೋಗಿ ಅಲ್ಲಿ ಮೂವರು ಜನರನ್ನು ಸಹಾ ಯಕ್ಕೆ ತೆಗೆದುಕೊಂಡು ಕಣಮಾಡಿಕೊಳ್ಳಬಹುದು. ಈ ಪ್ರಕಾರ ಒ ಬ್ಬರಿಗೊಬ್ಬರು ಸಹಾಯಕರಾದರೆ ವಿಶೇಷಖರ್ಚಿಲ್ಲದೆ ಕಣಮಾಡಿಕೊಳ್ಳ ಬಹುದು. ಹ್ಯಾಗೂ ಕಣಮಾಡುವುದಕ್ಕೆ ಉರುಳು ಗುಂಡುಗಳನ್ನು ಉ ಪಯೋಗಿಸುವುದು ಲಾಭಕರವಾದುದೆಂಬುದನ್ನು ಮರೆಯಬಾರದು.

The Mysore Health Exhibition.

ಮೈಸೂರಿನಲ್ಲಿ ನಡೆದ ಆರೋಗ್ಯ ವಸ್ತು ಪ್ರದರ್ಶನ.

ಕಳೆದ ಅಕ್ಟೋಬರ್ ೧೬ನೆ ತಾರೀಖಿನ ದಿನ ಬೆಳಿಗ್ಯೆ ಶ್ರೀಮದ್ಯುವರಾಜರವರು ಮೈಸೂರಿನಲ್ಲಿ ಟೌನ್‌ಹಾಲ್ ಬಂಗಲೆಯಲ್ಲಿ ನಿರ್ಮಿಸಿದ್ದ ಆರೋಗ್ಯ ವಸ್ತು ಪ್ರದರ್ಶನವನ್ನು ಆರಂಭ ಮಾಡಿದರು. ಆಗ್ಯೆ ಶ್ರೀಮದ್ಯುವರಾಜರವರು ಅಪ್ಪಣೆ ಕೊಡಿಸಿದ್ದೇನಂದರೆ,—

"ಆರೋಗ್ಯ ವಸ್ತು ಪ್ರದರ್ಶನವನ್ನು ನಾನು ಆರಂಭಿಸಲು ಬಹ ಳ ಸಂತೋಷಪಡುತ್ತೇನೆ. ಈ ಪ್ರದರ್ಶನವು 'ಹೆಲ್ತ ಮ್ಯೂಜಿಯಂ' ಎಂಬ ಹೆಸರಿನಿಂದ ಶಾಶ್ವತವಾಗಿ ನೆಲೆಗೊಳ್ಳುವುದೆಂದು ಕೇಳಿ ನನಗೆ ಬಹಳ ಹರ್ಷ ಉಂಟಾಗಿದೆ. ಇದು ಆರೋಗ್ಯವಿಷಯಕವಾಗಿ ಜನರಿಗೆ ತಿಳುವಳಿಕೆ

ಯನ್ನು ಕೊಡುವುದರಲ್ಲಿ ತುಂಬಾ ಸಹಾಯಕರವಾಗಿರುತ್ತದೆಂದು ನಾನು ದೃಢನಾಗಿ ನಂಬಿದ್ದೇನೆ. ಇಂಥಾ ಆಲಯವು ಇಂಡಿಯಾ ದೇಶದಲ್ಲಿ ಸರ್ವಸಾಧುದು ಇದೇ ಮೊದಲು ಇರಬಹುದೆಂದು ತೋರುತ್ತೆ. ಆರೋಗ್ಯ ವಿಷಯಗಳಲ್ಲಿ ಎಲ್ಲೆಲ್ಲಿಯೂ ಜನರು ಎಚ್ಚೆತ್ತುಗೊಂಡು ತಕ್ಕ ಪ್ರಯತ್ನಗಳನ್ನು ಮಾಡುತ್ತಿದ್ದಾರೆ. ಈ ಸಮಯದಲ್ಲಿ ನಮ್ಮ ಸಂಸ್ಥಾನವು ಹಿಂದುಳಿಯದೆ ಮುಂದಾಳಾಗಿ ಬಂದುದಕ್ಕಾಗಿ ನಾನು ತುಂಬಾ ಸಂತೋಷಪಡುತ್ತೇನೆ. ಆರೋಗ್ಯ ಸೂತ್ರಗಳು ಮತಾಚರಣೆಯಲ್ಲಿ ಬೆರೆತು ಹೋಗಿರುವ ಈ ದೇಶದಲ್ಲಿ, ಜನರು ತಾವು ಮಾಡುವ ನಿತ್ಯ ಕರ್ಮಗಳ ಅರ್ಥವನ್ನೇ ಮರೆತುಕೊಂಡಿರುವದು ವ್ಯಸನಕರವಾಗಿದೆ. ಆದ್ದರಿಂದ ಆರೋಗ್ಯ ಸೂತ್ರಗಳನ್ನು ಆಚರಣೆಗೆ ತರುವಂತೆ ತಿಳುವಳಿಕೆಯನ್ನು ಕೊಡುವದು ಈಗ ಬಹಳ ಅವಶ್ಯಕವಾಗಿದೆ, ಮತ್ತು ಈ ಭಾಗದಲ್ಲಿ ಪಬ್ಲಿಕ್ ಹೆಲ್ತ ಇಲಾಖೆಯವರು ಹೆಚ್ಚು ಮುತವರ್ಜಿ ವಹಿಸುತ್ತಿರುವದು ನೋಡಿ ಬಹಳ ಆನಂದಪಡುತ್ತೇನೆ. ಆರೋಗ್ಯ ಶಾಸ್ತ್ರದ ಮೂಲತತ್ವಗಳನ್ನು ಜನಗಳಿಗೆ ತಿಳಿಸುವದಕ್ಕೆ ಇನ್ನೂ ವಿಶೇಷ ಪ್ರಯತ್ನಗಳನ್ನು ಮಾಡಬೇಕಾಗಿಧೆ. ಮೊದಲಿನಿಂದಲೂ ಜನರ ಆಚಾರ ವ್ಯವಹಾರಗಳು ಆರೋಗ್ಯ ಸೂತ್ರಗಳನ್ನೇ ಅನುಸರಿಸಿರುವದ್ದರಿಂದ ಆರೋಗ್ಯ ವಿಷಯಗಳಲ್ಲಿ ತಿಳುವಳಿಕೆಯನ್ನು ಕೊಡುವಾಗ ಈ ಆಚಾರ ವ್ಯವಹಾರಗಳನ್ನೂ ಗಣನೆಗೆ ತೆಗದುಕೊಂಡರೆ ಬೋಧನೆಯ ಕೆಲಸವು ಇನ್ನೂ ಸುಲಭವಾಗುವದು. ಜನರ ಆರೋಗ್ಯ ಮತ್ತು ದಾರ್ಢ್ಯವನ್ನು ಅಭಿವೃದ್ಧಿಪಡಿಸುವ ಭಾಗದಲ್ಲಿ ನನಗೆ ಕೇವಲ ಆಸಕ್ತಿ ಉಂಟು. ಆದಕಾರಣ ಇಂಥಾ ಕಾರ್ಯಕ್ಕೆ ನನ್ನಿಂದ ಏನು ಸಹಾಯ ಬೇಕಾದರೂ ಕೊಡಲು ಸದಾ ಕಾಲದಲ್ಲೂ ಸಿದ್ಧನಾಗಿಧೇನೆ.”

೨. ಪ್ರದರ್ಶಿಸಲ್ಪಟ್ಟ ವಸ್ತುಗಳು ಮುಂದೆ ಹೇಳುವ ಮೇರೆ ತರಗತಿವಾರು ವಿಂಗಡಿಸಲ್ಪಟ್ಟಿದ್ದವು. ೧ ನೀರು, ೨ ಆಹಾರ, ೩ ಹಾಲು, ೪ ಶಾರೀರಶಾಸ್ತ್ರ, ೫ ವ್ಯಾಯಾಮ ಸಂಬಂಧವಾದ ವಸ್ತುಗಳು, ೬ ಆಟಪಾಟಗಳು, ೭ ಶುಚಿ, ೮ ರೋಗನಿವಾರಣೆ, ೯ ಕ್ರಿಮಿಶಾಸ್ತ್ರ, ೧೦ ಹವಾ, ೧೧ ಆರೋಗ್ಯ ಮತ್ತು ಅನಾರೋಗ್ಯಕರಗಳಾದ ಮನೆಗಳು ಇತ್ಯಾದಿ.

Oil Seeds. *

ಎಣ್ಣೆ ಬೀಜಗಳು.

ನಮ್ಮ ದೇಶದಲ್ಲಿ ಎಣ್ಣೆ ಬೀಜದ ರಫ್ತು ವ್ಯಾಪಾರವು ಹೆಚ್ಚಾಗಿ ನಡೆಯುತ್ತಿದೆ. ಈ ವ್ಯಾಪಾರದಲ್ಲಿ ಒಂದೆರಡು ಶೋಚನೀಯವಾದ ಅಂಶಗಳುಂಟು. ಕಚ್ಚಾ ಪದಾರ್ಥಗಳಿಂದ ಸಾಮಾನುಗಳನ್ನು ತಯಾರಿಸಿ, ಸಿದ್ಧವಾದ ಸರಕುಗಳ ವ್ಯಾಪಾರ ನಡೆಸಲು ಸಾಧ್ಯವಾಗುವಹಾಗಿದ್ದರೆ, ಹಾಗೆಯೇ ಮಾಡುವುದು ಉತ್ತಮವೇ ಹೊರತು ಕಚ್ಚಾ ಸಾಮಾನುಗಳಲ್ಲಿ, ರಫ್ತು ವ್ಯಾಪಾರ ಮಾಡುವದು ಆದಾಯಕರವಲ್ಲ. ಯಾಕೆಂದರೆ, ಇಲ್ಲಿಯೇ ಸಾಮಾನುಗಳನ್ನು ತಯಾರಿಸುವುದರಿಂದ ಅನೇಕ ಜನರಿಗೆ ಸಿಕ್ಕುವ ಲಾಭಕರವಾದ ಉದ್ಯೋಗವು ತಪ್ಪಿಹೋಗುವುದು ಅಲ್ಲದೆ, ಇಲ್ಲಿಂದ ರಫ್ತಾದ ಕಚ್ಚಾ ಪದಾರ್ಥಗಳು ಇತರ ದೇಶಗಳಲ್ಲಿ ಸಾಮಾನುಗಳಾಗಿ ತಯಾರಾಗಿ, ಇಲ್ಲಿಗೆ ಮಾರಾಟಕ್ಕಾಗಿ ವಾಪಸು ಬರುವ ಸಂದರ್ಭದಲ್ಲಿ ಈ ಸಾಮಾನುಗಳನ್ನು ಇಲ್ಲಿಂದ ಅನ್ಯದೇಶಕ್ಕೂ ಅನ್ಯದೇಶದಿಂದ ಇಲ್ಲಿಗೂ ಸಾಗಿಸುವ ಖರ್ಚು, ದಳ್ಳಾಳಿಗಳ ಮತ್ತು ಸಾಹುಕಾರರ ಲಾಭ, ಕಾರೇಗಾರರ ಕೂಲಿ, ಇವುಗಳೆಲ್ಲವೂ ನಮ್ಮ ದೇಶದಲ್ಲಿ ಕೊಂಡುಕೊಳ್ಳುವವರ ಮೇಲೆಯೇ ಬೀಳುತ್ತದೆ. ಹೀಗೆ ಬೀಜಗಳನ್ನು ರಫ್ತು ಮಾಡುವದಕ್ಕೆ ಬದಲಾಗಿ, ಇಲ್ಲೆ ಅವುಗಳಿಂದ ಎಣ್ಣೆಯನ್ನು ತೆಗೆದದ್ದೇ ಆದರೆ ಇದರಿಂದ ಅನೇಕ ವಿಷಯಗಳಲ್ಲಿ ಪ್ರಯೋಜನ ಉಂಟು. ಮೊದಲನೇದು, ಸಾವಿರಾರು ಜನಕ್ಕೆ ಕೆಲಸ ದೊರಕುವದು, ಎರಡನೇದು, ಅಗ್ಗವಾಗಿ ಎಣ್ಣೆ ದೊರೆಯುವದರಿಂದ ಸಾಬೂನು ತಯಾರಿ, ಮೇಣದ ಬತ್ತಿ ತಯಾರೀ ಇವೇ ಮೊದಲಾದ ಅನೇಕ ಇತರ ಕೈಗಾರಿಕೆಗಳ ಅಭಿವೃದ್ಧಿಗೆ ಅನುಕೂಲವಾಗಿರುತ್ತದೆ. ಮೂರನೇದು, ಎಣ್ಣೆಯ ಹಿಂಡಿಯು ಗೊಬ್ಬರವಾಗಿ ಉಪಯೋಗಿಸಲ್ಪಡಬಹುದು. ಇದು ಅಗ್ಗವಾಗಿಯೂ ಇರುತ್ತದೆ.

* ಇಂಡಿಯನ್ ರಿವ್ಯೂ, ಸೆಪ್ಟಂಬರ್ ೧೯೦೯.

Malaria Conference. *

ವಿಷಮಜ್ವರ ಸಂಬಂಧವಾದ ಮಹಾಸಭೆಯು.

ಅದರ ನಿವಾರಣೆಗೆ ಮಾಡಬೇಕಾದ ಏರ್ಪಾಡುಗಳು.—ಇಂಡಿಯಾದೇಶದಲ್ಲಿ ವ್ಯಾಪಿಸಿ ಮರಣಸಂಖ್ಯೆಯನ್ನು ಹೆಚ್ಚಿಸುತ್ತಿರುವ ವಿಷಮಶೀತಜ್ವರವನ್ನು ನಿರ್ಮೂಲಮಾಡಿ ಜನಗಳ ಆರೋಗ್ಯವನ್ನು ಹೆಚ್ಚು ಮಾಡುವದಕ್ಕೋಸ್ಕರ ಏನು ಉಪಾಯಗಳನ್ನು ಮಾಡಬೇಕೆಂಬುದನ್ನು ನಿರ್ಧರಿಸಿ ಹೇಳಬೇಕೆಂದು ಇಂಡಿಯಾ ಸರ್ಕಾರದವರು ಎಲ್ಲಾ ಪ್ರಾಂತ್ಯಗಳಿಂದಲೂ ಪ್ರಸಿದ್ಧರಾದ ಡಾಕ್ಟರ್‌ಗಳನ್ನು ಸಿಂಲಾಪಟ್ಟಣಕ್ಕೆ ಕರೆಸಿಕೊಂಡು ಈ ತಿಂಗಳು ೧೬ನೆ ತಾರೀಖಿನದಿವಸ ಅವರೊಡನೆ ಆಲೋಚನೆಮಾಡಿದರು. ಆ ಡಾಕ್ಟರ್‌ಗಳು ತಮ್ಮ ತಮ್ಮ ಅಭಿಪ್ರಾಯಗಳನ್ನು ತಿಳಿಯಪಡಿಸಿ ಒಂದು ವಾರದವರಿವಿಗೂ ಈ ವಿಷಯವನ್ನು ಕುರಿತು ಚರ್ಚೆಮಾಡಿ ಸಾಧಕ ಬಾಧಕಗಳನ್ನು ಪರೀಕ್ಷಿಸಿ ಮುಂದೆ ಹೇಳುವ ಏರ್ಪಾಡುಗಳನ್ನು ಆಚರಣೆಯಲ್ಲಿ ತರಬೇಕೆಂದು ತೀರ್ಮಾನಿಸಿರುವರು. ಏನಂದರೆ.—

(೧) ಈಗ ಆಚರಣೆಯಲ್ಲಿ ತರುವ ಏರ್ಪಾಡುಗಳಿಂದ ಎಷ್ಟರಮಟ್ಟಿಗೆ ಪ್ರಯೋಜನ ಉಂಟಾಗುವುದೆಂಬುದನ್ನು ಸ್ಪಷ್ಟಪಡಿಸಿಕೊಳ್ಳುವುದಕ್ಕೋಸ್ಕರ ಲೆಖ್ಖಗಳನ್ನು ಕ್ರಮವಾಗಿಡಬೇಕು. (೨) ಇಂಡಿಯಾ ಸರ್ಕಾರದವರು ನೇಮಿಸುವ ಕಮಿಟಿಗೆ ಸಹಾಯಮಾಡುವ ಬಗ್ಯೆ ಒಳಸರ್ಕಾರದವರು ಒಂದೊಂದು ಕಮಿಟಿಯನ್ನು ಏರ್ಪಡಿಸಬೇಕು. (೩) ವರ್ಷಕ್ಕೊಂದುಸಾರಿ ಈ ಸರ್ಕಾರದ ಪ್ರತಿನಿಧಿಗಳೆಲ್ಲರೂ ಒಂದುಕಡೆ ಸಭೆಸೇರಿ ತಮ್ಮ ತಮ್ಮ ಅನುಭವಗಳನ್ನು ತಿಳಿಸಿ ಚರ್ಚೆಮಾಡಬೇಕು. (೪) ಸೊಳ್ಳೆಗಳನ್ನು ನಿರ್ಮೂಲಮಾಡಬೇಕು; ಇಲ್ಲವೆ ಕಡಿಮೆಯಾದರೂ ಮಾಡಬೇಕು. (೫) ಬಚ್ಚಲು ರೊಚ್ಚನ್ನು ತಪ್ಪಿಸಬೇಕು. (೬) ಊರಿನ ಬಳಿ ಭೂಮಿಯ ವ್ಯವಸಾಯವನ್ನು ಕಡಿಮೆಮಾಡಬೇಕು. (೭) ಸೊಳ್ಳೆಯಮೊಟ್ಟೆಗಳನ್ನು ನಾಶಮಾಡುವುದಕ್ಕೋಸ್ಕರ ನೀರುನಿಲ್ಲುವ ಹಳ್ಳಕಂಟೆಗಳಿಗೆ ಕೆರೋಸಿನ್ ಎಣ್ಣೆಯನ್ನು ಬಿಡಬೇಕು. (೮) ಕ್ವಿನೀನ್ ಎಂಬ ಜ್ವರದ ಔಷಧವು ಎಲ್ಲರಿಗೂ ಸಿಕ್ಕುವಂತೆ ಮಾಡಬೇಕು. ಕೆಲವು ಕೆ

* ಒಕ್ಕಲಿಗರ ಪತ್ರಿಕೆ, ೨೩—೧೦—೧೯೦೯.

ಲವುಕಡೆ ಮುಫತ್ತಾಗಿಯೂ ಈ ಔಷಧವನ್ನು ಕೊಡಬೇಕು. (೯) ಕ್ವಿನೀನ್ ಔಷಧಿಯ ಪ್ರಯೋಜನವನ್ನು ಜನರಿಗೆ ತಿಳಿಯಪಡಿಸಲು ವಿದ್ಯಾವಂತರಾದ ದೇಶೀಯರ ಸಹಾಯವನ್ನು ಪಡೆಯಬೇಕು.

Indian Raiyats and Agricultural Improvements.*

ಇಂಡಿಯಾದೇಶದ ರೈತರು ಮತ್ತು ವ್ಯವಸಾಯ ಸಂಬಂಧವಾದ ತಿದ್ದುಪಾಟುಗಳು.

ನಮ್ಮ ದೇಶದ ವ್ಯವಸಾಯದ ವಿಷಯಗಳಲ್ಲಿ ತಿದ್ದುಪಾಟುಗಳನ್ನೂ ಮತ್ತು ನೂತನ ವಿಧಾನಗಳನ್ನೂ ಸರ್ಕಾರದವರು ಪ್ರತ್ಯಕ್ಷವಾಗಿ ತೋರಿಸಿ ಕೊಟ್ಟಾಗ್ಯೂ ಕೂಡ ರೈತರ ಅಶ್ರದ್ಧೆಯಿಂದ ಇವುಗಳನ್ನು ರೂಢಿಯಲ್ಲಿ ತರುವದು ಪ್ರಯಾಸವಾಗಿದೆ. ಇದಕ್ಕೆ ದೃಷ್ಟಾಂತರವಾಗಿ ಈಸ್ಟರ್ನ್ ಬೆಂಗಾಲ್ ಮತ್ತು ಆಸ್ಸಾಂ ಸಂಸ್ಥಾನದಲ್ಲಿ ಸರ್ಕಾರದವರ ಪ್ರಯತ್ನಗಳು ಅನೇಕ ಸಂದರ್ಭಗಳಲ್ಲಿ ರೈತರ ಅಶ್ರದ್ಧೆಯಿಂದ ಸಾರ್ಥಕವಾಗಲಿಲ್ಲವೆಂದು ಅಲ್ಲಿನ ವ್ಯವಸಾಯ ಇಲಾಖೆಯ ರಿಪೋರ್ಟಿನಿಂದ ಗೊತ್ತಾಗುತ್ತದೆ. ಒಂದು ಸಂದರ್ಭದಲ್ಲಿ ಗೋಣಿನಾರಿನ ಪೈರನ್ನು ಕೆಡಿಸುವ ಕಂಬಳಿಹುಳಗಳ ನಿವಾರಣಾರ್ಥವಾಗಿ ಪೈರಿನ ಮೇಲೆ ಒಂದು ಬಲೆಯನ್ನು ಬೀಸಿ ಹುಳುಗಳನ್ನು ಗುಡಿಸಿಕೊಳ್ಳುವ ಅತಿಸುಲಭವಾದ ಉಪಾಯವನ್ನು ಸೂಚಿಸಿದ್ದಾಗ್ಯೂ ಇದನ್ನು ಆಚರಿಸುವದರಲ್ಲಿ ರೈತರು ವಿಶೇಷ ಅಕ್ಕರೆಯನ್ನು ತೋರಿಸಲಿಲ್ಲ. ಇಂಥಾ ರೈತರ ಅಶ್ರದ್ಧೆಯನ್ನೂ ಮತ್ತು ಮೌಢ್ಯವನ್ನೂ ತಪ್ಪಿಸುವದಕ್ಕಾಗಿ ಈಸ್ಟರ್ನ್ ಬೆಂಗಾಲ್ ಸರ್ಕಾರದವರು ರೈತಾಬಿಜನರಲ್ಲಿ ಬಹಳ ಬುದ್ಧಿವಂತರಾಗಿಯೂ ಮತ್ತು ಜನರ ಕ್ಷೇಮ ಚಿಂತನೆಯಲ್ಲಿಯೇ ಕೇವಲ ಆಸಕ್ತರಾಗಿಯೂ ಇರುವವರನ್ನು ವ್ಯವಸಾಯ ಇಲಾಖೆಯಲ್ಲಿ ಗೌರವ ಸಹಾಯಕರಾಗಿ (Honorary Assistants) ನೇಮಿಸಿಕೊಳ್ಳುತ್ತಾರೆ. ಈ ಏರ್ಪಾಡು ಕಳೆದ ೨ ವರುಷಗಳಿಂದಲೂ ಆಚರಣೆಯಲ್ಲಿರುತ್ತಾ ಸರ್ವವಿಧದಲ್ಲೂ ಉಪಯುಕ್ತವಾದದ್ದೆಂದು ತೋರಿಬರುತ್ತದೆ. ಈ ಸಹಾಯಕನು ವ್ಯವಸಾಯ ಇಲಾಖೆಯಲ್ಲಿ ನಡೆಸಲ್ಪಡುವ ಅಜಮಾ

* ಇಂಡಿಯನ್ ಅಗ್ರಿಕಲ್ಚರಿಸ್ಟ್ ೧—೫—೦೯.

ಯಿಕೆಗಳ ಫಲಿತಾಂಶವನ್ನು ತಮ್ಮ ನೆರೆಹೊರೆಯಲ್ಲಿ ಪ್ರಚುರ ಪಡಿಸುವ ದಲ್ಲದೆ ವ್ಯವಸಾಯ ಇಲಾಖೆಯವರಿಗೆ ರೈತಾಬಿ ಜನರ ಕೊರತೆಗಳನ್ನು ತಿಳಿಸುವದು, ಪೈರುಗಳ ಸ್ಥಿತಿಗತಿ ವಿಷಯವಾಗಿ ಸಮಾಚಾರ ಕೊಡುವದು, ಮತ್ತು ಪೈರುಗಳಲ್ಲಿ ಹುಳಗಳು ಮತ್ತು ಬೂಜು ಮೊದಲಾದ ಸಸ್ಯಾಣುಗಳು ತಲೆದೋರಿದರೆ ಕೂಡಲೆ ಎಚ್ಚರಿಸುವದು, ಈ ಪ್ರಕಾರ ಶಾನೆ ಉಪಕಾರ ಮಾಡುತ್ತಾರೆ. ಈ ಸಹಾಯಕರ ಪೈಕಿ ಕೆಲವರು ನೂತನ ಕ್ರಮಗಳನ್ನು ತಾವೆ ಆಚರಿಸಿ ತಮ್ಮ ನೆರೆಯವರಿಗೆ ಪ್ರತ್ಯಕ್ಷವಾಗಿ ತೋರಿಸಿಕೊಡಲು ಸಮರ್ಥರಾಗಿರುತ್ತಾರೆ.

Occasional Notes.
ವಿವಿಧ ವೃತ್ತಾಂತಗಳು.

೧. ಮೈಸೂರು ಗವರ್ನಮೆಂಟಿನವರು ರಿಟೈರ್ಡ್ ಅಮಲ್ದಾರ್ ಮ.|| ಟಿ. ವೆಂಕಟರಾಮೈಯ್ಯನವರನ್ನು ೧೪-೧೧-೦೯ನೆ ಮಾರ್ಕು ಎಫ್. ಎಲ್. ೨೨೫೧-೬೦ನೆ ನಂಬರ್ ಹುಕುಂನಲ್ಲಿ ಕೋ ಆಪರೇಟಿವ್ ಸೊಸೈಟಿಗಳ ಆನರರಿ ಆರ್ಗನೈಜರಾಗಿ ನೇಮಿಸಿರುತ್ತಾರೆ.

---

೨. ಪಂಜಾಬ್ ವ್ಯವಸಾಯ ಇಲಾಖೆಯ ಡೈರೆಕ್ಟರವರು ವ್ಯವಸಾಯ ಮುಟ್ಟುಗಳನ್ನು ತರಿಸಿಟ್ಟು ರೈತಾಬಿ ಜನರಿಗೆ ಮಾರಾಟ ಮಾಡುವದಕ್ಕೆ ಸರ್ಕಾರದವರು ಅಪ್ಪಣೆ ಕೊಟ್ಟಿರುತ್ತಾರೆ. ಹೀಗೆ ತರಿಸಿಟ್ಟ ಯಂತ್ರಗಳನ್ನು ಅಸಲ್ ಖರೀದಿ ಮೇಲೆ ಶೇಕಡಾ ೬| ರೂಪಾಯಿ ನಫೆಗೂ ಮತ್ತು ಖಾಯಿಷ್ಮೇರೆ ಪ್ರತ್ಯೇಕವಾಗಿ ತರಿಸಿಕೊಡುವ ಸಾಮಾನುಗಳನ್ನು ಶೇಕಡ ೨ ರೂಪಾಯಿ ನಫೆಗೂ ಮಾರಬೇಕೆಂದಿರುತ್ತಾರೆ. ಈ ಮಾದರಿ ಕೋಠಿಯೊಂದು ಸೆಂಟ್ರಲ್ ಪ್ರಾವಿನ್ಸಸ್‌ನಲ್ಲಿ ಆಗಲೆ ಏರ್ಪಟ್ಟಿರುತ್ತಂತೆ.—ಕುಂಭಕೋಣಂ ವ್ಯವಸಾಯ ಸಂಘದ ಮಾಸಪತ್ರಿಕೆ, ಆಗಸ್ಟ್ ೧೯೦೯.

V. B. Soobbiah & Sons, Printers, Bangalore.—1909.

THE MYSORE

REVENUE & AGRICULTURAL GAZETTE.

ವಾಲ್ಯುಂ ೪.] ಸೋಮವಾರ, ೧೫ನೆ ನವಂಬರ್ ೧೯೦೯. [ನಂ. ೨.

Contents. / ಅನುಕ್ರಮಣಿಕೆ.

1. Fungus Disease of Cocoanut.	೧. ತೆಂಗಿಗೆ ಬರುವ ಬೂಜು ಸಂಬಂಧವಾದ ಸಸ್ಯಾಣುಜಾಡ್ಯ.
2. Seed Potatoes in Nilgiris.	೨. ನೀಲಗಿರಿಯಲ್ಲಿ ಉಪಯೋಗಿಸುವ ಬೀಜದ ಉರಲಗಡ್ಡೆ.
3. Rice in Siam.	೩. ಸಯಾಂರಾಜ್ಯದಲ್ಲಿ ಬತ್ತದ ಬೆಳೆ.
4. Extract from the Dewan's Dasara Address, 1909.	೪. ಚಾಲ್ತಿಸಾಲ್ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್‌ರವರು ಮಾಡಿದ ಉಪನ್ಯಾಸ.
5. Agriculture in Bengal.	೫. ಬಂಗಾಳಾ ಪ್ರಾಂತ್ಯದಲ್ಲಿನ ವ್ಯವಸಾಯ ಸ್ಥಿತಿ.
6. Revenue Appeals.	೬. ರೆವಿನ್ಯೂ ಅಪೀಲುಗಳು.
7. Gall-stones and Their Uses.	೭. ಗೋರೋಜನ ಮತ್ತು ಅದರ ಪ್ರಯೋಜನ.
8. Occasional Notes. (i) Co-operative Societies. (ii) Conference of Registrars of Co-operative Societies.	೮. ವಿವಿಧ ವೃತ್ತಾಂತಗಳು. (i) ಕೋಆಪರೇಟೀವ್ ಸೊಸೈಟಿಗಳು. (ii) ಕೋಆಪರೇಟೀವ್ ಸೊಸೈಟಿಗಳ ರಜಸ್ಟ್ರಾರುಗಳ ಸಭೆ.

Fungus Disease of Cocoanut. *

ತೆಂಗಿಗೆ ಬರುವ ಬೂಜು ಸಂಬಂಧವಾದ ಸಸ್ಯಾಣುಜಾಡ್ಯ.

ಈಚೆಗೆ ಕೆಲವು ವರುಷಗಳಿಂದ ತಿರುವಾಂಕೂರು ಸಂಸ್ಥಾನದಲ್ಲಿ

* ಅಗ್ರಿಕಲ್ಚರಲ್ ಜರ್ನಲ್ ಆಫ್ ಇಂಡಿಯಾ, ಏಪ್ರಲ್ ೧೯೦೮.

ತೆಂಗಿನ ಮರಗಳಿಗೆ ಒಂದು ವಿಧವಾದ ರೋಗ ತಗಲಿ ವಿಶೇಷ ನಷ್ಟ ಉಂಟಾಗುತ್ತಾ ಇವೆ. ಈ ರೋಗದಿಂದ ಮರಗಳಲ್ಲಿ ಫಲ ಬಿಡುವದು ಕಾಲಕ್ರಮೇಣ ಕಡಿಮೆಯಾಗುತ್ತಾ ಬರುತ್ತಾ ಇದೆ. ಕೆಲವು ತೋಟಗಳಲ್ಲಿ ಹಿಂದೆ ನೂರು ಕಾಯಿಗಳು ಬಿಡುತ್ತಿದ್ದ ಮರಗಳಲ್ಲಿ ಈಗ ಇಪ್ಪತ್ತು ಕಾಯಿಗಳು ಬಿಡುವದೆ ಕಷ್ಟವಾಗಿದೆ. ಇನ್ನೂ ಕೆಲವಲ್ಲಿ ಫಲ ಬಿಡುವದೆ ನಿಂತುಹೋಗಿದೆ.

ರೋಗ ತಗಲಿದ ಕೆಲವು ಅಥವಾ ಎಲ್ಲಾ ಗರಿಗಳೂ ನೀರು ಸಾಲದಿದ್ದರೆ ಇರುವಂತೆ ಹಳದಿ ಬಣ್ಣಕ್ಕೆ ತಿರುಗುತ್ತವೆ. ಅನಂತರ ಅವುಗಳ ತುದಿಗಳು ಒಣಗಿ ಜೋಲು ಬೀಳುವುದಲ್ಲದೆ ಮಟ್ಟೆಗಳೂ ಕೂಡ ಬಗ್ಗಿ ಕಿತ್ತರೆ ಅತಿ ಸುಲಭವಾಗಿ ಕೈಗೆ ಬಂದು ಬಿಡುತ್ತವೆ. ಒಂದೆರಡು ವರುಷಗಳಲ್ಲಿ ಗರಿಗಳೆಲ್ಲಾ ಹಳದಿಯಾಗಿಹೋಗುತ್ತವೆ. ತರುವಾಯ ಗೊನೆಗಳಿಗೆ ಕಾಹಿಲೆ ತಗಲುವದು. ಮೊದಲು ಮೊದಲು ಕಾಯಿಗಳು ಸರಿಯಾಗಿ ಬಲಿಯದೆ ಕಾರುಬೆಯಾಗಿರುವಾಗಲೆ ಉದುರಿಹೋಗುವವು. ಕಾಯಿಗಳು ಬಿಡುವದು ವರುಷ ವರುಷಕ್ಕೂ ಕಮ್ಮಿಯಾಗುತ್ತಾ ನಾಲ್ಕೈದು ವರುಷಗಳಾದಮೇಲೆ ಸುತರಾಂ ಕಾಯಿಗಳು ಬಿಡದೇನೆ ಇರಬಹುದು. ಕೆಲವು ವೇಳೆ ಹೊಂಬಾಳೆಗಳೇ ಬಿಡುವದಿಲ್ಲ, ಬಿಟ್ಟರೂ ಒಳ್ಳೆ ಕಾಯಿಗಳು ಕಟ್ಟುವದಿಲ್ಲ. ರೋಗದ ಮರಗಳಲ್ಲಿ ಬಿಡುವ ಕಾಯಿಗಳು ಅಷ್ಟು ಚನ್ನಾಗಿಯೂ ಇರುವದಿಲ್ಲ, ಕೊಬ್ಬರಿ ಮೆತುವಾಗಿರುವದಿಲ್ಲ ಮತ್ತು ಎಣ್ಣೆಯು ಬಹಳ ಕಮ್ಮಿಯಾಗುತ್ತೆ. ಅವುಗಳಲ್ಲಿ ಎಳನೀರು ಅತಿ ಸ್ವಲ್ಪವಾಗಿಯೂ ರುಚಿ ಇಲ್ಲದ್ದಾಗಿಯೂ ಇರುವದು.

ಕ್ರಮೇಣ ಮರವು ದುರ್ಬಲವಾದಹಾಗೆಲ್ಲ ಹೊಸದಾಗಿ ಹುಟ್ಟುವ ಗರಿಗಳು ಆರೋಗ್ಯವಾದ ಮರಗಳ ಗರಿಗಳಿಗಿಂತ ಚಿಕ್ಕವಾಗುತ್ತವೆ. ನಡುವೆ ಹೊರಡುವ ಸುಳಿಯು ಚಿಕ್ಕದಾಗಿಯೂ ಮತ್ತು ಹಳದಿ ಬಣ್ಣವಾಗಿಯೂ ಇರುತ್ತೆ; ಅಥವಾ ಶುದ್ಧಾಂಗವಾಗಿ ಒಣಗಿಹೋಗುವದೂ ಉಂಟು.

ರೋಗತಗಲಿದ ಮರಗಳು ೫ ಅಥವಾ ೧೦ ವರುಷಗಳ ತರುವಾಯ ಪೂರಾ ಒಣಗಿ ಮಟ್ಟೆಗಳೆಲ್ಲಾ ಉದುರಿಬಿದ್ದು ಬೋಳಾಗಿ ನಿಲ್ಲಬಹುದು. ಈರೋಗದಲ್ಲಿ ಒಂದು ಬೂಜು ಸಂಬಂಧವಾದ ಸಸ್ಯಾಣುವು ಭೂಮಿಯಲ್ಲಿ

ದ್ದು ಮರಗಳ ಬೇರುಗಳಿಗೆ ವ್ಯಾಪಿಸಿ ಅವುಗಳನ್ನು ಕೊಳೆಯುವಂತೆ ಮಾಡುತ್ತದೆ. ಈ ಸಸ್ಯಾಣುಗಳು ಭೂಮಿಯಲ್ಲಿ ಉತ್ಪತ್ತಿಯಾಗಿ ಅಲ್ಲೇ ವೃದ್ಧಿಯಾಗಿ ಸಾವಕಾಶವಾಗಿ ಸ್ಥಳದಿಂದ ಸ್ಥಳಕ್ಕೆ ಹರಡುತ್ತವೆ. ರೋಗ ತಗಲಿರುವ ತೋಟದಿಂದ ಸ್ವಲ್ಪ ಮಣ್ಣನ್ನು ರೋಗವಿಲ್ಲದ ತೋಟಕ್ಕೆ ಒಯ್ಯುವದರಿಂದ ಸಸ್ಯಾಣುವು ಮಣ್ಣಿನದ್ವಾರ, ತತ್ರಾಪಿ ಇದರಲ್ಲಿ ತಗಿನ ಬೇರುಗಳು ಇದ್ದರೆ, ರೋಗವಿಲ್ಲದಿರುವ ತೋಟಕ್ಕೆ ವ್ಯಾಪಿಸಿ ಆರೋಗ್ಯವಾದ ಮರಗಳಿಗೆ ತಕ್ಷಣವೆ ತಗಲಬಹುದು. ಆದಕಾರಣ ಹೀಗೆ ರೋಗ ತಗಲಿದ ತೋಟದಿಂದ ಮಣ್ಣನ್ನೇ ಆಗಲಿ ಬೇರುಗಳನ್ನೇ ಆಗಲಿ ಇತರ ತೋಟಗಳಿಗೆ ತೆಗದುಕೊಂಡು ಹೋಗಿ ಹಾಕದಂತೆ ನೋಡಿಕೊಳ್ಳಬೇಕು. ಸಸ್ಯಾಣುಗಳನ್ನು ಕೊಲ್ಲಬೇಕಾದರೆ ಮರಗಳಲ್ಲಿ ರೋಗ ಕಾಣಿಸಿದ ಕೂಡಲೆ ಬೇರುಗಳನ್ನು ಅಗೆದು ಸುಟ್ಟುಬಿಡುವದೊಂದೇ ಉಪಾಯ. ಈಭಾಗದಲ್ಲಿ ರೈತರು ವಿಶೇಷ ನಿಗಾ ಕೊಡಬೇಕು. ರೋಗ ಕಂಡಕೂಡಲೆ ಚಿಕಿತ್ಸೆಯನ್ನು ಮಾಡದೆ ಸ್ವಲ್ಪಕಾಲ ಹಾಗೆಯೇ ಬಿಟ್ಟಿದ್ದರೆ ಸಸ್ಯಾಣುಗಳು ಭೂಮಿಯಲ್ಲೇ ಸೇರಿಕೊಂಡಿದ್ದು ವೃದ್ಧಿಹೊಂದಿ ಸಮೀಪದಲ್ಲಿರುವ ಇತರ ಮರಗಳಿಗೂ ಹರಡುವವು. ರೋಗದ ಮರಗಳನ್ನು ಅಗೆದುಹಾಕುವದರಿಂದ ಮಾಲೀಕನಿಗೆ ಕೆಲವು ಕಾಯಿಗಳು ನಷ್ಟವಾದರೂ ಚಿಂತೆಯಿಲ್ಲ; ರೋಗ ತಲೆದೋರಿದ ಕೂಡಲೆ ಬೇರುಗಳನ್ನು ಅಗೆದು ಸುಟ್ಟುಬಿಡಬೇಕು. ಇದರಿಂದ ಇತರ ಆರೋಗ್ಯವಾದ ಮರಗಳು ಉಳಿದುಕೊಳ್ಳುವವು.

Seed Potatoes in Nilgiris.*

ನೀಲಗಿರಿಯಲ್ಲಿ ಉಪಯೋಗಿಸುವ ಬೀಜದ ಉರಲಗಡ್ಡೆ.

ಕಳೆದ ಏಪ್ರೆಲ್ ತಿಂಗಳಲ್ಲಿ ನೀಲಗಿರಿಯ ಕಲೆಕ್ಟರವರು ಅಲ್ಲಿ ಒದಗುವ ಬೀಜದ ಗಡ್ಡೆಯನ್ನು ಉತ್ತಮಪಡಿಸುವ ಉದ್ದೇಶದಿಂದ ಕೆಲವು ಸಲಹೆಗಳನ್ನು ಸರ್ಕಾರಕ್ಕೆ ಸೂಚಿಸಿದರು. ಅವೇನಂದರೆ;—

ಬೀಜವನ್ನು ಆಸ್ಟ್ರೇಲಿಯಾ ಖಂಡದಿಂದ ತರಿಸಬೇಕೇ ಹೊರತು ಇಂಗ್ಲಾಂಡಿನಿಂದಲಾಗಲಿ ಅಥವ ಈ ದೇಶದಲ್ಲೇ ಇತರ ಕಡೆಗಳಿಂದಲಾಗಲಿ

* ಇಂಡಿಯನ್ ಅಗ್ರಿಕಲ್ಚರಿಸ್ಟು ೧—೬—೦೯.

ತರಿಸಕೂಡದು. ಉತ್ತರ ಹಿಂದುಸ್ಥಾನದ ಗಡ್ಡೆಗಳಿಗಿಂತ ಐರಿಷ್ ಬ್ಲೈಟ್ ಎಂಬ ದೊಡ್ಡರೋಗವು ಸೋಂಕಿರುತ್ತದೆ. ಪೂನಾ ಕಡೆಯದಕ್ಕೆ ಬಂಗಡಿರೋಗವಿರುತ್ತೆ. ಇಂಗ್ಲೆಂಡಿನ ಬೀಜಕ್ಕೂ ಜಾಡ್ಯಾದಿಗಳು ಇರುವದಿಲ್ಲವೆಂದು ಹೇಳಲಾಗುವದಿಲ್ಲ. ಅಲ್ಲದೆ ದೂರದೇಶದಿಂದ ಬರಬೇಕಾಗಿರುವುದರಿಂದಲೂ ಅಲ್ಲಿನ ವ್ಯವಸಾಯ ಕಾಲಕ್ಕೂ ಇಲ್ಲಿನ ಕಾಲಕ್ಕೂ ಭೇದವಿರುವದರಿಂದಲೂ, ಅಲ್ಲಿಂದ ತರಿಸುವ ಸನಗು ಇಲ್ಲಿಗೆ ಅಕಾಲದಲ್ಲಿ ಬಂದು ಸೇರುವದು. ಆದಕಾರಣ ಬೀಜವನ್ನು ಬಿತ್ತನೆ ಕಾಲದವರೆಗೂ ಇಟ್ಟಿರಬೇಕಾಗುತ್ತದೆಯಾಗಿ ಗಡ್ಡೆಗಳು ಕೊಳೆತುಹೋಗಬಹುದು ಅಥವ ಮೊಳಕೆಬಿಡಬಹುದು. ಇಷ್ಟೇ ಅಲ್ಲದೆ ಇಂಗ್ಲೆಂಡು ಮತ್ತು ನಮ್ಮ ದೇಶಗಳ ಹವಾಸ್ಥಿತಿಗಳಲ್ಲೂ ತುಂಬಾ ವ್ಯತ್ಯಾಸ ಬರುವದರಿಂದ ಇಂಗ್ಲೆಂಡಿನ ಗಡ್ಡೆ ಇಲ್ಲಿಗೆ ಸರಿಬೀಳುವದು ಬಹಳ ಸಂದೇಹವಾಗಿರುತ್ತೆ. ಇಂಗ್ಲೆಂಡಿನಲ್ಲಿ ಹೆಸರುವಾಸಿಯನ್ನು ಪಡೆದಿರುವ ಕೆಲವು ರಖಂಗಳು ನೀಲಗಿರಿಯಲ್ಲಿ ಬಹಳ ಜಾಗರೂಕತೆಯಿಂದ ವ್ಯವಸಾಯಮಾಡಿದ್ದಾಗ್ಯೂ ಕೂಡ ಚೆನ್ನಾಗಿ ಆಗಲೇಇಲ್ಲ.

ಆಸ್ಟ್ರೇಲಿಯ ದೇಶದ ಮತ್ತು ನೀಲಗಿರಿ ಪ್ರಾಂತ್ಯದ ಹವಾ ಮತ್ತು ಬೇಸಾಯ ಕಾಲಗಳು ಸ್ವಲ್ಪ ಹೆಚ್ಚೂ ಕಡಿಮೆ ಒಂದೆ ವಿಧವಾಗಿರುತ್ತವೆ. ಅಲ್ಲಿನ ಬೀಜವು ರೋಗಾದಿಗಳಿಲ್ಲದೆ ಚೆನ್ನಾಗಿರುತ್ತದೆಂಬುವದಕ್ಕೆ ಸರ್ಕಾರದವರು ಖಾತರಿ ಕೊಡುತಾರೆ. ಆಸ್ಟ್ರೇಲಿಯಾದಿಂದ ಇಲ್ಲಿಗೆ ದೂರವೂ ಕಡಿಮೆಯಾದ್ದರಿಂದ ಖರ್ಚು ಕಮ್ಮಿ ಮತ್ತು ಬೀಜವು ವಿಶೇಷ ಕೆಟ್ಟು ಹಲಾಕುಆಗುವದಿಲ್ಲ. ಆಸ್ಟ್ರೇಲಿಯಾದಲ್ಲಿರುವ ಸಿಡ್ನಿ ಎಂಬ ಪಟ್ಟಣದಿಂದ ಉದಕಮಂಡಲಕ್ಕೆ (Ootacamund) ಹಾಸಲು ಖರ್ಚು ಮಣ ಒಂದಕ್ಕೆ ಸುಮಾರು ೦—೬—೦ ಬೀಳುತ್ತೆ.

ಆಸ್ಟ್ರೇಲಿಯಾ ಖಂಡದ ಉರಲಗಡ್ಡೆಗಳಲ್ಲೂ ಕೂಡ „ಅಪ್‌ಟುಡೇಟ್'' (Up-to-date) ಎಂದು ಹೆಸರುಗೊಂಡಿರುವ ರಖಂ ಒಂದು ಹೊರತು ಇತರ ರಖಂ ಗಡ್ಡೆಗಳು ಇಲ್ಲಿ ಅಷ್ಟು ಚೆನ್ನಾಗಿ ಆಗುವದಿಲ್ಲ. ಅಲ್ಲಿ ಈ „ಅಪ್ಟುಡೇಟ್'' ಗಡ್ಡೆಯು ಖರೀದಿ ಮಣ ಒಂದಕ್ಕೆ ಸುಮಾರು ೧—೧೧—೦ ಆಗುತ್ತದೆ. ಜಮೀನನ್ನು ೧೪ ಅಡಿಯಷ್ಟು ಆಳವಾಗಿ ಚೆನ್ನಾಗಿ ಅಗೆದು ಸರಿಪಡಿಸಿಕೊಂಡು ಗೊಬ್ಬರ ಹಾಕಿ ಬೀಜವನ್ನು ೧೨ ಇಂಚು ದೂರ ದೂ

ರವಾಗಿ ಬಿತ್ತಬೇಕು. ಎಕರೆಗೆ ಸುಮಾರು ೪೦ ಮಣ ಬೀಜ ಹಿಡಿಯುವದು. ಜಮೀನನ್ನು ಸರಿಯಾಗಿ ವ್ಯವಸಾಯಮಾಡಿದಲ್ಲಿ ಮೊದಲನೆ ವರುಷ ಸುಮಾರು ೬೪೦ ಮಣ ಗಡ್ಡೆ ಉತ್ಪತ್ತಿಯಾಗುತ್ತದೆ. ಉತ್ಪತ್ತಿಯು ಉತ್ತರೋತ್ತರ ಇನ್ನೂ ಹೆಚ್ಚಬಹುದು. ಜುಲೈ ಆಖೈರಿನಲ್ಲಿ ಭಾರಿ ಮಳೆಗಳೆಲ್ಲ ಪೂರೈಸಿದಮೇಲೆ ಬಿತ್ತಿದರೆ ನವಂಬರಿನಲ್ಲಿ ಫಸಲು ರೇಖೆಗೆ ಬರುವದು. ಈ ಫಸಲಿನಿಂದ ಬೀಜವನ್ನು ಇಟ್ಟುಕೊಂಡಿದ್ದು ಮಾರ್ಚಿ ಮಾಹೆಯಲ್ಲಿ ಬಿತ್ತುವ ಮೊದಲನೇ ಪೈರಿಗೆ ಉಪಯೋಗಿಸಿಕೊಳ್ಳಬಹುದು. ಸಾಧ್ಯವಾದಷ್ಟು ಬೀಜದ ಗಡ್ಡೆಗಳನ್ನು ಬೆಳಕಿನಲ್ಲಿ ಹರಡಿಟ್ಟಿದ್ದರೆ ಕಣ್ಣು ಉಂಟಾಗುತ್ತವೆ. ಅನಂತರ ಬಿತ್ತಿದ ಕೂಡ್ಲೆ ಮೊಳೆಯುವದಕ್ಕೆ ಪ್ರಾರಂಭವಾಗುತ್ತವೆ.

ಹೀಗೆ ತರಿಸಿದ ಬೀಜವನ್ನು ಸ್ವಲ್ಪ ಬುದ್ಧಿವಂತರಾಗಿಯೂ ಮತ್ತು ಅದನ್ನು ಇತರ ಕೀಳು ರಖಂ ಮತ್ತು ರೋಗದ ಗಡ್ಡೆಗಳೊಂದಿಗೆ ಬೆರೆಸದೆ ಒಳ್ಳೆ ಜಮೀನಿಗೆ ಉಪಯೋಗಿಸುವಂಥಾವರಾಗಿಯೂ ಇರುವ ಕೆಲವು ಮಂದಿ ರೈತರಿಗೆ ಹಂಚಬೇಕೇ ಹೊರತು ಮನಸ್ವಿಯಾಗಿ ಎಲ್ಲರಿಗೂ ಕೊಡುವದರಿಂದ ಬೀಜವು ವ್ಯರ್ಥವಾಗುವದೊಂದಲ್ಲದೆ ರೈತರಿಗೆ ಏನೂ ಪ್ರಯೋಜನವಾಗುವದಿಲ್ಲ.

ಆಸ್ಟ್ರೇಲಿಯಾದೇಶದ ಗಡ್ಡೆಗೆ ಯಾವಾಗಲೂ ರೋಗದ ಸೋಂಕನ್ನೇ ಕಾಣದ ಪ್ರಶಸ್ತವಾದ ಜಮೀನು ಆಗಬೇಕು. ಈ ಪೈರಿನ ಅಜಮಾಯಿಷಿಯನ್ನು ಸರ್ಕಾರದ ತರಫಿನಿಂದ ನಡೆಸುವದಕ್ಕಿಂತಲೂ ಪ್ರೈವೇಟ್ ಜಮೀನುದಾರ್ರಿಗೆ ಅವರು ವಿಸಿಷ್ಟ ಖರ್ಚನ್ನೂ ವಹಿಸಿ ಬಂದ ಫಸಲಿನಲ್ಲಿ ಅರ್ಧವನ್ನು ತೆಗದುಕೊಳ್ಳಬಹುದೆಂಬ ಶರತ್ತಿನಮೇಲೆ ವಪ್ಪಿಸುವದು ಒಳ್ಳೇದು.

ಇದರ ಆದಾಯ ವೆಚ್ಚದ ತಪಶೀಲು ಅಂದಾಜಾ ನೋಡುವಲ್ಲಿ ಒಂದು ಎಕರೆ ಜಮೀನಲ್ಲಿ ಒಟ್ಟು ಹುಟ್ಟುವಳಿಯಾಗುವ ೬೪೦ ಮಣದಲ್ಲಿ ಜಮೀನುದಾರ್ರಿಗೆ ಹೋಗುವ ಅರ್ಧ ಹಿಸ್ಸೆ ಜಾತ ಮಿಕ್ಕ ೩೨೦ ಮಣಕ್ಕೆ, ಇಲ್ಲಿನ ದರದಂತೆ ಮಣ ಒಂದಕ್ಕೆ ೧—೧೦—೦ ರೂಪಾಯಿ ಮೇರೆ ೫೨೦ ರೂಪಾಯಿ ಬೆಲೆಯಾಗುತ್ತೆ. ಈ ಪೈಕಿ ಬಿತ್ತದ ಖರೀದಿ ಮಣ ಒಂದಕ್ಕೆ ೧—೧೧—೦ ರೂಪಾಯಿನಂತೆ ೪೦ ಮಣಕ್ಕೆ ೬೭೫ ರೂಪಾಯಿ, ಇದಕ್ಕೆ

ಸಿದ್ಧಿಯಿಂದ ಉದಕಮಂಡಲಕ್ಕೆ ಹಡಗು ಮತ್ತು ರೈಲ್ವೆ ಹಾಸಲು ಮಣಕ್ಕೆ ೬ ಆಣೆಯಂತೆ ಆಗುವ ೧೫ ರೂಪಾಯಿ, ಅಂತು ೪೭೪ ರೂಪಾಯಿ ಖರ್ಚು ಕಳೆದು ಸುಮಾರು ೩೪೦ ರೂಪಾಯಿ ನಿವ್ವಳ ಆದಾಯ ತೇಲುವದು. ಆದರೆ ಈ ಮೊಬಲಗನ್ನೆ ನಿರ್ಧರವಾಗಿಟ್ಟುಕೊಳ್ಳಲಾಗುವದಿಲ್ಲ. ಬಿತ್ತವು ಮಾರ್ಗದಲ್ಲಿ ಕೆಟ್ಟುಹೋಗಬಹುದು. ಇಲ್ಲವೆ ಇಲ್ಲಿಯೇ ಶೇಖರಿಸಿಟ್ಟಿದ್ದ ಕಾಲದಲ್ಲಿ ಕೊಳೆತುಹೋಗಬಹುದು. ಅಥವಾ ಬೀಜವು ಒಣಗಿ ತನುವು ಕಡಿಮೆಯಾಗೋಣದರಿಂದ ತೂಕ ಕಮ್ಮಿಯಾಗುವದುಂಟು ಮತ್ತು ಫಸಲು ಹುಟ್ಟುವಳಿಯೂ ಎಕರೆ ಒಂದಕ್ಕೆ ೬೦ ಮಣವೇ ಆಗುತ್ತೆಂದು ಹೇಳುವದಕ್ಕೂ ಆಗುವದಿಲ್ಲ. ಆದಾಗ್ಯೂ ಕೂಡ ನಷ್ಟ ಉಂಟಾಗುವ ಸಂಭವವೇನೂ ಇಲ್ಲ. ಅಥವಾ ಆದ ಫಸಲು ಬಿಕರಿಯಾಗುವದಿಲ್ಲವೆಂಬ ಭಯವೂ ಇಲ್ಲ. ಒಂದುವೇಳೆ ಫಸಲನ್ನು ಬೇಸಾಯಗಾರರು ಬೀಜಕ್ಕಾಗಿ ಕೊಳ್ಳದಿದ್ದರೂ ಇದನ್ನು ತಿನ್ನಲಿಕ್ಕೆ ಜನರು ಕೊಂಡುಕೊಳ್ಳುವರು.

ಮೇಲ್ಕಂಡ ಕಲೆಕ್ಟರವರ ಸಲಹೆಗಳನ್ನು ಸರ್ಕಾರದವರು ಒಪ್ಪಿ ಈ ವಿಚಾರದಲ್ಲಿ ಕಂಡುಬರುವ ಫಲಿತಾಂಶವನ್ನು ಯಥಾಕಾಲದಲ್ಲಿ ರಿಪೋರ್ಟು ಮಾಡಬೇಕೆಂದು ಹುಕುಂಮಾಡಿರುತ್ತಾರೆ.

Rice in Siam. *

ಸಯಾಂ ರಾಜ್ಯದಲ್ಲಿ ಬತ್ತದ ಬೆಳೆ.

ಸಯಾಂ ರಾಜ್ಯದಲ್ಲಿ ಅಕ್ಕಿ ಮತ್ತು ಮೀನು ಜನಗಳಿಗೆ ಮುಖ್ಯಾಹಾರ ಪದಾರ್ಥಗಳಾಗಿರುತ್ತವೆಯಾದ್ದರಿಂದ ಅಲ್ಲಿ ಬತ್ತವನ್ನು ವಿಶೇಷವಾಗಿ ಬೆಳೆಯುತ್ತಾರೆ. ಅಲ್ಲಿನ ಅಕ್ಕಿಯು ಬಹಳ ಶ್ರೇಷ್ಠವಾಗಿರುತ್ತದೆಯಾಗಿ ಇದಕ್ಕೆ ಎಲ್ಲಾ ಕಡೆಗಳಲ್ಲೂ ವಿಶೇಷವಾದ ಗಿರಾಕಿ ಇರುವದು.

ಬತ್ತವನ್ನು ಮೊಳಕೆ ಮಾಡಿದಮೇಲೆ ಸಣ್ಣ ಸಣ್ಣ ಪಾತಿಗಳಲ್ಲಿ ಅವುಗಳನ್ನ ಒತ್ತಾಗಿ ಬಿತ್ತಿ ನೀರು ಕಟ್ಟಿ ಬೆಳೆಸುತ್ತಾರೆ. ಆ ಸಸಿಗಳು ಒಂದು ಅಡಿ ಉದ್ದವಾದಮೇಲೆ ಅವನ್ನು ಕಿತ್ತು ಕಂತೆಗಳು ಕಟ್ಟಿ ಬಿತ್ತನೆಗೆ ತಯಾರಿರುವ ಗದ್ದೆಗೆ ಸಾಗಿಸುತ್ತಾರೆ. ಗದ್ದೆಯನ್ನು ಚೆನ್ನಾಗಿ ಉತ್ತು

* ಇಂಡಿಯನ್ ಟ್ರೇಡ್ ಜರ್ನಲ್, ೯—೯—೦೯.

ಸಾಲು ಹೊಡೆಸು ಸುಮಾರು ೬-೮ ಅಂಗುಲ ನೀರು ಬಿಟ್ಟುಕೊಂಡು ಸಸಿಗಳನ್ನು ಕೆಸರಿನಲ್ಲಿ ಕೈಯಿಂದ ನಾಟುತ್ತಾರೆ. ಸಾಧಾರಣವಾಗಿ ನಾಟ ಕೆಲಸವು ಜೂನ್‌ನಿಂದ ಅಕ್ಟೋಬರ್‌ವರೆಗೂ ಜರುಗುವದುಂಟು. ಇಲ್ಲಿ ಭತ್ತವನ್ನು ಭಾರಿ ಪ್ರದೇಶಗಳಲ್ಲಿ ಬೆಳೆಯುವದ್ದರಿಂದ ಏಕಕಾಲದಲ್ಲಿ ಪೈರು ಕಟಾವಿಗೆ ಬಂದಲ್ಲಿ ಅದನ್ನು ಸಕಾಲದಲ್ಲಿ ಒಟ್ಟಿಗೆ ಕಟಾವು ಮಾಡುವದು ಬಹಳ ಪ್ರಯಾಸವಾಗುತ್ತಾಗಿ ಪೈರು ಬೆಳೆದು ಪಕ್ವಕ್ಕೆ ಬರುವದು ೨ ತಿಂಗಳು ಮೊದಲುಗೊಂಡು ೬ ತಿಂಗಳವರೆಗೂ ಹಿಡಿಯುವ ೩-೪ ಬೇರೆ ಬೇರೆ ಜಾತಿ ಬತ್ತಗಳನ್ನು ಬೆಳೆಯುತ್ತಾರೆ. ಇದಕ್ಕನುಗುಣವಾಗಿ ಸುಗ್ಗಿ ಕೆಲಸವೂ ಕೂಡ ಅಕ್ಟೋಬರು ಮೊದಲುಗೊಂಡು ಫೆಬ್ರವರಿ ವರೆಗೂ ನಡೆಯುತ್ತಲೇ ಇರುವದು. ಬಹಳವಾಗಿ ಕುಡುಗೋಲಿನಿಂದಲೇ ಪೈರು ಕಟಾವು ಮಾಡುವದು, ದನಗಳಿಂದ ತುಳಿಸಿ ಕಾಳು ಮಾಡುವದು ಮತ್ತು ಗಾಳಿಯಲ್ಲಿ ಕಾಳು ತೂರುವದು ವಾಡಿಕೆಯಲ್ಲಿರುತ್ತೆ. ಈಚೆಗೆ ಉಳುವದಕ್ಕೂ, ಕಟಾವು ಮಾಡುವದಕ್ಕೂ ಮತ್ತು ಕಾಳು ಮಾಡುವದಕ್ಕೂ ಯಂತ್ರಗಳನ್ನು ಉಪಯೋಗಿಸಲು ಪ್ರಾರಂಭವಾಗಿ ರೈತರಿಗೆ ಅದರಲ್ಲಿ ದಿನೇದಿನೆ ಅಭಿರುಚಿ ಹೆಚ್ಚಾಗುತ್ತಾ ಇದೆ.

——o——

Extract from the Dewan's Dasara Address, 09.

ಚಾಲ್ತಿಸಾಲ್ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್‌ರವರು ಮಾಡಿದ ಉಪನ್ಯಾಸ.

ದುರ್ಭಿಕ್ಷ.—ಈ ಸಂಸ್ಥಾನದ ಅನೇಕ ಕಡೆಗಳಲ್ಲಿ ಪ್ರಬಲವಾದ ದುರ್ಭಿಕ್ಷ ಪ್ರಾಪ್ತವಾಗಿದ್ದುದೇ ೧೯೦೮-೦೯ನೇ ಸಾಲಿನ ಮುಖ್ಯ ವಿಷಯವಾಗಿದೆ. ತಮ್ಮಗಳಿಗೆ ತಿಳಿದಿರುವಂತೆ ೧೯೦೪-೦೫ ಮತ್ತು ೧೯೦೫-೦೬ನೇ ವರ್ಷಗಳು ಜಿರಾಯಿತಿ ಕೆಲಸಕ್ಕೆ ಅನುಕೂಲವಾಗಿರಲಿಲ್ಲ. ಆ ಪೈಕಿ ೧೯೦೫-೦೬ನೆ ಸಾಲಿನಲ್ಲಿ ಕೋಲಾರ, ತುಮಕೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿಯೂ, ಶಿವಮೊಗ್ಗ ಡಿಸ್ಟ್ರಿಕ್ಟಿನ ಕೆಲವು ಭಾಗಗಳಲ್ಲಿಯೂ ಸಹಾ ಬಹಳ ಪ್ರಬಲವಾದ ದುರ್ಭಿಕ್ಷವು ಸಂಭವಿಸಿ ಇತ್ತು. ಮಳೆಬೀಳದೆ ಆಯಾಸ್ಥಳಗಳಲ್ಲಿ ಸಾಕಾದಷ್ಟು ಜಿನಸಿ ವಗೈರೆ ಇಲ್ಲದೆ ಇದ್ದುದರಿಂದಲೂ, ಇತರ ಕಾರಣಗಳಿಂದಲೂ ಧಾರಣೆಮಾಸಿ ಹೆಚ್ಚಾಗಿತ್ತು. ಆದ್ದರಿಂದ ಅನೇಕ

ಕ್ಷಾವು ನಿವಾರಣೆ ಏರ್ಪಾಡುಗಳನ್ನು ಮಾಡಬೇಕಾಗಿ ಬಂತು. ಆದರೆ ದೈವವಶಾತ್ ೧೯೦೬ನೆ ಇಸವಿಯ ಆಖೈರಿಗೆ ಸಕಾಲದಲ್ಲಿ ಮಳೆ ಬಿದ್ದುದರಿಂದ ದುರ್ಭಿಕ್ಷವು ಮುಂದೆ ಪ್ರಬಲಿಸಲಿಲ್ಲ. ೧೯೦೬-೦೭ನೆ ಸಾಲಿನಲ್ಲಿ ಮಳೆ ತಕ್ಕಮಟ್ಟಿಗೆ ಆದಾಗ್ಯೂ ದುರ್ಭಿಕ್ಷದ ಭಯವೇನೋ ಇದ್ದೇ ಇತ್ತು. ಆ ಸಾಲಿನಲ್ಲಿ ಬೆಳೆಯು ಸ್ವಲ್ಪ ಹೆಚ್ಚು ಕಡಮೆ ಚೆನ್ನಾಗಿಯೇ ಆಯಿತು. ಆದರೂ ಹಿಂದಿನ ಎರಡು ವರ್ಷಗಳಲ್ಲಿ ರೈತರಿಗೆ ಉಂಟಾದನಷ್ಟ ಕೂಡಿಬರುವಷ್ಟು ಬೆಳೆ ಆಗಲಿಲ್ಲ. ೧೯೦೫-೦೬ನೆ ಸಾಲಿನಲ್ಲಿ ಬಹಳಮಟ್ಟಿಗೆ ಹೆಚ್ಚಿದ್ದ ಜಿನಸಿಗಳ ಧಾರಣೆಯೂ ಸಹಾ ಅಷ್ಟೇನೂ ಕಮ್ಮಿಯಾಗಲಿಲ್ಲ. ೧೯೦೭-೦೮ನೆ ಸಾಲಿನಲ್ಲಿಯೂ ಸಹಾ ಮಾಮೂಲ್ ಪ್ರಕಾರ ಮಳೆ ಬೆಳೆ ಆಗಲಿಲ್ಲ. ಆ ವರ್ಷದಲ್ಲಿ ಬಿದ್ದ ಮಳೆಯು ಹಿಂದಿನ ೩೭ ವರ್ಷಗಳ ಸರಾಸರಿ ಮಳೆಗಿಂತಲೂ ಜಾಸ್ತಿಯಾಗಿ ಇದ್ದರೂ, ಎಲ್ಲಾ ಕಡೆಯೂ ಒಂದೇ ಸಮನಾಗಿ ಮತ್ತು ಕಾಲಕಾಲಕ್ಕೆ ಸರಿಯಾಗಿ ಬೀಳಲಿಲ್ಲ. ಮಲೆನಾಡಿನಲ್ಲಿ ಮುಂಗಾರು ಮಳೆಯು ವಿಶೇಷವಾಗಿ ಆದುದರಿಂದಲೇ ಸಂಸ್ಥಾನದ ಒಟ್ಟು ಸರಾಸರಿ ಮಳೆ ಅಳತೆಯು ಹೀಗೆ ಹೆಚ್ಚುವುದಕ್ಕೆ ಕಾರಣವಾಯಿತು. ಮೈದಾನ ಡಿಸ್ಟ್ರಿಕ್ಟುಗಳಲ್ಲಿ ಈ ಮಳೆ ಕಮ್ಮಿಯಾಗಿ ಆಯಿತು. ಮೈದಾನದ ಡಿಸ್ಟ್ರಿಕ್ಟುಗಳಲ್ಲಿರುವ ಕೆರೆಗಳಿಗೆ ನೀರು ಬರಬೇಕಾದರೆ ಮುಖ್ಯವಾಗಿ ಹಿಂಗಾರು ಮಳೆಗಳಿಂದಲೇ; ಈ ಮಳೆಗಳೇ ಆಗದೆ ಹೋದುವು. ತುಮಕೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಈ ಮಳೆ ಬಹಳ ಕಮ್ಮಿಯಾಗಿ ಬಿತ್ತು. ತುಮಕೂರು ಡಿಸ್ಟ್ರಿಕ್ಟಿನಲ್ಲಿ ಯಾವಾಗಲೂ ಆಗುತ್ತಿದ್ದ ಸರಾಸರಿ ೮೫ ಇಂಚು ಮಳೆಗೆ ಬದಲಾಗಿ ಈ ಸಲ ೨೫ ಇಂಚು ಮಳೆಯೂ, ಚಿತ್ರದುರ್ಗದ ಡಿಸ್ಟ್ರಿಕ್ಟಿನಲ್ಲಿ ಆಗುತ್ತಿದ್ದ ೬೫ ಇಂಚು ಮಳೆಗೆ ಬದಲಾಗಿ ೨೫ ಇಂಚು ಮಳೆಯೂ ಆಯಿತು. ಇದರಿಂದ ವೈಶಾಖಿ ಬೆಳೆ ಕೆಟ್ಟುಹೋಯಿತು. ಹಿಂದಿನ ವರುಷಕ್ಕಿಂತಲೂ ಈ ವರುಷ ಆದ ಒಟ್ಟು ಬೆಳೆಯೂ ಬಹಳ ಕಮ್ಮಿಯಾಯಿತು. ಮೊದಲೇ ಹೆಚ್ಚಾಗಿದ್ದ ಆಹಾರಜಿನಸಿಗಳ ಧಾರಣೆಯು ಇನ್ನೂ ಹೆಚ್ಚಿತು. ಹೀಗೆ ೧೯೦೮-೦೯ನೆ ವರ್ಷದ ಆರಂಭದಲ್ಲಿಯೇ ಪ್ರತಿಕೂಲಸೂಚನೆಗಳು ತಲೆದೋರಿದ್ದುವು. ಏಪ್ರಿಲ್ ಮೊದಲು ಸೆಪ್ಟಂಬರ್‌ವರೆಗೂ ನಡೆಯುವ ಮುಂಗಾರು ಮಳೆಯು ಸಾಕಾದಷ್ಟು ಮಟ್ಟಿಗೆ ಆಗಲಿಲ್ಲ. ತಿಂಗಳಗಟ್ಲೆ ಸರಾಸರಿ ಲೆಕ್ಕನೋಡಿದರೆ ಮಳೆ ಕಡಮೆ

ಎಂದು ಕಂಡುಬರದಿದ್ದರೂ ಯಾವುದೊಂದು ಡಿಸ್ಟ್ರಿಕ್ಟಿನಲ್ಲಿಯೂ ಮಳೆಯು ಕಾಲಕ್ಕೆ ಸರಿಯಾಗಿಯೂ ಬರಲಿಲ್ಲ; ಒಂದೇ ಸಮನಾಗಿಯೂ ಬೀಳಲಿಲ್ಲ. ತಥಾಪಿ ಕೋಲಾರ, ತುಮಕೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಈ ಅನಾನುಕೂಲವು ಅತ್ಯಧಿಕವಾಗಿತ್ತು. ಪರಂತು ಸೆಪ್ಟೆಂಬರ್ ತಿಂಗಳಲ್ಲಿ ಸಂಸ್ಥಾನದ ಎಲ್ಲಾ ಭಾಗಗಳಲ್ಲಿಯೂ ಸ್ವಲ್ಪ ಮಳೆಯಾದ್ದರಿಂದ ತಕ್ಕಮಟ್ಟಿಗೆ ಅನುಕೂಲವಾಯಿತು. ಇಷ್ಟರಲ್ಲೀ ಹಿಂಗಾರು ಮಳೆಯು ಎಂದಿನಂತೆ ಸರಿಯಾಗಿ ನಡೆದು ತೀವ್ರವಾದ ದುರ್ಭಿಕ್ಷವು ತಪ್ಪೀತೆಂದು ಜನರು ಅತ್ಯಾತುರದಿಂದ ನಿರೀಕ್ಷಿಸುತ್ತಿದ್ದರು.

ಆದರೆ ಈ ಆಶಯವು ನೆರವೇರಲಿಲ್ಲ. ಬೆಂಗಳೂರು, ಕೋಲಾರ, ತುಮಕೂರು, ಚಿತ್ರದುರ್ಗ ಡಿಸ್ಟ್ರಿಕ್ಟುಗಳಲ್ಲಿ ಹಿಂಗಾರು ಮಳೆಯು ಬರದೇನೇ ಹೋಯಿತು. ಇತರ ಸ್ಥಳಗಳಲ್ಲಿ ಬಹಳ ಸ್ವಲ್ಪವಾಗಿ ಬಂತು. ಈ ವರ್ಷದಲ್ಲಿ ಸಂಸ್ಥಾನಾಮಳೆ ಸಾಗುವಳಿಯಲ್ಲಿದ್ದ ಪ್ರದೇಶವು ಈ ಕೆಳಗೆ ಕಾಣಿಸಿರುವ ಸಂಖ್ಯೆಗಳಿಂದ ತಿಳಿಯುಬರುತ್ತದೆ:—

ವರ್ಷ		ಎಕರೆಗಳು
1904-5	...	59,26,696
1905-6	...	57,79,850
1906-7	...	60,30,486
1907-8	...	60,11,671
1908-9	...	58,10,418

ಇನಾಂ ಜಮೀನುಗಳು ಈ ಸಂಖ್ಯೆಗಳಲ್ಲಿ ಸೇರಿಲ್ಲ. ಇವುಗಳಿಂದ ಸಾಗುವಳಿಯಾದ ಜಮೀನಿನ ವಿಸ್ತೀರ್ಣವು ಕಳೆದ ಐದು ವರ್ಷಗಳೊಳಗೆ (೧೯೦೫-೬ನೇ ಸಾಲ್ ಶಿವಾಯಿ)ಈ ವರ್ಷವೇ ಬಹಳ ಕಮ್ಮಿಯೆಂಬುವುದು ಗೊತ್ತಾಗುತ್ತದೆ. ಇದರ ಹಿಂದಿನ ಎರಡು ವರ್ಷಗಳಿಗಿಂತ ೨೦೦,೦೦೦ ಎಕರೆ ಜಮೀನ್ ಸಾಗುವಳಿ ಕಮ್ಮಿಯಾಯಿತು. ಈ ವರ್ಷ ಬೆಳೆಯೂ ಕೂಡ ಬಹಳ ಕಡಮೆಯಾಗಿ ಆಯಿತು. ಪೂರಾಬೆಳೆಯನ್ನು ೧೬ ಆಣೆ ಬೆಳೆಯಂತೆ ಭಾವಿಸಿದರೆ ಮೈಸೂರು, ಶಿವಮೊಗ್ಗಾ ಡಿಸ್ಟ್ರಿಕ್ಟುಗಳಲ್ಲಿ ವಿನಾ ಇತರ ಕಡೆಗಳಲ್ಲಿ ಭತ್ತದ ಬೆಳೆಯು ೮ ಆಣೆಗಿಂತ ಕಡಮೆಯಾಗಿಯೂ ಕೋಲಾರ, ತುಮಕೂರು, ಡಿಸ್ಟ್ರಿಕ್ಟುಗಳಲ್ಲಿ ೪ ಆಣೆಗಿಂತ ಬಹಳ ಕಡಮೆ

ಯಾಗಿಯೂ ಆಯಿತು. ರಾಗಿಯ ಬೆಳೆಯು ಯಾವಸ್ಥಳದಲ್ಲಿಯೂ ೬೪ ಆಣೆಗಿಂತ ಜಾಸ್ತಿ ಆಗಲೇಇಲ್ಲ. ತುಮಕೂರಿನಲ್ಲಿ ೮ ಆಣೆಗಿಂತಲೂ ಬಹಳ ಕಡಮೆಯಾಯಿತು. ಇವುಗಳಂತೆಯೇ ಜೋಳದ ಬೆಳೆಯೂ ಸಹಾ ಕಡಮೆ. ಆಹಾರ ಜಿನಸಿಗಳ ಧಾರಣೆಯು ಎಂದಿಗಿಂತಲೂ ಬಹಳ ಜಾಸ್ತಿಯಾಗಿ ೧೯೦೫-೬ನೆ ಇಸವಿಯಲ್ಲಿದ್ದ ಭಾರಿ ದರಕ್ಕಿಂತಲೂ ಶೇಕಡ ೩೦ ರಷ್ಟು ಚಡಾವಾಯಿತು. ಇದರಿಂದ ಜಮೀನ್ ಇಲ್ಲದ ಕೂಲಿಯವರಿಗೆ ತುಂಬಾ ತೊಂದರೆಯಾದುದಲ್ಲದೆ ಧಾನ್ಯಗಳ ದಾಸ್ತಾನ್ ಇಟ್ಟುಕೊಳ್ಳದೆ ಇದ್ದ ಅನೇಕ ಬಡರೈತರಿಗೂ ಬಹಳ ತೊಂದರೆ ಉಂಟಾಯಿತು. ಕೈಗಾರಿಕೆಯಿಂದ ಜೀವನ ಮಾಡುವಕಾರೇಗಾರರಿಗೂ, ನೇಯಿಗೆಯವರಿಗೂ (ತತಾಪಿ ನೇಯಿಗೆಯವರಿಗೆ) ಅವರು ತಯಾರ್ ಮಾಡುವ ಸರಕುಗಳಿಗೆ ಗಿರಾಕಿ ಬಹಳ ಮಟ್ಟಿಗೆ ಕಡಮೆಯಾಯಿತು. ಕುಡಿಯುವುದಕ್ಕೆ ನೀರು ಸಿಕ್ಕುವುದು ತುಂಬಾ ಪ್ರಯಾಸವಾಗಿ ತೀವ್ರವಾದ ನೀರಿನ ಕ್ಷಾಮ ಉಂಟಾಗುವ ಸಂಭವವಿತ್ತು. ದನಗಳಿಗೆ ಮೇವು ಸಿಕ್ಕದೆ ಸಂಸ್ಥಾನದ ನಾನಾಕಡೆಗಳಲ್ಲಿ ಸಾಂಕ್ರಾಮಿಕ ರೋಗಗಳು ಬಹಳವಾಗಿ ಹೆಚ್ಚಿಕೊಂಡವು. ಮೇಲ್ಕಂಡ ಕಾರಣಗಳಿಂದ ಸುಮಾರು ೨,೮೨೦ ಚದರಮೈಲ್ ವಿಸ್ತೀರ್ಣವೂ ೧೩,೭೮,೦೦೦ ಪ್ರಜಾಸಂಖ್ಯೆಯೂ ಉಳ್ಳ ಪ್ರದೇಶದಲ್ಲಿ, ಎಂದರೆ ಸುಮಾರು ೫,೬೧೫ ಗ್ರಾಮಗಳಲ್ಲಿ ಬಹಳ ಘೋರವಾದ ದುರ್ಭಿಕ್ಷವು ಪ್ರಾಪ್ತವಾಯಿತು. ಹೀಗೆ ಕೆಲವು ತಿಂಗಳಕಾಲ ನಡೆಯಿತು. ೧೯೦೯ನೆ ಇಸವಿಯಲ್ಲಿಯೂ ಬೇಸಿಗೆ ಕಾಲದ ಮಳೆ ಮತ್ತು ಮುಂಗಾರು ಮಳೆಗಳು ಒಂದುವೇಳೆ ಬರದೇ ಇದ್ದಿದ್ದರೆ ದುರ್ಭಿಕ್ಷವು ಎಲ್ಲಾ ಕಡೆಯಲ್ಲಿಯೂ ಪ್ರಬಲಿಸಿ ಹಿಂದೆ ಪ್ರಾಪ್ತವಾದ ಎಲ್ಲಾ ಕ್ಷಾಮಗಳಿಗಿಂತಲೂ ಘೋರವಾದ ಕ್ಷಾಮವಾಗಿ ಪರಿಣಮಿಸುತ್ತಿತ್ತು. ಆದರೆ ದೈವಾನುಗ್ರಹದಿಂದ ಈ ಕಷ್ಟಗಳು ನಮಗೆ ತಪ್ಪಿದ ಸಂಗತಿಯು ತಮಗಳಿಗೆಲ್ಲಾ ವೇದ್ಯವಾಗಿಯೇ ಇದೆ.

Agriculture in Bengal *

ಬಂಗಾಳಾ ಪ್ರಾಂತ್ಯದಲ್ಲಿನ ವ್ಯವಸಾಯ ಸ್ಥಿತಿ.

ಖುಲ್ನಾ ಪಟ್ಟಣದಲ್ಲಿ ನಡೆದ ವ್ಯವಸಾಯಕ ಪ್ರದರ್ಶನ ಕಾಲದಲ್ಲಿ

* ಇಂಡಿಯನ್ ಅಗ್ರಿಕಲ್ಚರಿಸ್ಟ್, ೨—೮—೦೯.

ಮೆ|| ಎನ್. ಎನ್. ಬಾನರ್ಜೀಯವರು ಬಂಗಾಳಾ ಪ್ರಾಂತ್ಯದ ವ್ಯವಸಾಯ ಸ್ಥಿತಿಯನ್ನು ಕುರಿತು ಬಹಳ ಸ್ವಾರಸ್ಯವಾದ ಒಂದು ಉಪನ್ಯಾಸವನ್ನು ಮಾಡಿದರು. ಈ ಉಪನ್ಯಾಸದಲ್ಲಿನ ಕೆಲವು ಮುಖ್ಯಾಂಶಗಳನ್ನು ನಮ್ಮ ವಾಚಕರ ತಿಳುವಳಿಕೆ ಬಗ್ಗೆ ಇಲ್ಲಿ ನಮೂದಿಸಿರುತ್ತೇವೆ.

ನಮ್ಮ ದೇಶೀಯರಿಗೆ ಭೂ ವ್ಯವಸಾಯ ಒಂದೇ ಮುಖ್ಯ ಕಸಬಾಗಿರುತ್ತದೆ ಯಾದ್ದರಿಂದ ಕಾರ್ಷಿಕರೂ ಮತ್ತು ವ್ಯವಸಾಯದಲ್ಲಿರುವ ವಿಸ್ತೀರ್ಣವೂ ದಿನೆದಿನೆ ಹೆಚ್ಚುತ್ತಲೆ ಇರುವದು. ಆದರೂ ಕೂಡ ನಮ್ಮ ರೈತರು ತಮ್ಮ ಪೂರ್ವಿಕಾನುಷ್ಠಾನಗಳನ್ನೇ ಆಚರಿಸತಕ್ಕವರು. ಇವರಿಗೆ ಸಾಹಸವೂ ಕಮ್ಮಿ. ಇದರ ಜೊತೆಗೆ ಬಂಡವಾಳವೂ ಸಾಲದಿರುವದರಿಂದ ಕಾಲಕ್ಕನುಗುಣವಾಗಿ ಇವರು ಅಭಿವೃದ್ಧಿ ಪಡಿಯಬಾರದಂತಾಗಿದೆ. ಭೂವ್ಯವಸಾಯವೂ ಮದರಾಸು ಮತ್ತು ಬೊಂಬಾಯಿ ಆಧಿಪತ್ಯದಲ್ಲಿ ಅಭಿವೃದ್ಧಿಗೆ ಬಂದಿರುವಷ್ಟು ಬಂಗಾಳಾದಲ್ಲಿ ಬಂದಿಲ್ಲ. ಇದಕ್ಕೆ ಕಾರಣವೇನು. ಆಧಿಪತ್ಯಗಳಲ್ಲಿ ರೈತರು ಅನ್ಯದೇಶಗಳ ನೂತನ ಶ್ರೇಷ್ಠ ಕ್ರಮಗಳನ್ನು ಆಚರಿಸುತ್ತಿರುವದೇ.

ಆದ್ದರಿಂದ ಬಂಗಾಳಾದಲ್ಲಿನ ಇಂಥಾ ಶೋಚನೀಯವಾದ ಸ್ಥಿತಿಯನ್ನು ತಪ್ಪಿಸಲು ಸಾಮಾನ್ಯವಾಗಿ ಮೂರು ಪ್ರಕಾರವಾಗಿ ತಿದ್ದುಪಾಟುಗಳು ನಡೆಯಬೇಕಾಗಿರುತ್ತೆ. ಮೊದಲನೇದು, ಜಮೀನಿನ ಹುಲುಸನ್ನು ಹೆಚ್ಚಿಸೋಣ; ಎರಡನೇದು, ಹೆಚ್ಚಿಗೆ ಆಹಾರಪದಾರ್ಥಗಳ ಬೆಳೆಯನ್ನು ಆರಂಭಿಸಿ ರೈತನು ಜಮೀನಿನಲ್ಲಿ ಶ್ರೇಷ್ಠವಾದ ಫಸಲನ್ನು ಹೆಚ್ಚಾಗಿ ಬೆಳೆಯುವದಕ್ಕೆ ಸಾಧಕವಾದ ಉತ್ತಮವಾದ ವ್ಯವಸಾಯ ಕ್ರಮಗಳನ್ನು ರೂಢಿಯಲ್ಲಿ ತರುವದು; ಮೂರನೇದು, ಪೈರುಗಳನ್ನು ಮತ್ತು ಹಗೇವಿನಲ್ಲಿನ ಕಾಳು ಕಡಿಗಳನ್ನು ಕೆಡಿಸುವ ಹುಳುಗಳು ಮತ್ತು ಜಾಡ್ಯಗಳ ನಿವಾರಣೆ.

ತಕ್ಕ ಗೊಬ್ಬರವನ್ನು ಬುದ್ಧಿವಂತಿಕೆಯಿಂದ ಉಪಯೋಗಿಸಿದರೆ ಜಮೀನಿನ ಹುಲುಸು ಹೆಚ್ಚುತ್ತದೆಂಬ ಸಂಗತಿಯು ನಮ್ಮ ರೈತರಿಗೆ ಗೊತ್ತಿದೆ. ಆದರೂ ರೈತರೇನೋ ಇಂಥಾ ಪ್ರಯೋಜನಕರವಾದ ಪದಾರ್ಥದಿಂದ ಪೂರ್ಣ ಫಲವನ್ನು ಪಡೆಯುವ ಭಾಗದಲ್ಲಿ ಪ್ರಯತ್ನ ಪಟ್ಟಿಲ್ಲ.

ಈ ದೇಶದಲ್ಲಿ ಸ್ವಾಭಾವಿಕವಾಗಿ ದೊರೆಯುವ ಗೊಬ್ಬರಗಳನ್ನು ವಿತರಣೆಯಿಂದ ಕಾಪಾಡಿಡದೆ ವಿಶೇಷವಾಗಿ ಹಾಳು ಮಾಡುತ್ತಿದ್ದಾರೆ. ಇನ್ನು ಗೊಬ್ಬರವಾಗಿ ಉಪಯೋಗಿಸುವ ರಸಾಯನ ಪದಾರ್ಥಗಳಾದರೊ ನಮ್ಮ ರೈತರು ಉಪಯೋಗಿಸುವದೇ ಇಲ್ಲ. ಆದಕಾರಣ ಅನ್ಯದೇಶಗಳಲ್ಲಿ ಜಮೀನನ್ನು ಸಾರಗೊಳಿಸುವದಕ್ಕೆ ಒದಗುವ ಈ ಎರಡು ಪ್ರಕಾರವಾದ ಗೊಬ್ಬರಗಳೂ ನಮ್ಮ ದೇಶದ ಪೈರುಗಳಿಗೆ ಒದಗುವದೇ ಇಲ್ಲ. ಗೊಬ್ಬರಕ್ಕಾಗಿ ಹಸಿ ಸಸಿಗಳನ್ನು ಉಪಯೋಗಿಸುವ ಪದ್ಧತಿ ಕೇವಲ ಸ್ವಲ್ಪ ಜನ ರೈತರಲ್ಲಿ ಮಾತ್ರ ರೂಢಿಯಲ್ಲಿದೆ.


Revenue Appeals.

ರೆವಿನ್ಯೂ ಅಪೀಲುಗಳು.

೧೯೦೮—೦೯ನೆ ಇಸವಿಯ ಅಪೀಲು ನಂ. ೪.

ಅಪೀಲುವಾದಿಗಳು.		ಅಪೀಲುಪ್ರತಿವಾದಿ.
೧. ಕರಿಗೌಡ. ೨. ಚಿಕ್ಕಲಂಕೆಗೌಡ.	*vs.*	ಹನುಮೆಗೌಡ.

ಮೊಕದ್ದಮೆಯ ವಿದ್ಯಮಾನ.—ಕಕ್ಷಿಗಾರರು ಈ ಕೆಳಗೆ ಕಂಡ ಮೇರೆ ಸಂಬಂಧಿಗಳಾಗಿರುತ್ತಾರೆ.



ಬಾಲಗಟ್ಟ ಮತ್ತು ಕೊಡಗಹಳ್ಳಿ ಎಂಬ ಗ್ರಾಮಗಳ ಪೂರ್ವದ ರಿಜಿಸ್ಟರ್‌ದಾರನಾದ ಕರಿಗೌಡ (A)ನು ತನ್ನ ಮರಣದ ಪರ್ಯಂತ ನೌಕರಿಯಲ್ಲಿದ್ದನು. ಅನಂತರ ಇವನ ತಮ್ಮ ಲಂಕೆಗೌಡನು ಕೆಲಸ ನೋಡುತ್ತಿದ್ದನು. ಈತನು (ಲಂಕೆಗೌಡನು) ಬರಾವರ್ದು ತನ್ನ ಹೆಸರಿನಲ್ಲಿ ರಿಜಸ್ಟರಾಗಬೇಕೆಂದು ಕೇಳಿಕೊಂಡಿದ್ದರ ಮೇಲೂ ಮತ್ತು ಕರಿಗೌಡ (A)ನ

ನಾಲ್ಕು ಜನ ಮಕ್ಕಳೂ ಇದಕ್ಕೆ ತಮ್ಮ ಅಡ್ಡಿ ಏನೂ ಇಲ್ಲವೆಂದು ಹೇಳಿಕೆ ಕೊಟ್ಟಿದ್ದರಿಂದಲೂ ಡೆಪ್ಯುಟಿ ಕಮಿಷನರವರು ೧೮೮೩ನೆ ಫೆಬ್ರವರಿಯಲ್ಲಿ ಲಂಕೆಗೌಡನನ್ನು ಪಟೇಲನಾಗಿ ಮೊಕರೂರು ಮಾಡಿದರು. ಅನಂತರ ಕರಿಗೌಡ (A)ನ ಮೊಮ್ಮಕ್ಕಳಾದ ಈಗಿನ ವಾದಿಗಳು ಲಂಕೆಗೌಡನ ಮೊಕರೂರಾತಿ ವಿಷಯದಲ್ಲಿ ತಕರಾರು ಮಾಡಿದ್ದರಲ್ಲಿ ಸಬ್ ಡಿವಿಜನ್ ಆಫೀಸರವರು ೧೮೮೪ರಲ್ಲಿ ಲಂಕೆಗೌಡನನ್ನು ಕೆಲಸದಿಂದ ತಪ್ಪಿಸುವದಕ್ಕಾಗುವದಿಲ್ಲವೆಂದೂ ಆದರೆ ಕರಿಗೌಡನ (೧ನೆ ವಾದಿ) ಹೆಸರನ್ನು ಹಕ್ಕುದಾರರ ಕಲಂನಲ್ಲಿ ದಾಖಲ್ ಮಾಡಿಕೊಳ್ಳಬಹುದೆಂತಲೂ ಹುಕ್ಕುಂ ಮಾಡಿದರು. ಅಪೀಲಿನಲ್ಲಿ ಡೆಪ್ಯುಟಿ ಕಮಿಷನರವರು ಸಬ್ ಡಿವಿಜನ್ ಆಫೀಸರವರ ಹುಕುಮನ್ನು ಖಾಯಂ ಮಾಡಿದರು. ಎರಡನೆಯ ಅಪೀಲಿನಲ್ಲಿ ಗೌರ್ನಮೆಂಟಿನವರು ಡೆಪ್ಯುಟಿ ಕಮಿಷನರವರ ಆರ್ಡರೆ ಸರಿಯಾದದ್ದೆಂದು ತೀರ್ಮಾನ ಮಾಡಿದರು. ೧೮೯೦ನೆ ಫೆಬ್ರವರಿಯಲ್ಲಿ ಲಂಕೆಗೌಡನು ತನಗೆ ವಯಸ್ಸಾದ್ದರಿಂದ ಪಟೇಲಿಯು ತನ್ನ ಮಗ ಹನುಮೆಗೌಡ (ಪ್ರತಿವಾದಿ) ಮತ್ತು ಕರಿಗೌಡ (೧ನೆ ವಾದಿ) ಈ ಇಬ್ಬರ ಹೆಸರಿನಲ್ಲಿ ದಾಖಲಾಗಬೇಕೆಂತ ಬಯಾನು ಮಾಡಿಕೊಂಡನು. ಇವನು ೧೮೯೪ನೇ ಎಪ್ರೈಲ್ ಮಾಹೆವರೆಗೆ ನೌಕರಿ ನೋಡುತ್ತಿದ್ದು ಆ ತಿಂಗಳಲ್ಲಿ ಮೃತಪಟ್ಟನು. ತರುವಾಯ ಇವನ ಮಗ ಹನುಮೆಗೌಡನಿಗೆ ನೌಕರಿಯಾಗಿ (೧೮೯೪ನೆ ಜುಲೈಯಲ್ಲಿ), ಇವನು ಮತ್ತು ಚಿಕ್ಕಲಂಕೆಗೌಡನೂ (೨ನೆ ವಾದಿ) ಕೊಡಗಹಳ್ಳಿ ಪಟೇಲಿಯು ಹನುಮೇಗೌಡನ ಹೆಸರಿನಲ್ಲೂ ಬಾಲಘಟ್ಟವು ಚಿಕ್ಕಲಂಕೆಗೌಡನ ಹೆಸರಿನಲ್ಲೂ ಬರಾವರ್ದು ಆಗಬೇಕೆಂದು ಸಬ್ ಡಿವಿಜನ್ ಆಫೀಸರವರಲ್ಲಿ ಜಂಟಿಯಾಗಿ ಕೇಳಿಕೊಂಡರು. ಈ ವಿಷಯದಲ್ಲಿ ಆಖೈರು ಹುಕುಂ ಆಗುವದರೊಳಗಾಗಿ ಹನುಮೆಗೌಡನು ಒಂದು ಡಕಾಯಿತಿ ಮೊಕದ್ದಮೆ ಸಂಬಂಧವಾಗಿ ದಸ್ತಗಿರಿ ಮಾಡಲ್ಪಟ್ಟು ವಿಚಾರಣೆ ಬಗ್ಗೆ ಸೆಷನ್ಸ್‌ಗೆ ಗುರಿಯಾದನು. ಏತನ್ಮಧ್ಯೆ ಚಿಕ್ಕಲಂಕೆಗೌಡನು ಕೆಲಸವನ್ನು ನೋಡುತ್ತಿದ್ದನು. ಹನುಮೇಗೌಡನು ಖುಲಾಸಾದ ನಂತರ ತನ್ನ ಕೆಲಸವನ್ನು ತನಗೆ ಕೊಡಿಸಿ ಕೊಡಬೇಕೆಂದು ಕೇಳಿ ಕೊಂಡದ್ದರ ಮೇಲೆ ಸಬ್ ಡಿವಿಜನ್ ಆಫೀಸರವರು ಇವನು ಖುಲಾಸು ಮಾಡಲ್ಪಟ್ಟನೂ ನಿರಪರಾಧಿಯೆಂದು ಭಾವಿಸುವುದಕ್ಕಾಗುವದಿಲ್ಲವೆಂದು

ತೀರ್ಮಾನಿಸಿ ಚಿಕ್ಕಲಂಕೆಗೌಡನನ್ನು ಬಾಲಘಟ್ಟಕ್ಕೂ, ಕರೀಗೌಡನನ್ನು ಕೊಡಗಹಳ್ಳಿಗೂ ಪಟೇಲರಾಗಿ ಮೊಕರೂರು ಮಾಡಿದರು. ಅಪೀಲಿನಲ್ಲಿ ಡೆಪ್ಯುಟಿ ಕಮಿಷನರವರು ಹನುಮೇಗೌಡನು ಡಕಾಯಿತಿಯಲ್ಲಿ ಸೇರಿದ್ದನೆಂಬುವದಕ್ಕೆ ತೃಣಮಾತ್ರವೂ ರುಜುವಾತಿಲ್ಲವೆಂದು ಅಭಿಪ್ರಾಯಪಟ್ಟು ಬಾಲಘಟ್ಟ ಮತ್ತು ಕೊಡಗಹಳ್ಳಿ ಈ ಎರಡು ಗ್ರಾಮಗಳ ಪಟೇಲಿಯನ್ನೂ ಇವನಿಗೆ ಕೊಡಬೇಕೆಂದು ಹುಕುಂ ಮಾಡಿದರು. ಚಿಕ್ಕಲಂಕೆಗೌಡನು ರೆವಿನ್ಯೂ ಕಮಿಷನರವರಲ್ಲಿ ಅಪೀಲ್‌ಮಾಡಿರಲು, ಇವರು ಎರಡು ಗ್ರಾಮಗಳೂ ಒಂದೇ ಪಟೇಲಿ ಛಾರ್ಜಾಗಿ ತಿಳಿಯಬರುತ್ತೆ ಮತ್ತು ಅಪೀಲು ವಾದಿಯೂ ಹನುಮೇಗೌಡನೂ ತಮ್ಮೊಳಗೆ ಮಾಡಿಕೊಂಡ ಏರ್ಪಾಟನ್ನು ಜಾರಿಯಲ್ಲಿ ತರಬೇಕಾದ ಅವಶ್ಯಕತೆ ಏನೂ ಕಾಣಬರುವದಿಲ್ಲ, ಈ ಕಾರಣಗಳಿಂದ ಡೆಪ್ಯುಟಿ ಕಮಿಷನರವರ ಹುಕುಮಿನಲ್ಲಿ ಪ್ರವೇಶಿಸುವದಿಲ್ಲವೆಂದು ಅಪ್ಪಣೆ ಮಾಡಿದರು.

ಗೌರ್ನಮೆಂಟಿನವರ ತೀರ್ಮಾನ.—ಡೆಪ್ಯುಟಿ ಕಮಿಷನರವರು ಮತ್ತು ರೆವಿನ್ಯೂ ಕಮಿಷನರವರೂ ಕೂಡ ಎರಡು ಗ್ರಾಮಗಳೂ ಒಂದೇ ಪಟೇಲಿ ಛಾರ್ಜೆಂಬ ಊಹೆಯಮೇಲೆ ವಿಚಾರಣೆ ನಡೆಸಿರುತ್ತಾರೆ. ಅಪೀಲು ಗೌರ್ನಮೆಂಟಿನಲ್ಲಿ ದಾಖಲಾದ ನಂತರ ಇವು ಎರಡು ಛಾರ್ಜುಗಳೆಂದು ರೆವಿನ್ಯೂ ಕಮಿಷನರವರು ರಿಪೋರ್ಟು ಮಾಡಿರುತ್ತಾರೆ. ವಾದಿಗಳ ಪೈಕಿ ಒಬ್ಬನಾದ ಲಂಕೆಗೌಡನು ಬಾಲಘಟ್ಟಕ್ಕೂ ಪ್ರತಿವಾದಿಯು ಕೊಡಗಹಳ್ಳಿಗೂ ಪಟೇಲರಾಗಿರಬೇಕೆಂದು ಕಕ್ಷಿಗಾರರಲ್ಲಿ ಒಂದು ಒಪ್ಪಂದಮಾಡಿಕೊಂಡಿದ್ದರೆಂಬುವದು ರಿಕಾರ್ಡಿನಿಂದ ಗೊತ್ತಾಗುತ್ತೆ. ಅಪೀಲು ಪ್ರತಿವಾದಿಯು ೯೦೬ನೆ ಮಾರ್ಚಿಯಲ್ಲಿ ಫ್ರೆಂಚ್‌ರಾಕ್ಸ್ ಅಸಿಸ್ಟೆಂಟು ಕಮಿಷನರವರ ಸಮಕ್ಷಮ ಕೊಟ್ಟ ಹೇಳಿಕೆಯಲ್ಲಿ ಈ ಏರ್ಪಾಟನ್ನು ಒಪ್ಪಿಕೊಂಡು ಸದರಿಯಂತೆ ಜಾರಿಯಲ್ಲಿ ತರಬೇಕೆಂದು ಕೇಳಿಕೊಂಡಿರುತ್ತಾನೆ. ಈ ಏರ್ಪಾಟನ್ನೆ ಅನುಸರಿಸುವದು ನ್ಯಾಯವೆಂದು ಗೌರ್ನಮೆಂಟಿನವರು ಅಭಿಪ್ರಾಯ ಪಡುತ್ತಾರೆ. ಇಬ್ಬರು ವಾದಿಗಳಲ್ಲಿ ಚಿಕ್ಕಲಂಕೆಗೌಡನಿಗೆ ಬರಾವರ್ದು ಆಗುವ ಭಾಗದಲ್ಲಿ ಕರೀಗೌಡನು ಒಪ್ಪಿರುತ್ತಾನಾದಕಾರಣ ಬಾಲಘಟ್ಟವನ್ನು ಚಿಕ್ಕಲಂಕೆಗೌಡನ ಹೆಸರಿನಲ್ಲೂ ಕೊಡಗಹಳ್ಳಿಯನ್ನು ಪ್ರತಿವಾದಿ ಹನುಮೇಗೌಡನ ಹೆಸರಿನಲ್ಲೂ ರಿಜಿಸ್ಟರು ಮಾಡತಕ್ಕದ್ದು.

ಎರಡು ಗ್ರಾಮಗಳೂ ಎರಡು ಪ್ರತ್ಯೇಕ ಛಾರ್ಜುಗಳೆಂಬ ಅಂಶವು ಡೆಪ್ಯೂಟಿ ಕಮಿಷನರವರ ಮುಂದೆ ಚರ್ಚಿಸಲ್ಪಡಲಿಲ್ಲವೆಂದು ಪ್ರತಿವಾದಿಯು ಆಕ್ಷೇಪಿಸುತ್ತಾನೆ. ಆದರೆ ಎರಡು ಪಟೇಲೀ ಛಾರ್ಜುಗಳನ್ನು ಒಬ್ಬನಿಗೆ ಕೊಡುವುದು ಸಾಧ್ಯವಲ್ಲವಾದ್ದರಿಂದ, ಈ ಆಕ್ಷೇಪಣೆಗೆ ಗಮನ ಕೊಡಬೇಕಾದ್ದಿಲ್ಲ. ಹಾಗೆಯೇ ಕರೀಗೌಡನು ರೆವಿನ್ಯೂ ಕಮಿಷನರವರಲ್ಲಿ ಅಪೀಲು ಮಾಡಿಕೊಳ್ಳಲಿಲ್ಲವೆಂಬ ಪ್ರತಿವಾದಿಯ ಮತ್ತೊಂದು ಆಕ್ಷೇಪಣೆಯನ್ನೂ ತಿರಸ್ಕರಿಸಿರುತ್ತೆ.

Gall-stones and their uses.

ಗೋರೋಜನ ಮತ್ತು ಅದರ ಪ್ರಯೋಜನ.

ಪಿತ್ಥ ಜನಕಾಂಗವು (ಕಾಲಕಂಡ) ಪ್ರಾಣಿಗಳ ಶರೀರದಲ್ಲಿ ಒಂದು ದೊಡ್ಡ ಶೋಧಕ ಯಂತ್ರವಾಗಿಧೆ. ಇದು ಕಿಬ್ಬೊಟ್ಟೆಯಲ್ಲಿ ಅನ್ನಕೋಶದ ಬಲಭಾಗದಲ್ಲಿಧೆ. ಈ ಕಾಲಕಂಡದಲ್ಲಿ ಪಿತ್ಥವು ಸದಾ ಕಾಲದಲ್ಲಿಯೂ ಉತ್ಪತ್ತಿಯಾಗುತ್ತಲೇ ಇರುವದು. ಆಹಾರವು ಹೊಟ್ಟೆಯಿಂದ (ಜಠರ) ಸಣ್ಣ ಕರುಳುಗಳಿಗೆ ಬಂದು ಸೇರುವಾಗ ಪಿತ್ಥರಸವು ಕಾಲಕಂಡದಿಂದ ಬಂದು ದೊಡ್ಡ ನಾಳದ ಮಾರ್ಗವಾಗಿ ಹರಿದುಬಂದು ಆಹಾರದೊಡನೆ ಸೇರುತ್ತದೆ. ಕರುಳಿನಲ್ಲಿ ಆಹಾರವಿಲ್ಲದಿದ್ದರೆ ಉತ್ಪತ್ತಿಯಾದ ಪಿತ್ಥವು ಪಿತ್ಥಕೋಶದಲ್ಲಿ ಸೇರಿರುತ್ತೆ. ಪ್ರಾಣಿಗಳು ಜೀವಿಸಿರುವಾಗ ಪಿತ್ಥರಸವು ಆಹಾರದಲ್ಲಿರುವ ಮೇಧೋಭಾಗ (ಜಿಡ್ಡು ಪದಾರ್ಥ) ವನ್ನು ಕರಗಿಸಿ ಅತಿ ಸೂಕ್ಷ್ಮವಾಗಿ ಮಾಡಿ ಶರೀರಕ್ಕೆ ಸೇರುವಂತೆ ಮಾಡುತ್ತದೆ. ಅಲ್ಲದೆ ಕರುಳಿನಲ್ಲಿರುವ ಆಹಾರವು ಕೊಳಿಯದಂತೆ ಕಾಪಾಡುತ್ತದೆ. ಮತ್ತು ಮಲವಿಸರ್ಜನೆಗೆ ಬಹಳ ಸಹಕಾರಿಯಾಗಿಯೂ ಇರುತ್ತದೆ.

ದನಕರುಗಳ ಪಿತ್ಥಕೋಶದಲ್ಲಿ ಸಿಕ್ಕುವ ಪಿತ್ಥರಸವನ್ನು ನಾವು ಶುದ್ಧಮಾಡಿ ಅನೇಕವೇಳೆಗಳಲ್ಲಿ ಮಕ್ಕಳಿಗೆ ಅಜೀರ್ಣಸಂಬಂಧವಾದ ರೋಗಗಳಲ್ಲಿ ಉಪಯೋಗಿಸುತ್ತೇವೆ. ಇದಕ್ಕೆ ಗೋರೋಜನವೆಂದು ಹೆಸರು. ಅಲ್ಲದೆ ಈ ಪದಾರ್ಥದ ಇತರ ಉಪಯೋಗಗಳು ಅನೇಕರಿಗೆ ನಮ್ಮ ದೇಶದಲ್ಲಿ ಗೊತ್ತಾಗಿರಲಾರದು. ಪಿತ್ಥವು ಸಾಮಾನ್ಯವಾಗಿ ಹಳದಿಬಣ್ಣ ಉಳ್ಳ

ದ್ದಾಗಿಯೂ ಕಹಿಯಾಗಿಯೂ ಮತ್ತು ಕ್ಷಾರ (Alkaline) ಸ್ವಭಾವವುಳ್ಳ ರಸವಾಗಿದೆ. ಕೆಲವು ವೇಳೆಗಳಲ್ಲಿ ಪಿತ್ಥವು ಕಲ್ಲಿನಂತೆ ಗಟ್ಟಿಯಾದ ಸ್ಥಿತಿಯಲ್ಲಿ ಪಿತ್ಥನಾಳಗಳಲ್ಲಿಯೂ ಮತ್ತು ಪಿತ್ಥಕೋಶದಲ್ಲಿಯೂ ಸಿಕ್ಕುತ್ತದೆ. ಹೀಗೆ ಗಟ್ಟಿಯಾಗಿ ಸಿಕ್ಕುವ ಪಿತ್ಥರಸವನ್ನು ಅಮೇರಿಕಾಖಂಡಕ್ಕೆ ಸೇರಿದ ಚಿಕಾಗೋಪಟ್ಟಣದವರು ಕಟುಗರಿಂದ ತೆಗೆದುಕೊಂಡು ಶುದ್ಧಿಮಾಡಿ ಜರ್ಮನ್ ಮುಂತಾದ ದೇಶಗಳಿಗೆ ರಫ್ತು ಮಾಡುತ್ತಾರೆ. ಅದರ ಬೆಲೆಯು ಪೌಂಡು ಒಂದಕ್ಕೆ ೩೦ರಿಂದ ೫೦ ರೂಪಾಯಿವರೆಗೂ ಆಗುತ್ತದೆ. ಅದನ್ನು ರೇಷ್ಮೆ ಮುಂತಾದವುಗಳಿಗೆ ಬಣ್ಣ ಹಾಕುವದಕ್ಕೂ ಇನ್ನು ಇತರ ಕೈಗಾರಿಕೆ ಕೆಲಸಗಳಲ್ಲಿಯೂ ಬಹಳವಾಗಿ ಉಪಯೋಗಿಸುತ್ತಾರೆ. ನಮ್ಮ ದೇಶದಲ್ಲಿಯೂ ದನಕರುಗಳ ಮಾಂಸವನ್ನು ಅನೇಕರು ಆಹಾರವಾಗಿ ಉಪಯೋಗಿಸುತ್ತಾರೆ. ಕಟುಕರು ಅವುಗಳ ಮಾಂಸಖಂಡಗಳನ್ನು ಮತ್ತು ಇತರ ಕೆಲವು ಭಾಗವನ್ನು ತೆಗೆದುಕೊಂಡು ಪಿತ್ಥಕೋಶ ಮುಂತಾದವನ್ನು ನಿಷ್ಪ್ರಯೋಜನವೆಂದು ಬಿಸಾಡುತ್ತಾರೆ. ಅಂಥವರು ಗಟ್ಟಿಯಾಗಿ ಸಿಕ್ಕುವ ಪಿತ್ಥರಸವನ್ನು ಶುದ್ಧಿಮಾಡಿ ಕೂಡಿಟ್ಟರೆ ಬಹಳ ಪ್ರಯೋಜನ ಉಂಟು.

Occasional Notes.
ವಿವಿಧ ವೃತ್ತಾಂತಗಳು.

೧. ಕಳೆದ ತಿಂಗಳಲ್ಲಿ ತುಂಕೂರು ಡಿಸ್ಟ್ರಿಕ್ಟು ಮದ್ದಗಿರಿ ಟವರ್ನಲ್ಲಿ ಒಂದು ಕೋ ಆಪರೇಟಿವ್ ಸೊಸೈಟಿಯು ಮತ್ತು ಎಳಂದೂರು ಜಹಗೀರ್ ತಾಲ್ಲೂಕು ಕಸಬಾದಲ್ಲಿ ಅಲ್ಲಿಯ ಮುಸಲ್ಮಾನ್ ಜನಗಳಿಗೆ ಒಂದು ಕೋ ಆಪರೇಟಿವ್ ಸೊಸೈಟಿಯು ಇವೆರಡೂ ರಿಜಸ್ಟರು ಮಾಡಲ್ಪಟ್ಟವು.

೨. ಈ ಮಾಹೆ ೨೦ರಲ್ಲಿ ಕಲ್ಕತ್ತ ಪಟ್ಟಣದಲ್ಲಿ ಆಗುವ ಕೋ ಆಪರೇಟಿವ್ ಸೊಸೈಟಿಗಳ ರಿಜಸ್ಟ್ರಾರುಗಳ ಸಭೆಗೆ ಮೈಸೂರು ಗೌರ್ನಮೆಂಟಿನವರು ಮೈಸೂರು ದೇಶದ ಕೋ ಆಪರೇಟಿವ್ ಸೊಸೈಟಿಗಳ ರಿಜಸ್ಟ್ರಾರವರನ್ನು ದಯಮಾಡಿಸುವಂತೆ ಅಪ್ಪಣೆ ಮಾಡಿರುತ್ತಾರೆ.

V. B. Soobbiah & Sons, Printers, Bangalore.—1909.

THE MYSORE
REVENUE & AGRICULTURAL GAZETTE.

ವಾಲ್ಯುಂ ೪.] ಬುಧವಾರ, ೧ನೇ ಡಿಸೆಂಬರ್ ೧೯೦೯. [ನಂ. ೩.

Contents.

1. Indian Sugar Industry.
2. Extracts from the Dewan's Dasara Address, 1909.
3. Hints to Cattle Owners.
4. Poultry Industry.
5. Revenue Appeals.
6. Notifications.
7. Occasional Notes.
   (i) Soy Beans. (ii) Cattle-dung as Manure. (iii) Palms. (iv) Wild Nutmug.

ಅನುಕ್ರಮಣಿಕೆ.

೧. ಇಂಡಿಯಾ ದೇಶದ ಸಕ್ಕರೆಯ ತಯಾರಿ.

೨. ಚಾಲ್ತಿಸಾಲ್ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನರವರು ಮಾಡಿದ ಉಪನ್ಯಾಸ.

೩. ದನಗಳನ್ನು ಸಾಕುವವರಿಗೆ ಉಪಯುಕ್ತವಾದ ವಿಷಯಗಳು.

೪. ಕೋಳಿ, ಬಾತು, ಮೊದಲಾದ ಪಕ್ಷಿಗಳ ಸಾಕಾಣಿಕೆ.

೫. ರೆವಿನ್ಯೂ ಅಪೀಲುಗಳು.

೬. ಇಸ್ತಿಹಾರ್‌ನಾಮೆಗಳು.

೭. ವಿವಿಧ ವೃತ್ತಾಂತಗಳು.
   (i) ಸೋಯಾ ಅವರೆ. (ii) ದನದ ಸಗಣಿ ಗೊಬ್ಬರ. (iii) ತೆಂಗು ಜಾತಿಯ ಮರಗಳು. (iv) ಕಾಡು ಜಾಜಿಕಾಯಿ.

Indian Sugar Industry.*

ಇಂಡಿಯಾದೇಶದ ಸಕ್ಕರೆಯ ತಯಾರಿ.

ಪ್ರಪಂಚದಲ್ಲೆಲ್ಲಾ ಇಂಡಿಯಾದೇಶದಲ್ಲೇ ಸಕ್ಕರೆಯು ವಿಶೇಷ ತೆ

* ಇಂಡಿಯನ್ ಅಗ್ರಿಕಲ್ಚರಿಸ್ಟ್, ೨—೮—೦೯.

ಯಾರು ಆದರೂ ಕೂಡ ಇಲ್ಲಿಗೆ ಅನ್ಯದೇಶಗಳಿಂದ ಸಕ್ಕರೆಯನ್ನು ಆಮದುಮಾಡುವದು ಮಾತ್ರ ದಿನೇ ದಿನೇ ಹೆಚ್ಚುತ್ತಲೇ ಇದೆ. ೧೯೦೪-೦೫ರಲ್ಲಿ ಸುಮಾರು $6\frac{3}{4}$ ಕೋಟಿ ರೂಪಾಯಿನ ಸಕ್ಕರೆಯು (ಕಾಕಂಬಿ ಮತ್ತು ತಯಾರಿಸಿದ ಸಿಹಿ ಪದಾರ್ಥಗಳು ವಿನಹ) ಅನ್ಯದೇಶದಿಂದ ಬಂದು ಮುಂದೆ ಮೂರು ವರ್ಷಗಳಲ್ಲಿ ಅಂದರೆ ೧೯೦೮—೦೯ರಲ್ಲಿ ಈ ಆಮದು ವ್ಯಾಪಾರವು ಸ್ವಲ್ಪ ಹೆಚ್ಚು ಕಡಿಮೆ $10\frac{1}{2}$ ಕೋಟಿ ರೂಪಾಯಿಗೆ ಏರಿರುತ್ತದೆ. ನಮ್ಮ ದೇಶಕ್ಕೆ ಬಹಳವಾಗಿ ಜಾವಾದ್ವೀಪಗಳಿಂದಲೇ ಸಕ್ಕರೆಯು ಬರುವದು. ಜಾವಾದ್ವೀಪದ ಸಕ್ಕರೆಯು ೧೯೦೪-೦೫ರಲ್ಲಿ ಸುಮಾರು ೧ ಕೋಟಿ ೨ ಲಕ್ಷ ಮಣವೂ, ೧೯೦೮-೦೯ರಲ್ಲಿ ಸುಮಾರು $2\frac{1}{2}$ ಕೋಟಿ ಮಣವೂ ಈ ದೇಶಕ್ಕೆ ಆಮದು ಆಗಿರುತ್ತೆ. ಅಲ್ಲಿ ಕಬ್ಬನ್ನು ಬೆಳೆಯುವ ಜಮೀನುದಾರರು ತಮಗೆ ಬಂದ ಲಾಭವನ್ನು ಬಹಳವಾಗಿ ಸಕ್ಕರೆ ತಯಾರಿ ಕ್ರಮಗಳನ್ನು ಉತ್ತಮಪಡಿಸುವದಕ್ಕೇನೆ ವಿನಿಯೋಗಿಸುತ್ತಾರಲ್ಲದೆ, ಸರಕನ್ನು ಸ್ಥಳದಿಂದ ಸ್ಥಳಕ್ಕೆ ಸಾಗಿಸಲು ಹೆಚ್ಚು ಅನುಕೂಲತೆಗಳನ್ನು ಮಾಡಿಕೊಳ್ಳುವದಕ್ಕೂ ಮತ್ತು ಹೊಸ ಹೊಸ ಯಂತ್ರಗಳನ್ನು ತರಿಸುವದಕ್ಕೂ ಪ್ರಯತ್ನಪಡುತ್ತಿದ್ದಾರೆ. ಇದರಿಂದ ಅಲ್ಲಿ ಸಕ್ಕರೆ ತಯಾರುಮಾಡುವ ಲಾಗವಡು ಕಮ್ಮಿ ಆಗಲೇಬೇಕು. ಹೀಗಾದಲ್ಲಿ ಅಲ್ಲಿನ ಸಕ್ಕರೆಯು ನಮ್ಮ ದೇಶದಲ್ಲಿ ಅಗ್ಗವಾದ ಖರೀದಿಗೆ ಮಾರಾಟವಾಗಲು ಅವಕಾಶವುಂಟಾಗಿ ನಮ್ಮ ಸ್ಥಳೀಯ ಸಕ್ಕರೆಯು ಅದರೊಂದಿಗೆ ಪ್ರೊಟಾಪ್ರೋಟಿಯಲ್ಲಿ ನಿಲ್ಲುವದೇ ಕಷ್ಟವಾಗುತ್ತದೆ.

ನಮ್ಮ ದೇಶದಲ್ಲಾದರೊ ಸಕ್ಕರೆಯ ಖರ್ಚು ದಿನೇ ದಿನೇ ಒಂದೇ ರೀತಿಯಾಗಿ ಹೆಚ್ಚುತ್ತಲೇ ಇದೆ. ಆದರೂ ಕೂಡ ಹೀಗೆ ಹೆಚ್ಚುತ್ತಿರುವ ಗಿರಾಕಿಗೆ ತಕ್ಕಷ್ಟು ಸಕ್ಕರೆಯನ್ನು ಇಲ್ಲಿಯೇ ಒದಗಿಸಿಕೊಳ್ಳುವದಕ್ಕೆ ಬದಲಾಗಿ ಅನ್ಯದೇಶಗಳಿಂದ ತರಿಸಿಕೊಳ್ಳುತ್ತಿದ್ದಾರೆ. ಇಲ್ಲಿ ಹಾಲಿ ರೂಢಿಯಲ್ಲಿರುವ ಸಕ್ಕರೆ ತಯಾರು ಕ್ರಮಗಳನ್ನು ಉತ್ತಮಪಡಿಸಲು ಪ್ರಯತ್ನಗಳೇನೋ ನಡೆಯುತ್ತಲಿವೆ. ಆದರೆ ಅನ್ಯದೇಶಗಳಲ್ಲಿರುವಂತೆ ಮಧ್ಯರಾಷ್ಟ್ರವಾಗಿ ಒಂದು ಸಕ್ಕರೆ ತಯಾರಿ ಕಾರ್ಖಾನೆಯನ್ನು ಸ್ಥಾಪಿಸುವ ಏರ್ಪಾಟು ಮಾತ್ರ ಇಲ್ಲಿ ಇನ್ನೂ ಆಚರಣೆಯಲ್ಲಿ ಬಂದಿಲ್ಲ. ಇಂಥಾ ಕಾರ್ಖಾ

ವೆಗಳನ್ನು ಕಬ್ಬು ವಿಶೇಷವಾಗಿ ಬೆಳೆಯುವ ಪ್ರಾಂತ್ಯಗಳಲ್ಲಿ ಏರ್ಪಡಿಸಿ ಸುತ್ತಮುತ್ತಲೂ ಆಗುವ ಕಬ್ಬನ್ನು ಸ್ಥಳದಲ್ಲಿಯೇ ಸಕ್ಕರೆ ಮಾಡುವದಕ್ಕೆ ಉಪಯೋಗಿಸುವದರಲ್ಲಿ ಪದಾರ್ಥ ನಷ್ಟವಾಗುವದು ಕಮ್ಮಿ; ಕೆಲಸವು ಜಾಗ್ರತೆಯಾಗಿಯೂ ಸಮರ್ಪಕವಾಗಿಯೂ ನಡೆಯುತ್ತದೆ. ಈ ಶ್ರೇಷ್ಠವಾದ ಏರ್ಪಾಟಿನಿಂದಲೇ ಜವಾನೀಯರು ಮಾರೀಸಾ ದ್ವೀಪಗಳಲ್ಲಿ ಕ್ಷೀಣದೆಶೆಯಲ್ಲಿದ್ದ ಸಕ್ಕರೆ ತಯಾರಿ ಕಸಬನ್ನು ಪುನಃ ಅಭಿವೃದ್ಧಿಪಡಿಸಿರುತ್ತಾರೆ. ಆದಕಾರಣ ನಮ್ಮ ದೇಶೀಯರೂ ಕೂಡ ಈ ಸರ್ವ ಶ್ರೇಷ್ಠವಾದ ಏರ್ಪಾಟನ್ನು ಆಚರಣೆಯಲ್ಲಿ ತಂದು ತನ್ಮೂಲಕ ಸ್ಥಳೀಯ ಸಕ್ಕರೆಯ ಉತ್ಪತ್ತಿಯನ್ನು ಹೆಚ್ಚಿಸಿದರೆ ನಮ್ಮ ಸನಗನ್ನು ಅನ್ಯ ದೇಶೀಯ ಸನಗಿನ ಬೆಲೆಗೇನೇ ಮಾರಲು ಸಾಧ್ಯವಾಗಿ ಹೊರಗಿನ ಸಕ್ಕರೆಯು ನಮ್ಮ ದೇಶಕ್ಕೆ ಬರುವದು ಕಡಿಮೆಯಾಗುವದು.

ಆದರೆ ಈ ವಿಷಯದಲ್ಲಿ ನಮ್ಮ ದೇಶೀಯರು ಕೂಡ್ಲೆ ಧೈರ್ಯದಿಂದಲೂ ಸಾಹಸದಿಂದಲೂ ಪ್ರಯತ್ನಪಡಬೇಕು. ಈ ಕಾರ್ಯವು ಸಿದ್ಧಿಯಾಗುವದು ಅಸಾಧ್ಯವೆಂದೆಣಿಸುವದಕ್ಕೆ ಪ್ರಮಾದವಾದ ತೊಂದರೆಗಳೇನೂ ಕಾಣಬರುವದಿಲ್ಲ. ಭೂಗುಣದಲ್ಲೇ ಆಗಲಿ ಕೂಲಿಯವರು ಅಗ್ಗವಾಗಿ ಸಿಕ್ಕುವದರಲ್ಲೇ ಆಗಲಿ ಅಥವಾ ಮತ್ತಾವ ಭಾಗದಲ್ಲೇ ಆಗಲಿ ನಮ್ಮ ದೇಶಕ್ಕಿಂತಲೂ ಜಾವಾದ್ವೀಪದವರಿಗೆ ಅಧಿಕವಾದ ಸೌಕರ್ಯಗಳೇನೂ ಇರುವದಿಲ್ಲವಾದಕಾರಣ ನಮ್ಮ ಜನರಲ್ಲಿ ಸಾಹಸ ಮತ್ತು ಯುಕ್ತಾನುಸಾರ ಶಾಸ್ತ್ರಪರಿಚಯದ ಉಪಯೋಗ ಇವೆರಡು ಮಾತ್ರ ಇದ್ದರೆ, ಈ ದೇಶೀಯರು ಒಂದುವೇಳೆ ಅನ್ಯ ದೇಶಗಳೊಂದಿಗೆ ರಫ್ತುವ್ಯಾಪಾರಮಾಡುವಷ್ಟು ಸಕ್ಕರೆಯನ್ನು ತಯಾರುಮಾಡುವದಕ್ಕಾಗದಿದ್ದರೂ ಇಲ್ಲಿನ ಗಿರಾಕಿಗೆ ತಕ್ಕಷ್ಟಾದರೂ ತಯಾರುಮಾಡಬಹುದು.

Extracts from the Dewan's Dasara Address, 09.

ಚಾಲ್ತಿಸಾಲ್ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್‌ರವರು ಮಾಡಿದ ಉಪನ್ಯಾಸ.

ಕ್ಷಾಮನಿವಾರಣೆಗಾಗಿ ಮಾಡಿದ ನಾನಾತರಹೆಯ ಏರ್ಪಾಟುಗಳನ್ನು

ಕ್ಷಾಮನಿವಾರಣೆಗಾಗಿ ಮಾಡಿದ ಸನ್ನಾಹಗಳು.

ಕುರಿತು ಮುಂದೆ ಸಂಕ್ಷೇಪವಾಗಿ ಪ್ರಸ್ತಾಪಿಸುತ್ತೇವೆ. ಈ ವರ್ಷದ ಶುರುವಿನಲ್ಲಿ ದುರ್ಭಿಕ್ಷವು ಹೆಚ್ಚಬಹುದೆಂದು ತೋರಿದ ಕೂಡಲೆ ರೆವಿನ್ಯೂ ಕಮಿಷನರವರೂ, ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರುಗಳೂ ತಮ ತಮಗೆ ಸಂಬಂಧಪಟ್ಟ ಎಲ್ಲಾ ಸ್ಥಳಗಳಲ್ಲಿಯೂ ಅನೇಕಾವರ್ತಿ ಸಂಚಾರಮಾಡಿ ಅಲ್ಲಿನ ನಿಜಸ್ಥಿತಿಯನ್ನು ಬಹಳ ಜಾಗರೂಕತೆಯಿಂದ ತಿಳಿದುಕೊಂಡು ಅವಶ್ಯಕವಾಗಿ ಕಂಡುಬಂದ ಏರ್ಪಾಡುಗಳನ್ನು ಸಮೂದಿಸಿ ಸರ್ಕಾರಕ್ಕೆ ಮುಂದಾಗಿಯೇ ತಿಳಿಸಿದರು. ದಿವಾನ್‌ರವರಾಗಿದ್ದ ಮೆ|| ಮಾಧವರಾಯರವರೂ ಕೂಡ ದುರ್ಭಿಕ್ಷ ಪ್ರಾಪ್ತವಾದ ಪ್ರದೇಶಗಳಿಗೆ ಅನೇಕಾವರ್ತಿ ಹೋಗಿ, ದುರ್ಭಿಕ್ಷ ನಿವಾರಣೆಯ ಬಗ್ಗೆ ಏರ್ಪಾಡುಗಳನ್ನು ಮಾಡಲು ಮೊಕರರಾಗಿದ್ದ ಹುದ್ದೇದಾರರಿಂದ ಖುದ್ದಾಗಿ ಎಲ್ಲಾ ಸಂಗತಿಗಳನ್ನೂ ತಿಳಿಯುತ್ತಿದ್ದರು. ಮುಖ್ಯವಾಗಿ ಪ್ರಜಾಕ್ಷೇಮಚಿಂತನೆಯಲ್ಲಿ ಯಾವಾಗಲೂ ಆಸಕ್ತರಾಗಿರುವ ನಮ್ಮ ಶ್ರೀಮನ್ ಮಹಾರಾಜಾ ಸಾಹೇಬ್ ಬಹದ್ದೂರ್‌ರವರು ಜರ್ಮನ್ ದೇಶಕ್ಕೆ ದಯಮಾಡಿಸಬೇಕೆಂದು ಬಹುಕಾಲದಿಂದ ಅಪೇಕ್ಷೆಯುಳ್ಳವರಾಗಿದ್ದು, ಕಾಲಸ್ಥಿತಿಯು ಇಷ್ಟು ಮಟ್ಟಿಗೆ ಬರುವುದಕ್ಕೆ ಮುಂಚೆ, ಅಲ್ಲಿಗೆ ಶ್ರೀಮನ್ ಯುವರಾಜರೊಡನೆ ಪ್ರಯಾಣ ಬೆಳೆಸುವುದಾಗಿ ನಿಶ್ಚಯಿಸಿದ್ದುದನ್ನೂ ಸಹಾ ಕಡೆಗೆ ಮಾನಸಿಕ ಮಾಡಿ ದುರ್ಭಿಕ್ಷ ಪ್ರಾಪ್ತವಾದ ಸ್ಥಳಗಳಿಗೆ ಸವಾರಿ ಚಿತ್ತೈಸಿದರು. ಆಗಾಗ್ಯೆ ಆಯಾ ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರುಗಳನ್ನೂ ಇಲಾಖಾ ಮೊಖ್ತೇಸರರನ್ನೂ ಸಭೆ ಸೇರಿಸಿ ಅವರೊಡನೆ ಈ ವಿಷಯಗಳನ್ನು ಆಲೋಚಿಸಿ ಮುಂದೆ ಸೂಚಿಸುವ ಕ್ಷಾಮನಿವಾರಣೆಯ ಏರ್ಪಾಡುಗಳನ್ನು ಜಾರಿಗೆ ತರಲಾಯಿತು.

ಕ್ಷಾಮನಿವಾರಣೆಯ ಏರ್ಪಾಡುಗಳು.

ಜಿನಸಿಗಳ ಧಾರಣೆಯು ಜಾಸ್ತಿಯಾದ್ದರಿಂದ ಸರಕಾರದ ಸಣ್ಣ ನೌಕರರಿಗೆ ಹೆಚ್ಚು ವೇತನಗಳನ್ನು ಮಂಜೂರ್ಮಾಡಿ, ವೃದ್ಧರಿಗೂ ಅಶಕ್ತರಿಗೂ ಉಚಿತಧರ್ಮಸಹಾಯವನ್ನು ಕೊಟ್ಟು ಕಾಪಾಡುವುದಕ್ಕೆ ತಕ್ಕ ಏರ್ಪಾಡುಗಳನ್ನು ಮಾಡಿದ್ದಾಯಿತು.

ದುರ್ಭಿಕ್ಷದ ಚಿಹ್ನೆಗಳು ತಲೆದೋರುತ್ತಲೇ ಸ್ಥಳದಲ್ಲೇ ಜಾಸ್ತಿ ಯಾಗಿ ಧಾನ್ಯಗಳನ್ನು ಒದಗಿಸುವುದಕ್ಕೋಸ್ಕರ ಕೆರೆಯ ಅಂಗಳದ ಜಮೀನುಗಳನ್ನು ಅನುಕೂಲವಾದ ಷರತ್ತುಗಳಮೇಲೆ ಸಾಗುವಳಿಗೆ ಕೊಡಲಾಯಿತು.

ಸಿಹಿನೀರಿನ ಬಾವಿಗಳನ್ನು ಕಟ್ಟುವುದಕ್ಕೂ ಮತ್ತು ಸರ್ವಜನೋಪಯುಕ್ತವಾದ ಇತರ ಕೆಲಸಗಳಿಗೂ ಸುಮಾರು ಒಂದು ಲಕ್ಷ ರೂಪಾಯಿಯನ್ನೂ, ಸಣ್ಣಕೆರೆಗಳಿಗೆ ಕಲ್ಲು ಮತ್ತು ಗಚ್ಚಿನ ಕೆಲಸಕ್ಕಾಗಿ ಒಂದು ಲಕ್ಷ ರೂಪಾಯಿಯನ್ನೂ ಖರ್ಚು ಮಾಡಿದ್ದಾಯಿತು. ಇಲಾಖಾ ಕಾಮಗಾರಿಗಳನ್ನು ನಡೆಸುವಲ್ಲಿ ಕೆಲಸಗಳು ಒಂದು ವೇಳೆ ಪೂರೈಸುವುದಕ್ಕೆ ತಡವಾದರೂ ಸಾಧ್ಯವಾದ ಮಟ್ಟಿಗೂ ಆಯಾ ಸ್ಥಳದ ಜನಗಳನ್ನೇ ಕೆಲಸಕ್ಕೆ ನೇಮಿಸಿಕೊಳ್ಳಬೇಕೆಂದು ಮರಾಮತ್ತ್ ಇಲಾಖೆಯವರಿಗೆ ಹುಕುಂ ಕೊಟ್ಟಿತು. ಅನೇಕ ಅಮೃತ ಮಹಲ್ ಕಾವಲುಗಳಲ್ಲಿಯೂ ಮನ್ನಾ ಜಂಗಲಿಗಳಲ್ಲಿಯೂ ದನಗಳನ್ನು ಉಚಿತವಾಗಿ ಮೇಯಿಸುವುದಕ್ಕೆ ಅಪ್ಪಣೆ ಕೊಟ್ಟದ್ದಲ್ಲದೆ, ಅಲ್ಲಿ ದನಗಳಿಗೂ ಅವುಗಳ ಮಾಲೀಕರಿಗೂ ನೀರು ಮುಂತಾದ ಅನುಕೂಲಗಳನ್ನು ಒದಗಿಸುವುದಕ್ಕೆ ತಕ್ಕ ಏರ್ಪಾಟುಗಳನ್ನು ನಡೆಸಿತು. ಜಂಗಲಿ ಹುಲ್ಲನ್ನು ಕೊಯಿದು ಅದನ್ನು ಅನುಕೂಲವಾದ ಸ್ಥಳಗಳಲ್ಲಿ ದಾಸ್ತಾನ್ ಮಾಡಿಟ್ಟು ಬೇಕಾದ ಸ್ಥಳಗಳಿಗೆ ಕಳುಹಿಸುವಹಾಗೆ ಫಾರೆಸ್ಟ್ ಇಲಾಖೆಗೆ ಹುಕುಂ ಕೊಡಲಾಯಿತು. ದನಗಳ ಮೇವಿಗಾಗಿ ಸರ್ಕಾರಿ ಬಂಜರು ಜಮೀನುಗಳಿಂದ ಈಚಲುಗರಿಗಳನ್ನು ಕೊಯಿದು ಉಪಯೋಗಿಸುವಂತೆ ರೈತರಿಗೆ ಅಪ್ಪಣೆ ಕೊಟ್ಟಿತು. ದುರ್ಭಿಕ್ಷಪ್ರಾಪ್ತವಾದ ಸ್ಥಳಗಳಿಗೆ ಮೇವನ್ನು ಸಾಗಿಸುವುದಕ್ಕಾಗಿ ರೈಲ್‌ಛಾರ್ಜನ್ನು ಕಮ್ಮಿಮಾಡುವಬಗ್ಗೆ ಮದರಾಸು ಮತ್ತು ದಕ್ಷಿಣ ಮಹಾರಾಷ್ಟ್ರರೈಲ್ವೆ ಅಧಿಕಾರಿಗಳೊಡನೆ ಏರ್ಪಾಟುಮಾಡಲಾಯಿತು. ತಕಾವಿಬಗ್ಗೆ, ಜಮೀನ್ ಆಬಾದಿಗಾಗಿಯೂ ದುರಸ್ತಾದ ಮತ್ತು ದುರಸ್ತಾಗದ ಕೆರೆಗಳ ಮಟ್ಟೀ ಕಾಮಗಾರಿಗಾಗಿಯೂ ಸಾಲ ಕೊಡುವ ಉದ್ದಿಶ್ಯ ವಿಶೇಷವಾಗಿ ಸರಕಾರದಿಂದ ಹಣ ಮಂಜೂರ್‌ಮಾಡಲಾಯಿತು. ತಕಾವಿ ಬಾಬಿನಲ್ಲಿ, ಎತ್ತುಗಳು, ಮೇವು, ಬಿತ್ತನೆಯಕಾಳು ವಗೈರೆಗಳನ್ನು ಕೊಂಡುಕೊಳ್ಳುವುದಕ್ಕೋ

ಸ್ಕರವೂ ಮತ್ತು ಜೀವನಕ್ಕೋಸ್ಕರವೂ ಲ್ಯಾಂಡ್ ರೆವಿನ್ಯೂ ಕೋಡಿನ ೧೯೪ನೆ ಪ್ರಕರಣದ ಮೇರಿಗೆ ೧,೮೦,೦೦೦ ರೂಪಾಯಿಗಿಂತ ಜಾಸ್ತಿಯಾಗಿ ಸಾಲ ಕೊಟ್ಟಿತ್ತು. ಜನರಲ್ ಆಬಾದ್ ಕೆಲಸಗಳಿಗಾಗಿ ೨ ಲಕ್ಷ ರೂಪಾಯಿ ಸಾಲಕೊಡಲ್ಪಟ್ಟಿತು ; ಈ ಮೊಬಲಗಿನ ಪೈಕಿ ಬಹುಭಾಗವು ಸಾಗುವಳಿ ಕೆಲಸಕ್ಕೆ ಬಾವಿಗಳನ್ನು ಕಟ್ಟುವುದಕ್ಕೋಸ್ಕರ ಉಪಯೋಗಿಸಲ್ಪಟ್ಟಿತು. ಕೆರೆಗಳ ಮಟ್ಟೀ ಕಾಮಗಾರಿಗೂ, ದುರಸ್ತಿಗೂ ಸುಮಾರು ೬೦,೦೦೦ ರೂಪಾಯಿ ಸಾಲ ಕೊಡಲ್ಪಟ್ಟಿತು.

ದುರ್ಭಿಕ್ಷ ಪ್ರಾಪ್ತವಾದುದರಿಂದ ನೇಯಿಗೆಯವರು ತಮ್ಮ ಸರಕುಗಳಿಗೆ ಸರಿಯಾದ ಗಿರಾಕಿ ಇಲ್ಲದೆ ಬಹಳ ಕಷ್ಟಗಳಿಗೆ ಗುರಿಯಾದ್ದನ್ನು ನೋಡಿ, ಅವರು ತಯಾರ್ಮಾಡಿದ ಬಟ್ಟೆಗಳನ್ನು ಸರ್ಕಾರದವರು ಕೊಂಡುಕೊಳ್ಳುವುದಕ್ಕಾಗಿಯೂ, ನೂಲು ವಗೈರೆ ಕೊಳ್ಳುವ ಬಗ್ಗೆ ಅವರಿಗೆ ಸಾಲ ಕೊಡುವುದಕ್ಕಾಗಿಯೂ ಸುಮಾರು ೪೦,೦೦೦ ರೂಪಾಯಿಗಳನ್ನು ವಿನಿಯೋಗಿಸಿತು.

ಮಳೆ ಬಂದ ಕೂಡಲೆ ಬಿತ್ತನೆ ಮಾಡುವುದಕ್ಕಾಗಿ ಒಳ್ಳೇ ಬೀಜದ ರಾಗಿಯನ್ನು ಬಡ ರೈತರಿಗೆ ಅಸಲ್ ಖರೀದಿಗೆ ಸರಬರಾಯಿ ಮಾಡುವ ಉದ್ದಿಶ್ಯ ೪,೦೦೦ ರೂಪಾಯಿಗೆ ರಾಗಿಯನ್ನು ಕೊಂಡು ಜಮಾಯಿಸಿ ಇಡಲು ಏರ್ಪಾಟು ಮಾಡಲಾಯಿತು.

Hints to Cattle Owners. *

ದನಗಳನ್ನು ಸಾಕುವವರಿಗೆ ಉಪಯುಕ್ತವಾದ ವಿಷಯಗಳು.

ನಮ್ಮ ದೇಶದ ರೈತರು ತಮ್ಮ ಜಿರಾಯಿತು ಎತ್ತುಗಳು ಬಹಳ ಬಡವಾಗಿಯೂ ಮತ್ತು ಬಲಹೀನವಾಗಿಯೂ ಇರುತ್ತವೆಂದು ಅನೇಕವೇಳೆ ಹೇಳುತ್ತಾರೆ. ಆದರೆ ಮೇವು ಕೊಡುವದರಲ್ಲಿಯೂ, ಕೊಟ್ಟಿಗೆ ಕಟ್ಟುವದರಲ್ಲಿಯೂ ಮತ್ತು ಸಾಮಾನ್ಯವಾಗಿ ಪೋಷಣೆಮಾಡುವದರಲ್ಲಿಯೂ ಈಗಿನಗಿಂತಲೂ ಹೆಚ್ಚು ಮುತವರ್ಜಿ ಮಾಡಿದ್ದೇಆದರೆ, ದನಗಳನ್ನು ಅತಿ ಸುಲಭವಾಗಿ ಒಳ್ಳೇ ಸ್ಥಿತಿಗೆ ತಂದುಕೊಳ್ಳಬಹುದು. ಕೊಟ್ಟಿಗೆಗಳನ್ನು

* ಸೆಂಟ್ರಲ್ ಪ್ರಾವಿನ್ಸಸ್ ಅಗ್ರಿಕಲ್ಚರಲ್ ಗೆಜೆಟ್, ಅಕ್ಟೋಬರ್ ೧೯೧೯.

ಅನುಕೂಲವಾಗಿ ಕಟ್ಟಬೇಕಾದರೆ ದುಬಾರಿಯಾಗಿ ಖರ್ಚು ಇಡಬೇಕಾದ್ದೇ
ನೂ ಆವಶ್ಯಕವಿಲ್ಲ. ಈ ಕಟ್ಟಡಕ್ಕೆ ಸಾಗವಾನಮರ, ಇಟಿಕೆ ಗೋಡೆ
ಮತ್ತು ಹೆಂಚಿನ ಛಾವಣಿಗಳೇನೂ ಬೇಕಿಲ್ಲ. ಸಾಧಾರಣವಾದ ಕಾಡುಮ
ರ, ಮಣ್ಣಿನ ಗೋಡೆ ಮತ್ತು ಹುಲ್ಲು ಹೊದ್ದಿಕೆ ಇದ್ದರೆ ಸಾಕು. ಕೊ
ಟ್ಟಿಗೆಯು ನೆಲ ಸ್ವಲ್ಪ ಎತ್ತರವಾಗಿದ್ದರೆ ಕೆಸರು ಆಗುವದಿಲ್ಲ. ಒಳಗೆ ಗಾ
ಳಿಯಾಡುವಂತೆ ಛಾವಣಿಯು ಎತ್ತರವಾಗಿ ಇರಬೇಕು ಮತ್ತು ಮಳೆ ಬಿ
ದ್ದರೆ ಸೋರಕೂಡದು. ಮಳೆ ಇರಚಲು ಬಡಿಯುವ ಕಡೆಗಳಲ್ಲಿ ಮಾತ್ರ
ಗೋಡೆ ಹಾಕಿ ಮರೆಮಾಡಬೇಕು. ಗೋಡೆಗಳೂ ಮತ್ತು ನೆಲವೂ ಸುಲ
ಭವಾಗಿ ಚೊಕ್ಕಟಮಾಡುವದಕ್ಕೆ ಸಾಧ್ಯವಾಗುವಂತಿರಬೇಕು. ಮಣ್ಣಿನ
ಗೋಡೆಯಾದರೆ ಸುಲಭವಾಗಿ ಸುಣ್ಣ ಬಳಿಯುವದರಿಂದ ಚೊಕ್ಕಟವಾಗು
ತ್ತೆ. ನೆಲವನ್ನು ಶುದ್ಧವಾಗಿಟ್ಟುಕೊಳ್ಳಬೇಕಾದರೆ ಚೆನ್ನಾಗಿ ತುಳಿದ ಮ
ಣ್ಣನ್ನು ಹಾಕಿ ಗಡಸುಮಾಡಿದರೆ ಗಾರೆ ನೆಲದಂತೆ ಆಗುತ್ತೆ. ಇದರಮೇಲೆ
೩ ಅಂಗುಲ ಪುಡಿ ಮಣ್ಣನ್ನು ಹರಡಿ, ಈ ಮಣ್ಣನ್ನು ಒಂದುವಾರ ಅಥವಾ
೧೦ ದಿನಗಳಿಗೊಂದಾವರ್ತಿ ಗೊಬ್ಬರದ ಗುಂಡಿಗೆ ಸಾಗಿಸಿ ಪುನಃ ಹೊಸ
ಮಣ್ಣನ್ನು ಹರಡಬೇಕು. ಹೀಗೆ ಆಗಾಗ್ಗೆ ಕೊಟ್ಟಿಗೆಯಿಂದ ತೆಗೆದ ಮ
ಣ್ಣನ್ನು ಯಾವ ಪೈರಿಗಾದರೂ ಒಳ್ಳೆ ಗೊಬ್ಬರವಾಗಿ ಉಪಯೋಗಿಸಬ
ಹುದು.

Poultry Industry. *

ಕೋಳಿ, ಬಾತ್ರು, ಮೊದಲಾದ ಪಕ್ಷಿಗಳ ಸಾಕಾಣಿಕೆ.

ಈಸ್ಟರ್ನ್ ಬಂಗಾಳಾ ಪ್ರಾವಿನ್ಸಸ್‌ನಲ್ಲಿ ಸಾಧಾರಣವಾಗಿ ಮಹಮ್ಮ
ದ್ದೀಯರೆಲ್ಲಾ ಪ್ರಾಯಶಃ ತಮ್ಮ ಸ್ವಂತ ಉಪಯೋಗಕ್ಕಾಗಿ ಕೆಲವು
ಕೋಳಿಗಳನ್ನು ಸಾಕುತ್ತಾರೆ. ಸ್ವಲ್ಪ ಬಡವರಾಗಿರತಕ್ಕವರು ಕೋಳಿ
ಗಳನ್ನು ಸಾಕಿ ಮಾರುವದುಂಟು. ಹೋದ ವರುಷ ಚಿಟಗಾಂಗು ರೇವಿ
ನಿಂದ ಸುಮಾರು ನಾಲ್ಕು ಲಕ್ಷ ರೂಪಾಯಿಗಳ ಕೋಳಿ, ಬಾತು ಮತ್ತು
ಮೊಟ್ಟೆಗಳು, ಬರ್ಮಾ ರಾಜ್ಯಕ್ಕೆ ರಫ್ತಾದವು. ಈ ಕಸಬು ಮುಖ್ಯ

* ಈಸ್ಟರ್ನ್ ಬೆಂಗಾಲ್ ಮತ್ತು ಅಸ್ಸಾಂ ವ್ಯವಸಾಯಕ ಇಲಾಖೆಯ ಬುಲ್ಲೆ
ಟಿನ್ ನಂ. ೨೦.

ವಾಗಿ ನೊಯಾಲಿ ಡಿಸ್ಟ್ರಿಕ್ಟಿನಲ್ಲಿ ವಿಶೇಷ ಪ್ರಬಲವಾಗಿರುತ್ತದೆ. ಈ ಕಸಬನ್ನು ಯಾವ ರೀತಿ ಅಭಿವೃದ್ಧಿಪಡಿಸಿ, ಕೋಳಿವರ್ಗದ ತಳಿಗಳನ್ನು ಉತ್ತಮಪಡಿಸಬಹುದೆಂಬ ವಿಷಯವನ್ನು ಕುರಿತು ಸರ್ಕಾರದವರು ವಿಚಾರ ನಡೆಸಿದರು. ಇದರಲ್ಲಿ ಕಂಡುಬಂದ ಮುಖ್ಯಾಂಶಗಳನ್ನು ಸಂಕ್ಷೇಪವಾಗಿ ಕೆಳಗೆ ತಿಳಿಸಿರುತ್ತೆ.

ಈ ಡಿಸ್ಟ್ರಿಕ್ಟಿನ ಒಂದೆರಡು ಸ್ಥಳದಲ್ಲಿಮಾತ್ರವೇ ವಿಶೇಷವಾಗಿ ಕೋಳಿಗಳನ್ನು ಸಾಕುತ್ತಾರೆಂದಿಲ್ಲ; ಪ್ರತಿಯೊಬ್ಬ ಮುಸಲ್ಮಾನನ ಮನೆಯಲ್ಲೂ ೨-೪ ಕೋಳಿಗಳು ಸಾಧಾರಣವಾಗಿ ಇದ್ದೇ ಇರುತ್ತವೆ. ಮತ್ತು ೪-೫ ಮನೆಗಳಿಗೆ ಒಂದರಲ್ಲಿ ಒಂದು ಹುಂಜವನ್ನು ಇಟ್ಟುಕೊಂಡಿರುತ್ತಾರೆ. ಈಚೆಗೆ ಈ ಡಿಸ್ಟ್ರಿಕ್ಟಿನಲ್ಲಿ ಬಾತುಗಳನ್ನು ಅಧಿಕವಾಗಿ ಸಾಕುತ್ತಿದಾರೆ. ಇಲ್ಲಿ ಹಿಂದುಗಳು ಬಾತುಪಕ್ಷಿಯನ್ನು ಮನೆಯಲ್ಲಿ ಸಾಕುವದು ನಿಷೇದವೆಂದೆಣಿಸುವದಿಲ್ಲ. ಆದರೆ ಬಾತುಗಳನ್ನು ಕೋಳಿಗಳಂತೆ ಅಷ್ಟು ಸಾಮಾನ್ಯವಾಗಿ ಎಲ್ಲರೂ ಸಾಕುವದಿಲ್ಲ. ಸಾಕುವವರು ಸಾಮಾನ್ಯವಾಗಿ ಒಬ್ಬೊಬ್ಬರು ೮-೧೦ ಬಾತುಗಳನ್ನು ಇಟ್ಟುಕೊಂಡಿರುತ್ತಾರೆ.

ಕೋಳಿಯು ವರುಷಕ್ಕೆ ಎರಡುಸಲ ಮೊಟ್ಟೆಗಳಿಡುತ್ತದೆ; ಮೊಟ್ಟೆ ಇಡುವದು ಆರಂಭವಾದರೆ ೧೫-೨೦ ದಿನಗಳ ತನಕ ಮೊಟ್ಟೆಗಳು ಹಾಕುತ್ತಲೇ ಇರುವದು. ಒಂದು ಬಾರಿಗೆ ೧೦-೧೨ ಮೊಟ್ಟೆಗಳನ್ನು ಮರಿ ಮಾಡುವದಕ್ಕೆ ಇಡುತ್ತಾರೆ. ಮರಿ ಮಾಡುವದಕ್ಕೆ ೨೧ ದಿನಗಳು ಹಿಡಿಯುವದು. ಹೀಗೆ ಕೋಳಿಯನ್ನು ಮೊಟ್ಟೆಗಳಮೇಲೆ ಕೂತು ಮರಿ ಮಾಡುವದಕ್ಕೆ ಬಿಟ್ಟರೆ ಇದು ವರುಷಕ್ಕೆ ಸಾಧಾರಣವಾಗಿ ೩೦ ಮೊಟ್ಟೆಗಳಿಡುತ್ತದೆ. ಇಲ್ಲವಾದರೆ ೧೫ ದಿನ ಅಥವಾ ೧ ತಿಂಗಳಿಗೆ ಒಂದಾವರ್ತಿ ಮೊಟ್ಟೆಗಳಿಡುತ್ತಲೇ ಇರುವದು. ಹೀಗೆ ಒಂದು ವರುಷದಲ್ಲಿ ೮೦ ಮೊಟ್ಟೆಗಳನ್ನಿಡುವದುಂಟು. ಆದರೆ ಸಾಧಾರಣವಾಗಿ ಕೋಳಿಗಳನ್ನು ಮೊಟ್ಟೆಗಳಮೇಲೆ ಕೂಡಿಸಿ ಮರಿ ಮಾಡಿಸದೇ ಬಿಡುವದಿಲ್ಲ.

ಒಂದು ಮೊಟ್ಟೆಯು ಸುಮಾರು ೩½ ತೊಲೆ ತೂಕವಿರುತ್ತದೆ ಬಿಳೀದಕ್ಕಿಂತ ಸ್ವಲ್ಪ ಬಣ್ಣವಾಗಿರುವ ಮೊಟ್ಟೆಯು ಹೆಚ್ಚು ಪುಷ್ಟಿಕರವೆಂದು ಹೇಳುತ್ತಾರೆ.

ಬಾತುವನ್ನು ಮೊಟ್ಟೆಗಳಮೇಲೆ ಕೂಡಿಸಿ ಮರಿ ಮಾಡುವದಕ್ಕೆ ಬಿಡುವದು ಬಹಳ ಅಪರೂಪ. ಇದರ ಮೊಟ್ಟೆಗಳನ್ನು ಕೋಳಿಗಳಿಂದಲೇ ಮರಿ ಮಾಡಿಸುತ್ತಾರೆ. ಒಂದು ಬಾತು ವರುಷಕ್ಕೆ ಒಟ್ಟು ೧೩೦ರಿಂದ ೧೮೦ ಮೊಟ್ಟೆಗಳಿಡುತ್ತದೆ.

ಜನರು ಕೋಳಿಗಳನ್ನೇ ಆಗಲಿ ಬಾತುಗಳನ್ನೇ ಆಗಲಿ ಸಾಕುವದರಲ್ಲಿ ಏನೂ ಶ್ರಮವನ್ನು ತೆಗದುಕೊಳ್ಳುವದಿಲ್ಲ. ಕೋಳಿಯು ಬೇಕಾದ ತಿಂಡಿಯನ್ನು ತಾನೆ ಹುಡುಕಿಕೊಳ್ಳುತ್ತದೆ. ಬಿದರುಗೂಡೆ ಕೆಳಗೆ ಅಡಿಕೆ ಗರಿಗಳನ್ನು ಹಾಸಿ ಮೇಲೆ ಬೂದಿ ಹಾಕಿ ಪ್ರತಿ ಸಾಯಂಕಾಲವೂ ಕೋಳಿಗಳನ್ನು ಮುಚ್ಚಿಡುತ್ತಾರೆ. ಬೆಳಗಾದಮೇಲೆ ಗಲೀಜಾದ ಬೂದಿಯನ್ನು ಬಿಸಾಟು ಪುನಃ ಸಾಯಂಕಾಲಕ್ಕೆ ಹೊಸ ಬೂದಿಯನ್ನು ಹಾಸುತ್ತಾರೆ. ಹೀಗೆ ಚೊಕ್ಕಟವಾಗಿಡುವದರಿಂದ ಹುಳ ಹುಪ್ಪಟಗಳ ಉತ್ಪತ್ತಿಗೆ ಅವಕಾಶವೇ ಇರುವದಿಲ್ಲ.

ಕೋಳಿಗಳಿಗೆ ಬರುವ ಸಾಂಕ್ರಾಮಿಕ ಜಾಡ್ಯಗಳಲ್ಲಿ ವಿಶೇಷ ಭಯಪಡಬೇಕಾದ್ದು ಪ್ಲೇಗ್ ರೋಗ (Fowl Cholera) ಮತ್ತು ನಾಲಿಗೆಯುಲ್ಲಾಗುವ ರೋಗ(Roup). „ರೂಪ್''ಅಥವಾ ನಾಲಿಗೆಯುಲ್ಲಾಗುವ ರೋಗ ತಗಲಿದ ಕೋಳಿಯನ್ನು ಅರಸಿನದ ನೀರಿನಲ್ಲಿ ತೊಳೆದು ಅದರ ಕಣ್ಣಿನಲ್ಲಿ ನೀರುಳ್ಳಿ ರಸವನ್ನು ಹಿಂಡಬೇಕು. ಆದರೆ ಈ ರೋಗ ಬಂದರೆ ಪಕ್ಷಿಗಳು ಬದುಕುವದೇ ಅಪರೂಪ. ಪ್ಲೇಗ್ ಜಾಡ್ಯಕ್ಕೆ ಚಿಕಿತ್ಸೆಯೇ ಮಾಡುವದಿಲ್ಲ.

ಕೋಳಿಯು ೧½ ವರುಷವಾದಮೇಲೆ ಮೊಟ್ಟೆ ಇಡುವದು ಕಮ್ಮಿಯಾಗುತ್ತಾದ್ದರಿಂದ ಅದನ್ನು ಮಾರುತ್ತಾರೆ. ಇಲ್ಲವೆ ತಿಂದುಬಿಡುವದುಂಟು. ಹುಂಜವೂ ೩ ವರುಷಗಳ ತರುವಾಯ ತಳಿಯ ಅಭಿವೃದ್ಧಿ ಕೆಲಸಕ್ಕೆ ಉಪಯೋಗಪಡುವದಿಲ್ಲವಂತೆ.

ಹಿಡಮಾಡಿದ ಹುಂಜ ಒಂದಕ್ಕೆ ೧೪ ಆಣೆಯಿಂದ ೧| ರೂಪಾಯಿ ವರೆಗೂ ಖರೀದಿ ದೊರೆಯುತ್ತದೆ. ಹುಂಜವನ್ನು ೫-೬ ತಿಂಗಳು ವಯಸ್ಸಾದಮೇಲೆ ಹಿಡಮಾಡುತ್ತಾರೆ.

ಸ್ವಲ್ಪ ಹೆಚ್ಚು ಕಡಿಮೆ ಎಲ್ಲಾ ಮನೆಯವರು ಪ್ರತಿ ಸಂತೆಯಲ್ಲೂ ಒಂದೆರಡು ವಯಸ್ಸಾದ ಪಕ್ಷಿಯನ್ನು ಮಾರಿ ತಿಂಗಳಿಗೆ ೩-೪ ರೂಪಾಯಿ

ವರೆಗೂ ಸಂಪಾದಿಸುತ್ತಾರೆ. ಒಂದು ಕೋಳಿಗೆ ಸಾಧಾರಣವಾಗಿ ೬ ಆಣೆಯೂ ಒಂದು ಬೀಜ ಹೊಡೆದ ಹುಂಜಕ್ಕೆ ೧೪ ಆಣೆಯಿಂದ ೧-೪-೦ ರೂಪಾಯಿ ವರೆಗೂ ಸಿಕ್ಕುತ್ತದೆ.

ಬಾತುವಿನ ಮೊಟ್ಟೆಗಳಿಗೆ ನೂರಕ್ಕೆ ೧-೮-೦ ರೂಪಾಯಿಂದ ೨ ರೂಪಾಯಿನವರೆಗೂ ಸಿಕ್ಕುತ್ತದೆ. ಒಂದು ಮನೆಯಲ್ಲಿ ೧೦-೧೨ ಬಾತುಗಳನ್ನು ಇಟ್ಟುಕೊಂಡಲ್ಲಿ ವರುಷಕ್ಕೆ ಸುಮಾರು ೨೪ ರೂಪಾಯಿ ದೊರೆಯುತ್ತದೆ. ಕೋಳಿಗಳು, ಬಾತುಗಳು, ಮೊಟ್ಟೆಗಳು ಇವೆಲ್ಲಾ ಬರ್ಮಾ ದೇಶಕ್ಕೇನೇ ರಫ್ತಾಗುತ್ತವೆ. ಅಲ್ಲಿ ಒಂದು ಕೋಳಿಗೆ ೧೪ ಆಣೆಯೂ ಒಂದು ಬಾತುವಿನ ಮೊಟ್ಟೆಗೆ ೬ ಪೈಯಿಂದ ೧ ಆಣೆಯೂ ಸಿಕ್ಕುವದರಿಂದ ಈ ವ್ಯಾಪಾರವು ವಿಶೇಷ ಲಾಭಕರವಾಗಿಧೆ. ಸಾಲಿಯಾನ ನೋಖಾಲಿ ಡಿಸ್ಟ್ರಿಕ್ಟಿನಿಂದ ಸುಮಾರು ೨ ಲಕ್ಷ ಕೋಳಿಗಳೂ ಬಾತುಗಳೂ ರಫ್ತಾಗುತ್ತವೆ. ಕೋಳಿ ಮೊಟ್ಟೆ ರಫ್ತಾಗುವದು ತುಂಬಾ ಕಮ್ಮಿ. ಬಾತುವಿನ ಮೊಟ್ಟೆಗಳೇ ವಿಶೇಷವಾಗಿ ಹೊರಗೆ ಹೋಗುತ್ತವೆ.

ಮೊಟ್ಟೆಗಳನ್ನು ಮಂದವಾದ ಸುಣ್ಣದ ನೀರಿನಲ್ಲಿಟ್ಟಿದ್ದರೆ ಅವು ಕೆಡುವದಿಲ್ಲ. ಹೀಗೆ ೩-೪ ಆಣೆ ಸುಣ್ಣ ಖರ್ಚುಮಾಡಿ ೧೮೦೦ ಮೊಟ್ಟೆಗಳನ್ನು ಭದ್ರಪಡಿಸಬಹುದು. ಮೊಟ್ಟೆಯನ್ನು ಸುಣ್ಣದ ನೀರಿನಲ್ಲಿ ಹಾಕಿಡುವದರಿಂದ, ಮೊಟ್ಟೆ ಮೇಲ್ಗಡೆಯ ಚಿಪ್ಪಿನಲ್ಲಿನ ಸೂಕ್ಷ್ಮ ರಂಧ್ರಗಳು ಮುಚ್ಚಿಹೋಗಿ ಮೊಟ್ಟೆಯನ್ನು ಕೆಡಿಸತಕ್ಕ ಅತಿ ಸೂಕ್ಷ್ಮ ಕ್ರಿಮಿಗಳು ಒಳಗೆ ಪ್ರವೇಶಿಸಲು ಅಸಾಧ್ಯವಾಗುತ್ತದೆ.

ಪ್ರತಿಯೊಬ್ಬ ಮುಸಲ್ಮಾನನೂ ಕೋಳಿಗಳನ್ನು ಸಾಕುತ್ತಿದ್ದರೂ ಕೂಡ ಬಾತುವಿನ ಮೊಟ್ಟೆಗೆ ಇರುವಷ್ಟು ಗಿರಾಕಿಯು ಕೋಳಿಮೊಟ್ಟೆಗಿಲ್ಲವಾಗಿ ಕೋಳಿ ಮೊಟ್ಟೆಗಳು ಅಷ್ಟು ರಫ್ತಾಗುವದಿಲ್ಲ. ಬಾತುವಿನ ಮೊಟ್ಟೆಯೊಂದಕ್ಕೆ ೩ ಕಾಸು ಕೊಡುವವರು ಕೋಳಿ ಮೊಟ್ಟೆಗಳನ್ನು ೩ ಕಾಸಿಗೆ ಎರಡು ಕೇಳುತ್ತಾರೆ. ಆದಕಾರಣ ಕೋಳಿ ಮೊಟ್ಟೆಗಳನ್ನು ಹಾಗೆಯೇ ಮಾರುವದಕ್ಕಿಂತಲೂ ಮರಿ ಮಾಡಿ ಮಾರುವದೇ ಹೆಚ್ಚು ಆದಾಯಕರವಾಗಿದೆ. ಇದೂ ಅಲ್ಲದೆ ಕೋಳಿ ಮೊಟ್ಟೆಯನ್ನು ಬಾತುವಿನ ಮೊಟ್ಟೆ ಹಾಗೆ ಬಹಳ ಕಾಲ ಇಟ್ಟಿದ್ದರೆ ಕೆಟ್ಟುಹೋಗುತ್ತದೆ. ಇದಕ್ಕೆ ಕಾ

ರಣವೇನೆಂದು ವಿಚಾರ ಮಾಡಿದಲ್ಲಿ ಬಾತು ಪಕ್ಷಿಯು ಕೆರೆ ಕುಂಟೆಗಳಲ್ಲಿ ತಿನ್ನುವ ಚಿಪ್ಪು ಮುಂತಾದವುಗಳಲ್ಲಿ ವಿಶೇಷ ಸುಣ್ಣಪದಾರ್ಥವಿರುವದರಿಂದ ಇದರ ಮೊಟ್ಟೆಗಳು ಸ್ವಲ್ಪ ಗಟ್ಟಿಯಾಗಿರುತ್ತವೆಂತಲೂ, ಕೋಳಿಗಳ ಮೇವಿನಲ್ಲಿ ಅಂಥ ಸುಣ್ಣಪದಾರ್ಥವೇನೂ ಸೇರುವದಿಲ್ಲವಾಗಿ ಇವುಗಳ ಮೊಟ್ಟೆಗಳ ಮೇಲಿನ ಚಿಪ್ಪು ಅಷ್ಟು ಗಟ್ಟಿಯಾಗಿರುವದಿಲ್ಲವೆಂತಲೂ ಊಹಿಸಬೇಕಾಗುತ್ತೆ. ಈ ಭಾಗದಲ್ಲಿ ಇನ್ನೂ ಅಜಮಾಯಿಷಿಗಳನ್ನು ಮಾಡಿದರೆ, ಕೋಳಿಗಳ ಮೇವಿನಲ್ಲಿ ಸುಣ್ಣಪದಾರ್ಥವನ್ನು ಸೇರಿಸುವದರಿಂದ ಮೊಟ್ಟೆಯ ಚಿಪ್ಪು ಎಷ್ಟರಮಟ್ಟಿಗೆ ಗಟ್ಟಿಯಾಗುತ್ತದೆಂದು ನಿರ್ಧರಿಸಬಹುದು.

Revenue Appeals.

ರೆವಿನ್ಯೂ ಅಪೀಲುಗಳು.

೧೯೦೮—೦೯ನೆ ಇಸವಿಯ ಅಪೀಲು ನಂ. ೭೯.

ಅಪೀಲುವಾದಿ.		ಅಪೀಲು ಪ್ರತಿವಾದಿಗಳು.
ಅಡ್ವೋಕೇಟ್ ವಿ॥ ಎಸ್. ಶ್ಯಾಮಣ್ಣ.	*vs.*	೧. ನಂಜಾಚಾರಿ. ೨. ಅನಂತಾಚಾರಿ. ೩. ಚೆಲುವಪಿಳ್ಳೆ. ೪. ಬಿ.ಜಿ. ರಾಮಸ್ವಾಮಯ್ಯಂಗಾರ್. ೫. ಕೇಶವಯ್ಯಂಗಾರ್.

ಕಂದಾಯದ ಬಾಕಿಗಾಗಿ ಜಮೀನಿನ ಹರಾಜು ವಿಚಾರ.

ಮೊಕದ್ದಮೆಯ ವಿದ್ಯಮಾನ.—ಕಂದಾಯದ ಬಾಕಿಗಾಗಿ ಚನ್ನಗಿರಿ ತಾ॥ ಸೂಳೆಕೆರೆಯಲ್ಲಿ ಮೆ॥ ಕೆ. ಶ್ಯಾಮಯ್ಯಂಗಾರ್ರವರ ಖಾತೆ ಜಮೀನುಗಳು ಕ್ರಮವರಿತು ಹರಾಜಿಗೆ ಗುರಿಮಾಡಲ್ಪಟ್ಟವು. ೧೯೦೬ನೆ ಆಗಷ್ಟ ೧೯ನೆ ತಾರೀಖಿನ ದಿನ, ಅಂದರೆ ಹರಾಜು ತಾರೀಖಿಗೆ ಕೆಲವು ದಿನಗಳ ಮುಂಚೆ, ಖಾತೆದಾರರು ಕಂದಾಯದ ಬಾಕಿಯನ್ನು ಪಾವತಿ ಮಾಡಲು ೧೯೦೬ನೆ ನವಂಬರು ಆಖೈರುವರಿಗೆ ವ್ಯವಧಾನ ಕೊಡಬೇಕೆಂದು ಡೆಪ್ಯುಟಿ ಕಮಿಷನರವರಿಗೂ ಅಸಿಸ್ಟೆಂಟು ಕಮಿಷನರವರಿಗೂ ಅರ್ಜಿ ಕೊಟ್ಟರು. ಇಷ್ಟರೊಳಗಾಗಿ ಈ ಅರ್ಜಿ ಮೇಲೆ ಆಖೈರು ಹುಕುಂ ಆಗುವದಕ್ಕೆ ಮುಂಚೆಯೇ ಅಮಲ್ದಾರರವರು ಖಾತೆಯ ಪೈಕಿ ಕೆಲವು ಸರ್ವೆ ನಂಬರುಗ

ಳನ್ನು ಹರಾಜುಮಾಡಿ, ಭೋಗ್ಯದಾರ್ರಿಗೆ (ಅಪೀಲುವಾದಿಗೆ) ಹರಾಜು ಸಂಗತಿಯನ್ನು ೧೯೦೬ನೆ ಆಗಸ್ಟು ೧೫ನೆ ತಾರೀಖಿನಲ್ಲಿ ರಿಜಿಸ್ಟರ್‌ಮಾಡಿ ಮೂಲಕ ತಿಳುವಳಿಕೆ ಕೊಟ್ಟಾಗ್ಯೂ ಬಾಕಿಯನ್ನು ಫೈಸಲು ಮಾಡಲಿಲ್ಲವೆಂತ ರಿಪೋರ್ಟು ಮಾಡಿ, ಹರಾಜು ಖಾಯಂ ಬಗ್ಗೆ ಶಿಫಾರಸು ಮಾಡಿದರು. ಏತನ್ಮಧ್ಯೆ ಡೆಪ್ಯುಟಿ ಕಮಿಷನರವರು ಖಾತೆದಾರ್ರಿಗೆ ೧೯೦೬ನೆ ನವಂಬರು ಆಖೈರುವರಿಗೆ ವ್ಯವಧಾನವನ್ನು ಕೊಟ್ಟ ಕಾರಣ ಅದುವರೆಗೂ ಹರಾಜು ರಿಕಾರ್ಡುಗಳು ಅಮಾನತ್ತಿನಲ್ಲಿದ್ದವು. ಅನಂತರವೂ ಕೂಡ ಬಾಕಿ ಫೈಸಲಾಗದೇಹೋದ್ದರಿಂದ ಹರಾಜನ್ನು ಏಕೆ ಕಾಯಂಮಾಡಬಾರದೆಂದು ಖಾತೆದಾರರನ್ನು ಕೇಳಿದ್ದಕ್ಕೆ, ಇವರು ಸರ್ಕಾರದವರಿಗೆ ಸೂಕ್ತ ತೋರಿದಂತೆ ಹುಕುಂ ಮಾಡಬಹುದೆಂದು ಉತ್ತರಕೊಟ್ಟ ಕಾರಣ ಡೆಪ್ಯುಟಿ ಕಮಿಷನರವರು ಹರಾಜುಗಳನ್ನು ೧೯೦೭ನೆ ಮಾರ್ಚಿ ಮಾಹೆ ೨೭ನೆ ತಾರೀಖಿನಲ್ಲಿ ಖಾಯಂ ಮಾಡಿದರು.

ಪ್ರಸಕ್ತವಾದ ಜಮೀನುಗಳ ಭೋಗ್ಯದಾರರಾದ ಅಪೀಲುದಾರರು ಸೂಳೆಕೆರೆ ಎಸ್ಟೇಟಿಗೆ ಸೇರಿದ ಯಾವದೊ ಕೆಲವು ಜಮೀನುಗಳು ಹರಾಜುಮಾಡಲ್ಪಟ್ಟು ಮತ್ತೆ ಕೆಲವು ಹರಾಜಾಗುವದರಲ್ಲಿವೆ ಎಂತ ಈಚೆಗೆ ತಮ್ಮ ತಿಳುವಳಿಕೆಗೆ ಬಂತೆಂತಲೂ ಈ ವಿಚಾರವಾಗಿ ಇದಕ್ಕೆ ಮುಂಚೆ ತಮಗೆ ಯಾರೂ ವರ್ತಮಾನವೇ ಕೊಡಲಿಲ್ಲವೆಂತಲೂ ಗೌರ್ನಮೆಂಟಿಗೆ ೧೯೦೭ನೆ ಡಿಶಂಬರ್ ೯ರಲ್ಲಿ ಒಂದು ಸಾಮಾನ್ಯವಾದ ಫಿರ್ಯಾದು ಅರ್ಜಿ ಕೊಟ್ಟು, ನಡೆದಿರುವ ಹರಾಜನ್ನು ರದ್ದುಮಾಡಿ ಮುಂದಕ್ಕೆ ಇಟ್ಟಿರುವ ಹರಾಜನ್ನು ತಡೆಯಬೇಕೆಂತ ಕೇಳಿಕೊಂಡರು. ಮುಂದೆ ೨೪ ತಿಂಗಳುಗಳಮೇಲೆ ಅಪೀಲುವಾದಿಯು ೧೯೦೮ನೆ ಫೆಬ್ರವರಿ ೨೬ರಲ್ಲಿ ಡೆಪ್ಯುಟಿ ಕಮಿಷನರವರು ಹಾಲಿ ಹರಾಜುಗಳನ್ನು ಕಾಯಂಮಾಡಿದ ಹುಕುಮಿನಮೇಲೆ ಕ್ರಮವಾದ ಅಪೀಲು ತಂದರು.

ಗೌರ್ನಮೆಂಟಿನವರ ತೀರ್ಮಾನ.—ಈ ಅಪೀಲು ದಾಖಲುಮಾಡುವದರಲ್ಲಿ ಆದ ಸುಸ್ತಿಯನ್ನು ಮಾಫ್ ಮಾಡಲು ಗೌರ್ನಮೆಂಟಿನವರು ಸಮ್ಮತಪಡುವದಿಲ್ಲ. ಅಮಲ್ದಾರರು ೧೯೦೬ನೆ ಆಗಸ್ಟು ೨೪ ಮತ್ತು ೨೭ನೆ ತಾರೀಖುಗಳಲ್ಲಿ ಹರಾಜು ನಡೆಸಿದರು, ಮತ್ತು ಹರಾಜು ವಿಷಯವಾಗಿ

ಭೋಗ್ಯದಾರರಿಗೆ (ಅಪೀಲುವಾದಿಗೆ) ಒಂದು ರಿಜಿಸ್ಟರ್ ನೋಟೀಸನ್ನು ಕಳುಹಿಸಿತ್ತೆಂದು ತಮ್ಮ ೧೯೦೬ನೆ ಸೆಪ್ಟೆಂಬರ್ ೧೭ನೆ ಮುಕರ್ಮಿನ ರಿಪೋರ್ಟಿನಲ್ಲಿ ನಮೂದಿಸಿರುತ್ತಾರೆ. ಆದರೆ ಭೋಗ್ಯದಾರರು ಹಾಗೆ ನೋಟೀಸೇನೂ ಕಳುಹಿಸಲಿಲ್ಲವೆಂದು ಹೇಳುತ್ತಾರೆ. ಈ ನೋಟೀಸು ಕಳುಹಿಸಿದ್ದಕ್ಕೆ ಬೇರೆ ಏನೂ ರುಜುವಾತಿಲ್ಲ. ಇದು ನಿಜವೋ ಅಥವಾ ಸುಳ್ಳೋ. ಪರಂತು ಕಾನೂನುರೀತ್ಯಾ ಇಂಥಾ ನೋಟೀಸನ್ನು ಕಳುಹಿಸಲೇಬೇಕೆಂಬ ಅವಶ್ಯಕತೆ ಏನೂ ಇರುವದಿಲ್ಲ.

೨. ಅಪೀಲುವಾದಿ ತಮ್ಮ ಹಕ್ಕನ್ನು ತಾಲ್ಲೂಕ್ ಸ್ಪೆಷಲ್ ರಿಜಿಸ್ಟರಿನಲ್ಲಿ ದಾಖಲ್ಮಾಡಿಸಿರಲಿಲ್ಲ. ಭೋಗ್ಯದ ಸಂಗತಿಯು ತಾಲ್ಲೂಕು ಆಫೀಸರುಗಳಿಗೆ ಗೊತ್ತಿತ್ತೆಂಬುದು ನಿಜವೇ ಇರಬಹುದು. ಆದರೆ ಜಮೀನುಗಳು ಖಾತೆದಾರರ ಸ್ವಾಧೀನದಲ್ಲಿದ್ದು ಇವರಿಗೆ ಹರಾಜು ನಡೆದಮೇಲೂ ಕೂಡ ಬಾಕಿಯನ್ನು ತೀರಿಸಲು ಬೇಕಾದ ಅನುಕೂಲತೆಗಳನ್ನೆಲ್ಲಾ ಕೊಟ್ಟಿದ್ದದ್ದರಿಂದ ಪ್ರಾಯಶಃ ತಾಲ್ಲೂಕಿನವರು ಅಪೀಲುವಾದಿಗೆ ಪ್ರತ್ಯೇಕವಾಗಿ ನೋಟೀಸು ಕಳುಹಿಸಿರಲಿಲ್ಲವೆಂದು ತೋರುತ್ತೆ. ೧೯೦೬ನೆ ಆಗಸ್ಟಿನಲ್ಲಿ ನಡೆದ ಹರಾಜನ್ನು ೧೯೦೭ನೆ ಮಾರ್ಚಿವರೆಗೂ ಖಾಯಂಮಾಡಿರಲಿಲ್ಲ ಮತ್ತು ಕಾಯಂಮಾಡುವದಕ್ಕೆ ಮುಂಚೆ ಖಾತೆದಾರರನ್ನು ನಿಮ್ಮ ತಕರಾರು ಏನಾದರೂ ಉಂಟೆ ಎಂದು ಕೇಳಿದ್ದಕ್ಕೆ ಇವರು ಸರ್ಕಾರದವರಿಗೆ ಸೂಕ್ತ ತೋರಿದಂತೆ ಹುಕುಂ ಮಾಡಬಹುದೆಂದು ಹೇಳಿದರು.

೩. ಅಪೀಲುವಾದಿಯು ಗೌರ್ನಮೆಂಟಿನವರಿಗೆ ಗುಜರಾಯಿಸಿಕೊಂಡ ಮೊದಲನೇ ಅರ್ಜಿಯು ಪ್ರಸಕ್ತವಾದ ಜಮೀನುಗಳ ಹರಾಜನ್ನು ಕಾಯಂ ಮಾಡಿದ ಹುಕುಮಿನಮೇಲೆ ತಂದ ಕ್ರಮವಾದ ಅಪೀಲು ಅಲ್ಲ. ಯಾವದೊ ಕೆಲವು ಹರಾಜುಗಳ ವಿಷಯವಾಗಿ ಬರೆದು ಕೊಂಡ ಒಂದು ಸಾಮಾನ್ಯ ಫಿರ್ಯಾದು ಅರ್ಜಿಯಾಗಿರುತ್ತೆ. ಇದೂಕೂಡ ಹರಾಜು ಕಾಯಮಾದ ಎಂಟು ತಿಂಗಳಮೇಲೆ ದಾಖಲ್ ಮಾಡಲ್ಪಟ್ಟಿತು. ಇವರು ಕ್ರಮವಾದ ಅಪೀಲನ್ನು ತಂದದ್ದು ೧೯೦೮ನೆ ಫೆಬ್ರವರಿ ೨೬ನೆ ತಾರೀಖಿನಲ್ಲಿ. ಭೋಗ್ಯಪತ್ರದಲ್ಲಿ ಕಂಡ ಷರತ್ತುಗಳು ಏನೇ ಆಗಿರಲಿ ಜಮೀನುಗಳು ಭೋಗ್ಯಮಾಡಿದವರ ಸ್ವಾಧೀನ ಮತ್ತು ಮ್ಯಾನೇಜುಮೆಂಟಿನಲ್ಲಿಯೇ

ಬಿಡಲ್ಪಟ್ಟಿದ್ದ ಕಾರಣ, ಇವರನ್ನು ಅಪೀಲುವಾದಿಯ ಏಜಂಟರೆಂದೇ ಭಾವಿಸಬೇಕು. ಕಾನೂನುಪ್ರಕಾರ ವಾದಿಗೆ ನೋಟೀಸು ಕಳುಹಿಸಬೇಕಾದ್ದು ಅವಶ್ಯಕವೆಂದಿಟ್ಟುಕೊಂಡರೂ ಕೂಡ, ಜಮೀನುಗಳನ್ನು ಸ್ವಾಧೀನದಲ್ಲಿಟ್ಟುಕೊಂಡಿರುವ ಭೋಗ್ಯಮಾಡಿದವನಮೇಲೆ ನೋಟೀಸು ಜಾರಿಯಾದರೆ ಸಾಕಾಗಿರುತ್ತೆ. ಅಲ್ಲದೆ ಹರಾಜಿನ ವಿಷಯವು ೧೪ ತಿಂಗಳ ತನಕ ಅಪೀಲುವಾದಿಗೆ ಗೊತ್ತೇ ಇರಲಿಲ್ಲವೆಂಬುದನ್ನು ನಂಬಲಸಾಧ್ಯವಾಗಿರುತ್ತೆ. ಇವರು (ಅಪೀಲುವಾದಿ) ಬಯಾನುಮಾಡುವಂತೆ ಇವರಿಗೆ ಜಮೀನುಗಳ ಸ್ವಾಧೀನವನ್ನು ಪಡೆಯುವದಕ್ಕೆ ಹಕ್ಕು ಇದ್ದಿದ್ದಪಕ್ಷದಲ್ಲಿ ಸರ್ಕಾರಿ ಬಾಕಿಯು ಯಾವರೀತಿ ಫೈಸಲಾಯಿತು ಎಂಬದನ್ನು ಇವರು ವಿಚಾರಿಸಬೇಕಾಗಿತ್ತು. ಮತ್ತು ಹೀಗೆ ವಿಚಾರಿಸಿದ್ದರೆ ಜಮೀನುಗಳು ಹರಾಜಾದ ಸಂಗತಿಯು ಇವರಿಗೆ ಇದಕ್ಕೆ ಮೊದಲೇ ಗೊತ್ತಾಗುತ್ತಿತ್ತು.

ಖಾತೇದಾರರು ಬೇಕೆಂತಲೇ ಜಮೀನುಗಳನ್ನು ಹರಾಜಿಗೆ ಗುರಿಪಡಿಸಿ, ಇತರರ ಹೆಸರಿನಲ್ಲಿ ತಾವೇ ಖರೀದಿಗೆ ಪಡೆದಿದ್ದರೂ ಇರಬಹುದು. ಮತ್ತು ಈ ಅಪೀಲು ಸಕಾಲದಲ್ಲಿ ದಾಖಲಾಗಿದ್ದರೆ ಒಂದುವೇಳೆ ಗೌರ್ನಮೆಂಟಿನವರಿಗೂ ಹರಾಜನ್ನು ಕ್ಯಾನ್ಸಲ್ ಮಾಡಲಿಕ್ಕೆ ಸಾಕಾದಷ್ಟು ಕಾರಣಗಳು ಸಿಕ್ಕುತ್ತಿದ್ದವು. ಆದರೂ ಪ್ರಾಯಶಃ ವಾದಿಗೆ ಶಿವಿಲ್ ಕೋರ್ಟುಗಳ ಮೂಲಕ ಪರಿಹಾರವನ್ನು ಪಡೆಯಲು ರಹವಿರದಿರಲಾರದು. ಪ್ರಸಕ್ತ ಅಪೀಲನ್ನು ಕಾಲಗತಿಸಿರುವದರಿಂದ ಡಿಸ್ಮಿಸ್ ಮಾಡಿರುತ್ತೆ.

Notifications.

ಇಸ್ತಿಹಾರ್ ನಾಮೆಗಳು.

ನಂ. ೫೨೧೨. ತಾ|| ೧೭—೧೧—೦೯.

ಮೈಸೂರ್ ಸರ್ವಿಸ್ ರೆಗ್ಯುಲೇಷನ್ಸ್ ೧೭೭ನೆ ಪ್ರಕರಣದಮೇರೆ ಆಲೂರು ಸಬ್ ತಾ|| ಡೆಪ್ಯುಟಿ ಅಮಲ್ದಾರ್ ಎಸ್. ಅನಂತರಾಮಯ್ಯಂಗಾರ್ರಿಗೆ ೧೯೦೯ನೆ ಇಸವಿ ನವಂಬರ್ ೧೬ನೆ ತಾರೀಖಿನ ಲಾಗಾಯಿತು ೧೫ ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿರುತ್ತೆ.

೨. ಅವರ ಗೈರ್ ಹಾಜರಿಯಲ್ಲಿ ಹಾಸನ ತಾ|| ಅಮಲ್ದಾರ್

ಮೆ||ಎಸ್. ಎಲ್. ಅಪ್ಪಣ್ಣಯ್ಯಂಗಾರ್ರು ಸಬ್‌ತಾಲ್ಲೂಕು ಛಾರ್ಜಿನಲ್ಲಿಯೂ ಇರತಕ್ಕದ್ದು.

ನಂ. ೫೭೨. ತಾ|| ೧೫—೧೧—೦೯.

ಈ ಕೆಳಗೆ ನಮೂದಿಸಿರುವ ಶಿರಸ್ತೇದಾರ್ರುಗಳ ವರ್ಗಾವರ್ಗಿಗಳನ್ನು ಮಂಜೂರ್‌ಮಾಡಿರುತ್ತೆ.

ಹೆಸರು.	ಎಲ್ಲಿಂದ.	ಎಲ್ಲಿಗೆ.
ಸಿ. ಯಸ್. ತಾತಯ್ಯಂಗಾರ್ರು	ಮೈಸೂರು	ಶ್ರೀರಂಗಪಟ್ಟಣ.
ಎಂ. ಲಕ್ಷ್ಮಣರಾಯರು	ಶ್ರೀರಂಗಪಟ್ಟಣ	ಕೃಷ್ಣರಾಜಪೇಟೆ.
ಕೆ.ಎಲ್. ರಾಮಚಂದ್ರಯ್ಯನವರು	ಕೃಷ್ಣರಾಜಪೇಟೆ	ಮಳವಳ್ಳಿ.
ಹೆಚ್. ಶ್ರೀನಿವಾಸಯ್ಯಂಗಾರ್ರು	ನಾಗಮಂಗಲ	ಮೈಸೂರು.
ಎಂ. ಎ. ನರಸಿಂಹಾಚಾರ್ರು	ಮಳವಳ್ಳಿ	ನಾಗಮಂಗಲ.

ಶಿರಸ್ತೇದಾರ್ ಎಂ. ಎ. ನರಸಿಂಹಾಚಾರ್ಯರು ೧೯೦೯ನೆ ಇಸವಿ ಜೂನ್ ತಾ|| ೬ರ ಲಾಗಾಯಿತು ಬಗರ್ ತಲಬಿನ ರಜಾ ಮೇಲೆ ಇರುವ ಸಬಬು ಮಳವಳ್ಳಿ ತಾಲ್ಲೂಕ್ ಹೆಡ್ ಗುಮಾಸ್ತೆ ಎಂ. ಶ್ರೀನಿವಾಸಯ್ಯಂಗಾರರನ್ನು ಆಕ್ಟಿಂಗ್ ಶಿರಸ್ತೇದಾರರನ್ನಾಗಿ ಮೊಕರರೂರು ಮಾಡಿ ನಾಗಮಂಗಲದ ತಾಲ್ಲೂಕಿಗೆ ವರ್ಗಾಯಿಸಿರುತ್ತೆ.

Occasional Notes.

ವಿವಿಧ ವೃತ್ತಾಂತಗಳು.

೧. ಸೋಯಾ ಅವರೆಯು (Soy Bean) ಮುಸುಕಿನ ಜೋಳ ಬೆಳೆಯುವ ಜಮೀನುಗಳಲ್ಲಿ ಚೆನ್ನಾಗಿ ಆಗುತ್ತದೆ. ಇದರಲ್ಲಿ ಉದ್ದು, ಹೆಸರು ಮೊದಲಾದ ದ್ವಿದಳ ಧಾನ್ಯಗಳಲ್ಲಿರುವಂತೆ ಜಮೀನಿಗೆ ನೈಟ್ರೋಜನ್ ಪದಾರ್ಥವನ್ನು ಹೇರಳವಾಗಿ ಒದಗಿಸಿಕೊಡುವ ಗುಣವಿರುತ್ತಾದ್ದರಿಂದ, ಇದು ಮುಸುಕಿನ ಜೋಳ ಇತ್ಯಾದಿ ಪೈರುಗಳೊಂದಿಗೆ ಬದಲಾಯಿಸಿ ಬೆಳೆಯುವುದಕ್ಕೆ ಲಾಯಖಾಗಿರುತ್ತದೆ.—ಅಗ್ರಿಕಲ್ಚರಲ್ ಅಂಡ್ ಇಂಡಸ್ಟ್ರಿಯಲ್ ಪ್ರೋಗ್ರೆಸ್, ಅಕ್ಟೋಬರ್ ೧೯೦೯.

---

೨. ದನವಿನ ಗೊಬ್ಬರವು ಸಾರವತ್ತಾಗಿರಬೇಕಾದರೆ, ಸಗಣಿ ಮತ್ತು ಕಸವನ್ನು ಗುಂಡಿಗಳಲ್ಲಿ ತುಂಬಿಡಬೇಕು. ಕೊಳಿಯದೇ ಇನ್ನೂ ಹೊಸದಾಗಿರುವ ಸಗಣಿಯನ್ನು ಜಮೀನಿನ ಮೇಲ್ಗಡೆಯೇ ಹಾಕಿದಲ್ಲಿ, ಬಿಸಲು ಮಳೆ ತಗಲಿ ಅದರಲ್ಲಿನ ಗೊಬ್ಬರದ ಗುಣವು ಆರಿಹೋಗುವದು. ಸಗಣಿಯನ್ನು ಬೆರಣಿಮಾಡಿ ಸುಟ್ಟು ಬೂದಿಯನ್ನು ಜಮೀನಿಗೆ ಹಾಕಿದರೆ ಶೇಕಡ ೯೦ರಷ್ಟು ಗೊಬ್ಬರದ ಸಾರ ಕಮ್ಮಿಯಾಗುತ್ತೆ.—ಸೆಂಟ್ರಲ್ ಪ್ರಾವಿನ್ಸಸ್ ಅಗ್ರಿಕಲ್ಚರಲ್ ಗಜೆಟ್, ಅಕ್ಟೋಬರ್ ೧೯೦೯.

---

೩. ತೆಂಗು, ಅಡಿಕೆ, ಇತ್ಯಾದಿ ಜಾತಿಯ ಮರಗಳಿಗೆ ವಿಶೇಷ ಗಾಳಿ ಬೆಳಕು ಇಲ್ಲದಿದ್ದರೆ ಅವು ಎಂಥಾ ಶ್ರೇಷ್ಠವಾದ ಭೂಮಿಯಲ್ಲೂ ಕೂಡ ಚೆನ್ನಾಗಿ ಫಲಿಸುವದಿಲ್ಲ. ಮರಗಳು ದೂರ ದೂರವಾಗಿದ್ದಷ್ಟೂ ಫಲಬಿಡುವುದು ಹೆಚ್ಚು. ಆದರೆ ಒಂದು ತೋಟದಲ್ಲಿ ಹೀಗೆ ಶಾನೆ ದೂರ ದೂರವಾಗಿ ಇಡುವ ಪಕ್ಷದಲ್ಲಿ ಮರಗಳ ಸಂಖ್ಯೆ ಕಮ್ಮಿಯಾಗಿ ಫಸಲು ಕಡಮೆಯಾಗುವದು. ಸಾಧಾರಣವಾಗಿ ಮರದಿಂದ ಮರಕ್ಕೆ ೩೦ ಅಡಿ ಬಿಟ್ಟಿದ್ದರೆ ಸಾಕೆಂದು ತೋರುತ್ತದೆ.—ಅಗ್ರಿಕಲ್ಚರಲ್ ಅಂಡ್ ಇಣ್ಡಸ್ಟ್ರಿಯಲ್ ಪ್ರೋಗ್ರೆಸ್, ಅಕ್ಟೋಬರ್ ೧೯೦೯.

---

೪. ದಕ್ಷಿಣ ಕನ್ನಡಾ ಜಿಲ್ಲೆಯಲ್ಲಿ ಒಂದು ವಿಧವಾದ ಕಾಡು ಜಾಜಿ ಕಾಯಿಬೀಜದಿಂದ ಮೇಣದಬತ್ತಿ ಮಾಡುತ್ತಾರೆ. ಈ ಬೀಜವೂ ಮತ್ತು ಇದರಿಂದಾದ ಮೇಣದಬತ್ತಿಯೂ ೧೯೦೮ನೆ ಇಸವಿ ಡಿಶಂಬರ್ ಮಾಹೆಯಲ್ಲಿ ನಡೆದ ಬಂಗಾಳಾ ಏಷ್ಯಾಟಿಕ್ ಸೊಸೈಟಿಯ (Asiatic Society of Bengal) ಮೀಟಿಂಗಿನಲ್ಲಿ ಪ್ರದರ್ಶಿಸಲ್ಪಟ್ಟವು. ಈ ಬೀಜವು ಹೇರಳವಾಗಿ ಸಿಕ್ಕುವದಾದರೆ ಇದರಿಂದ ಎಣ್ಣೆಯನ್ನು ತೆಗೆದು ದೀಪ ಉರಿಸುವದಕ್ಕೂ ಮತ್ತು ಗೃಹಕೃತ್ಯವಲ್ಲಿ ಇನ್ನೂ ಇತರ ಕೆಲಸಗಳಿಗೂ ಉಪಯೋಗಿಸಬಹುದು.—ಅಗ್ರಿಕಲ್ಚರಲ್ ಅಂಡ್ ಇಂಡಸ್ಟ್ರಿಯಲ್ ಪ್ರೋಗ್ರೆಸ್, ಅಕ್ಟೋಬರ್ ೧೯೦೯.

V. B. Soobbiah & Sons, Printers, Bangalore.—1909.

THE MYSORE

REVENUE & AGRICULTURAL GAZETTE.

ವಾಲ್ಯುಂ ೪.] ಬುಧವಾರ, ೧೫ನೆ ಡಿಶಂಬರ್ ೧೯೦೯. [ನಂ. ೪.

Contents.

1. Dry Earth System of Manuring.
2. Cochin Agricultural and Industrial Exhibition, 1910.
3. Revenue Appeals.
4. Plague Preventive Measures.
5. Extracts from the Dewan's Dasara Address, 1909.
6. Soil Inoculation.
7. Government Proceedings.
8. Occasional Notes.
   (i) Paper Yarn. (ii) Co-operative Societies. (iii) Rice. (iv) Grain Weevil and Smut Disease.

ಅನುಕ್ರಮಣಿಕೆ.

೧. ಗಂಜಲದಲ್ಲಿ ನೆನೆದ ಮಣ್ಣನ್ನು ಗೊಬ್ಬರವಾಗಿ ಉಪಯೋಗಿಸುವ ಕ್ರಮ.
೨. ಕೊಚ್ಚಿ ವ್ಯವಸಾಯದ ಮತ್ತು ಕೈಗಾರಿಕೆ ಪ್ರದರ್ಶನ, ೧೯೧೦.
೩. ರೆವಿನ್ಯೂ ಅಪೀಲುಗಳು.
೪. ಪ್ಲೇಗು ನಿವಾರಣೆಯ ಏರ್ಪಾಡುಗಳು.
೫. ಚಾಲ್ತಿಸಾಲ್ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್‌ರವರು ಮಾಡಿದ ಉಪನ್ಯಾಸ.
೬. ಭೂಮಿಯನ್ನು ಸಾರಗೊಳಿಸುವಿಕೆ.
೭. ಸರ್ಕಾರಿ ಹುಕುಂಗಳು.
೮. ವಿವಿಧ ವೃತ್ತಾಂತಗಳು.
   (i) ಕಾಗದದಿಂದ ನೂಲು ತಯಾರಿ. (ii) ಕೋ ಆಪರೇಟಿವ್ ಸೊಸೈಟಿಗಳು. (iii) ಅಕ್ಕಿ. (iv) ಧಾನ್ಯದಿಗಳಿಗೆ ಬರುವ ನುಸಿ ಹುಳ ಮತ್ತು ಸ್ಮಟ್ ಜಾಡ್ಯ.

Dry Earth System of Manuring. *

ಗಂಜಲದಲ್ಲಿ ನೆನೆದ ಮಣ್ಣನ್ನು ಗೊಬ್ಬರವಾಗಿ ಉಪಯೋಗಿಸುವ ಕ್ರಮ.

ಈ ಕ್ರಮದಲ್ಲಿ ದನಗಳನ್ನು ಕಟ್ಟುವಕಡೆ ನೆಲದ ಮೇಲೆ ಪುಡಿಮಣ್ಣನ್ನು ಸುಮಾರು ೪—೬ ಅಂಗುಲ ದಪ್ಪಕ್ಕೆ ಹರಡಬೇಕು. ದನಗಳು ಹುಯ್ಯುವ ಗಂಜಲದಿಂದ ಈ ಮಣ್ಣು ನೆನೆಯುವದು. ಮಣ್ಣುಗಟ್ಟಿಯಾಗದೆ ಪುಡಿಪುಡಿಯಾಗಿರುವದಕ್ಕಾಗಿ ಆಗ್ಗಾಗ್ಯೆ ಕೆದರುತ್ತಿರಬೇಕು. ಒಂದು ತಿಂಗಳು ಅಥವಾ ೬ ವಾರಕ್ಕೊಂದಾವರ್ತಿ ಈ ಮಣ್ಣನ್ನು ತೆಗೆದುಹಾಕಿ ಹೊಸಮಣ್ಣನ್ನು ಹಾಸಬೇಕು. ಹಳೆಮಣ್ಣನ್ನು ಗುಂಡಿಗಳಲ್ಲಿ ಕೂಡು ಹಾಕಬಹುದು, ಇಲ್ಲವೆ ಜಮೀನುಗಳಿಗೆ ಹಾಕಿ ಉತ್ತುಬಿಡಬಹುದು. ಈ ಕ್ರಮವನ್ನು ಸರ್ಕಾರಿ ಫಾರಂ ಯಾನೆ ಮಾದರಿ ಹೊಲಗಳಲ್ಲಿ ಅನುಸರಿಸಿ ನೋಡಿದ್ದರಲ್ಲಿ ಬಹಳ ಅನುಕೂಲ ಕಂಡುಬಂದಿದೆ. ಇದೇ ಮೇರೆ ಕೆಲವು ಮುಖಂಡ ಜಮೀನುದಾರರು ಮತ್ತು ರೈತರು ಸಹ ಅಜಮಾಯಿಷಿ ನಡೆಸಿ ತುಂಬಾ ಪ್ರಯೋಜನ ಹೊಂದಿರುತ್ತಾರೆ. ಜಬ್ಬಲಪೂರ ಡಿಸ್ಟ್ರಿಕ್ಟಿನ ಒಬ್ಬ ಜಮೀನುದಾರರು ಸುಮಾರು ೧೪ ಗುಂಟೆ ತರಿ ಜಮೀನಿಗೆ ಮಳೆಗಳು ಪ್ರಾರಂಭವಾಗುತ್ತಲೆ ೫-೬ ಗಾಡಿ ಗಂಜಲದ ಮಣ್ಣನ್ನು ಹಾಕಿ ಬತ್ತವನ್ನು ನಾಟಿಮಾಡಿ ಇದು ಸ್ವಲ್ಪ ಸಾವಕಾಶವಾಗಿ ಕಟಾವಿಗೆ ಬರುವ ಜಾತಿಯ ಬತ್ತವಾದುದರಿಂದ ಪೈರಿಗೆ ಎರಡು ಸಲ ನೀರು ಕಟ್ಟಿದರು. ನಾಟಿ ಹಾಕಿದ ಕೂಡಲೆ ಭಾರಿ ಮಳೆ ಬಂದು ಪೈರು ಸ್ವಲ್ಪ ಹದಾಕಾಯಿತು. ತದನಂತರ ಹುಳುಬಿದ್ದು ಕೊಂಚ ಕೆಟ್ಟುಹೋಯಿತು. ಆದಾಗ್ಯೂ ಎಕರೆಗೆ ೭೧೫ ಸೇರಿನಂತೆ ಫಸಲು ಉತ್ಪತ್ತಿಯಾಯಿತು. ಇದೇ ತರದ ಜಮೀನಿಗೆ ದನದ ಸಗಣಿ ಮತ್ತು ಇತರ ಕಸ ಹಾಕಿ ಪೈರು ಮಾಡಿದ್ದಕ್ಕೆ, ಉತ್ಪತ್ತಿಯು ಮೇಲೆಕಂಡ ಜಮೀನಿನಲ್ಲಿ ಆದದ್ದಕ್ಕಿಂತ ಸ್ವಲ್ಪ ಹೆಚ್ಚು ಕಡಮೆ ಅರ್ಧದಷ್ಟು ಕಮ್ಮಿಯಾಗಿ ಆಗಿರುತ್ತದೆ.

ಮತ್ತೊಬ್ಬ ಜಮೀನುದಾರರು ಹತ್ತಿ ಹೊಲಕ್ಕೆ ಈ ಮಣ್ಣು ಗೊಬ್ಬರವನ್ನು ಹಾಕಿ ಪರೀಕ್ಷಿಸಿದರಂತೆ. ಸುಮಾರು ೫೦ ಗಾಡಿ ಮಣ್ಣನ್ನು

* ಸೆಂಟ್ರಲ್ ಪ್ರಾವಿನ್ಸಸ್ ಅಗ್ರಿಕಲ್ಚರಲ್ ಗಜೆಟ್.-ಅಕ್ಟೋಬರ್ ೧೯೧೯.

ದನದಕೊಟ್ಟಿಗೆಯಲ್ಲಿ ಹಾಸಿ ಇದು ಗಟ್ಟಿಯಾಗದಹಾಗೆ ಪ್ರತಿದಿನವು ಚಳಿಗ್ಗೆ ಕೆದರುತ್ತಿದ್ದರು. ಹೀಗೆ ಮಣ್ಣನ್ನು ಸುಮಾರು ೬ ತಿಂಗಳುವರಿಗೂ ಕೊಟ್ಟಿಗೆಯಲ್ಲೇ ಬಿಟ್ಟಿದ್ದು ಅನಂತರ ಬೇಸಾಯದ ಕಾಲದಲ್ಲಿ ಹೊಲಕ್ಕೆ ಸಾಗಿಸಿದರು. ಪೈರು ಬಹಳ ಚೆನ್ನಾಗಿ ಬಂದಿತ್ತಂತೆ. ಆದರೆ ಮುಂದೆ ಇಬ್ಬನಿ ಬಿದ್ದು ಕಡೇಸಲಕ್ಕೆ ಬಹಳ ಕೊಂಚ ಹತ್ತಿ ಸಿಕ್ಕಿತು. ಆದಕಾರಣ ಎಕರೆಗೆ ೪೦೦ ಪೌಂಡು ಹತ್ತಿ ಉತ್ಪತ್ತಿಯಾಯಿತು. ಹೀಗೆ ಇಬ್ಬನಿ ಬೀಳದೇ ಇದ್ದಿದ್ದರೆ ಇದಕ್ಕೆ ಎರಡರಷ್ಟು ಹುಟ್ಟುವಳಿ ಯಾಗುತ್ತಿತ್ತಂತೆ. ಇದೇತರದ ಮತ್ತೊಂದು ತಾಕು ಜಮೀನಿಗೆ ೧೪-೨೦ ಗಾಡಿ ದನದ ಸಗಣಿ ಹಾಕಿತ್ತು. ಇದೂ ಕೂಡ ಇಬ್ಬನಿ ಹೊಡತಕ್ಕೆ ಸಿಕ್ಕಿತು. ಇದರಲ್ಲಿ ೩೦೦ ಪೌಂಡು ಹತ್ತಿ ಮಾತ್ರ ಹುಟ್ಟುವಳಿಯಾಯಿತು.

ಇನ್ನೊಬ್ಬರು ಈ ಕ್ರಮವನ್ನನುಸರಿಸಿ ಗೋಧಿ ಪೈರನ್ನು ಮಾಡಿದರು. ಒಂದು ಎಕರೆಗೆ ೨೦ ಗಾಡಿ ಗೊಬ್ಬರದ ಮಣ್ಣನ್ನು ಹಾಕಿ ಪೈರಿಗೆ ನಲ್ಕಾವರ್ತಿ ನೀರು ಕಟ್ಟಿದ್ದರಂತೆ. ಹುಟ್ಟುವಳಿ ಸುಮಾರು ೭೧೦ ಸೇರು ಆಯಿತು. ಬೇರೊಂದು ತಾಕಿಗೆ ಎಕರೆಗೆ ೩೨ ಗಾಡಿಯಂತೆ ಕೂಳೆತ ಸೊಪ್ಪನ್ನು ಹಾಕಿ ಪೈರು ಮಾಡಿದ್ದಕ್ಕೆ ಇಷ್ಟೇ ಹುಟ್ಟುವಳಿಯಾಯಿತಂತೆ.

ಈ ಗೊಬ್ಬರವನ್ನು ಮಳೆಗಳು ಶುರುವಾಗುವದನ್ನು ನೋಡಿಕೊಂಡು ಜಮೀನಿಗೆ ಹಾಕಬೇಕು. ಇಲ್ಲದೆ ಮುಂದಾಗಿಯೇ ಹಾಕಿದರೆ ಗೊಬ್ಬರದ ಸಾರ ಒಣಗಿ ಹೋಗುತ್ತದೆ. ಮಳೆ ಬಿದ್ದರೆ ಗೊಬ್ಬರದ ಮಣ್ಣೆಲ್ಲಾ ಕೊಚ್ಚಿ ಹೋಗುವುದರಿಂದ ಇಳಿಜಾರಾಗಿರುವ ಭೂಮಿಯು ಅಷ್ಟು ಒಳ್ಳೇದಲ್ಲ. ಕುಂಬಳಕಾಯಿ, ಸೋರೆಕಾಯಿ, ಪಡವಲಕಾಯಿ, ಮತ್ತು ಕೋಸುಗಡ್ಡೆ ಇತ್ಯಾದಿ ತರಕಾರಿಗಳಿಗೆ ಈ ಗೊಬ್ಬರವನ್ನು ಹಾಕಿದರೆ ಕಾಯಿಗಳು ಬಹಳ ಗಾತ್ರವಾಗಿ ಬೆಳೆಯುತ್ತವೆ.

Cochin Agricultural & Industrial Exhibition, 1910.

ಕೊಚ್ಚಿ ವ್ಯವಸಾಯದ ಮತ್ತು ಕೈಗಾರಿಕೆ ಪ್ರದರ್ಶನ, ೧೦.

ಈ ಪ್ರದರ್ಶನವು ತ್ರಿಚೂರು ಪಟ್ಟಣದಲ್ಲಿ ಬರುವ ಜನವರಿ ೨೪ನೆ

ತಾರೀಖಿನ ದಿನ ಉಪಕ್ರಮವಾಗಿ ಅದೇಮಾಹೆ ೩೧ಕ್ಕೆ ಸಮಾಪ್ತಿಯಾಗುತ್ತದೆ. ಪ್ರದರ್ಶನಕಾಲದಲ್ಲಿ ಕೈಗಾರಿಕೆ, ಭೂವ್ಯವಸಾಯ, ನೂತನ ವ್ಯವಸಾಯ ಮುಟ್ಟುಗಳು, ದನಗಳ ಸಾಕಾಣಿಕೆ ಇತ್ಯಾದಿ ವಿಷಯಗಳನ್ನು ಕುರಿತು ಮಲಯಾಳ ಭಾಷೆಯಲ್ಲಿ ಉಪನ್ಯಾಸಗಳು, ಪ್ರತ್ಯಕ್ಷ ನಿದರ್ಶನಗಳು ಮತ್ತು ಉಳುಮೆ, ನೇಯಿಗೆ ಕೆಲಸಗಳಲ್ಲಿ ಪ್ರೋಟಾಪ್ರೋಟಿ, ಇವುಗಳೆಲ್ಲಾ ನಡೆಯುತ್ತವೆ.

ಇದೇ ಸಮಯದಲ್ಲಿ ಒಂದು ದನಗಳ ಪ್ರದರ್ಶನವೂಕೂಡ ನಡೆಯುವದು.

ಪ್ರದರ್ಶನಕ್ಕೆ ವಸ್ತುಗಳನ್ನು ಕಳುಹಿಸಲಿಚ್ಛಿಸುವವರು ಬರುವ ಜನವರಿ ೧೨ರ ತಾರೀಖಿನೊಳಗಾಗಿ ತಿರಚೂರಿನಲ್ಲಿರುವ 'ಅಗ್ರಿಕಲ್ಚರಲ್ ಸೂಪರಿಂಟೆಂಡೆಂಟ್' (Agricultural Superintendent) ಎಂಬ ಅಧಿಕಾರಿಗಳಿಗೆ ದರಖಾಸ್ತುಗಳನ್ನು ರವಾನಿಸಬಹುದಲ್ಲದೆ ಇನ್ನೂ ಹೆಚ್ಚಿಗೆ ತಪಶೀಲುಗಳು ಬೇಕಾದರೂ ಸದರಿ ಹುದ್ದೇದಾರರಿಗೆ ಸೀದಾ ಬರೆದು ತಿಳಿದುಕೊಳ್ಳಬಹುದು.

ಪ್ರದರ್ಶಿಸಬಹುದಾದ ವಸ್ತುಗಳನ್ನು ತಪಶೀಲಾಗಿ ನಮೂದಿಸಲು ಸ್ಥಳ ಸಾಲದ್ದರಿಂದ ಅವುಗಳ ಮುಖ್ಯ ತರಗತಿಯನ್ನು ಮಾತ್ರ ಇಲ್ಲಿ ಸಂಕ್ಷೇಪವಾಗಿ ಕಾಣಿಸಿರುತ್ತೇವೆ.—

(a) ಭೂವ್ಯವಸಾಯದಿಂದಾಗುವ ಪದಾರ್ಥಗಳು.—

Iನೆ ತರಗತಿ.—ತರಿ ಮತ್ತು ಖುಷ್ಕಿ ಜಮೀನಿಗೆ ಸಂಬಂಧಪಟ್ಟವು.

IIನೆ ತರಗತಿ.—ಬಾಗಾಯಿತು ಜಮೀನಿನವು.

IIIನೆ ತರಗತಿ.—ಸಸ್ಯಗಳು ಮತ್ತು ಹಣ್ಣು ಹಂಪಲುಗಳು.

IVನೆ ತರಗತಿ.—ನಾರುಗಳು.

Vನೆ ತರಗತಿ.—ಮೇವಾಗತಕ್ಕ ಗಿಡಗಳು.

VIನೆ ತರಗತಿ.—ಸಕ್ಕರೆ, ಜೇನು ತುಪ್ಪ, ಜೇನುಮೇಣ ವಗೈರೆ.

VIIನೆ ತರಗತಿ.—ಗೊಬ್ಬರಗಳು.

(b) ಜಂಗ್ಲಿ ಪದಾರ್ಥಗಳು.

(c) ವ್ಯವಸಾಯದ ಮುಟ್ಟುಗಳು ಮತ್ತು ಯಂತ್ರಗಳು.

(d) ನೇಯಿಗೆ ಮತ್ತು ಇತರ ಕೈಗಾರಿಕೆ ಸಂಬಂಧಪಟ್ಟ ಪದಾರ್ಥಗಳು.

(e) ಡೈರಿ (ವಿಾನು ಹಿಡಿಯುವ) ಉಪಕರಣಗಳು.

(f) ದನಗಳು.

Revenue Appeals.

ರೆವಿನ್ಯೂ ಅಪೀಲುಗಳು.

೧೯೦೮—೯ನೆ ಇಸವಿಯ ಅಪೀಲು ನಂಬರು ೧೧೬.

ಅಪೀಲು ವಾದಿ.—ವೀರಪ್ಪ.

ಕೇಸಿನ ವಿದ್ಯಮಾನ.—ಅಪೀಲು ವಾದಿಯು ಒಂದು ಸರ್ಕಾರಿ ಖರಾಬು ಜವಿಾನನ್ನು ದರಖಾಸ್ತು ಹರಾಜಿನಲ್ಲಿ ಪಡೆದನು. ಆದರೆ ಹರಾಜು ನಡುವಳಿಕೆ ಕಟ್ಟನ್ನು ಅಸಿಸ್ಟೆಂಟ್ ಕವಿಾಷನರವರಲ್ಲಿಗೆ ರವಾನಿಸುವದಕ್ಕೆ ಮೊದಲು ಅಮಲ್ದಾರು ಜವಿಾನನ್ನು ಖುದ್ದಾಗಿ ನೋಡಿ, ಇವರಲ್ಲಿ ಒಂದು ಇಳಿಯುವ ಭಾವಿ ಮತ್ತು ಕೆಲವು ಮರಗಳು ಇರುವುದರಿಂದ ಹರಾಜನ್ನು ರದ್ದುಮಾಡಬೇಕೆಂದು ಶಿಫಾರಸು ಮಾಡಲು, ಅಸಿಸ್ಟೆಂಟ್ ಕವಿಾಷನರವರು ಸದರಿಯಂತೆ ಹರಾಜನ್ನು ಕ್ಯಾನ್ಸಲ್ ಮಾಡಿ, ಜವಿಾನನ್ನು ಜನಗಳ ಉಪಯೋಗಕ್ಕೋಸ್ಕರ ರಿಜರ್ವ್ ಮಾಡತಕ್ಕದ್ದೆಂದು ಹುಕುಂ ಮಾಡಿದರು. ಅಪೀಲಿನಲ್ಲಿ ಡೆಪ್ಯುಟಿ ಕವಿಾಷನರವರೂ ಕೂಡ ಈ ಹುಕುಮನ್ನೇ ಒಪ್ಪಿಕೊಂಡು ಗ್ರಾಮ ಲೆಖ್ಖಗಳಲ್ಲಿ ಇದರಂತೆ ಷರಾ ಬರೆದುಕೊಳ್ಳಬೇಕೆಂದು ಅಪ್ಪಣೆ ಮಾಡಿದರು.

ಗೌರ್ನಮೆಂಟಿನವರ ತೀರ್ಮಾನ.—ಈ ಸಣ್ಣ ತಾಕು ಜವಿಾನನ್ನು ರಿಜರ್ವ್ ಮಾಡಲು ತೋರಿಸಿರುವ ಕಾರಣಗಳು ಸರಿಯಾಗಿರುತ್ತವೆಯಾಗಿ ಈ ಅಪೀಲನ್ನು ಡಿಸ್ಮಿಸ್ ಮಾಡಿರುತ್ತೆ.

೧೯೦೮—೦೯ನೆ ಇಸವಿಯ ಅಪೀಲು ನಂಬರು ೧೨೪.

ಆಪೀಲು ವಾದಿ.		ಅಪೀಲು ಪ್ರತಿವಾದಿ.
ಚಂದ್ರಶೇಖರಯ್ಯ.	*vs*	ಸೀತಾರಾಮಯ್ಯ.

ಕುಣಿಗಲ್ ತಾಲ್ಲೂಕು ಕಾಯಂಗುತ್ತಾ ಸೂಳೆಕೆಪ್ಪೆ ಗ್ರಾಮದ ಶಾನಭೋಗಿ ಹಕ್ಕಿನ ವಿಚಾರ.—

ಕೇಸಿನ ವಿದ್ಯಮಾನ.—೧೮೯೭ನೆ ಇಸವಿ ಎಪ್ರಿಲ್‌ಮಾಹೆ ೭ನೆ ತಾರೀಖಿನಲ್ಲಿ ಸೀತಾರಾಮಯ್ಯನೆಂಬಾತನು ತಾನು ಕಾಯಂಗುತ್ತಾ ಗ್ರಾಮದ ಹಕ್ಕುದಾರ ಶ್ಯಾನುಭೋಗನಾಗಿದ್ದಾಗ್ಯೂ ಕೂಡ ಜೋಡೀದಾರನು ತನಗೆ ಕೆಲಸ ತಪ್ಪಿಸಿರುತ್ತಾನೆಂತಲೂ, ತನ್ನ ಪೂರ್ವಿಕರು ಸದರಿ ಗ್ರಾಮದ ರಿಜಷ್ಟರುದಾರ ಶ್ಯಾನುಭೋಗರಾಗಿದ್ದು, ತನ್ನ ಸಹೋದರ ಲಿಂಗಪ್ಪಯ್ಯನೆಂಬುವನು ೧೮೮೧ರಿಂದ ೧೮೮೭ರ ವರೆಗೂ ಗ್ರಾಮದ ಶ್ಯಾನುಭೋಗನಾಗಿದ್ದುದಲ್ಲದೆ ತಾನೂ ಸಹ ೧೮೮೭ರಿಂದ ೧೮೯೪ರ ವರೆಗೆ ಕೆಲಸ ನೋಡುತ್ತಿದ್ದನೆಂತಲೂ ತುಂಕೂರು ಡಿಸ್ಟ್ರಿಕ್ಟು ಎಕ್ಸ್ಟ್ರಾ ಅಸಿಸ್ಟೆಂಟು ಕಮಿಷನರವರಲ್ಲಿ ಅರ್ಜಿ ಕೊಟ್ಟನು. ಈ ಅರ್ಜಿಯು ರಿಪೋರ್ಟು ಬಗ್ಗೆ ಅಮಲ್ದಾರ್ರವರಿಗೆ ರವಾನೆ ಮಾಡಲ್ಪಟ್ಟಿತು. ಜೋಡೀದಾರನು ೧೮೯೭ನೆ ಜೂನ್ ತಿಂಗಳು ೮ರಲ್ಲಿ ಅಮಲ್ದಾರ್ರವರ ರೂಬು ರೂಬು ಕೊಟ್ಟ ಹೇಳಿಕೆಯಲ್ಲಿ, ಈ ಸೀತಾರಾಮಯ್ಯನು ಸದರಿ ಗ್ರಾಮದ ಶ್ಯಾನುಭೋಗನಾಗಿರಲಿಲ್ಲವೆಂತಲೂ ಮತ್ತು ತಾನು ಗ್ರಾಮಾಡಳಿತಗಳನ್ನು ನೋಡಿಕೊಳ್ಳುವ ಬಗ್ಗೆ ಚನ್ನಪ್ಪನೆಂಬುವನನ್ನು ಮೊಕರೂರು ಮಾಡಿರುವದಾಗಿಯೂ ಬಯಾನುಮಾಡಿಕೊಂಡಿರುತ್ತಾನೆ. ಸೀತಾರಾಮಯ್ಯನು ಹಾಜರು ಮಾಡಿದ ಲೆಖ್ಖಗಳು ಮತ್ತು ಇತರ ರುಜುವಾತುಗಳಿಂದ ಈತನೇ ಹಕ್ಕುದಾರ ಶ್ಯಾನುಭೋಗನೆಂದು ತೋರುತ್ತದೆಂತ ಅಮಲ್ದಾರು ರಿಪೋರ್ಟು ಮಾಡಿದ್ದರಮೇಲೆ ಡೆಪ್ಯುಟಿ ಕಮಿಷನರವರು ಕ್ರಮವಾದ ರಿಜಿಸ್ಟರುದಾರ ಶ್ಯಾನುಭೋಗನನ್ನು ನೌಕರಿಯಿಂದ ಕಿತ್ತು ಹಾಕಲು ಖಾಯಂ ಗುತ್ತಾದಾರನಿಗೆ ಅಧಿಕಾರವಿಲ್ಲವೆಂತಲೂ ಮತ್ತು ಸೀತಾರಾಮಯ್ಯನಿಗೆ ಶ್ಯಾನುಭೋಗಿಯನ್ನು ತಿರುಗಿ ಕೊಟ್ಟು, ಅವನಿಗೆ ಸಲ್ಲಬೇಕಾದ ಪ್ರೇಟಿಗೆಯನ್ನು ಖಾಯಂ ಗುತ್ತಾದಾರನು ಕೊಡಬೇಕೆಂತಲೂ ಹುಕುಂ ಮಾಡಿದರು.

ಗೌರ್ನಮೆಂಟಿನವರ ತೀರ್ಮಾನ.—ಶ್ಯಾನುಭೋಗಿ ನೌಕರಿಗೆ ವಂಶಪರಂಪರೆಯಾದ ಹಕ್ಕು ಅಪೀಲು ಪ್ರತಿವಾದಿಗೆ ಏನೂ ಇರುವದಿಲ್ಲವೆಂದು ಇನಾಂದಾರನು ಹೇಳುವದಯುಕ್ತ, ಈ ವಿಚಾರವನ್ನು ಕ್ರಮವಾದ ದಾವೆಯ ಮೂಲಕ ಇತ್ಯರ್ಥ ಮಾಡಿಕೊಳ್ಳುವದೇ ಸರಿಯಾದ ಮಾರ್ಗವಾಗಿ ತೋರುತ್ತಾದ್ದರಿಂದ, ಡೆಪ್ಯುಟಿ ಕಮಿಷನರವರ ಹುಕುಮನ್ನು ರದ್ದು ಮಾಡಿರುತ್ತೆ.

———o———

Plague Preventive Measures.

ಪ್ಲೇಗು ನಿವಾರಣೆಯ ಏರ್ಪಾಡುಗಳು.

ಪ್ಲೇಗ್ ರೋಗದ ನಿವಾರಣೆ ವಿಷಯದಲ್ಲಿ ಪ್ರೊಫೆಸರ್ ಕೋಷ್ ಸಾಹೇಬರವರು ಬರೆದಿರುವ ಅಭಿಪ್ರಾಯದ ಮುಖ್ಯಾಂಶಗಳೇನೆಂದರೆ:—

ಪ್ಲೇಗ್ ರೋಗದ ವ್ಯಾಪನೆಗೆ ಇಲಿಯೇ ಮುಖ್ಯ ಕಾರಣವಾಗಿರುತ್ತೆ. ಆದುದರಿಂದ ಈ ಅಭಿಪ್ರಾಯದ ಆಧಾರದ ಮೇಲೆಯೇ ಪ್ಲೇಗ್ ನಿವಾರಣೆಯ ಏರ್ಪಾಡುಗಳನ್ನು ನಾವು ಮಾಡಬೇಕು. ಮೊದಲು ಜರ್ಮನ್ ದೇಶದವರು ಮಾಡಿದಂತೆ ಇಲಿಗಳನ್ನು ನಾಶಪಡಿಸುವದಕ್ಕಾಗಿ ಪ್ರೋತ್ಸಾಹ ಕೊಡುವದೇ ಅತ್ಯಂತ ಉತ್ತಮವಾದ ಏರ್ಪಾಟು. ಇವುಗಳು ಬಹು ಜಾಗ್ರತೆಯಾಗಿಯೂ ತುಂಬಾ ವಿಶೇಷವಾಗಿಯೂ ವೃದ್ಧಿಯಾಗುತ್ತವೆಯಾದಕಾರಣ ಇವುಗಳನ್ನು ಕೊಲ್ಲುವುದಕ್ಕೆ ಯಂತ್ರಸಾಧನೋಪಾಯಗಳು, ವಿಷ ಪದಾರ್ಥ ಪ್ರಯೋಗ, ವಗೈರೆ ಮಾನುಷ ಪ್ರಯತ್ನಗಳಿಂದ ವಿಶೇಷ ಶ್ರಮವೂ, ದುಬಾರಿ ಖರ್ಚೂ ಉಂಟಾಗುವದೇ ಹೊರ್ತು ಸದರಿ ಶ್ರಮಕ್ಕೂ ಖರ್ಚಿಗೂ ತಕ್ಕ ಪ್ರಯೋಜನವೇನೋ ಉಂಟಾಗುವುದಿಲ್ಲ.

ಇಲಿಗಳನ್ನು ನಾಶಪಡಿಸಬೇಕಾದರೆ, ಇಲಿಗೆ ಸ್ವಾಭಾವಿಕವಾಗಿ ಯಾವ ಜೀವ ಜಂತುಗಳು ವೈರಿಗಳು ಎಂಬುವದನ್ನು ಕಂಡುಹಿಡಿದು ಅವುಗಳನ್ನು ಈ ಕೆಲಸದಲ್ಲಿ ಸರಿಯಾಗಿ ಉಪಯೋಗಿಸಬೇಕು. ಇಲಿಗೆ ಬೆಕ್ಕು ಸಾಮಾನ್ಯವಾಗಿ ಜಾತಿವೈರಿ ಎಂಬ ಅಂಶವು ಎಲ್ಲರಿಗೂ ಪೂರ್ವದಿಂದಲೂ ಚನ್ನಾಗಿ ತಿಳಿದೇ ಇರುತ್ತದೆ. ಬೆಕ್ಕುಗಳನ್ನು ಸರಿಯಾಗಿ ತರಬೇತು

ಮಾಡಿದಪಕ್ಷದಲ್ಲಿ ಇವು ನಮಗೆ ಯಾವ ತೊಂದರೆಯನ್ನೂ ಮಾಡುವದಿಲ್ಲ. ಪ್ರಕೃತ ಕಾರ್ಯಕ್ಕೆ ಎಲ್ಲಾ ವಿಷಯದಲ್ಲಿಯೂ ತಕ್ಕವುಗಳಾಗಿರುತ್ತವೆ.

ಆದರೆ ಈ ಕೆಲಸಕ್ಕಾಗಿ ಬೆಕ್ಕುಗಳನ್ನು ಉಪಯೋಗಿಸುವದರಲ್ಲಿ ನಾವು ಯಾವದಾದರೂ ಒಂದು ಕ್ರಮವಾದ ಏರ್ಪಾಡನ್ನು ನಿರ್ಧರಿಸಿ ಅದರಂತೆ ಒಂದೇರೀತಿಯಾಗಿ ಕ್ರಮವರಿತು ನಡಿಯಬೇಕು; ಹೇಗೆಂದರೆ:—

೧. ಪ್ರತಿ ಮನೆಯಲ್ಲಿಯೂ ಕೆಲವು ಬೆಕ್ಕುಗಳನ್ನು ಇಟ್ಟುಕೊಳ್ಳಬೇಕೆಂದು ಕಾನೂನನ್ನು ಏರ್ಪಡಿಸಿ ಪೋಲೀಸಿನವರು ಪದೇ ಪದೇ ಈ ವಿಷಯವನ್ನು ಅಜಮಾಯಿಷಿ ಮಾಡುವಂತೆ ಮಾಡುವದು.

೨. ಇಲಿಗಳನ್ನು ಹಿಡಿಯುವದರಲ್ಲಿ ಶಕ್ತವಾದವುಗಳೆಂದು ನಿರ್ಧರಿಸಲ್ಪಟ್ಟ ಬೆಕ್ಕುಗಳನ್ನು ತರುವವರಿಗೆ ಇನಾಮು ಕೊಡುವದರ ಮೂಲಕ, ಅಂಥಾ ಬೆಕ್ಕುಗಳನ್ನು ದೊರಕಿಸಿಕೊಳ್ಳುವುದು.

೩. ಮುಖ್ಯವಾಗಿ ಇಲಿಗಳನ್ನು ಹಿಡಿಯುವದರಲ್ಲಿ ವಿಶೇಷ ಚಾತುರ್ಯವುಳ್ಳ ತರಹೆಯ ಬೆಕ್ಕುಗಳನ್ನು ಕಂಡುಹಿಡಿಯುವದಕ್ಕಾಗಿ ಈ ಭೂಮಂಡಲದಲ್ಲೆಲ್ಲಾ ಹುಡುಕಿ ಅವುಗಳನ್ನು ಹೊಸದಾಗಿ ಇಲ್ಲಿಗೆತಂದು ಸಾಕಿ ವೃದ್ಧಿಪಡಿಸುವದಕ್ಕೂ, ಸಹಾ ಪ್ರೋತ್ಸಾಹ ಕೊಡುವದು.

೪. ಒಳ್ಳೇಜಾತಿಯ ಬೆಕ್ಕುಗಳನ್ನು ಸಾಕುವವಿಷಯದಲ್ಲಿ ಜನಗಳಿಗೆ ಆಸಕ್ತಿಯನ್ನು ಹೆಚ್ಚಿಸುವದಕ್ಕಾಗಿ, ಕುದುರೆಗಳ ಮತ್ತು ದನಗಳ ಪ್ರದರ್ಶವನ್ನು ನಡಿಸುತ್ತಿರುವಂತೆ, ಬೆಕ್ಕುಗಳ ಪ್ರದರ್ಶನವನ್ನು ನಡಿಸುವದು.

೫. ಪ್ಲೇಗು ವ್ಯಾಧಿಯ ಸೋಂಕು ತಗಲಿದ ಸಮುದ್ರತೀರ ಪಟ್ಟಣಗಳಿಗೆ ಹೋಗುವ ಹಡಗುಗಳಲ್ಲಿ ಕೆಲವು ಸಂಖ್ಯೆಯ ಬೆಕ್ಕುಗಳನ್ನು ತೆಗೆದುಕೊಂಡು ಹೋಗಬೇಕೆಂತ ನಿರ್ಬಂಧಪಡಿಸಿ, ಹಡಗುಗಳ ವಜ್ಜೆಗೆ ತಕ್ಕಹಾಗೆ ಬೆಕ್ಕುಗಳ ಸಂಖ್ಯೆಯನ್ನು ಗೊತ್ತುಮಾಡುವದು.

೬. ಇಲಿಗಳು ಪದೇಪದೇ ಸಂಚರಿಸತಕ್ಕ, ಮೇಲಿನ ಅಂತಸ್ತು ಮತ್ತು ಇತರ ಸ್ಥಳಗಳಲ್ಲಿ ಬೆಕ್ಕುಗಳು ಪ್ರವೇಶ ಮಾಡುವದಕ್ಕೆ ಅವಕಾಶವಿರುವಷ್ಟು ದೊಡ್ಡದಾಗಿ ರಂಧ್ರಗಳನ್ನು ಕಟ್ಟಡಗಳಲ್ಲಿ ಇಡಬೇಕೆಂತ ಕಟ್ಟಡಗಳ ನಿಬಂಧನೆಗಳಲ್ಲಿ ಏರ್ಪಡಿಸುವುದು.

೭. ಪ್ಲೇಗು ವ್ಯಾಧಿಯು ತಗಲಿದ ಅಥವಾ ತಗಲಬಹುದೆಂಬ ಭಯವಿರುವ ಡಿಸ್ಟ್ರಿಕ್ಟುಗಳಿಗೇನೆ ಪ್ರತ್ಯೇಕವಾಗಿ ಬೆಕ್ಕುಗಳ ಸಮೂಹವನ್ನು ಏರ್ಪಡಿಸಿ ಆಗಿಂದಾಗ್ಯೆ ಅವುಗಳನ್ನು ಒಂದಕ್ಕೊಂದಕ್ಕೆ ಸಂಬಂಧವಿಲ್ಲದಂತೆ ಪ್ರತ್ಯೇಕಪಡಿಸಿಟ್ಟು, ಅವುಗಳಲ್ಲಿ ಪ್ಲೇಗು ಇರುವದನ್ನು ಇಲ್ಲದ್ದನ್ನು ನಿಶ್ಚೈಸುವದು.

ಪ್ಲೇಗು ವ್ಯಾಧಿಯ ನಿರೋಧಕಾರ್ಯಕ್ಕೆ ಬೆಕ್ಕುಗಳನ್ನು ಉಪಯೋಗಿಸುವ ವಿಷಯದಲ್ಲಿ, ಸುಮಾರಾಗಿ ತಪಶೀಲ್ವಾರಾಗಿ ಕೊಟ್ಟಿರುವ ಮೇಲಿನ ಕ್ರಮವನ್ನು ಸಾಧಾರಣ ಮಸೂದೆಯಂತಾ ತಿಳಿಯಬೇಕು. ಈ ಪದ್ಧತಿಯನ್ನು ಜಾರಿಗೆ ತರುವದು ಅತಿ ಸುಲಭವಾಗಿದೆ ಮತ್ತು ಇದಕ್ಕೆ ಖರ್ಚು ವಿಶೇಷವಾಗುವುದಿಲ್ಲ. ಇದೂ ಅಲ್ಲದೆ ಇದರಿಂದ ಉಂಟಾಗುವ ಪ್ರಯೋಜನವು ಕೆಲವು ಕಾಲದವರೆಗೆ ಹಂಗಾಮಿಯಾಗಿ ಇರತಕ್ಕದ್ದಲ್ಲ. ಇಲಿಗಳ ವಂಶವನ್ನೇ ನಿರ್ಮೂಲ ಮಾಡಬೇಕೆಂದಿರುವ ನಮ್ಮ ಉದ್ದೇಶವನ್ನು ಸಹಾ ಆಖೈರಿನಲ್ಲಿ ನೆರವೇರಿಸಿಕೊಳ್ಳಬಹುದಾಗಿರುತ್ತೆ. ಮತ್ತು ಪ್ಲೇಗು ರೋಗವು ವ್ಯಾಪಿಸಿರುವ ಕಾಲದಲ್ಲಿ ಇಲಿಗಳನ್ನು ಅಜಮಾಯಿಷಿಮಾಡುವ ತೊಂದರೆಯೂ ಸಹಾ ಕಮ್ಮಿಯಾಗುತ್ತದೆ. ಇಲಿಗಳನ್ನು ತಿಂದು ಜೀವಿಸುತ್ತಿರುವಂಥ ಬೆಕ್ಕುಗಳನ್ನು ಆಗ್ಯಾಗ್ಯೆ ಪ್ರತ್ಯೇಕಪಡಿಸಿ ಅವುಗಳನ್ನು ಅಜಮಾಯಿಷಿಯಲ್ಲಿಟ್ಟರೆ, ಪ್ಲೇಗು ರೋಗ ವ್ಯಾಪಿಸುತ್ತದೆಂಬ ಭಯವನ್ನು ಸಹಾ ನಾವು ನಿವಾರಣೆ ಮಾಡಿದಂತೆಯಾಗುವದಲ್ಲದೆ, ಈ ರೋಗವು ಎಷ್ಟರವರೆಗೆ ವ್ಯಾಪಿಸಿರುತ್ತದೆ ಎಂಬ ವಿಷಯವನ್ನು ಸರಿಯಾಗಿ ನಿರ್ಧರಿಸಿ ತಿಳಿದುಕೊಳ್ಳುವದಕ್ಕೂ ಸಹಾ ಈ ಉಪಾಯವು ಅನುಕೂಲಿಸುತ್ತದೆ.

ಪ್ಲೇಗು ಜಾಡ್ಯದ ನಿವಾರಣೆಗೋಸ್ಕರ ಇಲಿಗಳನ್ನು ನಾಶಮಾಡತಕ್ಕ ವಿಷಯದಲ್ಲಿ ಮನುಷ್ಯ ಕಲ್ಪಿತವಾದ ಸಾವಿರಾರು ಸಾಧನಗಳು ಕಾರ್ಯ ಸಾಧಕತ್ವ ವಿಷಯದಲ್ಲಿ ದೈವ ನಿರ್ಮಿತವಾದ ಒಂದು ಸಾಧನೆಗೂ ಕೂಡಾ ಸಮವಲ್ಲವಾದಕಾರಣ, ನಮ್ಮ ಕಾರ್ಯ ಸಾಧನೆಗೆ ಬೆಕ್ಕುಗಳನ್ನು ಉಪಯೋಗಿಸಿಕೊಳ್ಳುವದೇ ಅತ್ಯಂತ ಪ್ರಯೋಜನಕಾರಿಯಾದ ಉಪಾಯವಾಗಿರುತ್ತೆ.

Extracts from the Dewan's Dasara Address, 09.

ಚಾಲ್ತಿಸಾಲ್ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನರವರು ಮಾಡಿದ ಉಪನ್ಯಾಸ.

ಕ್ಷಾಮ ಪರಿಹಾರ ಏರ್ಪಾಡುಗಳು.

ಕಂದಾಯವನ್ನು ಸೋಡಿಬಿಟ್ಟದ್ದು ಮತ್ತು ವಸೂಲಿಯನ್ನು ಹಂಗಾಮಿಯಾಗಿ ನಿಲ್ಲಿಸಿದ್ದು.

ದುರ್ಭಿಕ್ಷಪ್ರಾಪ್ತವಾಗಿದ್ದ ಪ್ರದೇಶಗಳಲ್ಲಿ ಹುಲ್ಲುಬನ್ನಿ ಮೊಬಲಗನ್ನೂ, ೮ ಆಣೆ ಅಥವಾ ಅದಕ್ಕೆ ಕಮ್ಮಿ ಮೊಹತರ್ಫಾ ತೆರಿಗೆಯನ್ನು ಕೊಡುತ್ತಿದ್ದ ಬಹುಮಂದಿ ಬಗರ್ ಜಿರಾಯಿತಿದಾರರಿಗೆ ಮೊಹತರ್ಫಾ ಕಂದಾಯವನ್ನೂ ಮಾಫ್ ಮಾಡಲಾಯಿತು. ನಾಲ್ಕಾಣೆ ಬೆಳಗಿಂತಲೂ ಹೆಚ್ಚಾಗಿ ಬೆಳೆ ಆಗದ ಎಲ್ಲಾ ತರೀ ಜಮೀನುಗಳಮೇಲೂ ಅರ್ಧಕಂದಾಯವನ್ನು ಮಾಫ್ ಮಾಡಿತು. ಹಾಗೆಯೇ ನಾಲ್ಕಾಣೆ ಬೆಳೆಗಿಂತಲೂ ಜಾಸ್ತಿ ಫಸಲು ಆಗದಿದ್ದ ಖುಷ್ಕಿ ಜಮೀನುಗಳ ವಿಷಯದಲ್ಲಿಯೂ ಅರ್ಧ ಕಂದಾಯವನ್ನು ಮಾತ್ರವೇ ವಸೂಲ್ಮಾಡಿ ಬಾಕಿ ಅರ್ಧವನ್ನು ಮುಂದಿನ ವರ್ಷದಲ್ಲಿ ವಸೂಲ್ಮಾಡಬಹುದೆಂದು ಹುಕುಂ ಕೊಟ್ಟಿತು.

ಬೆಳೆಗಳಸ್ಥಿತಿ ಈ ರೀತಿ ಇರಲು ಎಲ್ಲೆಲ್ಲಿಯೂ ೧೯೦೯ನೆ ಇಸವಿ ಏಪ್ರಿಲ್ ಮಾಹೆಯಲ್ಲಿ ಸರ್ವರೂ ಆತುರದಿಂದ ಬಯಸುತ್ತಿದ್ದ ಮಳೆಯು ಸ್ವಲ್ಪ ಮಟ್ಟಿಗೆ ಬಿದ್ದು ಕಾಲಸ್ಥಿತಿಯು ಉತ್ತಮವಾಗುತ್ತಾ ಬಂದುದರಿಂದ ಜನಗಳಿಗೆ ಸಂತೋಷ ಉಂಟಾಯಿತು. ಹಿಂದಣ ಸಂವತ್ಸರದ ಮೇ ಮಾಹೆಯಲ್ಲಿ ೭.೫ ಇಂಚು ಮಳೆ ಆದುದಕ್ಕೆ ಪ್ರತಿಯಾಗಿ ಈ ಸಂವತ್ಸರದ ಅದೇ ಮಾಹೆಯಲ್ಲಿ ಒಳ್ಳೇ ವೃಷ್ಟಿ ಎಂದರೆ ೬.೨೦ ಇಂಚು ಸುರಿಯಿತು.

ಪುನಃ ಕೊಂಚ ಕಾಲ ಮಳೆ ಬರದೆ ನಿಂತು ಹೋದುದರಿಂದ ತೊಂದರೆ ಯುಂಟಾಗಿ ಚಿಂತೆಗೆ ಕಾರಣವಾಯಿತು. ಜೂನ್, ಜುಲೈ ಮಾಹೆಗಳಲ್ಲಿ ಸರಾಸರಿ ೫.೩೪ ಮತ್ತು ೧೦.೦೨ ಇಂಚು ಮಳೆಯಾಯಿತು. ಆಗಸ್ಟ್, ಸೆಪ್ಟೆಂಬರ್ ಮತ್ತು ಅಕ್ಟೋಬರ್ ಮಾಹೆಗಳಲ್ಲಿ ಮಳೆ ಬಹು ಚೆನ್ನಾಗಿ ಎಂದರೆ, ಹಿಂದಿನ ಸಂವತ್ಸರಗಳ ಸರಾಸರಿಗಿಂತಲೂ ಬಹುಜಾಸ್ತಿಯಾಗಿ ಬಿತ್ತು. ಆದುದರಿಂದ ಕ್ಷಾಮನಿವಾರಣೆಯ ಏರ್ಪಾಡನ್ನು ಇನ್ನು ಮುಂದೆ ನಡೆಸುವ ಅವಶ್ಯಕತೆಯೇನೂ ಇರುವುದಿಲ್ಲ. ಪರಂತು ಮುಂದಿನ ಸುಗ್ಗಿಕಾಲಪರ್ಯಂತ ಕೇವಲ ರಿಕ್ತದೆಶೆಯಲ್ಲಿರುವವರಿಗೂ, ದುರ್ಬಲರಾದವರಿಗೂ, ಉಚಿತಧರ್ಮಸಹಾಯವನ್ನೂ, ಅವಶ್ಯಕವಿರುವ ಸ್ಥಳಗಳಲ್ಲಿ ಕೆರೆ ಮುಂತಾದವುಗಳನ್ನು ಪೂರೈಸುವುದಕ್ಕೆ ಸಾಲಗಳನ್ನೂ ಒಂದುವೇಳೆ ಕೊಡಬೇಕಾಗಿದ್ದರೂ ಇರಬಹುದು. ಈ ಕ್ಷಾಮದ ಆಡಳಿತಗಳನ್ನು ನಡೆಸಿದ್ದರಲ್ಲಿ ಒಂದು ಸಂಗತಿ ಅನುಭವಕ್ಕೆ ಬಂತು. ಅದೇನೆಂದರೆ, ೧೯೦೮ನೆ ಇಸವಿ ನವಂಬರ್ ಮಾಹೆ ಆಖೈರಿಗೆ ಸಂಸ್ಥಾನದ ಅನೇಕ ಭಾಗಗಳಲ್ಲಿ ದುರ್ಭಿಕ್ಷವು ಪ್ರಾಪ್ತವಾಗಿ ಜನಗಳು ಕಷ್ಟಪಡುತ್ತಿದ್ದಾಗ್ಯೂ, ಅವರು ಜೀವನಕ್ಕಾಗಿ ಎಷ್ಟು ಕಮ್ಮಿ ಕೂಲಿಗೆ ಒಪ್ಪುತ್ತಾರೆ, ಎಷ್ಟು ದೂರದಿಂದ ಕೆಲಸಗಳಿಗೆ ಬರುತ್ತಾರೆ ಎಂಬ ಅಂಶಗಳನ್ನು ತಿಳಿಯುವುದಕ್ಕೋಸ್ಕರ ಫ್ಯಾಮಿನ್ ಕೋಡಿನ ಪ್ರಕಾರ ಏರ್ಪಾಡು ಮಾಡಿದ ಅಜಮಾಯಿಷಿ ಕಾಮಗಾರಿಗಳಿಗೆ ಯಾರೊಬ್ಬರೂ ಬರುತ್ತಿರಲಿಲ್ಲ. ಈ ರೀತಿ ಬಾರದೆ ಇರುವುದಕ್ಕೆ ಕ್ಷಾಮನಿವಾರಣೆಯ ಕೆಲಸಗಳಿಗೆ ಸೇರುವುದು ತಮಗೆ ಅಗೌರವವೆಂದು ಸಾಧಾರಣವಾಗಿ ಮೈಸೂರು ದೇಶದ ರೈತರು ಸ್ವಾಭಿಮಾನವಿಟ್ಟುಕೊಂಡಿರುವುದು ಎಷ್ಟರ ಮಟ್ಟಿಗೆ ಕಾರಣವಾಗಿತ್ತೋ, ಅಥವಾ ಈ ಸೀಮೆಯಲ್ಲಿ ಮರಹಮ್ಮತ್ ಮತ್ತು ರೇಲ್ವೆ ಕೆಲಸಗಳಿಗೆ ಧಾರಾಳವಾಗಿ ಖರ್ಚು ಮಾಡಿರುವುದರಿಂದ ಉಂಟಾದ ಸೌಲಭ್ಯಗಳಿಂದಲೂ ಜಮೀನ್ ಕಂದಾಯ ಮತ್ತು ಸಾಗುವಳಿ ಕ್ರಮ ಅನುಕೂಲವಾಗಿರುವ ಪ್ರಯುಕ್ತವೂ ರೈತರಿಗೆ ಕ್ಷಾಮವನ್ನು ತಡೆದುಕೊಳ್ಳುವುದಕ್ಕೆ ಉಂಟಾದ ಶಕ್ತಿ, ದ್ರವ್ಯಾನುಕೂಲತೆ, ಸಾಮಾಜಿಕಸ್ಥಿತಿ ಇವುಗಳು ಎಷ್ಟರಮಟ್ಟಿಗೆ ಕಾರಣವಾದುವೋ ಅಥವಾ ಇತರ ಕಾರಣಗಳೇನಾದರೂ ಇದ್ದುವೋ ಎಂಬೀ ಅಂಶವು ಈ ಸಂಸ್ಥಾನ

ಕ್ಕೆ ಸಂಬಂಧಪಟ್ಟ ಅರ್ಥಶಾಸ್ತ್ರವನ್ನು ಪರಿಶೀಲನೆ ಮಾಡತಕ್ಕವರು ವಿಮರ್ಶೆಮಾಡತಕ್ಕ ವಿಷಯವಾಗಿದೆ. ಆದರೆ ಇಷ್ಟು ಮಟ್ಟಿಗೆ ನಾವು ಹೇಳಬಹುದು. ತುಂಬಾ ನಿರ್ಗತಿಕರಾದವರಿಗೆ ಜೀವನ ದೊರೆಯುವಂತೆ ಮಾಡಿ, ಅವರು ತಮ್ಮತಮ್ಮ ವಾಸಸ್ಥಳಗಳನ್ನು ಬಿಟ್ಟು ಗೊತ್ತಿಲ್ಲದೆ ತಿರುಗಾಡುತ್ತಿರುವುದನ್ನು ತಪ್ಪಿಸುವದಕ್ಕೆ ಸರ್ಕಾರದವರು ಆ ಜನರ ಗ್ರಾಮಗಳ ಸಮೀಪದಲ್ಲಿಯೇ ಕಾಮಗಾರಿಗಳನ್ನು ಏರ್ಪಡಿಸಬೇಕಾಗಿ ಬಂತು. ಈ ಕಾಮಗಾರಿಗಳಲ್ಲಿ ನಡೆದ ಕೂಲಿ ಕೆಲಸಕ್ಕೆ ಹೊರಗೆ ಸಾಧಾರಣವಾಗಿ ಕೊಡುತ್ತಿದ್ದ ದರದಂತೆಯೇ ಕೂಲಿಯನ್ನು ಕೊಡುತಾ ಇತ್ತು. ಆದರೆ ಕೆಲವು ವೇಳೆ ಜನಗಳು ಅವರವರ ವಾಡಿಕೆಯಾದ ಕಸಬುಗಳನ್ನು ಬಿಟ್ಟು ಅಥವಾ ಖಾಸಗಿ ಜನರು ಕೊಡುತ್ತಿದ್ದ ಕೂಲಿಯನ್ನು ಬಿಟ್ಟು ಈ ಸರ್ಕಾರಿ ಕಾಮಗಾರಿಗಳಿಗೆ ಬರದಂತೆ ಮಾಡುವುದಕ್ಕೋಸ್ಕರ ಸರಿ ಕೂಲಿ ದರವನ್ನು ಸ್ವಲ್ಪ ಕಮ್ಮಿ ಮಾಡಬೇಕಾಯಿತು. ಇದರಿಂದ ಹೆಚ್ಚು ಖರ್ಚು ತಗಲುವ ಭಾರೀ ಕ್ಷಾಮ ಕಾಮಗಾರಿಯನ್ನು ನಡೆಸುವ ಅವಶ್ಯಕತೆಯೂ, ಅದರಿಂದ ಉಂಟಾಗುತ್ತಿದ್ದ ಕೆಲವು ಅನಿವಾರ್ಯಗಳೂ ಮತ್ತು ಜನಗಳಲ್ಲಿ ಸ್ವಾಭಿಮಾನವು ಕಮ್ಮಿಯಾಗುವುದೇ ಮುಂತಾದ ಕೆಡಕಿಗೆ ಕಾರಣಭೂತವಾದ ಅಂಶಗಳೂ ತಪ್ಪಿದವು. ಆದರೂ ದುರ್ಭಿಕ್ಷ ಹೆಚ್ಚಿದ ಸಂದರ್ಭದಲ್ಲಿ ಜನೋಪಯೋಗವಾದ ದೊಡ್ಡ ದೊಡ್ಡ ಕಾಮಗಾರಿಗಳನ್ನು ನಡೆಸುವುದಕ್ಕೂ ತಕ್ಕ ಸನ್ನಾಹಗಳನ್ನು ಮಾಡಿಕೊಂಡಿತ್ತು.

ಉಚಿತ ಧರ್ಮಸಹಾಯದ ಏರ್ಪಾಡನ್ನು ಯಾವಕಾಲದಲ್ಲಿ ಪ್ರಾರಂಭಿಸಬೇಕೆಂದು ಫ್ಯಾಮಿನ್ ಕೋಡಿನಲ್ಲಿ ವಿಧಾಯಕವಾಗಿರುತ್ತದೋ ಅದಕ್ಕಿಂತ ಮುಂಚೆಯೇ ಸ್ಥಳಿಕ ಅಧಿಕಾರಿಗಳು ಈ ಕೆಲಸವನ್ನು ಷುರು ಮಾಡಿದರು. ಇದರಿಂದ ಮುದುಕರೂ, ಅಶಕ್ತರೂ, ಅಂಗಹೀನರೂ, ಬಡವರಾದ ಗೋಷಾ ಹೆಂಗಸರೂ ಹೊಟ್ಟೆಗಿಲ್ಲದೆ ಸಾಯದಂತೆಯೂ, ಕೂಲಿ ಮಾಡಲು ಶಕ್ತರಾದ ಅವರ ಬಂಧುಗಳ ಸಹಾಯವನ್ನು ಅಪೇಕ್ಷಿಸಿ ಉಭಯತ್ರರೂ ಹೊಟ್ಟೆಗಿಲ್ಲದೆ ಕಷ್ಟಪಡದಹಾಗೂ ಆಯಿತು. ಇದಕ್ಕಾಗಿ ೨೪,೫೧೯ ರೂಪಾಯಿ ಖರ್ಚಾಯಿತು. ಈ ರೀತಿ ಧರ್ಮಸಹಾಯ ಪಡೆದವರು ಮಾರ್ಚಿ ತಿಂಗಳ ಆರಂಭದಲ್ಲಿ ಅತಿ ಜಾಸ್ತಿಯಾಗಿದ್ದರು, ಎಂದರೆ ೪,೮೫೯ ಜನರಿದ್ದರು.

ಖಾಸಗಿ ಧರ್ಮಸಹಾಯ.

ಬಡಜನರಿಗೆ ಸಹಾಯಮಾಡುವ ಉದ್ದೇಶದಿಂದ ಈ ಸಂಸ್ಥಾನದ ಕೆಲವು ಭಾಗಗಳಲ್ಲಿ ಖಾಸಗಿ ದೊಡ್ಡ ಮನುಷ್ಯರು ಧರ್ಮಾರ್ಥವಾಗಿ ಏರ್ಪಾಡುಗಳನ್ನು ಮಾಡಿದ್ದುದಕ್ಕಾಗಿ ಅವರುಗಳನ್ನು ತುಂಬಾ ವಂದಿಸಬೇಕಾಗಿದೆ. ಬೆಂಗಳೂರಲ್ಲಿ ಪ್ರಮುಖರಾದ ವರ್ತಕರುಗಳು ಒಂದು ರಿಲೀಫ್ ಕಮಿಟಿಯನ್ನು ಏರ್ಪಡಿಸಿಕೊಂಡು ಚಂದಾ ವಸೂಲ್ಮಾಡಿ ರಾಗಿಯನ್ನು ಬಡಜನರಿಗೆ ಪೇಟೆಧಾರಣೆಗಿಂತ ಕಮ್ಮಿಯಾಗಿ ಮಾರಿದರು. ಇದರಿಂದ ಸುಮಾರು ೩೦,೦೦೦ ಜನರಿಗೆ ಸಹಾಯ ದೊರೆಯಿತೆಂದು ತಿಳಿಯಬಂದಿದೆ. ಇದೇ ರೀತಿಯಲ್ಲಿ ಇತರ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಕಸಬೆಗಳಲ್ಲಿಯೂ ಸಹಾ ತಕ್ಕಮಟ್ಟಿಗೆ ಏರ್ಪಾಡು ನಡೆಯಿತು.

Soil Inoculation.*

ಭೂಮಿಯನ್ನು ಸಾರಗೊಳಿಸುವಿಕೆ.

ಈಚೆಗೆ ಅಮೇರಿಕಾ ದೇಶದಲ್ಲಿ ಸಾಗುವಳಿಜಮೀನುಗಳಲ್ಲಿ ಸಾರವನ್ನು ಹೆಚ್ಚಿಸುವದಕ್ಕೆ ಒಂದು ಹೊಸ ವಿಧಾನವನ್ನು ಕಂಡು ಹಿಡಿದಿರುತ್ತಾರೆ. ಇದಕ್ಕೆ „ಸಾಯಿಲ್ ಇನಾಕ್ಯುಲೇಷನ್''(Soil Inoculation)ಎಂದು ಹೆಸರು. ಇದರ ಕ್ರಮ ಹ್ಯಾಗಂದರೆ, ಸಾಧಾರಣವಾಗಿ ಭೂಮಿಯಲ್ಲಿ ಅಸಂಖ್ಯಾತವಾದ ಸೂಕ್ಷ್ಮಕ್ರಿಮಿಗಳು (Bacteria)ಇರುತ್ತವೆ. ಇವು ಭೂಮಿಯ ಗುಣವನ್ನು ಬದಲಾಯಿಸಿ ವ್ಯವಸಾಯಕ್ಕೆ ಲಾಯಖಾಗಿ ಮಾಡುತ್ತವೆಯಲ್ಲದೆ, ಗಾಳಿಯಿಂದ ಸಸ್ಯಾಹಾರಪದಾರ್ಥಗಳನ್ನು ಹೀರಿ ಪೈರುಗಳಿಗೆ ಸಾಕಾದಷ್ಟು ಒದಗಿಸಿ ಕೊಡುತ್ತವೆ. ಎಲ್ಲಾ ಭೂಮಿಗಳಲ್ಲೂ ಒಂದೇತರದ ಕ್ರಿಮಿವರ್ಗಗಳು ಇರುವದಿಲ್ಲ. ಮತ್ತು ಕೆಲವು ಭೂಮಿಗಳಲ್ಲಿ ಹೆಚ್ಚಾಗಿಯೂ ಮತ್ತೆ ಕೆಲವಲ್ಲಿ ಕಮ್ಮಿಯಾಗಿಯೂ, ಕೆಲವಲ್ಲಿ ಸುತರಾಂ ಇಲ್ಲದೆಯೂ ಇರುವದುಂಟು. ಈ ಕ್ರಿಮಿಗಳು ಹೆಚ್ಚಾಗಿ ಇದ್ದ ಹಾಗೆಲ್ಲಾ ಭೂಸಾರವೂ ಅಧಿಕವಾಗಿರುತ್ತದೆ. ಇವು ಕಮ್ಮಿಯಾದರೆ ಭೂಮಿಯಲ್ಲಿ ಸಾರವೂ ಕಮ್ಮಿಯಾಗುತ್ತದೆ. ಈ ಕ್ರಿಮಿಗಳ ಜಾತಿಯಲ್ಲಿ ಅ

* ಇಂಡಿಯನ್ ಅಗ್ರಿಕಲ್ಚರಿಸ್ಟ್ ೨—೪—೦೯.

ನೇಕ ಭೇದಗಳುಂಟು. ಅಮೇರಿಕಾ ದೇಶದಲ್ಲಿ ಒಂದು ಹೊಲದ ಮಣ್ಣನ್ನು ಅಜಮಾಯಿಷಿ ಮಾಡಿ ನೋಡುವಲ್ಲಿ, ಒಂದು ಚಿಟಿಕೆ ಮಣ್ಣಿನಲ್ಲಿ ಕೋಟ್ಯಾಂತರ ಕ್ರಿಮಿಗಳು ಇದ್ದುವಂತೆ; ಇನ್ನೊಂದು ಜಮೀನಿನ ಮಣ್ಣಿನಲ್ಲಿ ೧೦೦೦ ಕ್ರಿಮಿಗಳೂ ಕೂಡ ಕಂಡು ಬರಲಿಲ್ಲ; ಮತ್ತೊಂದರಲ್ಲಿ ಸುತರಾಂ ಇರಲೇ ಇಲ್ಲ. ಇಂಥಾ ಕ್ರಿಮಿಗಳನ್ನು ಹುಲುಸಾದ ಭೂಮಿಯಿಂದ ಕೀಳು ಭೂಮಿಗೆ ತೆಗೆದು ಬಿಟ್ಟು ಅದನ್ನು ಸಾರವತ್ತಾಗಿ ಮಾಡಬಹುದೆಂದು ಅಮೇರಿಕಾ ದೇಶದಲ್ಲಿ ಪ್ರತ್ಯಕ್ಷವಾಗಿ ತೋರಿಸಿಕೊಟ್ಟಿರುತ್ತಾರೆ.

ಈ ನೂತನ ವಿಧಾನವನ್ನು ಆಗಲೇ ಬಂಗಾಳಾ ವ್ಯವಸಾಯ ಇಲಾಖೆಯವರು ಬಂಗಾಳಾದಲ್ಲಿ ಆರಂಭಿಸಿ ಅಜಮಾಯಿಷಿ ಮಾಡುತ್ತಲಿದ್ದಾರೆ.

Government Proceedings.

ಸರ್ಕಾರಿ ಹುಕುಂಗಳು.

I.

ಇದರಡಿ ನಮೂದಿಸಿರುವ ರಿಟೈರ್ಡ್ ತಾಲ್ಲೂಕು ಶಿರಸ್ತೇದಾರ್ರುಗಳನ್ನು ಅವರ ಹೆಸರುಗಳಿಗೆ ಎದುರಾಗಿ ನಮೂದಿಸಿರುವ ತಾಲ್ಲೂಕಿನಲ್ಲಿರುವ ಕೋ ಆಪರೇಟಿವ್ ಸೊಸೈಟಿಗಳನ್ನು ಉಸ್ತುವಾರಿ ಮಾಡಲು ಮೈಸೂರು ಗವರ್ನ್ಮೆಂಟು ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರು ಜಾನಾಯಿಸಿದ್ದನ್ನು ಮೈಸೂರು ಗೌರ್ನ್ಮೆಂಟಿನವರು ೨೦-೧೧-೦೯ನೆ ಮಾರ್ಕಂ ಯಫ್. ಯಲ್. ೨೫೦೪-೮ ಬಿ. ೩೦-೦೯ನೆ ನಂಬರು ಆರ್ಡರಿನಲ್ಲಿ ಮಂಜೂರ್ಮಾಡಿರುತ್ತಾರೆ.

(೧) ಮ|| ಕೃಷ್ಣಯ್ಯಂಗಾರ್ರು ......ಮೈಸೂರು ತಾಲ್ಲೂಕು.

(೨) ಮ|| ಟಿ. ಬಿ. ಲಕ್ಷ್ಮಣರಾವ್ ......ತುಂಕೂರು.

(೩) ಮ|| ಶ್ರೀನಿವಾಸರಾಯರು ಉರುಫ್, ಗುಂಡುರಾಯರು. } ಬೆಂಗಳೂರು.

II.

ಮೈಸೂರು ಕೋ ಆಪರೇಟಿವ್ ಸೊಸೈಟಿಗಳ ಕಾನೂನು ಪ್ರಕಾರ

ರಿಜಿಸ್ಟರಾದ ಸೊಸೈಟಿಗಳು ಒಂದು ಸೊಸೈಟಿಯಿಂದ ಮತ್ತೊಂದು ಸೊಸೈಟಿಗೆ ಹಣವನ್ನು ರವಾನೆ ಮಾಡಲು ಅನುಕೂಲಿಸುವಂತೆ ರಿಮಿಟೆನ್ಸ್ ಟ್ರಾನ್ಸ್‌ಫರ್ ರಶೀತಿಗಳಮೂಲಕ ಮೊಬಲಗನ್ನು ಕಳುಹಿಸಲು ೧೦-೧೧-೦೯ನೆ ಮತ್ತುಂ ಯಫ್. ಯಲ್. ೨೦೯೩-೩೦೨—ಜ. ಎಫ್. ೧೪೬-೦೯-೨ನೆ ನಂಬರು ಆರ್ಡರು ಮುಖಾಂತ್ರ ಅಪ್ಪಣೆ ಮಾಡಿರುತ್ತಾರೆ. ಈ ವಿಧವಾದ ಸಾಕರ್ಯವನ್ನು ಮೇಲ್ಕಂಡ ಕಾನೂನು ಪ್ರಕಾರ ರಿಜಿಸ್ಟರಾದ ಎಲ್ಲಾ ಸೊಸೈಟಿಗಳೂ ಅನುಭವಿಸಬಹುದು.

Occasional Notes.

ವಿವಿಧ ವೃತ್ತಾಂತಗಳು.

೧. ಜರ್ಮನಿ, ಫ್ರಾನ್ಸ್ ರಾಜ್ಯಗಳಲ್ಲಿ ಮತ್ತು ಈಚೀಚೆಗೆ ಸ್ವೀಡನ್ ರಾಜ್ಯದಲ್ಲಿಯೂ ಕೂಡ ಕಾಗದದಿಂದ ನೂಲು ತಯಾರು ಮಾಡುತ್ತಾರೆಂತಲೂ, ಇಂಥ ನೂಲಿನಿಂದ ಕಂಬಳಿ, ತಡಿ, ಜಂಖಾನೆಗಳು ಮುಂತಾದವುಗಳನ್ನು ನೇಯಬಹುದೆಂತಲೂ ತಿಳಿಯಬರುತ್ತದೆ.—ಇಂಡಿಯನ್ ಟ್ರೇಡ್ ಜರ್ನಲ್: ೯—೯—೦೯.

---

೨. ಕಳೆದ ತಿಂಗಳಲ್ಲಿ ತುಂಕೂರು ಡಿಸ್ಟ್ರಿಕ್ಟಿನಲ್ಲಿ (೧) ತಿಪಟೂರು ಕೋಆಪರೇಟಿವ್ ಸೊಸೈಟಿ, (೨) ನೊಣವಿನಕೆರೆ ಕೋ. ಆಪರೇಟಿವ್ ಸೊಸೈಟಿ, ಮತ್ತು (೩) ಪಾವಗಡ ಕೋ. ಆಪರೇಟಿವ್ ಸೊಸೈಟಿ; ಬೆಂಗಳೂರು ಡಿಸ್ಟ್ರಿಕ್ಟಿನಲ್ಲಿ (೪) ಯಲಹಂಕ ಕೋ. ಆಪರೇಟಿವ್ ಸೊಸೈಟಿ, ಈ ನಾಲ್ಕು ಸೊಸೈಟಿಗಳು ಮೈಸೂರು ಕೋ. ಆಪರೇಟಿವ್ ಸೊಸೈಟಿಗಳ ರೆಗ್ಯುಲೇಷನ್ ಅನುಸರಿಸಿ ರಿಜಿಸ್ಟರು ಮಾಡಲ್ಪಟ್ಟಿರುತ್ತವೆ.

---

೩. ನಾನಾರಕಂ ಅಕ್ಕಿಗಳಲ್ಲಿ ಬನಿ ಒಂದರಲ್ಲಿ ಹೆಚ್ಚಾಗಿರುವದು ಮತ್ತೊಂದರಲ್ಲಿ ಕಮ್ಮಿ ಇರುವದು. ಈ ಪ್ರಕಾರವಾದ ತಾರತಮ್ಯವ ಹೇಗೆ ಉಂಟಾಗುತ್ತದೆಂದು ವಿಚಾರಮಾಡಿ ನೋಡುವಲ್ಲಿ ಕಾಳಿನ ಜಾತಿಯ ದೆಸೆಯಿಂದ ಆಗಲಿ ಅಥವಾ ನೆಲದಿಂದಾಗಲಿ ಈ ತಾರತಮ್ಯವನ್ನು [illegible]

ಕ್ಕಾಗುವದಿಲ್ಲವೆಂತಲೂ, ಪೈರಿಗೆ ನಡೆಯುವ ವ್ಯವಸಾಯ ಕ್ರಮವನ್ನನು ಸರಿಸಿಯೇ ಬಹಳವಾಗಿ ಕಾಳಿನಲ್ಲಿಯೂ ಕೂಡ ಜನಿಯು ಹೆಚ್ಚು ಕಡಿಮೆ ಯಾಗುತ್ತೆಂತಲೂ ಕಂಡು ಬಂದಿರುತ್ತದೆ. ಪೈರಿಗೆ ಅನುಕೂಲವಾದ ಗೊಬ್ಬರಗಳನ್ನು ಧಾರಾಳವಾಗಿ ಹಾಕಿದರೆ ಫಸಲು ಜಾಸ್ತಿಯಾಗಿ ಬರುವದಲ್ಲದೆ ಶ್ರೇಷ್ಠವಾದ ಅಕ್ಕಿಯೂ ಸಿಕ್ಕುವದು.—ಇಂಡಿಯನ್ ಟ್ರೇಡ್ ಜರ್ನಲ್ ೨೧—೧೦—೧೯.

---

೪. ಧಾನ್ಯಾದಿಗಳಿಗೆ ನುಸಿ ಹುಳುಬಿದ್ದು ವಿಶೇಷ ನಷ್ಟ ಪಡಿಸುವದುಂಟಷ್ಟೆ. ಇದಕ್ಕೆ ಕಾರ್ಬನ್ ಬೈಸಲ್ಫೈಡ್ (Carbon Bisulphide) ಪದಾರ್ಥವು ಬಹು ಒಳ್ಳೆ ಪರಿಹಾರ. ೧೨ ಆಣೆಕೊಟ್ಟರೆ ಸುಮಾರು ೧೪ ತೂಕದ ಸೇರು ಕಾರ್ಬನ್ ಬೈಸಲ್ಫೈಡು ದೊರೆಯುವದು. ಇದು ಸುಮಾರು ೨೪ ಮಣ (ಬಂಗಾಳಾ) ಧಾನ್ಯದಲ್ಲಿನ ನುಸಿ ಹುಳ ಮತ್ತು ಮೊಟ್ಟೆಗಳನ್ನೂ ಸಹಾ ಕೊಲ್ಲುವದಕ್ಕೆ ಸಾಕಾಗುತ್ತದೆ. ಇದರಿಂದ ರೈತನಿಗೆ ಸುಮಾರು ೨೦—೩೦ ರೂಪಾಯಿ ಉಳಿತಾಯವಾಗುವದು.

ಇದೇ ಪ್ರಕಾರವಾಗಿ ಕಾಳುಪೈರುಗಳ ತೆನೆಗಳಲ್ಲಿ ಧಾನ್ಯವನ್ನೇ ತಿಂದು ಧಾನ್ಯಕ್ಕೆ ಬದಲಾಗಿ ಸ್ವಲ್ಪ ಕಪ್ಪು ಪುಡಿಮಾತ್ರ ಉಳಿಯುವಹಾಗೆ ಮಾಡುವ 'ಸ್ಮಟ್' (Smut)ಎಂಬ ಸಸ್ಯಾಣು ಸಂಬಂಧವಾದ ಬೀಜರೋಗಕ್ಕೆ ಮೈಲುತ್ತುವು (Copper Sulphate)ಒಳ್ಳೆ ಔಷಧಿ. ಬೀಜವನ್ನು ಒಂದು ಭಾಗ ಮೈಲುತ್ತಕ್ಕೆ ೨೦೦ ಭಾಗ ನೀರು ಸೇರಿಸಿ ಮಾಡಿದ ದ್ರಾವಕದಲ್ಲಿ ಮೊದಲು ನೆನೆಯಿಸಿ ನಂತರ ಬಿತ್ತಿದರೆ ಕ್ರಿಮಿಗಳು ಸತ್ತು ಆರೋಗ್ಯವಾದ ತೆನೆಗಳು ಕೋಮಲವಾಗಿ ಬರುವುವು.—ಇಂಡಿಯನ್ ಅಗ್ರಿಕಲ್ಚರಿಸ್ಟ್ ೨—೮—೧೯೧೯.

V. B. SOOBBIAH AND SONS, PRINTERS, BANGALORE —1919.

THE MYSORE

REVENUE & AGRICULTURAL GAZETTE.

ವಾಲ್ಯೂಂ ೪.] ಸೋಮವಾರ, ೩ನೆ ಜನವರಿ ೧೯೧೦. [ನಂ. ೫.

Contents.

1. Hand Weaving Industry in Bombay.
2. Programme of Huzur Jamabandy of 1909-10.
3. Selection of Seeds.
4. Extracts from the Dewan's Dasara Address, 1909.
5. Revenue Appeals.
6. Government Proceedings.
7. Notifications.
8. Occasional Notes.
   (i) Paper from Megass. (ii) Palmyra Fibre. (iii) Agricultural Machinery. (iv) Pearl Buttons.

ಅನುಕ್ರಮಣಿಕೆ.

೧. ಬೊಂಬಾಯಿ ಆಧಿಪತ್ಯದ ಕೈ ನೇಗೇ ಕಸಬು.
೨. ೧೯೦೯-೧೦ನೆ ಸಾಲ್ ಹುಜೂರ್ ಜಮಾಬಂದಿ ಪ್ರೋಗ್ರಾಂ.
೩. ಬಿತ್ತನೆ ಬೀಜದ ಚುನಾವಣೆ.
೪. ಚಾಲ್ತಿಸಾಲ್ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನ್‌ರವರು ಮಾಡಿದ ಉಪನ್ಯಾಸ.
೫. ರೆವಿನ್ಯೂ ಅಪೀಲುಗಳು.
೬. ಸರ್ಕಾರಿ ಹುಕುಂಗಳು.
೭. ಇಸ್ತಿಹಾರ್ ನಾಮೆಗಳು.
೮. ವಿವಿಧ ವೃತ್ತಾಂತಗಳು.
   (i) ಕಬ್ಬಿನ ಶಿಪ್ಪೆಯಿಂದ ಕಾಗದದ ತಯಾರಿ. (ii) ತಾಳೆಯ ನಾರು. (iii) ವ್ಯವಸಾಯದ ಯಂತ್ರಗಳು. (iv) ಮುತ್ತಿನ ಚಿಪ್ಪಿನ ಗುಂಡಿ ತಯಾರಿ.

Hand Weaving Industry in Bombay. *

ಬೊಂಬಾಯಿ ಆಧಿಪತ್ಯದ ಕೈನೇಗೇ ಕಸಬು.

ಬೊಂಬಾಯಿ ಸರ್ಕಾರದವರು ಆಧಿಪತ್ಯದಲ್ಲಿನ ಕೈಮಗ್ಗದ ನೇಗೇ ಕಸಬಿನ ಸಧ್ಯಸ್ಥಿತಿಯನ್ನು ತಿಳಿದು ಅದಕ್ಕೆ ಒತ್ತಾಸೆಯಾಗಿ ಸುಲಭ

* ಬೊಂಬಾಯಿ ಗೌರ್ನಮೆಂಟು ಗಜೆಟ್, ೨೧—೧೦—೦೯.

ಸಾಧ್ಯವಾದ ಸಲಹೆಗಳನ್ನು ಸೂಚಿಸುವಬಗ್ಗೆ ಇಂಡಿಯಾ ಗೌರ್ನಮೆಂಟಿನಿಂದ ವೇತನವನ್ನು (Scholarship) ಪಡೆದು ಇಂಗ್ಲೆಂಡಿನಲ್ಲಿ ನೇಗೇಕಸಬನ್ನು ಕಲಿತುಕೊಂಡು ಬಂದಿರುವ ಮಿ|| ಪಿ. ಎನ್. ಮೆಹತಾಯವರನ್ನು (Mr. P. N. Mehta) ನೇಮಿಸಿದ್ದರು. ಮಿ|| ಮೆಹತಾಯವರು ಈಕಸಬು ನೆಲಗೊಂಡಿರುವ ಮುಖ್ಯಸ್ಥಳಗಳನ್ನು ನೋಡಿಕೊಂಡುಬಂದು ಬರೆದ ರಿಪೋರ್ಟಿನಮೇಲೆ ಗೌರ್ನಮೆಂಟಿನವರು ಮಾಡಿರುವ ಹುಕುಮಿನ ಕೆಲವು ಮುಖ್ಯಾಂಶಗಳನ್ನು ಇದರಡಿ ನಮೂದಿಸಿರುತ್ತೇವೆ.

ಮಿ|| ಮೆಹತಾಯವರು ಅಭಿಪ್ರಾಯಪಡುವದೇನಂದರೆ:—

ಸಧ್ಯದಲ್ಲಿ ಆಚರಣೆಯಲ್ಲಿರುವ ವಿಧಾನಗಳಲ್ಲಿ ಕೆಲವು ದೋಷಗಳಿರುತ್ತವೆ. ಹಾಸು ನುಲಿಯುವದಕ್ಕೂ ಮತ್ತು ಮಗ್ಗದಮೇಲೆ ನುರಿಯುವದಕ್ಕೂ ವಿಶೇಷ ಕಾಲಹರಣವೂ ಮತ್ತು ಖರ್ಚೂ ಆಗುತ್ತದೆ.

ಉಪಯೋಗಿಸುವ ಮಗ್ಗವು ತುಂಬಾ ಹಳೇ ತರಹದ್ದು.

ನೂಲು ಕೊಂಡುಕೊಳ್ಳುವದೂ ಮತ್ತು ತಯಾರಾದ ಸರಕನ್ನು ಮಾರುವದೂ ವ್ಯಾಪಾರರೀತಿಗನುಗುಣವಾಗಿರುವದಿಲ್ಲ.

ತಿದ್ದುಪಡಿಯಾದ ನೂತನ ಮಗ್ಗವನ್ನು ಉಪಯೋಗಿಸುವದಕ್ಕೆ ಮೊದಲು ಹಾಸುತಯಾರಿಸಿ ಮಗ್ಗಕ್ಕೆ ಒದಗಿಸುವ ಕ್ರಮವನ್ನು ಸರಿಪಡಿಸಿಕೊಳ್ಳಬೇಕು.

ಆಧಿಪತ್ಯದಲ್ಲಿನ ಅನೇಕ ನೇಗೆಯವರ ಅವಶ್ಯಕತೆಗೆ ತಕ್ಕಹಾಗೆ ತಿದ್ದುಪಡಿಯಾದ ಮಗ್ಗವು ಇನ್ನೂ ಮಾರಾಟಕ್ಕೆ ಬಂದಿಲ್ಲ.

ಈಗಿನ ಹಳೇಮಗ್ಗಕ್ಕೇನೆ ಸರಿಯಾಗಿ ನುಲಿದ ಹಾಸುಗಳನ್ನು ಒದಗಿಸುವದರಿಂದ ಸರಕಿನ ತಯಾರಿಯನ್ನು ಸಧ್ಯದಲ್ಲಾಗುವದಕ್ಕಿಂತಲೂ ಇನ್ನೂ ಶೇಕಡಾ ೨೦ರಷ್ಟು ಹೆಚ್ಚಿಸಬಹುದು.

ಹೊಸ ಮಾದರಿ ಮಗ್ಗದ ಕುಂಟೆಯನ್ನು ಒದಗಿಸಿಕೊಳ್ಳಬೇಕಾದರೆ ಇದರ ಜೊತೆಗೆ ನೂಲು ರಾಟೆಯಾಡುವ ಯಂತ್ರಗಳು, ಹಾಸು ನುಲಿಯುವ ಯಂತ್ರಗಳು, ಇವೇ ಮೊದಲಾದ ಯಂತ್ರಗಳನ್ನು ಉಪಯೋಗಿಸಬೇಕಾಗುತ್ತದೆ. ಈ ಯಂತ್ರಗಳ ಉಪಯೋಗದಿಂದ ಹಾಸು ತಯಾರುಮಾಡಿಕೊಳ್ಳುವದು ಒಬ್ಬಂಟಿಗರಿಗೆ ಸಾಧ್ಯವಾದ ಕೆಲಸವಲ್ಲ. ಇದಕ್ಕೆ ಬಾ

ರಿ ಬಂಡವಾಳ ಬೇಕು ಮತ್ತು ಈ ಯಂತ್ರ ಸಾಧನೆಗಳಿಂದ ತಯಾರಾಗುವ ಹಾಸು ಒಬ್ಬ ನೇಗೇಯುವನಿಗೆ ಶಾನೆ ಹೆಚ್ಚಾಗುವವು. ಇಷ್ಟೇ ಅಲ್ಲದೆ ನೇಗೆಯುವರೆಲ್ಲಾ ಬಹಳವಾಗಿ ವರ್ತಕರಿಗೆ ಸಾಲಗಾರರಾಗಿರುತ್ತಾರೆ. ಈ ವರ್ತಕರು ನೇಗೆಯುವರಿಗೆ ನೂಲನ್ನು ಕೊಟ್ಟು ಇದಕ್ಕೆ ಬದಲಾಗಿ ತಯಾರಾದ ಬಟ್ಟೆಯನ್ನು ತೆಗೆದುಕೊಳ್ಳುವರು. ಇದರ ಪರಿಣಾಮವೇನಂದರ, ಈ ನೇಗೆಯುವರು ಹಣಸ್ಥರ ಕೈವಶರಾಗಿರುವದರಿಂದ ತಿದ್ದುಪಾಟಾದ ನೇಗೇ ಕ್ರಮಗಳಿಂದಲೂ ಶ್ರೇಷ್ಠವಾದ ಯಂತ್ರೋಪಕರಣಗಳ ಉಪಯೋಗದಿಂದಲೂ ಬರುವ ಹೆಚ್ಚಿಗೆ ಆದಾಯವು ನೇಗೆಯುವರಿಗೇನೇ ಉಳಿಯದೆ ವರ್ತಕನಿಗೆ ಶೇರಿ ಈ ವರ್ತಕನಿಂದ ಕಾರೇಗಾರನಿಗೇನೊ ಜೀವನಕ್ಕೆ ಸಾಕಾಗುವಷ್ಟು ಮಾತ್ರ ಸಲ್ಲುವದು. ಆದಕಾರಣ ಈ ಕಸಬುದಾರಿಯನ್ನು ಅಭಿವೃದ್ಧಿಪಡಿಸಲು ಮಾಡಬೇಕಾದ ಪ್ರಯತ್ನಗಳಲ್ಲಿ ನೇಗೇಯುವರ ದ್ರವ್ಯಾನುಕೂಲತೆಯನ್ನು ಹೆಚ್ಚಿಸುವದೇ ಮೊದಲನೆ ಸಲಹೆಯಾಗಿರಬೇಕು. ಇದಕ್ಕಾಗಿ ಈ ಕಾರೆಗಾರರ ಸಂಘಗಳನ್ನು ಸ್ಥಾಪಿಸಿ ತನ್ಮೂಲಕ ಮೆಂಬರುಗಳ ಜಂಟಿ ಆಧಾರದಮೇಲೆ ನೂಲನ್ನು ರಿಯಾಯತಿ ದರಗಳಿಗೆ ಕೊಳ್ಳಬೇಕು, ಮೆಂಬರುಗಳ ಮಗ್ಗಗಳಿಗೆ ಬೇಕಾಗುವ ಹಾಸುಗಳನ್ನು ಒದಗಿಸುವದಕ್ಕಾಗಿ ಹಾಸು ನುಲಿಯುವ ಕಾರ್ಖಾನೆಗಳನ್ನು ಏರ್ಪಡಿಸಿಕೊಳ್ಳಬೇಕು, ಮತ್ತು ತಿದ್ದುಪಡಿಯಾದ ಮಗ್ಗಗಳು ಕ್ರಯಕ್ಕೆ ದೊರೆತಾಗ ಅವುಗಳನ್ನು ನೇಗೇಯುವರ ಉಪಯೋಗಕ್ಕಾಗಿ ಕೊಳ್ಳಬೇಕು. ನೇಗೆಯುವರು ತಮ್ಮ ತಮ್ಮ ನಂಬಿಕೆ ವಿಶ್ವಾಸಗಳನ್ನು ನ್ಯಾಯರೀತಿಯಲ್ಲಿ ವಿನಿಯೋಗಿಸುವದನ್ನು ಕಲಿತು ಎಲ್ಲರೂ ಸೇರಿ ಸಂಘತ್ವೇನ ಕೆಲಸ ಮಾಡುವದರ ಪ್ರಯೋಜನಗಳನ್ನು ತಿಳಿದುಕೊಂಡವಿನಹ ಇವರ ಸ್ಥಿತಿಯು ನಿಜವಾದ ರೀತಿಯಲ್ಲಿ ಉತ್ತಮಪಡಲಾರದು.

ಮೇಲ್ಕಂಡ ಮಿ|| ಮೆಹತಾಯವರ ಅಭಿಪ್ರಾಯಗಳನ್ನು ಪರ್ಯಾಲೋಚಿಸಿ ಸರ್ಕಾರದವರು ಹುಕುಂ ಮಾಡಿರುವದೇನಂದರೆ, ಪ್ರಥಮದಲ್ಲಿ ನೇಗೆಯುವರನ್ನು ಒಟ್ಟುಗೂಡಿಸಿ ಜಂಟಿಯಾಗಿ ಕೆಲಸ ನಡೆಸುವದಕ್ಕಾಗಿ ಅಲ್ಲಲ್ಲಿ ಅನ್ಯೋನ್ಯ ಸಹಾಯಕ ಸಂಘಗಳನ್ನು ಸ್ಥಾಪಿಸುವ ಸನ್ನಾಹ ಮಾಡಬೇಕು. ಈ ಕೆಲಸವು ಕೋ ಆಪರೇಟೀವ್ ಸೊಸೈಟಿಗಳ ರಿಜಿಸ್ಟ್ರಾ

ವರಿಗೆ ಸೇರಿರತಕ್ಕದ್ದು. ಇವರಿಗೆ ಸಹಾಯಕವಾಗಿ ನೇಗೇ ಕಸಬಿನಲ್ಲಿ ಘಟ್ಟಿಗನಾದ ಒಬ್ಬ ಅಸಿಸ್ಟೆಂಟನ್ನು ಸಧ್ಯಕ್ಕೆ ಮೂರು ವರುಷಗಳಪರ್ಯಂತರ ಮೊಕರರೂರು ಮಾಡಿರುತ್ತೆ. ಈ ಅಸಿಸ್ಟೆಂಟರು ಆಧಿಪತ್ಯದ ಕೈಮಗ್ಗದವರಲ್ಲಿ ಅನ್ಯೋನ್ಯ ಸಹಾಯಕ ಸಂಘಗಳನ್ನು ಏರ್ಪಡಿಸುವ ಮೂಲಕ ಕಾರೆಗಾರರ ಹೀನಸ್ಥಿತಿಯನ್ನು ತಪ್ಪಿಸಿ ಆಜನರು ಹಾಸುನುಲಿಯುವ ಕಾರ್ಖಾನೆಗಳ ಸ್ಥಾಪನೆ, ತಿದ್ದುಪಡಿಯಾದ ಮಗ್ಗಗಳನ್ನು ಕೊಳ್ಳುವಿಕೆ, ತಯಾರಾದ ತಮ್ಮ ಸರಕನ್ನು ಸರಿಯಾದ ಕ್ರಯಕ್ಕೆ ಬಿಕರೀಮಾಡುವದು, ಇತ್ಯಾದಿಗಳಿಂದ ತಮ್ಮ ಕಸಬುದಾರಿಯಲ್ಲಿ ನೂತನ ಕ್ರಮಗಳನ್ನು ಅನುಸರಿಸುವಂತೆ ಮಾಡುವ ಭಾಗದಲ್ಲಿ ಕೋಆಪರೇಟೀವ್ ಸೊಸೈಟಿಗಳ ರಿಜಸ್ಟ್ರಾರವರಿಗೆ ಸಲಹೆಗಳನ್ನು ಕೊಡುತ್ತಿರಬೇಕು.

Programme of Huzur Jamabandi of 1909-10.

೧೯೦೯-೧೦ನೆ ಸಾಲ್ ಹುಜೂರ್ ಜಮಾಬಂದಿ ಪ್ರೋಗ್ರಾಂ.

ಸಂಸ್ಥಾನಾಮುಳೆ ೧೯೦೯—೧೦ನೆ ಸಾಲ್ ಹುಜೂರು ಜಮಾಬಂದಿಗೋಸ್ಕರ ಡೆಪ್ಯುಟಿ ಕಮಿಷನರುಗಳು ಮತ್ತು ಸಬ್‌ಡಿವಿಜನ್ ಆಫೀಸರುಗಳೂ ಇಟ್ಟುಕೊಂಡಿರುವ ತಾಲ್ಲೂಕುಗಳನ್ನು ಈ ಕೆಳಗೆ ನಮೂದಿಸಿರುತ್ತೆ.

ಡಿಸ್ಟ್ರಿಕ್ಟು.	ಆಫೀಸರು.	ತಾಲ್ಲೂಕುಗಳು.
ಬೆಂಗಳೂರು	ಡೆ॥ ಕಮಿಷನರವರು ...	ದೊಡ್ಡಬಳ್ಳಾಪುರ ಮತ್ತು ಹೊಸಕೋಟೆ.
	ಸಬ್-ಡಿ॥ ಆಫೀಸರ್, ಬೆಂಗಳೂರು ಡಿವಿಜನ್.	ಬೆಂಗಳೂರು ಮತ್ತು ಆನೇಕಲ್ಲು.
	ಸಬ್-ಡಿ॥ ಆಫೀಸರ್ ಕ್ಲೋಸ್ಪೇಟೆ ಡಿವಿಜನ್.	ಚೆನ್ನಪಟ್ಟಣ, ಕಾನ್‌ಕಾನ್‌ಹಳ್ಳಿ, ಮಾಗಡಿ ಮತ್ತು ಕ್ಲೋಸ್ಪೇಟೆ.
	ಸಬ್-ಡಿ॥ ಆಫೀಸರ್, ದೊಡ್ಡಬಳ್ಳಾಪುರ ಡಿವಿಜನ್	ದೇವನಹಳ್ಳಿ ಮತ್ತು ನೆಲಮಂಗಲ.

ಡಿಸ್ಟ್ರಿಕ್ಟು.	ಆಫೀಸರು.	ತಾಲ್ಲೂಕುಗಳು.
ಕೋಲಾರ	ಡೆ॥ ಕಮಿಷನರವರು ...	ಕೋಲಾರ, ಚಿಂತಾಮಣಿ ಮತ್ತು ಚಿಕ್ಕ ಬಳ್ಳಾಪುರ.
	ಸಬ್-ಡಿ॥ ಆಫೀಸರ್ ಮಾಲೂರು.	ಮಾಲೂರು, ಮುಳಬಾಗಲು ಮತ್ತು ಶ್ರೀ ನಿವಾಸಪುರ.
	ಡಿಟೋ ಚಿಕ್ಕಬಳ್ಳಾಪುರ.	ಸಿಡ್ಲಘಟ್ಟ, ಗೌರೀಬಿದನೂರು, ಬಾಗೇ ಪಲ್ಲಿ ಮತ್ತು ಗುಡಿಬಂಡೆ.
	ಟ್ರೈಜರಿ ಅ॥ ಕಮಿಷನರ ವರು	ಬೌರಿಂಗಪೇಟೆ.
ತುಮಕೂರು	ಡೆ॥ ಕಮಿಷನರವರು ...	ಚಿಕ್ಕನಾಯಕನಹಳ್ಳಿ.
	ಸಬ್-ಡಿ॥ ಆಫೀಸರ್, ತುಂಕೂರು.	ತುಂಕೂರು ಮತ್ತು ಕುಣಿಗಲು.
	ಡಿಟೋ ಗುಬ್ಬಿ.	ಗುಬ್ಬಿ, ತಿಪಟೂರು ಮತ್ತು ತುರ್ವೆಕೆರೆ.
	ಡಿಟೋ ಮದ್ದಗಿರಿ.	ಮದ್ದಗಿರಿ, ಪಾವಗಡ, ಸಿರಾ ಮತ್ತು ಕೊ ರ್ಟಗೆರೆ.
ಮೈಸೂರು	ಡೆ॥ ಕಮಿಷನರವರು ...	ಹುಣಸೂರು, ನಾಗಮಂಗಲ.
	ಸಬ್-ಡಿ॥ ಆಫೀಸರ್ ಮೈಸೂರು.	ಮೈಸೂರು, ಎಡತೊರೆ, ಹೆಗ್ಗಡದೇವನ ಕೋಟೆ.
	ಡಿಟೋ ಫ್ರೆಂಚ್‌ರಾಕ್ಸ್.	ಕೃಷ್ಣರಾಜಪೇಟೆ, ಮಂಡ್ಯ, ಶ್ರೀರಂಗ ಪಟ್ಟಣ, ಫ್ರೆಂಚ್‌ರಾಕ್ಸು.
	ಡಿಟೋ ನಂಜನಗೂಡು.	ಗುಂಡ್ಲಪೇಟೆ, ಚಾಮರಾಜನಗರ, ನಂಜನ ಗೂಡು ಮತ್ತು ಟಿ. ನರಸೀಪುರ.
	ಮಳವಳ್ಳಿ ತಾಲ್ಲೂಕು ಛಾರ್ಜು ಅಸಿಸ್ಟೆಂಟ್ ಕಮಿಷನರವರು.	ಮಳವಳ್ಳಿ.

ಡಿಸ್ಟ್ರಿಕ್ಟು.	ಆಫೀಸರು.	ತಾಲ್ಲೂಕುಗಳು.
ಹಾಸನ	ಡೆ|| ಕಮಿಷನರವರು ...	ಅರ್ಕಲಗೂಡು ಮತ್ತು ಅರಸೀಕೆರೆ.
	ಸಬ್-ಡಿ|| ಆಫೀಸರ್, ಚನ್ನರಾಯಪಟ್ಟಣ.	ಚನ್ನರಾಯಪಟ್ಟಣ ಮತ್ತು ಹೊಳೆನರಸೀಪುರ.
	ಸಬ್-ಡಿ|| ಆಫೀಸರ್, ಸಕಲೇಶಪುರ.	ಮಂಜರಾಬಾದ್, ಬೇಲೂರು ಮತ್ತು ಆಲೂರು.
	ಟ್ರಿಜರಿ ಅ|| ಕಮಿಷನರವರು.	ಹಾಸನ.
ಶಿವಮೊಗ್ಗ	ಡೆ|| ಕಮಿಷನರವರು ...	ಚೆನ್ನಗಿರಿ ಮತ್ತು ತೀರ್ಥಹಳ್ಳಿ.
	ಸಬ್-ಡಿ|| ಆಫೀಸರ್, ಶಿವಮೊಗ್ಗ.	ಶಿವಮೊಗ್ಗ, ಹೊನ್ನಾಳಿ, ಶಿಕಾರಿಪುರ ಮತ್ತು ಕುಂಸಿ.
	ಸಬ್-ಡಿ|| ಆಫೀಸರ್, ಸಾಗರ.	ಸೊರಬ, ಸಾಗರ ಮತ್ತು ನಗರ.
ಕಡೂರು	ಡೆ|| ಕಮಿಷನರವರು ...	ಚಿಕ್ಕಮಗಳೂರು ಮತ್ತು ತರೀಕೆರೆ.
	ಸಬ್-ಡಿ|| ಆಫೀಸರ್, ಕಡೂರು.	ಕಡೂರು, ಕೊಪ್ಪ, ಮೂಡಗೆರೆ ಮತ್ತು ಎಡೇಹಳ್ಳಿ.
ಚಿತ್ರದುರ್ಗ	ಡೆ|| ಕಮಿಷನರವರು ...	ಚಿತ್ರದುರ್ಗ, ಮೊಳಕಾಲ್ಮೂರು ಮತ್ತು ಹರಿಹರ.
	ಸಬ್-ಡಿ|| ಆಫೀಸರ್, ದಾವಣಗೆರೆ.	ಹೊಳಲಕೆರೆ, ಹೊಸದುರ್ಗ ಮತ್ತು ಜಗಲೂರು.
	ಸಬ್-ಡಿ|| ಆಫೀಸರ್, ಚಿತ್ರದುರ್ಗ.	ಚಳ್ಳಕೆರೆ, ಹಿರಿಯೂರು ಮತ್ತು ದಾವಣಗೆರೆ.

Selection of Seeds.*

ಬಿತ್ತನೆ ಬೀಜದ ಚುನಾವಣೆ.

ಧಾನ್ಯಾದಿಗಳನ್ನು ಬೆಳೆಯುವದರಲ್ಲಿ ತೂಕವಾದ ಬೀಜವನ್ನು ಬಿತ್ತಿ

* ಇಂಡಿಯನ್ ಟ್ರೇಡ್ ಜರ್ನಲ್, ೨೫—೧೧—೦೯.

ದರೆ ಉತ್ಪತ್ತಿಯು ನಿಸ್ಸತ್ತುಕವಾದ ಬಿತ್ತದಿಂದ ಬರುವದಕ್ಕಿಂತಲೂ ಜಾಸ್ತಿಯಾಗಿ ಆಗುತ್ತದೆಯೆಂತಲೂ, ಹೀಗೆ ತೂಕವಾದ ಬಿತ್ತವನ್ನೇ ಆರಿಸಿಕೊಳ್ಳುವದಕ್ಕೆ ಹಿಡಿಯುವ ವ್ಯವಧಾನ, ಕೆಲಸ ಮತ್ತು ಖರ್ಚು ಫಸಲಿನಿಂದ ದೊರೆಯುವ ಹೆಚ್ಚಿನ ಬೆಲೆಯಿಂದ ಧಾರಾಳವಾಗಿ ಹಿಂದಕ್ಕೆ ಬರುವದೆಂತಲೂ ಅಮೇರಿಕಾ ಮತ್ತು ಯೂರೋಪು ದೇಶಗಳಲ್ಲಿ ಅನೇಕ ಆಜಮಾಯಿಷಿಗಳಿಂದ ಗೊತ್ತು ಮಾಡಲ್ಪಟ್ಟಿರುತ್ತದೆ.

ಭಾರವಾಗಿರುವ ಬೀಜಗಳು ಜಾಗ್ರತೆಯಾಗಿ ಮೊಳಕೆ ಬಿಡುವುವು ಮತ್ತು ಇವುಗಳ ಸೊಸಿಗಳೂ ಕೂಡ ದೃಢವಾಗಿಯೂ ಮತ್ತು ವೇಗವಾಗಿಯೂ ಬೆಳವಳಿಕೆ ಹೊಂದುತ್ತವೆ. ಫಸಲುತ್ಪತ್ತಿಯಂತು ಮೊದಲೇ ಹೇಳಿರುವ ಮೇರೆ ಜಾಸ್ತಿಯಾಗುವದಲ್ಲದೆ ಕಾಳುಗಳ ಆಕಾರ ಒಂದೇ ಸಮನಾಗಿರುವುದು. ಭಾರವಾದ ಕಾಳುಗಳನ್ನೂ ಹಗುರವಾದವುಗಳನ್ನೂ, ಪ್ರತ್ಯೇಕಿಸುವದಕ್ಕೆ ತಕ್ಕ ಕಣ್ಣುಗಳುಳ್ಳ ಜಲಡಿಗಳಲ್ಲಾಡುವದು ಒಂದು ಅತಿ ಸಾಮಾನ್ಯೋಪಾಯ. ನೀರಿನಲ್ಲಿ ಧಾನ್ಯವನ್ನು ಹಾಕಿ ಪರೀಕ್ಷಿಸುವದು ಮತ್ತೊಂದು ಮಾರ್ಗ. ತೂಕವಾದವು ನೀರಿನೊಳಗೆ ಮುಳುಗಿ ಹಗುರವಾದವು ತೇಲುವವು. ಆದರೆ ಇದರಲ್ಲಿ ಒಂದು ಪ್ರತಿಕೂಲವೇನಂದರೆ, ಸಣ್ಣ ಸಣ್ಣ ನೀರುಗುಳ್ಳೆಗಳು ಬೀಜಕ್ಕೆ ಅಂಟಿಕೊಂಡರೆ ಭಾರವಾದ ಬೀಜವೂ ಕೂಡ ತೇಲುವದುಂಟು. ಇದಕ್ಕೆ ಪ್ರತಿಯಾಗಿ ಒಂದು ಗಾಜಿನ ಸೀಸೆಯ ಅಡಿಯಲ್ಲಿ ಒಂದು ರಂಧ್ರವನ್ನು ಮಾಡಿ ಈ ರಂಧ್ರಕ್ಕೆ ಒಂದು ತಿತ್ತಿಯ ಬಾಯಿಗೆ ಸೇರಿಸಿರುವ ರಬ್ಬರು ಕೊಳವೆಯನ್ನು ಜಂಟಿಸಿ, ಧಾನ್ಯವನ್ನು ಸೀಸೆಯಲ್ಲಿ ಹಾಕಿ ಗಾಳಿ ಊದಿದರೆ ಹಗುರವಾದ ಬೀಜವೆಲ್ಲಾ ಹಾರಿಹೋಗುತ್ತದೆ. ಈ ರೀತಿ ಹೊಗೆಸೊಪ್ಪಿನ ಬೀಜವನ್ನು ಪ್ರತ್ಯೇಕಿಸಿರುತ್ತಾರಂತೆ. ಮುಖ್ಯವಾಗಿ ಯಾವ ರೀತಿಯಲ್ಲೇ ಆಗಲಿ ತೂಕವಾದ ಬೀಜಗಳನ್ನೇ ಆರಿಸಿಕೊಂಡು ಪೈರು ಮಾಡುವದರಲ್ಲಿ ಬಹಳ ಪ್ರಯೋಜನ ಉಂಟೆಂದು ತೋರುವದರಿಂದ ಅದರಂತೆ ಸಾಧ್ಯವಾದ ಮಟ್ಟಿಗೂ ಬೇಸಾಯಗಾರರು ಅನುಸರಿಸುವದು ಒಳ್ಳೇದು.

Extracts from the Dewan's Dasara Address, 09.

ಚಾಲ್ತಿ ಸಾಲ್ ಪ್ರಜಾಪ್ರತಿನಿಧಿ ಸಭೆಯಲ್ಲಿ ದಿವಾನರವರು ಮಾಡಿದ ಉಪನ್ಯಾಸ.

ವ್ಯವಸಾಯ ಬ್ಯಾಂಕುಗಳು.

ವ್ಯವಸಾಯ ಬ್ಯಾಂಕುಗಳು ಜಾಗ್ರತೆಯಾಗಿ ಒಂದೊಂದಾಗಿ ನಿಂತು ಹೋಗುತ್ತಾ ಬರುತ್ತಿರುವುದು ತುಂಬಾ ವಿಷಾದಕರವಾಗಿದೆ. ಅವುಗಳನ್ನು ನಡೆಸಿಕೊಂಡು ಬರುವ ಜನಗಳಲ್ಲಿ ಕಾರ್ಯನಿರ್ವಾಹಕ ಶಕ್ತಿಯೂ, ಉತ್ಸಾಹವೂ, ಜನಗಳ ಕ್ಷೇಮಚಿಂತನೆಯೂ ಇಲ್ಲದೆ ಇರುವುದೇ ಇದಕ್ಕೆ ಕಾರಣವಾಗಿದೆ. ಈ ವರ್ಷದಲ್ಲಿ ಆರು ಬ್ಯಾಂಕುಗಳು ಮೌಕೂಫ್ ಆಗಿ ಸಾಲಾಖೈರಿನಲ್ಲಿ ೨೨ ಬ್ಯಾಂಕುಗಳು ಮಾತ್ರ ಉಳಿದಿದ್ದವು. ಇವುಗಳ ಪೈಕಿ ೩ ಬ್ಯಾಂಕುಗಳಲ್ಲಿ ಮಾತ್ರ ಪ್ರಯೋಜನಕರವಾದ ಕೆಲಸವು ಸ್ವಲ್ಪ ಮಟ್ಟಿಗೆ ನಡೆದಿರುವುದೆಂದು ಹೇಳಬಹುದು ; ಸರ್ಕಾರದ ಸಾಲವನ್ನು ತೀರಿಸಿ ಸ್ವಂತ ಹಣದಿಂದ ಕಾರ್ಯನಿರ್ವಾಹ ಮಾಡುತ್ತಿರುವುದು ನಂಜನಗೂಡು ಬ್ಯಾಂಕು ಒಂದರಲ್ಲಿಯೇ ಹೊರತು ಬೇರೆ ಯಾವುದರಲ್ಲಿಯೂ ಇಲ್ಲ.

ಈ ವರ್ಷದಲ್ಲಿ ಕಾರ್ಯ ಜರುಗಿಸುತ್ತಿದ್ದ ಬ್ಯಾಂಕುಗಳಿಂದಲೂ, ಮೌಕೂಫ್ ತರದೂದಿನಲ್ಲಿದ್ದ ಬ್ಯಾಂಕುಗಳಿಂದಲೂ ಸರ್ಕಾರಕ್ಕೆ ಸಲ್ಲಬೇಕಾದ ಸಾಲದ ಅಸಲು ಮತ್ತು ಬಡ್ಡಿ ಬಗ್ಗೆ ೮೦,೦೦೦ ರೂಪಾಯಿ ವಸೂಲಾಯಿತು. ಸಂಸ್ಥಾನದಲ್ಲೆಲ್ಲಾ ದುರ್ಭಿಕ್ಷ ಪ್ರಾಪ್ತವಾಗಿದ್ದ ಸಬಬು ಕೆಲವು ಬ್ಯಾಂಕುಗಳಿಂದ ಬರಬೇಕಾದ ಸಾಲವನ್ನು ಕೊಂಚಕಾಲ ತಡೆದು ತೀರಿಸಬಹುದೆಂತ ಹುಕುಂ ಮಾಡಲಾಯಿತು.

ಅನ್ಯೋನ್ಯ ಸಹಾಯಕ ಸಂಘಗಳು.

ವ್ಯವಸಾಯ ಬ್ಯಾಂಕುಗಳು ಒಂದೊಂದಾಗಿ ಕಡಮೆ ಬೀಳುತ್ತಾ ಬಂದುದಕ್ಕೆ ಪ್ರತಿಯಾಗಿ ಅನ್ಯೋನ್ಯಸಹಾಯಕ ಸಂಘಗಳ ಸಂಖ್ಯೆಯು ಬಹುಮಟ್ಟಿಗೆ ಹೆಚ್ಚುತ್ತಾ ಬಂದಿರುವುದು ತುಂಬಾ ಸಂತೋಷಕರವಾಗಿರುತ್ತದೆ. ಇವುಗಳು ೨೭ರಿಂದ ೪೫ಕ್ಕೂ, ಇವುಗಳ ಮೆಂಬರುಗಳ ಸಂಖ್ಯೆಯು ೨,೪೫೧ರಿಂದ ೪,೫೮೧ಕ್ಕೂ, ಮತ್ತು ಸದರಿ ಮೆಂಬರುಗಳಿಂದ ಅವರವರ

ಹಿಸ್ಸೆಗಾಗಿ ಪಾವತಿಯಾಗಿರುವ ಬಂಡವಾಳದ ಮೊಬಲಗು ೫೭,೦೦೦ ರೂಪಾಯಿಂದ ೧,೦೫,೦೦೦ ರೂಪಾಯಿಗೂ ಹೆಚ್ಚಿವೆ. ಮೆಂಬರುಗಳು ಬಡ್ಡಿ ಪಡೆಯುವುದಕ್ಕಾಗಿ ಡಿಪಾಜಟ್ ಇಟ್ಟಿರುವ ಮೊಬಲಗು ೬,೩೦೦ ರೂ॥ ಯಿಂದ ೧೨,೭೦೦ ರೂಪಾಯಿಗೆ ಹೆಚ್ಚಿರುವುದು. ಇದರಿಂದ ಇಂಥಾ ಸಂಘಗಳಲ್ಲಿ ಜನಗಳಿಗೆ ನಂಬಿಕೆಯು ಹೆಚ್ಚುತ್ತಾ ಇದೆ ಎಂದು ತೋರಿಬರುತ್ತದೆ. ಈ ಸಂಘಗಳಿಂದ ಮೆಂಬರುಗಳು ೨| ಲಕ್ಷ ರೂಪಾಯಿನ ಸಾಲವನ್ನು ನಗದಾಗಿ ತೆಗೆದುಕೊಂಡಿರುತ್ತಾರೆ. ಈ ಪೈಕಿ ೨ ಲಕ್ಷ ರೂಪಾಯಿಯು ಸದರಿ ಸಂಘಗಳಿಗೆ ಈ ವರ್ಷದಲ್ಲಿಯೇ ವಾಪಸು ಪಾವತಿಯಾಗಿದೆ. ಹಾಲಿ ಇರುವ ೪೫ ಸಂಘಗಳ ಪೈಕಿ ೧೯ ಸಂಘಗಳು ಗ್ರಾಮಾಂತರಗಳಲ್ಲಿ ಏರ್ಪಟ್ಟ ವ್ಯವಸಾಯಕ ಸಂಘಗಳಾಗಿಯೂ, ೧೨ ಸಂಘಗಳು ಸಾಲಕೊಡುವ ಮತ್ತು ಆಹಾರ ಸಾಮಗ್ರಿಗಳನ್ನು ಒದಗಿಸುವ ಸಂಘಗಳಾಗಿಯೂ, ಮತ್ತು ೮ ಸಂಘಗಳು ಕೈಗಾರಿಕೆಗೆ ಸಂಬಂಧಪಟ್ಟ ಸಂಘಗಳಾಗಿಯೂ ಇವೆ. ಈ ಕಡೆಯಲ್ಲಿ ಸೂಚಿಸಿರುವ ೮ ಸಂಘಗಳ ಪೈಕಿ ೬ ಸಂಘಗಳು ನೇಯಿಗೆ ಕೆಲಸಕ್ಕೂ, ಒಂದು ಸಂಘವು ರೇಷ್ಮೆ ಸುತ್ತುವ ಕೆಲಸಕ್ಕೂ, ಮತ್ತೊಂದು ಸಂಘವು ಚಿನ್ನದ ಸಾಮಾನು ತಯಾರ್ಮಾಡುವ ಕೆಲಸಕ್ಕೂ, ಪ್ರೋತ್ಸಾಹ ಕೊಡುವವುಗಳಾಗಿವೆ. ಈ ಅನ್ಯೋನ್ಯಸಹಾಯಕ ಸಂಘಗಳ ವಿಷಯವು ಸಂಸ್ಥಾನದಲ್ಲೆಲ್ಲಾ ಚೆನ್ನಾಗಿ ತಿಳಿದಿದೆ. ಜನಗಳು ಈ ಸಂಘಗಳ ವಿಚಾರದಲ್ಲಿ ತುಂಬಾ ಆಸಕ್ತಿಯನ್ನು ತೋರ್ಪಡಿಸುತ್ತಿದಾರೆ. ಆದರೂ ಅಲ್ಲಲ್ಲಿ ಇಂಥಾ ಸಂಘ ಹುಟ್ಟಿ ಅಭಿವೃದ್ಧಿಯಾಗಬೇಕಾದರೆ ಪ್ರಮುಖರಾದ ಒಬ್ಬೊಬ್ಬರು ಮುಂದಾಳುಗಳಾಗಿ ನಿಂತು ಆಸಕ್ತಿಯಿಂದ ಕೆಲಸ ಮಾಡಬೇಕಾಗಿದೆ; ಮತ್ತು ಇನ್ನೂ ಬಹಳ ಕಾಲದವರೆಗೆ ಈ ಸಂಘಗಳ ವಿಷಯದಲ್ಲಿ ಬುದ್ಧಿಶಾಲಿಗಳಾಗಿಯೂ ಪ್ರಜಾಹಿತೈಷಿಗಳಾಗಿಯೂ ಇರುವ ಜನಗಳು ತುಂಬಾ ಮುತವರ್ಜಿ ವಹಿಸಬೇಕಾದ್ದು ಅತ್ಯವಶ್ಯಕವಾಗಿದೆ. ಈ ಅಂಶಕ್ಕೆ ದೃಷ್ಟಾಂತವಾಗಿ ಇದೇ ಸಾಲಿನಲ್ಲಿ ಆನೆಕಲ್ ತಾಲ್ಲೂಕು ಮಾಯಸಂದ್ರದ ಧಾನ್ಯದ ಬ್ಯಾಂಕು ಮೌಕೂಫ್ ಆದದ್ದನ್ನು ಇಲ್ಲಿ ಸೂಚಿಸಬಹುದು. ಈ ಬ್ಯಾಂಕಿನಲ್ಲಿ ಮೊದಲು ಚೆನ್ನಾಗಿ ಕೆಲಸ ನಡೆಯುತ್ತಿದ್ದರೂ ಅದರ ಕಾರ್ಯದರ್ಶಿಯು ಪ್ಲೇಗರೋಗದಿಂದ ಮೃತಪಟ್ಟನಂತರ ಬೇರೆ ಇ

ನ್ನೊಬ್ಬ ಶಕ್ತರಾದ ಕಾರ್ಯದರ್ಶಿಯು ಸಿಕ್ಕದೆ ಹೋದ ಪ್ರಯುಕ್ತ ಆ ಬ್ಯಾಂಕನ್ನೇ ಮೌಕೂಫ್ ಮಾಡಬೇಕಾಗಿ ಬಂತು.

ಪಿಂಛಣ್ ಪಡೆದಿರುವ ಕೌನ್ಸಿಲರ್ ರಾಜಮಂತ್ರಪ್ರವೀಣ ಮಿ|| ಸಿ. ಶ್ರೀನಿವಾಸೈಯಂಗಾರ್ರವರೂ, ಡೆಪ್ಯುಟಿ ಕಮಿಷನರ್ ಮಿ|| ಎಂ. ಎಸ್. ನಾರಾಯಣರಾಯರವರೂ, ಪೋಲೀಸ್ ಸೂಪರಿಂಟೆಂಡೆಂಟ್ ಮಿ|| ಸಿ. ಡಿ. ರಾಮಸ್ವಾಮೈಯನವರೂ ಇವರೇ ಮೊದಲಾದ ಕೆಲವರು ಈ ಸಂಘಗಳ ಏರ್ಪಾಡಿನ ವಿಷಯದಲ್ಲಿ ವಿಶೇಷ ಮುತುವರ್ಜಿಯನ್ನು ವಹಿಸಿ ಅವುಗಳನ್ನು ಅಭಿವೃದ್ಧಿಪಡಿಸುತ್ತಿರುವುದು ತುಂಬಾ ಸಂತೋಷಪ್ರದವಾಗಿದೆ. ಮಿ|| ಸಿ. ಡಿ. ರಾಮಸ್ವಾಮೈಯನವರು ಗ್ರಾಮಾಂತರಗಳಲ್ಲಿ ಈ ಸಂಘಗಳನ್ನು ಏರ್ಪಡಿಸುವ ವಿಷಯದಲ್ಲಿ ತುಂಬಾ ಪ್ರಯಾಸಪಟ್ಟು ಜನಗಳಿಗೆ ಪ್ರಯೋಜನವನ್ನುಂಟುಮಾಡಿರುತ್ತಾರೆ.

ರಾಜಮಂತ್ರಪ್ರವೀಣ ಮಿ|| ಸಿ. ಶ್ರೀನಿವಾಸೈಯಂಗಾರ್ರವರು, ಮಿ|| ಎಂ. ಎಸ್. ನಾರಾಯಣರಾಯರವರೂ, ಇವರುಗಳ ಸಹಾಯದಿಂದ ಇತರ ಸಂಘಗಳಿಗೆ ಹಣವನ್ನು ಒದಗಿಸಿ ಕೊಡುವ ಉದ್ದಿಶ್ಯ ಬೆಂಗಳೂರಲ್ಲಿ ಒಂದು ಸೆಂಟ್ರಲ್ ಅನ್ಯೋನ್ಯಸಹಾಯಕ ಬ್ಯಾಂಕು ಏರ್ಪಟ್ಟಿರುತ್ತದೆ. ಇದರಿಂದ ತುಂಬಾ ಪ್ರಯೋಜನ ಉಂಟಾಗುತ್ತದೆಂಬ ಅಂಶವನ್ನು ತಿಳಿದು ಇದರ ವಿಷಯದಲ್ಲಿ ತಮಗೆ ಇರುವ ಅಭಿಮಾನವನ್ನು ಪ್ರಕಾಶಪಡಿಸುವ ಉದ್ದಿಶ್ಯ ಶ್ರೀಮನ್ಮಹಾರಾಜಾ ಸಾಹೇಬ್ ಬಹದ್ದೂರವರು ಖಾಯಮಾಗಿ ಡಿಪಾಜಿಟ್ ಇಡುವ ಬಗ್ಗೆ ಹಣವನ್ನು ದಯಪಾಲಿಸಿರುತ್ತಾರೆ.

Revenue Appeals.

ರೆವಿನ್ಯೂ ಅಪೀಲುಗಳು.

ಅಪೀಲು ವಾದಿ.—ಡಿ. ವೆಂಕೋಬರಾಯರು.

ಮೊಕದ್ದಮೆಯ ವಿದ್ಯಮಾನ.—ಅಪೀಲುದಾರರು ೧೯೦೬ನೆ ಮಾರ್ಚಿ ಮಾಹೆಯಲ್ಲಿ ನಡೆದ ಮಾಲ್ಕಿ ಹರಾಜಿನಲ್ಲಿ ಒಂದು ಜಮೀನನ್ನು ೨೧೫ ರೂಪಾಯಿಗೆ ಪಡೆದರು. ಈ ಹರಾಜು ಅದೇ ಇಸವಿ ಏಪ್ರಿಲ್ ೨೪ರಲ್ಲಿ ಸ

ಬ್ ಡಿವಿಜನ್ ಆಫೀಸರವರಿಂದ ಖಾಯಂ ಮಾಡಲ್ಪಟ್ಟು, ಕ್ರಯದಾರರಿಗೆ ಮುಂಚೆ ಮೇ ಮಾಹೆಯ ೧೪ನೆ ತಾರೀಖಿನ ದಿನ ಸಾಗುವಳಿ ಚೀಟಿಯು ಪ್ರಾಪ್ತಿಯಾಯಿತು. ಅದೇ ತಿಂಗಳು ೨೪ರ ದಿನ ವಾದಿಯು, ಸಾಲ್ ಆಖೈರಿನಲ್ಲಿ ಸಾಗುವಳಿ ಚೀಟಿಯು ದೊರಕಿದ್ದರಿಂದ ತಾನು ಜಮೀನು ಸಾಗುವಳಿ ಮಾಡಲು ಆಗಲಿಲ್ಲವಾಗಿ ೧೯೦೨—೦೩ನೆ ಸಾಲ್ ಕಂದಾಯವನ್ನು ಸೋಡಿಯಾಗಬೇಕೆಂದು ಡೆಪ್ಯುಟಿ ಕಮೀಷನರವರಿಗೆ ಅರ್ಜಿ ಕೊಟ್ಟನು. ಡೆಪ್ಯುಟಿ ಅಮಲ್ದಾರರೂ ಕೂಡ ಇದೇ ಆಧಾರದ ಮೇಲೆ ಕಂದಾಯ ರಿಮೀಷನ್ ಆಗಬಹುದೆಂದು ಶಿಫಾರಸು ಮಾಡಿದರು. ೧೯೦೪ನೆ ಡಿಶಂಬರ್ ೧೯ರಲ್ಲಿ ಡೆಪ್ಯುಟಿ ಕಮಿಷನರ್ ಮಿ|| ಪಿ. ಆರ್. ಡಬ್ಲ್ಯು. ಪೆರರಲ್‌ರವರು ಜಮೀನು ಸ್ವಾಧೀನವಡಿಯುವ ಕಾಲದಲ್ಲಿ ವಾದಿಯು ಇಂಥಾ ತಕರಾರು ಏನೂ ಮಾಡಲಿಲ್ಲವಾಗಿ ಇವನ ಕೋರಿಕೆಯಂತೆ ಕಂದಾಯ ರಿಮೀಷನ್ ಮಾಡಲಾಗುವದಿಲ್ಲವೆಂದು ಹುಕುಂ ಮಾಡಿದರು. ಈ ಹುಕುಮನ್ನು ತಾಲ್ಲೂಕು ಅಧಿಕಾರಿಗಳು ೨½ ವರುಷಗಳಾದಮೇಲೆ ಅಂದರೆ ೧೯೦೭ನೆ ಮೇ ತಿಂಗಳು ೩ನೆ ತಾರೀಖಿನ ದಿನ ಅಪೀಲು ವಾದಿಗೆ ತಿಳಿಸಿದರು. ಆಗ್ಯೆ ಈತನು ಪುನಃ ಮೊದಲಿನಂತೆಯೇ ತಕರಾರು ಮಾಡಲು, ಜಮೀನಿನ ಮೇಲೆ ಕ್ರಮ ಜರಿಗಿ ಇದು ೧೯೦೭ನೆ ಜುಲೈ ೯ರಲ್ಲಿ ಹರಾಜು ಮಾಡಲ್ಪಟ್ಟಿತು. ಅನಂತರ ಅಪೀಲು ವಾದಿಯು ಡೆಪ್ಯುಟಿ ಕಮಿಷನರವರ ಹುಕುಂ ಅನುಸರಿಸಿ ತಕರಾರಿನಲ್ಲಿದ್ದ ಕಂದಾಯದ ಬಾಕಿಯನ್ನು ಬಡ್ಡಿ ಬೇಖೀಲು ವಸೂಲು ಕೊಟ್ಟು ಹರಾಜು ಕ್ಯಾನ್ಸಲ್ ಬಗ್ಯೆ ಕೇಳಿಕೊಳ್ಳಲು ಡೆಪ್ಯುಟಿ ಕಮೀಷನರವರು ಹರಾಜನ್ನು ಕ್ಯಾನ್ಸಲ್ ಮಾಡಿ, ಈ ವಿಷಯದಲ್ಲಿ ಇನ್ನೇನೂ ಹೆಚ್ಚಾದ ರಿಯಾಯತಿ ತೋರಿಸಲಾಗುವದಿಲ್ಲವೆಂದು ಹುಕುಂ ಮಾಡಿದರು.

ರೆವಿನ್ಯೂ ಕಮೀಷನರವರ ತೀರ್ಮಾನ.—ಸಾಗುವಳಿ ಚೀಟಿಯು ಸಾಲ್ ಆಖೈರು ಆಗುವದಕ್ಕೆ ಒಂದು ತಿಂಗಳು ೧೭ ದಿನಗಳು ಮಾತ್ರ ಮುಂಚಿತವಾಗಿ ಅಪೀಲು ವಾದಿಗೆ ಪ್ರಾಪ್ತಿಯಾಗಿರುತ್ತದೆಯಲ್ಲದೆ ಡೆಪ್ಯುಟಿ ಅಮಲ್ದಾರು ತಮ್ಮ ೧೯೦೩ನೆ ಆಗಸ್ಟು ೨೯ನೆ ಮರ್ಕ್ಯವಿಸ ಇತ್ತಲ್ಲಿಯಲ್ಲಿ ಅಪೀಲು ವಾದಿಯು ಜಮೀನಿನಲ್ಲಿದ್ದ ಗಿಡಗುಪ್ಪೆಗಳನ್ನು ಕಡೆದ,ಹಾಕಿ

ಪಾಕುಮಾಡುವ ಕೆಲಸದಲ್ಲಿ ತೊಡಗಿದ್ದಕಾರಣ ಅದನ್ನು ಇನ್ನೂ ಸಾಗುವಳಿ ಮಾಡಿರಲಿಲ್ಲವೆಂದು ನಮೂದಿಸಿರುತ್ತಾರೆ. ಈ ಸಂದರ್ಭಗಳಲ್ಲಿ ಅಪೀಲುವಾದಿಯನ್ನು ೧೯೦೭-೦೮ನೆ ಸಾಲ್ ಕಂದಾಯಕ್ಕೆ ಗುರಿಪಡಿಸುವದು ನ್ಯಾಯವಾಗಿ ತೋರುವದಿಲ್ಲ. ಸರ್ಕಾರಿ ಜಮೀನುಗಳ ಹರಾಜು ಷರತ್ತುಗಳ ೧೦ನೆ ಪ್ಯಾರಾದಲ್ಲಿ ಜಮೀನನ್ನು ಕ್ರಯದಾರನು ಅಕಾಲದಲ್ಲಿ ಪಡೆದ ಸಬಬಿನಿಂದ ಇವನು ಪಡೆದ ಸಾಲಿನಲ್ಲಿ ಅದನ್ನು ಉಪಯೋಗಿಸುವದಕ್ಕೆ ಆಗದೇ ಹೋಗುವ ಪಕ್ಷಕ್ಕೆ, ಸದರಿ ಜಮೀನಿನ ಕಂದಾಯ ವ ಲೋಕಲ್ ಸೆಸ್ಸನ್ನು ಮುಂದಿನ ವರುಷದವರೆಗೂ ಇವನ ಮೇಲೆ ಹೊರಿಸತಕ್ಕದ್ದಲ್ಲವೆಂತ ಕಂಡಿರುತ್ತೆ. ಆದಕಾರಣ ೧೯೦೭-೦೮ನೆ ಸಾಲಿನ ಕಂದಾಯವನ್ನು ರಿಮಿಟ್ ಮಾಡಿ ವಾದಿಯಿಂದ ವಸೂಲು ಆಗಿರುವ ಮೊಬಲಗನ್ನು ಈತನಿಗೆ ರೀಫಂಡು ಮಾಡತಕ್ಕದ್ದೆಂದು ಹುಕುಂ ಮಾಡಿರುತ್ತೆ.

Government Proceedings.

ಸರ್ಕಾರಿ ಹುಕುಂಗಳು.

ಸಂಸ್ಥಾನಾಮಳೆ ಪಟೇಲ್ ಶಾನುಭೋಗಿ ನೌಕರಿ ಇನಾಂಜಮೀನು ಅಥವಾ ವರ್ತನಗಳ ಸರ್ವೆ ಆಕಾರವು ಪ್ರತಿಸರ್ವೆ ಸೆಟ್ಲಮೆಂಟನ್ನು ಅನುಸರಿಸಿ ಹೆಚ್ಚು ಕಡಿಮೆಯಾಗುತ್ತದೆ. ಇದರಂತೆಯೇ ವರ್ತನ ಆದಾಯಗಳೂ-ಅಂದರೆ, ವರ್ತನಮೇಲೆ ಸರ್ವೆ ಸೆಟ್ಲಮೆಂಟ್ ಪ್ರಕಾರ ಠರಾವು ಆಗುವ ಆಕಾರದಲ್ಲಿ ವರ್ತನದಾರರಿಂದ ಸರ್ಕಾರಕ್ಕೆ ಪಾವತಿಯಾಗಬೇಕಾದ ಜೋಡಿ ಯಾ ಕಂದಾಯ ವಜಾ ಜಾತಾ ಉಳಿಯುವ ಮೊಬಲಗು-ಕೂಡ ಸ್ವತೇವ ವ್ಯತ್ಯಾಸ ಹೊಂದಲೇಬೇಕು. ಆದರೆ ಒಂದೊಂದು ಸರ್ವೆ ಸೆಟ್ಲಮೆಂಟಿನಲ್ಲಿಯೂ ವರ್ತನಿನ ಬೇರೀಜು ಠರಾವು ಮಾಡಬೇಕಾದರೆ ವರ್ತನ ಜಮೀನುಗಳ ಮೊದಲಿನ ಸರ್ವೆ ಆಕಾರವನ್ನು ಗಣನೆಗೆ ತೆಗೆದುಕೊಳ್ಳಬೇಕೇ ಅಥವಾ ಹೊಸದಾಗಿ ಲೆಕ್ಕಾಚಾರವಾಗುವ ಸರ್ವೆ ಆಕಾರವನ್ನು ಗಣನೆಗೆ ತೆಗದುಕೊಳ್ಳಬೇಕೇ ಎಂಬ ಅಂಶವು ಸ್ಪಷ್ಟೀಕರಿಸಲ್ಪಟ್ಟಿಲ್ಲ. ಆದಾಗ್ಯೂ ನೌಕರಿ ಮಾಡುವವರಿಗೆ ಕೊಡತಕ್ಕ ಪ್ರೋಟಗಿಯು ಸರ್ವೆ ಸೆಟ್ಲಮೆಂಟನ್ನು

ನುಸರಿಸಿ ಬದಲಾಯಿಸಲ್ಪಡತಕ್ಕದ್ದೆಂದು ವಿಧಾಯಕವಾಗಿರುವುದರಿಂದ ತನಿನ ಬೇರೀಜು ಕೂಡ ರಿವೈಜು ಸೆಟ್ಲ್ಮೆಂಟಿಗನುಗುಣವಾಗಿ ಬದಲಾವ ಯಾಗತಕ್ಕದೆಂದು ಸ್ವಾಭಾವಿಕವಾಗಿ ಊಹಿಸಬೇಕಾಗುತ್ತೆ. ಮತ್ತು ದೇರೀತಿ ಬೊಂಬಾಯಿ ಆಧಿಪತ್ಯದಲ್ಲಿಯೂ ಕೂಡ ಆಚರಣೆಯಲ್ಲಿರುವದು. ರ್ತನದಾರರಿಂದ ಸರ್ಕಾರಕ್ಕೆ ಸಲ್ಲುವ ಜೋಡಿ ಮತ್ತು ಇತರ ತೀರ್ವೆಗಳೇ ೋ ಹೀಗೆ ಬದಲಾವಣೆ ಹೊಂದತಕ್ಕವುಗಳಲ್ಲ.

೨. ಮೇಲ್ಕಂಡಂತೆ ಗೊತ್ತು ಮಾಡಲ್ಪಟ್ಟ ವರ್ತನಿನ ಬೇರೀಜು ೊಬಲಗು ಕೆಲಸ ನೋಡತಕ್ಕವನಿಗೆ ತಲಬು ಅಥವಾ ಪ್ರೋಟಗಿ ಕೊಡುವ ಗ್ಯೆ ವಿನಿಯೋಗಿಸಲ್ಪಡತಕ್ಕದ್ದಾಗಿರುತ್ತೆ. ಈ ಬೇರೀಜು ಮೊಬಲಗು ಾಮದ ಖುಲ್ಲ ಜಮಾಬಂದಿ ಮೊಬಲಗಿನ ದಾಮಾಷಾಯಿ ಪ್ರಕಾರ ಠ ಾವು ಆದ ತಲಬಿಗಿಂತಲೂ ಕಮ್ಮಿಬಿದ್ದರೆ, ಕಮ್ಮಿಬಿದ್ದ ಮೊಬಲಗು ಸ ರ್ಕಾರಿ ಖಜಾನೆಯಿಂದಲೇ ಭರ್ತಿಯಾಗತಕ್ಕದ್ದೆಂತಲೂ, ಜಾಸ್ತಿಯಾದರೆ ಂಥಾ ಜಾಸ್ತಿ ಭಾಗದಮೇಲೆ ಸದರಿ ಜಮೀನಿನ ಬಾಬತು ಹೆಚ್ಚಿನ ಆದಾ ಮದ ಅರವಾಸಿಗೆ ಸಮನಾಗಿ ಜಾಸ್ತಿ ಜೋಡಿಯಾನೆ „ನೀಂ ಜೋಡಿ" ಯನ್ನು ಮೊಕರೂರು ಮಾಡಿ ಮಿಕ್ಕ ಅರವಾಸಿಯನ್ನು ಜಮೀನು ಹಿಡು ಳಿದಾರನ ಅನುಭವಕ್ಕೇನೆ ಬಿಡತಕ್ಕದೆಂದೂ ಪ್ರೋಟಗಿ ರೂಲುಗಳಲ್ಲಿ ವಿ ಧಾಯಕವಾಗಿದುತ್ತದೆ. ಈ „ನೀಂ ಜೋಡಿ"ಯೂ ಕೂಡ ಒಂದೊಂದು ೆಟ್ಲ್ಮೆಂಟಿನಲ್ಲಿ ಒಂದೊಂದು ಪ್ರಕಾರವಾಗಿ ವ್ಯತ್ಯಾಸ ಹೊಂದಬಹುದು. ದು ಹಿಂದಿನ „ನೀಂ"ಗಿಂತಲೂ ಕಮ್ಮಿಯಾದ ಪಕ್ಷಕ್ಕೆ ರೂಲು ಪ್ರಕಾರ ಮ್ಮಿ ಮೊಬಲಗನ್ನೇ ವಸೂಲುಮಾಡತಕ್ಕದ್ದು. ಜಾಸ್ತಿಯಾಗುವ ಪ ಕ್ಷಕ್ಕೆ ಜಾಸ್ತಿಮೊಬಲಗನ್ನು ವಸೂಲು ಮಾಡಬೇಕೇ ಅಥವಾ ಹಿಂದಿನ „ನೀಂ"ಜೋಡಿಗೆ ಸಮನಾದ ಮೊಬಲಗನ್ನೇ ವಸೂಲು ಮಾಡಬೇಕೇ ಎಂ ಅಂಶವು ನಿರ್ಣಯವಾಗಿಲ್ಲ. ಈ ನೀಂಜೋಡಿಯು ವರ್ತನಿನ ಬೇರೀ ಜನ್ನನುಸರಿಸಿ ಹೆಚ್ಚಿಸಲ್ಪಡತಕ್ಕದಲ್ಲವೆಂತಲೂ ಮೊದಲಿನ ಮೊಬಲಗಿನ ್ಟೇ ಇರತಕ್ಕದೆಂದೂ ಬೊಂಬಾಯಿ ಆಧಿಪತ್ಯದಲ್ಲಿ ಇತ್ಯರ್ಥವಾಗಿ ಸದರಿ ರುತೆ ಜಾರಿಯಲ್ಲಿಸುತ್ತೆ.

ಆದಕಾರಣ ಮೇಲ್ಕಂಡ ಎರಡು ಭಾಗಗಳಲ್ಲಿಯೂ ಈ ಬೊಂಬಾಯಿ ಅಧಿಪತ್ಯದ ಠರಾವುಗಳನ್ನನುಸರಿಸಿ ನಮ್ಮ ಸಂಸ್ಥಾನದಲ್ಲಿಯೂ ಜಾರಿಯಲ್ಲಿ ತರಬಹುದೆಂದು ಸರ್ವೆ ಸೂಪರಿಂಟೆಂಡೆಂಟರು ಶಿಫಾರಸು ಮಾಡಿದ್ದನ್ನು ಗೌರ್ನಮೆಂಟಿನವರು ತಮ್ಮ ೧೮೯೧ನೆ ಅಕ್ಟೋಬರು ೨೫ನೆ ಮಾರ್ಕಿನ ಕ್ಯಾಂಪು ಆರ್. ೧೭—೨೬ ಆರ್. ಎಂ. ೪೦-೦೮-೨ನೆ ನಂಬರು ಪ್ರೊಸೀಡಿಂಗ್ಸಿನಲ್ಲಿ ಅಂಗೀಕರಿಸಿರುತ್ತಾರೆ.

ಮೇಲ್ಕಂಡ ಅಂಶಗಳು ಈ ಕೆಳಗಿನ ಉದಾಹರಣೆಗಳಿಂದ ಸುಲಭವಾಗಿ ತಿಳುವಳಿಕೆ ಬರುವವು.

A

ಪೋಟಗಿ ಸೆಟ್ಲಮೆಂಟಿನ ತಪ್ಸೀಲು.	ಪಟೇಲ್.		ರ
	ಮೊದಲಿನ ಸರ್ವೆ ಸೆಟ್ಲಮೆಂಟು.	ರಿವಿಜನ್ ಸರ್ವೆ ಸೆಟ್ಲಮೆಂಟು.	
ಖುಲ್ಲಾ ಜಮಾಬಂದಿ ...	1,100 0 0	1,292 0 0	
ನೌಕರಿ ಜಮೀನುಗಳ ಮೇಲಿನ ಸರ್ವೆ ಆಕಾರ	155 0 0	250 0 0	
ಮಾಮೂಲು ಜೋಡಿ ವಜಾ ಆಗತಕ್ಕದ್ದು.	92 12 0	92 12 0	
ಶಿಲ್ಕು, ಅಂದರೆ ನೌಕರಿ ನೋಡತಕ್ಕವನಿಗೆ ತಲಬು ಬಗ್ಗೆ ವಿನಿಯೋಗಿಸಲ್ಪಡಬಹುದಾದ ವತನಿನ ಬೇರೀಜು ...	62 4 0	157 4 0	
ರೂಲ್ಸು ಪ್ರಕಾರ ಕೆಲಸ ನೋಡತಕ್ಕವನಿಗೆ ಸಲ್ಲತಕ್ಕ ಪೂರಾ ಪೋಟಗಿ ಮೊಬಲಗು. ...	47 8 0	53 4 0	
ಉಳಿಯುವ ಶಿಲ್ಕು ...	14 12 0	104 0 0	
ನೀಂಜೋಡಿ ಬಗ್ಗೆ ವಜಾ ಆಗತಕ್ಕ ಇದರ ಅರಪಾಸಿ ಮೊಬಲಗು ...	7 6 0	7 6 0	
ವತನ್‌ದಾರನಿಗೆ ಉಳಿಯುವ ಶಿಲ್ಕು ...	7 6 0	96 10 0	
ವತನ್‌ದಾರನಿಂದ ವಸೂಲು ಬರುವ ಮೊಬಲಗು ...	147 10 0	153 6 0	

B

ಖುಲ್ಲುಜಮಾಬಂದಿ ...	1,501 0 0	1,685 0 0
ನೌಕರಿ ಜಮೀನುಗಳಮೇಲಿನ ಸರ್ವೆ ಆಕಾರ	228 8 0	374 8 0
ಮಾಮೂಲು ಜೋಡಿ ವಜಾ ಆಗತಕ್ಕದ್ದು.	176 0 0	176 0 0
ಶಿಲ್ಕು, ಅಂದರೆ ನೌಕರಿ ನೋಡತಕ್ಕವನಿಗೆ ತಲಬು ಬಗ್ಯೆ ವಿನಿಯೋಗಿಸಲ್ಪಡಬಹುದಾದ ವರ್ತನಿನ ಬೇರೀಜು ...	52 8 0	198 8 0
ರೂಲ್ಸು ಪ್ರಕಾರ ಕೆಲಸ ನೋಡತಕ್ಕವನಿಗೆ ಸಲ್ಲತಕ್ಕ ಪೂರಾ ಪ್ರೋಟಿಗ ಮೊಬಲಗು	52 8 0	64 0 0
ಉಳಿಯುವ ಶಿಲ್ಕು ...	......	134 8 0
ನೀಂಜೋಡಿ ಬಗ್ಯೆ ವಜಾ ಆಗತಕ್ಕ ಇದರ ಅರವಾಸಿ ಮೊಬಲಗು. ...	......	......
ವರ್ತದಾರನಿಗೆ ಉಳಿಯುವ ಶಿಲ್ಕು ...	......	134 8 0
ವರ್ತದಾರನಿಂದ ವಸೂಲು ಬರುವ ಮೊಬಲಗು ...	228 8 0	240 0 0

Notifications.

ಇಸ್ತಿಹಾರ್ ನಾಮೆಗಳು.

ನಂ|| ೬೧೭೨. ತಾರೀಖು ೧೭—೧೨—೦೯.

ಶಿವಮೊಗ್ಗ ಡಿಸ್ಟ್ರಿಕ್ಟ್ ಶಿರಸ್ತೇದಾರ್ ಟಿ. ಕೆ. ಲಕ್ಷ್ಮಣಯ್ಯರ್ ಯವರಿಗೆ ಇದೇ ಮಾಹೆ ೧೩ನೆ ತಾರೀಖಿನ ಲಾಗಾಯಿತು ಕೊಟ್ಟಿರುವ ೧೧ ದಿನಗಳ ಪ್ರಿವಿಲೇಜ್ ರಜಾವನ್ನು ಕ್ರಿಸ್ತಮಸ್ ರಜಾದೊಂದಿಗೆ ಉಪಯೋಗಿಸಿಕೊಳ್ಳುವಬಗ್ಯೆ ಮಂಜೂರ್‍ಮಾಡಿರುತ್ತೆ.

---o---

Occasional Notes.

ವಿವಿಧ ವೃತ್ತಾಂತಗಳು.

೧. ದಕ್ಷಿಣ ಅಮೇರಿಕಾಕ್ಕೆ ಸೇರಿದ ಟ್ರಿನಿಡಾಡ್ ದೇಶದಲ್ಲಿ ಹಾಲು ತೆಗೆಪಕಬ್ಬಿನ ಶಿಪ್ಪೆಯಿಂದ ಕಾಗದ ಮಾಡುತ್ತಾರಂತೆ. ಅನೇಕತರದ ಒರಟುಕಾಗದಗಳನ್ನು ಆಗಲೆ ಮಾಡಿರುತ್ತಾರೆ. ಆದರೆ ಶುಭ್ರವಾದ ಕಾಗದವ

ನ್ನು ಮಾಡುವದು ಇನ್ನೂ ಅಜಮಾಯಿಷಿಯಲ್ಲಿರುತ್ತೆ.—ಅಗ್ರಿಕಲ್ಚರಲ್ ಜರ್ನಲ್ ಆಫ್ ಇಂಡಿಯಾ, ಜನವರಿ ೧೯೦೯.

---

೨. ೧೯೦೯ನೆ ಇಸವಿ ಸೆಪ್ಟಂಬರು ೩೦ಕ್ಕೆ ಆಖೈರು ಆಗುವ ೩ ತಿಂಗಳಲ್ಲಿ ಮದರಾಸು ಆಧಿಪತ್ಯದಿಂದ ಯೂರೋಪು ರಾಜ್ಯಗಳಿಗೂ ಸಿಲೋನ್ ಮತ್ತು ಜಪಾನ್ ದ್ವೀಪಗಳಿಗೂ ಸುಮಾರು ೪ ಲಕ್ಷ ರೂಪಾಯಿ ಬಾಳುವ ಸುಮಾರು ೧ ಲಕ್ಷ ಮಣ ತಾಳೆಯನಾರು ಸಮುದ್ರ ಮಾರ್ಗವಾಗಿ ರಫ್ತಾಗಿರುತ್ತದೆ.—ಇಂಡಿಯನ್ ಟ್ರೇಡ್ ಜರ್ನಲ್, ೨೫—೧೧—೦೯.

---

೩. ಪಂಜಾಬ್‌ನಲ್ಲಿ ಸರ್ಕಾರಿ ವ್ಯವಸಾಯ ಇಲಾಖೆಯವರು ವ್ಯವಸಾಯ ಸಂಬಂಧವಾದ ಯಂತ್ರೋಪಕರಣಗಳನ್ನು ತರಿಸಿ ಮಾರಾಟ ಮಾಡುತ್ತಿದ್ದರು. ಈಚೆಗೆ ಅಲ್ಲಿನ ವರ್ತಕರು ಈ ಕೆಲಸವನ್ನು ವಹಿಸಿರುವದು ನೋಡಿದರೆ ಇವುಗಳನ್ನು ಜನಗಳು ಉಪಯೋಗಿಸುವದು ಹೆಚ್ಚುತ್ತಿದೆ ಎಂದು ಹೇಳಬಹುದು.—ಪಂಜಾಬು ವ್ಯವಸಾಯ ಇಲಾಖೆಯ ೧೯೦೮—೦೯ನೆ ಸಾಲ್ ರಿಪೋರ್ಟ್.

---

೪. ಮದರಾಸು ಆಧಿಪತ್ಯದ ಪಾಷ್ಟಾರು ಯಾನೆ ಮೀನು ಹಿಡಿಯುವ ಕಸಬಿನ ವಿಷಯವಾಗಿ ಸರ್. ಎಫ್. ಎ. ನಿಕಲ್ಸನ್‌ಯವರು (Sir. F. A. Nicholson) ಬರೆದಿರುವ ಲೇಖನದಲ್ಲಿ ಮುತ್ತಿನಚಿಪ್ಪು ಗುಂಡಿಗಳ ತಯಾರಿಯನ್ನು ಕುರಿತು ಅಭಿಪ್ರಾಯಪಡುವದೇನೆಂದರೆ.-ಪ್ರತಿ ಸಾಲ್‌ನಲ್ಲಿಯೂ ಸಿಲೋನ್‌ನಿಂದ ಮುತ್ತಿನಚಿಪ್ಪು ವಿಶೇಷವಾಗಿ ಯೂರೋಪ್ ರಾಜ್ಯಗಳಿಗೂ ಮತ್ತು ಜಪಾನಿಗೂ ರಫ್ತಾಗುತ್ತಿದೆ. ೧೯೦೬ರಲ್ಲಿ ಸುಮಾರು ೪೪ ಸಾವಿರ ಮಣದಷ್ಟು ಮುತ್ತಿನಚಿಪ್ಪು ಜರ್ಮನಿ, ಜಪಾನು ಮತ್ತು ಗ್ರೇಟ್ ಬ್ರಿಟನ್ ರಾಜ್ಯಗಳಿಗೆ ಸಾಗಿ ಹೋಗಿರುತ್ತೆ. ಆ ರಾಜ್ಯಗಳಲ್ಲಿ ಇವರಿಂದ ಗುಂಡಿಗಳನ್ನು ತಯಾರ್ ಮಾಡುತ್ತಾರೆ. ಇಂಥಾ ಮುತ್ತಿನ ಚಿಪ್ಪಿನ ಗುಂಡಿಗಳನ್ನು ಇಲ್ಲಿ ತಯಾರು ಮಾಡಿದರೆ ಒಳ್ಳೆ ಲಾಭ ಸಿಕ್ಕುವದರಲ್ಲಿ ಸಂದೇಹವಿಲ್ಲ. ಈ ಕೆಲಸಕ್ಕೆ ಹೆಚ್ಚು ಸಾಹಸವೇ ಆಗಲಿ, ತಿಳುವಳಿಕೆ ಅಥವಾ ಬಂಡವಾಳವೇ ಆಗಲಿ ಏನೇನೂ ಅಗತ್ಯವಿಲ್ಲ.—ಅಗ್ರಿಕಲ್ಚರಲ್ ಜರ್ನಲ್ ಆಫ್ ಇಂಡಿಯಾ, ಜನವರಿ ೧೯೦೯.

V. B. SOOBBIAH AND SONS, PRINTERS, BANGALORE—1910.

THE MYSORE

REVENUE & AGRICULTURAL GAZETTE.

ವಾಲ್ಯುಂ ೪.] ಶನಿವಾರ, ೧೫ನೆ ಜನವರಿ ೧೯೧೦. [ನಂ. ೬.

Contents.

1. Cattle Show at Rampur.
2. Benefits of Irrigation.
3. Revenue Appeals.
4. Ginger.
5. Preparation of Vinegar.
6. Notifications.
7. Occasional Notes.

(i) Co-operative Societies. (ii) Coffee Crop. (iii) Inspectors of Co-operative Societies. (iv) Garden Pests. (v) Sugar Industry. (vi) Crop Outturn in Madras Presidency. (vii) Huzur Jamabandy.

ಅನುಕ್ರಮಣಿಕೆ.

೧. ರಾಂಪುರದಲ್ಲಿ ದನಗಳ ಪ್ರದರ್ಶನ.
೨. ನೀರಾವರಿ ಸೌಕರ್ಯದಿಂದ ನಾನಾ ಪ್ರಯೋಜನಗಳು.
೩. ರವಿನ್ಯೂ ಅಪೀಲುಗಳು.
೪. ಶುಂಠಿ.
೫. "ವಿನಿಗರ" ಹುಳಿರಸದ ತಯಾರಿ.
೬. ಇಸ್ತಿಹಾರ್ ನಾಮೆಗಳು.
೭. ವಿವಿಧ ವೃತ್ತಾಂತಗಳು.

(i) ಪರಸ್ಪರಸಹಾಯಕ ಸಂಘಗಳು. (ii) ಕಾಫಿ ಬೆಳೆ. (iii) ಕೋಆಪರೇಟೀವ್ ಸೊಸೈಟಿಗಳ ಮೇಲ್ವಿಚಾರಣಾಕರ್ತರು. (iv) ಬಾಗಾಯಿತು ಪೈರುಗಳನ್ನು ಕೆಡಿಸುವ ಹುಳುಗಳು. (v) ಸಕ್ಕರೆ ತಯಾರು ಮಾಡುವ ಕಸಬು. (vi) ಮದರಾಸು ಅಧಿಪತ್ಯದಲ್ಲಿ ಫಸಲುತ್ಪತ್ತಿ ತಪಶೀಲು. (vii) ಹುಜೂರ್ ಜಮಾಬಂದಿ.

Cattle Show at Rampur.

ರಾಂಪುರದಲ್ಲಿ ದನಗಳ ಪ್ರದರ್ಶನ.

ಸನ್ ೧೯೧೦ನೆ ಇಸವಿ ಫೆಬ್ರವರಿ ಮಾಹೆ ೨೬ನೆ ತಾರೀಖಿನಲ್ಲಿ ಪ್ರಾರಂಭವಾಗಿ ಹತ್ತು ದಿನಗಳವರಿವಿಗೂ ಹೊನ್ನಾಳಿ ತಾಲ್ಲೂಕು ರಾಂಪುರದಲ್ಲಿ

ನಡೆಯುವ ಜಾತ್ರೆ ಕಾಲದಲ್ಲಿ ಗೌರ್ನಮೆಂಟಿನಿಂದ ತಲ್ಪಿರುವ ೨೭-೧೨—೧೯೦೦ನೆ ಮಾರ್ಚಿ ೫೫೩೦-೧-ಮಲ್. ಯಫ್. ೪೯೫-೦೫-೩ನೆ ನಂಬರ್ ಪ್ರೊಸೀಡಿಂಗ್ಸ್ ಪ್ರಕಾರ ದನಗಳ ಪ್ರದರ್ಶನವು ನಡೆಯುತ್ತದೆ.

೨. ಜಾತ್ರೆ ನಡಿಯುವ ರಾಮಪುರ ಗ್ರಾಮದ ಸಮೀಪದಲ್ಲಿ ಸಾಸವೆಹಳ್ಳಿಗೆ ಹೋಗುವ ಕಾಲುದಾರಿ ಪಕ್ಕದ ಮೈದಾನಿನಲ್ಲಿ ಪ್ರದರ್ಶನವು ನಡಿಯಲು ಏರ್ಪಡಿಸಿರುತ್ತದೆ.

೩. ಗಾಡಿ ಎತ್ತು ಜೊತೆ ೧ಕ್ಕೆ ಮೊದಲನೆ ಬಹುಮಾನ ೨೦ ರೂಪಾಯಿ, ಎರಡನೆ ಬಹುಮಾನ ೧೧ ರೂಪಾಯಿ; ಉಳುವ ಎತ್ತು ಜೊತೆ ೧ಕ್ಕೆ ಮೊದಲನೆ ಬಹುಮಾನ ೨೦ ರೂಪಾಯಿ, ಎರಡನೆ ಬಹುಮಾನ ೧೦ ರೂಪಾಯಿ, ಅತ್ಯುತ್ತಮವಾದ ಬೀಜದ ಹೋರಿ ಒಂದಕ್ಕೆ ೧೫ ರೂಪಾಯಿನ ಒಂದು ಬಹುಮಾನ ; ಅತ್ಯುತ್ತಮವಾದ ಹಸು ಒಂದಕ್ಕೆ ೧೫ ರೂಪಾಯಿನ ಒಂದು ಬಹುಮಾನ; ಅತ್ಯುತ್ತಮವಾದ ಎಮ್ಮೆ ಒಂದಕ್ಕೆ ೧೦ ರೂಪಾಯಿನ ಒಂದು ಬಹುಮಾನ; ಈರೀತಿ ೭ ಬಹುಮಾನಗಳು ಕೊಡಲ್ಪಡುತ್ತವೆ.

೪. ಬಹುಮಾನಗಳನ್ನು ಕೊಡಲು ಉತ್ತಮ ಜಾನುವಾರುಗಳನ್ನು ಚುನಾಯಿಸಲು ಒಂದು ಕಮಿಟಿ ಏರ್ಪಡಿಸುತ್ತೆ. ಪ್ರದರ್ಶನವು ಮುಗಿದ ಕೂಡಲೆ ಇನಾಂ ಹಂಚಲ್ಪಡುತ್ತದೆ.

೫. ಮೇಲ್ಕಂಡ ದ್ರವ್ಯರೂಪದ ಇನಾಂ ಅಲ್ಲದೆ ಒಂದು ಯೋಗ್ಯತಾ ಪತ್ರವು (Certificate)ದೊರಿಯುತ್ತದೆ.

೬. ಇನಾಂ ಪಡಿಯಲು ಲಾಯಖಾದ ಜಾನುವಾರು ಪ್ರದರ್ಶನಕ್ಕೆ ಬಾರದೆ ಇದ್ದಲ್ಲಿ ಸದರಿ ಇನಾಂ ಅನಾಮತ್ತಿನಲ್ಲಿಡುವದಕ್ಕಾಗಲಿ ಅಥವಾ ಇನಾಮಿಗೆ ಅರ್ಹವಾದ ಇತರ ತರಗತಿ ಜಾನುವಾರುಗಳಿಗೆ ಕೊಡುವದಕ್ಕಾಗಲೀ ಕಮಿಟಿ ಮೆಂಬರುಗಳು ಅಧಿಕಾರ ಉಳ್ಳವರಾಗಿರುತ್ತಾರೆ.

೭. ಜಾನುವಾರುಗಳನ್ನು ಪ್ರದರ್ಶನ ಮಾಡಲು ಇಚ್ಛೆವುಳ್ಳವರು ಹೊನ್ನಾಳಿ ತಾಲ್ಲೂಕು ಅಮಲ್ದಾರರವರಿಗೇ ಆಗಲಿ ಅಥವ ಅವರಿಂದ ನೇಮಕ ಮಾಡಲ್ಪಟ್ಟ ಇತರ ನೌಕರರಿಗೇ ಆಗಲಿ ಪ್ರದರ್ಶನ ಶುರುವಾಗುವದಕ್ಕೆ ಮುಂಚಿತವಾಗಿ ಒಂದು ದಿವಸಕ್ಕೆ ಕಮ್ಮಿ ಇಲ್ಲದೆ ಅವಕಾಶವಿರುವಂತೆ ಬರೆದು ತಮ್ಮ ಹೆಸರೂ ಜಾನುವಾರು ತಪ್ಸೀಲು ದಾಖಲ್ಮಾಡಿಸಬೇಕು.

೮. ಪ್ರದರ್ಶನಕ್ಕೆ ಸೇರುವ ಜಾನುವಾರುಗಳಿಗಾಗಲೀ ಅಥವಾ ಅವುಗಳಿಂದ ಜನಗಳಿಗೇ ಆಗಲಿ ಯಾವ ಅಪಾಯವೂ ಸಂಭವಿಸದಂತೆ ಅವುಗಳ ಮಾಲೀಕರು ನೋಡಿಕೊಳ್ಳಬೇಕು.

೯. ಸ್ಥಳದಲ್ಲಿ ಜಮಾಯಿಸಬಹುದಾದ ರಾತೀಬು ಜಾನುವಾರುಗಳಿಗೆ ಸಾಲದೆ ಹೋಗಬಹುದಾದ್ದರಿಂದ ಪ್ರದರ್ಶನದಲ್ಲಿ ಸೇರಬಹುದಾದ ಜಾನುವಾರುಗಳಿಗೆ ರಾತೀಬಿನ ಏರ್ಪಾಡು ಅವುಗಳ ಮಾಲೀಕರೇ ನೋಡಿಕೊಳ್ಳುವದು ಒಳ್ಳೇದು.

೧೦. ಈ ಜಾತ್ರೆಗೆ ಬಹಳ ಜನಗಳು ಮತ್ತು ಜಾನುವಾರು ಸೇರುವದರಿಂದ ವ್ಯಾಪಾರ ಬಹಳ ಚನ್ನಾಗಿ ನಡೆಯುತ್ತದೆ.

೧೧. ೧೯೧೯ನೆ ಮಾರ್ಚಿ ತಿಂಗಳಲ್ಲಿ ಕೂಡ್ಲಿ ಜಾತ್ರೆ ಕಾಲದಲ್ಲಿ ನಡೆದ ಪ್ರದರ್ಶನಕಾಲದಲ್ಲಿ ಬಹುಮಾನ ಕೊಡಲ್ಪಟ್ಟಿದ್ದರ ತಪಸೀಲ್ ಇದರ ಕೆಳಗೆ ನಮೂದಿಸಿರುತ್ತದೆ.

ನಂಬರು	ಪ್ರದರ್ಶನ ಮಾಡಿದ ಮಾಲೀಕನ ಹೆಸರು			ಬಹುಮಾನದ ತಪ್ಸೀಲು		
	ಹೆಸರು.	ವಾಸವಾಗಿರುವ ಗ್ರಾಮ.	ತಾಲ್ಲೂಕು.	ಯಾತಕ್ಕೋಸ್ಕರ ಬಹುಮಾನ ಕೊಟ್ಟದ್ದು.	ರೂಪಾಯಿ.	ಬಹುಮಾನದ ತರಗತಿ.
1	ಶೆಟ್ಟಿಗೌಡ ಬಿನ್ ಉಳ್ಳಿಗೌಡ.	ಹೆತ್ತಿಗೇನಹಳ್ಳಿ.	ಕೃಷ್ಣರಾಜಪೇಟೆ.	ಗಾಡಿ ಎತ್ತುಗಳ ಜೊತೆಗೆ.	20	1ನೆ ತರಗತಿ
2	ಮುದ್ದಪ್ಪ ಬಿನ್ ಗುರುಶಿದ್ದಪ್ಪ.	ಬೆಳಗುತ್ತಿ ...	ಹೊನ್ನಾಳಿ	ಡಿಟ್ಟೋ ...	10	2ನೆ ,,
3	ಎಡಿ ಮುದ್ವೀರಪ್ಪ.	ಡಿಟ್ಟೋ ...	ಡಿಟ್ಟೋ ...	ಉಳುವ ಎತ್ತಿನ ಜೊತೆಗೆ.	20	1ನೆ ,,
4	ಕಪಿನಿಗೌಡ ...	ಜಾಗಿನಕೆರೆ	ಕೃಷ್ಣರಾಜಪೇಟೆ	ಡಿಟ್ಟೋ ...	10	2ನೆ ,,
5	ಕೆಡಂ ರಾಮರಾವ್	ಶಿಬ್ಲೀಪುರ ...	ಶಿವಮೊಗ್ಗ	ಬೀಜದ ಹೋರಿ ಒಂದಕ್ಕೆ.	15	1ನೆ ,,
6	ಪುರಾಣಮಠದ ನಂಜುಂಡಪ್ಪ.	ಹೊಳೆಹೊನ್ನೂರು	ಡಿಟ್ಟೋ ...	ಎಮ್ಮೆ ಒಂದಕ್ಕೆ	5	2ನೆ ,,

Benefits of Irrigation.*

ನೀರಾವರಿ ಸೌಕರ್ಯದಿಂದ ನಾನಾ ಪ್ರಯೋಜನಗಳು.

ಸಾಮಾನ್ಯವಾಗಿ ಜನಗಳು ಕೆರೆಕಟ್ಟೆಗಳನ್ನು ಕಟ್ಟುವದರಿಂದಲೂ ಮತ್ತು ನದಿಗಳಿಂದ ನಾಲಾ ಮತ್ತು ಕಾಲುವೆಗಳನ್ನು ತೋಡುವದರಿಂದಲೂ ಮಳೆ ಹೆಚ್ಚಾಗಿ ಬೀಳದ ಪ್ರದೇಶಗಳಲ್ಲಿ ಭೂವ್ಯವಸಾಯಕ್ಕೆ ಅನುಕೂಲವೆಂಬ ಒಂದು ಅಂಶವನ್ನು ಮಾತ್ರ ತಿಳಿದುಕೊಂಡಿರುತ್ತಾರೆಯೇ ಹೊರತು, ಇದರಿಂದ ಸಮೃದ್ಧಿಯಾಗಿ ಮಳೆ ಬೀಳುವ ಪ್ರದೇಶಗಳಲ್ಲಿಯೂ ಕೂಡ ಇತರವಿಧವಾದ ಅನೇಕ ಪ್ರಯೋಜನಗಳುಂಟೆಂಬುವದು ಅವರಿಗೆ ಅಷ್ಟು ಪ್ರತ್ಯಕ್ಷವಾಗಿಲ್ಲ.

೧. ಮಳೆ ಸರಿಯಾಗಿ ನಡೆದು ಮೊದಲು ಮೊದಲು ಪೈರುಗಳು ಚೆನ್ನಾಗಿ ಬೆಳೆದಿದ್ದರೂ ಕೂಡ ಮಧ್ಯಕಾಲದಲ್ಲಿ ಇಬ್ಬನಿ ಬೀಳುವದರಿಂದಲೋ ಅಥವಾ ಮಿಡತೆ ಹುಳು ಮತ್ತು ಮೃಗಾದಿಗಳ ಕಾಟದಿಂದಲೋ ಬೆಳೆ ಕೆಟ್ಟು ಹೋಗುವದುಂಟು. ಇಂಥಾ ಸಂದರ್ಭಗಳಲ್ಲಿ ನೀರಾಸರೆ ಚೆನ್ನಾಗಿದ್ದರೆ ಮುಂಬಿನ ಮಳೆಗಾಲದವರೆಗೂ ಕಾದಿರದೆ ಪೈರು ಕೆಟ್ಟು ಹೋದಕಡೆಗಳಲ್ಲಿ ಕೂಡ್ಲೆ ಹೊಸದಾಗಿ ಬಿತ್ತಿ ತಿರಿಗಿ ಸಾಗುವಳಿ ಆರಂಭಿಸಬಹುದು. ಮತ್ತು ಜಾಗ್ರತೆಯಾಗಿ ಕಟಾವಿಗೆ ಬರುವ ಬೇರೆ ತರದ ಫಸಲು ಇಡುವದಕ್ಕೂ ಅನುಕೂಲವಾಗುತ್ತದೆ.

೨. ನೀರಿನ ಅನುಕೂಲತೆಗಳನ್ನು ಮಾಡಿಕೊಳ್ಳದೆ ಬರೀ ಮಳೆ ನೀರನ್ನೇ ನಂಬಿ ಸಾಗುವಳಿ ಮಾಡುವ ಕಡೆಗಳಲ್ಲಿ ಒಂದೇ ಹೊಲದಲ್ಲಿ ಒಂದು ತುಂಡಿಗೆ ರಾಗಿ, ಇನ್ನೊಂದಕ್ಕೆ ಹುರಳಿ, ಮತ್ತೊಂದಕ್ಕೆ ಗೋಧಿ, ಈರೀತಿ ಎರಡು ಮೂರು ತರಹೆ ಧಾನ್ಯಗಳನ್ನು ಚೆಲ್ಲಿ ಈಪೈಕಿ ಯಾವದರಿಂದಲಾದರೂ ಅನುಕೂಲವಾದ ಫಸಲು ಬಂದೀತೆಂದು ನಿರೀಕ್ಷಿಸುವದುಂಟು. ಆದರೆ ಈಪ್ರಕಾರವಾಗಿ ಭಿನ್ನರಖಂ ಧಾನ್ಯಗಳನ್ನು ಬಿತ್ತುವದರಿಂದ ಕೆಲವಕ್ಕೆ ವಿಶೇಷ ನೀರು ಬೇಕು, ಕೆಲವಕ್ಕೆ ಅಷ್ಟು ಬೇಕಿಲ್ಲ, ಮತ್ತೆ ಕೆಲವು ಬೇಸಿಗೆ ಪೈರುಗಳು, ಹೀಗೆಲ್ಲಾ ವ್ಯತ್ಯಾಸಗಳು ಉಂಟಾಗಿ ಕಡೆಗೆ ಎಲ್ಲವೂ ಒಂದೇ ವಿಧವಾಗಿ ಸರಿಯಾದ ಫಸಲನ್ನು ಕೊಡುವದಿಲ್ಲ. ನೀರಾಸರೆ

* ಅಗ್ರಿಕಲ್ಚರಲ್ ಜರ್ನಲ್ ಆಫ್ ಇಂಡಿಯಾ, ಜನವರಿ ೧೯೧೯.

ಸರಿಯಾಗಿದ್ದಪಕ್ಷದಲ್ಲಿ ಮಳೆಯನ್ನೇ ಅಷ್ಟು ನೆಚ್ಚಿರಬೇಕಾದ್ದಿಲ್ಲ. ಕೆರೆ ಕಟ್ಟೆಗಳು ಮತ್ತು ನಾಲಾಗಳ ಮೂಲಕ ಬೇಕಾದಾಗಲೆಲ್ಲಾ ನೀರು ಹಾಯಿಸಿಕೊಂಡು ಹೆಚ್ಚು ಆದಾಯಕರವಾದ ಪೈರುಗಳನ್ನೇ ಚುನಾಯಿಸಿ ಬೆಳೆದು ಏಕಪ್ರಕಾರವಾಗಿ ಒಳ್ಳೆ ಫಸಲನ್ನು ತಪ್ಪದೆ ತೆಗೆದುಕೊಳ್ಳುತ್ತಿರಬಹುದು. ನೀರಿಲ್ಲದೆ ಫಸಲು ಎಲ್ಲಿ ಕೆಟ್ಟೀತೋ ಎಂದು ಅನುಮಾನ ಪಡಬೇಕಾದ್ದಿಲ್ಲ.

೩. ನೀರಿನ ಸರಬರಾಯಿ ಚೆನ್ನಾಗಿರುವ ಕಡೆಗಳಲ್ಲಿ ಒಂದು ಬೆಳೆ ಕೈಗೆ ಬಂದ ಕೂಡ್ಲೆ ಮತ್ತೊಂದನ್ನು ಕೂಡ್ಲೆ ಆರಂಭಿಸಬಹುದಾದ್ದರಿಂದ ರೈತರಿಗೂ ಮತ್ತು ಕೂಲಿಯಿಂದ ಜೀವನ ಮಾಡುವವರಿಗೂ ವರ್ಷದಲ್ಲಿ ಯಾವಾಗಲೂ ಬೇಸಾಯ ಕೆಲಸವಿದ್ದೇ ಇರುತ್ತದೆ. ಹೀಗೆ ಬಡಬಗ್ಗರು ಜೀವನ ಸಿಕ್ಕಿ ಅನ್ನಕ್ಕೆ ಅಷ್ಟು ತಾಪತ್ರಯ ಪಡಬೇಕಾಗಿರುವದಿಲ್ಲವಾದ ಕಾರಣ ಅವರು ದುರ್ನಡತೆಗಳಲ್ಲಿ ಪ್ರವರ್ತಿಸುವದು ಕಮ್ಮಿಯಾಗಿ ಪ್ರಜಾ ನೆಮ್ಮದಿಯೂ ಸಹಜವಾಗಿ ಉಂಟಾಗುವದು.

೪. ನೀರು ಸಮೃದ್ಧಿಯಾಗಿ ಒದಗುವ ಪ್ರಾಂತ್ಯಗಳಲ್ಲಿ ದನಕರುಗಳಿಗೆ ಬೇಕಾದಷ್ಟು ತಿನ್ನುವದಕ್ಕೆ ಹುಲ್ಲೂ ಮತ್ತು ಕುಡಿಯುವದಕ್ಕೆ ನೀರೂ ದೊರೆತು, ಸೌಖ್ಯವುಂಟಾಗುತ್ತದೆಂದು ಹೇಳಬೇಕಾದ್ದೇ ಇಲ್ಲ.

೫. ಹೀಗೆ ನಾಲಾಗಳ ಆಸರೆಯಿಂದ ಭೂವ್ಯವಸಾಯ ಮಾಡುವದಾದರೆ ಉಷ್ಣ ಹವಾ ಪ್ರದೇಶಗಳಲ್ಲಿ ಜನರ ಆರೋಗ್ಯ ಕೆಡುತ್ತದೆಂದು ಹೇಳುತ್ತಾರೆ. ಇದರಿಂದ ಸ್ವಲ್ಪ ಜ್ವರೋತ್ಪತ್ತಿಯಾಗುವದೇನೋ ನಿಜ. ಆದರೆ ಇತರ ಮಹತ್ತರವಾದ ಆರೋಗ್ಯಾನುಕೂಲತೆಗಳು ಲಭಿಸುವದರಿಂದ, ಈ ಒಂದು ಪ್ರತಿಕೂಲವು ಅಷ್ಟು ಗಣನಾಸ್ಪದವಾದುದಲ್ಲ. ಹೇಗಂದರೆ, ನಮ್ಮ ದೇಶೀಯರು ಹಾಲು ಮೊಸರನ್ನು ವಿಶೇಷವಾಗಿ ಉಪಯೋಗಿಸುತ್ತಾರೆ. ಆದಕಾರಣ ಕರಾವು ಆಕಳುಗಳಿಗೆ ಒಳ್ಳೆ ಕುಡಿಯುವ ನೀರನ್ನು ಒದಗಿಸುವದು ಅತ್ಯವಶ್ಯಕವಾಗಿರುತ್ತೆ. ಅನೇಕವೇಳೆ ದನಕರುಗಳು ಸಣ್ಣ ಸಣ್ಣ ಹಳ್ಳಗಳಲ್ಲಿನ ಹೊಲಸು ನೀರನ್ನು ಕುಡಿದು ದಾಹವನ್ನು ಅಡಗಿಸಿಕೊಳ್ಳುತ್ತವೆ. ಇದರಿಂದ ಜನರಿಗೆ ಬಹಳ ಅಪಾಯ ಉಂಟು. ಯಾಕಂದರೆ, ಆಕಳುಗಳಲ್ಲಿ ತಾವು ಆಹಾರ ನೀರುಗಳ ಮೂಲ

ಈ ತೆಗೆದುಕೊಳ್ಳಬಹುದಾದ ವಿಷವು ಪದಾರ್ಥಗಳನ್ನು ಹಾಲಿನಲ್ಲಿ ಬಿಟ್ಟು ಬಿಡುವ ಸ್ವಭಾವ ಉಂಟು. ಇದರಿಂದ ನೀರಿನ ಕ್ಷಾಮವು ಬಂದ ಕಡೆಗಳಲ್ಲೆಲ್ಲಾ ಜಾಡ್ಯಗಳ ಉತ್ಪತ್ತಿಗೆ ಕಾರಣವನ್ನು ಸುಲಭವಾಗಿ ಊಹಿಸಬಹುದಲ್ಲವೆ? ಇಂಡಿಯಾದಲ್ಲಿ ಜನಗಳು ಹೊಟ್ಟೆಗಿಲ್ಲದೆ ಸಾಯುವದು ಕಮ್ಮಿ ಕುಡಿಯುವದಕ್ಕೆ ನೀರಿಲ್ಲದೆ ವಿಶೇಷ ಸಾಯುತ್ತಾರೆಂದು ಹೇಳುವದು ಸತ್ಯವಾದದ್ದು. ಭಾರಿ ನದಿಗಳಿಂದ ಕಾಲುವೆಗಳನ್ನು ತರುವದರಲ್ಲಿ ಮತ್ತೊಂದು ಅನುಕೂಲವೇನಂದರೆ, ನೆರೆಹೊರೆಯಲ್ಲಿನ ಉಪ್ಪುನೀರು ಭಾವಿಗಳೆಲ್ಲಾ ಸಿಹಿನೀರು ಭಾವಿಗಳಾಗುತ್ತವೆ. ಇದರಿಂದ ಜನಗಳು ಕುಡಿಯುವ ನೀರಿಗಾಗಿ ಪಡುವ ತಾಪತ್ರಯವು ತಪ್ಪುವದು. ಇದಕ್ಕೆ ಉತ್ತರ ಹಿಂದೂಸ್ಥಾನದಲ್ಲಿನ ಮಟ್ರ ಮತ್ತು ಆಗ್ರಾ ಡಿಸ್ಟ್ರಿಕ್ಟುಗಳೇ ದೃಷ್ಟಾಂತರವಾಗಿರುತ್ತವೆ. ಅಲ್ಲಿ ಮೊದಲು ಭಾವಿಗಳಲ್ಲೆಲ್ಲಾ ನೀರು ಉಪ್ಪಾಗಿದ್ದು ಜನರು ಒಂದು ಬಿಂದಿಗೆ ಸಿಹಿನೀರಿಗೆ ಬಹಳ ತೊಂದರೆ ಪಡುತ್ತಿದ್ದರಂತೆ. ನದಿ ಕಾಲುವೆಗಳು ಬಂದಮೇಲೆ ಈ ಭಾವಿಗಳ ನೀರು ಸಿಹಿಯಾಗಿ ಜನಗಳ ಕಷ್ಟವು ನಿವಾರಣೆಯಾಗಿರುತ್ತದೆ.

ಮುಖ್ಯವಾಗಿ ಈ ದೇಶವು ಭೂವ್ಯವಸಾಯಕ್ಕೆ ಅಗ್ರಸ್ಥಳವಾಗಿರುತ್ತದೆಯಾಗಿ, ಇಲ್ಲಿನ ನದಿಗಳ ನೀರು ಸಮುದ್ರವನ್ನು ಸೇರಿ ವ್ಯರ್ಥವಾಗುವದನ್ನು ತಪ್ಪಿಸಿ ದೇಶದ ನೀರಾವರಿ ಸೌಕರ್ಯಗಳನ್ನು ಹೆಚ್ಚಿಸಬೇಕಾದ್ದು ಬಹಳ ಅವಶ್ಯಕವಾಗಿರುತ್ತದೆ. ಇದರಿಂದ ಲಕ್ಷೋಪಲಕ್ಷ ಜನಗಳಿಗೆ ಆಹಾರ ಉದ್ಯೋಗಗಳು ಒದಗುವದಲ್ಲದೆ ದೇಶದ ಹವಾಸ್ಥಿತಿಯೂ ಉತ್ತಮ ಪಡುವದು.

Revenue Appeals.

ರೆವಿನ್ಯೂ ಅಪೀಲುಗಳು.

೧೯೦೮—೦೯ನೇ ಇಸವಿಯ ಅಪೀಲು ನಂಬರು ೮೦.

ಅಪೀಲು ವಾದಿಗಳು.			ಅಪೀಲು ಪ್ರತಿವಾದಿ.
೧. ಪುಟ್ಟವ್ವ. ೨. ವೆಂಕವ್ವ.	ರುಕ್ಮವ್ವನ ಮಕ್ಕಳು.	*vs.*	ಭೀಮರಾವು (ಮೈನರು), ಗಾರ್ಡಿ ಯನ್ ಗೋಪಾಲರಾವು.

ಸೊರಬ ತಾಲ್ಲೂಕು ಆನವಟ್ಟಿ ಹೋಬಳಿ, ದೇವಸ್ಥಾನದಹಕ್ಕಲು

ಗ್ರಾಮದ ಶ್ಯಾನುಭೋಗಿ ಮತ್ತು ಪಟೇಲಿ, ಮತ್ತು ವೃತ್ತಿಕೊಪ್ಪ ಗ್ರಾಮದ ಪಟೇಲಿ ಬರಾವರ್ದುಗಳ ವಿಚಾರ.

ಮೊಕದ್ದಮೆಯ ವಿಷ್ಯಮಾನ.—ಪ್ರಸಕ್ತವಾದ ಶಾನುಭೋಗಿ ಮತ್ತು ಪಟೇಲಿ ಬರಾವರ್ದುಗಳು ಮೊದಲು ರುಕ್ಮವ್ವನ ಗಂಡ ಕ್ರಿಷ್ಣಪ್ಪನೆಂಬುವನ ಹೆಸರಿನಲ್ಲಿದ್ದವು. ಈತನ ಹಿರೇಮಗ ನರಸಿಂಗರಾಯನು ಅವನ ಜೀವಮಾನ ಕಾಲದಲ್ಲೆ ಫೌತಿಯಾದಕಾರಣ, ೨ನೆ ಮಗ ವೆಂಕಟರಾಯನ ಹೆಸರಿನಲ್ಲಿ ಬರಾವರ್ದು ರಿಜಸ್ಟರಾಯಿತು. ವೆಂಕಟರಾಯನು ಮದುವೆ ಇಲ್ಲದೆ ಫೌತಿಯಾದ್ದರಿಂದ ಬರಾವರ್ದು ಇವನ ತಾಯಿ ರುಕ್ಮವ್ವನ ಹೆಸರಿನಲ್ಲಾಯಿತು. ರುಕ್ಮವ್ವನು ೧೮೭೦ನೆ ಇಸವಿ ಡಿಸೆಂಬರು ಮಾಹೆಯಲ್ಲಿ ಫೌತಿಯಾದನಂತರ ಸದರಿ ನೌಕರಿಯ ವಿಷಯದಲ್ಲಿ ಈಕೆಯ ಮಕ್ಕಳಾದ ಅಪೀಲು ವಾದಿಗಳು, ಈಕೆಯ ದಾಯಾದಿಗಳಾದ ಭೀಮರಾವು (ಪ್ರತಿವಾದಿ), ಶ್ರೀನಿವಾಸರಾವು, ಗೋಪಾಲರಾವು, ಸ್ವಾಮಿರಾವು, ಗೋವಿಂದರಾವು, ವೆಂಕಟರಾವು ಮತ್ತು ಈಕೆಯ ಸೊಸೆ ಗಂಗವ್ವ (ನರಸಿಂಗರಾಯನ ಹೆಂಡತಿ), ಇವರೆಲ್ಲರೂ ಒಬ್ಬೊಬ್ಬರೂ ಹಕ್ಕುದಾರರೆಂದು ತಕರಾರು ಮಾಡಿದರು. ಅಸಿಸ್ಟೆಂಟು ಕಮಿಷನರವರು ಬರಾವರ್ದನ್ನು ಅಪೀಲು ಪ್ರತಿವಾದಿ ಮೈನರು ಭೀಮರಾಯನ ಹೆಸರಿನಲ್ಲಿ ದಾಖಲು ಮಾಡಿ ಇವನ ಗಾರ್ಡಿಯನ್ ಗೋಪಾಲರಾಯನನ್ನು ಬರಾವರ್ದಾರನ ತರಫು ಗುಮಾಸ್ತನನ್ನಾಗಿ ಮೊಕರರು ಮಾಡಬೇಕೆಂದು ಹುಕುಂ ಮಾಡಿದರು. ಅಪೀಲಿನಲ್ಲಿ ಡೆಪ್ಯುಟಿ ಕಮಿಷನರವರೂ ಕೂಡಾ ಈ ಹುಕುಮನ್ನೆ ಖಾಯಂ ಮಾಡಿದರು.

ಗೌರ್ನಮೆಂಟಿನವರ ತೀರ್ಮಾನ.—ರುಕ್ಮವ್ವನ ಮಗ ವೆಂಕಟರಾಯನೇ ಆಖೈರು ಗಂಡಸು ಬರಾವರ್ದುದಾರನಾಗಿರುತ್ತಾನೆ. ಮತ್ತು ವಾದಿಗಳು ಈತನ ಸಹೋದರಿಯರು. ೨ನೆ ವಾದಿ ವೆಂಕವ್ವನು ಮಾಡಿಕೊಂಡ ದತ್ತನ್ನು ನಂಬಬಹುದಾದರೂ ಕೂಡ, ಈ ದತ್ತುಮಗನು ಫೌತಿ ವೆಂಕಟರಾಯನಿಗೆ ಸೋದರಳಿಯನಾಗಿರುತ್ತಾನೆ. ಹಿಂದು ಲಾ ಪ್ರಕಾರ ಸಗೋತ್ರಿಗಳಾದ ಪ್ರತಿವಾದಿ ಮತ್ತು ಇತರ ವಾರಸುದಾರರಿರುವಾಗ್ಯೆ, ಸೋದರಿಯು ಅಥವಾ ಇವಳ ಮಗನ ವಾರಸು ಪ್ರಾಧಾನ್ಯವಾಗುವದಿಲ್ಲ

ವಾಗಿ ವಾದಿಗಳು ಹಕ್ಕುದಾರರಾಗುವದಿಲ್ಲ. ಆದಕಾರಣ ಅಪೀಲನ್ನು ಡಿ
ಸ್ಮಿಸ್ ಮಾಡಿರುತ್ತೆ.

೧೯೦೮—೦೯ನೇ ಇಸವಿಯ ಅಪೀಲು ನಂ. ೧೦೧

ಅಪೀಲುವಾದಿ.		ಅಪೀಲು ಪ್ರತಿವಾದಿಗಳು.
ಪರಮೇಶ್ವರಪ್ಪ.	*vs.*	ಮಲ್ಲಪ್ಪ, ರಾಮಪ್ಪ, ಪಾರಪ್ಪ, ಮೈನರುಗಳು, ಇವರ ಗಾರ್ಡಿಯನ್ ಮಲ್ಲಪ್ಪ.

ಮೊಕದ್ದಮೆಯ ವಿಸ್ತಾರ.—ಹೊನ್ನಾಳಿ ತಾಲ್ಲೂಕು ಕಲ್ಲಹಳ್ಳಿ ಗ್ರಾಮದಲ್ಲಿ ತಿಮ್ಮರಾಜಪ್ಪನೆಂಬುವನ ಖಾತೆಯಲ್ಲಿದ್ದ ೪ ಸರ್ವೆ ನಂಬರುಗಳ ಮೇಲೆ ೧೯೦೭ನೇ ಸಾಲ್ ಕಂದಾಯ ಬಾಕಿ ನಿಂತಕಾರಣ, ಈ ಪೈಕಿ ಒಂದು ನಂಬರು ಫಾರ್ಫೀಟು ಮಾಡಲ್ಪಟ್ಟು ಹರಾಜಾಗಿ ೬೦ ರೂಪಾಯಿಗೆ ವಾದಿಯ ಹೆಸರಿಗೆ ನಿಂತಿತು. ೧೯೦೭ನೆ ಸೆಪ್ಟಂಬರು ೧೮ನೆ ತಾರೀಖಿನಲ್ಲಿ ಅಸಿಸ್ಟೆಂಟು ಕಮಿಷನರವರು ಈ ಹರಾಜನ್ನು ಕಾಯಂ ಮಾಡಿದರು. ತರುವಾಯ ೭ ತಿಂಗಳಾನಂತರ ಮೈನರು ಪ್ರತಿವಾದಿಗಳ ಗಾರ್ಡಿಯನ್ ಮಲ್ಲಪ್ಪನು ಹರಾಜು ವಿಷಯದಲ್ಲಿ ಡೆಪ್ಯುಟಿ ಕಮಿಷನರವರಿಗೆ ತಕರಾರು ಅರ್ಜಿಯನ್ನು ಕೊಟ್ಟು ಹರಾಜಾದ ನಂಬರಿನ ಒಂದು ಭಾಗವು ಪ್ರತಿವಾದಿಗಳ ತಾತನಿಗೆ ಕ್ರಯವಾಗಿ ಇವರ ವಂಶದವರ ಸ್ವಾಧೀನಾನುಭವದಲ್ಲಿರುವದಾಗಿಯೂ, ಪಟೇಲ, ಖಾತೆದಾರನತಾಯಿ ಮತ್ತು ವಾದಿ ಈ ಮೂವರೂ ಷರೀಕಾಗಿ ಮೈನರು ಪ್ರತಿವಾದಿಗಳ ಸ್ವತ್ತನ್ನು ಕಸುಕೊಳ್ಳುವ ಉದ್ದೇಶದಿಂದ ಸದರಿ ಜಮೀನನ್ನು ಮೋಸದಿಂದ ಹರಾಜಿಗೆ ಒಳಪಡಿಸಿರುತ್ತಾರೆಂತಲೂ ಮತ್ತು ಹರಾಜು ಸಂಗತಿಯು ತನಗೆ ಮೊದಲೆ ಗೊತ್ತಾಗದೆ ಪಟೇಲನು ೧೯೦೭—೦೮ನೆ ಸಾಲ್ ಕಂದಾಯವನ್ನು ತನ್ನಿಂದ ತೆಗೆದುಕೊಳ್ಳುವದಿಲ್ಲವೆಂದು ಹೇಳಿದ ಮೇಲೆಯೇ ತಿಳಿಯಬಂತೆಂತಲೂ ಫಿರ್ಯಾದು ಮಾಡಿಕೊಂಡನು. ಇದರ ಮೇಲೆ ಅಮಲ್ದಾರರು ಕ್ರಮವಾದ ವಿಚಾರಣೆ ಮಾಡಿ ಹರಾಜಾದ ಜಮೀನು ೬೦ ರೂಪಾಯಿಗಿಂತಲೂ ಹೆಚ್ಚಾಗಿ ಬೆಲೆಬಾ

ಳತಕ್ಕವ್ವೆಂತಲೂ ಆಪೀಲು ವಾದಿಯು ಬಾಕೀದಾರನ ಭಾವಮೈದುನನಾಗಿದ್ದು ಆವನ ಸಂಗಡಲೇ ವಾಸವಾಗಿದ್ದನೆಂತಲೂ ಮತ್ತು ಹರಾಜಾದ ನಂಬರಿನಲ್ಲಿ ಮೈನರು ಪ್ರತಿವಾದಿಗಳಿಗೆ ಒಂದು ಹಿಸ್ಸೆಯಿದ್ದ ಸಂಗತಿಯು ಪಟೇಲನಿಗೆ ಗೊತ್ತಿದ್ದು ಇವರ ಗಾರ್ಡಿಯನ್ನಿನಿಂದಲೆ ಕಂದಾಯವನ್ನು ವರ್ಷೆವರ್ಷ ವಸೂಲು ತೆಗದುಕೊಳ್ಳುತ್ತಿದ್ದರೂ ಕೂಡ, ಈಕೆಯ ಮೇಲೆ ಒಂದು ತಗಾದೆ ನೋಟೀಸನ್ನು ಜಾರಿಮಾಡಿರುವದಿಲ್ಲವೆಂದೂ ರಿಪೋರ್ಟ ಮಾಡಿದರು. ಡೆಪ್ಯುಟಿ ಕಮಿಷನರವರು ಹರಾಜು ನಡುವಳಿಕೆಯಲ್ಲಿ ಮೊದಲಿನಿಂದಲೂ ಮೋಸ ನಡೆದಿರುವದು ಒಂದೇ ಅಲ್ಲದೆ ೪ ಸರ್ವೆ ನಂಬರುಗಳುಳ್ಳ ಖಾತೆಯ ಮೇಲಿನ ಕಂದಾಯ ಬಾಕಿಗಾಗಿ ಡೆಪ್ಯುಟಿ ಕಮಿಷನರವರ ಹುಕುಂ ವಿನಾಯಿತಿ ಈ ನಂಬರುಗಳ ಪೈಕಿ ಒಂದನ್ನು ಮಾತ್ರ ಫೋರ್ಫೀಟು ಮಾಡಿರುವದು ಲ್ಯಾಂಡುರೆವಿನ್ಯೂ ರೂಲ್ಸು ೩೫ನೆ ರೂಲು ಪ್ರಕಾರ ಅಕ್ರಮವಾದದ್ದೆಂದು ಅಭಿಪ್ರಾಯಪಟ್ಟು ಹರಾಜನ್ನು ಕ್ಯಾನ್ಸಲ್ ಮಾಡಿದರು.

ಗೌರ್ನಮೆಂಟಿನವರ ತೀರ್ಮಾನ.-ಡೆಪ್ಯುಟಿ ಕಮಿಷನರವರು ಹರಾಜು ಕ್ಯಾನ್ಸಲ್ ಬಗ್ಗೆ ನಮೂದಿಸಿರುವ ಇತರ ಕಾರಣಗಳು ಹ್ಯಾಗೇ ಇರಲಿ ಅವರು ಜಮೀನನ್ನು ಅಷ್ಟು ಕಮ್ಮಿ ಖರೀದಿಗೆ ಹರಾಜು ಮಾಡಿರುವದು ನ್ಯಾಯವಾದದ್ದಲ್ಲವೆಂದು ಅಭಿಪ್ರಾಯಪಡುವದು ಒಪ್ಪತಕ್ಕದ್ದಾಗಿರುತ್ತೆ. ಆದಕಾರಣ ಡೆಪ್ಯುಟಿ ಕಮಿಷನರವರ ಹುಕುಮನ್ನು ಕಾಯಂಮಾಡಿ ಅಪೀಲನ್ನು ಡಿಸ್ಮಿಸ್ಮಾಡಿರುತ್ತೆ.

Ginger.*

ಶುಂಠಿ.

ಶುಂಠಿಯನ್ನು ವಿಶೇಷವಾಗಿ ಉಷ್ಣ ರಾಜ್ಯಗಳಲ್ಲಿ ಬೆಳೆಯುತ್ತಾರೆ. ಬೆಳೆಯುವವರು ಇದಕ್ಕೆ ವಿಶೇಷ ಅನುವಾದ ಜಮೀನನ್ನೇ ಪ್ರಯಾಸಪಟ್ಟು ಹುಡುಕಿ ಪೈರು ಮಾಡುವದು ಅಪರೂಪ. ಅಮೇರಿಕಾ ಖಂಡಕ್ಕೆ,

* ಇಂಡಿಯನ್ ಅಗ್ರಿಕಲ್ಚರಿಸ್ಟ, ೧-೯-೧೮೯೯.

ಸೇರಿದ ಜಮೇಕಾ ದ್ವೀಪಗಳಲ್ಲಿ ಕಾಡು ಪ್ರದೇಶಗಳನ್ನು ಬೆಂಕಿ ಹಚ್ಚಿ ಪಾಕುಮಾಡಿಕೊಂಡು ಜಮೀನು ನಿಸ್ಸಾರವಾಗುವವರೆಗೂ ಕಬ್ಬನ್ನು ಬೆಳೆಯುತ್ತಲೆ ಇದ್ದು ಅನಂತರ ಮತ್ತೊಂದು ಕಾಡನ್ನು ಹೀಗೆಯೇ ತಯಾರು ಮಾಡಿಕೊಂಡು ಉಪಯೋಗಿಸಿಕೊಳ್ಳುತ್ತಾರೆ. ಇದರಿಂದ ಜಮೇಕಾದಲ್ಲಿ ಭಾರಿ ಪ್ರದೇಶವು ನಿಸ್ಸಾರವಾಗಿ ಕೆಲಸಕ್ಕೆ ಬಾರದಂತೆ ಖಾಲಿ ಬಿದ್ದಿರುತ್ತಂತೆ. ಇಂಡಿಯಾದೇಶದ ಕೊಚ್ಚಿ ರಾಜ್ಯದಲ್ಲಾದರೋ ಹೀಗಿಲ್ಲ. ಇಲ್ಲಿ ಕ್ರಮವಾಗಿ ಜಮೀನನ್ನು ಉತ್ತು ಹಿಂಡಿ ಅಥವಾ ಸಗಣಿ ಗೊಬ್ಬರವನ್ನು ಹಾಕುವದುಂಟು. ಕಬ್ಬಿಗೆ ಜಮೀನಿನಲ್ಲಿನ ಸುಣ್ಣ (Lime), ಫಾಸ್ಫರಿಕ್ ಆಸಿಡ್ (Phosphoric Acid) ಮತ್ತು ಸೋಡಾ (Soda) ಎಂಬ ಪದಾರ್ಥಗಳೇ ಮುಖ್ಯಾಧಾರವಾಗಿರುವದರಿಂದ ಇವುಗಳನ್ನು ಪುನಃ ಜಮೀನಿನಲ್ಲಿ ಪದಗಿಸುವವಕ್ಕೆ ಸಾಧಕವಾದ ಗೊಬ್ಬರಗಳನ್ನು ಚುನಾಯಿಸಿ ಹಾಕಬೇಕು. ಜಮೀನು ನೀರನ್ನು ಸಲೀಸಾಗಿ ಹೀರುವ ಸ್ವಭಾವ ಉಳ್ಳದ್ದಾಗಿರಬೇಕು. ಇಲ್ಲದಿದ್ದರೆ ಕಬ್ಬಿ ಕೊನೆಗಳ ಸುತ್ತಲೂ ನೀರು ನಿಂತು ಅವು ಕೊಳೆತು ಹೋಗುವವು.

ಜಮೇಕಾದಲ್ಲಿ ಕಬ್ಬಿಯನ್ನು ಬೆಳೆಯುವದರಲ್ಲಿ ಎರಡು ಕ್ರಮಗಳನ್ನು ಅನುಸರಿಸುತ್ತಾರೆ. ಬೀಜಕ್ಕಾಗಿ ಹಿಂದಿನ ವರುಷದ ಫಸಲಿನಲ್ಲಿ ಕಣ್ಣುಗಳಿರುವ ಒಳ್ಳೆ ಕೊನೆಗಳನ್ನೇ ಆರಿಸಿಕೊಂಡು ಮಾರ್ಚಿ ಏಪ್ರಿಲ್ ತಿಂಗಳಲ್ಲಿ ಇದಕ್ಕಾಗಿ ತಯಾರು ಮಾಡಿಕೊಂಡಿರುವ ಜಮೀನಿನಲ್ಲಿ ಕೊನೆಯಿಂದ ಕೊನೆಗೆ ಒಂದು ಅಡಿ ಬಿಟ್ಟು ಬಿತ್ತುತ್ತಾರೆ. ಕೊನೆಗಳು ಮೊಳಕೆ ಬಿಟ್ಟು ಸಸಿಗಳು ಬಲಿಯುವದಕ್ಕೆ ಬಂದಮೇಲೆ ಜಮೀನಿನಲ್ಲಿನ ಕಳೆ ತೆಗೆಯುವದು ಸ್ವಲ್ಪ ಕಷ್ಟವಾಗುತ್ತದೆಯಾದುದರಿಂದ ಕಳೆಗಳನ್ನು ಬಿತ್ತನೆಗೆ ಮೊದಲೇ ತೆಗೆಯುವದು ಒಳ್ಳೇದು. ಈ ಪೈರಿಗೆ ನೀರು ಬಹಳ ಬೇಕಾಗುವದರಿಂದ ಮಳೆ ಚೆನ್ನಾಗಿ ಆಗದಿದ್ದರೆ ನೀರು ಹಾಯಿಸುತ್ತಿರಬೇಕು. ಈ ಕ್ರಮವನ್ನು ಅನುಸರಿಸಿ ಬೆಳೆದ ಕಬ್ಬಿಯೇ ಉತ್ತಮವಾದುದು. ಮತ್ತೊಂದು ಕ್ರಮಕ್ಕೆ „ಕೂಳೆ" ವಿಧಾನವೆಂದು (Ratoon crop) ಹೆಸರು. ಪ್ರತಿಸಾಲಿನಲ್ಲಿಯೂ ಫಸಲು ಆಗೆದುಕೊಳ್ಳುವಾಗ ಕಣ್ಣುಗಳಿರುವ ಕೆಲವು ಕೊನೆಗಳನ್ನು ಬೇರುಸಹಿತ ಭೂಮಿಯಲ್ಲೇ ಬಿಟ್ಟಿದ್ದರೆ ಇವುಗಳ

ಲ್ಲಾ ಮೊಳೆತು ಮುಂದಿನಸಾಲಿನಲ್ಲಿ „ಕೂಳೆ ಫಸಲು" ಬರುವದು. ಈ ಪೈರಿನಲ್ಲಿ ಕೊನೆಗಳು ದಪ್ಪನಾಗಿರುವದಿಲ್ಲ ಮತ್ತು ತಿರಳು ತಿರಳಾಗಿಲ್ಲದೆ ನಾರಾಗಿರುತ್ತವೆ. ಇದುಕೂಡ ವರ್ಷಕ್ರಮೇಣ ಕಿರುದಾಗುತ್ತಾ ಬರುವದು.

ಕೊಚ್ಚಿಯಲ್ಲಿ ಅನುಸರಿಸುವ ಸಾಗುವಳಿ ಕ್ರಮದಲ್ಲಿ ಕೊಂಚ ವ್ಯತ್ಯಾಸ ಉಂಟು. ಇಲ್ಲಿ ಮೊದಲು ಭೂಮಿಯನ್ನು ೨-೩ ಸಾರಿ ಉತ್ತು ಒಂದೂಕಾಲು ಅಡಿ ದೂರದೂರವಾಗಿ ಸಾಲುಗಳು ಮಾಡಿಕೊಂಡು ಇವುಗಳಲ್ಲಿ ಬೀಜದಿಂದ ಬೀಜಕ್ಕೆ ಮುಕ್ಕಾಲಡಿಯಷ್ಟು ಅವಕಾಶ ಬಿಟ್ಟು ಬಿತ್ತುತ್ತಾರೆ. ತರುವಾಯ ಜಮೀನಿನಮೇಲೆ ಸೊಪ್ಪುಗಳನ್ನು ಹರಡಿ ಇದರ ಮೇಲೆ ಅರ್ಧ ಅಂಗುಲ ಮಂದವಾಗಿ ಸಾರವತ್ತಾದ ಗೊಬ್ಬರವನ್ನು ಹಾಕುತ್ತಾರೆ. ಮಳೆಗಾಲ ಮುಗಿಯುತ್ತಲೆ ಪೈರಿಗೆ ನೀರು ಹಾಯಿಸಬೇಕು. ಬೇಸಿಗೆಯ ಪ್ರಾರಂಭದಲ್ಲಿ ಮೂರಾವರ್ತಿ ಕಳೆ ತೆಗೆಯುತ್ತಾರೆ. ಗಿಡಗಳಲ್ಲಿ ಹುವ್ವು ಉದುರಿ ದಂಟುಗಳು ಒಣಗುತ್ತಾ ಬಂದಕೂಡ್ಲೆ ಫಸಲು ರೇಖೆ ಮಾಡುವದಕ್ಕೆ ಸಮಯವೆಂದು ಗೊತ್ತುಮಾಡಿಕೊಳ್ಳಬಹುದು. ಶುಂಠಿಯನ್ನು ಕೈಗುದ್ದಲಿಯಿಂದಲೋ ಅಥವಾ ಬ್ಯಾಕೋಲಿನಿಂದಲೊ ಅಗೆದುಕೊಳ್ಳುತ್ತಾರೆ. ಆದರೆ ಅಗೆಯುವಾಗ ಕೊನೆಗಳಿಗೆ ಸ್ವಲ್ಪ ಪೆಟ್ಟು ತಗಲಿದರೂ ಕೂಡ ಇಂಥಾ ಶುಂಠಿಗೆ ಬೆಲೆ ಕಮ್ಮಿಯಾಗುವದರಿಂದ ಬಹಳ ಹುಷಾರಾಗಿ ಫಸಲು ರೇಖೆ ಮಾಡಬೇಕಾಗಿರುತ್ತೆ. ಅಗೆದಕೂಡ್ಲೆ ಕೊನೆಗಳಿಗೆ ಅಂಟಿರುವ ಬೇರುಗಳನ್ನೂ ಮತ್ತು ಮಣ್ಣನ್ನು ತೆಗದುಬಿಟ್ಟು ಶುಭ್ರವಾಗಿ ತೊಳೆಯಬೇಕು. ತರುವಾಯ ಕೊನೆಗಳನ್ನು ನೀರಿನಲ್ಲಿ ನೆನೆಯಿಟ್ಟರೆ ಅವುಗಳ ಮೇಲಿನ ಸಿಪ್ಪೆಯನ್ನು ಸುಲಭವಾಗಿ ಕೆರೆದುಹಾಕಬಿಡಬಹುದು. ಈ ಸಿಪ್ಪೆ ತೆಗೆಯುವ ಕೆಲಸವು ಬಹಳ ನಾಜೂಕಾದದ್ದು. ಯಾಕಂದರೆ, ಶುಂಠಿಯಲ್ಲಿ ಹಿತಕರವಾದ ಸುವಾಸನೆಯನ್ನು ಉಂಟುಮಾಡುವ ಎಣ್ಣೆಯು ಸಿಪ್ಪೆಯ ಕೆಳಗೇನೇ ಇರುತ್ತದೆಯಾಗಿ ಇದನ್ನು ಕೆಡಿಸದಹಾಗೆ ಸಿಪ್ಪೆಯನ್ನು ನಾಜೂಕಾಗಿ ತೆಗೆಯಬೇಕು. ಹೀಗೆ ಕೆರದ ಕೂಡ್ಲೆ ಶುಂಠಿಯನ್ನು ಪುನಃ ನೀರಿನಲ್ಲಿ ಹಾಕಿ ಚೆನ್ನಾಗಿ ತೊಳೆಯಬೇಕು. ತೊಳೆದಷ್ಟೂ ಶುಂಠಿಯು ಬೆಳ್ಳಗಾಗುವದು ಹೆಚ್ಚು. ತೊಳೆದ ಶುಂಠಿಯು

ನ್ನು ಗಾರೇನೆಲದಮೇಲೋ ಅಥವಾ ಚಾಪೆಯನ್ನು ಹಾಸಿಯೋ ಸ್ವಲ್ಪ ಹೆಚ್ಚು ಕಡಿಮೆ ಒಂದು ವಾರದವರೆಗೂ ಬಿಸಲಿನಲ್ಲಿ ಒಣಗಿಸಿದರೆ ಸರಕು ಮಾರಾಟಕ್ಕೆ ಲಾಯಖಾಗುತ್ತದೆ.

Preparation of Vinegar. *

"ವಿನಿಗರ" ಹುಳಿರಸದ ತಯಾರಿ.

ಬೊಂಬಾಯಿ ಆಧಿಪತ್ಯಕ್ಕೆ ಸೇರಿದ ಸೂರತ್ ಡಿಸ್ಟ್ರಿಕ್ಟಿನಲ್ಲಿ ಕಬ್ಬಿನ ಹಾಲಿನಿಂದ „ವಿನಿಗರ್" (Vinegar) ಎಂಬ ಹುಳಿರಸವನ್ನು ತಯಾರು ಮಾಡುತ್ತಾರೆ. ಕಬ್ಬಿನ ಹಾಲನ್ನು ದೊಡ್ಡ ಜಾಡಿಗಳಲ್ಲಿ ಮುಕ್ಕಾಲುವಾಸಿ ತುಂಬಿ, ಜಾಡಿ ಬಾಯಿಗೆ ಬಟ್ಟೆಯನ್ನು ಕಟ್ಟಿ ಬಿಸಲಿನಲ್ಲಿಡುತ್ತಾರೆ. ಹಾಲು ಹುಳಿಯಾಗುವದಕ್ಕೆ ಆರಂಭವಾಗಿ ಉಕ್ಕಿ ಬರುತ್ತಲೆ ಅದನ್ನು ಮತ್ತೊಂದು ಜಾಡಿಗೆ ಶೋಸಿಕೊಂಡು ಪುನಃ ಬಿಸಲಿನಲ್ಲಿಡಬೇಕು. ಹೀಗೆ ರಸವನ್ನು ಬಿಸಲಿನಲ್ಲಿ ಕಾಯಿಸುತ್ತಾ ಮಧ್ಯೆ ಮಧ್ಯೆ ೮—೧೦ ದಿನಕ್ಕೊಂದುಸಲ ಶೋಸುತ್ತಾ ಇದ್ದರೆ ೩-೩½ ತಿಂಗಳಲ್ಲಿ ವಿನಿಗರ ಹುಳಿಯು ತಯಾರಾಗುವದು. ಬಿಸಲು ಚುರುಕಾಗಿದ್ದ ಹಾಗೆಲ್ಲಾ ಹುಳಿ ತಯಾರಾಗುವದು ಜಾಗ್ರತೆ, ಮತ್ತು ಹಾಲಿನಲ್ಲಿ ಸಕ್ಕರೆ ಹೆಚ್ಚಾಗಿದ್ದರೆ ಜಾಗ್ರತೆ ಹುಳಿಯಾಗುತ್ತೆ. ಕಬ್ಬಿನ ಹಾಲು ಕಾಸಿದರೆ ಬರುವ ಮಷ್ಟಿನಿಂದಲೂ (Scum) ವಿನಿಗರ ತಯಾರು ಮಾಡುವದುಂಟು. ಇದು ಹಾಲುಗಿಂತಲೂ ಜಾಗ್ರತೆಯಾಗಿ ಹುಳಿಸುತ್ತದೆ.

ಖರ್ಜೂರದಿಂದಲೂ ವಿನಿಗರ ಹುಳಿಯನ್ನು ತೆಗೆಯಬಹುದು. ಖರ್ಜೂರವನ್ನು ನೀರಿನಲ್ಲಿ ಬೇಯಿಸಿ ಕಷಾಯವನ್ನು ಬಿಸಲಿನಲ್ಲಿಟ್ಟರೆ ಹುಳಿಯಾಗುತ್ತದೆ. ಕಬ್ಬಿನ ಹಾಲಿನಂತೆ ಇದನ್ನೂ ಆಗ್ಯಾಗ್ಯೆ ನೊರೆ ಬಂದಾಗಲೆಲ್ಲಾ ಶೋಸಿಕೊಳ್ಳುತ್ತಾ ಬಿಸಲಿನಲ್ಲಿ ಕಾಯಿಸುತ್ತಿದ್ದರೆ ೩ ತಿಂಗಳಲ್ಲಿ ವಿನಿಗರ ಹುಳಿಯಾಗುತ್ತೆ. ಇದು ಕಬ್ಬಿನ ಹಾಲಿನ ವಿನಿಗರಗಿಂತಲೂ ಬ

* ಅಗ್ರಿಕಲ್ಚರಲ್ ಜರ್ನಲ್ ಆಫ್ ಇಂಡಿಯಾ, ಜನವರಿ.

ಳ್ಳ ಸುವಾಸನೆಯುಳ್ಳದ್ದೆಂತಲೂ ಮತ್ತು ಹೆಚ್ಚು ಬೆಲೆಯಾಗತಕ್ಕದ್ದೆಂತ
ಲೂ ಹೇಳುತ್ತಾರೆ.

ಈ ಹುಳಿಗೆ ಒಟ್ಟಾಗಿ ಮಾರಿದರೆ ಮಣ ಒಂದಕ್ಕೆ ೧೨ ಆಣೆಯಿಂದ
೧| ರೂಪಾಯಿವರೆಗೂ, ಚಿಲ್ಲರೆಯಾಗಿ ಮಾರಿದರೆ ೧೪ ರೂಪಾಯಿನಿಂದ ೩೪
ರೂಪಾಯಿವರೆಗೂ ಸಿಕ್ಕುತ್ತದೆ.

ವಿನಿಗರನ್ನು ಯೂರೋಪಿಯನರು, ಪಾರ್ಶಿ ಮತ್ತು ಮಹಮ
ದೀಯರು ಉಪ್ಪಿನಕಾಯಿ, ಚಟ್ನಿ, ಮೊದಲಾದ ಪದಾರ್ಥಗಳಿಗೆ ಉಪ
ಯೋಗಿಸುವದುಂಟು. ಇದನ್ನು ಹಿಂದುಗಳು ಔಷಧಿಗೆ ಉಪಯೋಗಿಸು
ತ್ತಾರೆ. ಮತ್ತು ಭಾರಿ ಜ್ವರಗಳಲ್ಲಿ ಮೈಗೆ ಹಚ್ಚಿದರೆ ಇದು ಜ್ವರದ ತಾ
ಪವನ್ನು ಶಮನ ಮಾಡುತ್ತದಂತೆ. ಇದನ್ನು ದನಗಳಿಗೂ ಕೊಡುವದುಂ
ಟು.

ತಾಳೆ ಹೆಂಡದಿಂದಲೂ ವಿನಿಗರ ಮಾಡುತ್ತಾರೆ. ತಯಾರಿ ಕ್ರಮ
ವೇನೋ ಮೇಲಿನಂತೆಯೇ. ಆದರೆ ಇದಕ್ಕೆ ಕಬ್ಬು ಮತ್ತು ಖರ್ಜೂರದ
ವಿನಿಗರಿಗೆ ಹಿಡಿಯುವಂತೆ ೩ ತಿಂಗಳು ಬೇಕಿಲ್ಲ; ಒಂದು ಒಂದೂವರೆ ತಿಂಗಳ
ಲ್ಲಿ ತಯಾರಾಗುತ್ತದೆ. ಇದರ ಖರೀದಿ ಒಟ್ಟಾಗಿ ಕೊಂಡರೆ ಮಣಕ್ಕೆ ೧೦
ಆಣೆಯೂ ಚಿಲ್ಲರೆಯಾಗಿ ಆದರೆ ೧| ರೂಪಾಯಿಯೂ ಆಗುತ್ತದೆ. ಈ
ವಿನಿಗರು ೨ ವರುಷಗಳ ಮೇಲೆ ಇಟ್ಟಿದ್ದರೆ ಕೆಟ್ಟು ಹೋಗುತ್ತದೆ.

Notifications.

ಇಸ್ತಿಹಾರ್ ನಾಮೆಗಳು.

ನಂ. ೬೯೦೬. ತಾ|| ೧೨—೧—೧೦.

ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೧೭೭ನೆ ಪ್ರಕರಣದ ಮೇರೆ
ಮಂಜರಾಬಾದ್ ತಾ|| ಅಮಲ್‌ದಾರ್ ಮೆ|| ಸಿ. ನಾರಾಯಣರಾಯರಿಗೆ ಕ್ರಿ
ಸ್ತಮಸ್ ರಜಾ ವಲ್ಲದೆ ೩—೧—೧೦ರ ಲಾಗಾಯಿತು ೧೫ ದಿನಗಳ ಪ್ರಿವಿ
ಲೇಜ್ ರಜಾ ಸಹ ಕೊಟ್ಟಿರುತ್ತೆ.

ಅವರ ಗೈರ್ ಹಾಜರಿಯಲ್ಲಿ ತಾಲ್ಲೂಕು ಶಿರಸ್ತೇದಾರ್ ಎಂ. ಎ. ತಿರು ಮಲಾಚಾರ್ರು, ತಾಲ್ಲೂಕು ಚಾರ್ಜಿನಲ್ಲಿರತಕ್ಕದ್ದು.

Occasional Notes.

ವಿವಿಧ ವೃತ್ತಾಂತಗಳು.

೧. ಬೆಂಗಳೂರಿನಲ್ಲಿ ಮನೆ ಕಟ್ಟುವವರಿಗೆ ಅನುಕೂಲವಾಗುವಂತೆ ಏರ್ಪಾಡಾಗಿರುವ ಬೆಂಗಳೂರು ಬಿಲ್ಡಿಂಗ್ ಕೋಆಪರೇಟಿವ್ ಸೊಸೈಟಿ, ಲಿಮಿಟೆಡ್, ಎಂಬ ಒಂದು ಸೊಸೈಟಿಯು ಕಳೆದ ತಿಂಗಳಲ್ಲಿ ಕೋಆಪರೇಟಿವ್ ಸೊಸೈಟಿಗಳ ಕಾನೂನು ಪ್ರಕಾರ ರಿಜಿಸ್ಟರ್ ಮಾಡಲ್ಪಟ್ಟಿರುತ್ತೆ.

---

೨. ಮೈಸೂರು ಸಂಸ್ಥಾನದಲ್ಲಿ ೧೯೦೮—೦೯ನೆ ಸಾಲಿನಲ್ಲಿ ೧೦೨,೯೦೩ ಎಕರೆ ವಿಸ್ತೀರ್ಣದ ಜಮೀನು ಕಾಫಿ ಸಾಗುವಳಿಯಲ್ಲಿದ್ದು ೧೬೧,೪೮೬ ಬುಷೆಲು (೧ ಬುಷೆಲ್ಲಿಗೆ ೮೦ ಪೌಂಡುಗಳು) ಕಾಫಿ ಹುಟ್ಟುವಳಿಯಾಗಿರುತ್ತದೆ. ಇದರ ಹಿಂದಿನ ವರುಷ ೧೦೦,೧೭೬ ಎಕರೆಗಳ ಜಮೀನು ಸಾಗುವಳಿಯಾಗಿ ೧೬೯,೭೬೫ ಬುಷೆಲ್ಲು ಕಾಫಿ ಉತ್ಪತ್ತಿಯಾಗಿತ್ತು.

---

೩. ಹಾಸನ ತಾಲ್ಲೂಕು ಮತ್ತು ಆಲೂರು ಸಬ್ ತಾಲ್ಲೂಕು ಈ ಸ್ಥಳಗಳಲ್ಲಿರುವ ಕೋಆಪರೇಟಿವ್ ಸೊಸೈಟಿಗಳನ್ನು ಮೇಲ್ವಿಚಾರಣೆ ಮಾಡಲು ರಿಟೈರ್ಡ್ ತಾಲ್ಲೂಕು ಶಿರಸ್ತೆದಾರ್ ಮ|| ರಾ|| ಎಣ್. ಡಿ. ನಾರಣಪ್ಪನವರು ಮೈಸೂರು ಗವರ್ನಮೆಂಟ್ ೬—೮—೦೯ನೆ ಮುರ್ರ್ಕಂ ಫೈ. ೧೨೯೦-೯-೧೩೪೪-೦೯-೨ನೆ ನಂಬರು ಹುಕುಂ ಅನುಸರಿಸಿ ನೇಮಿಸಲ್ಪಟ್ಟಿರುತಾರೆ.

---

೪. ಕಿತ್ತಲೆ ಮತ್ತು ನಿಂಬೆ ಹಣ್ಣುಗಳಿಗೆ ಬರುವ ಬಿಳೀ ಬೂಜು ರೋಗಕ್ಕೆ „ಬೋರ್ಡೋ" ದ್ರಾವಕವೂ (Bordeaux Mixture) ಮತ್ತು ಹಣ್ಣು ಹಂಪಲುಗಳು, ತರಕಾರೀ ಮೊದಲಾದ ಸಸ್ಯಾದಿಗಳನ್ನು ಕೆಡಿಸುವ

ಲ್ಲಾ ತರದ ಕಂಬಳಿ ಹುಳುಗಳಿಗೆ ಸೀಮೆಯೆಣ್ಣೆ ಸಂಬಂಧವಾದ ದ್ರಾವ (Kerosine Emulsion), ಕಾಡಿಗೆ ಮತ್ತು ಹೊಗೆಸೊಪ್ಪಿನ ಕಷಾ ಯಗಳೂ ಒಳ್ಳೆ ಪರಿಹಾರಗಳೆಂದು ಇಂಡಿಯಾ ಗೌರ್ನಮೆಂಟು ಕ್ರಿಮಿಶಾ ಸ್ತ್ರಜ್ಞರು ಸೂಚಿಸಿರುತ್ತಾರೆ. ಈ ಪರಿಹಾರಗಳನ್ನು ಪೂನಾಪಟ್ಟಣದ ಂದು ತೋಟದಲ್ಲಿ ಪರೀಕ್ಷೆ ಮಾಡಿ ನೋಡಿದ್ದರಲ್ಲಿ ಶಾನೆ ಅನುಕೂಲ ಕಂ ು ಬಂತು.—ಅಗ್ರಿಕಲ್ಚರಲ್ ಜರ್ನಲ್ ಆಫ್ ಇಂಡಿಯಾ, ಜನವರಿ ೧೯೧೯.

---

೫. ಕಬ್ಬಿನಿಂದ ಬೆಲ್ಲವನ್ನು ತಯಾರು ಮಾಡುವದರಲ್ಲಿಯೂ ಮತ್ತು ಹಾಡಿಯುವರ ವಿಧಾನದಿಂದ" (Hadi Process) ಸಕ್ಕರೆಯನ್ನು ತ ಯಾರು ಮಾಡುವದರಲ್ಲಿಯೂ ಬರುವ ಲಾಭ ತಾರತಮ್ಯಗಳನ್ನು ಕುರಿತು ಬೊಂಬಾಯಿ ವ್ಯವಸಾಯ ಇಲಾಖೆಯವರು ಒಂದು ಪತ್ರಿಕೆಯನ್ನು ಪ್ರಸಿದ್ಧ ಡಿಸಿರುತ್ತಾರೆ. ಇದರಿಂದ ಪೂಣೆ ಡಿಸ್ಟ್ರಿಕ್ಟಿನ ಸಧ್ಯಸ್ಥಿತಿಯಲ್ಲಿ ಸಕ್ಕರೆ ಯಾರು ಮಾಡುವದಕ್ಕಿಂತಲೂ ಬೆಲ್ಲ ಮಾಡುವದೇ ಹೆಚ್ಚು ಆದಾಯಕರ ಂದು ಗೊತ್ತಾಗುತ್ತೆ. ಬೊಂಬಾಯಿಯಲ್ಲಿ ಬೆಲ್ಲದ ತಯಾರಿಗೆ ಬೇಕಾಗುವ ಂಡವಾಳ ಮತ್ತು ಗಾಣ ಮುಂತಾದವುಗಳ ದುರಸ್ತಿಗೆ ಆಗ್ಯಾಗ್ಯೆ ತಗಲುವ ಚ್ಚ ಹಾಡಿಯುವರ ಕ್ರಮಕ್ಕೆ ಬೇಕಾಗುವದಕ್ಕಿಂತಲೂ ಬಹಳ ಕಡಿಮೆ ಗುತ್ತವೆ. ಇದಲ್ಲದೆ ಬೆಲ್ಲಕ್ಕೆ ಒಳ್ಳೆ ಗಿರಾಕಿಯೂ ಉಂಟು. ಯಾಕಂದರೆ, ಬೊಂಬಾಯಿಯಲ್ಲಿ ಅನೇಕ ಸಿಹಿ ಪದಾರ್ಥಗಳ ತಯಾರಿಯಲ್ಲಿಯೂ ಮತ್ತು ಡಿಗೆಯಲ್ಲಿಯೂ ಬೆಲ್ಲವನ್ನು ವಿಶೇಷವಾಗಿ ಉಪಯೋಗಿಸುತ್ತಾರೆ.— ಗ್ರಿಕಲ್ಚರಲ್ ಜರ್ನಲ್ ಆಫ್ ಇಂಡಿಯಾ, ಜನವರಿ ೧೯೧೯.

---

೬. ಮದರಾಸು ಆಧಿಪತ್ಯದಲ್ಲಿ ೧೯೧೯—೧೦ನೆ ಸಾಲ್‌ನಲ್ಲಿ ೧೯೧೯ನೆ ನ ಂಬರು ಆಖೈರುವರಿಗೆ ಸುಮಾರು ೫೮೪ ಲಕ್ಷ ಎಕರೆಗಳು ಬತ್ತದ ಸಾಗು ಳಿಯಲ್ಲಿಯೂ, ೬೧ ಸಾವಿರ ಎಕರೆಗಳು ನೀಲಿ ಸಾಗುವಳಿಯಲ್ಲಿಯೂ, | ಲಕ್ಷ ಎಕರೆಗಳು ಹರಳು ಸಾಗುವಳಿಯಲ್ಲಿಯೂ ಮತ್ತು ೧೩ ಲಕ್ಷ ಎ ರೆಗಳು ಹತ್ತಿ ಸಾಗಿನಲ್ಲಿಯೂ ಇದ್ದವೆಂತಲೂ, ಬತ್ತ, ನೀಲಿ ಮತ್ತು ಹ ್ತಿ ಸಾಗಿನಲ್ಲಿದ್ದ ವಿಸ್ತೀರ್ಣಗಳು ಹಿಂದಿನ ಸಾಲಿಗಿಂತಲೂ ಶೇಕಡ ೭, ೨೯

ಮತ್ತು ೧೧ ರಷ್ಟು ಹೆಚ್ಚು ನೀಲಿ ಸಾಗಿನಲ್ಲಿದ್ದ ವಿಸ್ತೀರ್ಣವು ಶೇಕಡಾ ೧೧ ರಷ್ಟು ಕಮ್ಮಿ ಬಿದ್ದಿರುತ್ತೆಂತಲೂ ಮದರಾಸು ರೆವಿನ್ಯೂ ಬೋರ್ಡಿನವರು ಫಾಯಿಷ್ ಮಾಡಿರುವ ರಿಪೋರ್ಟುಗಳಿಂದ ಗೊತ್ತಾಗುತ್ತದೆ. ಫಸಲುತ್ಪತ್ತಿಯು ಬತ್ತ ೧೩ ಆಣೆ, ನೀಲಿ ೧೧ ಆಣೆ ಮತ್ತು ಹರಳು ೧೦ ಆಣೆ ಫಸಲೆಂತ ಅಂದಾಜು ಮಾಡಲ್ಪಟ್ಟಿರುತ್ತೆ.

ಹತ್ತಿಯು ಉತ್ಪತ್ತಿಯು ಸುಮಾರು 1⅓ ಲಕ್ಷ ಬೇಲುಗಳು ಅಂದರೆ ಹಿಂದಣ ಸಾಲಿಗಿಂತ ಸುಮಾರು ೨೦ ಸಾವಿರ ಬೇಲುಗಳು (ಬೇಲಿಗೆ ೧೨ ಮಣ ವಾಗುತ್ತೆ) ಜಾಸ್ತಿಯಾಗಿ ಅಂದಾಜಾಗಿರುತ್ತೆ.

---

೭. ಹಿಂದಿನ ಸಂಚಿಕೆಯಲ್ಲಿ ಸಂಸ್ಥಾನದ ಹುಜೂರು ಜಮಾಬಂದಿ ಪ್ರೋಗ್ರಾಮನ್ನು ಫಾಯಿಷ್ ಮಾಡಿತ್ತಷ್ಟೆ. ಈಚೆಗೆ ಕೋಲಾರ ಮತ್ತು ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮಿಷನರುಗಳು ಸೂಚಿಸಿರುವ ಕೆಲವು ಬದಲಾವಣೆಗಳನ್ನು ಈ ಕೆಳಗೆ ನಮೂದಿಸಿರುತ್ತೆ.

ಡಿಸ್ಟ್ರಿಕ್ಟು.	ತಾಲ್ಲೂಕು.	ಮೊದಲು ಯಾರು ಇಟ್ಟುಕೊಂಡಿದ್ದರು.	ಈಗ ಯಾರಿಗೆ ವರ್ಗಯಾಗಲ್ಪಟ್ಟಿರುತ್ತೆ.
ಕೋಲಾರ ...	ಮಾಲೂರು ...	ಮಾಲೂರು ಸಬ್ ಡಿವಿಜನ್ ಆಫೀಸರವರು.	ಡೆಪ್ಯುಟಿ ಕಮಿಷನರವರು
	ಚಿಂತಾಮಣಿ ...	ಡೆಪ್ಯುಟಿ ಕಮಿಷನರವರು	ಮಾಲೂರು ಸಬ್ ಡಿವಿಜನ್ ಆಫೀಸರವರು.
ಕಡೂರು ...	ಕೊಪ್ಪ ...	ಕಡೂರು ಸಬ್ ಡಿವಿಜನ್ ಆಫೀಸರವರು.	ಡೆಪ್ಯುಟಿ ಕಮಿಷನರವರು.
	ಚಿಕ್ಕಮಗಳೂರು	ಡೆಪ್ಯುಟಿ ಕಮಿಷನರವರು.	ಟ್ರೆಜರಿ ಅಸಿಸ್ಟೆಂಟ್ ಕಮಿಷನರವರು.

V. B. SOOBBIAH AND SONS, PRINTERS, BANGALORE.—1910.

THE MYSORE

REVENUE & AGRICULTURAL GAZETTE.

ವಾಲ್ಯುಂ ೪.] ಮಂಗಳವಾರ, ೧ನೆ ಫೆಬ್ರವರಿ ೧೯೧೦. [ನಂ. ೭.

Contents.

1. Tillage.—Its relation to Soil Moisture.
2. Samalkot Agricultural Station.
3. Revenue Appeals.
4. "Eri" or "Castor" Silk.
5. Manures.
6. Correspondence.—Cotton,
7. Notifications.
8. Occasional Notes.
(i) Rubber. (ii) Co-operative Societies. (iii) Demonstration of Sugar-making at Hebbal. (iv) Cotton.

ಅನುಕ್ರಮಣಿಕೆ.

೧. ಉಳುಮೆಗೂ ಭೂಮಿಯ ತೇವಕ್ಕೂ ಪರಸ್ಪರ ಸಂಬಂಧ.
೨. ಸಾಮಲಕೋಟೆ ವ್ಯವಸಾಯಕ ಸ್ಟೇಷನ್.
೩. ರೆವಿನ್ಯೂ ಅಪೀಲುಗಳು.
೪. "ಈರಿ" ಎಂಬ ಒಂದು ಬಗೆಯ ರೇಷ್ಮೆ.
೫. ಗೊಬ್ಬರಗಳು.
೬. ಕರೆಸ್‌ಪಾಂಡೆನ್ಸ್—ಹತ್ತಿ.
೭. ಇಸ್ತಿಹಾರ್ ನಾಮೆಗಳು.
೮. ವಿವಿಧ ವೃತ್ತಾಂತಗಳು.
(i) ರಬ್ಬರು. (ii) ಕೋ ಆಪರೇಟೀವ್ ಸೊಸೈಟಿಗಳು. (iii) ಹೆಬ್ಬಾಳದಲ್ಲಿ ಸಕ್ಕರೆ ತಯಾರಿ. (iv) ಹತ್ತಿ.

Tillage—Its relation to Soil Moisture. *

ಉಳುಮೆಗೂ ಭೂಮಿಯ ತೇವಕ್ಕೂ ಪರಸ್ಪರ ಸಂಬಂಧ.

ಎಲ್ಲಾ ಬೆಳೆಗಳಿಗೂ ನೀರೆ ಮುಖ್ಯಾಧಾರವಾದದ್ದು. ಸಸ್ಯರಾಸಿಗ

* ನೇಟಲ್ಸ್ ಪ್ರಾವಿನ್ಸಿಸನ್ ಅಗ್ರಿಕಲ್ಚರಲ್ ಗಜೆಟ್, ಸೆಪ್ಟಂಬರ್ ೧೯೦೯.

ಳಲ್ಲಿ ಜಲಾಂಶವೇ ಹೆಚ್ಚು. ಭೂಮಿಯನ್ನು ಉತ್ತು ಬಿತ್ತನೆ ಮಾಡಿದ ಮಾತ್ರಕ್ಕೇನೆ ತೇವವಿದ್ದಹೊರತು ಬೀಜಗಳು ಮೊಳೆಯುವದಿಲ್ಲ. ಸಾಧಾರಣವಾಗಿ ಒಂದು ಮಣದ ತೂಕ ಪದಾರ್ಥ ಬೆಳೆದರೆ ಪೈರಿನ ಬೆಳವಳಿಗೆಗೆ ಸರಾಸರಿ ೩೦೦-೫೦೦ ಮಣ ನೀರು ಖರ್ಚಾಗಿರುತ್ತದೆ. ಇಷ್ಟು ನೀರೂ ಪೈರಿನ ಜಲಾಂಶವಾಗಿ ಪರಿಣಮಿಸತಕ್ಕದ್ದು. ಆದರೆ ಪೈರಿನ ಬೆಳವಳಿಗೆ ಕಾಲದಲ್ಲಿ ಜಮೀನಿನಿಂದ ನಷ್ಟವಾಗಿ ಹೋಗತಕ್ಕ ನೀರನ್ನೂ ಗಣನೆಗೆ ತೆಗೆದುಕೊಂಡಪಕ್ಷದಲ್ಲಿ ಈ ೩೦೦-೫೦೦ ಮಣ ನೀರು ಮಾತ್ರವೇ ಅಲ್ಲ ದೆ ಇನ್ನೂ ಹೆಚ್ಚು ನೀರು ಖರ್ಚಾಗಿರುತ್ತದೆ.

ಖುಷ್ಕಿ ಪೈರುಗಳ ಬೆಳವಳಿಗೆಗೆ ಭೂಮಿಯಲ್ಲಿನ ತೇವವು (ಅಂದ ರೆ, ಹಿಂದಿನ ಮಳೆಗಾಲದಲ್ಲಿ ಭೂಮಿಯಲ್ಲಿಬಿದ್ದು ನಿಂತಿರುವ ನೀರೇ) ಮೂ ಲಾಧಾರವಾಗಿರುತ್ತದೆ. ಮಳೆಗಾಲ ಪೂರೈಸಿದ ಮೇಲೆ ಭೂಮಿಯಲ್ಲಿ ತೇ ಮವು ಹೆಚ್ಚಾಗಿ ಉಳಿದಿದ್ದಷ್ಟೂ ಅದರಲ್ಲಿ ಫಸಲುತ್ಪತ್ತಿಯೂ ಕೂಡ ತದ ನುಸಾರವಾಗಿ ಜಾಸ್ತಿಯಾಗುತ್ತದೆ. ಆದಕಾರಣ ಮುಖ್ಯವಾಗಿ ರೈತನು ಮಳೆಗಾಲದಲ್ಲಿ ಒದಗುವ ನೀರನ್ನು ಭೂಮಿಯಿಂದ ನಷ್ಟವಾಗದಂತೆ ಕಾ ಪಾಡಿಡುವದಕ್ಕಾಗಿ ಸರ್ವ ಪ್ರಯತ್ನವನ್ನೂ ಮಾಡಬೇಕು. ನಷ್ಟವೆಂದ ರೆ ಏನು, ಮತ್ತು ಇದು ಹೇಗೆ ಉಂಟಾಗುತ್ತದೆಂದು ಕೇಳಬಹುದು. ಅ ದು ಎರಡು ವಿಧವಾಗಿ ಸಂಭವಿಸುತ್ತದೆ. ಮೊದಲನೇದು, ಬಿದ್ದ ಮಳೆಯ ಲ್ಲಾ ಬಹಳಮಟ್ಟಿಗೆ ಭೂಮಿಯೊಳಗೆ ಪ್ರವೇಶಿಸದೆ ಜಮೀನಿನ ಮೇಲ್ಗ ಡೆಯೇ ಹರದು ಹೋಗುವದುಂಟು. ಇಷ್ಟೇ ಅಲ್ಲದೆ ಜಮೀನುಗಳಲ್ಲಿ ಕೊ ರಕಲುಗಳನ್ನು ಮಾಡಿ ಮಣ್ಣನ್ನು ಕೊಚ್ಚಿಕೊಂಡು ಹೋಗುತ್ತದೆ. ಇ ದರಿಂದ ನೀರು ಸಾಗುವಳಿಗೆ ಉಪಯೋಗವಡದೆ ವ್ಯರ್ಥವಾಗುವದೊಂದೇ ಅಲ್ಲದೆ ಸಸ್ಯಗಳ ಬೆಳವಳಿಗೆಗೆ ಸಾಧಕವಾದ ಅನೇಕ ಪದಾರ್ಥಗಳೂ ಕೂ ಡ ನೀರಿನಲ್ಲಿ ಕೊಚ್ಚಿ ಹೋಗುತ್ತವೆ. ಇದು ಸಾಮಾನ್ಯವಾಗಿ ಎಲ್ಲರಿಗೂ ಗೊತ್ತೇ ಇದೆ. ಆದ್ದರಿಂದಲೇ ಹೀಗೆ ಮಣ್ಣು ಕೊಚ್ಚಿ ಹೋಗುವದನ್ನು ತಡಿಯುವದಕ್ಕಾಗಿ ಅಡ್ಡವಾಗಿ ಮಣ್ಣುದಿಂಡುಗಳನ್ನು ಕಟ್ಟುವದು ವಾಡಿ ಕೆಯಲ್ಲಿದೆ. ಎರಡನೇದು, ಮಳೆಗಾಲದಲ್ಲಿ ಭೂಮಿಯಲ್ಲಿ ಸೇರುವ ನೀರು

ಬೇಸಿಗೆಯಲ್ಲಿ ಬತ್ತಿ ಹೋಗುವದರಿಂದ ಪೈರುಗಳಿಗೆ ಒದಗದೆ ನಷ್ಟವಾಗುತ್ತದೆ. ಈ ನಷ್ಟವನ್ನು ಪೂರ್ತಿಯಾಗಿ ತಪ್ಪಿಸುವದಕ್ಕೆ ಆಗದಿದ್ದರೂ ಬಹಳಮಟ್ಟಿಗೆ ಕಮ್ಮಿ ಮಾಡಬಹುದು. ಹೀಗೆ ಉಳುಮೆಯಾದ ಭೂಮಿಯಮೇಲೂ ಉಳುಮೆಯಾಗದ ಭೂಮಿಯಮೇಲೂ ಮಳೆ ಬಿದ್ದರೆ ವ್ಯತ್ಯಾಸವೇನಾದರೂ ತೋರಿಬರುತ್ತದೆಯೋ ನೋಡೋಣ. ಉಳುಮೆಯಾದ ಭೂಮಿಯು ಬಿದ್ದ ನೀರನ್ನೆಲ್ಲಾ ಹೀರಿಬಿಡುತ್ತದೆ. ಜಮೀನು ಕೆದರಿರುವದೇ ಆಗಲಿ ಅಥವಾ ಸ್ವಲ್ಪವಾದರೂ ಮಣ್ಣು ಕೊಚ್ಚಿಹೋಗಿರುವದೇ ಆಗಲಿ ಗೋಚರವಾಗುವದಿಲ್ಲ. ಉಳುಮೆಯಾಗದ ಭೂಮಿಯಲ್ಲಾದರೋ ನೀರು ಮೇಲೆಯೇ ನಿಂತು ಮಳೆ ಜೋರಾದರೆ ಸ್ವಲ್ಪ ಹೊತ್ತಿನಮೇಲೆ ಮಣ್ಣನ್ನು ಕೊಚ್ಚಿಕೊಂಡು ಕಾಲುವೆ ಕಾಲುವೆಯಾಗಿ ಹರಿದು ಹೋಗುತ್ತದೆ. ಈ ತಾರತಮ್ಯಗಳಿಂದ ಮಳೆ ಶುರುವಾಗುವದಕ್ಕೆ ಸ್ವಲ್ಪ ಮುಂಚಿತವಾಗಿಯೇ ಜಮೀನನ್ನು ಉಳುವದು ಎಷ್ಟು ಪ್ರಯೋಜನಕರವೆಂದು ಗೊತ್ತು ಮಾಡಬಹುದು. ಮಳೆಗಾಲ ಶುರುವಾಗುವದಕ್ಕೆ ಮೊದಲು ಜಮೀನನ್ನು ಎಷ್ಟು ಕೆದರಿದ್ದರೆ ಅಷ್ಟು ಅನುಕೂಲ. ಇಳಿಜಾರಾದ ಜಮೀನಿನ ಮೇಲೆ ಬಿದ್ದ ನೀರು ಯಾವಕಡೆ ಹರಿಯುತ್ತದೋ ಅದಕ್ಕೆ ಅಡ್ಡಲಾಗಿ ಉತ್ತರೆ ಬಿದ್ದ ನೀರು ಹೊಡೆದುಕೊಂಡು ಹೋಗದೇ ಅಲ್ಲಿಯೇ ನಿಲ್ಲುವದು.

ಭೂಮಿಯಲ್ಲಿನ ತೇವವು ಸಸ್ಯಗಳಿಗೆ ಒದಗುವದೊಂದಲ್ಲದೆ ಅನ್ಯವಿಧವಾಗಿ ಭೂಮಿಯಿಂದ ನಷ್ಟವಾಗದಂತೆ ಕಾಪಾಡಬೇಕಾದ್ದು ಮುಖ್ಯ ಕರ್ತವ್ಯವೆಂದು ಮೊದಲೇ ಹೇಳಿರುತ್ತಷ್ಟೆ. ಪೈರಿಡುವದಕ್ಕಾಗಿ ಸಿದ್ಧಪಡಿಸಿಕೊಂಡಿರುವ ಭೂಮಿಯ ಮೇಲ್ಗಡೆ ಒಣಗುವ ಚಿಹ್ನೆಯು ತೋರಿಬಿರಕುಬಿಡುವದು ಆರಂಭವಾದ ಕೂಡಲೆ ಅಗತೆ ಮಾಡಿ ಹೆಂಟೆಗಳೊಡೆದು ಮೇಲಿನ ಮಣ್ಣನ್ನು ಪುಡಿಪುಡಿಯಾಗಿ ಮಾಡಬೇಕು. ಏಕಂದರೆ, ಭೂಮಿಯಲ್ಲಿನ ತೇವವು ಕೆಳಗಿನಿಂದ ಮಣ್ಣು ರೇಣುಗಳ ನಡುವೆ ಇರುವ ಸಂದುಗಳ ದ್ವಾರವಾಗಿಯೇ ಮೇಲಕ್ಕೆ ಏರುತ್ತದೆ. ಈ ಮಣ್ಣು ರೇಣುಗಳು ಸೂಕ್ಷ್ಮವಾಗಿದ್ದಷ್ಟೂ ನೀರು ಎತ್ತರಕ್ಕೆ ಹತ್ತುವದು ಹೆಚ್ಚು.

ಮೇಲ್ಗಡೆಯ ತೇವವು ಬಿಸಲಿನಲ್ಲಿ ಆರಿದಹಾಗೆಲ್ಲಾ ಕೆಳಗಿನಿಂದ ನೀರು ಸಂ
ದುಗಳ ಮೂಲಕ ಮೇಲಕ್ಕೆ ಹತ್ತುವದು. ಇದೂ ಆರಿದರೆ ಪುನಃ ಕೆಳಗಿನ
ತೇವವು ಮೇಲಕ್ಕೆ ಬರುವದು. ಹೀಗೆ ಕ್ರಮೇಣ ಭೂಮಿಯಲ್ಲಿನ ತೇ
ವವೆಲ್ಲಾ ಒಣಗಿ ಹೋಗುತ್ತದೆ. ತೇವವು ಹೀಗೆ ನಷ್ಟವಾಗದಂತೆ ಮಾ
ಡಬೇಕಾದರೆ ಮಣ್ಣಿನ ಸಂದುಗಳನ್ನು ಮುಚ್ಚಿಸಬೇಕು. ಉಕ್ಕೆಹೊಡೆಯು
ವದರಿಂದ ಈ ಸಂದುಗಳು ಮುಚ್ಚಿ ಭೂಮಿಯಲ್ಲಿ ನೀರು ಉಳಿಯುವದೊಂ
ದಲ್ಲದೆ ತೇವವು ಮೇಲಿನ ಮಣ್ಣಿನ ಕೆಳಗೇನೇ ಒದಗಿ ಬಿತ್ತಿದ ಬೀಜಕ್ಕೆ
ಸುಲಭವಾಗಿ ನಿಲುಕುವದು. ಭಾರಿ ಮಳೆ ಬಿದ್ದಾಗ ಜಮೀನಿಗೆ ಒದಗುವ
ನೀರು ಹುಡಿಯಾಗಿರುವ ಮೇಲಿನ ಮಣ್ಣಿನಿಂದ ಸುಮಾರು ೩ ಇಂಚು
ಕೆಳಗೇನೇ ನಿಲುಕುವಂತೆ ಮಳೆ ಷುರುವಾಗುತ್ತಲೆ ಭೂಮಿಯನ್ನು ಚೆ
ನ್ನಾಗಿ ಉತ್ತುಬಿಡಬೇಕು. ಮತ್ತು ಮಳೆ ಜೋರಾಗಿ ಬಿದ್ದಾಗಲೆಲ್ಲಾ
ಸಾಧ್ಯವಾದರೆ ಒಂದಾವರ್ತಿ ಜಮೀನನ್ನು ಉತ್ತುಬಿಡುವದು ಒಳ್ಳೇದು.
ಇದರಿಂದ ಕಳೆಗಳು ನಾಶವಾಗುವದಲ್ಲದೆ ಭೂಮಿಯಲ್ಲಿ ಯಥೇಷ್ಟವಾಗಿ
ನೀರು ನಿಂತು ಮುಂದಿನ ಪೈರುಗಳಿಗೆ ಒದಗುತ್ತದೆ. ಇದೇಪ್ರಕಾರವಾಗಿ
ತೋಟಗಳಲ್ಲಿಯೂಕೂಡ ಗಿಡಗಳ ಪಾತಿಗಳು ಒಣಗಿ ಹೆಪ್ಪುಕಟ್ಟಿದ್ದರೆ
ಮಣ್ಣನ್ನು ಕೈಗುದ್ದಲಿಗಳಿಂದ ಸ್ವಲ್ಪ ಕೆದರಿದರೆ ಬಹಳ ಪ್ರಯೋಜನ
ಉಂಟು.

ಮುಖ್ಯವಾಗಿ ಮಳೆಗಾಲ ಷುರುವಾಗುವದಕ್ಕೆ ಮುಂಚೆ ಅಥವಾ ಷು
ರುವಾದ ತರುಣದಲ್ಲಿಯೇ ಜಮೀನನ್ನು ಆಳವಾಗಿ ಉತ್ತು ಮೇಲಿನ ಮಣ್ಣ
ನ್ನು ಹುಡಿಯಾಗಿಟ್ಟಿದ್ದರೆ ಫಸಲುತ್ಪತ್ತಿಯು ಜಾಸ್ತಿಯಾಗುವದರಲ್ಲಿ ಸಂಶ
ಯವಿಲ್ಲ.

Samalkot Agricultural Station.

ಸಾಮಲಕೋಟೆ ವ್ಯವಸಾಯಕ ಸ್ಟೇಷನ್.

ಮದರಾಸು ಅಧಿಪತ್ಯಕ್ಕೆ ಸೇರಿದ ಸಾಮಲಕೋಟೆ ಅಗ್ರಿಕಲ್ಚರಲ್
ಸ್ಟೇಷನ್ನಿನ ವ್ಯವಸಾಯಕ ಶಾಲೆಯ ೧೯೦೪-೦೫ನೆ ಸಾಲ್ ರಿಪೋರ್ಟಿ

ಲ್ಲಡಗಿರುವ ಕೆಲವು ಮುಖ್ಯಾಂಶಗಳನ್ನು ನಮ್ಮ ವಾಚಕರ ತಿಳುವಳಿಕೆ ಗೈ ಇಲ್ಲಿ ನಮೂದಿಸಿರುತ್ತೆ.

೧. ಸಾಧಾರಣವಾಗಿ ಈ ಪ್ರಾಂತ್ಯದಲ್ಲಿ ಕಬ್ಬಿನ ಗದ್ದೆಗೆ ಹರಳು ಂಡಿ ಗೊಬ್ಬರವನ್ನು ಹಾಕುತ್ತಾರೆ. ಇದಕ್ಕೆ ಬದಲಾಗಿ ಬೇವಿನ ಹಿಂಡಿ ಯನ್ನು ಉಪಯೋಗಿಸಿದರೆ ಖರ್ಚು ಹರಳು ಹಿಂಡಿಗಿಂತಲೂ ಕಮ್ಮಿ ೀಳುವದು.

೨. ಬತ್ತದ ಸಸಿಗಳನ್ನು ನಾಟುವದರಲ್ಲಿ ಸಸಿಯಿಂದ ಸಸಿ ಎಷ್ಟು ದೂರ ಬಿಟ್ಟಿದ್ದರೆ ಒಳ್ಳೇದು ಎಂಬ ವಿಷಯದಲ್ಲಿ ಪರೀಕ್ಷೆಮಾಡಿ ೋಡಲಾಯಿತು. ಒಂದು ತಾಕಿನಲ್ಲಿ (೧) ಸಸಿಗಳನ್ನು ಒಂದೊಂದಾ ೪ ಅಂಗುಲ ಬಿಟ್ಟು, ಇನ್ನೊಂದರಲ್ಲಿ (೨) ಒಂಭತ್ತು ಅಂಗುಲ ಬಿ ಟ್ಟು ನಾಟಿತ್ತು. ಬೇರೆ ಎರಡು ತಾಕುಗಳಲ್ಲಿ ಎರಡೆರಡು ಸಸಿಗಳನ್ನು ೇರಿಸಿ ಒಂದರಲ್ಲಿ (೩) ನಾಲ್ಕು ಅಂಗುಲ ಬಿಟ್ಟು, ಮತ್ತೊಂದರಲ್ಲಿ (೪) ಂಭತ್ತು ಅಂಗುಲ ಬಿಟ್ಟು ನಾಟಿತ್ತು. ಈ ನಾಲ್ಕು ತಾಕುಗಳ ಪೈಕಿ ೊದಲಿನದರಲ್ಲಿ, ಅಂದರೆ ಸಸಿಗಳನ್ನು ಒಂದೊಂದಾಗಿ ೪ ಅಂಗುಲ ಬಿ ಟ್ಟು ನಾಟಿದ್ದರಲ್ಲಿ, ಫಸಲುತ್ಪತ್ತಿಯು ಶ್ರೇಷ್ಠವಾಗಿತ್ತು. ಎರಡನೇದರಲ್ಲಿ ತ್ಪತ್ತಿಯು ಇತರ ತಾಕುಗಳಿಗಿಂತಲೂ ಬಹಳ ಕಮ್ಮಿಯಾಗಿ, ಮೂರನೆ ಾಕಿನಲ್ಲಿ ನಾಲ್ಕನೇದರಕಿಂತ ಸ್ವಲ್ಪ ಹೆಚ್ಚಾಗಿತ್ತು. ಇದರಿಂದ ತಿಳಿಯಬ ವದೇನೆಂದರೆ, ಸಸಿಗಳನ್ನು ಒಂದೊಂದಾಗಿ ಶಾನೆ ದೂರ ದೂರವಾಗಿ ಾಟಿದರೆ ಜಮೀನಿನಲ್ಲಿನ ಸಾರವು ಪೂರ್ತಿಯಾಗಿ ಉಪಯೋಗಿಸಲ್ಪಡದೆ ವಲ್ಪ ಭಾಗವು ವ್ಯರ್ಥವಾಗುತ್ತದೆ. ಮತ್ತು ಸಸಿಗಳನ್ನು ಎರಡೆರ ಾಗಿ ಸೇರಿಸಿ ಹತ್ತಿರವಾಗಿ ನಾಟುವದರಿಂದ ಇವುಗಳಿಗೆ ಬೇಕಾದಷ್ಟು ಾರವು ಭೂಮಿಯಿಂದ ದೊರೆಯುವದಿಲ್ಲ.

೩. ಸಸಿಗಳನ್ನು ಒಂದೊಂದಾಗಿ ನಾಟಿದರೆ ಒಂದು ಎಕರೆಗೆ ಎ ಷ್ಟು ಸಸಿಗಳು ಬೇಕು ಮತ್ತು ಇವನ್ನು ಬೆಳೆಸುವದಕ್ಕೆ ಬೀಜ ಎಷ್ಟು ಡಿಯುತ್ತದೆ ಎಂಬ ತಪಶೀಲುಗಳು ಈ ಕೆಳಗಿನ ತಃಖ್ತೆಯಿಂದ ಗೊತ್ತಾ ಗುತ್ತದೆ.

ಸೊಸಿಯಿಂದ ಸೊಸಿಗೆ ಎಷ್ಟುದೂರ.	ಎಕರೆಗೆ ಎಷ್ಟು ಸೊಸಿಗಳು ಬೇಕು.	ಇದಕ್ಕೆ ಎಷ್ಟು ಬೀಜ ಹಿಡಿಯುತ್ತದೆ. (ತೂಕದಲ್ಲಿ)
12"	43,560	$2\frac{1}{2}$ ಪೌಂಡು.
9"	77,440	$4\frac{1}{2}$,,
6"	174,240	10 ,,
3"	696,960	40 ,,

ಷರಾ.—ಮೇಲ್ಕಂಡಂತೆ ಲೆಖ್ಖಾಚಾರಮಾಡುವದರಲ್ಲಿ ಪ್ರತಿ ಬೀಜವೂ ಮೊಳೆಯುವದೆಂತಲೂ, ಒಂದು ಪೌಂಡು ತೂಕದ ಬೀಜದಲ್ಲಿ ೧೫,೦೦೦ ಕಾಳುಗಳಿರುತ್ತವೆಂತಲೂ ಇಟ್ಟುಕೊಂಡಿರುತ್ತೆ.

೪. ಬತ್ತದ ಸಾಗುವಳಿಯಲ್ಲಿ ಸೊಸಿಗಳನ್ನು ನಾಟುವಾಗ ಇವುಗಳ ವಯಸ್ಸು ತಾರತಮ್ಯದಿಂದ ಮುಂದೆ ಫಸಲುತ್ಪತ್ತಿಯಲ್ಲಿ ವ್ಯತ್ಯಾಸಗಳೇನಾದರೂ ಉಂಟಾಗುವದೇ ಎಂಬುವ ವಿಷಯವನ್ನು ತಿಳಿಯುವ ಉದ್ದೇಶದಿಂದ ಬಾಂಕು ಬತ್ತದ ಸೊಸಿಗಳನ್ನು ಒಂದು ತುಂಡಿನಲ್ಲಿ ೩೦ ದಿನದ ಸೊಸಿಗಳೂ ಮತ್ತೊಂದರಲ್ಲಿ ೫೬ ದಿನದ ಸೊಸಿಗಳೂ ಈರೀತಿ ನಾಟಿ ನೋಡಲಾಗಿ ಎರಡು ತಾಕುಗಳ ಉತ್ಪತ್ತಿಯಲ್ಲಿ ವಿಶೇಷ ವ್ಯತ್ಯಾಸಗಳೇನೂ ಕಂಡುಬರಲಿಲ್ಲ. ಮತ್ತು ಪೈರುಗಳು ಏಕಕಾಲದಲ್ಲಿ ಕಟಾವಿಗೆ ಬಂದವು. ಇದರಿಂದ ಸೊಸಿಗಳ ವಯಸ್ಸಿನಲ್ಲಿ ವ್ಯತ್ಯಾಸವಿದ್ದರೂ ಕೂಡ ಅವುಗಳನ್ನು ಏಕಕಾಲದಲ್ಲಿ ನಾಟಿದರೆ ಫಸಲನ್ನು ಒಂದೇ ಸಮಯದಲ್ಲಿ ಕಟಾವುಮಾಡಬಹುದಲ್ಲದೆ ಉತ್ಪತ್ತಿಯಲ್ಲೂ ವಿಶೇಷ ತಾರತಮ್ಯಗಳು ಬರುವದಿಲ್ಲವೆಂದು ಹೇಳಬಹುದು.

Revenue Appeals.

ರೆವಿನ್ಯೂ ಅಪೀಲುಗಳು.

೧೯೦೮—೦೯ನೆ ಇಸವಿಯ ಅಪೀಲು ನಂಬರು ೧೬೨.

ಅಪೀಲು ವಾದಿ.		ಅಪೀಲು ಪ್ರತಿವಾದಿಗಳು.
ರಾಮಪ್ಪನ ಮಗ ರಾಯಪ್ಪ.	*vs.*	೧. ಹೊಸಕೆರೆ ಸುಬ್ಬಾಶಾಸ್ತ್ರಿ. ೨. ಕೊಡುವಲಿ ಸೀತಾರಾಮರಾವ್.

ಕಂದಾಯದ ಬಾಕಿಗಾಗಿ ಜಮೀನು ಹರಾಜು ವಿಚಾರ.

ಮೊಕದ್ದಮೆಯ ವಿದ್ಯಮಾನ.—೧೯೦೫ ೦೬ನೆ ಸಾಲ್ ಕಂದಾಯದ

ಬಾಕಿಗಾಗಿ (ರೂ. ೪೩—೧೫—೩) ಎಡೇಹಳ್ಳಿ ಸಬ್ ತಾ|| ಮೆಣಸೂರು ಗ್ರಾಮದಲ್ಲಿ ವಾದಿಯ ತಂದೆ ರಾಮಪ್ಪನ ಖಾತೆಯಲ್ಲಿದ್ದ ಕೆಲವು ಸರ್ವೆ ನಂಬರುಗಳು ಹರಾಜಾಗಿ ಸುಬ್ಬಾಶಾಸ್ತ್ರಿ ಮತ್ತು ಸೀತಾರಾಮರಾವು (ಪ್ರತಿವಾದಿಗಳು) ಮತ್ತು ರಾಯಪ್ಪ ಈ ಮೂವರ ಹೆಸರಿನಲ್ಲಿ ರೂ. ೫೦—೮—೦ಕ್ಕೆ ನಿಂತವು. ಸಬ್ ಡಿವಿಜನ್ ಆಫೀಸರವರು ಇತರ ನಂಬರುಗಳ ಹರಾಜನ್ನು ಕಾಯಂಮಾಡಿ ರಾಯಪ್ಪನ ಹೆಸರಿನಲ್ಲಿ ನಿಂತ ನಂಬರಿನಲ್ಲಿ ಒಂದು ಇಳಿಯುವ ಭಾವಿಯಿದ್ದ ಕಾರಣ ಇದನ್ನು ಎಡೇಹಳ್ಳಿ ನಿವಾಸಿಗಳ ಉಪಯೋಗಾರ್ಥವಾಗಿ ಸರ್ಕಾರಕ್ಕೆ ಉಳಿಸಿಕೊಳ್ಳಬೇಕೆಂದು ಹುಕುಂ ಮಾಡಿದರು. ರಾಯಪ್ಪನು (ಅಪೀಲುವಾದಿ) ಡೆಪ್ಯುಟಿ ಕಮಿಷನರವರಿಗೆ ಅಪೀಲು ಮಾಡಿಕೊಂಡಿರಲು, ಅವರು ಸದರಿ ಅಪೀಲನ್ನು ತಿರಸ್ಕರಿಸಿದರು. ಎರಡನೇ ಅಪೀಲಿನಲ್ಲಿ ರೆವಿನ್ಯೂ ಕಮಿಷನರವರು ಹರಾಜು ವಿಷಯದಲ್ಲಿ ಖಾತೇದಾರನೇ ತಕರಾರು ಮಾಡದಿರುವಾಗ ಅವನ ಮಗ ಅಪೀಲುವಾದಿಯು ತಕರಾರು ತರಲು ಸಂಬಂಧವಿಲ್ಲವೆಂತಲೂ, ಚರ್ಚಾಸ್ಪದವಾದ ಜಮೀನುಗಳ ಭೋಗ್ಯದಾರನೇ ಅವನ್ನು ಕೊಂಡುಕೊಂಡಿರುವದರಿಂದ ವಾದಿಗೆ ದ್ರವ್ಯನಷ್ಟವೇನೂ ಆಗುವಂತಿಲ್ಲವೆಂದೂ ಅಭಿಪ್ರಾಯಪಟ್ಟು ಅಪೀಲನ್ನು ಡಿಸ್ಮಿಸ್ಸು ಮಾಡಿದರು. ಈ ಹುಕುಮಿನ ಮೇಲೆ ವಾದಿಯು ಗೌರ್ನ್ನಮೆಂಟಿನಲ್ಲಿ ಹಾಲಿ ಅಪೀಲು ತಂದು, ತನ್ನ ತಂದೆಯು ಖುದ್ದಾಗಿ ಈ ವಿಷಯದಲ್ಲಿ ನಡುವಳಿಕೆ ನಡೆಸಲು ತುಂಬಾ ಮುದುಕನಾಗಿದ್ದು, ತಾನೇ ಗೃಹಕೃತ್ಯವನ್ನೆಲ್ಲಾ ನೋಡಿಕೊಳ್ಳುತ್ತಿರುವದರಿಂದ ಸ್ವತ್ತನ್ನು ಉಳಿಸಿಕೊಳ್ಳುವದಕ್ಕೆ ಸ್ವತಃ ಪ್ರಯತ್ನ ಪಡುತ್ತಿದ್ದೇನೆಂತಲೂ, ರೆವಿನ್ಯೂ ಹರಾಜಿನಲ್ಲಿ ಕೊಂಡುಕೊಳ್ಳುವವನು ಸ್ವತ್ತುಗಳನ್ನು ಆಧಾರ ವಗೈರೆ ಸಕಲ ಉಪಾಧಿರಹಿತವಾಗಿ ಸ್ವಾಧೀನ ಪಡೆಯುತ್ತಾನಾದ್ದರಿಂದ ಪ್ರಸಕ್ತವಾದ ಜಮೀನುಗಳ ಭೋಗ್ಯದಾರರೇ ಅವುಗಳನ್ನು ಹರಾಜಿನಲ್ಲಿ ಕೊಂಡುಕೊಂಡಿರುವ ಮಾತ್ರಕ್ಕೆ ಭೋಗ್ಯದ ಮೊಬಲಿಗ್ಗೆ ತನ್ನ ಸ್ವಂತ ಜವಾಬ್ದಾರಿಯು ತಪ್ಪಲಾರದೆಂತಲೂ ಮತ್ತು ಜಮೀನುಗಳಿಗೆ ಬೇಕೆಂತಲೇ ಬಹಳ ಕಮ್ಮಿಬೆಲೆ ಕಟ್ಟಿರುತ್ತಾರೆಂತಲೂ ಬಯಾನ್ ಮಾಡಿಕೊಂಡಿದ್ದಲ್ಲದೆ, ಇದಕ್ಕೆ ರುಜುವಾತಾಗಿ ೧ನೆ ಪ್ರತಿವಾದಿಯು ಎರಡು ನಂಬರುಗಳನ್ನು ಪಡೆ

ಅವುಗಳನ್ನು ಕೂಡ್ಲೆ ೨೦೦ ರೂಪಾಯಿಗಳಿಗೆ ಮಾರಿರುತಾನೆಂಬುವದಕ್ಕೆ ರಿಜಸ್ಟರ ಕ್ರಯ ಪತ್ರದ ನಕಲನ್ನು ಹಾಜರು ಮಾಡಿದನು.

ಗೌರ್ನಮೆಂಟಿನವರ ತೀರ್ಮಾನ.—ಜಮೀನುಗಳ ಬೆಲೆಯನ್ನು ಶಾನೆ ಕಮ್ಮಿಯಾಗಿ ಅಂದಾಜು ಮಾಡಿರುವದಲ್ಲದೆ ಅವುಗಳನ್ನು ತುಂಬಾ ಅಲ್ಪಖರೀದಿಗೆ ಹರಾಜು ಮಾಡಿರುವದರಲ್ಲಿ ಸಂಶಯವಿಲ್ಲ.

ಸ್ವತ್ತಿನಲ್ಲಿ ಅಪೀಲುವಾದಿಗೆ ಬಾಧ್ಯತೆ ಇರುವದ್ದರಿಂದ ಇವನು ಲ್ಯಾಂಡು ರೆವಿನ್ಯು ಕೋಡು ೧೯೪ನೆ ಸೆಕ್ಷನ್ ಮೇರೆ ಹರಾಜು ಕ್ಯಾನ್ಸಲ್ ಬಗ್ಯೆ ಕೇಳಿಕೊಳ್ಳಬಹುದು.

ರೆವಿನ್ಯು ಕಮಿಷನರವರ ಹುಕುಮನ್ನು ತಿರಿಗಿಸಿ ಚರ್ಚಾಸ್ಪದವಾದ ಹರಾಜುಗಳನ್ನು ರದ್ದು ಪಡಿಸಿರುತ್ತೆ.

"Eri" or "Castor" Silk. *

"ಈರಿ" ಎಂಬ ಒಂದು ಬಗೆಯ ರೇಷ್ಮೆ.

„ಈರಿ" ರೇಷ್ಮೆಯನ್ನು ಸಧ್ಯದಲ್ಲಿ ಈಸ್ಟರ್ನ್ ಬೆಂಗಾಲ್ ಮತ್ತು ಅಸ್ಸಾಂ ಶೀಮೆಯಲ್ಲಿ ಮಾತ್ರ ವಿಶೇಷವಾಗಿ ವ್ಯವಸಾಯಮಾಡುತ್ತಿದ್ದಾರೆ. ಈಗ ಎರಡು ವರುಷಗಳಿಂದೀಚೆಗೆ ಪ್ಯೂಸಾ ವ್ಯವಸಾಯಕ ಫಾರಂನಲ್ಲಿ ಇದರ ವ್ಯವಸಾಯವು ಅಜಮಾಯಿಷಿಯಲ್ಲಿರುತ್ತದೆ ಮತ್ತು ಇಂಡಿಯಾದೇಶದ ಇತರ ಕಡೆಗಳಲ್ಲಿಯೂ ಈಗೀಗ ಪ್ರಚುರಕ್ಕೆ ಬರುತ್ತಿದೆ. ಈ ರೇಷ್ಮೆಗೂ ಮತ್ತು ಹಾಲಿ ಇಂಡಿಯಾದಲ್ಲಿ ವಾಡಿಕೆಯಾಗಿ ತಯಾರಾಗುವ ರೇಷ್ಮೆಗಳಿಗೂ ಬಹಳ ಭೇದವುಂಟು. „ಈರಿ" ರೇಷ್ಮೆಹುಳು ಬರಿ ಹರಳು ಎಲೆಗಳನ್ನು ಮಾತ್ರ ತಿನ್ನುತ್ತದೆ. ಹಿಪ್ಪನೇರಳೆ ಸೊಪ್ಪನ್ನು ತಿನ್ನತಕ್ಕದ್ದಲ್ಲ. ಇದರ ಗೂಡುಗಳು (Cocoons) ಹಿಪ್ಪನೇರಳೆ ಸೊಪ್ಪು ತಿಂದು ಜೀವಿಸುವ ಹುಳುಗಳ ಗೂಡುಗಳಂತೆ ಪೂರ್ತಿಯಾಗಿ ಮುಚ್ಚಿರುವದೂ ಇಲ್ಲ ಮತ್ತು ಇವುಗಳಿಂದ ಸಾಧಾರಣವಾಗಿ ಇತರ ರೇಷ್ಮೆಗಳಂತೆ ದಾರ ನೂಲುವದಕ್ಕೂ ಆಗುವದಿಲ್ಲ. ಗೂಡು ಕಟ್ಟುವದರಲ್ಲಿ ಹುಳುವು ಒಂದು

* ಅಗ್ರಿಕಲ್ಚರಲ್ ಜರ್ನಲ್ ಆಫ್ ಇಂಡಿಯಾ.—ಏಪ್ರೆಲ್ ೧೯೦೯.

ಸಂದು ಬಿಟ್ಟು ಕಟ್ಟುತ್ತದೆ. ಈ ಸಂದಿನಿಂದ ಹುಳುವು ಹೊರಕ್ಕೆ ಬರುವದಕ್ಕಾಗುವದೇ ಹೊರತು ಹೊರಗಿನಿಂದ ಒಳಕ್ಕೆ ಏನೂ ಪ್ರವೇಶವಾಗುವದಕ್ಕಾಗುವದಿಲ್ಲ. ಗೂಡುಗಳು ಪದರ ಪದರವಾಗಿರುವದಲ್ಲದೆ (ಅಂದರೆ, ಒಂದು ಪದರದಮೇಲೆ ಮತ್ತೊಂದು ಪದರವಿರುವದು), ದಾರವು ಒಂದೇ ಎಳೆಯಾಗಿರುವದಿಲ್ಲ ಮತ್ತು ಇದನ್ನು ಸಾಮಾನ್ಯ ಕ್ರಮದಲ್ಲಿ ನೂಲುವದಕ್ಕಾಗುವದಿಲ್ಲ. ಆದರೆ ಈ ರೇಷ್ಮೆಯಲ್ಲಿ ಒಂದು ವಿಶೇಷ ಅನುಕೂಲ ಉಂಟು. ಇತರ ರೇಷ್ಮೆ ಗೂಡುಗಳಿಂದ ಚಿಟ್ಟೆಯು ಹೊರಗೆ ಬಂದರೆ ಎಳೆಯು ಕಿತ್ತುಹೋಗುತ್ತೆಂಬ ಭಯದಿಂದ ಚಿಟ್ಟೆಯನ್ನು ಗೂಡಿನಲ್ಲೇ ಕೊಲ್ಲುವದುಂಟಷ್ಟೆ. ಈ ರೇಷ್ಮೆಯಲ್ಲಿ ಚಿಟ್ಟೆಯನ್ನು ಕೊಲ್ಲಬೇಕಾದ ಪ್ರಕೃತವೇನೂ ಇರುವದಿಲ್ಲ. ರೇಷ್ಮೆಯನ್ನು ನೂಲುವದಕ್ಕೆ ಮುಂಚೆ ಚಿಟ್ಟೆಯನ್ನು ಹೊರಗೆ ಅಟ್ಟಬಿಡಬಹುದು.

ಈ ಹುಳುವು ಸಾಲಿಯೊನ ೭-೮ ಸಲ ಮೊಟ್ಟೆ ಇಟ್ಟು ಮರಿಮಾಡುವದು. ಒಂದು ಚಿಟ್ಟೆಯು ಸಲಕ್ಕೆ ೨೦೦-೩೦೦ ಮೊಟ್ಟೆಗಳನ್ನಿಡುತ್ತದೆ. ಇದು ತನಿಗಾಗಿ ಏರ್ಪಡಿಸಿರುವ ಸಾಕುವ ಮನೆಯನ್ನು ಬಿಟ್ಟು ಹೊರಗೆ ಹೋಗುವದಿಲ್ಲ. ಹುಳುವು ಮೊಟ್ಟೆ ರೂಪದಿಂದ ಹುಳುವಾಗಿ ಅನಂತರ ಗೂಡು ಕಟ್ಟಿ, ತದನಂತರ ಚಿಟ್ಟೆಯ ರೂಪವನ್ನು ತಾಳಬೇಕಾದರೆ ಬೇಸಿಗೆಯಲ್ಲಿ ೪೫ ದಿನಗಳು ಹಿಡಿಯುತ್ತದೆ. ಛಳಿಗಾಲದಲ್ಲಿ ಹುಳು ಇಷ್ಟು ರೂಪಾಂತರಗಳನ್ನು ತಾಳಬೇಕಾದರೆ ೮೦ ದಿನಗಳು ಬೇಕು. ಇದಕ್ಕೆ ಇತರ ಹುಳುಗಳಿಗೆ ಬರುವ ಸಾಮಾನ್ಯರೋಗಗಳು ಬರುವದಿಲ್ಲ. ಇದನ್ನು ಒಂದು ತರದ ನೊಣ ಮಾತ್ರ ತಿನ್ನುತ್ತದೆ.

ಚಿಟ್ಟೆಗಳು ಹೊರಗೆ ಹೊರಟಮೇಲೆ ಗೂಡುಗಳನ್ನೆಲ್ಲಾ ಪ್ರತ್ಯೇಕಿಸಿಕೊಳ್ಳಬೇಕು. ಇವು ಕಲ್ಕತ್ತಾದಲ್ಲಿ ಮಣಕ್ಕೆ ೭೦ ರೂಪಾಯಿ ಮೇರೆ ಮಾರಾಟವಾಗುತ್ತವೆ. ಗೂಡುಗಳನ್ನು ಹರಳು ಬೂದಿ ಅಥವಾ ಸೋಡಾಉಪ್ಪು (Soda) ಬೆರತ ನೀರಿನಲ್ಲಿ ಬೇಯಿಸಿದರೆ ಇವುಗಳಿಗಂಟಿರುವ ಗೋಂದು ಪದಾರ್ಥವು ನೀರಿನಲ್ಲಿ ಕರಗಿ ಗೂಡುಗಳು ಮೆತುವಾಗುತ್ತವೆ. ಅನಂತರ ಇವು ಚೆನ್ನಾಗಿ ತೊಳೆದಮೇಲೆ ರಾಟೆಯಾಡುವದಕ್ಕೆ ಲಾಯಖಾಗುತ್ತವೆ. ಅರಳೆಯು ಹಾಗೆಯೇ ಸಾಧಾರಣವಾದ ರಾಟೆಗಳ ಉಪ

ಯೋಗದಿಂದ ಎಳೆ ತೆಗೆದರೂ ತೆಗೆಯಬಹುದು ಅಥವಾ ಕದರುಗಳ ಉಪಯೋಗದಿಂದಲೂ ನೂಲು ಎಳೆಯಬಹುದು. ಬೇಯಿಸಿದ ಗೂಡುಗಳನ್ನು ಚೆನ್ನಾಗಿ ಒಣಗಿಸಿ ತರುವಾಯ ಹತ್ತಿಯಿಂದ ಸಾಮಾನ್ಯವಾಗಿ ಕೈಯಿಂದಲೆ ಸ್ವಲ್ಪ ದಾರವನ್ನು ಹೊಸೆದುಕೊಂಡು ಎಳೆ ತೆಗೆಯುವಂತೆ ಎಳೆ ತೆಗೆಯುವದು ಮತ್ತೊಂದು ವಿಧಾನ. ಆದರೆ ಕೈಯಿಂದ ತೆಗೆದ ದಾರವು ಅಷ್ಟು ನಯವಾಗಿಯೂ ಮತ್ತು ಸಣ್ಣಗೂ ಇರುವದಿಲ್ಲ.

ಈ ರೇಷ್ಮೆನೂಲಿನಿಂದ ಬಟ್ಟೆಗಳನ್ನು ತಯಾರುಮಾಡುವದಕ್ಕೆ ಬೇರೆ ಯಂತ್ರಸಾಮಗ್ರಿಗಳೇನೂ ಬೇಕಿಲ್ಲ. ಸಾಮಾನ್ಯ ಮಗ್ಗಗಳೇ ಸಾಕು.

ಸಧ್ಯದಲ್ಲಿ ಅಸ್ಸಾಂನಲ್ಲಿ ಷಾತೂತ್ ವ್ಯವಸಾಯಗಾರರ ಉಡಿಗೆ ತೊಡಿಗೆಗಳಿಗೂ ಮತ್ತು „ಅಸ್ಸಾಂ" ರೇಷ್ಮೆ ಬಟ್ಟೆಗೆ ಇರುವ ಅಲ್ಪ ಸ್ವಲ್ಪ ಗಿರಾಕಿಗೆ ತಕ್ಕಷ್ಟು ಒದಗಿಸುವದಕ್ಕೂ ಈ ರೇಷ್ಮೆಯನ್ನು ಬೆಳೆಯುತ್ತಾರೆ. ಈ ಕಸಬನ್ನು ಇಂಡಿಯಾದಲ್ಲಿ ಹರಳು ಗಿಡಗಳು ಬೆಳೆಯುವ ಕಡೆಗಳಲ್ಲೆಲ್ಲಾ ಪ್ರಚಾರಕ್ಕೆ ತರುವದಕ್ಕೆ ಎಷ್ಟೋ ಅವಕಾಶವಿರುತ್ತದೆ. ಹುಳುಗಳನ್ನು ಸಾಕುವದು ಸುಲಭ. ದಾರವನ್ನು ತೆಗದು ಬಟ್ಟೆ ನೇಯುವದು ಕೂಡ ರಾಟೆ ಮತ್ತು ನೇಗೆ ಕೆಲಸ ತಿಳಿದವರಿಗೆ ಏನೇನೂ ಪ್ರಯಾಸವಾದ್ದಲ್ಲ.

ಈ ರೇಷ್ಮೆಯಿಂದಾಗುವ ಬಟ್ಟೆಯು ಯಂತ್ರಗಳಲ್ಲಿ ತಯಾರಾದ ಹತ್ತಿ ಬಟ್ಟೆಗಳಷ್ಟು ಹಸನಾಗಿರದಿದ್ದರೂ ಬಹಳ ಗಟ್ಟಿಯಾಗಿರುತ್ತದೆ ಮತ್ತು ಹಾನೆ ದಿನ ಬಾಳಿಕೆ ಬರುವದು. ಈ ರೇಷ್ಮೆಯು ಒಳ್ಳೆ ಗಟ್ಟಿ ಬಣ್ಣವನ್ನು ಹಿಡಿಯುತ್ತದೆ. ಪ್ಯೂಸಾ ಫಾರಂನಲ್ಲಿ ಈಗ ೨ ವರುಷಗಳಿಂದಲೂ ನಡೆಸಿದ ಅಜಮಾಯಿಷಿಗಳಲ್ಲಿ ಈ ರೇಷ್ಮೆಹುಳವನ್ನು ಹರಳುಗಿಡಗಳು ಬೆಳೆಯುವ ಕಡೆಗಳಲ್ಲೆಲ್ಲಾ ಸಾಕಿ ರೇಷ್ಮೆಯನ್ನು ತೆಗೆದು ಬಟ್ಟೆ ಬರೆಗಳನ್ನು ಧಾರಾಳವಾಗಿ ನೇಯಬಹುದೆಂದು ಗೊತ್ತಾಗುತ್ತದೆ. ಈ ಬಟ್ಟೆಯೇನೋ ನಯವಾಗಿರುವದಿಲ್ಲ. ಅರಳೆ ಬಟ್ಟೆ ಯಂತಿರುತ್ತದೆ. ಮತ್ತು ಇದನ್ನು ನೇಯುವದಕ್ಕೆ ವಾಡಿಕೆಯಲ್ಲಿರುವ ಸಾಮಾನ್ಯ ಉಪಕರಣಗಳೇಸಾಕು.

ಬಿಹಾರದೇಶದಲ್ಲಿ ಹುಳುಗಳನ್ನು ಸಾಕಿ ಗೂಡುಗಳಿಂದ ನೂಲು ತೆಗದು ಬಟ್ಟೆಗಳನ್ನು ನೇಯುವವರಿಗೂ ತಗಲುವ ಖರ್ಚು ತಯಾರಾದ ಬಟ್ಟೆಗೆ ದೊರೆಯುವ ಪೇಟೆ ಧಾರಣೆಗಿಂತ ಶಾನೆ ಕಮ್ಮಿ ಬೀಳುತ್ತದಂತೆ. ಮನೆಗಳಲ್ಲೇ ಹೆಂಗಸರು ಮಕ್ಕಳು ಸ್ವಂತವಾಗಿ ಹುಳುಗಳನ್ನು ಸಾಕಿ ರಾಟೆ ಕೆಲಸವನ್ನು ಮಾಡುವದಾದರೆ ಇನ್ನೂ ಜಾಸ್ತಿ ಲಾಭ ದೊರೆಯುವದರಲ್ಲಿ ಸಂಶಯವಿಲ್ಲ.

ಪ್ರಕೃತದಲ್ಲಿ ಬೀಜದ ಗೂಡುಗಳು ಅಸ್ಸಾಂನಲ್ಲಿಯೂ ಮತ್ತು ಪ್ಯೂಸಾ ಪಟ್ಟಣದಲ್ಲಿಯೂ ದೊರೆಯುತ್ತವೆ. ಅಸ್ಸಾಮಿನಿಂದ ತರಿಸುವ ಜೀವವಿರುವ ಗೂಡುಗಳಲ್ಲಿ ಹುಳವನ್ನು ತಿನ್ನುವ ನೊಣಗಳು ಸಾಧಾರಣವಾಗಿ ಇರುತ್ತವೆಯಾದ್ದರಿಂದ ಪ್ಯೂಸಾವಿನಿಂದ ಒಳ್ಳೇ ಬೀಜಗಳನ್ನು ತರಿಸಿಕೊಳ್ಳುವದು ಉತ್ತಮ. ಮತ್ತು ಹೊಸದಾಗಿ ಈ ಕಸಬನ್ನು ಸ್ಥಾಪಿಸಬೇಕೆಂಬ ಕಡೆಗಳಲ್ಲಿ ಕೆಲಸ ಷುರುಮಾಡುವದಕ್ಕೆ ಪ್ಯೂಸಾದಲ್ಲಿ ತರಬೇತಾದವರು ಸಿಕ್ಕುತ್ತಾರೆ. ಈ ಕಸಬನ್ನು ಕಲಿಯಬೇಕೆಂದಿರುವವರು ಅಲ್ಲಿಗೆ ಹೋಗಿ ಸ್ವಲ್ಪ ಕಾಲದಲ್ಲೇ ತರಬೇತಾಗಬಹುದು.

Manures.*

ಗೊಬ್ಬರಗಳು.

ಸಾಗುವಳಿಯಲ್ಲಿರುವ ಎಲ್ಲಾ ಜಮೀನುಗಳಲ್ಲಿಯೂ ಪೈರುಗಳಿಗೆ ಆಹಾರವಾಗಿ ಪರಿಣಮಿಸುವ ಕೆಲವು ಅಂಶಗಳುಂಟು. ಈ ಪೈಕಿ ಸ್ವಲ್ಪ ಭಾಗ ಮಾತ್ರ ಸಸ್ಯಗಳು ಉಪಯೋಗಿಸಿಕೊಳ್ಳುವ ಸ್ಥಿತಿಯಲ್ಲಿರುತ್ತದೆ. ಉಳಿದ ಭಾಗವು ವರುಷಗಟ್ಲೆ ಹಾಗೆಯೇ ಅಡಗಿದ್ದು ಕಾಲಕ್ರಮೇಣ ಸಸ್ಯಗಳಿಂದ ಉಪಯೋಗಿಸಲ್ಪಡುತ್ತಲಿರುವದು. ಹೊಸದಾಗಿ ಸಾಗಿನಲ್ಲಿ ಬಂದಿರುವ ಮತ್ತು ವಿಶೇಷ ಸಾರವತ್ತಾದ ಜಮೀನುಗಳಲ್ಲಿ ಪೈರುಗಳು ಉಪಯೋಗಿಸಿಕೊಳ್ಳುವ ಕಾರಣದಿಂದ ಕಮ್ಮಿ ಯಾಗುತ್ತಾ ಬರುವ ಸಸ್ಯಾಹಾರ ಪದಾರ್ಥಗಳನ್ನು ಜಮೀನಿಗೆ ಗೊಬ್ಬರಹಾಕುವ ಮೂಲಕ ತಿರುಗಿ ಭರ್ತಿಮಾಡುತ್ತಿದ್ದರೆ ಸದರಿಜಮೀನುಗಳು ಒಳ್ಳೆ ಫಸಲನ್ನೇ ಕೊಡು

---

* ಮದರಾಸು ಅಗ್ರಿಕಲ್ಚರಲ್ ಕ್ಯಾಲಂಡರ್, ೧೯೧೦.

ತ್ತಿರುತ್ತವೆಂಬುವದು ಸಾಧಾರಣವಾಗಿ ರೈತರ ಅನುಭವದಲ್ಲಿರುವ ಸಂಗತಿಯಾಗಿದೆ. ಗೊಬ್ಬರವನ್ನು ಹಾಕದೇನೇ ಇದ್ದ ಪಕ್ಷದಲ್ಲಿ ಫಸಲುತ್ಪತ್ತಿಯು ಕ್ರಮೇಣ ಕಮ್ಮಿಯಾಗುತ್ತಾ ಬಂದು ಕಡೆಗೆ ಒಂದು ಪರಿಮಿತಿಗೆ ನಿಲ್ಲುವದು. ಇದಕ್ಕಿಂತ ಹೆಚ್ಚುವದೂ ಇಲ್ಲ ತಗ್ಗುವದೂ ಇಲ್ಲ. ಜಮೀನು ಈ ಸ್ಥಿತಿಯಲ್ಲಿರುವಾಗ ಪೈರುಗಳು ಭೂಮಿಯಲ್ಲಿ ಅಡಗಿರಬಹುದಾದ ಅಲ್ಪಸ್ವಲ್ಪ ಸಸ್ಯಾಹಾರ ಪದಾರ್ಥಗಳನ್ನೇ ಉಪಯೋಗಿಸಿ ಕೊಂಡು ಜೀವಿಸುತ್ತವೆ. ಪ್ರಕೃತದಲ್ಲಿ ಪ್ರಾಯಶಃ ಇಂಡಿಯಾದೇಶದ ಜಮೀನುಗಳು ಬಹಳ ಮಟ್ಟಿಗೆ ಮೇಲ್ಕಂಡತೆಯೇ ಇದ್ದು ಕನಿಷ್ಠ ಬೆಳೆಯನ್ನೇ ಕೊಡುತ್ತಲಿವೆ. ಪ್ರಜಾಸಂಖ್ಯೆಯು ದಿನೇ ದಿನೇ ಹೆಚ್ಚುತ್ತಲಿರುವ ಈ ಕಾಲದಲ್ಲಿ ಹಾಲಿ ಇಂಡಿಯಾದೇಶದಿಂದ ವಿಶೇಷವಾಗಿ ರಫ್ತಾಗುತ್ತಿರುವ ಉತ್ಕೃಷ್ಟವಾದ ಗೊಬ್ಬರಗಳನ್ನು ಇಲ್ಲಿಯೇ ಉಪಯೋಗಿಸಿ ಜಮೀನಿನಲ್ಲಿ ಫಸಲುತ್ಪತ್ತಿಯನ್ನು ಹೆಚ್ಚಿಸುವದು ರೈತನ ಕರ್ತವ್ಯವಾಗಿರುತ್ತದಲ್ಲವೆ ?

ಪೈರುಗಳಿಂದ ಉಪಯೋಗಿಸಲ್ಪಟ್ಟ ಆಹಾರ ಪದಾರ್ಥಗಳು ಬೇರೆ ಬೇರೆ ರೂಪದಲ್ಲಿ ಪುನಃ ಒದಗುತ್ತವೆಯಲ್ಲದೆ ಇವುಗಳಲ್ಲಿ ಅನೇಕವು ಗೊಬ್ಬರವಾಗಿ ಉಪಯೋಗಕ್ಕೆ ಲಾಯಖಾಗಿರುತ್ತವೆ. ಹೇಗಂದರೆ, ಕೆಲವು ಪ್ರಾಣಿಗಳ ಮಲರೂಪವಾಗಿಯೂ ಮತ್ತೆ ಕೆಲವು ಗಿಡಗಳ ಬಿತ್ತಗಳಲ್ಲಿ ಸೇರಿ ಹೋಗಿಯೂ ಇರುತ್ತವೆ. ಇದೂ ಅಲ್ಲದೆ ಸ್ವಲ್ಪಭಾಗವು ಜಮೀನುಗಳಿಂದ ಮಳೆ ಮತ್ತು ಕೆರೆ ನದಿ ಕಾಲುವೆಗಳ ನೀರಿನಲ್ಲಿ ಕೊಚ್ಚಿ ಹೋಗಿ ಸಮುದ್ರವನ್ನು ಸೇರಿ ಮೀನುಗಳ ಮತ್ತು ಸಮುದ್ರ ಜಂತುಗಳ ಬೆಳವಳಿಕೆಗೆ ಅವಶ್ಯಕವಾದ ಪದಾರ್ಥವಾಗಿ ಪರಿಣಮಿಸುತ್ತದೆ. ಇವುಗಳ ಮೂಲಕ ಉತ್ತಮವಾದ ಗೊಬ್ಬರವಾಗುವ ಪದಾರ್ಥಗಳು ಒದಗುತ್ತವೆ. ಹ್ಯಾಗಂದರೆ, ಪ್ರಾಣಿಗಳಿಂದ ಎಲಬು, ಎಣ್ಣೆ ಬೀಜಗಳಿಂದ ಹಿಂಡಿ, ಮೀನುಗಳಿಂದ ಮೀನು ಗೊಬ್ಬರ. ಎಲಬು ಗೊಬ್ಬರದ ಸ್ವಭಾವವೇನಂದರೆ, ಇದನ್ನು ಖುಷ್ಕಿ ಜಮೀನುಗಳಿಗೆ ಹಾಕಿದಲ್ಲಿ ಗೊಬ್ಬರದ ಸಾರವು ಪೈರುಗಳಿಗೆ ಹಿಡಿಯುವದಕ್ಕೆ ಸ್ವಲ್ಪ ಸಾವಕಾಶವಾಗುವದು ; ಆದರೆ ತರಿ ಜಮೀನುಗಳಲ್ಲಿ ಕೂಡ್ಲೆ ಒದಗುತ್ತದೆ. ಎಲಬಿನ ಜೊತೆಗೆ ಸ್ವಲ್ಪ ಪೋಟಾಷ್ (potash) ಗೊಬ್ಬರವನ್ನು ಬೆರೆಸಿ ಹಾಕಿದರಂತೂ ಇದು ಪೈರಿಗೆ ಬೇಕಾಗುವ ವಿಶ

ಷ್ಟ ಆಹಾರಾಂಶಗಳನ್ನೂ ಒದಗಿಸಬಲ್ಲದು. ತಥಾಪಿ ಬತ್ತದ ಬೆಳೆಗೆ ಈ ವಿಶೇಷ ಗೊಬ್ಬರವು ಬಹಳ ಒಳ್ಳೇದು. ಮದರಾಸು ಆಧಿಪತ್ಯದಲ್ಲಿ ತರಹೆವಾರ ಎಲಬು ಗೊಬ್ಬರವು ತಯಾರಾಗುತ್ತಲಿದೆ. ಇದಕ್ಕೆ ಗಿರಾಕಿಯು ದಿನೇ ದಿನೇ ಹೆಚ್ಚುತ್ತಿರುವದರಿಂದ ಇದರ ತಯಾರಿಯೂ ಕೂಡ ತದನುಗುಣವಾಗಿ ಜಾಸ್ತಿಯಾಗಬಹುದು.

ಮೀನು, ತಥಾಪಿ ಅದರೊಳಗಿನ ಎಣ್ಣೆಯನ್ನು ತೆಗದನಂತರ, ಎಲಬಿಗಿಂತಲೂ ಜಾಗ್ರತೆಯಾಗಿ ಪೈರುಗಳಿಗೆ ವ್ಯಾಪಿಸತಕ್ಕ ಗುಣಉಳ್ಳದ್ದು. ಮತ್ತು ಎಲಬಿನಂತೆ ಇದೂಕೂಡ ಪ್ರೋಟಾಷು ಉಪ್ಪುಗಳ ಸಂಗದಿಂದ ಪೈರುಗಳಿಗೆ ವಿಶಿಷ್ಟ ಆಹಾರಾಂಶಗಳನ್ನೂ ಒದಗಿಸಿ ಕೊಡಬಲ್ಲದು. ಇಂಡಿಯಾದೇಶದ ಮೀನು ಗೊಬ್ಬರವು ಜರ್ಮಾದೇಶಕ್ಕೇನೇ ವಿಶೇಷವಾಗಿ ಸಾಗಿಹೋಗುತ್ತಿದೆ.

ಎಣ್ಣೆ ಬೀಜಗಳ ಹಿಂಡಿಯು ಮದರಾಸ್ ಆಧಿಪತ್ಯದಲ್ಲಿ ವಿಶೇಷವಾಗಿ ಗೊಬ್ಬರಕ್ಕಾಗಿಯೇ ಉಪಯೋಗಿಸಲ್ಪಡುತ್ತದೆ. ಆದರೂ ಇದನ್ನು ದನ ಕರುಗಳ ಮೇವಾಗಿಯೂ ಮತ್ತು ಗೊಬ್ಬರವಾಗಿಯೂ ಈಗಿನಗಿಂತಲೂ ಇನ್ನು ಹೆಚ್ಚಾಗಿ ಉಪಯೋಗಿಸಬಹುದು. ಮತ್ತು ಸ್ಥಳದಲ್ಲಿಯೇ ಹಿಂಡಿಗಳಿಗೆ ವಿಶೇಷ ಗಿರಾಕಿಯು ಇರುವುದರಿಂದ, ದಕ್ಷಿಣಇಂಡಿಯಾದಲ್ಲಿ ಎಣ್ಣೆ ತೆಗೆದು ಅನ್ಯದೇಶಗಳೊಂದಿಗೆ ಅಗಾಧವಾದ ರಫ್ತುವ್ಯಾಪಾರ ನಡೆಸುವದಕ್ಕೆ ಮಾರ್ಗವಿರುತ್ತದೆ. ಎಲಬು ಮತ್ತು ಮೀನುಗಳಂತೆ ಹಿಂಡಿಯೂ ಕೂಡ ಪೈರುಗಳಿಗೆ ಉಪಯೋಗವಾಗ ಬೇಕಾದರೆ ಮೊದಲು ಜಮೀನಿನಲ್ಲಿ ಕೊಳೆಯಬೇಕು. ಹಿಂಡಿಗಳಲ್ಲಿ ಮತ್ತೊಂದು ವಿಶೇಷ ಗುಣವೇನೆಂದರೆ, ಇವು ಜಮೀನಿನಲ್ಲಿ ಹ್ಯೂಮಸ್ * (Humus)ಸಾರವನ್ನು ಒದಗಿಸುತ್ತವೆ.

ಜರ್ಮ ಆಸ್ಟ್ರೇಲಿಯಾ ಮೊದಲಾದ ದೂರ ದೇಶಗಳ ರೈತರುಗಳು ಇಲ್ಲಿಂದ ಎಲಬು ಮತ್ತು ಮೀನು ಗೊಬ್ಬರಗಳನ್ನು ಕೊಂಡು ಅಷ್ಟು ದೂರ ಫಾಸಲೆಗೆ ತೆಗೆದುಕೊಂಡು ಹೋದರೂ ಅಲ್ಲಿನವರಿಗೆ ವ್ಯಾಪಾರ

* ಈ ಸಾರದ ವಿಷಯವಾಗಿ ೩ನೆ ವಾಲ್ಯುಂ ೧೯೦೯ನೆ ಜುಲೈ ೧ನೆ ನಂಬರ್ ಸಂಚಿಕೆಯ ೨೬೧ನೆ ಪುಟದಲ್ಲಿ ಪ್ರಸ್ತಾಪಿಸಿರುತ್ತೆ.

ಗಿಟ್ಟುತ್ತಿರುವಾಗ ಈ ಗೊಬ್ಬರಗಳನ್ನು ನಮ್ಮ ದೇಶದ ಉಪಯೋಗಕ್ಕಾಗಿ ಇಲ್ಲಿಯೇ ಉಳಿಸಿಕೊಂಡ ಭಾಗದಲ್ಲಿ ನಮ್ಮ ರೈತರು ಅನ್ಯದೇಶೀಯರಿಗಿಂತಲೂ ಇನ್ನು ಜಾಸ್ತಿ ಫಾಯಿದೆಯನ್ನು ಹೊಂದಬಹುದಲ್ಲವೆ? ಆದರೆ ಈ ಅಂಶಗಳನ್ನು ವಿದ್ಯಾವಂತರಾದವರು ನಮ್ಮ ರೈತರ ತಿಳುವಳಿಕೆಗೆ ತಂದು ಅವರುಗಳು ಸ್ಥಳದಲ್ಲಾಗುವ ಗೊಬ್ಬರಗಳನ್ನು ಅಲ್ಲಿಯೇ ಹೇರಳವಾಗಿ ಉಪಯೋಗಿಸುವಂತೆ ಪ್ರೋತ್ಸಾಹ ಪಡಿಸಬೇಕು.

Correspondence.—Cotton.
ಕರೆಸ್‌ಪಾಂಡೆನ್ಸ್.-ಹತ್ತಿ.

ಮೈಸೂರು ನಾರ್ಮಲ್ ಸ್ಕೂಲ್ ವ್ಯವಸಾಯ ಪಾಠಕರಾದ ಮೆ|| ಕೆ. ನರಸಿಂಹಯ್ಯಂಗಾರ್ರವರು ಬರೆಯುವಪೇನೆಂದರೆ:—

ಹಿಂದೂಸ್ಥಾನದಲ್ಲಿ ಬೆಳೆಯುವ ಹತ್ತಿಗಳಲ್ಲಿ ಉತ್ತಮವಾದವುಗಳು ಮುಖ್ಯವಾದ ಮೂರು ೧. ಬ್ರೋಚ್‌ಹತ್ತಿ. ೨. ಬೂರಿಹತ್ತಿ. ೩. ಈಜಿಪ್ಟ ಹತ್ತಿ. ಮೊದಲನೆಯ ತರಹೆ ಹತ್ತಿಯನ್ನು ಬ್ರೋಚ್ ಮತ್ತು ಸೂರತ್ ಈ ಕಡೆಗಳಲ್ಲಿ ಮುಖ್ಯವಾಗಿ ಬೆಳೆಯುತ್ತಾರೆ. ಆ ಪ್ರಾಂತ್ಯದಲ್ಲಿ ಅತ್ಯುತ್ತಮವಾದ ಕಪ್ಪುಮಣ್ಣು ಇರುವುದಲ್ಲದೆ ಬೆಳೆಗೆ ಅನುಕೂಲವಾಗಿ ೪೦ ಅಂಗುಲಗಳಿಗೆ ಕಡಮೆ ಇಲ್ಲದಂತೆ ಮಳೆ ಬೀಳುತ್ತದೆ. ಎರಡನೆಯ ತರಹೆ ಬೂರಿ ಹತ್ತಿಯನ್ನು ಬಂಗಾಳದಲ್ಲಿ ಬೆಳೆಯುತ್ತಾರೆ. ಅಲ್ಲಿ ಈ ಪೈರಿಗೆ ಅನುಕೂಲವಾದ ಒಳ್ಳೆಯ ಗೋಡುಮಣ್ಣು ಇರುವುದಲ್ಲದೆ ಸುಮಾರು ೭೦ ಅಂಗುಲಗಳ ಮಳೆ ಕೆಲವು ವೇಳೆ ಇನ್ನೂ ಹೆಚ್ಚು ಬೀಳುತ್ತದೆ. ಮೂರನೆಯದಾದ ಈಜಿಪ್ಟ ಹತ್ತಿಯನ್ನು ಸಿಂಧೂ ದೇಶದಲ್ಲಿ ಬೆಳೆಯುತ್ತಾರೆ. ಅಲ್ಲಿ ಪೈರಿಗೆ ಅನುಕೂಲವಾದ ಮರಳು ಹೆಚ್ಚಾಗಿ ಮಿಶ್ರವಾದ ಮಣ್ಣು ಮತ್ತು ನೀರು ಹಾಯಿಸುವುದಕ್ಕೆ ಅನುಕೂಲವಾದ ನಾಲೆಗಳೂ ಇವೆ. ಮೇಲೆ ತಿಳಿಸಿದ ಮೂರು ವಿಧವಾದ ಅನುಕೂಲಗಳೂ ಇಲ್ಲದ ಪಕ್ಷದಲ್ಲಿ ಉತ್ತಮವಾದ ಹತ್ತಿಗಳನ್ನು ಬೆಳೆಯುವುದಕ್ಕೆ ಆಗುವದಿಲ್ಲವೆಂದು ತಿಳಿದವರು ಅಭಿಪ್ರಾಯ ಪಟ್ಟಿರುವರು.

ಮೈಸೂರಿನಲ್ಲಿರುವ ನಾರ್ಮಲ್ ಸ್ಕೂಲಿಗೆ ಸೇರಿದ ವ್ಯವಸಾಯದ

ಹೊಲದಲ್ಲಿ ಧಾರ್ವಾಡದಲ್ಲಿ ಬೆಳೆಯಿಸಲ್ಪಡುವ ಅಮೇರಿಕ ದೇಶದ ಹತ್ತಿಯನ್ನು ಬೆಳೆಯುವ ವಾಡಿಕೆ ಇದೆ. ಇದು ಗೋಡು ಮಣ್ಣುಗಳಲ್ಲಿಯೂ ಮತ್ತು ಗ್ರಾವಲ್ ಮಣ್ಣುಗಳಲ್ಲಿಯೂ ಚೆನ್ನಾಗಿ ಬೆಳೆಯುತ್ತದೆ ಎಂದು ಅನುಭವದಿಂದ ತಿಳಿದು ಬಂದಿದೆ. ಇದು ಮೇಲಿನ ಮೂರು ತರಹೆ ಹತ್ತಿಗಳಷ್ಟು ಚೆನ್ನಾಗಿಲ್ಲದಿದ್ದರೂ ತಕ್ಕಮಟ್ಟಿಗೆ ಉತ್ತಮವಾಗಿದೆ. ಇದಲ್ಲದೆ ಮೂವತ್ತು ಅಂಗುಲಗಳ ಒಳಗಾಗಿ ಮಳೆ ಬಿದ್ದರೂ ತಕ್ಕಮಟ್ಟಿಗೆ ಫಸಲನ್ನು ಕೊಡುತ್ತದೆ. ಎರಡನೆಯ ವರ್ಷ ಇದನ್ನು ಕೂಳೆ ಬೆಳೆಯಾಗಿ ಬೆಳೆಯಬಹುದು. ಆದುದರಿಂದ ಮೈಸೂರು ಡಿಸ್ಟ್ರಿಕ್ಟಿನ ಬೈಲು ಸೀಮೆಗಳಲ್ಲೆಲ್ಲಾ ಇದನ್ನು ಬೆಳೆಯಬಹುದೆಂದು ತಿಳಿದು ಬರುವುದು. ಕರೀಹತ್ತಿಯಹಾಗಲ್ಲದೆ ಇದನ್ನು ಮೇ, ಜೂನ್ ತಿಂಗಳುಗಳಲ್ಲಿ ಬಿತ್ತಬಹುದು. ಈ ಪೈರನ್ನು ಬೆಳೆಯಲಪೇಕ್ಷಿಸುವವರು ಮೇಲಿನ ವಿಳಾಸಕ್ಕೆ ಬರೆದರೆ ಬೀಜಗಳು ಕಳುಹಿಸಲ್ಪಡುತ್ತದೆ ಮತ್ತು ವ್ಯವಸಾಯ ಮಾಡುವ ಕ್ರಮವನ್ನು ಅವರಿಗೆ ತಿಳಿಸಲ್ಪಡುತ್ತದೆ.

Notifications

ಇಸ್ತಿಹಾರ್ ನಾಮೆಗಳು.

ನಂ. ೭೨೭೪ ತಾ|| ೨೧—೧—೧೯೧೧.

ಮಂಜರಾಬಾದ್ ತಾಲ್ಲೂಕು ಅಮಲ್ದಾರ್ ಮೆ|| ಸಿ. ನಾರಾಯಣರಾಯರಿಗೆ ೧೯೧೧ನೆ ಇಸವಿ ಜನವರಿ ೧೨ನೆ ತಾರೀಖು ೬೯೬ನೆ ನಂಬರಿನಲ್ಲಿ ಕೊಟ್ಟಿದ್ದ ೧೪ ದಿನಗಳ ಪ್ರಿವಿಲೇಜ್ ರಜಾದೊಂದಿಗೆ ಇನ್ನು ೧೨ ದಿನಗಳ ರಜಾ ಜಾಸ್ತಿಯಾಗಿ ಕೊಟ್ಟಿರುತ್ತೆ.

ಅವರ ಗೈರ್ ಹಾಜರಿಯಲ್ಲಿ ಹಿಂದಿನ ಹುಕುಮಿನ ಏರ್ಪಾಟೇ ಜಾರಿಯಲ್ಲಿರತಕ್ಕದ್ದು.

Occasional Notes.

ವಿವಿಧ ವೃತ್ತಾಂತಗಳು.

೧. ಬರ್ಮಾ ರಾಜ್ಯದಲ್ಲಿ ರಬ್ಬರಿನ ವ್ಯವಸಾಯವು ವರ್ಷ ವರ್ಷ ಏಕಪ್ರಕಾರವಾಗಿ ಹೆಚ್ಚುತ್ತಿದೆ. ೧೯೦೯ನೆ ಇಸವಿ ಜೂನ್ ಮಾಹೆಗೆ ಆಖೈರಾಗು

ವ ಸಾಲ್‌ನಲ್ಲಿ ೧೧,೮೪೮ ಎಕರೆಗಳು, ಅಂದರೆ ಹಿಂದಿನ ಸಾಲ್‌ಗಿಂತಲೂ ೨,೫೬೨ ಎಕರೆಗಳು ಜಾಸ್ತಿಯಾಗಿ, ರಬ್ಬರು ಸಾಗುವಳಿಯಲ್ಲಿದ್ದವಂತೆ.- ಇಂಡಿಯನ್ ಟ್ರೇಡ್ ಜರ್ನಲ್. ೨೬—೮—೦೯.

———o———

೨. ಬೆಂಗಳೂರು ತಾಲ್ಲೂಕಿನಲ್ಲಿ ಕೃಷ್ಣರಾಜಪುರದ ಹೋಬಳಿ ಹೂಡಿ ಗ್ರಾಮದಲ್ಲಿ ವ್ಯವಸಾಯಗಾರರಿಗೆ ಅನುಕೂಲವಾಗುವಂತೆ ಒಂದು ಕೋಆಪರೇಟಿವ್ ಸೊಸೈಟಿಯೂ ಮತ್ತು ಮಳವಳ್ಳಿ ತಾಲ್ಲೂಕಿನಲ್ಲಿ ನಿಡಗಟ್ಟದಲ್ಲಿ ರೈತರಿಗೆ ಅನುಕೂಲವಾಗುವಂತೆ ಒಂದು ಸೊಸೈಟಿಯೂ ಸ್ಥಾಪಿಸಲ್ಪಟ್ಟ ಇವೆರಡೂ ಜನವರಿ ಮಾಹೆಯಲ್ಲಿ ರಿಜಸ್ಟರು ಮಾಡಲ್ಪಟ್ಟಿರುತ್ತವೆ.

———o———

೩. ಇದೇ ಫೆಬ್ರವರಿ ಮಾಹೆ ೭ನೆ ತಾರೀಖು ಲಾಗಾಯಿತು ೧೧ನೆ ತಾರೀಖಿನವರೆಗೆ ಬೆಂಗಳೂರಿಗೆ ಸಮೀಪದಲ್ಲಿರುವ ಹೆಬ್ಬಾಳ "ಎಕ್ಸಪೆರಿಮೆಂಟಲ್ ಫಾರಂ" ನಲ್ಲಿ (Hebbal Experimental Farm) ಬೆಲ್ಲ ಮತ್ತು ಸಕ್ಕರೆ ತಯಾರಿಯಲ್ಲಿ ಹೊಸ ವಿಧಾನಗಳನ್ನು ಪ್ರತ್ಯಕ್ಷವಾಗಿ ಮಾಡಿ ತೋರಿಸುವದರಿಂದ ಇಷ್ಟವುಳ್ಳವರೆಲ್ಲರೂ ಬಂದು ನೋಡಬಹುದೆಂದು ಅಗ್ರಿಕಲ್ಚರಲ್ ಕೆಮಿಸ್ಟರವರು ಪ್ರಸಿದ್ಧಪಡಿಸಿರುತ್ತಾರೆ.

———o———

೪. ಚಾಲ್ತಿಸಾಲ್ ಅಂದರೆ ೧೯೦೯--೧೦ನೆ ಸಾಲ್‌ನಲ್ಲಿ ಇಂಡಿಯಾ ದೇಶದಲ್ಲಿ ಸುಮಾರು ೨ ಕೋಟಿ ಎಕರೆ ವಿಸ್ತೀರ್ಣವು ಹತ್ತಿ ಸಾಗುವಳಿಯಲ್ಲಿರುತ್ತೆಂತಲೂ, ಹುಟ್ಟುವಳಿಯು ಸುಮಾರು ೪ ಲಕ್ಷ ಬೇಲುಗಳು ಅಂದರೆ ಹಿಂದಿನ ಸಾಲ್‌ಗಿಂತ ಸುಮಾರು ೬ ಲಕ್ಷ ಬೇಲುಗಳು (ಬೇಲಿಗೆ ೧೭ ಮಣ) ಜಾಸ್ತಿ ಅಂದಾಜಾ ಮಾಡಬಹುದೆಂತಲೂ ಇಂಡಿಯಾ ಗೌರ್ನಮೆಂಟು ಕಮರ್ಷಿಯಲ್ ಇಂಟೆಲಿಜೆನ್ಸ್ ಇಲಾಖೆಯವರು ಫಾಯಿಷ್ ಮಾಡಿರುವ ಪತ್ರಿಕೆಯಿಂದ ಗೊತ್ತಾಗುತ್ತದೆ. ಮೈಸೂರು ಶೀಮೆಯಲ್ಲಿ ಈ ವರುಷ ೮೦ ಸಾವಿರ ಎಕರೆ ಸಾಗಿನಲ್ಲಿದ್ದು ಹುಟ್ಟುವಳಿಯು ಸುಮಾರು ೬,೦೦೦ ಬೇಲುಗಳು ಅಂದಾಜಾ ಆಗಿರುತ್ತೆ. ಹಿಂದಿನ ವರುಷ ೬೫ ಸಾವಿರ ಎಕರೆಗಳು ಸಾಗುವಳಿಯಾಗಿ ೩೦೦೦ ಬೇಲುಗಳ ಹತ್ತಿ ಹುಟ್ಟುವಳಿಯಾಯಿತು.

V. B. SOOBBIAH AND SONS, PRINTERS, BANGALORE -- 1910.

THE MYSORE

REVENUE & AGRICULTURAL GAZETTE.

ವಾಲ್ಯೂಂ ೪.] ಮಂಗಳವಾರ, ೧೫ನೆ ಫೆಬ್ರವರಿ ೧೯೧೦. [ನಂ. ೮.

Contents.

1. New Varieties of Sugar-cane in Madras.
2. Co-operative Credit Societies.
3. A few Hints to Cattle Owners.
4. Revenue Appeals.
5. Selection of Paddy Seeds.
6. Government Proceedings.
7. Silk Industry.
8. Notifications.
9. Occasional Notes.
   (i) Manures for Potatoes. (ii) Groundnut. (iii) Wages in Madras Presidency. (iv) Onions. (v) Cattle Show. (vi) Conservancy of Water Supply in the Cauvery Channels. (vii) Honorary Visitors to the Coimbatore Agricultural College.

ಅನುಕ್ರಮಣಿಕೆ.

೧. ಹೊಸರಖಂ ಕಬ್ಬುಗಳು.
೨. ಅನ್ಯೋನ್ಯ ಸಹಾಯಕ ಸಂಘಗಳು.
೩. ದನಗಳನ್ನು ಸಾಕುವವರಿಗೆ ಉಪಯುಕ್ತವಾದ ವಿಷಯಗಳು.
೪. ರೆವಿನ್ಯೂ ಅಪೀಲುಗಳು.
೫. ಬೀಜದ ಬತ್ತದ ಚುನಾವಣೆ.
೬. ಸರ್ಕಾರಿ ಹುಕುಂಗಳು.
೭. ರೇಷ್ಮೆ ಕಸಬು.
೮. ಇಸ್ತಿಹಾರ್ ನಾಮೆಗಳು.
೯. ವಿವಿಧ ವೃತ್ತಾಂತಗಳು.
   (i) ಉರಲಗಡ್ಡೆಗೆ ಅನುಕೂಲವಾದ ಗೊಬ್ಬರಗಳು. (ii) ನೆಲಗಡ್ಲೆ. (iii) ಮದರಾಸು ಅಧಿಪತ್ಯದಲ್ಲಿ ಕೂಲಿದರ. (iv) ನೀರುಳ್ಳಿಗಡ್ಡೆ. (v) ದನಗಳ ಪ್ರದರ್ಶನ. (vi) ಕಾವೇರಿ ನಾಲೆಗಳಲ್ಲಿ ನೀರಿನ ಸರಬರಾಜು. (vii) ಕೊಯಮತ್ತೂರು ಅಗ್ರಿಕಲ್ಚರಲ್ ಕಾಲೇಜಿನ ಮೇಲ್ವಿಚಾರಣಾಕರ್ತರು.

New Varieties of Sugar-cane in Madras.*

ಹೊಸ ರಖಂ ಕಬ್ಬುಗಳು.

ಮದರಾಸು ವ್ಯವಸಾಯ ಇಲಾಖೆಯವರು ಸ್ಥಳೀಯ ರಖಂಗಳಿಗಿಂ

* ಮದರಾಸು ಅಗ್ರಿಕಲ್ಚರಲ್ ಕ್ಯಾಲೆಂಡರ್, ೧೯೧೦.

ತ ಜಾಸ್ತಿ ಸಿಹಿಯಾಗಿರುವ ಮತ್ತು ಹೆಚ್ಚು ಬೆಲ್ಲವನ್ನು ಕೊಡತಕ್ಕ ಅನೇಕ ಹೊಸ ರಖಂ ಕಬ್ಬುಗಳನ್ನು ಆಧಿಪತ್ಯವೆಲ್ಲೆಲ್ಲಾ ಹಂಚುತ್ತಿದಾರೆ. ಇವುಗಳನ್ನು ದೂರದೇಶಗಳಿಂದ ತರಿಸಿ ಸರ್ಕಾರಿ ಫಾರಂಗಳಲ್ಲಿ ಅನೇಕ ವರುಷಗಳವರೆಗೂ ಅಜಮಾಯಿಷಿ ಮಾಡಿ ಸ್ಥಳೀಯ ರಖಂಗಳಿಗಿಂತ ಇವು ಬಹಳ ಶ್ರೇಷ್ಠವಾದವುಗಳೆಂದು ಗೊತ್ತಾದನಂತರ ರೈತರಿಗೆ ಕೊಡುತ್ತಾರೆ. ಈ ಇಲಾಖೆಯವರು ಅನೇಕ ವರುಷಗಳ ಕೆಳಗೆ ಮೊರಿಷಸ್ ದೇಶದಿಂದ ಕಬ್ಬುಗಳನ್ನು ತರಿಸಿ ಮೊದಲು ಮದರಾಸಿನಲ್ಲಿ ಬೆಳೆದು ನೋಡಿ ತರುವಾಯ ಆಧಿಪತ್ಯದ ಅನೇಕ ಕಡೆಗಳಿಗೆ ಹಂಚಿದರು. ಮೊದಲು ಮೊದಲು ಉತ್ತರದಲ್ಲಿ ವಿಶಾಖಪಟ್ಟಣ ಮತ್ತು ಗೋದಾವರಿ, ದಕ್ಷಿಣದಕಡೆ ಕೊಯಮುತ್ತೂರು ಡಿಸ್ಟ್ರಿಕ್ಟುಗಳ ರೈತರು ಇದರ ವ್ಯವಸಾಯವನ್ನು ಮಾಡುತ್ತಿದ್ದರು.

ಈಗ ಆಧಿಪತ್ಯದಲ್ಲಿರುವ ರಖಂಗಳು ಹಿಂದೆ ೭೦ ವರುಷಗಳ ಕೆಳಗೆ ತರಿಸಿದವುಗಳ ಸಂತತಿಯವೇ. ಆದರೆ ಇವು ಕಾಲಕ್ರಮೇಣ ಕೆಟ್ಟು ಹೋಗಿ ಈಗ ಅವುಗಳಿಗೆ ರೋಗ ತಗಲುವದು ಹೆಚ್ಚಾಗಿದೆ. ಗೋದಾವರಿ ಡಿಸ್ಟ್ರಿಕ್ಟಿನಲ್ಲಿ ಕಬ್ಬಿಗೆ ರೋಗ ತಗಲುವದು ಹೆಚ್ಚಿದಕಾರಣ ತಕ್ಕ ಪರಿಹಾರವನ್ನು ಕಂಡುಹಿಡಿಯುವದಕ್ಕಾಗಿ ಸಾಮಲಕೋಟೆಯಲ್ಲಿ ಒಂದು ಗೌರ್ನ್ಮೆಂಟು ವ್ಯವಸಾಯಫಾರಂ ಏರ್ಪಡಿಸಲ್ಪಟ್ಟಿತು. ಮದರಾಸಿನಿಂದಲೂ ಮತ್ತು ಇಂಡಿಯಾದೇಶದ ಇತರ ಕಡೆಗಳಿಂದಲೂ ಅನೇಕ ರಖಂ ಕಬ್ಬುಗಳನ್ನು ಹೊಸದಾಗಿ ತರಿಸಿ, ಸ್ಥಳದ ಕಬ್ಬುಗಳ ಜೊತೆಗೆ ಫಾರಂನಲ್ಲಿ ಒಟ್ಟಿಗೆ ಬೆಳೆಸಿತ್ತು. ಮೂರನೇವರುಷ ವಿಶಾಖಪಟ್ಟಣದ ಕಲೆಕ್ಟರವರು ಮೊರೀಷಸ್‌ನಿಂದ ಹೊಸದಾಗಿ ಕಬ್ಬುಗಳನ್ನು ತರಿಸಿ ಅಲ್ಲಿ ಒಂದು ತೋಟದಲ್ಲಿ ಬೆಳೆಯುತ್ತಿರುವದಾಗಿ ತಿಳಿದುಬಂತು. ಇವುಗಳನ್ನು ಪರೀಕ್ಷಿಸಲಾಗಿ ಕೆಲವು ಬಹಳ ಉತ್ತಮವೆಂದು ಕಂಡುಬಂದದ್ದರಿಂದ ಅವುಗಳನ್ನು ಸಾಮಲಕೋಟೆಗೆ ತಂದು ಬೆಳೆಸಿದರು. ಇಲ್ಲಿ ಇವುಗಳನ್ನು ಅನೇಕ ವರುಷಗಳು ಬೆಳೆದು ಆ ಪೈಕಿ ಕಾನೆ ಉತ್ತಮವೆಂದು ತೋರಿಬಂದ ರಖಂಗಳನ್ನು ಇತರ ಕಡೆಗಳಿಗೆ ಹಂಚುತ್ತಿದಾರೆ. ಸ್ಥಳೀಯ ರಖಂಗಳಿಗಿಂತ ಇವು ಚೆನ್ನಾಗಿ ಬೆಳೆದು ದೊಡ್ಡ ದೊಡ್ಡ ಜಲ್ಲೆಗಳನ್ನೂ ಮತ್ತು ಜಾಸ್ತಿ

ಬೆಲ್ಲವನ್ನೂ ಕೊಡುತ್ತವೆ. ರಸವು ಬಹಳ ಸಿಹಿಯಾಗಿರುವದರಿಂದ ದೊಡ್ಡಬೆಲ್ಲದ ಅಚ್ಚುಗಳು ಬರುತ್ತವೆ. ನಾಟುರಖಂ ಬೆಲ್ಲಕ್ಕಿಂತ ಬಣ್ಣ ಚೆನ್ನಾಗಿರುತ್ತೆ. ವಿಶೇಷ ರುಚಿಯಾಗಿಯೂ ಇರುತ್ತದೆ. ಸರಿಯಾಗಿ ಸಾಗುವಳಿ ಮಾಡಿದಲ್ಲಿ ರೋಗಾದಿಗಳು ಏನೂ ಬರುದಿಲ್ಲ. ಈ ಕಾರಣಗಳಿಂದ ಗೋದಾವರಿ ಕಡೆ ಈ ಹೊಸ ತರಹಾ ಕಬ್ಬುಗಳನ್ನು ವಿಶೇಷವಾಗಿ ಹಾಕುತ್ತಿದ್ದಾರೆ.

ಈ ರಖಂಗಳು ಸಾಮಲಕೋಟೆಯಲ್ಲಿ ಚೆನ್ನಾಗಿ ಬೆಳೆದಿದ್ದರಿಂದಲೂ ಮತ್ತು ಈಪೈರಿನಿಂದ ಶಾನೆ ಲಾಭ ಕಂಡುಬಂದದ್ದರಿಂದಲೂ ಇವುಗಳನ್ನು ಚೆಂಗಲ್ಪೇಟೆಯ ಸಮೀಪದಲ್ಲಿರುವ ಮೆಲ್ರೋಸಪುರದಲ್ಲಿ ಮೊಟ್ಟಮೊದಲು ಹಾಕಿದರು. ಆದರೆ ಇಲ್ಲಿನ ಭೂಮಿಯು ಅನುಕೂಲಿಸಲಿಲ್ಲವಾದ್ದರಿಂದ ದಕ್ಷಿಣ ಆರ್ಕಾಡು ಜಿಲ್ಲೆಯ ನೆಲ್ಲಿಕುಪ್ಪದಲ್ಲಿರುವ ಪ್ಯಾರಿಕಂಪೆನಿಯ ಮ್ಯಾನೇಜರಿಗೆ ಕಳುಹಿಸಿರಲು ಅವರು ಆ ಕಡೆಯ ಒಳ್ಳೊಳ್ಳೇ ರೈತರಿಗೆ ಕೊಟ್ಟರು. ಈ ರಖಂಗಳನ್ನು ಪಾಲೂರು ಸರ್ಕಾರಿ ಫಾರಂನಲ್ಲಿಯೂ ಹಾಕಿದ್ದರಲ್ಲಿ ಅವು ನಾಟು ತರಹೆಗಳಿಗಿಂತ ಚೆನ್ನಾಗಿ ಬೆಳೆಯುತ್ತವೆಂದು ತಿಳಿದು ಬಂದದ್ದರಿಂದ ಅನೇಕ ಮಂದಿ ರೈತರು ಇವುಗಳನ್ನೇ ಪ್ರತಿವರುಷದಲ್ಲೂ ಬೆಳೆಯುತ್ತಾರೆ. ಇವು ಇಲ್ಲಿಂದ ತಿನ್ನವಲ್ಲಿ ಡಿಸ್ಟ್ರಿಕ್ಟಿಗೆ ಕಳುಹಿಸಲ್ಪಟ್ಟು ಅಲ್ಲಿಯೂ ಚೆನ್ನಾಗಿ ಆಗಿರುತ್ತವೆ. ತಾಳಿಪರಂಬಾ ಫಾರಂನಲ್ಲಿಯೂ ಇವು ಬಹಳ ಚೆನ್ನಾಗಿ ಆಗಿರುವದರಿಂದ ಕಬ್ಬಿನ ಪೈರನ್ನೇ ಕಾಣದ ಮಳೆಯಾಳ ದೇಶದಲ್ಲಿಯೂ ಈ ವ್ಯವಸಾಯವು ಹರಡುವಂತಿದೆ. ಇವಕ್ಕಿಂತಲೂ ಇನ್ನೂ ಉತ್ತಮವಾದ ರಖಂಗಳನ್ನು ಕಂಡು ಹಿಡಿಯುವದಕ್ಕಾಗಿ ಪ್ರಯತ್ನ ನಡೆದಿದೆ.

ಈ ದೇಶದಲ್ಲಿ ಕೆಲವು ಕಡೆಗಳಲ್ಲಿ ಕಬ್ಬು ಧಾರಾಳವಾಗಿ ಹೂ ಬಿಟ್ಟರೂ ಕೂಡ ಬೀಜದಲ್ಲಿ ಸಾರವಿಲ್ಲದೇ ಹೋಗೋಣದರಿಂದ ಕಬ್ಬನ್ನೇ ಕತ್ತರಿಸಿ ಬೀಜಕ್ಕಾಗಿ ಉಪಯೋಗಿಸುವದೊಂದೇ ಉತ್ತಮ ಪಕ್ಷವೆಂದು ಗೊತ್ತಾಗುತ್ತದೆ. ಕೆಲವು ಕಡೆಗಳಲ್ಲಿ ಸಾರವತ್ತಾದ ಬೀಜಗಳು ಆಗುವದೂ ಉಂಟು. ಅಂಥಾ ಬೀಜಗಳನ್ನು ತಂದು ಬಿತ್ತನೆಗೆ ಉಪಯೋಗಿಸಬಹುದು. ಹೀಗೆ ಬೀಜಗಳಿಂದಾದ ಕಬ್ಬುಗಳು ಮಾಮೂಲಿನಂತಾಗುವುವುಗಳಿಗಿಂತ ಬಹು ಶ್ರೇಷ್ಠವಾಗಿರುತ್ತವೆಯಾದ್ದರಿಂದ ಅವುಗಳಲ್ಲಿ ಕೆಲವನ್ನು

ಸಾಮಲಕೋಟೆ ಫಾರಂನಲ್ಲಿ ಸಾಗುವಳಿ ಮಾಡುತ್ತಿದಾರೆ. ಇವುಗಳ ಪೈಕಿ ಬಹಳ ದೂರದೇಶವಾದ ಬಾರ್ಬಡಾಸು ದ್ವೀಪದಿಂದ ತರಿಸಿರುವ ರಕವು ಹೋದ ವರುಷ ಸಾಮಲಕೋಟೆಯಲ್ಲಿ ಬೆಳೆದ ಮಿಕ್ಕ ಎಲ್ಲಾ ರಕಂಗಳಿಗಿಂತಲೂ ಬಹಳ ಮೇಲಾಗಿತ್ತು. ಈ ಕಬ್ಬು ಕುಂಚಾಗಿಯೂ ದಪ್ಪವಾಗಿಯೂ ಬೆಳೆಯುವದರಿಂದ ಉದ್ದವಾಗಿ ಬೆಳೆಯುವ ಮೊರಿಷಸ್ ಕಬ್ಬಿಗೆ ಬೇಕಾಗುವಂತೆ ಇದಕ್ಕೆ ಬೊಂಬುಕಟ್ಟುವದು ಅವಶ್ಯವಿಲ್ಲ. ಇದರ ರಂಗು ಭಂಗಾರದ ವರ್ಣವಾಗಿಯೂ, ರಸವು ಬಹು ಮಧುರವಾಗಿಯೂ ಇರುತ್ತವೆ. ಹೋದ ವರುಷ ಫಾರಂನಲ್ಲಿ ಇದರಿಂದ ಬೆಲ್ಲ ಮಾಡಿರುವಲ್ಲಿ ಇಷ್ಟು ಅವಲ್ ಸರಕು ಹಿಂದೆ ಯಾವಾಗಲೂ ಆಗಿರಲಿಲ್ಲವಂತೆ. ಸಾಮಲಕೋಟೆಯಲ್ಲಿ ಮಾತ್ರವೇ ಅಲ್ಲದೆ ನೆಲ್ಲಿಕುಪ್ಪಂನಲ್ಲಿಯೂ ಮತ್ತು ವಿಶಾಖಪಟ್ಟಣ ಜಿಲ್ಲೆಯಲ್ಲಿ ಅನಕಪಲ್ಲಿಯಲ್ಲಿಯೂ ಈ ರಕವು ಬಹಳ ಚೆನ್ನಾಗಿ ಆಗಿರುತ್ತದೆ.

ಇದನ್ನು ಅಪೇಕ್ಷಿಸುವವರು ಕೂಡಿದ ಮಟ್ಟಿಗೂ ಶೀಘ್ರವಾಗಿ ಸಾಮಲಕೋಟೆಯ ಫಾರಂ ಮ್ಯಾನೇಜರವರಿಗೆ ಬರೆದುಕೊಂಡಲ್ಲಿ ಸಾಧ್ಯವಾಗುವಷ್ಟು ಬೀಜವನ್ನು ಮಿಗಿಸಿ ಮುಂದಿನ ವರುಷ ದರಖಾಸ್ತುದಾರರಿಗೆ ಹಂಚಲಾಗುತ್ತದೆ. ಮತ್ತು ಬೆಳೆಯತಕ್ಕವರು ಸಾಮಲಕೋಟೆಯಲ್ಲಿ ಮಾಡುವಂತೆ ಬಿತ್ತವನ್ನು ಮರೆಸಿಯಾಗಿ ಹಾಕಿ ಬಹಳ ಶ್ರದ್ಧೆಯಿಂದ ಕೇಸ ಮಾಡಬೇಕು.

Co-operative Credit Societies. *

ಅನ್ಯೋನ್ಯ ಸಹಾಯಕ ಸಂಘಗಳು.

ಕಳೆದ ನವಂಬರು ಮಾಹೆಯಲ್ಲಿ ಇಂಡಿಯಾ ದೇಶದ ಕೋ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರುಗಳ ೪ನೆ ಸಭೆಯು ಕಲ್ಕತ್ತಾ ಪಟ್ಟಣದಲ್ಲಿ ನಡೆಯಿತು. ಇಂಡಿಯಾ ಗೌರ್ನಮೆಂಟಿನ ರೆವಿನ್ಯೂ ಇಲಾಖಾ ಸೆಕ್ರೆಟರಿಯವರು ಅಗ್ರಾಸನವನ್ನು ವಹಿಸಿದ್ದರು. ಈ ಸಭೆಗೆ ನಮ್ಮ ಸರ್ಕಾರದಿಂದ ಮೆ॥ ಎಂ. ಶ್ಯಾಮರಾವು ಎಂ. ಎ., ಯವರು ಕಳುಹಿಸಲ್ಪಟ್ಟಿದ್ದರು.

---

* ಇಂಡಿಯನ್ ಅಗ್ರಿಕಲ್ಚರಿಸ್ಟ್, ೧-೧೨-೦೯.

ಹೋದ ವರುಷದ ಸಭೆಯಲ್ಲಿ ಸೂಚಿಸಿರುವಮೇರೆ ಕೋ ಆಪರೇಟಿವ್ ಸೊಸೈಟಿಗಳ ಅಭಿವೃದ್ಧಿಯು ತಡೆಯಿಲ್ಲದೆ ತೃಪ್ತಿಕರವಾಗಿ ಮುಂದರಿಸುತ್ತಾ ಬರುತ್ತಿರುವುದು. ಸೊಸೈಟಿಗಳ ಒಟ್ಟು ಸಂಖ್ಯೆಯು ೧,೩೩೭ರಿಂದ ೨,೦೦೮ಕ್ಕೂ, ಮೆಂಬರುಗಳ ಸಂಖ್ಯೆಯು ೧೪೫,೧೬೦ ರಿಂದ ೧೮೪,೮೯೭ಕ್ಕೂ ಹೆಚ್ಚಿರುವವಲ್ಲದೆ ಬಂಡವಾಳವೂ ಸಹ ೪೪ರಿಂದ ೮೧ ಲಕ್ಷ ರೂಪಾಯಿಗಳವರಿಗೆ ಹೆಚ್ಚಿರುವದು. ಸೊಸೈಟಿಗಳ ಲೇವಾದೇವಿಯು ಹಿಂದಿನ ವರುಷ ೪೭ ಲಕ್ಷ ರೂಪಾಯಿಗಿಂತಲೂ ಕಮ್ಮಿ ಇದ್ದದ್ದು ಈವರುಷ ೮೪ ಲಕ್ಷಕ್ಕೆ ಹೆಚ್ಚಿತು. ಪ್ರಸಕ್ತವಾದ ವರುಷದಲ್ಲಿ ರಿಜಸ್ಟ್ರಾರುಗಳು ಎಲ್ಲೆಲ್ಲಿ ಸೊಸೈಟಿಗಳು ಚೆನ್ನಾಗಿ ವೃದ್ಧಿಗೆ ಬರುತ್ತಿದ್ದವೋ ಆ ಕಡೆಗಳಲ್ಲಿ ವಿಶೇಷ ಮುತವರ್ಜಿಮಾಡುತ್ತಿದ್ದು ಹೊಸಕಡೆಗಳಲ್ಲಿ ಸೊಸೈಟಿಗಳನ್ನು ಸ್ಥಾಪಿಸುವ ಭಾಗದಲ್ಲಿ ವಿಶೇಷ ಗಮನ ಕೊಡದಿದ್ದರೂ ಕೂಡ ಒಟ್ಟು ಸೊಸೈಟಿಗಳ ಸಂಖ್ಯೆಯು ಹಿಂದಿನ ವರುಷಕ್ಕಿಂತ ಹೆಚ್ಚಿರುವದು ಅತಿಶಯವಾಗಿ ತೃಪ್ತಿಕರವಾಗಿರುತ್ತದೆ. ಆದರೆ ಈ ಭಾಗದಲ್ಲಿ ಒಂದೊಂದು ಕೆಲಸವೂ ಇನ್ನೂ ಸರ್ಕಾರದವರಿಂದಲೇ ಪ್ರೇರಿತವಾಗಿ ನಡೆಸಲ್ಪಡಬೇಕಾಗಿದೆಯೇ ಹೊರತು ಪ್ರಜೆಗಳು ಮುಂದಾಗಿ ನಿಲ್ಲುತ್ತಿಲ್ಲ. ವಿದ್ಯಾವಂತರೂ, ಪ್ರಜಾಹಿತೈಷಿಗಳೂ ಮತ್ತು ಸಾಹಸಿಗಳೂ ಆದ ದೊಡ್ಡಮನುಷ್ಯರು ಮುಂದಾಳುಗಳಾಗಿ ಬಂದು ಜನಗಳು ತಂತಮ್ಮಲ್ಲಿ ಅನ್ಯೋನ್ಯ ಸಹಾಯ ಮತ್ತು ಪರಸ್ಪರ ನಂಬಿಕೆ, ವಿಶ್ವಾಸ, ಇತ್ಯಾದಿ ಸುಗುಣಗಳನ್ನು ಹೆಚ್ಚಿಸಿಕೊಳ್ಳುವದರಿಂದ ಪ್ರಜಾಕ್ಷೇಮ್ಮವೆ ಉಂಟಾಗುತ್ತೆಂಬ ಅಂಶವನ್ನು ಅವರಿಗೆ ಮನಸ್ಸಿಗೆ ಹತ್ತುವಂತೆ ಬೋಧೆಮಾಡಿ, ಸರ್ಕಾರದ ಸಹಾಯವನ್ನು ಕೂಡಿದಮಟ್ಟಿಗೂ ಅಪೇಕ್ಷಿಸದೇ ತಾವು ತಾವೆ ಸೇರಿಕೊಂಡು ಸೊಸೈಟಿಗಳನ್ನು ಸ್ಥಾಪಿಸುವದು, ಇರುವ ಸೊಸೈಟಿಗಳ ಮೇಲ್ವಿಚಾರಣೆ, ಲೆಖ್ಖಪತ್ರಗಳ ತನಿಖೆ, ಮೊದಲಾದ ವಿಶಿಷ್ಟ ಕಾರ್ಯಗಳನ್ನೂ ನೋಡಿಕೊಳ್ಳುವುದರಲ್ಲಿ ವಿಶೇಷವಾದ ಗುಣ ಉಂಟು. ಸರ್ಕಾರದವರು ಈ ಹೊಸಮಾರ್ಗವನ್ನು ಕಲ್ಪಿಸಿಕೊಟ್ಟು ಈ ೫ ವರುಷಗಳಲ್ಲಿ ಆಗಲೆ ಜನಗಳಲ್ಲಿ ಎಷ್ಟೋ ಅನುಕೂಲಗಳು ಉಂಟಾಗಿರುವದು ಅವರ ಅನುಭವಕ್ಕೇನೇ ಬಂದಿರುತ್ತದೆ.

ನಮ್ಮ ಸಂಸ್ಥಾನದಲ್ಲಿಯೂ ಕೂಡ ಸೊಸೈಟಿಗಳ ಸಂಖ್ಯೆಯೂ,

ಬಂಡವಾಳವೂ ಮತ್ತು ಮೆಂಬರುಗಳ ಸಂಖ್ಯೆಯೂ ವರ್ಷ ವರ್ಷ ವೃದ್ಧಿಯಲ್ಲಿಯೇ ಇರುತ್ತವೆ ಮತ್ತು ಇವುಗಳ ಅಭಿವೃದ್ಧಿಗೆ ಬೇಕಾದ ಸೌಕರ್ಯಗಳನ್ನು ನಮ್ಮ ಸರ್ಕಾರದವರು ಮಾಡಿಕೊಡುತ್ತಲೇ ಇರುವರು. ಆದರೆ ಈ ಅನುಕೂಲತೆಗಳನ್ನೆಲ್ಲಾ ಪೂರ್ತಿಯಾಗಿ ಉಪಯೋಗಪಡಿಸಿಕೊಂಡು ಸುಖ ಸಂಪತ್ತಿಗಳನ್ನು ವೃದ್ಧಿಪಡಿಸಿಕೊಳ್ಳುವದು ಪ್ರಜೆಗಳಿಗೇ ಸೇರಿರುತ್ತದೆ.

A few Hints to Cattle Owners.*

ದನಗಳನ್ನು ಸಾಕುವವರಿಗೆ ಉಪಯುಕ್ತವಾದ ವಿಷಯುಗಳು.

೧. ಹೊಸದಾಗಿ ಸಂತೆಗಳಿಂದಲಾಗಲಿ ಇತರ ಕಡೆಗಳಿಂದಲಾಗಲಿ ದನಕರುಗಳನ್ನು ಕೊಂಡುಕೊಂಡುಬಂದರೆ ಅವುಗಳನ್ನು ಹಳೇದನಗಳೊಂದಿಗೆ ಸೇರಿಸದೆ ಪ್ರತ್ಯೇಕವಾಗಿ ಕಟ್ಟಬೇಕು.

೨. ಅವುಗಳನ್ನು ಒಂದುವಾರ ಅಥವಾ ೧೦ ದಿನಗಳವರೆಗೂ ಹುಷಾರಾಗಿ ನೋಡಿಕೊಂಡಿದ್ದು ಅವುಗಳಲ್ಲಿ ಜೆನ್ನು ಕುಗ್ಗುವದು, ಮೇವು ತಿನ್ನದಿರುವದು, ಮೆಲಕುಹಾಕದೇಇರೋಣ, ಮಲಬಂಧ, ಇತ್ಯಾದಿ ಚಿನ್ಹೆಗಳು ಉಂಟಾಗಿವೆಯೇ ಗಮನಿಸಬೇಕು.

೩. ಅವುಗಳನ್ನು ಒಂದು ಸ್ಥಳದಿಂದ ಸಾಗಿಸಿಕೊಂಡು ಬರುವಾಗ ದಾರಿಯಲ್ಲಿ ಇತರ ಕಾಲ್ನಡೆಗಳೊಂದಿಗೆ ಸೇರಿಸಬಾರದು.

೪. ಅವುಗಳನ್ನು ಬಿಸಲಿನಲ್ಲಿ ನಡೆಸಿಕೊಂಡು ಹೋಗಕೂಡದು. ದಿನಕ್ಕೆ ೧೨ ಮೈಲಿಗಿಂತ ಹೆಚ್ಚಾಗಿ ನಡೆಸಬಾರದು. ದಾರಿಯಲ್ಲಿ ಸರಿಯಾದ ಆಹಾರ ಕೊಟ್ಟು ಪೋಷಿಸಬೇಕು.

೫. ಕೆಲವು ಸಮಯಗಳಲ್ಲಿ ಕಾಲ್ನಡೆಗಳಿಗೆ ಒಂದು ಸ್ಥಳದಲ್ಲಿ ತಗಲಿದ ರೋಗವು ಬಲಿತು ಹೊರಪಡುವದಕ್ಕೆ ೨—೩ ತಿಂಗಳುಗಳೂ ಕೂಡ ಹಿಡಿಯಬಹುದು. ಅಷ್ಟು ಕಾಲಪರ್ಯಂತರ ಹೊಸ ದನಗಳನ್ನು ಪ್ರ

* ಕುಂಭಕೋಣಂ ಅಗ್ರಿಕಲ್ಚರಲ್ ಅಸೋಸಿಯೇಷನ್ ಮಾಸಪತ್ರಿಕೆ.—ನವಂಬರು ೧೯೧೯.

ತ್ಯೇಕವಾಗಿ ಕಟ್ಟುವದಕ್ಕೆ ಸಾಧ್ಯವಾಗದಿದ್ದರೂ ಅದುವರೆವಿಗೂ ಅವು ಗಳನ್ನು ಬಹಳ ಜಾಗರೂಕತೆಯಿಂದ ನೋಡಿಕೊಳ್ಳುತ್ತಿರಬಹುದು.

೬. ರೋಗದ ಚಿನ್ಹೆಗಳು ಕಂಡುಬಂದಕೂಡ್ಲೆ ಅವುಗಳನ್ನ ಇತರ ರಾಸುಗಳ ಜೊತೆಗೆ ಸೇರಿಸದೇ ಪ್ರತ್ಯೇಕವಾಗಿಟ್ಟು ಚಿಕಿತ್ಸೆ ಮಾಡ ಬೇಕು.

೭. ಅವುಗಳಿಗೆ ಹಾಕಿದ ಹುಲ್ಲು ಅಥವಾ ಇತರ ಪದಾರ್ಥಗಳ ನ್ನು ಆರೋಗ್ಯವಾದ ದನಗಳಿಗೆ ತಿನ್ನಿಸಬಾರದು.

೮. ರೋಗದ ದನಗಳು ಹಾಕಿದ ಸಗಣಿ ಮೊದಲಾದವುಗಳನ್ನು ಆಳವಾದ ಗುಂಡಿಗಳಲ್ಲಿ ಹಾಕಿ ಮಣ್ಣು ಮುಚ್ಚಬೇಕು.

೯. ಕಾಹಿಲೆಯಾದ ರಾಸುಗಳಿಗೆ ನಿರ್ಮಲವಾದ ಅಕ್ಕಿ ಗಂಜಿಯ ನ್ನೂ ಮತ್ತು ಗರಿಕೆಹುಲ್ಲನ್ನೂ ಕೊಡಬೇಕು.

೧೦. ಅಂಟು ರೋಗದಿಂದ ಸತ್ತ ದನಗಳನ್ನು ಆಳವಾದ ಗುಂಡಿ ತೋಡಿ ಹೂಳಬೇಕು.

೧೧. ಅಂಟು ರೋಗ ತಗಲಿದ ದನಗಳನ್ನು ಕಟ್ಟುವ ಕೊಟ್ಟಿಗೆ ಗಳನ್ನು ಆಗಾಗ್ಯೆ ಶುದ್ಧಿ ಮಾಡುತ್ತಿದ್ದು ಬಹಳ ಚೊಕ್ಕಟವಾಗಿಟ್ಟಿರಬೇ ಕು.

೧೨. ಸಾಧಾರಣವಾಗಿ ಸುತ್ತಮುತ್ತಲೂ ಅಂಟು ರೋಗಗಳು ಹರಡುತ್ತಿರುವ ಸಂದರ್ಭಗಳಲ್ಲಿ ಒಬ್ಬನಲ್ಲಿರುವ ರಾಸುಗಳನ್ನೆಲ್ಲಾ ಒಂದೇ ಕಡೆ ಒಟ್ಟಾಗಿ ಕಟ್ಟದೇ ಅವುಗಳನ್ನು ಸಣ್ಣ ಸಣ್ಣ ಗುಂಪುಗಳಾಗಿ ವಿಂಗ ಡಿಸಿ ೪—೫ ಕಡೆಗಳಲ್ಲಿ ಬೇರೆ ಬೇರೆಯಾಗಿ ಕಟ್ಟುವದು ಒಳ್ಳೇದು.

೧೩. ಕಾಹಿಲೆ ದನಗಳನ್ನು ಚೆನ್ನಾಗಿ ಪರೀಕ್ಷಿಸಿ ಅವುಗಳಿಗೆ ತಗ ಲಿರುವ ರೋಗವು ಇಂಥಾದ್ದೇ ಎಂದು ಗೊತ್ತು ಮಾಡಿಕೊಂಡು ತಕ್ಕ ಚಿಕಿ ತ್ಸೆಯನ್ನು ಮಾಡಬೇಕು.

Revenue Appeals.

ರೆವಿನ್ಯೂ ಅಪೀಲುಗಳು.

೧೯೦೮—೦೯ನೇ ಇಸವಿ ರಿವ್ಯೂ ಪಿಟೀಷನ್ ನಂ ೧.

ಅರ್ಜಿದಾರ. ವೆಂಕಟಗಿರಿಯಪ್ಪ.	*vs.*	ಎದರು ಅರ್ಜಿದಾರ. ರಂಗೇಗೌಡ.

ಕೇಸಿನ ವಿದ್ಯಮಾನ—ಅರ್ಜಿದಾರ ವೆಂಕಟಗಿರಿಯಪ್ಪನು ಮತ್ತು
ಎದರು ಅರ್ಜಿದಾರ ರಂಗೇಗೌಡನು ಅರಸೀಕೆರೆ ಕಸಬೆಯ ಹಕ್ಕುದಾರಿ ಪ
ಟೇಲರು; ಮತ್ತು ವೆಂಕಟಗಿರಿಯಪ್ಪನು ರೆವಿನ್ಯೂ ಪಟೇಲನಾಗಿಯೂ, ರಂ
ಗೇಗೌಡನು ಪೋಲೀಸು ಪಟೇಲನಾಗಿಯೂ ನೌಕರಿಯನ್ನು ಜಂಟಿಯಾಗಿ
ನೋಡುತ್ತಿದ್ದರು. ವೆಂಕಟಗಿರಿಯಪ್ಪನು ಅದೇ ಕಸಬೆಯ ಶಾನುಭೋ
ಗ ದಾಸಪ್ಪನ ಮಗನಾದ್ದರಿಂದ ಇವರಿಬ್ಬರೂ ಏಕ ಗೃಹಕೃತ್ಯದವರಾಗಿ
ರುತ್ತಾರೆಂಬ ಕಾರಣದ ಮೇಲೆ ರೆವಿನ್ಯೂ ಕಮೀಷನರವರು ರಂಗೇಗೌಡನೊ
ಬ್ಬನನ್ನೇ ಪಟೇಲಿ ಕೆಲಸಕ್ಕೆ ನೇಮಕಮಾಡಿ ಈ ಏರ್ಪಾಡು ಶ್ಯಾನುಭೋ
ಗನ ವಂಶದಲ್ಲಿ ಜ್ಞಾತಿವರಸೆಗೆ ಸೇರಿದವರಾದ ಬೇರೊಬ್ಬರು ಪಟೇಲಿ ಕೆಲ
ಸಕ್ಕೆ ಸಿಕ್ಕುವವರೆಗೂ ನಡೆಯತಕ್ಕದ್ದೆಂತಲೂ ಅದುವರಗೆ ಪಟೇಲಿ ಹಕ್ಕಿ
ನಲ್ಲಿ ಅರ್ಜಿದಾರನಿಗೂ ಹಿಸ್ಸೆ ಯಿರುವದರಿಂದ ಇವನಿಗೆ ನೌಕರಿಬಾಬತು ತಲ
ಬಿನಲ್ಲಿ ೧೦ ರೂಪಾಯಿಗಳನ್ನು ಸಲ್ಲಿಸಬೇಕೆಂತಲೂ ಹುಕುಂ ಮಾಡಿದರು
ಈಚೆಗೆ ತಿಳಿದು ಬರುವದರಲ್ಲಿ ಅರಸೀಕೆರೆ ಕಸಬೆ ಶ್ಯಾನುಭೋಗಿಕೆ ಬರಾ
ದರ್ ಅರ್ಜಿದಾರನ ತಮ್ಮ ರಾಮದಾಸಪ್ಪನ ಹೆಸರಿನಲ್ಲಿ ಆಗಿರುವದಾಗಿ
ಯೂ ಸುಬ್ಬರಾಯನೆಂಬಾತನು ಇವನ ತರಫು ಗುಮಾಸ್ತೆಯಾಗಿ ಕೆಲಸ
ನೋಡುತ್ತಿರುವದಾಗಿಯೂ ಗೊತ್ತಾಗುತ್ತದೆ.

ಗೌರ್ನಮೆಂಟಿನವರ ತೀರ್ಮಾನ—ಒಂದೇ ಗ್ರಾಮದ ಪಟೇಲಿ ಮ
ತ್ತು ಶ್ಯಾನುಭೋಗಿ ನೌಕರಿಗಳಿಗೆ ಒಬ್ಬನೇಯಾಗಲಿ ಅಥವಾ ಒಂದು ಅ
ವಿಭಕ್ತ ಕುಟುಂಬದವರೇ ಆಗಲಿ ಇರುವದು ಉಚಿತವಾದ ಏರ್ಪಾಡಲ್ಲವಾದ್ದ
ರಿಂದ ಇಂಥಾ ಸಂದರ್ಭವಿರುವವರೆಗೂ ಇನ್ನೊಬ್ಬ ಹಕ್ಕುದಾರನೇ (ರಂಗೇ
ಗೌಡನೆ) ಕೆಲಸವನ್ನು ನೋಡುತ್ತಿರಬೇಕೆಂದು ರೆವಿನ್ಯೂ ಕಮೀಷನರ
ರು ಹುಕುಂ ಮಾಡಿರುತ್ತಾರೆಯೇ ಹೊರತು ರಂಗೇಗೌಡನೊಂದಿಗೆ ಅರ್ಜಿ

ದಾರನ ಕುಟುಂಬಕ್ಕೆ ಪಟೇಲಿಯಲ್ಲಿರತಕ್ಕ ಹಕ್ಕನ್ನು ತಪ್ಪಿಸಿರುವದಿಲ್ಲ. ಶ್ಯಾನುಭೋಗಿ ನೌಕರಿಗೆ ಯಾವನೋ ಒಬ್ಬ ಹೊರಗಿನವನನ್ನು ಗುಮಾಸ್ತೆಯಾಗಿ ಮೊಕರರು ಮಾಡಿರುವದಾಗಿ ಅರ್ಜೀದಾರನು ಬಯಾನಿಸುತ್ತಾನೆ ಆದರೆ ಈ ನಿರ್ಣಯವು ಅರ್ಜೀದಾರನಿಗೆ ಪಟೇಲಿ ನೌಕರಿಯು ತಪ್ಪದಿರುವದಕ್ಕೋಸ್ಕರ ನಿಮಿತ್ತ ಮಾತ್ರಕ್ಕೆ ಮಾಡಿದ್ದೆಂದು ಊಹಿಸುವದಕ್ಕೆ ಕಾರಣವಿರುತ್ತೆ.

ಅರ್ಜೀದಾರನ ಅಪೀಲನ್ನು ವಜಾಮಾಡಿರುವ ಹುಕುಮನ್ನು ಪುನರ್ವಿಮರ್ಶೆ ಮಾಡಲು ಸಾಕಾದ ಕಾರಣವಿರುವದಿಲ್ಲ. ಆದರೆ ಒಂದುವೇಳೆ ಒಳ್ಳೆ ಉದ್ದೇಶದಿಂದಲೇ ಗುಮಾಸ್ತೆಯನ್ನು ಮೊಕರರು ಮಾಡಿರುವ ಪಕ್ಷದಲ್ಲಿ ಡೆಪ್ಯುಟಿ ಕಮಿಷನರವರು ಅರ್ಜೀದಾರನಿಗೆ ಪಟೇಲಿ ನೌಕರಿಯನ್ನು ಅವನ ಸರದಿ ಬಂದಾಗ ಕೊಡಬಹುದಾಗಿರುತ್ತೆ.

Selection of Paddy Seeds.*

ಬೀಜದ ಬತ್ತದ ಚುನಾವಣೆ.

೧. ನೀರು ಸರಫರಾಜು ಕಮ್ಮಿಯಾದ ಸಂದರ್ಭಗಳಲ್ಲಿಯೂ ಕೂಡ ಪೈರು ಚೆನ್ನಾಗಿ ಕೌಲೊಡೆದು ಬೆಳೆದಿರುವ ಗದ್ದೆಗಳಿಂದಲೇ ಬಿತ್ತನೆಗಾಗಿ ಬತ್ತದ ಬೀಜವನ್ನು ಚುನಾಯಿಸಿಕೊಳ್ಳುವದು ಉತ್ತಮ.

೨. ಕೆಲವು ಸಂದರ್ಭಗಳಲ್ಲಿ ನಾಟಿ ಮಾಡುವಾಗ ಒಂದೇ ಗದ್ದೆಯಲ್ಲಿ ಅನೇಕ ದಿನಸಿನ ಬತ್ತದ ಸೊಸಿಗಳು ಬೆರತು ಹೋಗುವದು ಉಂಟು. ಮತ್ತು ಒಂದೊಂದು ನಾಟಿಯಲ್ಲಿಯೂ ಕೂಡ ಒಂದೇತರದ ಬತ್ತವಿಲ್ಲದೆ ಭಿನ್ನರಕಂ ಬತ್ತದ ಬೇರುಗಳು ಸೇರಿಕೊಂಡಿರಬಹುದು. ಆದ್ದರಿಂದ ಬತ್ತದ ಬೀಜವನ್ನು ಚುನಾಯಿಸುವದರಲ್ಲಿ ಯಾವರಕಂ ಬತ್ತ ಬೇಕೋ ಅದೇ ಮಾದರಿ ಕೌಲುಗಳನ್ನೇ ಒಂದೊಂದಾಗಿ ಚೆನ್ನಾಗಿ ನೋಡಿ ಆರಿಸಿಕೊಳ್ಳಬೇಕು.

೩. ಹೀಗೆ ಕೌಲುಗಳನ್ನು ಆರಿಸಿಕೊಳ್ಳುವದರಲ್ಲಿಯೂ ಕೂಡ

* ಕುಂಭಕೋಣಂ ಅಗ್ರಿಕಲ್ಚರಲ್ ಅಸೋಸಿಯೇಷನ್ ಮಾಸಪತ್ರಿಕೆ.— ನವಂಬರು ೧೯೦೯.

ಉದ್ದವಾಗಿ ಬೆಳೆದಿರುವ ಮತ್ತು ಒತ್ತಾಗಿ ತೆನೆಗಳನ್ನು ಬಿಟ್ಟಿರುವ ಕೌಲು ಗಳನ್ನೇ ತೆಗೆದುಕೊಳ್ಳಬೇಕು. ಮಸಲ, ಒಂದು ಗದ್ದೆಯಲ್ಲಿ ಕೌಲುಗಳು ಅನೇಕವಾಗಿ ೮ ಅಂಗುಲ ಉದ್ದವಿರುತ್ತವೆಂದು ಭಾವಿಸೋಣ; ಮಧ್ಯೆ ಮಧ್ಯೆ ಕೆಲವು ಮಾತ್ರ ಇವುಗಳಿಗಿಂತಲೂ ಸ್ವಲ್ಪ ಉದ್ದವಾಗಿ ಬೆಳೆದಿರಬಹುದು. ಇವುಗಳಲ್ಲಿಯೂ ಕೂಡ ಒಂದರಲ್ಲಿ ೨೦ ಕಾಳುಗಳು, ಮತ್ತೊಂದರಲ್ಲಿ ೨೫೦, ಹೀಗೆ ವ್ಯತ್ಯಾಸಗಳು ಉಂಟಾಗಬಹುದು. ಈ ಪೈಕಿ ಯಾವ ಕೌಲುಗಳು ಉದ್ದವಾಗಿಯೂ ಮತ್ತು ಜಾಸ್ತಿ ಕಾಳುಗಳುಳ್ಳವಾಗಿಯೂ ಇರುತ್ತವೆಯೋ ಅಂಥವನ್ನೆ ನೋಡಿ ಆರಿಸಿಕೊಳ್ಳಬೇಕು. ಇದೇನೋ ಸ್ವಲ್ಪ ಶ್ರಮವಾದ ಕೆಲಸ. ಆದರೂ ಇದಕ್ಕೆ ತಕ್ಕ ಪ್ರತಿಫಲ ದೊರೆಯುವುದರಲ್ಲಿ ಸಂಶಯವಿಲ್ಲ.

೪. ಈ ಪ್ರಕಾರವಾಗಿ ಬಿತ್ತವನ್ನು ಚುನಾಯಿಸಿಕೊಳ್ಳುವುದರಲ್ಲಿ ರೋಗವಿಲ್ಲದಿರುವುಗಳನ್ನೇ ನೋಡಿ ಆರಿಸಬೇಕು

೫ ಮೇಲ್ಕಂಡಂತೆ ಆರಿಸಿಕೊಂಡ ಕೌಲುಗಳನ್ನು ಪ್ರತ್ಯೇಕವಾಗಿ ಬಡೆದು, ಬತ್ತವನ್ನು ಚೆನ್ನಾಗಿ ತೂರಿ, ಒಣಗಿಸಿ ಕಣಜದಲ್ಲಿ ತುಂಬಡಬೇಕು. ಹೀಗೆ ಶೇರಿಸಿಟ್ಟ ಬೀಜವು ಸ್ವಲ್ಪವಾಗಿದ್ದರೂ ಚಿಂತೆಯಿಲ್ಲ. ಇದನ್ನು ಬೇರೆ ಒಂದು ಅಗೆಯಲ್ಲಿ ಒಟ್ಟು ಹಾಕಿ ಸಸಿಗಳನ್ನು ಪ್ರತ್ಯೇಕವಾಗಿ ನಟ್ಟು ಈ ಪೈರುಗಳಿಂದ ಮುಂಬಿನ ವರುಷಕ್ಕೆ ಬೇಕಾಗುವ ಬೀಜವನ್ನು ಮೇಲಿನಂತೆಯೇ ಪುನಃ ಚುನಾಯಿಸಿಕೊಳ್ಳಬೇಕು. ಹೀಗೆ ವರ್ಷ ವರ್ಷ ಬೀಜದ ಚುನಾವಣೆಯನ್ನು ಮಾಡಿಕೊಂಡರೆ ಕೆಲವು ವರ್ಷಗಳಲ್ಲಿ ಶುದ್ಧವಾಗಿಯೂ ಬೆರಿಕೆಯಿಲ್ಲದ್ದಾಗಿಯೂ ಮತ್ತು ಅತ್ಯುತ್ತಮವಾದ್ದಾಗಿಯೂ ಇರುವ ಒಂದು ಬಿನಸಿನ ನೆಲ್ಲು ದೊರೆಯುತ್ತದೆ. ಇದರಿಂದ ಬೆಳೆಯುವ ಪೈರು ಜಾಸ್ತಿ ಫಸಲನ್ನು ಕೊಡುವದಲ್ಲದೆ ನೀರಾವರಿ ಕಮ್ಮಿಯಾದರೂ ತಡೆಯಬಲ್ಲದು.

Government Proceedings.
ಸರ್ಕಾರಿ ಹುಕುಂಗಳು.

I.

೧೯೮೫ನೆ ಇಸವಿ ಮೇ ಮಾಹೆ ೬ನೆ ಮರ್ಕುಂ ೧೧೮೬-೯೨-೨೪ನೆ ನು

ರು ಪ್ರೊಸೀಡಿಂಗ್ಸು ಪ್ರಕಾರ ಜಮೀನು ಕಂದಾಯವನ್ನು ಮಾಫ್ರು ಮಾ
ಮಾಗಲೆಲ್ಲಾ ಇದರ ಜೊತೆಗೆ ಲೋಕಲ್ ಸೆಸ್ಸನ್ನೂ ಕೂಡ ಮಾಫ್ರು ಮಾಡು
ತ್ತು. ಆದರೆ ಮದರಾಸು ಆಧಿಪತ್ಯದಲ್ಲಿ ಈರೀತಿ ಲೋಕಲ್ ಸೆಸ್ಸ
ನ್ನು ಮಾಫ್ರುಮಾಡುವ ಪದ್ಧತಿ ಇಲ್ಲ. ಈ ಪದ್ಧತಿಯನ್ನೇ ನಮ್ಮ ಸಂ
ಸ್ಥಾನದಲ್ಲಿಯೂ ಜಾರಿಯಲ್ಲಿ ತರುವ ಭಾಗದಲ್ಲಿ, ಜನಗಳಿಗೆ ಸೌಕರ್ಯಾನು
ಕೂಲತೆಗಳನ್ನು ಒದಗಿಸಿಕೊಡುವ ಉದ್ದೇಶದಿಂದ ಈ ತೀರ್ವೆಗಳು ವಸೂ
ಲುಮಾಡಿ ವಿನಿಯೋಗಿಸಲ್ಪಡತಕ್ಕದ್ದಾದ್ದರಿಂದ ಕಂದಾಯವನ್ನು ರಿಮಿಟ್
ಮಾಡಿದ ಮಾತ್ರಕ್ಕೆ ಇದರ ಜೊತೆಗೆಲೋಕಲ್ ಸೆಸ್ಸುಗಳನ್ನು ರಿಮಿಟ್
ಮಾಡತಕ್ಕ ಪ್ರಕೃತವಿಲ್ಲವೆಂದು ರೆವಿನ್ಯು ಕಮೀಷನರವರು ಶಿಫಾರಸು
ಮಾಡಿದ್ದನ್ನು ಗೌರ್ನಮೆಂಟಿನವರು ಅಂಗೀಕರಿಸಿ, ಸಂದರ್ಭಾನುಸಾರ
ಸೆಸ್ಸುಗಳ ವಸೂಲಿಯನ್ನು ಕೊಂಚಕಾಲ ಸಾವಕಾಶ ಮಾಡಬಹುದೇ
ಹೊರ್ತು ಅನಾಮತ್ತಾಗಿ ರಿಮಿಟ್ ಮಾಡಕೂಡದೆಂದೂ ಮತ್ತು
ಮೇಲ್ಕಂಡ ೧೮೮೩ನೆ ಇಸವಿ ಮೇ ೬ನೆ ಮಾರ್ಕಿನ ಪ್ರೊಸೀಡಿಂಗ್ಸು
ಈ ಮೂಲಕ ರದ್ದುಮಾಡಲ್ಪಟ್ಟಿರುತ್ತೆಂತಲೂ, ೧೯೦೯ನೆ ಇಸವಿ ಡಿಶಂ
ಬರು ೨೨ನೆ ಮಾರ್ಕು ೩೪೯-೪೬-ಎಲ್. ಬಿ. ೪೩೧-೦೬-೩ನೆ ನಂಬರು
ಹುಕುಂ ದಯಪಾಲಿಸಿರುತ್ತಾರೆ.

II.

ಬೆಂಗಳೂರು ಮತ್ತು ಮೈಸೂರು ಡಿಸ್ಟ್ರಿಕ್ಟುಗಳಲ್ಲಿರುವ ಕೋ
ಆಪರೇಟಿವ್ ಸೊಸೈಟಿಗಳ ಪುಸ್ತಕಗಳನ್ನೂ, ಲೆಖ್ಖಗಳನ್ನೂ, ಕಾಗದಗ
ಳನ್ನೂ, ಸೆಕ್ಯೂರಿಟಿ ಯಾ ಆಧಾರ ಪತ್ರಗಳನ್ನೂ ಅಜಮಾಯಿಷಿ ಮಾಡ
ಲು ಕೋಆಪರೇಟಿವ್ ಸೊಸೈಟಿಗಳ ಆನರೆರಿ ಆರ್ಗನೈಸರ್ ಆಗಿ ಗವರ್ನ
ಮೆಂಟ್ ೧೪-೧೦-೧೯೦೯ನೆ ಮಾರ್ಕು ಎಫ್.ಎಲ್. ೨೦೩೧-೬೧-ಬಿ.೧೯-೦೯-೨
ನಂಬರು ಹುಕುಂನಲ್ಲಿ ನೇಮಕರೂರು ಮಾಡಲ್ಪಟ್ಟಿರುವ ಮೆ|| ಟಿ. ವೆಂಕಟ
ರಾಮಯ್ಯನವರಿಗೆ ಅಧಿಕಾರ ಕೊಡಲ್ಪಟ್ಟಿರುತ್ತದೆ.

III.

ಕೊಳೇರೋಗದ ನಿವಾರಣಾರ್ಥವಾಗಿ ಚಾಲ್ತಿಸಾಲಿನಲ್ಲಿ ಡಾಕ್ಟರ್
ಕೋಲ್ಮನ್ ಯವರು ಎರಡು ಅಡಿಕೆ ತೋಟಗಳನ್ನು ಗುತ್ತಿಗೆಗೆ ತೆಗದು

ಕೊಂಡು ಅಜಮಾಯಿಷಿಗಳನ್ನು ನಡೆಸುವದಕ್ಕೂ ತತ್ಪ್ರಯುಕ್ತ ಕೆ ವು ಚೀರ್ಕೊಳವೆಗಳನ್ನೂ (Sprayers) ಮತ್ತು ಹಂಗಾಮಿಯಾಗಿ ಸ್ವಲ್ಪ ಸಿಬ್ಬಂದಿಯನ್ನು ಇಟ್ಟುಕೊಳ್ಳುವದಕ್ಕೂ ಗೌರ್ನಮೆಂಟಿನವರು ಇದೆ ಮಾಹೆ ೩ನೆ ಮುಸ್ಸಂ ಆರ್. ೫೭೧೨—೧೬—ಅಗ್ರಿ. ೪೦-೦೯-೨ ನಂಬರು ಹುಕುಮಿನಲ್ಲಿ ಅಪ್ಪಣೆ ಕೊಟ್ಟಿರುತ್ತಾರೆ.

Silk Industry. *

ರೇಷ್ಮೆಕಸಬು.

೧೯೦೯ನೆ ಜೂನ್ ಮಾಹೆಯ „ಕಮರ್ಷಿಯಲ್ ಅಮೆರಿಕಾ" ಎಂಬ ವರ್ತಮಾನಪತ್ರದಲ್ಲಿ ಪ್ರಪಂಚದಲ್ಲಿ ನಾನಾದೇಶಗಳ ರೇಷ್ಮೆ (ಕಚ್ಚಾ ಪದಾರ್ಥ ಮತ್ತು ತಯಾರಿಸಿದ ಸರಕುಗಳ) ವ್ಯಾಪಾರಸ್ಥಿತಿಯನ್ನು ಕು ರಿತು ಒಂದು ಲೇಖನವು ಬರೆಯಲ್ಪಟ್ಟಿರುತ್ತದೆ. ೧೯೦೮ನೆ ಸಾಲಿನ ಯಾವಯಾವ ದೇಶದಲ್ಲಿ ಎಷ್ಟು ರೇಷ್ಮೆ ಹುಟ್ಟುವಳಿಯಾಯಿತು ಮತ್ತು ಎಷ್ಟು ಉಪಯೋಗಿಸಲ್ಪಟ್ಟಿತು ಎಂಬ ತಪಶೀಲುಗಳು ಈ ಕೆಳಗೆ ಕಾ ಡಿಸೆ.

ಹುಟ್ಟುವಳಿ		ಖರ್ಚು	
ದೇಶ.	ಪೌಂಡುಗಳು.	ದೇಶ.	ಪೌಂಡುಗಳು.
ಚೀನಾ ...	ಸುಮಾರು 3 ಕೋಟಿ	ಯುನೈಟೆಡ್‌ಸ್ಟೇಟ್ಸ್	ಸುಮಾರು 2 ಕೋಟಿ
ಜಪಾನ್ ...	,, 2½ ,,	ಚೀನಾ ..	,, 1¾ ,,
ಇಟಲಿ ...	,, 1 ,,	ಜಪಾನ್ ...	,, 1 ,,
ಲಿವಾಂಟು ...	,, ½ ,,	ಫ್ರಾನ್ಸ್ ...	,, 1 ,,
ಇಂಡೋಚೈನಾ	,, ¼ ,,	ಇಟಲಿ ..	,, ¾ ,,
ಯೂರೋಪ್ ...	,, ¼ ,,	ಜರ್ಮನಿ ...	,, ¾ ,,
ಫ್ರಾನ್ಸ್ ...	,, 14ಲಕ್ಷ ,,	ಯೂರೋಪು ...	,, 32ಲಕ್ಷ
ಇತರ ದೇಶಗಳು	,, 12 ,,	ಇಂಡಿಯಾ ...	,, 11 ,,
		ಇತರದೇಶಗಳು ...	,, 21 ,,
	ಒಟ್ಟು 7¾		7¾ ಕೋಟಿ

* ಅಗ್ರಿಕಲ್ಚರಲ್ ಜರ್ನಲ್ ಆಫ್ ಇಂಡಿಯಾ.—ಅಕ್ಟೋಬರು ೧೯೦೯.

ಪ್ರಪಂಚದಲ್ಲೆಲ್ಲಾ ಚೀಣಾದಲ್ಲಿ ವಿಶೇಷವಾಗಿ ಕಚ್ಚಾ ರೇಷ್ಮೆಯಾ ುವದು. ಇದಕ್ಕೆ ಎರಡನೇದು ಜಪಾನ್ ದೇಶ. ಮಿಕ್ಕದೇಶಗಳವೈಕಿ ಇಟಲಿ ುತ್ತು ಫ್ರಾನ್ಸ್ ರಾಜ್ಯಗಳಲ್ಲಿ ತಕ್ಕಮಟ್ಟಿಗೆ ರೇಷ್ಮೆತಯಾರಾಗುತ್ತೆಂದು ೇಳಬಹುದು. ಆದರೆ ಚೀಣಾದಲ್ಲೀ ಆಗಲಿ ಅಥವಾ ಇಟಲಿ ಫ್ರಾನ್ಸು ದೇ ಗಳಲ್ಲೀ ಆಗಲಿ ಈ ಕಸಬು ಜಪಾನ್‌ದಲ್ಲಿರುವಷ್ಟು ಪ್ರೌಢಸ್ಥಿತಿಯಲ್ಲಿಲ್ಲ. ಪಾನ್‌ನಿಂದ ಇತರದೇಶಗಳಿಗೆ ರಫ್ತಾಗುವ ಪದಾರ್ಥಗಳಲ್ಲೆಲ್ಲಾ ಕಚ್ಚಾ ೇಷ್ಮೆ ಮತ್ತು ತಯಾರಾದ ರೇಷ್ಮೆ ಬಟ್ಟೆಗಳ ವ್ಯಾಪಾರವೇ ಹೆಚ್ಚಾಗಿ ುತ್ತದೆ. ಈ ಕಸಬು ಜಪಾನ್‌ನಲ್ಲಿ ಅಷ್ಟು ಉನ್ನತ ಸ್ಥಿತಿಯಲ್ಲಿರುವದಕ್ಕೆ ಮೂರು ಕಾರಣಗಳುಂಟು.

೧. ಅಲ್ಲಿನ ಹವಾ ಮತ್ತು ಇತರ ಸ್ಥಿತಿಗಳು ಉಪ್ಪನೇರಳೆ ವ್ಯವ ಾಯಕ್ಕೂ ಮತ್ತು ರೇಷ್ಮೆಹುಳುಗಳ ಸಾಕಣಿಕೆಗೂ ಬಹಳ ಅನುಕೂ ವಾಗಿವೆ.

೨. ಸರ್ಕಾರದವರ ಸಹಾಯ ಮತ್ತು ಪ್ರೋತ್ಸಾಹ ವಿಶೇಷವಾ ದೊರೆಯುತ್ತದೆ.

೩. ಉದ್ಯೋಗಕ್ಕೆ ಬೇಕಾಗುವ ಕೂಲಿಯವರು ಬಹಳ ಅಗ್ಗವಾ ಬೇಕಾದಷ್ಟು ಸಿಕ್ಕುತ್ತಾರೆ. ಮತ್ತು ಇವರನ್ನು ಅತಿಸುಲಭವಾಗಿ ತರ ೇತು ಮಾಡಲೂಬಹುದು.

ಇಷ್ಟೇ ಅಲ್ಲದೆ ಜಪಾನೀಯರು ಸ್ವಾಭಾವಿಕವಾಗಿ ಅತಿ ಚತುರರು ುತ್ತು ಅವರಿಗೆ ವಿಷಯಗ್ರಹಣಾಶಕ್ತಿಯು ಬಹಳ ಚೆನ್ನಾಗಿದೆ.

ಇನ್ನು ಖರ್ಚಿನಬಾಬಿನಲ್ಲಿ ಯುನೈಟೆಡ್ ಸ್ಟೇಟ್ಸೇ ಮುಂದಾಳಾಗಿರು ್ತದೆ. ಇಲ್ಲಿ ರೇಷ್ಮೆಗೆ ಇರುವಷ್ಟು ಖರ್ಚು ಮತ್ತೆಲ್ಲೂ ಇಲ್ಲ. ಆ ದೇಶೀ ರುಗಳು ತಮಗೆ ಬೇಕಾಗುವ ಕಚ್ಚಾ ರೇಷ್ಮೆಯನ್ನು ಕೂಡಿದಮಟ್ಟಿಗೂ ್ಥಳದಲ್ಲೀ ಬೆಳೆಯುವದಕ್ಕಾಗಿ ಎಷ್ಟೋ ಪ್ರಯತ್ನಗಳನ್ನು ಮಾಡಿದರು. ಯಾವದೂ ಲಾಭಕರವಾಗಿ ಪರಿಣಮಿಸಲಿಲ್ಲ. ಆ ಕಾರಣ ಈ ಕಚ್ಚಾ ಾವಸ್ತುವಿಗಾಗಿ ಬಹಳಮಟ್ಟಿಗೆ ಅನ್ಯದೇಶಗಳನ್ನೇ ಆಶ್ರಯಿಸಬೇಕಾಗಿದೆ.

ಈ ಭಾಗದಲ್ಲಿ ಇಂಡಿಯಾ ದೇಶದ ಸ್ಥಿತಿಯನ್ನು ನೋಡೋಣ.

೧೮೬೭ನೆ ಇಸವಿಯಲ್ಲಿ ಇಲ್ಲಿಂದ ಸುಮಾರು ೧೪ ಕೋಟಿ ರೂಪಾಯಿನ ಕ
ಚ್ಚಾ ರೇಷ್ಮೆಯು ಇತರ ದೇಶಗಳಿಗೆ ಸಾಗಿಹೋಯಿತು. ಮುಂದೆ ೧೮೮
ರಲ್ಲಿ ಈ ರಫ್ತು ವ್ಯಾಪಾರವು ೫೫ ಲಕ್ಷ ರೂಪಾಯಿಗೆ ಇಳಿಯಿತು. ತದಾ
ಭ್ಯ ಈ ವ್ಯಾಪಾರವು ವರ್ಷ ವರ್ಷ ಕ್ಷೀಣವಾಗುತ್ತಲೇ ಬರುತ್ತಿದೆ. ಆದ
ಆಮದು ವ್ಯಾಪಾರವಾದರೋ ಏಳಿಗೆಯಲ್ಲಿಯೇ ಇರುವದು. ೧೯೦೮-೦೯ರ
೧ ಕೋಟಿ ರೂಪಾಯಿನ ಕಚ್ಚಾ ರೇಷ್ಮೆಯೂ, ೨| ಕೋಟಿ ರೂಪಾ
ಯಿನ ತಯಾರಾದ ಸರಕೂ ಆಮದು ಆಗಿರುತ್ತದೆ. ಈಪೈಕಿ ೫ರಲ್ಲಿ ೪ರಕ್ಕಿ
ತ ಹೆಚ್ಚಾದ ಭಾಗವು ಚೀಣಾ ದೇಶದಿಂದಲೆ ಬರುತ್ತದೆ. ಮಿಕ್ಕದ್ದು ಜಪಾ
ಫ್ರಾನ್ಸು ಮತ್ತು ಯುನೈಟೆಡ್ ಕಿಂಗ್ಡಂ ರಾಜ್ಯಗಳಿಂದ ಬರುತ್ತದೆ.

Notifications.

ಇಸ್ತಿಹಾರ್ ನಾಮೆಗಳು.

ನಂ. ೮೧೦೨. ತಾ|| ೧೪—೨—೧೯೧೦.

ಈ ಕೆಳಗಿನ ತಾಲ್ಲೂಕು ಶಿರಸ್ತೇದಾರರುಗಳ ವರ್ಗಾ ವರ್ಗಿಗಳನ್ನು
ಮಂಜೂರು ಮಾಡಿರುತ್ತೆ.

ಹೆಸರು.	ಎಲ್ಲಿಂದ.	ಎಲ್ಲಿಗೆ.
ಪಿ. ಯಂ. ಸುಬ್ಬಯ್ಯ	... ಮೊಳಕಾಲ್ಮುರು	... ಚಿತ್ರದುರ್ಗ.
ಚಲಪತಿನಾಯುಡು	... ಚಳ್ಳಕೆರೆ	... ದಾವಣಗೆರೆ.
ಬಿ. ಕೆ. ರಂಗಾಚಾರ್	... ದಾವಣಗೆರೆ	... ಮೊಳಕಾಲ್ಮುರು.
ವೆಂಕಟರಾವ್	... ಚಿತ್ರದುರ್ಗ	... ಚಳ್ಳಕೆರೆ.

Occasional Notes.

ವಿವಿಧ ವೃತ್ತಾಂತಗಳು.

೧. ಬೇವಿನ ಮತ್ತು ಹತ್ತಿ ಬೀಜದ ಹಿಂಡಿಗಳು ಉರಲಗಡ್ಡೆಗೆ ಬಹ
ಒಳ್ಳೇ ಗೊಬ್ಬರವೆಂದು ಕಾನ್ಪೂರದ ಅಗ್ರಿಕಲ್ಚರಲ್ ಸ್ಟೇಷನ್ನಿನಲ್ಲಿ ನಡೆ
ಅಜಮಾಯಿಷಿಗಳಿಂದ ಗೊತ್ತಾಗುತ್ತದೆ.—ಇಂಡಿಯನ್ ಟ್ರೇಡ್ ಜರ್ನಲ್—
೧೪—೧೦—೦೯.

---

೨. ಮೊದಲುವರುಷ ಬತ್ತ, ರಾಗಿ, ಮುಂತಾದ ಧಾನ್ಯಗಳನ್ನು ಬೆಳೆವ ಜಮೀನಿನಲ್ಲಿ ಮೂರನೇ ವರುಷ ನೆಲಗಡ್ಲೆ ಹಾಕಿದರೆ ಫಸಲು ಖರಾಬು ಜಮೀನಿನಲ್ಲಿ ಬರುವದಕ್ಕಿಂತಲೂ ಬಹಳ ಚೆನ್ನಾಗಿ ಬರುತ್ತದೆ.—ಇಂಡಿಯನ್ ಅಗ್ರಿಕಲ್ಚರಿಸ್ಟ್, ೧೧—೧೨—೦೯.

———o———

೩. ಮದರಾಸು ಆಧಿಪತ್ಯದಲ್ಲಿ ಈಚೆಗೆ ಸಾಮಾನ್ಯವಾಗಿ ಕೂಲಿದರವು ಸ್ವಲ್ಪ ಹೆಚ್ಚಿರುವದರಿಂದ, ಕೂಲಿಯವರು ಸ್ಥಳವನ್ನು ಬಿಟ್ಟು ಹೊರಗಡೆ ಸಿಲೋನ್ ಮುಂತಾದ ಪ್ರದೇಶಗಳಿಗೆ ಹೋಗುವದು ಕಮ್ಮಿಯಾಗಿರುತ್ತದೆಯಂತೆ.—ಇಂಡಿಯನ್ ಅಗ್ರಿಕಲ್ಚರಿಸ್ಟ್ ೯—೧೨—೦೯.

———o———

೪. ಸಣ್ಣ ನೀರುಳ್ಳಿ ಗಡ್ಡೆಯನ್ನು ಬೆಳೆಯುವ ಕಡೆಗಳಲ್ಲಿ ಗಡ್ಡೆಗಳನ್ನೇ ಬಿತ್ತಿ ಪೈರು ಮಾಡುವ ಪದ್ಧತಿಯುಂಟು. ಕೆಲವು ಕಡೆಗಳಲ್ಲಿ ಮಾತ್ರ ಬೀಜವನ್ನು ಜಮಾಯಿಸಿ ಬಿತ್ತುತ್ತಾರೆ. ಈ ಕ್ರಮದಲ್ಲಿ ಫಸಲು ಬರುವದಕ್ಕೆ ಕಾಲವು ಕೊಂಚ ಹೆಚ್ಚಾಗಿ ಹಿಡಿದರೂ ಕೂಡ ದೊಡ್ಡದೊಡ್ಡಗಡ್ಡೆಗಳೂ ಮತ್ತು ಜಾಸ್ತಿ ಆದಾಯವೂ ದೊರಕುವದು.—ಮದರಾಸು ಅಗ್ರಿಕಲ್ಚರಲ್ ಕ್ಯಾಲೆಂಡರ್, ೧೯೧೦.

———o———

೫. ನಂಜನಗೂಡು ತಾಲ್ಲೂಕು ಕಸಬಾ ನಂಜನಗೂಡಿನಲ್ಲಿ ಈ ವರುಷ ನಡೆಯುವ ಶ್ರೀ ಶ್ರೀಕಂಠೇಶ್ವರ ಸ್ವಾಮಿಯವರ ರಥೋತ್ಸವ ಕಾಲದಲ್ಲಿ ಅಂದರೆ ೧೯೧೧ನೆ ಮಾರ್ಚಿ ಮಾಹೆ ೨೩, ೨೪ ಮತ್ತು ೨೫ನೆ ತಾರೀಖುಗಳಲ್ಲಿ ಒಂದು ದನಗಳ ಪ್ರದರ್ಶನ ನಡೆಯುತ್ತೆ. ಉತ್ತಮವಾದ ದನಗಳಿಗೆ ಬಹುಮಾನಗಳು ದೊರೆಯುತ್ತವೆ. ಮಿಕ್ಕ ವಿಷಯಗಳನ್ನು ತಾಲ್ಲೂಕು ಅಮಲ್ದಾರರಿಂದ ತಿಳಿಯಬಹುದು.

———o———

೬. ಕಾವೇರಿನದಿ ಮತ್ತು ಇದರ ಉಪನದಿಗಳಲ್ಲಿ ನೀರು ಕಮ್ಮಿ ಬೀಳುತ್ತಾ ಇದ್ದು ಈ ನದಿಗಳ ನಾಲೆಗಳು ಮತ್ತು ಇವುಗಳ ಆಸರೆ ಕೆರೆಗಳ ಕೆಳಗಣ ಜಮೀನುಗಳಲ್ಲಿ ಬೇಸಿಗೆ ಪೈರಿಗೆ ನೀರು ಸರಫರಾಜನ್ನು ಮಿತವ

ಡಿಸಿ ಬರುವ ಬೇಸಿಗೆಯಲ್ಲಿ ಶಿವಸಮುದ್ರದ ಪವರ್ ಸ್ಟೇಷನ್ನಿಗೆ ಬೇಕಾದ ನೀರಿನ ಸರಬರಾಯಿಯನ್ನು ಒದಗಿಸಬೇಕಾಗಿರುವ ಕಾರಣ, ಸದರಿ ಜಮಿನುಗಳಲ್ಲಿ ಮುಂದಿನ ಬೇಸಿಗೆ ಬಿತ್ತನೆಗಳನ್ನು ಮಾಡಿದಲ್ಲಿ ನೀರಾವರಿ ಕಡಿಮೆಯಾಗುವ ಸಬಬು ನಷ್ಟಪಟ್ಟಾರೆಂದು ರೈತರಿಗೆ ಎಚ್ಚರಿಸಬೇಕಾಗಿ ಚೀಫ್ ಇಂಜನಿಯರವರು ಮೈಸೂರು ಡಿಸ್ಟ್ರಿಕ್ಟ್ ಡೆಪ್ಯುಟಿ ಕಮಿಷನರವರಿಗೆ ಬರೆಸಿರುತ್ತಾರೆ.

---

೨. ಮದರಾಸು ಗೌರ್ನಮೆಂಟಿನವರು ವ್ಯವಸಾಯ ವಿಷಯಗಳಲ್ಲಿ ಕಾರ್ಯತಃ ಆಸಕ್ತರಾಗಿರುವ ಮತ್ತು ಸರ್ಕಾರಿ ಉದ್ಯೋಗಸ್ಥರಲ್ಲದ ೧೨ ಮಂದಿ ದೊಡ್ಡಮನುಷ್ಯರನ್ನು ಕೊಯಮತ್ತೂರು ಅಗ್ರಿಕಲ್ಚರಲ್ ಕಾಲೇಜ್ ಅಂಡು ರಿಸರ್ಚ್ ಇನ್‌ಸ್ಟಿಟ್ಯೂಟ್ ಎಂಬ ವ್ಯವಸಾಯಕ ಪಾಠಶಾಲೆಯ ಮೇಲ್ವಿಚಾರಣಾಕರ್ತರನ್ನಾಗಿ ನೇಮಕರೂ ಮಾಡಿರುತ್ತಾರೆ. ಇವರು ಕಾಲೇಜು ಮತ್ತು ಫಾರಮನ್ನು ರಜಾ ದಿನಗಳು ವಿನಹಾ ಇತರ ಕಾಲಗಳಲ್ಲಿ ಯಾವಾಗ ಬೇಕಾದರೂ ತನಿಖೆ ಮಾಡಬಹುದು. ಆಗ್ಯೆ ಕಾಲೇಜಿನ ಒಬ್ಬ ಆಫೀಸರು ಇವರ ಸಂಗಡ ಬಂದು ಕೇಳುವ ವಿಷಯಗಳನ್ನೆಲ್ಲಾ ತಿಳಿಸತಕ್ಕದ್ದು. ವಿಚಾರಣಾಕರ್ತರು ಕಾಲೇಜನ್ನು ನೋಡಬೇಕಾಗಿದ್ದರೆ ಕಾಲೇಜಿನ ಅಧ್ಯಕ್ಷರಿಗೆ ೨೪ ಘಂಟೆಗಳು ಮುಂಚಿತವಾಗಿ ಸಮಾಚಾರ ಕೊಡಬೇಕು. ಅಧ್ಯಕ್ಷರ ಆಫೀಸಿನಲ್ಲಿ ಒಂದು ವಿಜಿಟರ್ಸ್ ಬುಕ್ಕು (Visitors' book) ಎಂಬ ಪುಸ್ತಕವನ್ನ ಇಟ್ಟಿರುತ್ತೆ. ಇದರಲ್ಲಿ ವಿಚಾರಣಾಕರ್ತರು ಕಾಲೇಜಿನ ಆಡಳಿತದ ವಿಷಯದಲ್ಲಿ ತಮಗೆ ತೋರಿಬರುವ ಅಭಿಪ್ರಾಯಗಳನ್ನು ಬರೆಯಬಹುದು. ಈ ಅಭಿಪ್ರಾಯಗಳನ್ನು ಅಧ್ಯಕ್ಷರು ೩ ತಿಂಗಳಿಗೊಂದಾವರ್ತಿ ರೆವಿನ್ಯೂ ಬೋರ್ಡಿನವರಿಗೆ (Board of Revenue) ವ್ಯವಸಾಯ ಇಲಾಖಾ ಡೈರೆಕ್ಟರ ಮೂಲಕ ತಿಳಿಸಬೇಕು. ಇಂಥಾ ಏರ್ಪಾಟುಗಳನ್ನು ಇತರ ಕಡೆಗಳಲ್ಲಿಯೂ ಇಟ್ಟರೆ ಬಹಳ ಅನುಕೂಲ.—ಅಗ್ರಿಕಲ್ಚರಲ್ ಜರ್ನಲ್ ಆಫ್ ಇಂಡಿಯಾ, ಏಪ್ರಿಲ್ ೧೯೧೦.

V. B. SOOBBIAH AND SONS, PRINTERS, BANGALORE —1910.

THE MYSORE

REVENUE & AGRICULTURAL GAZETTE.

ವಾಲ್ಯೂಂ ೪.] ಮಂಗಳವಾರ, ೧ನೆ ಮಾರ್ಚಿ ೧೯೧೦. [ನಂ. ೯.

Contents.

1. Sugar Industry in Northern India.
2. Cattle Show at Hassan.
3. Paddy Experiments.
4. Revenue Appeals.
5. Potato Moth Pest.
6. Government Proceedings.
7. Occasional Notes.
   (i) Potato. (ii) Cocoanut. (iii) Cotton. (iv) Seed Depots. (v) Level Ground for Irrigation. (vi) Selection of Seeds. (vii) Candle Factory. (viii) Honorary Correspondents.

ಅನುಕ್ರಮಣಿಕೆ.

೧. ಉತ್ತರ ಹಿಂದೂಸ್ಥಾನದಲ್ಲಿ ಸಕ್ಕರೆ ಕಸಬು.
೨. ಹಾಸನದಲ್ಲಿ ನಡೆದ ದನಗಳ ಪ್ರದರ್ಶನ.
೩. ಬತ್ತದ ಅಜಮಾಯಿಷಿಗಳು.
೪. ರೆವಿನ್ಯೂ ಅಪೀಲುಗಳು.
೫. ಆಲುಗಡ್ಡೆಯನ್ನು ಕೆಡಿಸುವ ಹುಳ.
೬. ಸರ್ಕಾರಿ ಹುಕುಂಗಳು.
೭. ವಿವಿಧ ವೃತ್ತಾಂತಗಳು.
   (i) ಆಲೂಗಡ್ಡೆ. (ii) ತೆಂಗು. (iii) ಹತ್ತಿ. (iv) ಬಿತ್ತನೆ ಬೀಜದ ಕೋಠಿಗಳು. (v) ನೀರು ಹಾಯಿಸುವದಕ್ಕೆ ಜಮೀನು ತಟ್ಟೆಯಾಗಿರಬೇಕು. (vi) ಬೀಜದ ಆಯ್ಕೆ. (vii) ಮೇಣದಬತ್ತಿ ಕಾರ್ಖಾನೆ. (viii) ಗೌರವ ಬಾತ್ಮೀದಾರರು.

Sugar Industry in Northern India. *

ಉತ್ತರ ಹಿಂದೂಸ್ಥಾನದಲ್ಲಿ ಸಕ್ಕರೆ ಕಸಬು.

ಈಚೆಗೆ ಉತ್ತರ ಹಿಂದೂಸ್ಥಾನದಲ್ಲಿ ಕಬ್ಬಿನ ಹಾಲಿನಿಂದಲೇ ನೇರಾಗಿ ಬಿಳಿ ಸಕ್ಕರೆಯನ್ನು ಮಾಡುವದಕ್ಕಾಗಿ ಅನೇಕ ಪ್ರಯತ್ನಗಳು ನ

*ಅಗ್ರಿಕಲ್ಚರಲ್ ಜರ್ನಲ್ ಆಫ್ ಇಂಡಿಯಾ, ಏಪ್ರಿಲ್ ೧೯೦೯.

ಡೆವಿವೆ. ಇದಕ್ಕಾಗಿ ವಿಶೇಷ ಬಂಡವಾಳವನ್ನು ಹಾಕಿ ಯೂರೋಪಿನಿಂ
ದ ಹೊಸ ಹೊಸ ಯಂತ್ರಸಾಮಗ್ರಿಗಳನ್ನು ತರಿಸಿ ಈ ಕಸಬಿನಲ್ಲಿ ನಿ
ಪುಣರಾದ ಯೂರೋಪಿಯರ್ನನ್ನು ಇಟ್ಟುಕೊಂಡು ಕೆಲಸಮಾಡುತ್ತಿದಾ
ರೆ. ಆದರೂಕೂಡ ಈ ಕಸಬೇನೂ ತೃಪ್ತಿಕರವಾಗಿ ಅಭಿವೃದ್ಧಿಹೊಂ
ದುತ್ತಿಲ್ಲ ಇದಕ್ಕೆ ಅನೇಕ ಕಾರಣಗಳುಂಟು. ಈಗ ಸುಮಾರು ೨೦೦೦
ವರುಷಗಳಿಂದಲೂ ಉತ್ತರ ಇಂಡಿಯಾದಲ್ಲಿ ಕಬ್ಬು ಬೆಳೆಯುತ್ತಿದ್ದರೂ
ಹುಟ್ಟುವಳಿಯಲ್ಲೇ ಆಗಲಿ ಅಥವಾ ಶರ್ಕರಾಂಶದಲ್ಲೇ ಆಗಲಿ ಇದು ಇತರ
ದೇಶಗಳಲ್ಲಿರುವಂತೆ ಮೇಲ್ವರಿಸಿಲ್ಲ.

ಅನೇಕ ಶತಮಾನಗಳಿಂದಲೂ ಸಂತತವಾಗಿ ಬೆಳೆ ಮಾಡಿ ಮಾಡಿ ಭೂ
ಮಿಯಲ್ಲಿನ ಸಾರವು ಕಡಿಮೆಯಾಗಿಹೋಗಿರುವುದು. ಸರಿಯಾದ ಗೊಬ್ಬರ
ವೂ ಕೂಡ ಮಿತವಾದ ಖರೀದಿಗೆ ದೊರೆಯುವದು ಕೇವಲ ಸ್ವಲ್ಪ. ಹ
ವಾಸ್ಥಿತಿಯಂತೂ ಇದಕ್ಕೂ ಹೆಚ್ಚಿನ ಪ್ರತಿಕೂಲವಾಗಿರುತ್ತೆ. ಸಾಲೇಯಾ
ನ ಸಾಕಾದಷ್ಟು ಮಳೆ ಆದರೂ ಕಾಲಕಾಲಕ್ಕೆ ಸರಿಯಾಗಿ ಬೀಳುವದಿಲ್ಲ
ಕೆಲವು ತಿಂಗಳುಗಳಲ್ಲಿ ವಿಶೇಷವಾಗಿ ಆಗುತ್ತೆ. ಮಿಕ್ಕ ಕಾಲದಲ್ಲಿ ಸುತ
ರಾಂ ಬೀಳುವದೇಯಿಲ್ಲ.

ಇಲ್ಲಿನ ಸಕ್ಕರೆ ಮತ್ತು ಬೆಲ್ಲದ ತಯಾರಿ ಕ್ರಮಗಳೋ ಶುದ್ಧ ಮ
ರಟು. ಫಸಲು ಕಟಾವುಮಾಡಿದನಂತರ ಕಬ್ಬನ್ನು ಆಲೆಮನೆಗೆ ಸಾಗಿಸು
ವವರಲ್ಲಿ ಬಿಸಲಿನ ಶಖೆಗೆ ಕಬ್ಬಿನಲ್ಲಿನ ಹಾಲು ಹುಳಿಯಾಗಿ ಸಕ್ಕರೆಯೂ
ಬೆಲ್ಲವೂ ಬಹಳ ಕಿರುದಾಗುತ್ತವೆ. ಇದರಿಂದ ರೈತರು ಈಗ ಬಹಳ ನ
ಷ್ಟಪಡುತ್ತಲಿದಾರೆ.

ಮಧ್ಯರಾಷ್ಟ್ರವಾಗಿ ಭಾರಿ ಕಾರ್ಖಾನೆಗಳನ್ನು ಏರ್ಪಡಿಸಿ ಸಕ್ಕರೆ
ಯನ್ನು ಮಾಡುವುದಾದರೆ ಶಾನೆ ಅನುಕೂಲವುಂಟು. ಆದರೆ ಇದಕ್ಕೆ
ಒಂದು ದೊಡ್ಡ ತೊಂದರೆ ಇದೆ. ಈ ದೇಶದಲ್ಲಿನ ಜಮೀನ ಹಿಡುವಳಿ ಕ್ರ
ಮವಂತೂ ಶುದ್ಧ ಅಸಂಗತವಾಗಿರುತ್ತೆ. ಸಾಗುವಳಿ ಜಮೀನುಗಳು ಸಣ್ಣ
ಸಣ್ಣ ಹಿಡುವಳಿಗಳಾಗಿ ವಿಂಗಡಿಸಲ್ಪಟ್ಟು ಬೇರೆ ಬೇರೆ ಮನುಷ್ಯರ ಸ್ವಾ
ತಂತ್ರತೆಯಲ್ಲಿರುತ್ತವೆ. ಒಂದೇಕಡೆ ಭಾರಿ ವಿಸ್ತೀರ್ಣವು ಒಬ್ಬನ ಹಿಡು
ವಳಿಯಲ್ಲಿಯೇ ಇರುವದು ಕೇವಲ ಅಪರೂಪ. ಅಲ್ಲಲ್ಲಿ ಇಷ್ಟಬಂದವನು

ನ್ನ ಸಣ್ಣ ಜಮೀನಿನಲ್ಲಿ ಕಬ್ಬನ್ನು ಬೆಳೆಯುತ್ತಾನೆ. ಇಂಥಾ ಅಲ್ಪಸ್ವಲ್ಪ ಕಬ್ಬು ಭಾರಿ ಕಾರ್ಖಾನೆಯು ಕೆಲಸಕ್ಕೆ ಸಾಕಾಗುವದೇ ಇಲ್ಲ. ಮತ್ತು ಹೀಗೆ ಅಲ್ಲಲ್ಲಿ ಒಂದೊಂದು ಕಡೆ ಆಗುವ ಕಬ್ಬನ್ನು ಕೂಡಿಹಾಕಿ ತರುವದರಲ್ಲಿ-ಅನೇಕ ಸಂದರ್ಭಗಳಲ್ಲಿ ಬಹಳ ದೂರ ಫಾಸಲೆಯಿಂದ ತರಬೇಕಾಗುತ್ತದೆ-ಖರ್ಚು ಹಾನೆ ಹಿಡಿಯುವದು ಮತ್ತು ಜಲ್ಲೆಗಳು ಬಿಸಲಿನ ಹೊಡೆತಕ್ಕೆ ತಗಲಿ ಹಾಲು ಹುಳಿಯಾಗಿ ಹೋಗುತ್ತದೆ ಇದರಿಂದ ಕಾರ್ಖಾನೆಯ ಸುತ್ತಮುತ್ತಲ ಜಮೀನುಗಳಿಂದ ಕಬ್ಬನ್ನು ಒದಗಿಸಿ ವರ್ಷಕಾಲವೂ ಸಾರ್ಥಕವಾಗಿ ಕೆಲಸ ನಡೆಸುವದು ದುಸ್ತರವಾಗಿರುತ್ತದೆ. ಪರಂತು ಈ ಕೃಷಿಕಕೂಲಗಳನ್ನು ಜಮಿಸಿ ಕಾರ್ಖಾನೆಗಳನ್ನು ಏರ್ಪಡಿಸಿ ಸಂತತವಾಗಿ ಕೆಲಸ ನಡೆಸುವದರಲ್ಲಿ ಹಾನೆ ಪ್ರಯೋಜನ ಉಂಟು. ಕಬ್ಬು ಸಿಕ್ಕಿದಾಗ ಕೆಲಸ ಶುರುಮಾಡುವದು ಇಲ್ಲದಾಗ ನಿಲ್ಲಿಸಿಬಿಡುವದು ಹೀಗೆ ಬಿಟ್ಟು ಬಿಟ್ಟು ಕೆಲಸಮಾಡುವದರಿಂದ ಸಂಭವಿಸುವ ನಷ್ಟವು ತಪ್ಪುವದು. ಸ್ಥಳದಲ್ಲಿಯೇ ಸರಕು ತಯಾರಾಗಿ ದೊರಕುವದರಿಂದ ಹೊರಗಿನಿಂದ ಸಕ್ಕರೆಯನ್ನು ತರಿಸಬೇಕಾದ್ದಿಲ್ಲ. ಅಂದರೆ ಹೊರಗಿನ ಸರಕಿಗಾಗಿ ಕೊಡುವ ಹಾಸಲು ಮತ್ತು ಬಾಡಿಗೆ ವಗೈರೆ ಖರ್ಚುಗಳು ಉಳಿತಾಯವಾಗುತ್ತವೆ.

ಆದರೆ ಈ ಏರ್ಪಾಟಿಗೆ ಮುಖ್ಯವಾಗಿ ಭಾರಿ ಜಮೀನ್ದಾರರ ಸಹಾಯ ಬೇಕು. ಏಕಂದರೆ, ಜಮೀನುದಾರಿಗಳಲ್ಲಿ ಅಖಂಡವಾದ ಭಾರಿ ವಿಸ್ತೀರ್ಣವು ಒಬ್ಬರ ಮಾಲ್ಕಿಯಲ್ಲಿರುತ್ತದೆಯಾದ್ದರಿಂದ ಅದನ್ನು ಕಬ್ಬಿನ ಸಾಗಿನಲ್ಲಿ ತಂದು ಅಲ್ಲಿ ಮಧ್ಯರಾಷ್ಟ್ರವಾಗಿ ಒಂದು ಕಾರ್ಖಾನೆಯನ್ನು ಸ್ಥಾಪಿಸಿದರೆ ತುಂಬಾ ಲಾಭಕರವಾಗಿ ಕೆಲಸ ನಡೆಸಲು ಸಾಧ್ಯವಾಗುತ್ತದೆ.

ಮುಖ್ಯವಾಗಿ ಈ ದೇಶದ ಸಕ್ಕರೆಯ ಕಸಬು ಹಿಂದಕ್ಕೆ ಬೀಳದಿರಬೇಕಾದರೆ ಕಬ್ಬಿನಲ್ಲಿನ ಶರ್ಕರಾಂಶವನ್ನು ಈಗಿನಗಿಂತಲೂ ಹೆಚ್ಚಿಸುವದಕ್ಕೆ ಬೇಕಾದ ಕೃಷಿಯನ್ನು ಮಾಡುವದರಲ್ಲಿಯೂ ಮತ್ತು ಗ್ರಾಮಾಂತರಗಳಲ್ಲಿ ಹಾಲಿ ರೂಢಿಯಾಗಿರುವ ಬೆಲ್ಲ ಮಾಡುವ ಕ್ರಮಗಳನ್ನು ಉತ್ತಮಪಡಿಸುವದರಲ್ಲಿಯೂ ತೊಡಗಬೇಕು. ಇದನ್ನು ಮಾತ್ರ ಸಾಧಿಸಿಕೊಂಡಲ್ಲಿ ಈ ದೇಶಯರು ಹೊರಗಿನ ಸಕ್ಕರೆಯು ಇಲ್ಲಿಗೆ ವಿಶೇಷವಾಗಿ ಬರುವದ

ರಿಂದ ತಮ್ಮ ಸರಕು ಹಿಂದುಳಿಯುವುದೆಂದು ಘಾಬರಿಪಡಕೆಲಸವಿಲ್ಲ. ಮ
ತ್ತು ಕಾಲಕ್ರಮೇಣ ಇಲ್ಲಿನ ಸಕ್ಕರೆಯನ್ನು ಅನ್ಯದೇಶಗಳಿಗೆ ರಫ್ತುಮಾ
ಡುವದಕ್ಕೂ ಕೂಡ ಸಾಧ್ಯವಾಗಬಹುದು.

Cattle Show at Hassan.

ಹಾಸನದಲ್ಲಿ ನಡೆದ ದನಗಳ ಪ್ರದರ್ಶನ.

ಕಳೆದ ಜನವರಿ ತಿಂಗಳು ೬ ಮತ್ತು ೭ನೆ ತಾರೀಖುಗಳಲ್ಲಿ ಹಾಸನ
ದ ಕಸಬೆಯಲ್ಲಿ ಒಂದು ದನಗಳ ಪ್ರದರ್ಶನವು ಜರುಗಿತು.

ಪ್ರದರ್ಶನಕ್ಕೆ ಸುಮಾರು ೪ ಸಾವಿರ ರಾಸುಗಳು ಬಂದಿದ್ದವು
ಮತ್ತು ೧೦ ಸಾವಿರದವರಿಗೂ ಪ್ರೇಕ್ಷಕರು ನೆರೆದಿದ್ದರು.

ಹಾಸನ ಡಿಸ್ಟ್ರಿಕ್ಟಿನಲ್ಲಿ ಶಾನೆ ಹಳಬರಾದ ಕಾಫಿ ಪ್ಲಾಂಟರ್ ಮಿ
ಆರ್. ಎ. ಆಂಡರ್ಸನ್‌ಯವರು (Mr. R. A. Anderson) ಇಂಥಾ ಪ್ರದ
ರ್ಶನಗಳ ಉದ್ದೇಶ ಮತ್ತು ಇವುಗಳಿಂದಾಗುವ ಪ್ರಯೋಜನಗಳನ್ನು ಕು
ರಿತು ಬಹಳ ಸ್ವಾರಸ್ಯವಾಗಿಯೂ ಮತ್ತು ಹಿತೋಪದೇಶಕರವಾಗಿಯೂ
ಒಂದು ಉಪನ್ಯಾಸವನ್ನು ಮಾಡಿ ಪ್ರದರ್ಶನವನ್ನು ಉಪಕ್ರಮಮಾಡಿ
ದರು. ಕ್ಯಾಟಲ್ ಡಿಸೀಸಸ್‌ಇನ್ಸ್‌ಪೆಕ್ಟರ್ ಮೆ|| ಎನ್. ನರಸಿಂಹಯ್ಯಂಗಾ
ರ್ರವರು ಪ್ರದರ್ಶನಕ್ಕೆ ದಯಮಾಡಿಸಿದ್ದು ದನಗಳ ಸಾಕಣಿಕೆಯ ವಿಷ
ಯವನ್ನು ಕುರಿತು ಕನ್ನಡದಲ್ಲಿ ಎಲ್ಲರಿಗೂ ಸುಲಭವಾಗಿ ಮನಸ್ಸಿಗೆ ಹತ್ತು
ವಂತೆ ಉಪನ್ಯಾಸ ಮಾಡಿದರು.

ಪ್ರದರ್ಶನಕ್ಕೆ ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ನಗರ, ಮೈಸೂರು ಡಿ
ಸ್ಟ್ರಿಕ್ಟಿನಲ್ಲಿ ನಾಗಮಂಗಲ, ಮುಂತಾದ ದೂರಪ್ರದೇಶಗಳಿಂದ ರಾಸುಗ
ಳು ಬಂದಿದ್ದವಲ್ಲದೆ ಅಮೃತಮಹಲ್ ಇಲಾಖೆಯ ಸೂಪರಿಂಟೆಂಡೆಂಟ್ ಮಿ.
ಎಚ್. ನಂಜುಂಡರಾಜೇಅರಸಿನವರು ಅಭಿಮಾನಿಸಿ ಅತಿ ಸುಂದರವಾದ ಕೆ
ವು ಅಮೃತಮಹಲ್ ದನಗಳನ್ನು ಕಳುಹಿಸಿದ್ದರು.

ಸಾಮಾನ್ಯವಾಗಿ ಪ್ರದರ್ಶನಕ್ಕೆ ಬಂದಿದ್ದ ರಾಸುಗಳೆಲ್ಲಾ ಬಹ

ಯೋಗಸಾಗಿದ್ದವು. ಈ ಪೈಕಿ ಉತ್ತಮವಾದ ದನಗಳಿಗೆ ೩೦ ರೂಪಾಯಿಯಿಂದ ೧ ರೂಪಾಯಿವರಿಗೂ ದರ್ಜೆವಾರು ೫೦ ಬಹುಮಾನಗಳು ಕೊಡಲ್ಪಟ್ಟವು. ಅಂತು ಈ ಬಾಬಿಗೆ ಒಟ್ಟು ೪೧೬ ರೂಪಾಯಿಗಳು ಖರ್ಚಾದವು.

ಪ್ರದರ್ಶನ ಕಾಲದಲ್ಲಿ ಬಾಜು ವೈದ್ಯದಾನದಲ್ಲಿಯೇ ಡಾಕ್ಟರ್ ಕೋಲ್ಮನ್‌ರವರ ಸಹಾಯದಿಂದ ಅಮೇರಿಕಾದೇಶದ ರಾಗಿ ಬಡಿಯುತಕ್ಕ ಯಂತ್ರ ಮತ್ತು ಕೆಲವು ತಿದ್ದುಪಡಿಯಾದ ನೇಗಿಲುಗಳಿಂದ ಕೆಲಸಮಾಡುವ ವಿಧಾನಗಳು ಜನಗಳಿಗೆ ಪ್ರತ್ಯಕ್ಷವಾಗಿ ತೋರಿಸಲ್ಪಟ್ಟವು.

ಈ ೨ ದಿನಗಳಲ್ಲಿ ದನಗಳ ವ್ಯಾಪಾರವು ಬಹಳ ಚೆನ್ನಾಗಿ ನಡೆಯಿತು. ಮತ್ತು ಹಾಸನದ ಸಮೀಪದಲ್ಲಿರುವ ಬಟ್ಲರುಕೊಪ್ಪಲದ ಹನುಮೇಗೌಡರ ಒಂದು ಜೊತೆ ಅಮೃತಮಹಲ್ ಎತ್ತಿಗೆ ೫೦೦ ರೂಪಾಯಿ ಬೆಲೆ ದೊರೆಯಿತು.

ಪ್ರದರ್ಶನ ಕಾರ್ಯಕ್ಕಾಗಿ ಬೇಕಾದ ದ್ರವ್ಯವನ್ನೆಲ್ಲಾ ಜನಗಳೇ ಬಹಳ ಉತ್ಸಾಹದಿಂದ ಚಂದಾ ಹಾಕಿ ಸುಮಾರು ೫೭೬ ರೂಪಾಯಿಗಳನ್ನು ಒದಗಿಸಿಕೊಟ್ಟರು. ಮತ್ತು ಪ್ರದರ್ಶನ ಕಾರ್ಯಗಳನ್ನು ಸರ್ಕಾರಿ ಉದ್ಯೋಗಸ್ಥರೂ ಮತ್ತು ಇತರ ದೊಡ್ಡಮನುಷ್ಯರುಗಳೂ ಸೇರಿ ಏಕಮನಸ್ಕರಾಗಿ ಸಂತೋಷ ಚಿತ್ತದಿಂದ ನೆರವೇರಿಸಿದ್ದು ಬಹಳ ಸ್ತೋತ್ರಾರ್ಹವಾಗಿರುತ್ತದೆ.

ಈ ಪ್ರದರ್ಶನವನ್ನು ಇನ್ನು ಮುಂದೆ ಖಾಯಮಾಗಿ ಪ್ರತಿವರುಷವೂ ನಡೆಸಬೇಕೆಂತ ಡಿಸ್ಟ್ರಿಕ್ಟ್ ಬೋರ್ಡಿನವರು ನಿಶ್ಚಯಿಸಿರುತ್ತಾರೆ.

Paddy Experiments.

ಬತ್ತದ ಅಜಮಾಯಿಷಿಗಳು.

ಕಳೆದ ಮೇ ತಿಂಗಳಲ್ಲಿ ರೆವಿನ್ಯೂ ಕಮೀಷನರವರು ಚಿಕ್ಕಬಾಣಾವರದ ಸಮೀಪ ಶಿವಪುರ ಗ್ರಾಮದಲ್ಲಿರುವ ರೆವೆರೆಂಡು ಪಿಕಾಟ್‌ರವರಿಗೆ (Revd. Picot) „ಚಾಲಿಧಾರ್" ಮತ್ತು „ಫೈರ್ ಆಸ್ಪ್ಯಾಡಿ" ಎಂಬ

ಹೊಸ ರಖಂ ಬತ್ತಗಳನ್ನು ಅಜಮಾಯಿಷಿ ಬಗ್ಗೆ ಕಳುಹಿಸಿ ಕೊಟ್ಟ
ರ. ಇವುಗಳನ್ನು ರೆವರೆಂಡ್ ಸಾಹೇಬರವರು ತಮ್ಮ ಜಮೀನಿನಲ್ಲಿ ಬೆಳ
ಅಜಮಾಯಿಷಿಯ ಫಲಿತಾಂಶವನ್ನು ತಿಳಿಸಿರುತ್ತಾರೆ. ಅದರ ಮುಖ್ಯತಾ
ತ್ಪರ್ಯವೇನಂದರೆ.—

ಈ ಬತ್ತಗಳನ್ನು ಮೂರು ತಾಕುಗಳಲ್ಲಿ ಪೈರು ಮಾಡಿತ್ತು.

ಮೊದಲನೇದು.—ಸಾಧಾರಣವಾಗಿ ನೀರುಹಾಯಿಸಿ ಪೈರುಮಾಡುವ ಬ
ತ್ತದಗದ್ದೆ; ಹಿತ್ತಲು ಗೊಬ್ಬರವನ್ನು ಸಾಮಾನ್ಯವಾಗಿ ಹೊಲಗ
ಳಿಗೆಹಾಕುವಷ್ಟು ಹಾಕಿತ್ತು; ಬಿತ್ತನೆಮಾಡಿದ್ದು ಜೂನ್ ೧
ತಾರೀಖಿನ ದಿನ.

ಎರಡನೇದು.—ದಿಂಡುಗಳು ಕಟ್ಟಿ ತುಂಡುಗಳಾಗಿ ವಿಂಗಡಿಸಿಕೊಂಡ
ಹೊಲ. ಜುಲೈ ೧೨ನೆ) ತಾರೀಖಿನ ದಿನ ಬಿತ್ತನೆಮಾಡಿದ್ದು
ಪೈರು ಒಂದು ಅಂಗುಲ ಬೆಳೆಯುವವರೆಗೂ ನೀರು ಹಾಯಿಸ
ತ್ತಿದ್ದು ಅನಂತರ ನೀರು ಬಿಡಲಿಲ್ಲ; ಗೊಬ್ಬರ ಮೊದಲನೆ ತಾ
ಕಿನಂತೆಯೆ.

ಮೂರನೇದು.—ದಿಂಡುಗಳು ಕಟ್ಟಿದ ಹೊಲ; ಇದಕ್ಕೆ ನೀರು ಹಾ
ಯಿಸಲೇ ಇಲ್ಲ; ಬಿತ್ತನೇ ಜುಲೈ ೧ನೆ ತಾರೀಖಿನ ದಿನ
ಗೊಬ್ಬರ ಮೇಲಿನಂತೆಯೇ.

೨-೩ನೆ ತಾಕುಗಳಲ್ಲಿ ದಿಂಡುಗಳನ್ನು ಕಟ್ಟಿ ಚೌಕಗಳನ್ನು ವಿಂಗಡಿ
ಸಿ ಕೊಂಡದ್ದು ಒಂದು ವೇಳೆ ಮಳೆ ಬಾರದೆ ಹೋದರೆ ನೀರು ಹಾಯಿಸು
ದಕ್ಕೋಸ್ಕರ.

ಮಳೆ ಬೆಂಗಳೂರಿನಲ್ಲಿ ಆದಷ್ಟೇ ಶಿವಪುರದಲ್ಲೂ ಆಯಿತೆಂದ
ಹೇಳಬಹುದು. ಆದರೆ ಈ ವರುಷ ೩೮ ಇಂಚು ಮಳೆ ಬಿತ್ತು. ಆಗ
ಸ್ಟ್ ಕೊನೇ ಭಾಗದಲ್ಲಿ ಭಾರಿಯಾಗಿ ಮಳೆ ಬಿತ್ತು. ಮುಂದೆ ಅಕ್ಟೋಬ
ರು ಆಖೈರು ಹೊತ್ತಿಗೆ ಮಳೆಯೇ ಇಲ್ಲ. ಈ ಗ್ರಾಮದಲ್ಲಿ ಸೆಪ್ಟೆಂಬರ
ಅಕ್ಟೋಬರು ತಿಂಗಳುಗಳಲ್ಲಿ ದೊಡ್ಡಮ್ಮ ಏಳುವದು ಶುರುವಾಗಿ, ಅವು
ಎನ್ನುವವರನ್ನು ಇಲಾಜು ಮಾಡುವದರಲ್ಲಿ ರೆವರೆಂಡ್ ಸಾಹೇಬರಿಗೂ ಅವರ

ಗಲಿಪಕಾರಣ ಅವರು ೨ ತಿಂಗಳ ಕಾಲ ಊರುಬಿಟ್ಟು ಹೋಗಬೇಕಾಗಿ ಬಂತು. ಇವರ ಗೈರು ಹಾಜರಿಯಲ್ಲಿ ಅಜಮಾಯಿಷಿ ತಾಕುಗಳಿಗೆ ಸಿಗಾ ಕಡಿಮೆಯಾದ್ದರಿಂದ ಪೈರುಗಳು ಅನೇಕವಾಗಿ ಕೆಟ್ಟುಹೋದವು.

ಆದಾಗೂ ಕೂಡ ರೆವರೆಂಡ್ ಸಾಹೇಬರವರು ಅಭಿಪ್ರಾಯಪಡುವ ದೇನೆಂದರೆ.—

೧. ಮೈಸೂರು ಸೀಮೆಯಲ್ಲಿ ಹೊಸರಖಂ ಪೈರುಗಳನ್ನು ಇಲ್ಲಿನ ಹವಾಸ್ಥಿತಿಗೆ ಹೊಂದಿಸಬೇಕಾದರೆ ೧-೨ ವರುಷಗಳಲ್ಲಿ ಸಾಧ್ಯವಾಗುವದಿಲ್ಲ.

೨. ಮೊದಲನೆ ತಾಕಿನಲ್ಲಿ ಹಾಕಿದ್ದ „ಚಾಲಿಥಾರ್‍" ಮತ್ತು „ಫೈರ್‍ಆಫ್ ಪ್ಯಾಡಿ"ಯು ಮೊದಲು ೬-೭ ವಾರಗಳು ಚೆನ್ನಾಗಿ ಬಂದು ಅನಂತರ ಶುಷ್ಕಾಂಗವಾಗಿ ಕೆಟ್ಟುಹೋಯಿತು.

೩. ಎರಡನೆ ಮೂರನೆ ತಾಕುಗಳಲ್ಲಿ ಇವು ಚೆನ್ನಾಗಿ ಆಗಿರುತ್ತವೆ. ಇದರಲ್ಲೂಕೂಡ ಮೂರನೆ ತಾಕಿನ ಪೈರು ೨ನೆ ತಾಕಿನದಕ್ಕಿಂತಲೂ ಉತ್ತಮವಾಗಿತ್ತು.

೪. ಈಗ ಬಂದ ಫಸಲಿನ ಬಿತ್ತವನ್ನೇ ಉಪಯೋಗಿಸಿಕೊಂಡು ಸಾಮಾನ್ಯ ರಾಗಿಯ ಹೊಲದಲ್ಲಿ ಬಿತ್ತನೆ ಮಾಡಬೇಕು. ಬಿತ್ತನೆ ಮತ್ತು ಕಟಾವು ಕಾಲಗಳು ರಾಗಿಯಂತೆಯೇ. ಸರಾಸರಿ ೩೫ ಇಂಚು ಮಳೆ ಸರಿಯಾಗಿ ಆದರೆ ಸಾಕು.

೫. „ಚಾಲಿಥಾರ್‍" ಮತ್ತು „ಫೈರ್‍ಆಫ್ ಪ್ಯಾಡಿ"ಎಂಬ ರಖಂಗಳು ಮೈಸೂರು ಸೀಮೆಯಲ್ಲಿ ಚೆನ್ನಾಗಿ ಫಲಿಸಬಹುದೆಂದು ತೋರುತ್ತೆ.

ಬುದ್ಧಿಶಾಲಿಗಳೂ, ನಮ್ಮದಸ್ಥರೂ ಮತ್ತು ಭೂವ್ಯವಸಾಯದಲ್ಲಿ ಆಸಕ್ತರೂ ಆದ ಜಮೀನ್ದಾರರು ರೆವರೆಂಡ್ ಸಾಹೇಬರವರ ಹಾಗೆಯೇ ಹೊಸ ರಖಂ ಪೈರುಗಳನ್ನು ಅಜಮಾಯಿಷಿ ಮಾಡಿ ತಮ್ಮ ಅನುಭವಕ್ಕೆ ಬರುವ ಫಲಿತಾಂಶಗಳನ್ನು ರೈತಾಪಿ ಜನರ ತಿಳುವಳಿಕೆಗೆ ತಂದರೆ ವ್ಯವಸಾಯಾಭಿವೃದ್ಧಿಕಾರ್ಯಕ್ಕೆ ಬಹಳ ಸಹಾಯ ಮಾಡಿದಂತಾಗುವದು.

———o———

Revenue Appeals.

ರೆವಿನ್ಯೂ ಅಪೀಲುಗಳು.

೧೯೦೮—೯ನೆ ಇಸವಿಯ ಅಪೀಲು ನಂಬರ್ ೯೪.

ಅಪೀಲುವಾದಿ.—ನಂಜುಂಡಯ್ಯ.

ಕೇಸಿನ ವಿದ್ಯಮಾನ.—ಕಂದಾಯ ಬಾಕಿಗೋಸ್ಕರ ವಾದಿಯ ತಂದೆ ಈರೇಗೌಡನ ಖಾತೆಯಲ್ಲಿದ್ದ ಒಂದು ಸರ್ವೆ ನಂಬರು ಕ್ರಮವರಿತು ಹರಾಜಾಗಿ ಮುದ್ದಬೈರನೆಂಬುವನ ಹೆಸರಿಗೆ ೧೦೦ ರೂಪಾಯಿಗೆ ನಿಂತಿತು. ಡಿವಿಜನ್ ಆಫೀಸರವರು ಹರಾಜನ್ನು ಮಂಜೂರು ಮಾಡಿದ ೪ ತಿಂಗಳಮೇಲೆ ಈರೇಗೌಡನ ವಿಭಕ್ತ ಜ್ಞಾತಿಗಳಾದ ಹುಚ್ಚೇಗೌಡ ಮತ್ತು ಇವನ ತಮ್ಮ ಹೊನ್ನಪ್ಪನೆಂಬುವರು ಹರಾಜು ಕ್ಯಾನ್ಸಲ್ ಬಗ್ಗೆ ಡೆಪ್ಯುಟಿ ಕಮಿಷನರವರಲ್ಲಿ ಅರ್ಜಿ ಗುಜರಾಯಿಸಿಕೊಂಡು, ಸದರಿ ಜಮೀನು ಈರೇಗೌಡನ ಹೆಸರಿನಲ್ಲಿದ್ದಾಗ್ಯೂ ಅದು ಪಿತರಾರ್ಜಿತವಾದ ಸ್ವತ್ತೆಂತಲೂ, ಬಹುಕಾಲದಿಂದ ತಮ್ಮ ಸ್ವಾಧೀನಾನುಭವದಲ್ಲಿಯೇ ಇರುತ್ತೆಂತಲೂ, ಹರಾಜು ಸಂಗತಿಯು ತಮಗೆ ಗೊತ್ತಿರಲಿಲ್ಲವೆಂತಲೂ ಮತ್ತು ಮ ಏ ನಂಜುಂಡಯ್ಯನು ತಮಗೆ ಮೋಸಪಡಿಸಬೇಕೆಂಬ ಉದ್ದೇಶದಿಂದ ಸದರಿ ಜಮೀನನ್ನು ಹರಾಜಿಗೆ ಗುರಿಪಡಿಸಿದನೆಂತಲೂ ಬಯಾನಿಸಿದರು. ತಾಲ್ಲೂಕು ಅಮಲ್ದಾರರವರು ಅರ್ಜಿದಾರರಿಗೆ ಹರಾಜು ನೋಟೀಸನ್ನು ಕಳುಹಿಸುವದಕ್ಕೆ ಅವರು ತಮ್ಮ ಹೆಸರುಗಳನ್ನು ಸ್ಪೆಷಲ್ ರಿಜಿಸ್ಟರಿನಲ್ಲಿ ದಾಖಲು ಮಾಡಿಸಿರಲಿಲ್ಲವೆಂತಲೂ ಮತ್ತು ಜಮೀನನ್ನು ಬಹಿರಂಗವಾಗಿ ಹರಾಜು ಮಾಡಿರುವದರಿಂದ ತಮಗೆ ಹರಾಜು ಸಂಗತಿಯು ಗೊತ್ತಿರಲಿಲ್ಲವೆಂದು ಅವರು ಹೇಳುವದನ್ನು ನಂಬುವದಕ್ಕಾಗುವದಿಲ್ಲವೆಂತಲೂ ರಿಪೋರ್ಟ್ ಮಾಡಿದ್ದರಮೇಲೆ, ಅಸಿಸ್ಟೆಂಟು ಕಮಿಷನರವರು ಈ ಅರ್ಜಿಯನ್ನು ತಿರಸ್ಕರಿಸಿದರು.

ಈ ಹುಕುಮಿನ ಮೇಲೆ ಅರ್ಜೀದಾರರು ಡೆಪ್ಯುಟಿ ಕಮಿಷನರವರಲ್ಲಿ ಅಪೀಲು ಮಾಡಿಕೊಂಡು ಸದರಿ ಜಮೀನು ಕಮ್ಮಿ ಖರೀದಿಗೆ ಹರಾಜಾಗಿರುವದಾಗಿಯೂ, ಅದನ್ನೇ ಅಪೀಲು ವಾದಿ ನಂಜುಂಡಯ್ಯನು ಈಚೆಗೆ ೩೦೦ ರೂಪಾಯಿಗಳಿಗೆ ಹರಾಜುದಾರನಿಂದ ಕೊಂಡುಕೊಂಡಿರುವನೆಂದೂ ಹೇಳಿಕೊಂಡರು. ಹರಾಜು ನಡುವಳಿಕೆಯಲ್ಲಿ ಅಕ್ರಮಗಳೇನೂ ಕಂಡುಬರುವ

ಬಿಲ್ಲವೆಂಬ ಆಧಾರದಮೇಲೆ ಡೆಪ್ಯುಟಿ ಕಮಿಷನರವರು ಅಪೀಲನ್ನು ವಜಾ ಮಾಡಿದರು.

ಇದರಮೇಲೆ ಹುಚ್ಚೇಗೌಡನು ರೆವಿನ್ಯೂ ಕಮಿಷನರವರಲ್ಲಿ ೨ನೇ ಅಪೀಲು ತಂದನು.

ಚರ್ಚಾಸ್ಪದವಾದ ಜಮೀನು ಶಾನೆ ಬೆಲೆ ಬಾಳತಕ್ಕದ್ದೆಂತ ಕಂಡುಬಂದದ್ದರಿಂದಲೂ ಮತ್ತು ವಾದಿಪ್ರತಿವಾದಿಗಳುಭಯತ್ರರೂ ಹರಾಜು ಕ್ಯಾನ್ಸಲ್ ಮಾಡಬಹುದೆಂದು ಒಪ್ಪಿದ್ದರಿಂದಲೂ ರೆವಿನ್ಯೂ ಕಮಿಷನರವರು ಹರಾಜನ್ನು ರದ್ದುಮಾಡಿದರು. ಅಲ್ಲದೆ ಜಮೀನು ಪಿತರಾರ್ಜಿತವಾದ ಸ್ವತ್ತಾಗಿ ಅಪೀಲುದಾರ ಹುಚ್ಚೇಗೌಡನ ಸ್ವಾಧೀನಾನುಭವದಲ್ಲಿರುತ್ತೆಂಬ ಅಂಶವು ಈರೇಗೌಡನು ದೊಡ್ಡಬಳ್ಳಾಪುರ ಮುನ್ಸಿಫ್ ಕೋರ್ಟಿನಲ್ಲಿ ೧೯೦೧— ೦ನೆ ಇಸವಿಯ ೪೫ನೆ ನಂಬರು ಅಸಲ್ ದಾವೆಯಲ್ಲಿ ಕೊಟ್ಟಿರುವ ಕೈಫಿಯತ್ತಿನಿಂದಲೂ ಮತ್ತು ಸಬ್ ಡಿವಿಜನ್ ಆಫೀಸರವರ ವಿಚಾರಣೆಯಲ್ಲಿಯೂ ವ್ಯಕ್ತಪಟ್ಟಿರುತ್ತೆ; ಈರೇಗೌಡನು ಮತ್ತು ಇವನ ಮಗ ನಂಜುಂಡಯ್ಯನು ಸರ್ಕಾರಿ ನೌಕರರಾಗಿ, ಗೌರ್ನಮೆಂಟು ಕಂದಾಯದ ವಸೂಲಿಗೆ ಜವಾಬ್ದಾರರಾಗಿದ್ದುಕೊಂಡು, ಕಂದಾಯವು ಬಾಕಿ ನಿಲ್ಲುವದಕ್ಕೆ ಅವಕಾಶಕೊಟ್ಟು, ಜಮೀನನ್ನು ಮೋಸದಿಂದ ಹರಾಜಿಗೆ ಗುರಿಪಡಿಸಿ, ಅನಂತರ ಅದನ್ನು ತಾನೇ ನೆಪಮಾತ್ರದ ಖರೀದಿಗೆ ಪಡೆದಿರುತ್ತಾರೆ; ಗ್ರಾಮ ನೌಕರರಲ್ಲಿ ಇಂಥಾ ನಡತೆಯು ಶಿಕ್ಷಾರ್ಹವಾದದ್ದು; ತಾವು ಸುಸ್ಥಿತಿಯಲ್ಲಿರುವದಿಲ್ಲ ಮತ್ತು ದ್ರವ್ಯಾನುಕೂಲತೆ ಇಲ್ಲದ್ದರಿಂದ ಈರೇಗೌಡನು ಜಮೀನು ಕಂದಾಯವನ್ನು ಬಾಕಿ ನಿಲ್ಲಿಸಿಕೊಳ್ಳಬೇಕಾಗಿ ಬಂತೆಂದು ಇವರು ಹೇಳುವ ಸಬಬುಗಳು ಶುದ್ಧ ಸುಳ್ಳು ಮತ್ತು ನಂಬತಕ್ಕವಲ್ಲವೆಂಬ ಮೇಲ್ಕಂಡ ಕಾರಣಗಳಿಂದ ರೆವಿನ್ಯೂ ಕಮಿಷನರವರು ಸರ್ಕಾರದ ಆಡಳಿತದಲ್ಲಿ ನಿಯತ್ತು ಮತ್ತು ಬಿಗಿಯನ್ನು ಕಾಪಾಡುವದಕ್ಕೋಸ್ಕರ ಗ್ರಾಮ ನೌಕರರನ್ನು ಮೋಸಕೃತ್ಯಗಳು ಕಂಡುಬಂದಾಗ ತಕ್ಕರೀತಿಯಲ್ಲಿ ಶಿಕ್ಷಿಸುವದು ಬಹಳ ಅವಶ್ಯಕವೆಂತ ಭಾವಿಸಿ, ಈರೇಗೌಡನನ್ನು ಒಂದು ವರುಷ ಸಸ್ಪೆಂಡು ಮಾಡಬೇಕೆಂತಲೂ, ಈ ಕಾಲದಲ್ಲಿ ಪಟೇಲಿ ಕೆಲಸ ನೋಡುವ ಹಕ್ಕನ್ನು ನಂಜುಂಡಯ್ಯನಿಗೆ ತಪ್ಪಿಸಿ ಇವರಿಗೆ ಸಂಬಂಧಪಡದ ಬೇ

ರೊಬ್ಬ ಲಾಯಖಾದ ಮನುಷ್ಯನನ್ನು ನೇಮಕ ಮಾಡಬೇಕೆಂದೂ ಹುಕುಂ ಮಾಡಿದರು.

ಗೌರ್ನಮೆಂಟಿನವರ ತೀರ್ಮಾನ.—ಹುಚ್ಚೇಗೌಡನ ಪ್ರತಿಕಕ್ಷಿಗಳು ಹರಾಜು ಕ್ಯಾನ್ಸಲ್ ಆಗಬಹುದೆಂದು ಕಬೂಲ್ ಪಟ್ಟಾಗ್ಯೂ ಹರಾಜಾದ ೬ ತಿಂಗಳ ಮೇಲೆ ಹುಚ್ಚೇಗೌಡನು ಹರಾಜು ಕ್ಯಾನ್ಸಲ್ ಬಗ್ಗೆ ಬರೆದುಕೊಂಡ ಅರ್ಜಿಯು ಲಿಮಿಟೇಷನ್ ಆಕ್ಟು ಪ್ರಕಾರ ಕಾಲಾತೀತವಾದುದರಿಂದ, ಇವನ ಅಪೀಲನ್ನು ರೆವಿನ್ಯೂ ಕಮೀಷನರವರು ತಿರಸ್ಕರಿಸಬೇಕಾಗಿತ್ತೆಂಬುವದೇ ಈಗಿನ ಅಪೀಲುದಾರನ ಮುಖ್ಯ ತಕರಾರು. ಇಂಥಾ ಅರ್ಜಿಗಳನ್ನು ದಾಖಲು ಮಾಡುವದಕ್ಕೆ ಲಿಮಿಟೇಷನ್ ಅವಧಿಯು ಲ್ಯಾಂಡು ರೆವಿನ್ಯು ಕೋಡಿನಲ್ಲಿ ವಿಧಾಯಕವಾಗಿರುತ್ತದೆ. ಲಿಮಿಟೇಷನ್ ಆಕ್ಟು ಇದಕ್ಕೆ ಅನ್ವಯಿಸುವದಿಲ್ಲ. ಆದಕಾರಣ ಹರಾಜು ಕ್ಯಾನ್ಸಲ್ ಬಗ್ಗೆ ಹುಕುಂಮಾಡಲು ರೆವಿನ್ಯೂ ಕಮೀಷನರವರಿಗೆ ಅಧಿಕಾರವಿಲ್ಲವೆಂದು ಹೇಳುವದಕ್ಕಾಗುವದಿಲ್ಲ. ಆದ್ದರಿಂದ ಹರಾಜು ಕ್ಯಾನ್ಸಲ್ ಮಾಡಿದ ಭಾಗದಲ್ಲಿ ರೆವಿನ್ಯೂ ಕಮೀಷನರವರ ಹುಕುಮಿನಮೇಲೆ ತಂದಿರುವ ಅಪೀಲನ್ನು ಪಡಿಯುವದಕ್ಕಾಗುವದಿಲ್ಲ.

೨. ಆದರೆ ಪಟೇಲನನ್ನು ಸಸ್ಪೆಂಡು ಮಾಡಿ ಇವನ ಮಗನಿಗೂ ಪಟೇಲಿ ಕೆಲಸವನ್ನು ತಪ್ಪಿಸಿರುವ ವಿಚಾರದಲ್ಲಿ, ಕಂದಾಯ ಬಾಕಿಗೆ ಇವರೆಬೇಕೆಂತ ಜಮೀನನ್ನು ಹರಾಜಿಗೆ ತಂದರೆಂದು ಹೇಳುವದಕ್ಕಾಗುವದಿಲ್ಲ. ಯಾಕಂದರೆ, ಕಂದಾಯವನ್ನು ಕೊಡತಕ್ಕವನು ಕೊಡದೆ ತಪ್ಪಿಹೋದ್ದರಿಂದ ಕಂದಾಯವು ಬಾಕಿ ನಿಂತಿತು. ರಿಜಸ್ಟರ ಹಿಡುವಳಿದಾರನಲ್ಲದ ಯಾವಾತನು ಒಂದು ಜಮೀನಿನಲ್ಲಿ ತನಗೆ ಹಕ್ಕಿದೆಯೆಂದು ಹೇಳಿ ಸದರಿ ಜಮೀನು ಸಂಬಂಧವಾದ ಕಂದಾಯ ಬಾಕಿ ತಗಾದೆ ನೋಟೀಸುಗಳನ್ನು ತನಗೂ ಕೊಡಬೇಕೆಂದು ಅಪೇಕ್ಷಿಸುತ್ತಾನೋ ಅಂಥವನು ತನ್ನ ಹೆಸರನ್ನು ಇದಕ್ಕಾಗಿಟ್ಟಿರುವ ಸ್ಪೆಷಲ್ ರಿಜಸ್ಟರಿನಲ್ಲಿ ದಾಖಲುಮಾಡಿಸಿಕೊಳ್ಳತಕ್ಕದ್ದೆಂದು ಗೌರ್ನಮೆಂಟಿನವರು ಪದೇ ಪದೇ ಹುಕುಂ ಮಾಡುತ್ತಲೆ ಇರುತ್ತಾರೆ. ಹೀಗಿರುವಲ್ಲಿ ಸ್ಪೆಷಲ್ ನೋಟೀಸ್ ರಿಜಸ್ಟರಿನಲ್ಲಿ ದಾಖಲಿಲ್ಲದ ಇತರರ ಹಕ್ಕುಗಳೇನಿದ್ದರೂ ಮೇಲ್ಪಟ್ಟ ಅಧಿಕಾರಿಗಳಿಗೆ ತಿಳಿಸುವ ಜವಾಬ್ದಾರಿಯನ್ನು

ಗ್ರಾಮ ನೌಕರನಮೇಲೆ ಹೊರಿಸುವದು ನ್ಯಾಯವಲ್ಲ. ಆದಕಾರಣ ಈ ರೇಗೌತನಿಗೂ ಮತ್ತು ಇವನ ಮಗನಿಗೂ ಪಟೇಲಿ ಕೆಲಸವನ್ನು ತಪ್ಪಿಸಬೇಕೆಂದು ಮಾಡಿರುವ ಹುಕುಮನ್ನು ರದ್ದು ಮಾಡಿರುತ್ತೆ.

Potato Moth Pest. *

ಆಲೂಗಡ್ಡೆಯನ್ನು ಕೆಡಿಸುವ ಹುಳ.

ಸೆಂಟ್ರಲ್‌ಪ್ರಾವಿನ್ಸಸ್ಸಿನಲ್ಲಿ ಬೀಜಕ್ಕಾಗಿ ಇಡುವ ಗಡ್ಡೆಗಳನ್ನು ಒಂದು ಬಗೆಯ ಕಂಬಳಿ ಹುಳುವು ತಿಂದು ಕೆಡಿಸುತ್ತದೆ. ಆಲೂಗಡ್ಡೆಯು ಯೂರೋಪಿನ ದಕ್ಷಿಣಕಡೆಗಳಿಂದ ಇಂಡಿಯಾ ದೇಶಕ್ಕೆ ಬೊಂಬಾಯಿ ರೇವಿನ ಮುಖಾಂತರ ಪ್ರತಿ ವರುಷವೂ ವಿಶೇಷವಾಗಿ ಬರುತ್ತಿರುವುದರಿಂದ ಈ ಹುಳುವು ಆ ಕಡೆಯಿಂದ ಬಂದಿರಬಹುದೆಂದು ಊಹಿಸಬೇಕಾಗಿದೆ. ಎಳೆಗೆಂಪಾಗಿರುವ ಒಂದುತರದ ಸಣ್ಣ ದುಂಬಿಯು (Moth) ಇದಕ್ಕೆ ತಾಯಿಹುಳುವಾಗಿರುತ್ತದೆ.

ದುಂಬಿಯು ಛಳಿಗಾಲದಲ್ಲಿ ಆಲೂಗಡ್ಡೆ ಗಿಡಗಳ ಎಲೆಗಳಮೇಲೆ ಮೊಟ್ಟೆ ಇಡುತ್ತದೆ. ಮೊಟ್ಟೆಗಳೊಡೆದು ಸಣ್ಣ ಸಣ್ಣ ಕಂಬಳಿಹುಳುಗಳಾಗುವುವು. ಈ ಹುಳುವಿನ ಮೈ ಮಾಸಲುಬಿಳುಪಾಗಿಯೂ ತಲೆ ಕಪ್ಪಗೂ ಇರುತ್ತವೆ.

ಈ ಹುಳುವೇ ಬಳಿಕ ಪುನಃ ದುಂಬಿ ರೂಪವನ್ನು ತಾಳಿ ತಿರಿಗಿ ಮೊಟ್ಟೆ ಇಡುತ್ತದೆ. ಹೀಗೆ ದುಂಬಿ ರೂಪವನ್ನು ತಾಳುವದಕ್ಕೆ ಒಂದೇ ತಿಂಗಳು ಹಿಡಿಯುವದರಿಂದ ಇತರ ಸ್ಥಿತಿಗಳು ಅನುಕೂಲವಾಗಿದ್ದರೆ ಹುಳು ಅತಿವೇಗವಾಗಿ ವೃದ್ಧಿಯಾಗುತ್ತದೆ.

ಪೈರು ನಿಂತಿರುವಾಗ ಹುಳುವು ಎಲೆಗಳ ದಂಟನ್ನೂ ಮತ್ತು ಗಿಡದ ಮೇಲಿನ ಸುಳಿಗಳನ್ನು ಕೊರೆದುಹಾಕುತ್ತದೆ. ಇದರಿಂದ ಗಿಡಗಳು ಒಣಗಿಹೋಗುವವು. ಇನ್ನೇನೂ ಹೆಚ್ಚಿನ ಕೆಡಕು ಆಗುವದಿಲ್ಲ.

ಫಸಲು ರೇಖಿಯಾಗಿ ಗಡ್ಡೆಗಳನ್ನು ಸೇರಿಸಿಟ್ಟ ತರುವಾಯ ದುಂಬಿ

* ಸೆಂಟ್ರಲ್ ಪ್ರಾವಿನ್ಸಸ್ ಅಗ್ರಿಕಲ್ಚರಲ್ ಗೆಜೆಟ್, ಜನವರಿ ೧೯[illegible]

ಯು ಗಡ್ಡೆಗಳ ಕಣ್ಣುಗಳಲ್ಲಿ ಮೊಟ್ಟೆಗಳಿಡುತ್ತವೆ. ತರುವಾಯ ಇವುಗಳಿಂದಾಗುವ ಕಂಬಳಿ ಹುಳುಗಳು ಗಡ್ಡೆಗಳನ್ನು ನಡುವೆ ಕೊರಕಲು ಮಾಡಿ ಕೆಡಿಸುತ್ತವೆ. ಗದುಗುಗಳಲ್ಲಿ ಸಾಮಾನ್ಯವಾಗಿ ಗಡ್ಡೆಗಳನ್ನು ಮರೆಮಾಡದೆ ಹಾಗೆಯೇ ರಾಸಿಹಾಕಿಡುವುದರಿಂದ ಇಲ್ಲಿ ಈ ಹುಳುವು ಬಹಳ ಜಾಗ್ರತೆಯಾಗಿ ವೃದ್ಧಿಹೊಂದಿ ಹಾನಿ ನಷ್ಟ ಉಂಟುಮಾಡುವದು. ಮೊದಲೆ ನೋಡಿಕೊಳ್ಳದೇ ಕೊಂಚ ಬೇಹುಷಾರಾಗಿದ್ದರೆ ೨-೩ ತಿಂಗಳುಗಳಲ್ಲಿ ರಾಸಿ ರಾಸಿಯನ್ನೇ ಅನಾಮತ್ತಾಗಿ ಕೊರೆದು ಬಿತ್ತನೆಗೆ ಅನುಪಯೋಗವಾಗಿ ಮಾಡಿಬಿಡುವದು. ಈ ಹುಳದ ಹಾವಳಿಯನ್ನು ತಪ್ಪಿಸಬೇಕಾದರೆ ಗಡ್ಡೆಗಳನ್ನು ಕೂಡಿಡುವ ಕಾಲದಲ್ಲಿ ಅವುಗಳ ಮೇಲಿರಬಹುದಾದ ಮೊಟ್ಟೆಗಳನ್ನು ನೋಡಿ, ಕೊಂದು, ಪುನಃ ದುಂಬಿಗಳು ಸೇರದಂತೆ ಗಡ್ಡೆಗಳನ್ನು ಚೆನ್ನಾಗಿ ಮರೆಮಾಡಿ ಮುಚ್ಚಿಡಬೇಕು.

ಬೀಜಕ್ಕಾಗಿ ಜಮಾಯಿಸಿಡುವ ಗಡ್ಡೆಗಳನ್ನು “ಕ್ರೂಡ್ ಆಯಿಲ್ ಎಮಲ್ಷನ್” (Crude Oil Emulsion) ಎಂಬ ದ್ರಾವಕ ಬೆರತ ನೀರಿನಲ್ಲಿ ೫ ನಿಮಿಷಗಳು ಚೆನ್ನಾಗಿ ನೆನೆಹಾಕಿ, ಮರದ ನೆರಳಿನಲ್ಲಿ ಸ್ವಲ್ಪವೂ ತೇವವಿಲ್ಲದಹಾಗೆ ಒಣಗಿಸಿ, ಅನಂತರ ಗೂಡೆಗಳಲ್ಲಿ ತುಂಬಿ ಒಣಗಿದ ಮರಳನ್ನು ಮೇಲೆಹಾಕಿ ಮುಚ್ಚಿಟ್ಟರೆ ದುಂಬಿಗಳಿಗೆ ಅವಕಾಶ ತಪ್ಪುವದು. ೪೦ ಸೀಸೆ ನೀರಿಗೆ ಒಂದು ಸೀಸೆಯಂತೆ ದ್ರಾವಕವನ್ನು ಬೆರಸಿದರೆ ಸಾಕು. ಈ ಗಡ್ಡೆಗಳನ್ನು ೩ ವಾರಕ್ಕೊಂದಾವರ್ತಿ ನೋಡುತ್ತಿದ್ದು ಕೊಳೆತ ಗಡ್ಡೆಗಳೇನಾದರೂ ಇದ್ದರೆ ಅವನ್ನು ತೆಗದು ಬಿಸಾಡಬೇಕು. ಇದಕ್ಕೆ ಖರ್ಚು ಅತಿ ಸುಲಭವಾಗಿದೆ. ಪ್ರಾಯಶಃ ಒಂದು ಮಣ ಗಡ್ಡೆಗೆ ಒಂದಾಣೆ ತಗಲಿದರೆ ಹೆಚ್ಚು.

ಈ ದ್ರಾವಕವು ಕಲ್ಕತ್ತಾ ಪಟ್ಟಣದಲ್ಲಿರುವ ಮೆ|| ಬಾತ್‌ಗೇಟ್ ಅಂಡ್ ಕೊಯವರಲ್ಲಿ (Messrs. Bathgate & Co.) ೫ ಗ್ಯಾಲನ್ನಿನ ಪೀಪಾಯಿಗೆ ಆರೂಕಾಲು ರೂಪಾಯಿನಂತೆ ದೊರೆಯುತ್ತದೆ. ಅಲ್ಲಿಂದ ಬೇಕಾದರೂ ತರಿಸಿಕೊಳ್ಳಬಹುದು; ಅಥವಾ ಚಿಲ್ಲರೆಯಾಗಿ ಬೇಕಾದರೆ ಸೆಂಟ್ರಲ್ ಪ್ರಾವಿನ್ಸಸ್‌ನಲ್ಲಿ ಹೋಷಂಗಾಬಾದ್‌ನಲ್ಲಿರುವ ನಾರ್ದರ್ನ ಸರ್ಕಲ್ ಡೆಪ್ಯುಟಿ ಡೈರೆಕ್ಟರ್ ಆಫ್ ಅಗ್ರಿಕಲ್ಚರ್‌ರವರಿಗೆ (Deputy Director of

Agriculture, Northern Circle, Hoshangabad, Central Provinces) ಬರೆದುಕೊಂಡಾದರೂ ತರಿಸಿಕೊಳ್ಳಬಹುದು.

Government Proceedings.
ಸರ್ಕಾರಿ ಹುಕುಂಗಳು.

ಅಮಲ್ದಾರರೂ ಮತ್ತು ಡೆಪ್ಯುಟಿ ಅಮಲ್ದಾರರೂ ಬಾಂದು ಇನ್ಸ್ಪೆಕ್ಷನ್ ಕೆಲಸವನ್ನೂ ಮತ್ತು ಶೇಕದಾರರು ತಯಾರುಮಾಡುವ ಮೋಜಣಿ ಮತ್ತು ತತ್ಸಂಬಂಧವಾದ ಇತರ ರಿಕಾರ್ಡುಗಳ ಮೊಕಾಬಿಲೆ ಕೆಲಸವನ್ನೂ ತೃಪ್ತಿಕರವಾಗಿ ಮಾಡಬೇಕಾದರೆ ಸರ್ವೆ ಕೆಲಸದಲ್ಲಿ ಕ್ರಮವಾಗಿ ತರಬೇತು ಹೊಂದುವದು ಅವಶ್ಯಕವಾಗಿರುವುದರಿಂದ ಬರುವ ಆಗಸ್ಟು ತಿಂಗಳಿಂದ ೩ ತಿಂಗಳುವರಿಗೂ ಬೆಂಗಳೂರಿನಲ್ಲಿ ಒಂದು ಟ್ರೇನಿಂಗ್ ಕ್ಲಾಸನ್ನು ಇಡಬೇಕೆಂತಲೂ, ೭ ವರುಷಕ್ಕಿಂತ ಕಡಿಮೆ ಸರ್ವಿಸುದಾರರಾದ ಎಲ್ಲಾ ಅಮಲ್ದಾರರು ಮತ್ತು ಡೆಪ್ಯುಟಿ ಅಮಲ್ದಾರರುಗಳನ್ನೂ ಮತ್ತು ಅಮಲ್ದಾರಿ ಡೆಪ್ಯುಟಿ ಅಮಲ್ದಾರಿ ಕೆಲಸಗಳಿಗೆ ಲಾಯಖಾದವರೆಂದು ಚುನಾಯಿಸಲ್ಪಟ್ಟಿರುವ ಕೆಳ ನೌಕರರನ್ನೂ ಮೂರು ಪಂಗಡವಾಗಿ ವಿಂಗಡಿಸಿಕೊಂಡು ಒಂದೊಂದು ಪಂಗಡದವರಿಗೂ ಒಂದು ತಿಂಗಳ ಕಾಲ ಮುಖ್ಯವಾಗಿ ಮೋಜಣಿ ಕೆಲಸ, ಬಾಂದುಗಳ ತನಿಖೆ ಮತ್ತು ಬಾಂದು ಅಳಿಸಿಹೋಗಿರುವ ಕಡೆ ಹೊಸದಾಗಿ ಹಾಕುವ ಕೆಲಸ ಇವುಗಳಲ್ಲಿ ತರಬೇತು ಮಾಡಬೇಕೆಂತಲೂ ಗೌರ್ನಮೆಂಟಿನವರು ಹುಕುಂ ಮಾಡಿರುತ್ತಾರೆ.

ಶಾನುಭೋಗರುಗಳು ೨೦ ಜನಕ್ಕೆ ಕಮ್ಮಿಯಿಲ್ಲದೆ ತಮ್ಮ ಸ್ವಂತ ಖರ್ಚಿನಿಂದಲೇ ಸರ್ವೆ ಕೆಲಸವನ್ನು ಕಲಿಯುವದಾದರೆ ಆಯಾಯ ಡಿಸ್ಟ್ರಿಕ್ಟಿನಲ್ಲಿ ಒಂದು ಮೋಜಣಿ ಕ್ಲಾಸನ್ನು ಏರ್ಪಡಿಸಿ ಡಿಸ್ಟ್ರಿಕ್ಟು ಸರ್ವೆಯರ ಮೂಲಕ ಅವರುಗಳಿಗೆ ಪಾಠಗಳನ್ನು ಹೇಳಿಸುವದಕ್ಕೆ ಡೆಪ್ಯುಟಿ ಕಮಿಷನರುಗಳೇ ತಕ್ಕ ಏರ್ಪಾಟುಗಳನ್ನು ಮಾಡಬಹುದಾಗಿರುತ್ತೆ.

Occasional Notes.
ವಿವಿಧ ವೃತ್ತಾಂತಗಳು.

೧. ಆಲೂಗಡ್ಡೆಯ ವ್ಯವಸಾಯ ವಿಷಯವಾಗಿ ಮ|| ಎಚ್. ಪಿ. ಕೃಷ್ಣಮಾಚಾರ್ಯರವರು ಬರೆದಿರುವ ಒಂದು ಪುಸ್ತಕವನ್ನು ಈ ಸಂಚಿಕೆಯೊಂದಿಗೆ ಸಪ್ಲಿಮೆಂಟಾಗಿ ರವಾನಿಸಿರುತ್ತೆ.

---

೨. ತೆಂಗು ಚೆನ್ನಾಗಿ ಬೆಳೆಯಬೇಕಾದರೆ ಮರವು ಗಾಳಿ ವಿಶೇಷವಾಗಿ ಬೀಸದ ಕಡೆ ಇರಬೇಕು. ಸೂರ್ಯರಶ್ಮಿ ಚೆನ್ನಾಗಿ ಬೀಳಬೇಕು. ಜಮೀನು ತುಂಬಾ ಸಾರವತ್ತಾಗಿರಬೇಕು. ಮತ್ತು ನೀರಾಸರೆಯೂ ಚೆನ್ನಾಗಿರಬೇಕು.-ಕುಂಭಕೋಣಂ ಅಗ್ರಿಕಲ್ಚರಲ್ ಅಸೋಸಿಯೇಷನ್ ಮಾಸಪತ್ರಿಕೆ, ನವಂಬರು ೧೯೦೯.

---

೩. ಧಾರ್ವಾಡದಲ್ಲಿ ರೂಢಿಯಲ್ಲಿರುವ ಅಮೇರಿಕಾದೇಶದ ಹತ್ತಿಯನ್ನು ಈಸ್ಟರ್ನ್ ಬೆಂಗಾಲ್ ಮತ್ತು ಆಸ್ಸಾಮಿಗೆ ಸೇರಿದ ಪಾಬ್ನ ಡಿಸ್ಟ್ರಿಕ್ಟಿನಲ್ಲಿ ಬೆಳೆದು ಅಜಮಾಯಿಷಿಮಾಡಿದ್ದರಲ್ಲಿ ಬಹಳ ಒಳ್ಳೆ ಫಸಲು, ಅಂದರೆ ಎಕರೆಗೆ ೧೧ ಮಣದಂತೆ, ಹತ್ತಿ ಹುಟ್ಟುವಳಿಯಾಗಿರುತ್ತಂತೆ.

---

೪. ಈಸ್ಟರ್ನ್ ಬೆಂಗಾಲ್ ಮತ್ತು ಆಸ್ಸಾಂನಲ್ಲಿ ರೈತಾಬಿಜನಗಳಿಗೆ ಒಳ್ಳೆ ಬಿತ್ತನೆ ಬೀಜ, ಗೊಬ್ಬರ ಮತ್ತು ವ್ಯವಸಾಯ ಹತ್ಯಾರುಗಳನ್ನು ಸರಬರಾಯಿಮಾಡುವದಕ್ಕಾಗಿ ಸರ್ಕಾರದವರು ಒಂದು ಕೋಠಿಯನ್ನು ಏರ್ಪಡಿಸಿರುತ್ತಾರೆ. ಹೋದ ವರುಷ ಈ ಕೋಠಿಯ ಬಾಬಿಗೆ ಸರ್ಕಾರದಿಂದ ಸುಮಾರು ೬,೦೦೦ ರೂಪಾಯಿಗಳು ಖರ್ಚಾಗಿ ಬೀಜಗಳ ಮಾರಾಟದಿಂದ ಸುಮಾರು ೨,೫೦೦ ರೂಪಾಯಿಗಳು ಸರ್ಕಾರಕ್ಕೆ ಹುಟ್ಟುವಳಿಯಾಗಿರುತ್ತಂತ ಅಲ್ಲಿನ ವ್ಯವಸಾಯ ಇಲಾಖೆಯ ರಿಪೋರ್ಟಿನಿಂದ ವ್ಯಕ್ತಪಡುತ್ತೆ.

---

೫. ಜಮೀನು ತಟ್ಟೆಯಾಗಿದ್ದ ವಿನಹ ನಿಂತಿರುವ ಪೈರಿಗೆಲ್ಲಾ ಒಂದೇ ಸಮನಾಗಿ ನೀರು ಹಾಯಿಸುವದಕ್ಕಾಗುವದಿಲ್ಲ. ಜಮೀನು ಹಳ್ಳ ದಿಟ್ಟಗಳಾಗಿಯೂ ಇಳಿಜಾರಾಗಿಯೂ ಇದ್ದರೆ ನೀರು ವಿಶೇಷವಾಗಿ ಬೇಕಾಗು

ವದು ಮತ್ತು ಪೈರಿಗೂ ಕೆಡಕಾಗುವದಲ್ಲದೆ ಜಮೀನಿನ ಒಂದು ತುಂಡಿಯಲ್ಲಿ ಕಲ್ಲರ್ ಜಮಾಯಿಸುವದಕ್ಕೆ ಅವಕಾಶ ಉಂಟಾಗುತ್ತದೆ. ಆದಕಾರಣ ಸಾಗುವಳಿ ಜಮೀನುಗಳನ್ನು ಸಾಧ್ಯವಾದಮಟ್ಟಿಗೂ ಸಮಪಡಿಸಿ ಪೈರು ಇಡುವದು ಒಳ್ಳೇದು.—ಅಗ್ರಿಕಲ್ಚರಲ್ ಜರ್ನಲ್ ಆಫ್ ಇಂಡಿಯಾ.—ಅಕ್ಟೋಬರ ೧೯೧೯.

---

೬. ಸಾಗುವಳಿಯಲ್ಲಿ ಬೀಜದ ಚುನಾವಣೆಯು ಬಹಳ ಮುಖ್ಯವಾದ ಅಂಶವು. ತತ್ರಾಪಿ ಇದು ಹತ್ತಿಯ ಪೈರಿನಲ್ಲಿ ಬಹಳ ಚೆನ್ನಾಗಿ ಪ್ರತ್ಯಕ್ಷವಾಗಿದೆ. ಒಂದು ವರುಷದ ಪೈರಿನಿಂದ ಉತ್ಕೃಷ್ಟವಾದ ಬೀಜವನ್ನು ಚುನಾಯಿಸಿ ಮುಂದಿನ ಸಾಲ್ ಪೈರಿಗೆ ಉಪಯೋಗಿಸಿ, ಈ ಪೈರಿನಿಂದ ಪುನಃ ಉತ್ತಮವಾದ ಬೀಜಗಳನ್ನೇ ಆರಿಸಿಕೊಂಡು ಮೂರನೆ ವರುಷದ ಬಿತ್ತನೆಮಾಡುವದು, ಈಪ್ರಕಾರ ಒಂದೊಂದು ಸಾಲಿನ ಪೈರಿನಿಂದಲೂ ಉತ್ತಮವಾದ ಬೀಜಗಳನ್ನೇ ಆರಿಸಿಕೊಂಡು ಬೆಳೆಯುತ್ತಾಬಂದರೆ ಕ್ರಮೇಣ ಹತ್ತಿಯ ಜಾತಿಯು ಉತ್ತಮಪಟ್ಟ ಉದ್ದವಾಗಿಯೂ, ಸಣ್ಣಗೂ ಮತ್ತು ಗಟ್ಟಿತರವಾಗಿಯೂ ಇರುವ ಎಳೆವುಳ್ಳದ್ದಾಗುತ್ತದೆ. ಜಾರ್ಜಿಯಾದೇಶದವರು ಬಹಾಮಾದ್ವೀಪದಿಂದ ಹತ್ತಿ ಬೀಜವನ್ನು ತರಿಸಿ ಈ ಚುನಾವಣೆ ಕ್ರಮದಿಂದಲೇ ಅತ್ಯುತ್ಕೃಷ್ಟವಾದ ಹತ್ತಿಯನ್ನು ಬೆಳೆಸಿರುತ್ತಾರೆ. ಈ ಹತ್ತಿಗಿಂತ ಮೇಲಾದ ರಖಂ ಹಾಲಿ ಇನ್ನೆಲ್ಲಿಯೂ ಸಿಕ್ಕುವದೂ ಇಲ್ಲ ಮತ್ತು ಬೆಲೆಯಲ್ಲಿಯೂ ಇತರ ಹತ್ತಿ ರಖಂಗಳು ಇದರ ಮುಂದೆ ನಿಲ್ಲುವ ಹಾಗೂ ಇಲ್ಲ.—ಅಗ್ರಿಕಲ್ಚರಲ್ ಜರ್ನಲ್ ಆಫ್ ಇಂಡಿಯಾ—ಏಪ್ರಿಲ್ ೧೯೧೯.

---

೭. ಈಚೆಗೆ ಮದರಾಸು ಪಟ್ಟಣದಲ್ಲಿ ಮೇಣದ ಬತ್ತಿಯನ್ನು ತಯಾರು ಮಾಡುವ ಕಾರ್ಖಾನೆಯು ಏರ್ಪಟ್ಟಿರುತ್ತದೆ. ಕಾರ್ಖಾನೆಯು ಈ ಕಸಬನ್ನು ಅನ್ಯದೇಶದಲ್ಲಿ ಕಲಿತುಕೊಂಡು ಬಂದಿರುವ ಒಬ್ಬ ಘಟ್ಟಿಗನಮೇಲ್ವಿಚಾರಣೆಯಲ್ಲಿರುತ್ತೆ. ಇಲ್ಲಿ ತಯಾರಾದ ಬತ್ತಿಗಳು ಒಳ್ಳೆ ಬೆಳಕು ಕೊಡುವವಾಗಿಯೂ ನೋಡುವದಕ್ಕೆ ಅನ್ಯದೇಶದ ಬತ್ತಿಗಳಿಗೇನೂ ಕನಿಷ್ಠವಾಗಿರುವದಿಲ್ಲವೆಂತಲೂ ಹೇಳುತ್ತಾರೆ. ಸರಕು ಮದರಾಸು ಅಧಿಪತ್ಯದಲ್ಲಿ ಧಾರಾಳವಾಗಿ ಬಿಕರಿಯಾಗುತ್ತಿದೆಯಂತೆ. ಇದರ ಖರೀದಿಯೇನೊ

ಸ್ವಲ್ಪ ದುಬಾರಿ ಬೀಳುತ್ತದೆ. ಆದರೆ ಬತ್ತಿಯ ತಯಾರಿಗೆ ಮುಖ್ಯವಾಗಿ ಬೇಕಾಗುವ ಕೊಬ್ಬು ಮತ್ತು ಇತರ ಕಚ್ಚಾ ಪದಾರ್ಥಗಳನ್ನು ಸ್ಥಳದಲ್ಲೇ ಮಾಡಿಕೊಳ್ಳಲು ಬೇಕಾದ ದ್ರವ್ಯವನ್ನು ಮಾತ್ರ ಜನರು ಸಹಾಯ ಮಾಡುವದಾದರೆ ಸರಕನ್ನು ಬಹಳ ಅಗ್ಗವಾಗಿ ಮಾರಬಹುದೆಂದು ಕಾರ್ಖಾನೆಯ ಮಾಲೀಕರು ಹೇಳುತ್ತಾರೆ. ಈ ಸರ್ವಜನೋಪಯುಕ್ತವಾದ ಕಸಬನ್ನು ಅಭಿವೃದ್ಧಿಪಡಿಸುವ ಭಾಗದಲ್ಲಿ ಜನಗಳು ಆಸಕ್ತರಾಗುವರೆಂದು ನಂಬಿದೆ.—ಅಗ್ರಿಕಲ್ಚರಲ್ ಅಂಡ್ ಇಂಡಸ್ಟ್ರಿಯಲ್ ಪ್ರೋಗ್ರೆಸ್, ಡಿಸೆಂಬರು ೧೯೦೯.

---

೮. ಈಚೆಗೆ ೨ ವರ್ಷಗಳಿಂದ ವ್ಯವಸಾಯ ವಿಷಯಗಳಲ್ಲಿ ರೈತರಿಂದ ಸರ್ಕಾರದವರಿಗೂ, ಸರ್ಕಾರದಿಂದ ರೈತರಿಗೂ ಸಮಾಚಾರಗಳನ್ನು ತಿಳಿಸುವದಕ್ಕೆ ಈಸ್ಟರ್ನ್ ಬೆಂಗಾಲ್ ಮತ್ತು ಆಸ್ಸಾಂನಲ್ಲಿ ಬಹಳ ಒಳ್ಳೇ ಏರ್ಪಾಟುಮಾಡಿರುತ್ತಾರೆ. ಸರ್ಕಾರದವರು ಬುದ್ಧಿಶಾಲಿಗಳೂ, ಅನುಭವಸ್ಥರೂ ಮತ್ತು ಪ್ರಜಾಹಿತೈಷಿಗಳೂ ಆದ ಕೆಲವು ದೊಡ್ಡಮನುಷ್ಯರುಗಳನ್ನು „ಗೌರವ ಬಾತ್ಮೀದಾರರಾಗಿ'' (Honorary Correspondents) ನೇಮಕಮಾಡಿಕೊಂಡು ವ್ಯವಸಾಯ ಇಲಾಖೆಯವರು ನಡೆಸುವ ಅಜಮಾಯಿಷಿಗಳ ಫಲಿತಾಂಶಗಳನ್ನು ರೈತರ ತಿಳುವಳಿಕೆಗೆ ತರುವದು ಮತ್ತು ರೈತರ ಸ್ಥಿತಿಗತಿಗಳನ್ನು ಇಲಾಖೆಯವರಿಗೆ ತಿಳಿಸುವದು, ಈ ವಿಶಿಷ್ಟವನ್ನೂ ಈ ಬಾತ್ಮೀದಾರರ ಮುಖಾಂತರವೇ ನಡೆಸುತ್ತಾರೆ. ಇವರಲ್ಲಿ ಕೆಲವರು ಸರ್ಕಾರದವರು ಹೊಸದಾಗಿ ರೂಢಿಯಲ್ಲಿ ತರಬೇಕೆಂದಿರುವ ನೂತನ ವ್ಯವಸಾಯ ಕ್ರಮಗಳನ್ನು ರೈತರಿಗೆ ಪ್ರತ್ಯಕ್ಷವಾಗಿ ತೋರಿಸಿಕೊಡುವಷ್ಟು ಯೋಗ್ಯತೆಯುಳ್ಳವರಾಗಿರುವುದಲ್ಲದೆ, ನಿಂತಿರುವ ಪೈರುಗಳ ಸ್ಥಿತಿಯನ್ನು ಕುರಿತು ಇಲಾಖೆಯವರಿಗೆ ಸಮಾಚಾರ ಕೊಡುವುದರಲ್ಲಿ ಬಹಳ ಮಟ್ಟಿಗೆ ಸಹಾಯಕರಾಗಿರುತ್ತಾರೆಂತ ಈಸ್ಟರ್ನ್ ಬೆಂಗಾಲ್ ಮತ್ತು ಆಸ್ಸಾಂ ವ್ಯವಸಾಯ ಇಲಾಖೆಯ ೧೯೦೯ನೇ ಜೂನ್ ಮಾಹೆಗೆ ಆಖೈರಾಗುವ ರಿಪೋರ್ಟಿನಿಂದ ಗೊತ್ತಾಗುತ್ತದೆ.

V. B. Soobbiah & Sons, Printers, Bangalore,—1910.

THE MYSORE

REVENUE & AGRICULTURAL GAZETTE.

ವಾಲ್ಯೂಂ ೪.] ಮಂಗಳವಾರ, ೧೫ನೆ ಮಾರ್ಚಿ ೧೯೧೦. [ನಂ. ೧೦.

Contents.

1. Use and Abuse of Water for Plants.
2. Mysore Health Almanac, 1910.
3. Hygienic Spraying and Skin Pests of Cattle.
4. Revenue Appeals.
5. Lucerne.
6. Tumkur Central Co-operative Society.
7. Government Proceedings.
8. Bordeaux Mixture and Potato Diseases.
9. Occasional Notes.
   (i) Plantains. (ii) Ryots' Co-operation with the Agricultural Department. (iii) Root Crops.

ಅನುಕ್ರಮಣಿಕೆ.

೧. ಗಿಡಗಳಿಗೆ ನೀರಿನ ವಿನಿಯೋಗ ಮತ್ತು ದುರ್ವಿನಿಯೋಗ.
೨. ೧೯೧೦ನೆ ಇಸವಿಯ ಆರೋಗ್ಯ ಪಂಚಾಂಗ.
೩. ದನದ ಮೇಲೆ ಕೂರುವ ಹುಳುಗಳನ್ನು ನಾಶಮಾಡುವ ಕ್ರಮ.
೪. ರೆವಿನ್ಯೂ ಅಪೀಲುಗಳು.
೫. ಮಸಾಲೆ ಸೊಪ್ಪು.
೬. ತುಂಕೂರು ಸೆಂಟ್ರಲ್ ಕೋ ಆಪರೇಟಿವ್ ಸೊಸೈಟಿ.
೭. ಸರ್ಕಾರಿ ಹುಕುಂಗಳು.
೮. ಬೋರ್ಡೋಮಿಶ್ರಣ ಮತ್ತು ಉರಲಗಡ್ಡೆಯ ರೋಗಗಳು.
೯. ವಿವಿಧ ವೃತ್ತಾಂತಗಳು.
   (i) ಬಾಳೆ. (ii) ರೈತರಿಗೂ ವ್ಯವಸಾಯ ಇಲಾಖೆಯವರಿಗೂ ಪರಸ್ಪರ ಹೊಂದಿಕೆ. (iii) ಗೆಡ್ಡೆಗೆಣಸುಗಳು.

Use and Abuse of Water for Plants. *

ಗಿಡಗಳಿಗೆ ನೀರಿನ ವಿನಿಯೋಗ ಮತ್ತು ದುರ್ವಿನಿಯೋಗ.

ಗಿಡಗಳಿಗೆ ಬೇರುಗಳ ಹತ್ತಿರ ನೀರು ಬೇಕೆಂಬುದು ಪ್ರತಿಯೊಬ್ಬ

* ಮದರಾಸು ಅಗ್ರಿಕಲ್ಚರಲ್ ಕ್ಯಾಲೆಂಡರ್, ೧೯೧೦.

ಬಿಸಿ ಗೊತ್ತುಂಟು. ಮಳೆ ಬೀಳದ ಪ್ರದೇಶಗಳಲ್ಲಿ ಬೆಳೆಯುತಕ್ಕ ಗಿಡಗಳಿಗೂ ಕೂಡ ನೀರು ಬೇಕಾಗಿರುತ್ತದೆ. ಅವುಗಳು ನೀರನ್ನು ಹುಡಿಕಿಕೊಂಡು ಬಹಳ ದೂರದವರಿಗೂ ಬೇರುಗಳನ್ನು ಆಳವಾಗಿ ಬಿಡುವುದರ ಮೂಲಕ ಜೀವಿಸುತ್ತವೆ. ನೀರಾವರಿ ಕಡಿಮೆಯಾಗಿರುವ ಸ್ಥಳಗಳಲ್ಲಿ ಗಿಡಗಳು ಬೆಳೆಯುವದು ಕಡಿಮೆ. ಅವುಗಳಿಗೆ ಕೊಂಚಕಾಲ ಚೆನ್ನಾಗಿ ನೀರು ಹಾಕುತ್ತಿದ್ದು ಅನಂತರ ನೀರು ನಿಲ್ಲಿಸಿಬಿಟ್ಟರೆ ಅವುಗಳು ಬಾಡಿಹೋಗುವುವು. ಕೂಡ್ಲೆ ನೀರು ಹಾಕದೇ ಬಿಟ್ಟುಬಿಟ್ಟರೆ ಶುದ್ಧಾಂಗವಾಗಿ ಒಣಗಿಹೋಗುತ್ತವೆ. ಸಾಗುವಳಿಯಲ್ಲಿರುವ ಜವಿಾನಿನ ಪೈರುಗಳಿಗೆ ನೀರು ಕಮ್ಮಿಯಾದರೆ ಕಾಲಕ್ಕೆ ಮುಂದಾಗಿಯೇ ಹೂ ಕಾಯಿ ಬಿಡುತ್ತವೆ. ಅಂಥಾ ಸಂದರ್ಭಗಳಲ್ಲಿ ಫಸಲು ಖಂಡಿತವಾಗಿ ಕಡಿಮೆಯಾಗುವದಲ್ಲದೆ ಕಾಳು ಜಳ್ಳಾಗಿ ಕೆಲಸಕ್ಕೆಬಾರದ್ದಾಗಿ ಇರುವದು.

ಗಿಡಗಳಿಗೆ ನೀರು ಹಲವು ರೀತಿಯಲ್ಲಿ ಉಪಯೋಗಪಡುತ್ತದೆ. ಮೊದಲನೇದು, ನೀರು ಅವುಗಳಿಗೆ ಮುಖ್ಯವಾದ ಆಹಾರ. ಜಂತುಗಳಿಗೆ ಕುಡಿಯುವದಕ್ಕೆ ನೀರು ಅವಶ್ಯವಾಗಿ ಬೇಕಾದದ್ದು. ಅವುಗಳಿಗಿಂತ ಗಿಡಗಳಿಗೆ ನೀರಿನ ಅವಶ್ಯಕತೆಯು ಇನ್ನೂ ಅಧಿಕವಾಗಿರುತ್ತದೆ. ವೃಕ್ಷಗಳು ಆಹಾರವನ್ನು ಉದಕರೂಪದಲ್ಲಿ ಮಾತ್ರ ತೆಗದುಕೊಳ್ಳಬಲ್ಲವು. ಭೂಮಿಯಿಂದ ಬೇರುಗಳ ಮೂಲಕ ಬರುವ ನೀರಿನಲ್ಲಿ ಯಾವಾಗಲೂ ಲೋಹಪದಾರ್ಥಗಳು ಮಿಶ್ರವಾಗಿರುತ್ತವೆ. ಇವೇ ಗಿಡಗಳ ಬೆಳವಳಿಕೆಗೆ ಬೇಕಾದ ಆಹಾರವು. ಈ ಆಹಾರದ್ರವವು ಬಹಳ ತೆಳುವಾಗಿರಬೇಕಾದ್ದು ಅತ್ಯವಶ್ಯಕ. ಈಪ್ರಕಾರ ಬಹಳ ನೀರು ಬುಡದಿಂದ ಎಲೆಗಳಿಗೆ ಹೋಗಿ ಅಲ್ಲಿ ಆವಿಯಾಗಿ ಹೊರಡುತ್ತದೆ.

ಗಿಡವು ಸರಿಯಾಗಿ ಆಕಾರವುಳ್ಳದ್ದಾಗಿರಬೇಕಾದರೆ ನೀರೇ ಮುಖ್ಯ. ವಿಶೇಷ ನೀರು ಇಲ್ಲದೇ ಹೋದರೆ ಗಿಡವು ಬಾಡಿ ತಲೆಬಾಗುವದು. ಸೂರ್ಯರಶ್ಮಿಗೆ ಗಿಡದ ಎಲೆಗಳೆಲ್ಲಾ ಪೂರ್ತಿಯಾಗಿ ತೆರೆದಿರಬೇಕಾದರೆ ಅವು ನೀರು ಚೆನ್ನಾಗಿ ತುಂಬಿಕೊಂಡು ಬಿರುಸಾಗಿರಬೇಕು. ಕಾಯಿಬಿಟ್ಟು ಹಣ್ಣಾಗುವದಕ್ಕೆ ರೆಂಬೆಗಳು ಹರಡಿಕೊಂಡು ಹೂ ವಿಶೇಷವಾಗಿ ಬಿಟ್ಟು ಚೆನ್ನಾಗಿ ಅರಳಿರಬೇಕು. ಇಲ್ಲವಾದರೆ ಫಸಲು ಕೆಟ್ಟುಹೋಗುತ್ತದೆ.

ಗಿಡಗಳಿಗೆ ನೀರು ಸಿಕ್ಕುವ ಮಾರ್ಗಗಳಲ್ಲೆಲ್ಲಾ ಮಳೆಯೇ ಸರ್ವ ಶ್ರೇಷ್ಠವಾದದ್ದು.

ಕಾಲಕಾಲಕ್ಕೆ ಸರಿಯಾಗಿ ಮಳೆಯು ಸಮೃದ್ಧಿಯಾಗಿ ವರ್ಷವಾ ನತೆಯುವ ಪ್ರದೇಶಗಳಲ್ಲಿ ಕೆರೆಕಟ್ಟೆಗಳೂ, ನೀರಿನ ಕಾಲುವೆಗಳು ಅಥ ವಾ ದೊಡ್ಡ ಬಾವಿಗಳ ಅವಶ್ಯಕತೆಯು ಬಹಳವಟ್ಟಿಗೆ ಕಡಿಮೆ. ಹೀಗೆ ಮಳೆಯಾಗದ ಪ್ರದೇಶಗಳಲ್ಲಿಯೂ ಅಥವಾ ಆಸರೂ ವರುಷದಲ್ಲಿ ಒಂದೆರ ಡು ತಿಂಗಳು ಸುಮ್ಮನೆ ಧಾರೆಯಾಗಿ ಸುರಿದು ಅನಂತರ ಮಿಕ್ಕ ತಿಂಗಳು ಗಳಲ್ಲಿ ಸುತರಾಂ ನಿಂತುಹೋಗುವ ಕಡೆಗಳಲ್ಲಿಯೂ ಪೈರು ಬೆಳೆಯುವದಕ್ಕೆ ನದಿಗಳಿಂದ ಕಾಲುವೆಗಳನ್ನು ತೋಡಿಯೂ ನೆಲದಮೇಲೆ ಹೊಡೆದುಕೊಂಡು ಹೋಗುವ ನೀರನ್ನು ದೊಡ್ಡ ಕೆರೆಗಳಲ್ಲಿ ನಿಲ್ಲಿಸಿಯೂ ಅಥವಾ ಬಾವಿಗಳನ್ನು ತೋಡಿ ಭೂಮಿಯೊಳಗಣ ನೀರನ್ನು ಮೇಲಕ್ಕೆ ಎತ್ತಿಯೂ ಏನಾದ ರೂ ಮಾಡಿ ನೀರಿನ ವಸತಿಯನ್ನು ಅನುಕೂಲಪಡಿಸಬೇಕಾದ್ದು ಅತ್ಯವಶ್ಯ ಕ. ಆದರೆ ಎಷ್ಟು ನೀರು ಹಾಯಿಸಿದರೂ ಕೂಡ ಇದು ಆಕಾಶದಿಂದ ಸುರಿಯುವ ಮಳೆ ನೀರಿಗೆ ಸಮಾನವಾಗಲಾರದು. ಜಂತುಗಳಹಾಗೆಯೇ ಗಿಡಗಳನ್ನೂ ಕೂಡ ಆಗಾಗ್ಯೆ ಪೂರ್ತಿಯಾಗಿ ತೊಳೆದಿಡುವದು ಅವಶ್ಯಕ. ಇಲ್ಲವಾದರೆ ಅವುಗಳ ಎಲೆಗಳು (ಧೂಳು ಕೂತು) ಮುದುರಿಹೋಗಿ ಅವು ಗಳಿಗೆ ಶ್ವಾಸ ಬಿಡುವದಕ್ಕೆ ಆಗುವದಿಲ್ಲ, ಮತ್ತು ಹುಳುಗಳು ವೃದ್ಧಿಯಾ ಗಿ ಪೈರು ನಷ್ಟವಾಗುತ್ತದೆ. ಮಳೆಬಂದು ಗಿಡಗಳನ್ನು ಚೆನ್ನಾಗಿ ತೊಳೆ ದುಬಿಟ್ಟರೆ ಹುಳುಗಳು ಅಷ್ಟು ವೃದ್ಧಿಯಾಗಲಾರವು. ಆದರೆ ಪೈರಿಗೆ ನೀರು ವಸತಿಯನ್ನು ಮಾಡುವದರಲ್ಲಿಯೂ ಕೂಡ ಮಿತಿಮೀರಿ ನೀರು ಸ ರಬರಾಜು ಮಾಡುವ ಭಯವೇನೋ ಯಾವಾಗಲೂ ಇದ್ದೇಯಿದೆ. ಸ್ವ ಲ್ಪ ನೀರಿನಿಂದ ಬತ್ತ ಮೊದಲ್ಗೊಂಡು ಸಕಲ ಪೈರುಗಳನ್ನೂ ಚೆನ್ನಾಗಿ ಬೆ ಳೆಯಬಹುದೆಂಬುವದನ್ನು ಇಂಡಿಯಾದೇಶದ ರೈತರು ವಾಸ್ತವ್ಯವಾಗಿಯೂ ತಿಳಿದುಕೊಂಡಿಲ್ಲ. ಪೈರುಗಳಿಗೆ ನೀರು ಒಳ್ಳೇದೆಂದೂ ಚೆನ್ನಾಗಿ ಫಲಿಸು ವದಕ್ಕೆ ಅತ್ಯವಶ್ಯಕವೆಂದೂ ಇವರಿಗೆ ತಿಳಿದಿರುವುದರಿಂದ ನೀರು ಹೆಚ್ಚಾಗಿ ಬಿಟ್ಟಷ್ಟೂ ಫಸಲುತ್ಪತ್ತಿಯೂ ಕೂಡ ಜಾಸ್ತಿಯಾಗಿ ಬರುವುದೆಂದು ಗೊತ್ತು ಮಾಡಿಕೊಂಡಿರುವಂತೆ ಕಾಣುತ್ತದೆ. ಇದು ಎಷ್ಟುಮಾತ್ರವೂ

ಸರಿಯಾದ ತಿಳುವಳಿಕೆಯಿಲ್ಲ. ನೀರು ವಿಶೇಷವಾಗಿ ಬಿಟ್ಟರೆ ಭೂಮಿಯೊಳಗಣ ವಾಯುವೆಲ್ಲಾ ಹೊರಬಿದ್ದು ನೀರುನಿಂತು ನೆಲವು ಜವುಗಾಗುವುದು. ಇದರಿಂದ ಅನೇಕ ಬೂಜು ಸಂಬಂಧವಾದ ರೋಗಗಳು ಹುಟ್ಟುವುವು. ಹೀಗೆ ಮಿತಿಮೀರಿ ನೀರು ಕಟ್ಟುವುದರಿಂದಲೇ ಮದರಾಸು ಅಧಿಪತ್ಯದಲ್ಲಿ ಕಬ್ಬಿನ ಗದ್ದೆಗಳಿಗೆ ರೋಗಗಳು ತಗಲುತ್ತವೆಯಂತೆ. ಪೈರುಗಳಿಗೆ ಬೇಕಾದಾಗ ನೀರು ಕೊಡುವದು ಎಷ್ಟು ಮುಖ್ಯವೋ, ಬೇಡವಾದಾಗ ನೀರನ್ನು ತೆಗದುಬಿಡುವದೂ ಕೂಡ ಅಷ್ಟೇ ಮುಖ್ಯವಾದುದು. ನೀರು ಹಾಯಿಸುವದರಲ್ಲಿಯೂ ಕೂಡ ಜಮೀನಿನಿಂದ ನೀರು ಚೆನ್ನಾಗಿ ಬಸಿದು ಹೋಗುವದಕ್ಕೆ ತಕ್ಕ ಏರ್ಪಾಟು ಮಾಡಬೇಕು. ನೀರು ಜಾಗ್ರತೆಯಾಗಿ ಹರಿದು ಹೋಗುವದಕ್ಕಾಗದ ತಗ್ಗು ಜಮೀನುಗಳಿಗೆ ಬಹಳ ಹುಷಾರಿಯಿಂದ ನೀರು ಸರಫರಾಜು ಮಾಡಬೇಕು.

ನೀರು ಸರಫರಾಜು ಮಾಡುವದರಿಂದ ಜಮೀನು ವಿಶೇಷವಾಗಿ ಚೌಳಾಗುತ್ತದೆ. ಇದು ಬಹಳ ನಷ್ಟಕರವಾದ ಪ್ರತಿಕೂಲವು. ಅನೇಕ ವರ್ಷ ಎಡಬಿಡದೆ ನೀರು ಹಾಯಿಸುತ್ತಲೇ ಇದ್ದರೆ ಜಮೀನಿನಲ್ಲಿ ಪೈರುಗಳ ಬೆಳವಳಿಕೆಗೆ ಉಪಯೋಗವಾಗದಷ್ಟು ಹಾನಿಕರವಾದ ಕ್ಷಾರಗಳು ವಿಶೇಷವಾಗಿ ಸೇರುತ್ತವೆ. ಚೌಳು ವಿಶೇಷವಾಗಿರುವ ಕಡೆಗಳಲ್ಲಿ ಎಂಥಾ ಗಿಡವೂ ಕೂಡ ಬೆಳೆಯಲಾರದು. ಜಮೀನಿನಲ್ಲಿನ ನೀರು ಚೆನ್ನಾಗಿ ಬಸಿದು ಹೋಗುವದಕ್ಕೆ ತಕ್ಕ ಜಾಗರೂಕತೆಯಿಂದ ಏರ್ಪಾಟು ಮಾಡಿದರೆ ನೆಲದಲ್ಲಿ ಚೌಳು ನಿಲ್ಲದಂತಾಗುತ್ತದೆ.

ಭಾವಿಗಳಿಂದ ತೋಟಗಳಿಗೆ ನೀರು ಹಾಯಿಸುವವರೂ ಮತ್ತು ತರಿ ಸಾಗುವಳಿ ಮಾಡುವವರೂ ಈ ಮೇಲ್ಕಂಡ ಅಂಶಗಳನ್ನು ಚೆನ್ನಾಗಿ ಪರ್ಯಾಲೋಚಿಸುವರೆಂದು ನಂಬಿದೆ.

Mysore Health Almanac, 1910.

೧೯೧೦ನೆ ಇಸವಿಯ ಆರೋಗ್ಯ ಪಂಚಾಂಗ.

ನಮ್ಮ ಸಂಸ್ಥಾನದಲ್ಲಿ ,, ಪಬ್ಲಿಕ್ ಹೆಲ್ತ್ '' ಅಥವಾ ಆರೋಗ್ಯ ಇಲಾಖೆಯು ಏರ್ಪಟ್ಟಲಾಗಾಯಿತು ಇಲಾಖೆಯವರು ಪ್ರತಿ ವರುಷವೂ ಆ

ರೋಗ್ಯ ಪಂಚಾಂಗವನ್ನು ಹೊರಡಿಸುತ್ತಿರುವದು ಸರಿಯಷ್ಟೆ. ಯಥಾರೀತಿಯಾಗಿ ಈ ವರುಷವೂ ಪಂಚಾಂಗವನ್ನು ಫೈಯಿಷ್ ಮಾಡಿರುತ್ತಾರೆ. ಇದು ಕನ್ನಡದಲ್ಲಿಯೂ ಮತ್ತು ಇಂಗ್ಲೀಷಿನಲ್ಲಿಯೂ ಇದೆ. ಸರ್ವರಿಗೂ ಪ್ರಯೋಜನಕರವಾದದ್ದು ಮತ್ತು ಅತ್ಯವಶ್ಯಕವಾದದ್ದು. ಇದರಲ್ಲಿ ಶ್ರೀಮನ್ ಮೈಸೂರು ಮಹಾರಾಜರವರ ಫೋಟೋಗಳು, ಟಿಂಪರೇಚರ್ ಮತ್ತು ಮಳೆ ಬೀಳುವ ತಖ್ತೆಗಳು, ವರ್ಷದ ಕ್ಯಾಲೆಂಡರ್, ಆರೋಗ್ಯ ವಿಷಯವಾದ ಗಾದೆಗಳು, ಸ್ಯಾನಿಟರಿ ವಿಷಯಗಳು ; ಜನಗಳು, ಮನೆಗಳು, ಹವಾ ಮತ್ತು ಕಾಲ ಇವುಗಳ ವಿಷಯಗಳು; ಜನನ ಮರಣಗಳು, ರೋಗಗಳು, ಆರೋಗ್ಯದ ಡಿಪಾರ್ಟ್‌ಮೆಂಟ್ ವಿಷಯಗಳು, ಆರೋಗ್ಯ ಸೂತ್ರಗಳು, ಆರೋಗ್ಯ ಪುಸ್ತಕಗಳು, ಪ್ಲೇಗು, ಕಾಲರಾ, ಕರುಳಿನ ರೋಗಗಳು, ಸಿಡುಬು, ಜ್ವರಗಳು, ಜಂತು ಹುಳಗಳು, ಇವೇ ಮುಂತಾದ ಸಾಮಾನ್ಯ ರೋಗಗಳ ನಿವಾರಣೆ ಮಾರ್ಗಗಳು, ಬೆಳಕು, ಗಾಳಿ, ನೀರು, ಶುಚಿತ್ವವು, ಆಹಾರ, ವ್ಯಾಯಾಮ, ವಾಸಸ್ಥಾನ, ಶಿಶುಪೋಷಣೆ ಮತ್ತು ಸಾಧಾರಣವಾಗಿ ಅಕಸ್ಮಾತ್ತಾಗಿ ಸಂಭವಿಸುವ ಆಪತ್ತುಗಳು ಮತ್ತು ಅವುಗಳಿಗೆ ತತ್‌ಕ್ಷಣವೇ ಮಾಡಬೇಕಾದ ಚಿಕಿತ್ಸೆ, ಇವುಗಳ ವಿಷಯವೂ ಸಹ ಇದರಲ್ಲಿ ಬರೆದಿದೆ. ಇಷ್ಟೇ ಅಲ್ಲ, ಶ್ರುತಿ ಸ್ಮೃತಿಗಳಿಂದಲೂ ಇನ್ನೂ ಅನೇಕ ಪ್ರಾಚೀನ ಗ್ರಂಥಗಳಿಂದಲೂ ಬಹು ಅಮೂಲ್ಯವಾದ ಅನೇಕ ಆರೋಗ್ಯ ಸೂತ್ರಗಳನ್ನು ಇದರಿಂದ ಓದಿ ತಿಳಿಯಬಹುದು.

ಇದರ ಒಂದು ಕಾಪಿಯನ್ನು ಪ್ರತಿ ಮನೆಯಲ್ಲೂ ಇಡತಕ್ಕದ್ದು. ಕ್ರಯ ಪ್ರತಿ ಒಂದು ಕಾಪಿಗೂ -|4 ಆಣೆ. ಕಾರ್ಡ್ ಬೋರ್ಡ್‌ಮೇಲೆ ಹಚ್ಚತಕ್ಕ ಕಾಪಿ ಒಂದಕ್ಕೆ ೩ ಆಣೆ ; ಪೋಸ್ಟೇಜು ವಗೈರೆ ಖರ್ಚು ಅಲಾಯಿದಾ.

ಪ್ರಜಾಪ್ರತಿನಿಧಿ ಸಭೆಯ ಮೆಂಬರುಗಳು, ಮ್ಯುನಿಸಿಪಲ್, ಲೋಕಲ್‌ಫಂಡ್ ಮತ್ತು ಯೂನಿಯನ್ ಮೆಂಬರುಗಳು, ಸ್ಕೂಲ್ ಉಪಾಧ್ಯಾಯರುಗಳು, ಸ್ಯಾನಿಟರಿ ಇನ್‌ಸ್ಪೆಕ್ಟರುಗಳು, ಶೇಕದಾರ್‌ಗಳು, ವ್ಯಾಕ್ಸಿನೇಟರ್‌ಗಳು, ಪಟೇಲ್ ಮತ್ತು ಇತರ ಹುದ್ದೇದಾರರು ಮತ್ತು ವಿದ್ಯಾವಂತರುಗಳು ಇದರ ಪ್ರತಿಗಳನ್ನು ತೆಗೆದುಕೊಂಡು ಇತರರಿಗೂ ತಿಳಿಸತಕ್ಕದ್ದು.

ಇವನ್ನು ಬೇಕಾದವರು ಬೆಂಗಳೂರು ಗೌರ್ನಮೆಂಟ್ ಬುಕ್ಕು ಡಿಪ್ರೊವಿನಿಂದಲೂ, ಮೈಸೂರು ಸಿ. ಎಲ್. ಎಸ್. ಬುಕ್ಕು ಡಿಪ್ರೋವಿನಿಂದಲೂ, ಲ್ಲಿನ ಅಮಲ್ದಾರರೂ, ತಾಕ್ಟರೂ ಮತ್ತು ಇತರ ಆಫೀಸರುಗಳ ಮೂಲಕವೂ ತರಿಸಿಕೊಳ್ಳಬಹುದು.

—o—

Hygienic Spraying and Skin Pests of Cattle. *

ದನದಮೇಲೆ ಕೂರುವ ಹುಳುಗಳನ್ನು ನಾಶಮಾಡುವ ಕ್ರಮ.

ಉಣ್ಣೆ ಮುಂತಾದ ಅನೇಕ ಕ್ರಿಮಿಗಳು ಎತ್ತು, ಕರು, ಆಕಳು, ಕುದುರೆ ಮೊದಲಾದ ಕಾಲ್ನಡೆಗಳ ಮೇಲೆ ಕೂತು ಬಾಧೆ ಪಡಿಸುವದು ಸಾಮಾನ್ಯವಾಗಿ ಪ್ರತಿಯೊಬ್ಬ ರೈತನಿಗೂ ತಿಳಿದೇ ಇದೆ. ಇವುಗಳು ಮಳೆಗಾಲದಲ್ಲಿಯೂ ಮತ್ತು ಛಳಿಗಾಲದಲ್ಲಿಯೂ ತುಂಬಾ ಹೆಚ್ಚಾಗುತ್ತವೆ. ಆದರೆ ಸದಾಕಾಲದಲ್ಲಿಯೂ ಉಣ್ಣೆ ಬಾಧೆಯೇನೋ ತಪ್ಪುವದೇ ಯಿಲ್ಲ. ಇದು ದನಗಳಿಗೆ ನಿರಂತರ ಶತ್ರು. ಪ್ರಾಯಶಃ ಇದಕ್ಕಾಗಿಯೇ ಈ ವಿಷಯದಲ್ಲಿ ಜನಗಳಿಗೆ ಅಷ್ಟು ಅಲಕ್ಷ್ಯ. ಆದರೆ ಹೀಗೆ ಅಲಕ್ಷ್ಯ ಮಾಡುವುದರಿಂದಲೆ ಅವುಗಳ ಬಾಧೆಯೂ ಹೆಚ್ಚಾಗುತ್ತದೆ. ಈ ಕ್ರಿಮಿಗಳಿಂದ ಅನೇಕ ರೋಗಗಳ ವ್ಯಾಪನೆಗೆ ಅವಕಾಶವೆಂದು ಸ್ಪಷ್ಟವಾಗಿ ನಿರ್ಧರಿಸಲ್ಪಟ್ಟಿದೆ.

ಇಂಡಿಯಾ ದೇಶದಲ್ಲಿ ಸಾಮಾನ್ಯವಾಗಿ ೨ ಬಗೆಯ ಉಣ್ಣೆಗಳುಂಟು. ಒಂದು ಕೆಂಪು ಬಣ್ಣದ್ದು. ಇದು ಪ್ರಾಣಿಗಳ ಮೈಮೇಲೆ ಬಹಳಕಾಲ ಪರ್ಯಂತರ ಅಂಟಿಕೊಂಡು ಜೀವಿಸುವದು. ಎರಡನೇದು, ನೀಲಿ ಬಣ್ಣದ್ದು. ಇದು ಪ್ರಾಣಿಗಳ ಮೈಮೇಲೆ ಸ್ವಲ್ಪಕಾಲಮಾತ್ರವಿದ್ದು ಮಿಕ್ಕಕಾಲಗಳಲ್ಲಿ ಗೋಡೆಯ ಬಿರಕುಗಳಲ್ಲಿ ಅವಿತುಕೊಂಡಿರುತ್ತದೆ. ಕೆಂಪು ಉಣ್ಣೆಯಿಂದ ಮೆಟ್ರಿ ರೋಗ, ಲಾಳ ಸಂಕೋಲೆ ಮುಂತಾದ ಜಾಡ್ಯಗಳೂ, ನೀಲಿಯದರಿಂದ ಜ್ವರಗಳೂ ಹರಡುತ್ತವೆ.

ಉಣ್ಣೆಯು ತಾನು ಇರುವ ಕಡೆಗಳಲ್ಲೆಲ್ಲಾ ಈ ರೋಗಗಳನ್ನು ಹರಡುವದು ಮಾತ್ರವೇ ಅಲ್ಲದೆ ದನಗಳ ಆರೋಗ್ಯವನ್ನೂ ಬಹಳ ಕೆಡಿಸುವದು. ಇದು ದನದ ರಕ್ತವನ್ನು ಕುಡಿದು ಜೀವಿಸುತ್ತಿರುವದಾಗಿ ರಕ್ತ

* ಸೆಂಟ್ರಲ್ ಪ್ರಾವಿನ್ಸಸ್ ಅಗ್ರಿಕಲ್ಚರಲ್ ಗೆಜೆಟ್, ಜನವರಿ ೧೯೧೦.

ೀರುವಾಗ ಮೈಯನ್ನು ಕಚ್ಚಿ ನವೆಯನ್ನುಂಟುಮಾಡುತ್ತದೆ. ಇಷ್ಟೇ ಅಲ್ಲದೆ ಇದು ಕುರಿಗಳಮೇಲೆ ಕೂತರೆ ತುಪಟವು ಕೆಟ್ಟುಹೋಗಿ ನೇಗೆ ಕೆಲಸಕ್ಕೆ ಅನುಕೂಲಿಪಡುವದಿಲ್ಲ. ಕಪಿಲೆಗಳಲ್ಲಿ ಸಾಧಾರಣವಾಗಿ ಇರುವ ರಂಧ್ರಗಳು ಪ್ರಾಯಶಃ ಉಣ್ಣೆ ಬಿದ್ದ ದನಗಳ ತೊಗಲನ್ನು ಉಪಯೋಗಿಸಿ ತಯಾರು ಮಾಡಿದ್ದರಿಂದಲೇ ಉಂಟಾಗುವವು.

ಆದಕಾರಣ ಇಷ್ಟು ವಿಧವಾದ ನಷ್ಟಗಳಿಗೂ ಕಾರಣವಾದ ಉಣ್ಣೆಯನ್ನು ಸರ್ವ ಪ್ರಯತ್ನದಿಂದಲೂ ನಿರ್ಮೂಲ ಮಾಡುವದು ಅತ್ಯವಶ್ಯಕವಾದದ್ದು. ದನದ ಕೊಟ್ಟಿಗೆಯನ್ನು ಬಹಳ ಚೊಕ್ಕಟವಾಗಿಡುವದು ಜರಾಯಿತುದಾರಿಗೆ ಒಂದು ಕೇವಲ ಸಾಮಾನ್ಯೋಪಾಯ. ಗೋಡೆಗಳಿಗೆ ಪದೇಪದೇ ಸುಣ್ಣ ಹಚ್ಚಿ ನೆಲಕ್ಕೆ ಹೊಸ ಮಣ್ಣು ಹಾಕುತ್ತಿದ್ದರೆ ಉಣ್ಣೆ ಕಾಟವು ಬಹಳಮಟ್ಟಿಗೆ ಕಡಮೆಯಾಗುವದು. ಪಿಚಕಾರಿ ಹೊಡೆದು ದನಗಳನ್ನು ತೊಳೆಯುವದು ಸರ್ವೋತ್ತಮವಾದ ಮಾರ್ಗ. ಆದರೆ ಇದಕ್ಕೆ ಸ್ವಲ್ಪ ಶ್ರಮವೂ ಖರ್ಚೂ ಹಿಡಿಯುವದು. ಇದಕ್ಕೆ ಉಪಯೋಗಿಸುವ ಒಳ್ಳೇ ಗುಣಕಾರಿಗಳಾದ ಔಷಧಿಗಳು ಅನೇಕವು ವಿಷಪದಾರ್ಥಗಳು. ಆದ್ದರಿಂದ ಈ ಕೆಲಸಕ್ಕೆ ಒಳ್ಳೇ ಅನುಭವಶಾಲಿಗಳನ್ನೆ ಇಟ್ಟುಕೊಳ್ಳಬೇಕು. ಇದೂಕೂಡ ಭಾರಿ ಖರ್ಚಿನ ಬಾಬೇ. ಆದರೆ ಅನೇಕ ರಾಸುಗಳಿಗೆ ಏಕ ಕಾಲದಲ್ಲಿ ಔಷಧಿ ಪ್ರಯೋಗ ಮಾಡಿದರೆ ಖರ್ಚು ಕಮ್ಮಿ ಬೀಳುತ್ತದೆ. ಒಂದು ಗ್ರಾಮದಲ್ಲಿ ಒಂದೆರಡು ರಾಸುಗಳನ್ನು ಬಿಟ್ಟು ಮಿಕ್ಕವುಗಳಿಗೆ ಚಿಕಿತ್ಸೆ ಮಾಡಿದಲ್ಲಿ ಈ ಒಂದೆರಡು ದನಗಳಿಂದ ಇತರ ದನಗಳಿಗೆ ಉಣ್ಣೆಗಳು ವ್ಯಾಪಿಸಿ ಪುನಃ ಜಾಡ್ಯಾದಿಗಳಿಗೆ ಅವಕಾಶವಾಗುವುದರಿಂದ ಎಲ್ಲಾ ರಾಸುಗಳಿಗೂ ಒಟ್ಟಿಗೆ ಚಿಕಿತ್ಸೆ ಮಾಡುವುದರಲ್ಲಿ ವಿಶೇಷ ಗುಣ ಉಂಟು.

Revenue Appeals.

ರೆವಿನ್ಯೂ ಅಪೀಲುಗಳು.

೧೯೦೮—೦೯ನೆ ಇಸವಿಯ ಅಪೀಲು ನಂಬರು ೧೦೯.

ವಾದಿ.		ಪ್ರತಿವಾದಿ.
ಕೃಷ್ಣಶೆಟ್ಟಿ.	*vs*	ತಿಮ್ಮೆಗೌಡ.

ವಿಷಯ.—ಕಂದಾಯದ ಬಾಕಿಗಾಗಿ ಅರ್ಕಲಗೂಡು ತಾಲ್ಲೂಕು

ಸರ್ವಮಾನ್ಯ ತರಿಗಳಲೆ ಗ್ರಾಮದ ಸರ್ವೆ ೨ನೆ ನಂಬರು ಜಮೀನಿನ ಹರಾಜು ಕ್ಯಾನ್ಸಲ್ ಬಗ್ಗೆ.

ಮೊಕದ್ದಮೆ ವಿದ್ಯಮಾನ.—ಸೋಮಶೆಟ್ಟಿಯೆಂಬಾತನ ಖಾತೆಯು ಕೆಲವು ಜಮೀನುಗಳ ಮೇಲೆ ೧೮೯೪—೯೫ ಮತ್ತು ೧೮೯೫—೯೬ನೆ ಸಾಲುಗಳ ಕಂದಾಯವು ಬಾಕಿ ನಿಂತಕಾರಣ ಅವನಿಗೆ ೪—೬—೯೭ರಲ್ಲಿ ತಗಾದೆ ನೋಟೀಸು ಕೊಡಲ್ಪಟ್ಟಿತು. ಅನಂತರ ಇತರ ಕ್ರಮಗಳು ಜರಗಿ ೩೦—೧೦—೯೭ರಲ್ಲಿ ಸದರಿ ತರಿಗಳಲೆ ಗ್ರಾಮದ ಸರ್ವೆ ೨ನೆ ನಂಬರು ಜಮೀನು ಹರಾಜಾಗಿ ತಿಮ್ಮೇಗೌಡನ ಹೆಸರಿಗೆ ನಿಂತಿತು. ಇದಾದ ೧ ತಿಂಗಳಲ್ಲಿ ಅಪೀಲುವಾದಿ ಕ್ರಿಷ್ಣಶೆಟ್ಟಿಯು ಹರಾಜು ವಿಷಯವು ತನಗೆ ಗೊತ್ತೇ ಆಗಲಿಲ್ಲವೆಂತಲೂ ಮತ್ತು ಕಂದಾಯ ಬಾಕಿಯನ್ನು ತಾನು ಕೊಡುವುದಾಗಿಯೂ ಹೇಳಿ ಹರಾಜು ಕ್ಯಾನ್ಸಲ್ ಬಗ್ಗೆ ಡೆಪ್ಯುಟಿ ಕಮೀಷನರವರಲ್ಲಿ ಅರ್ಜಿ ಕೊಟ್ಟನು. ಸ್ಪೆಷಲ್ ನೋಟೀಸು ರಿಜಸ್ಟರಿನಲ್ಲಿ ಕ್ರಿಷ್ಣಶೆಟ್ಟಿಯು ತನ್ನ ಹೆಸರನ್ನು ದಾಖಲು ಮಾಡಿಸಿರುವದಿಲ್ಲವಲ್ಲದೆ ಹರಾಜು ಕಾಲದಲ್ಲಿ ಹೇಳಿ ಕಳುಹಿಸಿದರೂ ಹಾಜರಾಗದೆ ತಪ್ಪಿಸಿಕೊಂಡನೆಂತ ಅಮಲ್ದಾರ್ರವರು ರಿಪೋರ್ಟು ಮಾಡಿದ್ದರಮೇಲೆ ಡೆಪ್ಯುಟಿ ಕಮೀಷನರವರು ಹರಾಜು ನಡುವಳಿಕೆಯು ಕ್ರಮವಾಗಿ ಜರಗಿರುತ್ತೆಂದು ತಾತ್ಪರ್ಯಪಟ್ಟು ಹರಾಜನ್ನು ಕಾಯಂ ಮಾಡಿದರು.

ಗೌರ್ನಮೆಂಟಿನವರ ತೀರ್ಮಾನ.—ತರಿಗಳಲೆಯು ಸರ್ವಮಾನ್ಯ ಗ್ರಾಮ ಮತ್ತು ಇನಾಂದಾರನಿಂದ ಸರ್ಕಾರಕ್ಕೆ ಬರಬೇಕಾಗಿದ್ದ ಲೋನ್ ಬಾಕಿಗಾಗಿ ೧೮೮೭ನೆ ಇಸವಿಯಲ್ಲಿ ಸರ್ಕಾರಕ್ಕೆ ವಹಿಸಿಕೊಳ್ಳಲ್ಪಟ್ಟಿತು. ಗೌರ್ನಮೆಂಟು ಮ್ಯಾನೇಜುಮೆಂಟಿನಲ್ಲಿರುತ್ತೆ. ಈ ಸಂದರ್ಭದಲ್ಲಿ ಗೌರ್ನಮೆಂಟಿನವರು ಒಬ್ಬ ಶುದ್ಧಭೋಗ್ಯದಾರನ ಸ್ಥಾನದಲ್ಲಿ ಇರುವುದರಿಂದ ಭೋಗ್ಯ ಮಾಡಿದವನಿಗೆ ಇದ್ದ ಹಕ್ಕುಗಳಿಗಿಂತಲೂ ಹೆಚ್ಚಿಗೆ ಹಕ್ಕನ್ನು ಚಲಾಯಿಸಲಾರರು. ಆದಕಾರಣ ೧೮೯೪—೯೫ ಮತ್ತು ೧೮೯೫—೯೬ನೆ ಸಾಲುಗಳ ಕಂದಾಯದ ವಸೂಲಿಗೆ ಲಿಮಿಟೇಷನ್ ಅವಧಿಯು ಮೀರಿರುವದರಿಂದ ಗೌರ್ನಮೆಂಟಿನವರು ಈಗ ವಸೂಲಿ ಕ್ರಮ ಜರಗಿಸಲಾಗುವದಿಲ್ಲ.

Lucerne. *
ಮಸಾಲೆ ಸೊಪ್ಪು.

ಮಸಾಲೆಸೊಪ್ಪು ಕುದುರೆಗಳಿಗೆ ಬಹಳ ಪುಷ್ಟಿಕರವಾದ ಮೇವು. ಇದರ ವ್ಯವಸಾಯವು ಸಾಮಾನ್ಯವಾಗಿ ಎಲ್ಲಾ ದೇಶಗಳಲ್ಲಿಯೂ ಹರಡಿಕೊಂಡಿರುತ್ತದೆ. ಇದರ ಗಿಡವು ಸಣ್ಣಗೂ ಡೊಂಕಿಲ್ಲದೆ ನೇರವಾಗಿಯೂ ಮತ್ತು ರೆಂಬೆಗಳುಳ್ಳದ್ದಾಗಿಯೂ ಇರುತ್ತದೆ. ಒಂದು ಅಡಿಯಿಂದ ೩ ಅಡಿವರಿಗೆ ಉದ್ದವಾಗಿ ಬೆಳೆಯುವದು ಮತ್ತು ಹವಾ ಮೊದಲಾದ ಕಾಲಸ್ಥಿತಿಗಳು ಅನುಕೂಲವಾಗಿದ್ದು ಸರಿಯಾದ ವ್ಯವಸಾಯ ನಡೆದರೆ ೮—೧೦ ವರುಷಗಳವರೆಗೂ ಇರಬಲ್ಲದು. ಇಂಡಿಯಾ ದೇಶದಲ್ಲಾದರೋ ಗಿಡವು ೬-೭ ವರುಷಕ್ಕೆ ಜಾಸ್ತಿಯಾಗಿ ಬದುಕಿರುವದು ಅಪರೂಪ. ಗಿಡವು ಕಾಯಿ ಬಿಡುವದಕ್ಕೆ ಅವಕಾಶ ಕೊಡದೆ ಮೊದಲೆ ಸೊಪ್ಪನ್ನು ಕೊಯಿದುಕೊಳ್ಳುತ್ತಿದ್ದರೆ ಅಧಿಕಕಾಲ ಬದುಕಿರುವದು. ಒಳ್ಳೇಪ್ರಾಯಕ್ಕೆ ಬಂದಗಿಡದಿಂದ ವರುಷಕ್ಕೆ ೬-೮ ಸಲ ಸೊಪ್ಪು ಕೊಯಿದುಕೊಳ್ಳಬಹುದು. ಇದು ಬಹಳ ಆಳವಾಗಿ ಬೇರು ಬಿಡುತ್ತದೆ. ಆದರಿಂದ ಭೂಮಿಯ ಕೆಳಗಿರುವ ಸಸ್ಯಾಹಾರವನ್ನು ಮತ್ತು ತೇವವನ್ನು ತೆಗದುಕೊಂಡು ವೃದ್ಧಿಯಾಗಬಲ್ಲದಾದ್ದರಿಂದ ನೀರಿನ ಕ್ಷಾಮಬಂದ ಕಡೆಗಳಲ್ಲಿ ನೀರು ಹಾಕದೇ ಇದ್ದರೂ ಕೂಡ ತಡೆದು ಬೆಳೆಯುತ್ತದೆ. ಇದು ಉಷ್ಣ ಪ್ರದೇಶಗಳಲ್ಲಿ ನೀರು ಸರಬರಾಜು ಮಾಡಿದರೆ ಬಹಳ ಚೆನ್ನಾಗಿ ಫಲಿಸುತ್ತದೆ.

ಇದು ಇತರ ದ್ವಿದಳ ಧಾನ್ಯಗಳಹಾಗೆ ಭೂಮಿಯಲ್ಲಿ ನೈಟ್ರೋಜನ್ ವಾಯುವನ್ನು ಹೆಚ್ಚಿಸುತ್ತದೆ. ಇದರ ಬೇರುಗಳಮೇಲೆ ಇರುವ ಗಂಟುಗಳಲ್ಲಿ ಸೂಕ್ಷ್ಮ ಕ್ರಿಮಿಗಳು (Bacteria) ಉಂಟು. ಇವು ಭೂಮಿಯಲ್ಲಿ ಕೊಳೆಯುವದರಿಂದ ಇತರ ಗಿಡಗಳಿಗೆ ನೈಟ್ರೋಜನ್ ವಾಯುವನ್ನು ಒದಗಿಸಿ ಕೊಡುವವು ಮತ್ತು ಬೇರುಗಳು ಕೊಳೆಯುವದರಿಂದ ಗಡಸಾದ ಜಮೀನು ಮೆತುವಾಗುತ್ತದೆ.

ಮಸಾಲೆ ಸೊಪ್ಪು ಕುದುರೆಗಳಿಗೆ ಬಹಳ ಒಳ್ಳೆ ಆಹಾರವೆಂದು ಮೊದಲೇ ಹೇಳಿರುತ್ತದಷ್ಟೆ. ಇದನ್ನು ಸಾಮಾನ್ಯವಾಗಿ ಹಸಿಯಾಗಿರುವಾಗಲೇ ಕುದುರೆಗಳಿಗೆ ತಿನ್ನಿಸುತ್ತಾರೆ. ಕೆಲವು ವೇಳೆಗಳಲ್ಲಿ ಸೊಪ್ಪನ್ನು

* ಅಗ್ರಿಕಲ್ಚರಲ್ ಜರ್ನಲ್ ಆಫ್ ಇಂಡಿಯಾ, ಅಕ್ಟೋಬರು ೧೯೦೯.

ಒಣಗಿಸಿಡುವದೂ ಉಂಟು. ಈ ಸೊಪ್ಪಿಗೆ ಒಳ್ಳೆ ಖರೀದಿ (ಅಂದರೆ ೧ ರೂಪಾಯಿಗೆ ೩೪ ಮಣದಂತೆ) ದೊರಿಯುತ್ತದೆ. ಪೈರು ಚೆನ್ನಾಗಿ ಆದರೆ ಒಂದು ಕೊಯಿಲಿಗೆ ಎಕರೆಗೆ ೪೦—೫೦ ರೂಪಾಯಿ ಸಿಕ್ಕುವದು. ಮತ್ತು ನೀರಾವರಿ ಅನುಕೂಲವಾಗಿದ್ದ ಪಕ್ಷದಲ್ಲಿ ಸಾಲಿಯಾನ ಸುಮಾರು ೩,೪೫೮ ಮಣ ಹಸಿಮೇವು ಹುಟ್ಟುವಳಿಯಾಗುತ್ತೆ.

ಒಂದು ಕುದುರೆಗೆ ದಿನಕ್ಕೆ ೩ ಪಂಚೇರು ಸೊಪ್ಪಿಗಿಂತ ಹೆಚ್ಚಾಗಿ ತಿನ್ನಿಸಬಾರದು. ಸೊಪ್ಪನ್ನು ಮೊದಲು ಮೊದಲು ಸ್ವಲ್ಪ ಸ್ವಲ್ಪವಾಗಿ ಕೊಡುತ್ತಿದ್ದು ಕ್ರಮೇಣ ಹೆಚ್ಚಿಸಬೇಕು. ಷುರುವಿನಲ್ಲೆ ಹೆಚ್ಚಾಗಿ ತಿನ್ನಿಸುವುದರಿಂದ ಕೆಡಕು ಉಂಟಾಗುತ್ತದೆ.

ಮಸಾಲೆ ಸೊಪ್ಪು ಕರಾವುಆಕಳುಗಳಿಗೆ ಬಹಳ ಒಳ್ಳೆ ಆಹಾರವಾದಾಗ್ಯೂ ಆಕಳಿಗೆ ಅದನ್ನು ತತ್ರಾಪಿ ಹಸಿಯಾಗಿರುವಾಗ ವಿಶೇಷವಾಗಿ ತಿನ್ನಿಸಿದರೆ ಉಬ್ಬರ ಬರುತ್ತದೆ. ಕುದುರೆಗೆ ಕೊಡುವಂತೆ ಆಕಳಿಗೂ ದಿನಕ್ಕೆ ೩ ಪಂಚೇರು ಸೊಪ್ಪು ಸಾಕಾಗುತ್ತದೆ. ಈ ಪೈರಿಗೆ ಭೂಮಿಯಲ್ಲಿ ಸಾಕಾದಷ್ಟು ತೇವ ಮಾತ್ರ ಇದ್ದರೆ ಬಿಸಲಿನ ತಾಪದಿಂದ ವಿಶೇಷ ಕೆಡಕೇನೂ ಉಂಟಾಗುವುದಿಲ್ಲ. ಇದಕ್ಕೆ ಸಾಲಿಯಾನಾ ೨೦—೨೨ ಅಂಗುಲ ಮಳೆ ಸಾಕು. ಆದರೆ ಮಳೆ ನೀರಿನ ಜೊತೆಗೆ ಭೂಮಿಯ ಮೇಲ್ಗಡೆ ತೇವ ಆರಿದ ಹಾಗೆಲ್ಲಾ ನೀರು ಹಾಕುತ್ತಿರಬೇಕು. ಮಳೆ ಕೇವಲ ಸ್ವಲ್ಪವಾಗಿ ಕಾಲ ಕಾಲಕ್ಕೆ ಸರಿಯಾಗಿ ಬೀಳದಿರುವ ಕಡೆಗಳಲ್ಲಿ ನೀರು ಹಾಯಿಸದೇ ಹೋದರೆ ಫಸಲು ಸರಿಯಾಗಿ ಬರುವದಿಲ್ಲ.

ನೀರು ಚೆನ್ನಾಗಿ ಬಸಿದುಹೋಗುವ ಮತ್ತು ಬೇರುಗಳು ಸಲೀಸಾಗಿ ಇಳಿಯುವಂತೆ ಮೃದುವಾಗಿರುವ ಜಿಗಟು ಭೂಮಿಯು ಈ ಪೈರಿಗೆ ಬಹಳ ಪ್ರಶಸ್ತವಾದದ್ದು. ಜಮೀನಿನಲ್ಲಿ ೪೮ ಘಂಟೆಗಳಿಗಿಂತ ಹೆಚ್ಚಾಗಿ ನೀರು ನಿಲ್ಲಿಸಿದರೆ ಪೈರು ಉಳಿಯುವದಿಲ್ಲ; ಹೆಚ್ಚು ನೀರಿನಿಂದ ಪೈರು ಸತ್ತುಹೋಗುವದು.

ಬಿತ್ತನೆಗೆ ೨-೩ ತಿಂಗಳಿಗೆ ಮುಂಚಿತವಾಗಿ ಜಮೀನನ್ನು ಆಳವಾಗಿ ಉಳಬೇಕು. ನಾಟು ನೇಗಿಲಾದರೆ ೫-೬ ಉಳುಮೆ ಮಾಡಬೇಕಾಗುತ್ತದೆ. ಅನಂತರ ಕುಂಟೆ ಹೊಡದು ಕಳೆ ಕಸರು ತೆಗದುಹಾಕಿ ಹಂಟಹೊಡೆದು ಜ

ಮಿಾನನ್ನು ಸರಿಪಡಿಸಿಕೊಳ್ಳಬೇಕು. ಉಳುಮೆಗೆ ಮೊದಲು ಎಕರೆಗೆ ೩೦ ಗಾಡಿಯಂತೆ ಚೆನ್ನಾಗಿ ಮಾಗಿದ ಗೊಬ್ಬರವನ್ನು ಹಾಕಬೇಕು. ಉಕ್ಕೆ ಮತ್ತು ಕುಂಟೆ ಕೆಲಸ ನಡೆಯುವಾಗ ಇದು ಮಣ್ಣಿನಲ್ಲಿ ಚೆನ್ನಾಗಿ ಕಲಿತು ಹೋಗುತ್ತದೆ. ಬಿತ್ತನೆಗೆ ಮಳೆಗಳು ಶುರುವಾದ ತರುಣದಲ್ಲಿ ಅಥವಾ ಅಕ್ಟೋಬರು ಲಾಗಾಯಿತು ಡಿಶಂಬರುವರೆಗೂ ಬಹಳ ಒಳ್ಳೇ ಸಮಯ.

ಬೀಜದ ಖರೀದಿ ಸೇರಿಗೆ ೮೪ ಆಣೆಯಿಂದ ೧೬೪ ಆಣೆವರೆಗೂ ತರಹೆವಾರಿ ಬೀಳುವುದು. ಒಳ್ಳೇ ಬೀಜವನ್ನೇ ಹುಷಾರಿಯಿಂದ ಚುನಾಯಿಸಿಕೊಳ್ಳಬೇಕು.

ಬಿತ್ತನೆಯಲ್ಲಿ (೧) ಹಾಗೆಯೇ ಸುಮ್ಮನೆ ಚೆಲ್ಲಿಬಿಡುವದು ; (೨) ಕೂರಿಗೆಯಿಂದ ಬಿತ್ತುವದು ; (೩) ಕೈಯಿಂದ ಸಾಲು ಸಾಲಾಗಿ ಬಿತ್ತುವದು, ಹೀಗೆ ಮೂರು ಪ್ರಕಾರಗಳುಂಟು. (೧)ನೆ ರೀತಿಯಾದರೆ ಎಕರೆಗೆ ಸುಮಾರು ೬ ಮಣವೂ (೨)ನೇ ದಾದರೆ, ಸುಮಾರು ೫ ಪೀಸೆ (೩)ನೇ ದಾದರೆ ೪ ಮಣವೂ ಬಿತ್ತ ಹಿಡಿಯುತ್ತದೆ.

ಕೂರಿಗೆಯನ್ನು ಪಯೋಗಿಸುವದರಲ್ಲಿ ಬಿತ್ತವು ನೆಲದಲ್ಲಿ ತುಂಬಾ ಆಳವಾಗಿ ಹೋಗದಂತೆ ಬಹಳ ಹುಷಾರಾಗಿ ನೋಡಿಕೊಳ್ಳಬೇಕು.

ಕೈಯಿಂದ ಸಾಲು ಸಾಲಾಗಿ ಬಿತ್ತನೆ ಮಾಡುವದೇ ಮಿಕ್ಕ ಕ್ರಮಗಳಿಗಿಂತ ಶ್ರೇಷ್ಠವಾದದ್ದು. ಬೀಜ ಹಲಾಕಾಗುವದಿಲ್ಲ. ಆದರೆ ಇದು ಬಹಳ ನಿದಾನ ಮತ್ತು ಬೇಜಾರು ಹಿಡಿಸುವ ಕೆಲಸ.

ಇನ್ನು ನೀರು ಸರಭರಾಜಿನಿಂದ ಈ ಪೈರು ಮಾಡುವ ಜಮಿಾನಿನ ಬಿತ್ತನೆ ಕ್ರಮ ವಗೈರೆ ವಿಷಯಗಳು ಮುಂದಿನ ಸಂಚಿಕೆಯಲ್ಲಿ ಷಾಯಿಸು ಮಾಡಲ್ಪಡುವುವು.

Tumkur Central Co-operative Society.

ತುಂಕೂರು ಸೆಂಟ್ರಲ್ ಕೋ ಆಪರೇಟಿವ್ ಸೊಸೈಟಿ.

ತುಮಕೂರು ಸೆಂಟ್ರಲ್ ಕೋ ಆಪರೇಟಿವ್ ಸೊಸೈಟಿಯು ೧೯೧೯

ನೆ ಡಿಶಂಬರಿಗೆ ಆಖೈರಾದ ಛಷ್ಮಾಹೆ ಆಡಳಿತದ ರಿಪ್ರೋರ್ಟಿನ ಮುಖ್ಯಾಂ
ಶಗಳು ಇದರಡಿ ಸೂಚಿಸಲ್ಪಟ್ಟಿರುತ್ತವೆ.

ಸದರಿ ಆರು ತಿಂಗಳಲ್ಲಿ ಮೆಂಬರುಗಳ ಸಂಖ್ಯೆ ೩೦೯ ರಿಂದ ೩೬೭ಕ್ಕೆ
ಮತ್ತು ಷೇರು ಸಂಖ್ಯೆಗಳು ೬೬೪ ರಿಂದ ೯೨೩ಕ್ಕೆ ಹೆಚ್ಚಿತು. ಮತ್ತು
ಪೂರ್ತಿಯಾಗಿ ಷೇರು ಮೊಬಲಗು ಕೊಟ್ಟಿದ್ದ ೯೪ ಮೆಂಬರುಗಳಿಗೆ
೨೪೧ ಷೇರುಗಳಿಗೆ ಷೇರು ಸರ್ಟಿಫಿಕೇಟ್ ಕೊಡಲ್ಪಟ್ಟಿತು. ಷೇರು ಬಂ
ಡವಾಳವು ರೂ. ೭೦೧೯-೩-೬ರಿಂದ ೯೯೩೫-೫-೬ ಕ್ಕೆ ಹೆಚ್ಚಿತು. ಇದೇ
ಕಾಲದಲ್ಲಿ ೧೨೪೦—೪—೦ ರೂಪಾಯಿಗಳು ಡಿಪಾಜಟ್ಟಾಗಿ ಬಂದು
೫೩೭—೯—೦ ವಾಪ್ಸು ಕೊಡಲ್ಪಟ್ಟು ಬಾಕಿ ೧೧೪೦—೧೨—೦ ರೂ
ಪಾಯಿಗಳು ಸೊಸೈಟಿಯಲ್ಲಿ ಡಿಪಾಜಿಟ್ ಇತ್ತು. ಸೊಸೈಟಿಯು ಖರ್ಚು
೧೨೩-೧೫-೨ ಜಾತ ಐನ್ ನಫೆ ೩೭೦-೪-೪ ಹುಟ್ಟುವಳಿ, ಬಡ್ಡಿ, ಮೂಲ
ಕ ಬಂತು. ೧೯೦೯ನೆ ಡಿಶಂಬರ್ ಆಖೈರಿಗೆ ಒಟ್ಟು ಜಮೇರಿಫಂಡು ೩೬೯
೯-೧೧ ರೂಪಾಯಿ ಇತ್ತು.

ಈ ರಿಪ್ರೋರ್ಟಿನ ಕಾಲದಲ್ಲಿ ೯೧೪೩ ರೂಪಾಯಿ ಸಾಲ ಕೊಡಲ್ಪ
ಟ್ಟಿತು. ಈ ಪೈಕಿ ೨೯೫೬—೯—೦ ಒಳ್ಳೆನಡತೆ ಮತ್ತು ನಂಬಿಕೆ
ಮೇಲೆ ಸಾಲ ಕೊಡಲ್ಪಟ್ಟಿತು. ವಾಯಿದೆಗೆ ಸರಿಯಾಗಿ ಮೆಂಬರುಗಳು
ಸಾಲ ವಾಪಸು ಮಾಡುತಲಿದ್ದರೆಂದು ರಿಪ್ರೋರ್ಟಿನಿಂದ ತಿಳಿಯುಬರುವದು
ಬಹಳ ತೃಪ್ತಿಕರವಾಗಿರುತ್ತದೆ. ಈ ಸೊಸೈಟಿಯು ವ್ಯಾನೇಜುಮೆಂಟು
ನೋಡಿದರೆ ಈಗ ಕೆಲಸ ನಡೆಸುತ್ತಲಿರುವ ಪ್ರೆಸಿಡೆಂಟರು ಮ|| ಅನಂತರಾ
ಮಯ್ಯಂಗಾರು, ಸೆಕ್ರೆಟರಿ ಮ|| ಆರ್. ಶ್ಯಾಮರಾಯರು ಮತ್ತು ಕಮಿ
ಟಿ ಮೆಂಬರುಗಳು ಬಹಳ ಶ್ಲಾಘನೆಗೆ ಅರ್ಹರಾಗಿರುತ್ತಾರೆ.

Government Proceedings.

ಸರ್ಕಾರಿ ಹುಕುಂಗಳು.

ನಂ. $\frac{\text{ಆರ್. ೪೯೦೭}}{\text{ಎಲ್. ಆರ್. ೧೫೩-೦೯-೭}}$, ತಾ|| ೧೨—೧—೧೦.

ಕುಣಿಗಲ್ ತಾ|| ಗಂಟಗೋನಹಳ್ಳಿ ಗ್ರಾಮದ ಹುಲ್ಲುಬನ್ನಿ ಜವ

ನುಗಳಲ್ಲಿ ಬಾಚಗೂಗೂಚೇನಹಳ್ಳಿ ಗ್ರಾಮದ ರೈತರು ದನಗಳನ್ನು ಮೇಯಿಸುವ ಹಕ್ಕಿನ ವಿಚಾರವಾಗಿ ತಕರಾರು ಹುಟ್ಟಿ ಕಡೆಗೆ ಅಪೀಲಿನಲ್ಲಿ ಗೂಚೇನಹಳ್ಳಿ ಗ್ರಾಮಸ್ತರು ಗಂಟಗೋನಹಳ್ಳಿಯಲ್ಲಿ ಕಂದಾಯಕ್ಕೆ ಜಮೀನು ಮಾಡಿಕೊಂಡಿರುವದರಿಂದ ಇವರಿಗೂ ಈ ಗ್ರಾಮದ ಹುಲ್ಲುಬನ್ನಿ ಅನುಭವಿಸಲು ಹಕ್ಕು ಉಂಟೆಂದು ಡೆಪ್ಯುಟಿ ಕಮಿಷನರವರು ಮಾಡಿದ ಆರ್ಡರಿನ ಮೇಲೆ ಗಂಟಗೋನಹಳ್ಳಿ ಗ್ರಾಮಸ್ತರು ರೆವಿನ್ಯೂ ಕಮಿಷನರವರಲ್ಲಿ ೨ನೆ ಅಪೀಲು ತಂದರು. ಒಂದು ಗ್ರಾಮದ ಹುಲ್ಲುಬನ್ನಿಯನ್ನು ಆ ಗ್ರಾಮ ನಿವಾಸಿಗಳೇ ಅನುಭವಿಸತಕ್ಕದ್ದೆಂದು ೧೮೮೪ನೆ ಇಸವಿಯಲ್ಲಿ ಆಗಿರುವ ಹುಕುಮನ್ನು ಸಖ್ತ ಜಾರಿಯಲ್ಲಿ ತಂದರೆ ಈ ಗ್ರಾಮದಲ್ಲಿ ಜಮೀನುಗಳನ್ನು ಮಾಡಿಕೊಂಡು ಪರಂತು ದಿಗರು ಗ್ರಾಮದಲ್ಲಿ ವಾಸಿಸುವ ರೈತರಿಗೆ, ತತ್ರಾಪಿ ಈ ಮೊಕದ್ದಮೆಯಂತಹ ಸಂದರ್ಭಗಳಲ್ಲಿ (ಗೂಚೇನಹಳ್ಳಿ ಗ್ರಾಮಕ್ಕೆ ಗೋಮಾಳವೇ ಇಲ್ಲ, ಆದರೆ ದನಗಳೇನೋ ವಿಶೇಷವಾಗಿವೆ) ತುಂಬಾ ತೊಂದರೆ ಉಂಟಾಗುತ್ತದೆಯೆಂದೂ, ಈ ವಿಚಾರದಲ್ಲಿ ಸ್ಪಷ್ಟೀಕರಿಸಿ ಒಂದು ಹುಕುಂ ಆಗಬೇಕೆಂದೂ ರೆವಿನ್ಯೂ ಕಮಿಷನರವರು ಅಭಿಪ್ರಾಯಪಡಲು ಗೌರ್ನಮೆಂಟಿನವರು ಒಂದು ಗ್ರಾಮದಲ್ಲಿ ಜಮೀನು ಮಾಡಿಕೊಂಡಿರುವವರಿಗೆಲ್ಲಾ ಅವರು ಆ ಗ್ರಾಮ ನಿವಾಸಿಗಳೇ ಆಗಲಿ ಅಥವಾ ದಿಗರು ಗ್ರಾಮ ನಿವಾಸಿಗಳೇ ಆಗಲಿ, ಸದರಿ ಗ್ರಾಮದ ಹುಲ್ಲುಬನ್ನಿ ಜಮೀನುಗಳನ್ನು ಉಪಯೋಗಿಸಲು ಹಕ್ಕೇನೋ ಉಂಟು ಆದರೆ ಹುಲ್ಲುಬನ್ನಿ ಇರುವ ಗ್ರಾಮದ ನಿವಾಸಿಗಳ ಆವಶ್ಯಕತೆಯನ್ನು ಮೊದಲು ನೋಡಿಕೊಂಡು ಹುಲ್ಲು ಅವರ ದನಗಳಿಗಾಗಿ ಮಿಕ್ಕರೇನೆ ಇತರ ಗ್ರಾಮಸ್ತರಿಗೆ ಮೇಯಿಸಲು ಅವಕಾಶ ಕೊಡುವುದು ಒಳ್ಳೇದೆಂದೂ, ಪ್ರಸಕ್ತ ಮೊಕದ್ದಮೆಯಲ್ಲಿ ಗೂಚೇನಹಳ್ಳಿ ಗ್ರಾಮಸ್ತರು ಗಂಟಗೋನಹಳ್ಳಿಯಲ್ಲಿ ಬಹಳಕಾಲದಿಂದ ತಮ್ಮ ದನಗಳನ್ನು ಮೇಯಿಸುತ್ತಿರುವುದಲ್ಲದೆ ಗಂಟಗೋನಹಳ್ಳಿಯ ದನಗಳಿಗೆ ಬೇಕಾಗುವದಕ್ಕಿಂತಲೂ ಹೆಚ್ಚಾಗಿ ಮೇವು ಹೇರಳವಾಗಿ ರಿಕಾರ್ಡಿನಿಂದ ಕಂಡು ಬರುವದರಿಂದ ಈ ಹುಲ್ಲುಬನ್ನಿಯನ್ನು ಗೂಚೇನಹಳ್ಳಿ ಗ್ರಾಮಸ್ತರು ಅನುಭವಿಸಬಹುದೆಂದು ಹುಕುಂ ಮಾಡಿರುತ್ತಾರೆ.

Bordeaux Mixture & Potato Diseases.

ಬೋರ್ಡೋರ್ ವಿಶ್ರಣ ಮತ್ತು ಉರಲಗಡ್ಡೆಯ ರೋಗಗಳು.

ಈಸ್ಟರ್ನ್ ಬೆಂಗಾಲ್ ಮತ್ತು ಅಸ್ಸಾಂ ವ್ಯವಸಾಯ ಇಲಾಖೆಯವರು ಉರಲಗಡ್ಡೆ ಪೈರಿಗೆ ರೋಗಗಳನ್ನು ತಪ್ಪಿಸುವದಕ್ಕೆ „ಬೋರ್ಡೋರ್ ವಿಶ್ರಣವು" (Bordeaux Mixture) ಒಳ್ಳೆ ಸಾಧಕವಾದದ್ದೆಂಬ ಅಂಶವನ್ನು ೨೪ ಗ್ರಾಮಗಳಲ್ಲಿ ನಿದರ್ಶನಪೂರ್ವಕವಾಗಿ ರೈತರಿಗೆ ತೋರಿಸಿರುತ್ತಾರೆ. ನಿದರ್ಶನಕ್ಕಾಗಿ ಅಜೂಬಾಜೂ ಹೊಲಗಳನ್ನು ಚುನಾಯಿಸಿಕೊಂಡು ಒಂದು ಹೊಲದ ಪೈರಿಗೆ ೨ ಸಲ ವಿಶ್ರಣವನ್ನು ಪ್ರಯೋಗಮಾಡಿ ಮತ್ತೊಂದರ ಪೈರನ್ನು ಹಾಗೆಯೇ ಬಿಟ್ಟು ಇವೆರಡರ ತಾರತಮ್ಯವನ್ನು ನೋಡುವಲ್ಲಿ ವಿಶ್ರಣ ಚಿಮುಕಿಸಿದ ಹೊಲದಲ್ಲಿ ಎಕರೆಗೆ ಸುಮಾರು ೧೧೦ ಬಂಗಾಳ ಮಣವೂ ಮತ್ತೊಂದರಲ್ಲಿ ೮೦ ಮಣವೂ ಉರಲಗಡ್ಡೆ ಉತ್ಪತ್ತಿಯಾಯಿತು. ಅಂದರೆ ಮೊದಲನೇ ಹೊಲದಲ್ಲಿ ಇನ್ನೊಂದಕ್ಕಿಂತ ಸುಮಾರು ೩೦ ಮಣ ಹೆಚ್ಚಾಗಿ ಉತ್ಪತ್ತಿಯಾಗಿರುತ್ತೆ. ಇದರ ಬೆಲೆಯು ಕನಿಷ್ಟ ದರವನ್ನಿಟ್ಟುಕೊಂಡರೂ (ಮಣಕ್ಕೆ ೧-೪-೦ ರೂ) ಸುಮಾರು ೩೭೫ ರೂಪಾಯಿ ಆಗುತ್ತದೆ. ವಿಶ್ರಣದ ಖರ್ಚು ಎಕರೆಗೆ ೮-೪-೦ರೂಪಾಯಿ ತಗಲುವದು. ಈ ಖರ್ಚು ಕಳೆದು ಒಳ್ಳೆ ಲಾಭವೇ ಬಂದಂತಾಯಿತು. ೪೦ ನಿದರ್ಶನಗಳಲ್ಲಿ ೪ ಮಾತ್ರ ತೃಪ್ತಿಕರವಾಗಿ ನಡೆಯಲಿಲ್ಲವಂತೆ. ಮಿಕ್ಕ ೩೬ರಲ್ಲಿ ಒಳ್ಳೆ ಲಾಭವೇ, ಅಂದರೆ ಎಕರೆಗೆ ರೂ. ೧೨೫ಯಿಂದ ೨೧೬೫ವರೆಗೂ ತೇಲಿರುತ್ತದೆ. ಈ ವಿಶ್ರಣದ ಪ್ರಯೋಗವನ್ನು ಎರಡು ವರುಷಗಳು ಅಜಮಾಯಿಷಿ ಮಾಡಿದಲ್ಲಿ ಎರಡು ಸಾಲುಗಳಲ್ಲಿಯೂ ಫಲಪ್ರದವಾಗಿ ತೋರಿ ಬಂದದ್ದರಿಂದ ಬೋರ್ಡೋರ್ ವಿಶ್ರಣದಿಂದ ಆಲೂಗಡ್ಡೆಗೆ ಉಂಟಾಗುವ ಪ್ರಯೋಜನಾಂಶವು ರೈತರ ಮನಸ್ಸಿಗೆ ಚೆನ್ನಾಗಿ ಅಂಟಿ ಆಗಲೆ ಒಬ್ಬ ಸಮ್ರದಸ್ಥನಾದ ಜಮೀನುದಾರನು ಒಂದು ಚಿಮುಕಿಸುವ ಪಂಪನ್ನು (Pump) ತನಿಗೆ ಕ್ರಯಕ್ಕೆ ತರಿಸಿ ಕೊಡಬೇಕೆಂತಲೂ, ಪಂಪನ್ನು ಕ್ರಯಕ್ಕೆ ತೆಗದುಕೊಳ್ಳುವವಕ್ಕೆ ಸ್ವಲ್ಪ ಅನುಕೂಲ ಕಮ್ಮಿಯಾದವರು ಬಾಡಿಗೆಗೆ ಕೊಡಿಸಬೇಕೆಂದೂ ವ್ಯವಸಾಯ ಇಲಾಖೆಯವರಿಗೆ ಬರೆದುಕೊಂಡಿರುತ್ತಾರೆಂದು ಇಲಾಖಾ ಮುಜಕೂರು ೧೯೦೮—೦೯ನೆ ಸಾಲ್ ರಿಪೋರ್ಟಿನಿಂದ ಗೊತ್ತಾಗುತ್ತದೆ.

Occasional Notes.

ವಿವಿಧ ವೃತ್ತಾಂತಗಳು.

೧. ಮದ್ರಾಸು ಆಧಿಪತ್ಯದ ದಕ್ಷಿಣಭಾಗದಲ್ಲಿ ತರೀ ಮತ್ತು ಬಾಗಾಯಿತು ಜಮೀನುಗಳಲ್ಲಿ ಬಾಳೆಗಿಡವನ್ನು ವಿಶೇಷವಾಗಿ ಬೆಳೆಯುತ್ತಾರೆ. ಹಾಗೆಯೇ ಮೈಸೂರು ಸಂಸ್ಥಾನದ ಕೆಲವು ಪ್ರದೇಶಗಳಲ್ಲಿ ಬೆಳೆಯುತ್ತಿದ್ದಾಗ್ಯೂ ಅದರಿಂದ ಮದ್ರಾಸಿನವರಷ್ಟು ಪ್ರಯೋಜನವನ್ನು ಇಲ್ಲಿನವರು ಪಡೆಯುವದಿಲ್ಲ. ಆ ದೇಶದಲ್ಲಿ ಬಾಳೆಯು ಗೊನೆಹಾಕಿ ಕಾಯಿ ಬಿಟ್ಟಕೂಡಲೆ ಹೂವನ್ನು ಕಡಿದು ಹಾಕುವ ವಾಡಿಕೆಯುಂಟು. ಹೀಗೆ ಹೂವನ್ನು ಕಡಿದು ಹಾಕುವದರಿಂದ ಕಾಯಿಗಳು ರಸವತ್ತಾಗಿ ಆಗುತ್ತವೆಂದು ಅಲ್ಲಿನವರು ನಂಬುತ್ತಾರೆ. ಹುವ್ವೂ ಕೂಡ ಬಹು ರುಚಿಯಾದ ತರ್ಕಾರಿಯಾಗಿರುತ್ತೆ. ದೇಹಕ್ಕೂ ಆರೋಗ್ಯಕರವಾದದ್ದು. ಆದರೆ ಈ ದೇಶದಲ್ಲಿ ಗೊನೆ ಬಲಿಯುವ ತನಕ ಹೂವನ್ನು ತೆಗಿಯುವದಿಲ್ಲ. ಹುವ್ವನ್ನು ಮೊದಲೇ ಕಡಿದರೆ ಕಾಯಿಕೆಟ್ಟು ಹೋಗುವದೆಂತ ಇಲ್ಲಿನವರು ಹೇಳುತ್ತಾರೆ. ಮೇಲೆ ಹೇಳಿರುವ ಎರಡು ವಿಷಯಗಳನ್ನು ಪರೀಕ್ಷಿಸುವದು ಅವಶ್ಯವಾಗಿರುತ್ತೆ.

---

೨. ಇಂಗ್ಲೆಂಡಿನಲ್ಲಿ ವ್ಯವಸಾಯ ಇಲಾಖೆಯವರಿಗೂ ರೈತರಿಗೂ ಬಹಳ ಚೆನ್ನಾಗಿ ಹೊಂದಿಕೆ ಇದೆ. ನೂತನ ವ್ಯವಸಾಯ ಕ್ರಮಗಳನ್ನು ಕಂಡುಹಿಡಿಯುವ ಕೆಲಸವು ಸರ್ಕಾರಿ ಫಾರಂಗಳಲ್ಲಿ ನಡೆಯುವದಲ್ಲದೆ ಅನೇಕ ಉಪಯುಕ್ತವಾದ ಅಜಮಾಯಿಷಿಗಳು ಇಲಾಖೆಯವರ ಮೇಲ್ವಿಚಾರಣೆಗೆ ಒಳಪಟ್ಟು ರೈತರ ಜಮೀನುಗಳಲ್ಲಿಯೂ ಜರಗುತ್ತವೆ. ಜಮೀನುದಾರರು ಈ ಅಜಮಾಯಿಷಿ ಕೆಲಸಕ್ಕಾಗಿ 'ತಮ್ಮ ಸ್ವಂತ ಜಮೀನುಗಳನ್ನು ಇಲಾಖೆಯವರ ಸುಪರ್ದಿಗೆ ಸಂತೋಷವಾಗಿ ಬಿಟ್ಟುಕೊಡುತ್ತಾರಲ್ಲದೆ ಸ್ವಲ್ಪ ಬುದ್ಧಿಶಾಲಿಗಳಾದವರು ಅಜಮಾಯಿಷಿ ಕಾರ್ಯಗಳಲ್ಲಿ ಸರ್ಕಾರದವರಿಗೆ ತುಂಬಾ ಸಹಾಯಕರಾಗಿಯೂ ಇರುತ್ತಾರೆ. ಇಂಥಾ ಪ್ರೈವೇಟ್ ಅಜಮಾಯಿಷಿ ಜಮೀನುಗಳು ಮಧ್ಯರಾಷ್ಟ್ರವಾದ ಕಡೆಗಳಲ್ಲಿ ಅನೇಕವಿವೆ. ನಮ್ಮ ದೇಶದಲ್ಲಾದರೋ ವಿಶಿಷ್ಟ ಕಾರ್ಯಗಳೂ ಸರ್ಕಾರದವರೇ ಮಾಡ

ಲುಮಾಡಿ ಕೊನೆ ಮುಟ್ಟಿಸಬೇಕಾಗಿದೆ.—ಅಗ್ರಿಕಲ್ಚರಲ್ ಜರ್ನಲ್ ಆಫ್ ಇಂಡಿಯಾ, ಜುಲೈ ೧೯೦೯.

ಗೆಡ್ಡೆಗೆಣಸುಗಳು ನೋಡುವದಕ್ಕೆ ಗಾತ್ರವಾಗಿದ್ದಮಾತ್ರಕ್ಕೇನೇ ಅವು ಒಳ್ಳೇವೆಂದು ಹೇಳಲಿಕ್ಕಾಗುವುದಿಲ್ಲ. ಅವುಗಳಲ್ಲಿ ಒಳ್ಳೆ ಬಲ ಕೊಡತಕ್ಕ ಆಹಾರಾಂಶವೂ ಇರಬೇಕು. ಎಷ್ಟೋ ಗೆಡ್ಡೆಗಳು ಗಾತ್ರವಾಗಿಯೂ ಬರೀ ನೀರು ತುಂಬಿಕೊಂಡು ಇರುತ್ತವೆಯೇ ಹೊರತು ಇವುಗಳಲ್ಲಿ ಆಹಾರಾಂಶವೇ ಕಡಿಮೆ. ಕೆಲವು ಗೆಡ್ಡೆಗಳು ನೋಟಕ್ಕೆ ಸಣ್ಣವಾಗಿದ್ದರೂ ಶಾನೆ ಪುಷ್ಟಿಕರವಾದ ಆಹಾರಾಂಶದಿಂದ ಕೂಡಿಕೊಂಡಿರುತ್ತವೆ. ಇಂಗ್ಲೆಂಡಿನಲ್ಲಿ ವ್ಯವಸಾಯ ಇಲಾಖೆಯವರು ಮೊದಲು ಒಂದೊಂದು ಗೆಡ್ಡೆ ಜಾತಿಯನ್ನೂ ರಸಾಯನ ಶಾಸ್ತ್ರ ರೀತ್ಯಾ ಪರೀಕ್ಷಿಸಿ ಅದರಲ್ಲಿ ಯಾವಯಾವ ಅಂಶ (ಅಂದರೆ, ಜಲಾಂಶ, ಆಹಾರಾಂಶ, ಶರ್ಕರ, ವಗೈರೇಗಳು) ಎಷ್ಟೆಷ್ಟು ಪ್ರಮಾಣದಲ್ಲಿದೆ ಎಂದು ಗೊತ್ತುಮಾಡಿ, ಪುಷ್ಟಿಕರವಾಗಿಯೂ ಮತ್ತು ಚೆನ್ನಾಗಿ ಫಲಿಸತಕ್ಕದ್ದಾಗಿಯೂ ಇರುವ ಒಳ್ಳೇ ರಕಂಗೆಡ್ಡೆಗಳನ್ನೇ ಚುನಾಯಿಸಿಕೊಂಡು ಅಜಮಾಯಿಷಿ ತರೀಖು ಬೆಳೆದು ಪುನಃ ಈ ದಿನಸಿ ಬಿತ್ತವನ್ನೆ ಮುಂದಿನ ಅಜಮಾಯಿಷಿಗಳಿಗಾಗಿ ಉಪಯೋಗಿಸಿಕೊಳ್ಳುತ್ತಾರೆ. ಮುಖ್ಯವಾಗಿ ಈ ಚುನಾವಣೆ ಕ್ರಮದಿಂದ ದೇಶದಲ್ಲಿ ಮೇಲಾದ ರಕಂಗಳ ಬೆಳೆಯನ್ನು ವೃದ್ಧಿಪಡಿಸಬೇಕೆಂಬುವದೇ ಇಲಾಖೆಯವರ ಉದ್ದೇಶವಾಗಿರುತ್ತದೆ.—ಅಗ್ರಿಕಲ್ಚರಲ್ ಜರ್ನಲ್ ಆಫ್ ಇಂಡಿಯ, ಜುಲೈ, ೧೯೦೯.

V. B. SOOBBIAH AND SONS, PRINTERS, BANGALORE—1910.

THE MYSORE

REVENUE & AGRICULTURAL GAZETTE.

ವಾಲ್ಯುಂ ೪.] ಶುಕ್ರವಾರ, ೧ನೆ ಏಪ್ರಿಲ್ ೧೯೧೦. [ನಂ. ೧೧.

Contents.

1. Demonstration of Agricultural Implements.
2. Manures.
3. Improvement of Village Gomal Lands.
4. Sugar Making at Hebbal Farm.
5. Agricultural Scholarships.
6. Government Proceedings.
7. Notifications.
8. Occasional Notes. (i) Milking Machine. (ii) Crop Outturn in Madras Presidency. (iii) Agricultural Exhibition and Cattle Show.

ಅನುಕ್ರಮಣಿಕೆ.

೧. ವ್ಯವಸಾಯ ಮುಟ್ಟುಗಳ ನಿದರ್ಶನ.
೨. ಗೊಬ್ಬರಗಳು.
೩. ಗೋಮಾಳಗಳ ಅಭಿವೃದ್ಧಿಗೆ ಏರ್ಪಾಟುಗಳು.
೪. ಹೆಬ್ಬಾಳ ಫಾರಂನಲ್ಲಿ ಸಕ್ಕರೆಯ ತಯಾರಿ.
೫. ವ್ಯವಸಾಯ ಶಾಸ್ತ್ರ ವಿದ್ಯಾರ್ಥಿ ವೇತನ.
೬. ಸರ್ಕಾರಿ ಹುಕುಂಗಳು.
೭. ಇಸ್ತಿಹಾರ್ ನಾಮೆಗಳು.
೮. ವಿವಿಧ ವೃತ್ತಾಂತಗಳು. (i) ಹಾಲು ಕರೆಯುವ ಯಂತ್ರ. (ii) ಮದರಾಸು ಆಧಿಪತ್ಯದಲ್ಲಿ ಫಸಲುತ್ಪತ್ತಿ ತಪಸೀಲು. (iii) ವ್ಯವಸಾಯಕ ಮತ್ತು ದನಗಳ ಪ್ರದರ್ಶನ.

Demonstration of Agricultural Implements.

ವ್ಯವಸಾಯದ ಮುಟ್ಟುಗಳ ನಿದರ್ಶನ.

ತುಮಕೂರು ಡಿಸ್ಟ್ರಿಕ್ಟು ರೈತಾಪಿ ಜನಗಳಿಗೆ ಫಸಲ್ ರೇಖೆ ಮಾಡು ಯಂತ್ರದ ಕೆಲಸ ಮತ್ತು ಉಪಯೋಗವನ್ನು ಪ್ರತ್ಯಕ್ಷವಾಗಿ ತೋರಿ

ಸುವದಕ್ಕಾಗಿ ಕಳೆದ ಜನವರಿ ೧೬ನೆ ತಾರೀಖಿನಲ್ಲಿ ತಿಪಟೂರು ತಾಲ್ಲೂಕ ಬಾಣಸಂದ್ರದಲ್ಲಿ ಒಂದು ನಿದರ್ಶನವು ನಡೆಯಿತು. ಈ ಯಂತ್ರವನ್ನು ವ್ಯವಸಾಯದ ಇಲಾಖಾ ಛಾರ್ಜಿನಲ್ಲಿರುವ ಡಾಕ್ಟರು ಕೋಲ್‌ಮನ್‌ರವರು ಇಲಾಖಾ ಫಾರಂನಿಂದ ಒಬ್ಬ ಪ್ರದರ್ಶಕರ ಛಾರ್ಜಿನಲ್ಲಿ ಕಳುಹಿಸಿದ್ದರು.

೨. ತಿಪಟೂರು, ಗುಬ್ಬಿ, ಚಿಕ್ಕನಾಯಕನಹಳ್ಳಿ ತಾಲ್ಲೂಕುಗಳಿಂದಲೂ ಮತ್ತು ತುರುವೇಕೆರೆ ಸಬ್ ತಾಲ್ಲೂಕಿನಿಂದಲೂ ಮುಖ್ಯವಾದ ರೈತರು, ಜಮೀನುದಾರರು, ತಾಲ್ಲೂಕು ಬೋರ್ಡು ಮೆಂಬರುಗಳು, ಪಟೇಲರೂಸಹ ಸುಮಾರು ೫೦೦ ಜನಗಳು ನೆರೆದಿದ್ದರು. ನಿದರ್ಶನವನ್ನು ನೋಡಬೇಕೆಂಬ ಉತ್ಸಾಹದಿಂದ, ಅನೇಕರು ದೂರದಿಂದಾ ಬಂಡಿಮಾರ್ಗವಾಗಿಯೂ, ರೈಲಿನಿಂದಲೂ ಬಂದಿದ್ದರು. ಯಂತ್ರದ ಛಾರ್ಜಿನಲ್ಲಿದ್ದ ಪ್ರದರ್ಶಕರು ಕೆಲಸಕ್ಕೆ ಕೂಡಲೇ ಉಪಕ್ರಮಿಸಿ ರಾಗಿ, ಹುರಳಿ, ಹಾರಕ ಮತ್ತು ಬತ್ತ ಸಹಾ ರೇಖೆಮಾಡಿಸಿದರು. ನಿದರ್ಶನಕ್ಕೆ ಗುಬ್ಬಿ ಸಬ್ ಡಿವಿಜನ್ ಸೀನಿಯರ್ ಅಸಿಸ್ಟೆಂಟ್ ಕಮಿಷನರ್‌ರವರು ಬಂದಿದ್ದು ಯಂತ್ರದ ಕೆಲಸವನ್ನು ನೋಡುತ್ತಲಿದ್ದವರಿಂದ ಯಂತ್ರದ ಸಾಧಕ ಬಾಧಕಗಳನ್ನು ತಿಳಿದು ಅದಕ್ಕೆ ಪ್ರದರ್ಶಕರು ಹೇಳಿದ ಸಲಹೆ ಸಮಾಧಾನಗಳನ್ನು ನೋಟಕರಿಗೆ ಸ್ಪಷ್ಟಮಾಡಿಸಿ ತಿಳಿಹೇಳಿದರು. ಸಾಹೇಬರವರು ಯಂತ್ರದ ಭಾಗಗಳನ್ನು ಮತ್ತು ಅವು ಕೆಲಸ ಮಾಡುವ ತೀರನ್ನು ತೋರಿಸ ಹೇಳಲು ಪ್ರದರ್ಶಕರು ಭಾಗಗಳನ್ನೆಲ್ಲಾ ತೋರಿಸಿ ಸಂಗತಿಯನ್ನು ಚನ್ನಾಗಿ ವಿವರಿಸಿದರು.

೩. ಯಂತ್ರವು ಸಾಮಾನ್ಯವಾಗಿ ಎತ್ತುಗಳ ಎಳಿತದಿಂದ ಕೆಲಸ ಮಾಡುತ್ತದೆ. ಕಪಿಲೆ ಹೊಡೆದ ಎತ್ತುಗಳಾಗಲೀ ಗಾಣದ ಎತ್ತುಗಳಾಗಲೀ ಸಿಕ್ಕಿದರೆ ಈ ಕೆಲಸಕ್ಕೆ ಬಹಳ ಅನುಕೂಲ. ಎಣ್ಣೆ, ಕಬ್ಬು, ಮುಂತಾದ ಗಾಣಗಳಂತೆಯೇ ಯಂತ್ರಕ್ಕೆ ಎತ್ತುಗಳನ್ನು ಕಟ್ಟಿ ಅದರ ಸುತ್ತಲೂ ತಿರುಗಿಸುವುದರಿಂದ ಕೆಲಸ ನಡೆಯುತ್ತದೆ.

೪. ಈ ಯಂತ್ರದ ಮುಖ್ಯ ಅನುಕೂಲಗಳು ಯಾವವೆಂದರೆ— (೧) ಕೆಲಸ ಜಾಗ್ರತೆಯಾಗುತ್ತೆ; ಸರಿಯಾಗಿ ಕೆಲಸ ನಡೆದರೆ ಘಂಟೆಗೆ ೩ ಪಲ್ಲ ಧಾನ್ಯ ರೇಖೆ ಯಾಗುತ್ತೆ. (೨) ಗಾಳಿ ಮಾಡಿಕೆಯಲ್ಲಿರುವಂತೆ ...

ರುವ ಕೆಲಸಕ್ಕೆ ಗಾಳಿ ಒದಗುವವರೆಗೂ ಕಾಯುವ ಹಾಗೆ ಈ ಯಂತ್ರದ ಕೆಲಸಕ್ಕೆ ಕಾಯುತಕ್ಕ ಅವಶ್ಯಕವಿಲ್ಲ. (೨) ಸಣ್ಣ ಉಬ್ಬಲಿನ ಜೊತೆಯಲ್ಲಿ ಬೀಳಬಹುದಾದ ಸಣ್ಣ ತುಂಡುಗಳು ಸಹ ಪುನಃ ಯಂತ್ರಕ್ಕೆ ಕೊಟ್ಟರೆ ರಾಶಿಯಾಗಬಹುದು. (೩) ಧಾನ್ಯವು ಬಹಳ ಶುಭ್ರವಾಗಿ ಆಗುತ್ತೆ. (೪) ಅರಿಗಳನ್ನು ಕುಯ್ದನಂತರ ಮೆದೆ ಹಾಕತಕ್ಕ ಆವಶ್ಯಕತೆ ಇಲ್ಲ. ಕಂತೆ ಕಟ್ಟುವದಕ್ಕೆ ಮುಂಚೆಯೇ ಒಣಗಿದ ಅರಿಗಳನ್ನು ಯಂತ್ರದಿಂದ ರಾಶಿ ಮಾಡಿಸಬಹುದು.

೫. ಈ ಯಂತ್ರದೊಡನೆ ಒಂದು ಮೇವು ಕತ್ತರಿಸುವ ಯಂತ್ರವನ್ನು ತಂದಿದ್ದರು. ಯಂತ್ರಕ್ಕೆ ಒಂದು ಚಕ್ರವು ಜಂಟಿಸಿರುತ್ತೆ. ಚಕ್ರವನ್ನು ತಿರಿಗಿಸಿದರೆ ಇದರ ಪರಿವರ್ತನೆಗೆ ಯಂತ್ರವು ಕೆಲಸ ಮಾಡುವದು. ಮತ್ತು ಹುಲ್ಲು, ಕಡ್ಡಿ ಅಥವಾ ಸೊಪ್ಪನ್ನು ಎಷ್ಟು ಸಣ್ಣಸಣ್ಣಗಾದರೂ ಕತ್ತರಿಸುತ್ತದೆ. ಸಾಧಾರಣವಾಗಿ ಅವರೆ, ಜೋಳ, ಮುಂತಾದ ಕಡ್ಡಿಗಳನ್ನು ಹಾಗೆಯೇ ದನಕ್ಕೆ ಹಾಕುವದರಿಂದ ಅವು ಪೂರ್ತಿಯಾಗಿ ಉಪಯೋಗಿಸಲ್ಪಡದೆ ವಿಶೇಷವಾಗಿ ಹಲಾಕಾಗುವುವು. ಆದರೆ ಈ ಯಂತ್ರದಲ್ಲಿ ಕೊಟ್ಟು ಕತ್ತರಿಸಿ ಅನಂತರ ದನಕ್ಕೆ ಹಾಕಿದರೆ ಅನೇಕವಾಗಿ ಎಲ್ಲವೂ ತಿನ್ನಲ್ಪಟ್ಟು, ನಷ್ಟವಾಗುವದು ತಪ್ಪುತ್ತದೆ. ಮತ್ತು ಚೀಲಗಳಲ್ಲಿ ಹಾಕಿ ತುಂಬಿಟ್ಟರೆ ಸದರಿ ಮೇವು ದೀರ್ಘಕಾಲ ಪರ್ಯಂತರ ಉಪಯೋಗಕ್ಕೆ ಬರುತ್ತದೆ. ಅಲ್ಲದೆ ಮೇವು ಇಲ್ಲದ ಸ್ಥಳಕ್ಕೆ ರಫ್ತು ಮಾಡುವದಕ್ಕೂ ವಿಶೇಷ ಅನುಕೂಲ ಪಡುವದು.

೬. ನಿದರ್ಶನಕ್ಕೆ ಬಂದಿದ್ದವರ ಪೈಕಿ ಗುಬ್ಬಿ ತಾಲ್ಲೂಕು ಬೆಲವತ್ತ ಗ್ರಾಮದ ಪಟೇಲರು ಮ|| ಹೊನ್ನಲಿಂಗೇಗೌಡರು ಈ ಯಂತ್ರವನ್ನು ತಮ್ಮ ಕಣದಲ್ಲಿ ೨ ದಿನಗಳು ಕೆಲಸ ಮಾಡಿಸಿ ನೋಡಿ ತೃಪ್ತಿಪಟ್ಟು ಸ್ವಂತ ಉಪಯೋಗಕ್ಕೆ ಒಂದು ಯಂತ್ರವನ್ನು ತರಿಸುವವರಾಗಿದ್ದಾರೆ. ಸದರಿಯವರು ಭಾರಿ ಜಿರಾಯ್ತುದಾರರು, ಮತ್ತು ಪ್ರಜಾಪ್ರತಿನಿಧಿ ಸಭೆ ಮೆಂಬರ್ ಸಹ ಆಗಿರುವದರಿಂದ ಇವರ ಪ್ರಯತ್ನದಿಂದ ಯಂತ್ರದ ಕೆಲಸವು ವಿಶೇಷ ಪ್ರಚಾರಕ್ಕೆ ಬರುವದರಲ್ಲಿ ಸಂಶಯವಿಲ್ಲ.

೭. ಒಂದು ಮೇವು ಕತ್ತರಿಸುವ ಯಂತ್ರವನ್ನು ನಿದರ್ಶನಕ್ಕೆ

ಬಂದಿದ್ದ ಗುಬ್ಬಿ ತಾಲ್ಲೂಕು ದಾಸನಹಳ್ಳಿ ಗ್ರಾಮದ ಪಟೇಲ ಮ॥ ರಿ॥ ಲಿಂಗೇಗೌಡರು ಖಾಯಿಷ್ ಮಾಡಿರುತ್ತಾರೆ.

Manures.

ಗೊಬ್ಬರಗಳು.

ಮದರಾಸು ವ್ಯವಸಾಯ ಇಲಾಖೆಯ ಡೈರೆಕ್ಟರವರು ಎಲಬು, ಹಿಂಡಿ, ವಗೈರೆ ಗೊಬ್ಬರಗಳನ್ನು ಕುರಿತು ಒಂದು ಇಸ್ತಿಹಾರನ್ನು ಪ್ರಸಿದ್ಧಪಡಿಸಿರುತ್ತಾರೆ. ಅದರ ತಾತ್ಪರ್ಯವೇನಂದರೆ,

ಪ್ರಕೃತ ಇಂಡಿಯಾ ದೇಶದಿಂದ ಎಲಬು ಮತ್ತು ಹಿಂಡಿಗಳು ಇತರ ದೇಶಗಳಿಗೆ ವಿಶೇಷವಾಗಿ ರಫ್ತಾಗುತ್ತಿವೆ. ಇದಕ್ಕೆ ಕಾರಣವೇನಂದರೆ, ಈ ಪದಾರ್ಥಗಳು ದನದ ಗೊಬ್ಬರಕ್ಕಿಂತ ಉತ್ತಮವಾದ ಗೊಬ್ಬರವಾಗಿ ಉಪಯೋಗಪಡುತ್ತವೆಂಬುದನ್ನು ತಿಳಿಯದೆ ರೈತರು ಅವುಗಳನ್ನು ಯಥಾರ್ಥವಾದ ಕ್ರಯಕ್ಕಿಂತಲೂ ಕಮ್ಮಿಯಾಗಿ ಮಾರುತ್ತಾರೆ.

ಹೀಗೆ ಗೊಬ್ಬರವಾಗಿ ಉಪಯೋಗವಾಗುವ ಎಲಬು, ಹಿಂಡಿ, ವಗೈರೆ ವಸ್ತುಗಳ ಮಾದರಿಗಳನ್ನು ಜಮೀನುದಾರರು ಮತ್ತು ರೈತರು ಕೊಯಮುತ್ತೂರಿನಲ್ಲಿರುವ ಅಗ್ರಿಕಲ್ಚರಲ್ ಕೆಮಿಸ್ಟರವರಿಗೆ ಕಳುಹಿಸಿದಲ್ಲಿ ಇವರು ಉಚಿತವಾಗಿಯೇ ಸದರಿ ವಸ್ತುಗಳನ್ನು ಪರಿಶೋಧಿಸಿ ನೋಡಿ ಸಾಮಾನ್ಯ ದನದ ಗೊಬ್ಬರಕ್ಕೂ ಇವುಗಳಿಗೂ ಇರುವ ತಾರತಮ್ಯವನ್ನು ತಿಳಿಸುತ್ತಾರೆ. ಅವರಿಗೆ ಜಮೀನಿನ ಮಾದರಿಗಳನ್ನು ಕಳುಹಿಸಿಕೊಟ್ಟರೆ ಭೂಗುಣಗಳನ್ನೂ ಕೂಡ ಅವರು ಪರೀಕ್ಷಿಸಿ ಯಾವ ಯಾವ ಭೂಮಿಗಳಿಗೆ ಯಾವ ತರದ ಗೊಬ್ಬರಗಳು ಅನುಕೂಲವಾದವೆಂಬ ಸಂಗತಿಯನ್ನು ಕೂಡ ತಿಳಿಸುವರು.

ರಾಣಿ ಪೇಟೆಯ ಪ್ಯಾರಿ ಅಂಡ್ ಕಂಪೆನಿಯವರಲ್ಲಿಯೂ ಕೊಯಮುತ್ತೂರಿನ ಸ್ಟೇನ್ಸ್ ಅಂಡ್ ಕಂಪೆನಿಯವರಲ್ಲಿಯೂ ಮತ್ತು ಇತರ ಕಂಪೆನಿಗಳಲ್ಲೂ ಸಿಕ್ಕುವ ತಯಾರಿಸಿದ ಗೊಬ್ಬರಗಳು (Artificial Manures)ಸರಿಯಾಗಿ ಉಪಯೋಗಿಸಲ್ಪಟ್ಟ ಪಕ್ಷದಲ್ಲಿ ಅನೇಕ ವಿಧವಾದ ಪೈರುಗಳಿಗೆ

ಗುಣಕಾರಿ ಯೆಂನೆನೋ ಹೌದು. ಆದರೆ ಸಾಧಾರಣವಾಗಿ ದಕ್ಷಿಣ ಇಂಡಿಯಾದ ಸ್ಥಿತಿಗೆ ಇವುಗಳನ್ನು ಹಿಂಡಿ, ದನದ ಗೊಬ್ಬರ, ಹಸಿ ಸಸಿ ಗೊಬ್ಬರ, ಮೊದಲಾದ ವಿಶೇಷ ಧಾತು ಸಂಬಂಧವಾದ ಗೊಬ್ಬರಗಳೊಂದಿಗೆ ಬೆರಸಿ ಉಪಯೋಗಿಸಬೇಕು. ಇಂಥಾ ತಯಾರಿಸಿದ ಗೊಬ್ಬರಗಳನ್ನು ಕೊಂಡುಕೊಳ್ಳುವುದಕ್ಕಾಗಿ ದುಡು ಪ್ರವೇಶಮಾಡಿ ದ್ರವ್ಯ ವೆಚ್ಚ ಮಾಡುವ, ಮೊದಲು ಅಗ್ರಿಕಲ್ಚರಲ್ ಕೆಮಿಸ್ಟ್, ಕೊಯಮತ್ತೂರು ಅಗ್ರಿಕಲ್ಚರಲ್ ಕಾಲೇಜು, ಅಥವಾ ಬಳ್ಳಾರಿಯಲ್ಲಿರುವ ಉತ್ತರ ಡಿವಿಜನ್ ಅಥವಾ ತಿರುಚಿನಾಪಳ್ಳಿಯಲ್ಲಿರುವ ದಕ್ಷಿಣ ಡಿವಿಜನ್ ಡೆಪ್ಯುಟಿ ಡೈರೆಕ್ಟರ್ ಆಫ್ ಅಗ್ರಿಕಲ್ಚರವರನ್ನು ಕೇಳಿ ಅವರ ಅಭಿಪ್ರಾಯ ಮತ್ತು ಸಲಹೆಯನ್ನು ತೆಗೆದುಕೊಂಡು ಅನಂತರ ಕೊಂಡುಕೊಂಡರೆ ಒಳ್ಳೇದು.

Improvement of Village Gomal Lands.

ಗೋಮಾಳಗಳ ಅಭಿವೃದ್ಧಿಗೆ ಏರ್ಪಾಟುಗಳು.

ಗ್ರಾಮ ಗೋಮಾಳಗಳಲ್ಲಿ ಹುಲ್ಲಿನ ಬೆಳವಳಿಕೆಯನ್ನು ಹೆಚ್ಚಿಸುವದಕ್ಕಾಗಿ ಒಂದು ಏರ್ಪಾಟನ್ನು ಕಲ್ಪಿಸಬೇಕೆಂದು ಗೌರ್ನ್ಮೆಂಟಿನವರು ಮಾಡಿರುವ ಹುಕುಂ ಅನುಸರಿಸಿ ರೆವಿನ್ಯೂ ಕಮಿಷನರವರು ಈ ಕೆಳಗೆ ಕಂಡ ರೂಲುಗಳ ಮಸೂದೆಯನ್ನು ಪ್ರಸಿದ್ಧಪಡಿಸಿ, ಈ ಭಾಗದಲ್ಲಿ ಪ್ರಜೆಗಳ ಅಭಿಪ್ರಾಯವನ್ನು ತಿಳಿಯುವ ಉದ್ದೇಶ್ಯ ಸಂಸ್ಥಾನಾವಳೆ ಡಿಸ್ಟ್ರಿಕ್ಟ್ ಮತ್ತು ತಾಲ್ಲೂಕು ಬೋರ್ಡುಗಳು ಮತ್ತು ಯೂನಿಯನ್ ಪಂಚಾಯಿತಿಗಳ ಪ್ರೆಸಿಡೆಂಟರುಗಳು ಈ ಮಸೂದೆ ರೂಲುಗಳನ್ನು ಬೋರ್ಡು ಮತ್ತು ಪಂಚಾಯಿತಿಗಳಲ್ಲಿ ಚರ್ಚಿಸಿ ಆಯಾಯ ಸಂಘಗಳ ಅಭಿಪ್ರಾಯವನ್ನು ಈ ಲಾಗಾಯಿತು ೨ ತಿಂಗಳೊಳಗೆ ತಮಗೆ ತಿಳಿಸಬೇಕೆಂದು ೧೯೧೦ನೆ ಮಾರ್ಚಿ ೧೮-೨೧ನೆ ಮುಸ್ಕಂ ೯೩೪೩ನೆ ಸರ್ಕ್ಯುಲರ್ ಕೊಟ್ಟಿರುತ್ತಾರೆ.

೨. ಈ ರೂಲುಗಳನ್ನು ಜಾರಿಯಲ್ಲಿ ತಂದು ಅದರಂತೆ ಅನುಸರಿಸುವದಕ್ಕೆ ಗ್ರಾಮಸ್ಥರಲ್ಲಿ ತಕ್ಕ ಐಕಮತ್ಯವುಂಟೆ, ಮತ್ತು ರೂಲುಗಳನ್ನು ಮಂಜೂರು ಮಾಡಿದ್ದಾದರೆ ಪ್ರತಿ ತಾಲ್ಲೂಕಿನಲ್ಲಿಯೂ ಎಷ್ಟು ಗ್ರಾಮಗಳು ಇವುಗಳನ್ನು ಜಾರಿಯಲ್ಲಿ ತರಬಹುದು ಎಂಬುದು ಮುಖ್ಯವಾಗಿ

ವಿಚಾರಮಾಡಬೇಕಾದ ಅಂಶವಾಗಿರುತ್ತೆ. ಯಾವ ಯಾವ ಗ್ರಾಮಗಳಲ್ಲಿ ನಿವಾಸಿಗಳು ರೂಲುಗಳನ್ನು ಕೂಡ್ಲೆ ಜಾರಿಯಲ್ಲಿಡುವದಕ್ಕೆ ಮುಂದಾಗಿ ಬರುತ್ತಾರೆ ಎಂಬದನ್ನು ಸಾಧ್ಯವಾದ ಮಟ್ಟಿಗೂ ಗೊತ್ತುಹಚ್ಚಬೇಕು.

೩. ರೂಲುಗಳಲ್ಲಿ ತಿದ್ದುಪಾಟುಗಳು ಅಥವಾ ಬದಲಾವಣೆಗಳೇನಾದರೂ ಆಗಬೇಕೆಂದಿದ್ದರೆ ಸಂಕೋಚವಿಲ್ಲದೆ ತಿಳಿಸಬಹುದು.

೪. ಮೇಲ್ಕಂಡಂತೆ ಎಲ್ಲಾ ಬೋರ್ಡ್ ಮತ್ತು ಯೂನಿಯನ್‌ಗಳ ಅಭಿಪ್ರಾಯಗಳು ಬಂದನಂತರ ರೂಲುಗಳು ಒಂದು ಕಮಿಟಿಯಲ್ಲಿ ಚರ್ಚಿಸಲ್ಪಡುವುವು.

ಮಸೂದೆ ರೂಲುಗಳು.

I. ಸರ್ಕಾರಿ ಗ್ರಾಮಗಳಲ್ಲಿ ಗೋಮಾಳ ಜಮೀನನ್ನು ಸರಿಯಾಗಿ ಕಾಪಾಡಿ ಅಭಿವೃದ್ಧಿ ಪಡಿಸುವದಕ್ಕೂ ಮತ್ತು ದನಗಳನ್ನು ಮೇಯಿಸುವದನ್ನು ಕ್ರಮಪಡಿಸುವದಕ್ಕೂ, ಆಯಾಯ ಗ್ರಾಮದ ಅಥವಾ ಗೋಮಾಳದಲ್ಲಿ ಮೇಯಿಸುವ ಹಕ್ಕುಳ್ಳ ಎಲ್ಲಾ ಗ್ರಾಮಗಳ ನಿವಾಸಿಗಳ ಪೈಕಿ ವರ್ಜದಾರು, ಮತ್ತು ಬುದ್ಧಿವಂತರೂ ಆಗಿರುವವರು ಸೇರಿ ಒಂದು ಪಂಚಾಯಿತಿಯನ್ನು ಏರ್ಪಡಿಸಿಕೊಳ್ಳತಕ್ಕದ್ದು.

II. ಹುಲ್ಲುಗಾವಲು ಜಮೀನು ಸ್ವಲ್ಪವೇ ಇರುವ ಗ್ರಾಮಗಳಲ್ಲಿ (ಅಂದರೆ ೧೦೦ ರಾಸಿಗೆ ೫೦ ಎಕರೆಗಿಂತಲೂ ಜಾಸ್ತಿಯಾಗಿ ಇಲ್ಲದ ಗ್ರಾಮಗಳಲ್ಲಿ) ಪಂಚಾಯಿತದಾರ್ರಿಗೆ ಹುಲ್ಲು ಗಾವಲನ್ನು ಅಭಿವೃದ್ಧಿ ಪಡಿಸುವದು ಸಾಧ್ಯವೆಂದು ತೋರಿದರೆ,

(a) ವರುಷಕ್ಕೆ ಒಂದು ನಿರ್ದಿಷ್ಟವಾದ ಕಾಲದಲ್ಲಿ (ಪ್ರಾಯಶಃ ಆರಂಬವಿಲ್ಲದ ಕಾಲದಲ್ಲಿ) ದನಗಳನ್ನು ಹುಲ್ಲುಗಾವಲಿನಲ್ಲಿ ಬಿಡಕೂಡದೆಂದು ಅಡ್ಡಿ ಮಾಡುವದಕ್ಕೂ ;

(b) ಪ್ರತಿವರುಷವೂ ಗ್ರಾಮಸ್ಥರು ಗೋಮಾಳದಲ್ಲಿ ಕೆಲವು ಗೊತ್ತಾದ ಭಾಗಗಳನ್ನು ಉತ್ತು, ಕಳೆತೆಗೆದು ಹುಲ್ಲು, ಬೀಜಗಳನ್ನು ಬಿತ್ತುವದಕ್ಕೆ ಅವಕಾಶಕೊಡುವದಕ್ಕೂ;

(c) ಮೇಲೆ ಹೇಳಿದ ನಿವೇಶನಗಳಲ್ಲಿ ದನಗಳನ್ನು ಬಿಡುವದಕ್ಕೆ

ಮುಂಚೆಹೇಳಿದ್ದಂತೆ ಉಕ್ಕೆ ಮಾಡಿ ಹುಲ್ಲು ಬೆಳಸಿದ್ದ ರೈತರು ಹುಲ್ಲು ಕೆತ್ತುಕೊಳ್ಳಬಹುದೆಂದು ಅನುಮತಿ ಕೊಡುವದಕ್ಕೂ (ಇವರಿಗೆ ಕೊಡತಕ್ಕ ನಿವೇಶನವು ಇವರು ಮಾಡಿರುವ ಕೆಲಸಕ್ಕೆ ಅಥವಾ ಇವರ ಹಿಡುವಳಿಗಳ ವಿಸ್ತೀರ್ಣಕ್ಕೆ ಅಥವಾ ಇವೆರಡಕ್ಕೂ ಅನುಗುಣವಾಗಿರಬೇಕು);

(d) ಗೋಮಾಳ ಜಮೀನುಗಳ ಕೆಲವು ನಿರ್ದಿಷ್ಟವಾದ ಭಾಗಗಳಲ್ಲಿ ಗ್ರಾಮಸ್ಥರು ಒಬ್ಬೊಬ್ಬರಾಗಿಯೋ ಅಥವಾ ಒಟ್ಟಾಗಿಯೋ ಮೇವಿಗೂ ಮತ್ತು ಸೊಪ್ಪಿನ ಗೊಬ್ಬರಕ್ಕೂ ಉಪಯೋಗಪಡುವ ಗಿಡಗಳನ್ನು ಬೆಳಸಲು ಅವಕಾಶಕೊಡುವದಕ್ಕೂ, (ಒಬ್ಬನಿಗೇನೆ ಅನುಮತಿ ಕೊಡುವ ಪಕ್ಷದಲ್ಲಿ ಅವನವನ ಹಿಡುವಳಿ ಜಮೀನಿನ ವಿಸ್ತೀರ್ಣಕ್ಕೆ ತಕ್ಕ ಹಾಗೆ ಗೋಮಾಳದ ಭಾಗದ ವಿಸ್ತೀರ್ಣವನ್ನು ಗೊತ್ತುಮಾಡಬೇಕು);

(e) ಮತ್ತು ಸಾಮಾನ್ಯವಾಗಿ ಗೋಮಾಳ ಜಮೀನನ್ನು ಅಭಿವೃದ್ಧಿ ಪಡಿಸುವದಕ್ಕಾಗಿ ಸರ್ಕಾರದವರ ಮತ್ತು ಇತರರ ಹಕ್ಕುಬಾಧ್ಯತೆಗಳಿಗೆ ಯಾವ ಕುಂದಕವೂ ಬಾರದ ಹಾಗೆ ಎಲ್ಲಾ ಕೆಲಸಗಳನ್ನು ನಡೆಸುವದಕ್ಕೂ;

ಸದರಿ ಪಂಚಾಯಿತದಾರರಿಗೆ ಅಧಿಕಾರವಿರುತ್ತದೆ.

III. ಗ್ರಾಮದ ಉಪಯೋಗಕ್ಕೆ ಬೇಕಾಗುವದಕ್ಕಿಂತಲೂ ಹೆಚ್ಚಾದ ಗೋಮಾಳವುಳ್ಳ ಗ್ರಾಮಗಳಲ್ಲಿ

(೧) ದನಗಳ ಮೇವಿಗೆ ಎಷ್ಟುಬೇಕೋ ಅಷ್ಟು ಪ್ರದೇಶದಲ್ಲಿ ಮಾತ್ರವೇ ಮೇಯಿಸಬೇಕೆಂದು ಕಟ್ಟು ಮಾಡುವದಕ್ಕೂ;

(೨) ಮಿಕ್ಕ ಭಾಗವನ್ನು ೫ ವರುಷಕ್ಕೆ ಕಮ್ಮಿಇಲ್ಲದಷ್ಟು ಕಾಲ ಉಪಯೋಗಿಸಿಕೊಳ್ಳದೆ ಕಾಪಾಡುವದಕ್ಕೂ;

(೩) ಈ ಪ್ರದೇಶದ ವಿಷಯದಲ್ಲಿ IIನೆ ರೂಲಿನ (b)ಮತ್ತು(d) ಸಬ್ ಕ್ಲಾಜುಗಳಲ್ಲಿ ಕಂಡ ಅಧಿಕಾರ ಚಲಾಯಿಸುವದಕ್ಕೂ;

(೪) ಇದೇ ಸಂಬಂಧವಾಗಿ IIನೆ ರೂಲು (c) ಸಬ್‌ಕ್ಲಾಜಿನಲ್ಲಿ ಕಂ

ಡ ಅಧಿಕಾರವನ್ನು ಚಲಾಯಿಸುವದಕ್ಕೂ (ಆದರೆ ರೈತರ ...
ಲುಜಾತ ಉಳಿಯುವ ಹೆಚ್ಚಿಗೆ ಹುಲ್ಲನ್ನು ಮಾರತಕ್ಕದ್ದು)

(೫) ೪ನೇ ಸಬ್ ಕ್ಲಾಜಿನಲ್ಲಿ ನಮೂದಿಸಿರುವ ಮೇರೆ ವಿಕ್ರಯ...
ದ ಮೊಬಲಗಿನಿಂದ „ವಿಲೇಜು ಗ್ರೇಜಿಂಗ ಫಂಡನ್ನು"
(Village Grazing Fund) ಕೂಡಿಸಿ ಮೊಬಲಗನ್ನು ಗ...
ರ್ನಮೆಂಟು ಸೇವಿಂಗ್ಸ್‌ಬ್ಯಾಂಕಿನಲ್ಲಿಟ್ಟು ಯುಕ್ತವಾದ ರೀ...
ಯಲ್ಲಿ ವಿನಿಯೋಗಿಸುವದಕ್ಕೂ;

(೬) ಮತ್ತು ಈ ಫಂಡಿನಿಂದ ಬೇಲಿ ಹಾಕುವದು, ಕಾವಲು ಇಡು...
ದ, ಹುಲ್ಲು ಬೀಜವನ್ನು ತರಿಸುವದು, ವಗೈರೆ ಖರ್ಚುಗ...
ಗೆ ಹಣವನ್ನು ಉಪಯೋಗಿಸಿ ಕೊಳ್ಳುವದಕ್ಕೂ;

ಪಂಚಾಯಿತದಾರರಿಗೆ ಅಧಿಕಾರವಿರತಕ್ಕದ್ದು.

IV. ಗ್ರಾಮಸ್ಥರ ಒಂದು ಸಭೆ ಸೇರಿಸಿ ಸಭೆಯಲ್ಲಿ ಮೇಲ್ಕಂಡ... ವಿಷಯಗಳಲ್ಲಿ ಪ್ರತಿಯೊಬ್ಬ ರೈತನ ಜವಾಬ್ದಾರಿಯನ್ನು ಗೊತ್ತುಮಾ... ಡುವದಕ್ಕೆ ಪಂಚಾಯಿತದಾರರಿಗೆ ಅಧಿಕಾರ ವಿರತಕ್ಕದ್ದು.

V. ಯಾವ ರೈತನು ಪಂಚಾಯಿತದಾರರ ತೀರ್ಮಾನಕ್ಕೆ ಮೊದ... ಲು ಒಪ್ಪಿ ಅನಂತರ ಸದರಿಯಂತೆ ನಡೆದುಕೊಳ್ಳಲು ತಪ್ಪುತ್ತಾನೋ ಸದ... ರಿಯವನು ರಿಜರ್ವಿನ ಗೋಮಾಳದಲ್ಲಿ ತನಗಿರುವ ಹಕ್ಕನ್ನು ಕಳೆದುಕೊ... ಳ್ಳತಕ್ಕದ್ದಲ್ಲದೆ, ಅವನ ಭಾಗದ ಕೆಲಸದ ಖರ್ಚನ್ನು ಪಂಚಾಯಿತದಾರ... ಗೊತ್ತುಮಾಡುವ ದರದಂತೆ ಕೊಡಲು ಬದ್ಧನಾಗಿರತಕ್ಕದ್ದು.

VI. ಪಂಚಾಯಿತದಾರರ ತೀರ್ಮಾನದ ಮೇಲೆ ಅಮಲ್ದಾರ್ ವರಿ... ಅಪೀಲು ಉಂಟು. ಅಮಲ್ದಾರರ ತೀರ್ಮಾನವೇ ಆಖೈರು ತೀರ್ಮಾನವಾ... ಗಿರತಕ್ಕದ್ದು.

VII. ಮೇಲ್ಕಂಡ ರೀತಿಯಲ್ಲಿ ಗಿಡಗಳನ್ನೂ ಹುಲ್ಲನ್ನೂ ಬೆಳೆ... ರುವ ಜಮೀನುಗಳನ್ನು ಪಂಚಾಯಿತದಾರರ ಅನುಮತಿ ವಿನಹ ಸಾಗುವಳಿ... ಗಾಗಲಿ ಅಥವಾ ಇನ್ನಾವ ಉದ್ದೇಶಕ್ಕಾಗಲಿ ಕೊಡಕೂಡದು. ಆದರೆ ಸ... ಕಾರಣವಿಂದ ಗೌರ್ನಮೆಂಟಿನವರೇ ಆಗಲಿ ರೆವಿನ್ಯೂ ಕಮಿಷನರವರೇ ಆ...

ಗಲಿ ಹೀಗೆ ಕೊಡುವ ಪಕ್ಷದಲ್ಲಿ ಮೊಟ್ಟಮೊದಲು ಖುಷ್ಖರೀದಿ ಸಹಾ ಇಲ್ಲದೆ ಪಂಚಾಯಿತದಾರರಿಗೇನೆ ಕೊಡತಕ್ಕದು. ಇವರು ಬೇಡವೆಂದರೆ ಬೇರೆ ಜನರಿಗೆ ವಿಲೆವಾಡಬಹುದು. ಹೀಗೆ ಪಂಚಾಯಿತರನ್ನು ಕೇಳದೇನೆ ವಿಲೆ ಮಾಡುವ ಸಂದರ್ಭದಲ್ಲಿ ಇವರು ಇಟ್ಟಿರುವ ಗಿಡಗಳಿಗೂ ಮತ್ತು ಮಾಡಿರುವ ಇತರ ಅಬಾದಿಗೂ ನ್ಯಾಯವಾದ ಕಾಂಪೆನ್ಸೇಷನ್ ಮೊಬಲಗು ಯಾ ಪರಿಹಾರ ದ್ರವ್ಯವನ್ನು ಕೊಡಬೇಕು. ಈ ಮೊಬಲಗನ್ನು ಪಂಚಾಯಿತದಾರರು ರೈತರಿಗೆ ಹಂಚಬಹುದು, ಇಲ್ಲವೆ ಗೋಮಾಳದ ಉಳಿದ ಭಾಗದ ಅಭಿವೃದ್ಧಿಗೆ ವಿನಿಯೋಗಿಸಬಹುದು.

VIII. ಪಂಚಾಯಿತರು ಆದಷ್ಟು ವೇಳೆ ಪದೇ ಪದೇ ಸೇರಿ ಗೋಮಾಳದ ಅಭಿವೃದ್ಧಿಗೆ ಬೇಕಾಗುವ ಏರ್ಪಾಟುಗಳನ್ನು ಮಾಡಿಕೊಳ್ಳಬಹುದು. ಗ್ರಾಮ ನೌಕರರು ಸಭೆಯಲ್ಲಿ ನಡೆದ ವಿದ್ಯಮಾನಗಳ ದಾಖಲೆಯನ್ನು ಇಡತಕ್ಕದ್ದಲ್ಲದೆ ಪಂಚಾಯಿತದಾರರು ಕೈಗೊಂಡ ಉದ್ದೇಶಸಾಧನಕ್ಕೆ ಬೇಕಾಗುವ ಸಹಾಯವನ್ನೂ ಮಾಡತಕ್ಕದ್ದು.

Sugar Making at Hebbal Farm.

ಹೆಬ್ಬಾಳ ಫಾರಂನಲ್ಲಿ ಸಕ್ಕರೆಯ ತಯಾರಿ.

ಹೋದವರುಷ ಅಂದರೆ ೧೯೨೯ನೆ ಮೆ ಮಾಹೆಯಲ್ಲಿ ಹೆಬ್ಬಾಳದ ಎಕ್ಸ್ಪೆರಿಮೆಂಟಲ್ ಫಾರಂನಲ್ಲಿ ಕಬ್ಬಿನಿಂದ ನೇರಾಗಿ ಸಕ್ಕರೆ ಮಾಡುವ ವಿಧಾನವನ್ನು ಪ್ರತ್ಯಕ್ಷವಾಗಿ ತೋರಿಸಿಕೊಡುತ್ತೇವೆಂದು ಆಸಾಲ್ ಏಪ್ರಿಲ್ ೧೩ನೆ ತಾರೀಖಿನ ಸಂಚಿಕೆಯಲ್ಲಿ ಪ್ರಕಟಿಸಿತ್ತಷ್ಟೆ. ವ್ಯವಸಾಯ ಇಲಾಖಾ ಮುಜಕೂರು ೧೯೨೮—೨೯ನೆ ಸಾಲ್ ರಿಪೋರ್ಟಿನಲ್ಲಿ ಅಡಗಿರುವ ಈ ನಿದರ್ಶನದ ವಿಷಯವನ್ನು ನಮ್ಮ ವಾಚಕರ ತಿಳುವಳಿಕೆ ಬಗ್ಗೆ ಈ ಕೆಳಗೆ ನಮೂದಿಸಿರುತ್ತೆ.

ಹೆಬ್ಬಾಳ ಫಾರಮನ್ನು ನೋಡಿದ್ದ ಅನೇಕರು ಫಾರಂನಲ್ಲಿ ಅನುಸರಿಸುವ ಸಕ್ಕರೆ ಮಾಡುವ ವಿಧಾನವನ್ನು ಕಣ್ಣಾರ ನೋಡಬೇಕೆಂದು ಅಪೇಕ್ಷಿಸಿದ್ದದ್ದರಿಂದ ಈ ನಿದರ್ಶನವು ಏರ್ಪಡಿಸಲ್ಪಟ್ಟಿತ್ತು. ಕಬ್ಬಿನ ಹಾಲನ್ನು ಕಾಯಿಸುವ ವಿಧಾನದಲ್ಲಿ ಕೊಂಚ ಬದಲಾವಣೆಯಾಗಿರುತ್ತೆ. ಮೊ

ದಲು ಹಾಲು ಕಾಯಿಸುವದಕ್ಕೆ ರೂಢಿಯಲ್ಲಿರುವ ಒಂದೇ ಗುಂಡು ಕೊಪ್ಪರಿಗೆಯನ್ನು ಉಪಯೋಗಿಸುತ್ತಿತ್ತು. ಆದರೆ ಇದರಲ್ಲಿ ಹಾಲು ಬಹಳವಾಗಿ ಸೀದು ಹೋಗುತ್ತಿದ್ದದರಿಂದ ಈಚೆಗೆ ಈ ಕೆಲಸಕ್ಕೆ ಚೌಕನಾಗಿರುವ ೩ ಕೊಪ್ಪರಿಗೆಗಳನ್ನುಪಯೋಗಿಸಿ, ಹಾಲು ಒಂದು ಪಾತ್ರೆಯಲ್ಲಿ ಹದವಾಗಿ ಕಾದಮೇಲೆ ಕೊಳವೆಯ ಮೂಲಕ ಮತ್ತೊಂದಕ್ಕೆ ಬಿಟ್ಟುಕೊಂಡು ಇದರಲ್ಲಿ ಪಾಕ ಏರಿದಮೇಲೆ ಪುನಃ ಮೂರನೇದಕ್ಕೆ ಬಿಟ್ಟುಕೊಳ್ಳುವ ಏರ್ಪಾಟು ಮಾಡಿಕೊಂಡು ಆಯಾಯ ಪಾತ್ರೆಯಲ್ಲಿರುವ ಹಾಲಿನ ಹದಕ್ಕೆ ತಕ್ಕಹಾಗೆ ಉರಿಯನ್ನು ಹೆಚ್ಚು ಕಡಿಮೆ ಮಾಡಲಾಯಿತು. ಇದರಲ್ಲಾದ ಸಕ್ಕರೆಯು ಒಳ್ಳೇ ಬಣ್ಣವಾಗಿಯೂ ಮತ್ತು ಸಾಧಾರಣವಾಗಿ ಅಂಗಡಿಗಳಲ್ಲಿ ಸಿಕ್ಕುವ ಸ್ಥಳದ ಸರಕಿಗಿಂತಲೂ ಬೆಳ್ಳಗೂ ಇತ್ತು. ಕೊಂಚ ಬೆಲ್ಲದ ವಾಸನೆ ಇರುತ್ತೆಂದು ಆಕ್ಷೇಪಣೆ ಮಾತ್ರಬಂತು. ಆದರೂ ಸಕ್ಕರೆಯಲ್ಲಿ ಈ ವಾಸನೆಇರುವದು ಒಳ್ಳೆದೇ ಎಂದು ಬಂದಿದ್ದವರನೇಕರು ಹೇಳಿದರು. ನಿದರ್ಶನ ಕಾಲದಲ್ಲಿ ಈ ಸಕ್ಕರೆಯಿಂದ ಬತ್ತಾಸು ಮಾಡುವದಕ್ಕಾಗುವದಿಲ್ಲವೆಂತ ಕೆಲವರು ಅನುಮಾನಪಟ್ಟರು. ಆದರೆ ೨ ಮಿಠಾಯಿ ಅಂಗಡಿಯವರು ಇದರಿಂದ ಎಲ್ಲಾ ಬಗೆಯ ಮಿಠಾಯಿಗಳನ್ನು ಮಾಡಬಹುದೆಂದು ಹೇಳಿದ್ದಲ್ಲದೆ ಈ ಸಕ್ಕರೆಯನ್ನು ತೆಗದುಕೊಂಡು ಹೋಗಿ ಸ್ವಲ್ಪ ಬತ್ತಾಸನ್ನು ಮಾಡಿ ನೋಟಕರ ಅನುಮಾನ ಪರಿಹಾರಾರ್ಥವಾಗಿ ಫಾರಮಿಗೆ ಕಳುಹಿಸಿಕೊಟ್ಟರು. ಸಾಧಾರಣವಾಗಿ ಬಾಜಾರದಲ್ಲಿ ಸಿಕ್ಕುವ ಹೊರಗಿನಿಂದ ಬರುವ ಸರಕಿನ ಧಾರಣೆಯು ಮಣಕ್ಕೆ ೨| ರೂಪಾಯಿ ಇದ್ದರೆ ಫಾರಮಿನ ಸಕ್ಕರೆಯನ್ನು ಮಣಕ್ಕೆ ೩ ರೂಪಾಯಿನಂತೆ ಕೊಂಡುಕೊಳ್ಳುವದಾಗಿ ಈ ಮಿಠಾಯಿ ಅಂಗಡಿಯವರೇ ಹೇಳಿದರು.

ಕಾಕಂಬಿಯಿಂದ ಸಾಧಾರಣವಾಗಿ ಪೇಟೆಯಲ್ಲಿ ಸಿಕ್ಕುವ ಕರದು ಬೆಲ್ಲದಂತಹಾ ಬೆಲ್ಲವಾಯಿತು. ಒಳ್ಳೇ ಬೆಲ್ಲದ ಧಾರಣೆ ಮಣಕ್ಕೆ ೧—೧೪—೦ ಇರುವಾಗ ಈ ಬೆಲ್ಲಕ್ಕೆ ದಂಡಿನಲ್ಲಿರುವ ವ್ಯಾಪಾರಿಯು ೧—೬—೦ ಯಂತೆ ಕೊಂಡುಕೊಳ್ಳುವದಾಗಿ ಹೇಳಿದನು.

ನಿದರ್ಶನವನ್ನು ನೋಡುವದಕ್ಕೆ ೩೦೦ ಜನಕ್ಕಿಂತಲೂ ಹೆಚ್ಚಾಗಿ ಬಂದಿದ್ದರು. ಬಂದಿದ್ದವರ ಪೈಕಿ ಕೋಲಾರ ಡಿಸ್ಟ್ರಿಕ್ಟಿನವರೇ ವಿಶೇ

ವಾಗಿದ್ದರು. ಇದಕ್ಕೆ ಆ ಡಿಸ್ಟ್ರಿಕ್ಟಿನ ಡೆಪ್ಯುಟಿ ಕಮಿಷನರ್ ಮೆ॥ ಸಿ. ಶ್ರೀಕಂಠೇಶ್ವರಯ್ಯರವರ ಪ್ರೋತ್ಸಾಹವೇ ಕಾರಣವಾಗಿರುತ್ತದೆ. ನೋಕರ ಪೈಕಿ ಪೆರ್ಷನಲ್ ಅಸಿಸ್ಟೆಂಟ್ ಕಮಿಷನರ್ ಮೆ॥ ಬಾದಾಮಿ ಕೃಷ್ಣಯ್ಯರು ಈ ಸಂಬಂಧವಾದ ಯಂತ್ರೋಪಕರಣಗಳಿಗಾಗಿ ಖಾಯಿಷ್ ಮಾಡಿರುತ್ತಾರೆ.

Agricultural Scholarships.

ವ್ಯವಸಾಯ ಶಾಸ್ತ್ರ ವಿದ್ಯಾರ್ಥಿ ವೇತನ.

ಮೈಸೂರು ಸರ್ಕಾರದವರು ಈ ವರುಷ ವ್ಯವಸಾಯ ಶಾಸ್ತ್ರವನ್ನು ಕಲಿಯುವದಕ್ಕೆ ೩ ಜನ ವಿದ್ಯಾರ್ಥಿಗಳಿಗೆ ವೇತನವನ್ನು (Scholarships) ಕೊಡುವದಾಗಿ ವಿದ್ಯಾಭ್ಯಾಸ ಇಲಾಖಾ ಇನ್ಸ್ಪೆಕ್ಟರ್ ಜನರಲ್‌ರವರು ೧೯೧೦ನೇ ಮಾರ್ಚಿ ಮಾಹೆ ೧೭ನೇ ಮುದ್ರಿತ ಮೈಸೂರು ಗೆಜೆಟ್ಟಿನಲ್ಲಿ ಪ್ರಚುರಪಡಿಸಿರುತ್ತಾರೆ.

೧. ವೇತನವು ೩ ವರುಷ ಪರ್ಯಂತರ ಸಲ್ಲತಕ್ಕದ್ದಾಗಿರುತ್ತದೆ.

೨. ವೇತನವು ಮಾಹೆಯಾನ, ಮೊದಲನೆ ವರುಷ ೧೦ ರೂಪಾಯಿ, ೨ನೇ ವರುಷ ೧೨½ ರೂಪಾಯಿ, ಮಿಕ್ಕ ಅವಧಿಯಲ್ಲಿ ೧೫ ರೂಪಾಯಿಯಂತೆ ಕೊಡಲ್ಪಡುತ್ತೆ.

೩. ಅಭ್ಯಾಸ ಕಾಲದಲ್ಲಿ ವಿದ್ಯಾರ್ಥಿಗಳು ತಮ್ಮ ಸ್ಥಳದಿಂದ ಕಾಲೇಜಿಗೂ ಮತ್ತು ಕಾಲೇಜಿನಿಂದ ತಮ್ಮ ಊರಿಗೂ ಹೋಗಿ ಬರುವದಕ್ಕೆ ಸಲ ಮಟ್ಟಿಗೆ ಪ್ರತಿ ಪ್ರಯಾಣಕ್ಕೂ ರೈಲ್ ಛಾರ್ಜಿಗಾಗಿ ೩ನೇ ಕ್ಲಾಸ ೨ ಟಿಕೀಟುಗಳ ಮೊಬಲಗನ್ನು ಸರ್ಕಾರದವರು ಕೊಡುತ್ತಾರೆ.

೪. ವೇತನವನ್ನು ಪಡೆಯತಕ್ಕವರು ಮೆಟ್ರಿಕ್ಯುಲೇಷನ್ ಪರೀಕ್ಷೆ ಮಾಡಿರಬೇಕು ಮತ್ತು ೧೮ ವರುಷಕ್ಕೆ ಮೇಲ್ಪಟ್ಟು ೨೫ ವರುಷಗಳೊಳಗಿರಬೇಕು. ಇವರು ವ್ಯವಸಾಯವನ್ನು ತಮ್ಮ ಉದ್ಯೋಗವಾಗಿಟ್ಟುಕೊಳ್ಳಬೇಕು ಮತ್ತು ತಮ್ಮ ಜಾತಿ ಸ್ವಭಾವಗಳಿಂದ ದೇಶದ ವ್ಯವಸಾಯವನ್ನು ಅಭಿವೃದ್ಧಿ ಪಡಿಸುವದರಲ್ಲೇ ಸದಾ ನಿರತರಾಗುವಂತಿರಬೇಕು. ರಿಗೆ ಸ್ವಂತವಾಗಿ ೫೦ ಎಕರೆಗೆ ಕಮ್ಮಿಯಿಲ್ಲದೆ ಜಮೀನು ಇರಬೇಕು, ದ್ದನೆ ಇವರು ಇಷ್ಟು ಭೂಮಿಯನ್ನುಳ್ಳ ಅವಿಭಕ್ತ ಕುಟುಂಬಕ್ಕಾದ

ದೂ ಸೇರಿದವರಾಗಿರಬೇಕು. ಹೀಗೆ ಜಮೀನು ಇದೆ ಎಂಬುವದಕ್ಕೆ
ಅಸಿಸ್ಟೆಂಟ್ ಕಮೀಷನರ್ ಅಥವಾ ಅಮಲ್ದಾರರಿಂದ ಸರ್ಟಿಫಿಕೇಟನ್ನು
ಪಡೆದು ಅಪ್ಲಿಕೇಷನ್ ಯಾ ದರಖಾಸ್ತುಗಳ ಸಂಗಡ ರವಾನಿಸತಕ್ಕದ್ದು.

೬. ವಿದ್ಯಾರ್ಥಿಯು ತಾನು ದೃಢಕಾಯನಾಗಿದ್ದೇನೆಂಬುವದಕ್ಕೆ
ಸೀನಿಯರ್ ಸರ್ಜನ್‌ಯವರಿಂದ ಒಂದು ಸರ್ಟಿಫಿಕೇಟನ್ನು ಹಾಜರು ಮಾ
ಬೇಕು.

೭. ಸರ್ಕಾರದಿಂದ ಚುನಾಯಿಸಲ್ಪಡುವ ವಿದ್ಯಾರ್ಥಿಗಳು ೧೯
ನೇ ಜೂನ್ ೭ನೇ ತಾರೀಖಿನೊಳಗಾಗಿ ಕೊಯಮತ್ತೂರಿನಲ್ಲಿರುವ ಅಗ್ರಿಕ
ಲ್ಚರಲ್ ಕಾಲೇಜನ್ನು ಸೇರಬೇಕು. ಅಭ್ಯಾಸಕ್ಕೆ ನಿಯಮಿತವಾಗಿರು
ಕಾಲವು ಪೂರೈಸುವವರೆಗೂ ಬಿಡದೆ ತಾವು ವ್ಯಾಸಂಗ ಮಾಡಿಕೊಂಡು ಈ
ಕಾಲದಲ್ಲಿ ನಡೆಯಬಹುದಾದ ಎಲ್ಲಾ ಪರೀಕ್ಷೆಗಳಿಗೂ ಕೂಡುವದಾಗಿಯೂ
ಕಾಲೇಜಿನ ಕಟ್ಟಳೆಗಳಿಗನುಸಾರವಾಗಿ ನಡೆದುಕೊಳ್ಳುವದಾಗಿಯೂ ಮ
ತ್ತು ಕಾಲೇಜಿಗೆ ಕೊಡಬೇಕಾಗುವ ಹಣವನ್ನೆಲ್ಲಾ ಕೊಟ್ಟುಬಿಡುವದಾಗಿ
ಯೂ, ಇವರು ಕಾಲೇಜಿಗೆ ಸೇರಿದ ಕೂಡಲೇ ಒಂದು ಕರಾರನ್ನು ಬರೆದು
ಕೊಡತಕ್ಕದ್ದು. ಇದಕ್ಕೆ ವಿದ್ಯಾರ್ಥಿಯ ತಂದೆ ಅಥವಾ ಗಾರ್ಡಿಯನ್ ಸ
ಹಾ ರುಜುಹಾಕಿ ಹುಡುಗನು ಕರಾರಿನ ಷರತ್ತುಗಳಂತೆ ನಡೆದುಕೊಳ್ಳ
ಭಾಗದಲ್ಲಿ ಜವಾಬ್ದಾರರಾಗಿರಬೇಕು. ವಿದ್ಯೆಕಲಿಸುವದಕ್ಕೂ ಮತ್ತು
ಸ್ಥಳವಸತಿಗೂ ಹುಡುಗರು ಫೀಜು ಏನೂ ಕೊಡಬೇಕಾದಿಲ್ಲ. ಆದ
ಊಟದ ಖರ್ಚು ಅವರದೇ.

೮. ಸ್ಕಾಲರ್‌ಷಿಪ್ಪಿಗಾಗಿ ದರಖಾಸ್ತುಗಳನ್ನು ಇದೇ ಮಾಹೆ ೧೦
ತಾರೀಖಿನೊಳಗಾಗಿ ಇನ್ಸ್‌ಪೆಕ್ಟರ್ ಜನರಲ್‌ರವರಿಗೆ ಸೇರುವಂತೆ ಕಳುಹಿ
ಕೊಡಬೇಕು. ಕಾಲೇಜುಗಳಲ್ಲಿ ಓದುತ್ತಿರುವವರು ತಮ್ಮ ಅಪ್ಲಿಕೇಷನ್
ಗಳನ್ನು ಪ್ರಿನ್ಸಿಪಾಲ್ ಅಥವಾ ಹೆಡ್ಮಾಸ್ಟರವರ ದ್ವಾರ ಕಳುಹಿಸಬೇಕು.

Government Proceedings.

ಸರ್ಕಾರಿ ಹುಕುಂಗಳು.

ನಮ್ಮ ಸಂಸ್ಥಾನದಲ್ಲಿ ತಿದ್ದುಪಡಿಯಾದ ನೂತನ ಜಿರಾಯಿತು ಮಾ

ಟ್ಟುಗಳಿಗೆ ಗಿರಾಕಿಯು ದಿನೇ ದಿನೇ ಹೆಚ್ಚುತ್ತಿದ್ದು ಸಮಯಕ್ಕೆ ಬೇಕಾ
ಾಗ ಇವು ಸಿಕ್ಕದೆ ರೈತರು ಬಹಳತೊಂದರೆ ಪಡುತ್ತಿದಾರೆಂತಲೂ, ವರ್ತ
ರು ಈ ಯಂತ್ರಗಳಲ್ಲಿ ವ್ಯಾಪಾರ ಮಾಡುವದಕ್ಕೆ ತಕ್ಕಷ್ಟು ಗಿರಾಕಿಯು
ನ್ನೂ ಇಲ್ಲವಾಗಿ ಅವರು ಮುಂದು ಬರುವದಿಲ್ಲವೆಂತಲೂ, ವ್ಯವಸಾ
ರಾಭಿವೃದ್ಧಿಗೆ ಮೊದಲು ಮೊದಲು ಶ್ರೇಷ್ಠವಾದ ಮುಟ್ಟುಗಳನ್ನೇ
ೂಢಿಸುವದು ಅಗತ್ಯವೆಂತಲೂ ಆದರೆ ಈ ಭಾಗದಲ್ಲಿ ವರ್ತಕರಿಂದ ವಿಶೇಷ
ನುಕೂಲ ಉಂಟಾಗಲಾರದೆಂತಲೂ, ಆದ್ದರಿಂದ ಸರ್ಕಾರದ ತರಫಿನಿಂದ
ಂದು ಕೋಠಿಯನ್ನು ಸ್ಥಾಪಿಸಿ ಚೆನ್ನಾಗಿ ಪರೀಕ್ಷೆಮಾಡಿ ಉತ್ತಮವಾದ
ಂದು ಕಂಡು ಬಂದ ಮುಟ್ಟುಗಳನ್ನೇ ತರಿಸಿಟ್ಟು ರೈತರಿಗೆ ಮಾರಬೇಕೆಂ
ಲೂ ಅಗ್ರಿಕಲ್ಚರಲ್ ಕೆಮಿಸ್ಟರವರು ಶಿಫಾರಸು ಮಾಡಿರಲು ಗೌರ್ನಮೆಂ
ನವರು ಹುಕುಂ ಮಾಡಿರುವದೇನಂದರೆ,

ಸಂಸ್ಥಾನದ ಸಧ್ಯ ಸ್ಥಿತಿಯಲ್ಲಿ ನೂತನ ಜಿರಾಯಿತು ಮುಟ್ಟುಗಳ
ನ್ನು ನಮ್ಮ ರೈತರಲ್ಲಿ ಹೊಸದಾಗಿ ರೂಢಿಸುವ ಕಾರ್ಯವನ್ನು ಪ್ರೈವೇ
ಜನಗಳಿಗೆ ಬಿಡುವದು ಯೋಗ್ಯವಾಗಿ ಕಾಣುವದಿಲ್ಲ. ವ್ಯವಸಾಯ ಇ
ಾಖೆಯವರು ಹಾಲಿ ಇರುವ ಇಂಥಾ ಯಂತ್ರೋಪಕರಣಗಳನ್ನು ಪ್ರ
ುರಗೊಳಿಸುವದೇ ಅಲ್ಲದೆ ರೈತರ ಉಪಯೋಗಕ್ಕೆ ಅಗತ್ಯವಾಗಿ ಕಾಣು
ುವ ಯಂತ್ರಗಳನ್ನು ತರಿಸಿಕೊಡುವದರಲ್ಲಿಯೂ ಸಹಾಯ ಮಾಡ
ೇಕಾಗಿರುತ್ತೆ. ಇದಕ್ಕಾಗಿ ಇಲಾಖೆಯವರು ಒಂದು ಕೋಠಿಯನ್ನು
ಸ್ಥಾಪಿಸಿ ನೂತನ ವ್ಯವಸಾಯ ಯಂತ್ರಗಳನ್ನು ತರಿಸಿಟ್ಟು ಬಿಕರಿ ಮಾಡು
ಏರ್ಪಾಡು ಮಾಡಬಹುದು. ಆದರೆ ಪ್ರಕೃತದಲ್ಲಿ ಈ ವ್ಯಾಪಾರವು ಪ್ರ
ಲಪಟ್ಟು ವರ್ತಕರ ಹಸ್ತಗತವಾಗುವ ತನಕ ತಿದ್ದುಪಾಟಾದ ಮುಟ್ಟು
ಳಿಗೆ ಗಿರಾಕಿಯನ್ನು ಹೆಚ್ಚಿಸುವದೇ ಡಿಪೋವಿನ ಮುಖ್ಯೋದ್ದೇಶವಾಗಿ
ಬೇಕಾಗುವುದರಿಂದ ಚೆನ್ನಾಗಿ ಪರೀಕ್ಷೆಮಾಡಿ ಸಾಮಾನ್ಯ ರೈತರ ಯೋಗ್ಯ
ಗೆ ತಕ್ಕವೆಂದು ತೋರಿಬರುವ ಯಂತ್ರಗಳನ್ನು ಮಾತ್ರ ತರಿಸಿಡಬೇಕು.
ಾವ ಯಾವ ಯಂತ್ರಗಳನ್ನು ಪೂರ್ತಿಯಾಗಿಯೋ ಅಥವಾ ಅವುಗಳ
ಲವು ಭಾಗಗಳನ್ನಾದರೊ, ನಮ್ಮ ಸಂಸ್ಥಾನದಲ್ಲಿಯೇ ತಯಾರು ಮಾಡ

ಬಹುದೆಂದು ತೋರುತ್ತದೋ ಅಂಥವನ್ನು ಸ್ಥಳದಲ್ಲೇ ಮಾಡುವುದಕ್ಕೆ ಸಾ
ಧ್ಯವಾದ ಮಟ್ಟಿಗೂ ಪ್ರೋತ್ಸಾಹಿಸಬೇಕು.

ಈ ಡಿಪೋವು ಕ್ರಮವಾಗಿ ಏರ್ಪಟ್ಟನಂತರ ಈ ಸಮಾಚಾರ
ನ್ನು ಜಿರಾಯಿತುದಾರರಲ್ಲಿ ಪ್ರಚಾರಪಡಿಸಿ, ಸಮಯ ದೊರೆತಾಗ ಯಂ
ತ್ರಗಳ ಕೆಲಸವನ್ನೂ ಉಪಯೋಗವನ್ನೂ ಪ್ರತ್ಯಕ್ಷವಾಗಿ ತೋರಿಸುವ
ಕ್ಕೆ ಉದ್ಯುಕ್ತರಾಗಬೇಕು. ಈ ಯಂತ್ರಗಳನ್ನು ತರಿಸುವುದಕ್ಕೆ ಡೆಪ್ಯು
ಟಿ ಕಮಿಷನರವರು ಸಾಧ್ಯವಾದ ಮಟ್ಟಿಗೂ ರೈತರಿಗೆ ಸರ್ಕಾರದಿಂ
ಸಾಲವನ್ನು ಕೊಡಿಸಿ ಪ್ರೋತ್ಸಾಹ ಪಡಿಸತಕ್ಕದ್ದು. ಯಂತ್ರಗಳನ್ನು
ಅಗ್ರಿಕಲ್ಚರಲ್ ಇಲಾಖೆಯವರ ಮುಖಾಂತರವೇ ತರಿಸಿಕೊಳ್ಳಬೇಕು.

Notifications.

ಇಸ್ತಿಹಾರ್ ನಾಮೆಗಳು.

ನಂ. ೯೦೭೬. ತಾ|| ೧೨—೩—೧೯೧೦.

ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೧೭೭ನೆ ಪ್ರಕರಣದ ಮೇ
ಬೆಂಗಳೂರು ತಾ|| ಅಮಲ್ದಾರ್ ಮ|| ಎ. ಹೇಸ್ ರವರಿಗೆ ೧೯೧೦ನೆ ಇಸ
ಏಪ್ರಿಲ್ ೧ನೆ ತಾ|| ಲಾಗಾಯಿತು ಅಥವಾ ಅವರು ಉಪಯೋಗಿಸಿಕೊಳ್ಳು
ತಾ||ಲಾಗಾಯಿತು ಒಂದು ತಿಂಗಳ ಪ್ರಿವಿಲೇಜ್ ರಜಾ ಮಂಜೂರ್ಮಾಡಿರುತ್ತ

೨. ಅವರ ಗೈರ್ ಹಾಜರಿಯಲ್ಲಿ ತಾಲ್ಲೂಕು ಶಿರಸ್ತೇದಾರ್ ಬಿ. ಕೆ
ಚಿನ್ನಸ್ವಾಮಿನಾಯುಡು ಯವರು ತಾಲ್ಲೂಕು ಛಾರ್ಜಿನಲ್ಲಿರತಕ್ಕದ್ದು.

ನಂ. ೯೩೩೭. ತಾ|| ೧೪—೩—೧೯೧೦.

ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೧೭೭ನೆ ಪ್ರಕರಣದ ಮೇ
ಶಿಡ್ಲಘಟ್ಟ ತಾ|| ಅಮಲ್ದಾರ್ ಮ|| ಕೆ. ಕೇಶವಾಚಾರ್ಯರಿಗೆ ಅವರು ಉ
ಯೋಗಿಸಿಕೊಳ್ಳುವ ತಾರೀಖು ಲಾಗಾಯಿತು ೧೫ ದಿನಗಳ ಪ್ರಿವಿಲೇಜ್ ರ
ಜಾ ಕೊಟ್ಟಿರುತ್ತೆ.

೨. ಅವರ ಗೈರ್ ಹಾಜರಿಯಲ್ಲಿ ತಾಲ್ಲೂಕು ಶಿರಸ್ತೇದಾರ್ ಯಂ
ಕೆ. ಶ್ರೀನಿವಾಸಯ್ಯಂಗಾರ್ರು ತಾಲ್ಲೂಕು ಛಾರ್ಜಿನಲ್ಲಿರತಕ್ಕದ್ದು.

Occasional Notes.

ವಿವಿಧ ವೃತ್ತಾಂತ್ರಗಳು.

೧. ಈಚೆಗೆ ಅಮೇರಿಕಾ ದೇಶದಲ್ಲಿ ಹಾಲು ಕರಿಯುವದಕ್ಕೆ ಒಂದು ಯಂತ್ರವನ್ನು ರಚಿಸಿರುತ್ತಾರೆ. ಹಸುವಿನ ಮೊಲೆಗಳಿಗೆ ರಬ್ಬರು ಬು ಧ ವಂತಗಳನ್ನು (Funnels) ಸಿಕ್ಕಿಸಿ ರಬ್ಬರು ಕೊಳವೆಗಳ ಮೂಲ ಕ ಹಾಲಿನ ಪಾತ್ರೆಗೆ ಸೇರಿಸುತ್ತಾರೆ. ಒಂದು ಪಂಪಿನಿಂದ (Pump) ಕೊಳವೆಯೊಳಗಿನ ಘಾಳಿಯನ್ನು ಅರ್ಧದಷ್ಟು ತೆಗದು ಬಿಟ್ಟರೆ ಹಾಲು ತಾನಾಗಿಯೇ ಹಿಂಡುವದು. ಕೈಯಿಂದ ಹಾಲು ಕರಿಯುವದಕ್ಕಿಂತಲೂ ಜಾಗ್ರತೆಯಾಗಿಯೂ ಸುಲಭವಾಗಿಯೂ ಆಗುವದಲ್ಲದೆ ಹಾಲು ಶುದ್ಧವಾ ಬರುತ್ತದೆ. ಇದರಿಂದ ಕೆಚ್ಚಲಿಗೇ ಆಗಲಿ ಆಕಳಿನ ಸಾಮಾನ್ಯ ದೇ ಹಾರೋಗ್ಯಕ್ಕೇ ಆಗಲಿ ವಿರೋಧವೇನೂ ಆಗುವದಿಲ್ಲ.—ಅಗ್ರಿಕಲ್ಚರಲ್ ಂಡ್ ಇಂಡಸ್ಟ್ರಿಯಲ್ ಪ್ರೋಗ್ರೆಸ್, ಡಿಶಂಬರು ೧೯೦೯.

---

೨. ಮದರಾಸು ಅಧಿಪತ್ಯದಲ್ಲಿ ೧೯೦೯—೧೯೧೦ನೆ ಸಾಲ್ ಡಿಶಂಬರು ಆ ಖೈರುವರೆಗೆ, ೪೯೭೪೦೦ ಎಕರೆಗಳು ಎಳ್ಳು ಮತ್ತು ೪೧,೨೦೦ ಎಕರೆಗಳು ಕಬ್ಬಿನ ಸಾಗುವಳಿಯಲ್ಲಿಯೂ, ೧೯೧೦ನೆ ಜನವರಿ ಆಖೈರುವರೆಗೆ, ,೪೩೧,೪೦೦ ಎಕರೆಗಳು ಹತ್ತಿ ಮತ್ತು ೬೩೨,೦೦೦ ಎಕರೆಗಳು ನೆಲಗಡ್ಲೆ ಸಾಗಿನಲ್ಲಿಯೂ ಇದ್ದವೆಂತಲೂ, ಎಳ್ಳು ಮತ್ತು ಹತ್ತಿ ಸಾಗಿನಲ್ಲಿದ್ದ ವಿಸ್ತೀ ರ್ಣಗಳು ಗತವರುಷಕ್ಕಿಂತ ಶೇಕಡ ೧೩ ಮತ್ತು ೩ ರಷ್ಟು ಹೆಚ್ಚು, ಕಬ್ಬು ಮತ್ತು ನೆಲಗಡ್ಲೆ ಸಾಗಿನಲ್ಲಿದ ವಿಸ್ತೀರ್ಣಗಳು ಶೇಕಡ ೧ ಮತ್ತು ೧೧ ರ ಷ್ಟು ಕಡಿಮೆಯಾಗಿರುವದಾಗಿಯೂ, ಹುಟ್ಟುವಳಿಯು ಎಳ್ಳು ೪೨,೦೩೯, ಬೆಲ್ಲ ೭೭,೯೦೦, ನೆಲಗಡ್ಲೆ ೨೧೧,೭೨೮ ಟನ್ನುಗಳೂ ಮತ್ತು ಹತ್ತಿ ,೪೯,೫೨೪ ಬೇಲುಗಳೂ (ಬೇಲಿಗೆ ೪೦೦ ಪೌಂಡುಗಳಾಗುತ್ತೆ) ಆಗಬ ಹುದೆಂತ ಅಂದಾಜು ಮಾಡಲ್ಪಟ್ಟಿರುತ್ತೆಂತಲೂ ರೆವಿನ್ಯು ಬೋರ್ಡಿನವರು ಪ್ರಕಟಿಸಿ ಮಾಡಿರುವ ಪತ್ರಿಕೆಗಳಿಂದ ತಿಳಿದು ಬರುತ್ತದೆ.

---

೩. ಆನೇಕಲ್ಲಿನಲ್ಲಿ ಸ್ಥಾಪಿಸಲ್ಪಟ್ಟಿರುವ ಶ್ರೀ ಕೃಷ್ಣರಾಜೇಂದ್ರ ಅಗ್ರಿ ಕಲ್ಚರಲ್ ಅಸೋಸಿಯೇಷನ ವ್ಯವಸಾಯಕ ಮತ್ತು ದನಗಳ ಪ್ರದ ಪ್ರದರ್ಶನವು ೧೯೧೦ನೇ ಇಸವಿ ಏಪ್ರೆಲ್ ೧೮ನೇ ತಾರೀಖು ಸೋಮವಾರ ಲಾಗಾಯ್ತು ನಡಿಸಲ್ಪಡುವುದು.

ಆ ಕಾಲದಲ್ಲಿ ಪ್ರದರ್ಶನಕ್ಕೆ ಬರುವ ಪದಾರ್ಥಗಳಿಗೆ ೧೦೦ ರೂಪಾ ಯಿಯೂ, ದನಕರುಗಳಿಗೆ ೫೦ ರೂಪಾಯಿಯೂ ಅಂತು ೧೫೦ ರೂಪಾಯಿ ಗಳು ಬಹುಮಾನವಾಗಿ ಹಂಚಲ್ಪಡುವದಲ್ಲದೆ ಯೋಗ್ಯತಾ ಪತ್ರಿಕೆಗಳು ಸಹ ಕೊಡಲ್ಪಡುವುದು.

ಈ ಪ್ರದರ್ಶನವು ಆನೇಕಲ್ಲಿನಲ್ಲಿ ಬಹಳ ವಿಜೃಂಭಣೆಯಿಂದ ನಡಿಯು ವ ಶ್ರೀ ತಿಮ್ಮರಾಯ ಸ್ವಾಮಿಯವರ ರಥೋತ್ಸವ ಕಾಲದಲ್ಲಿಯೇ ನಡಿಸ ಲ್ಪಡುವುದರಿಂದ ರಥೋತ್ಸವಕ್ಕೆ ದನಕರುಗಳನ್ನು ತರತಕ್ಕಂಥಾವರು ಈ ಪ್ರದರ್ಶನದಲ್ಲಿ ತಮ್ಮ ದನಕರುಗಳಿಗೆ ಬಹುಮಾನಗಳನ್ನು ಹೊಂದಬಹು ದಾದ್ದು ಅಲ್ಲದೆ ವ್ಯಾಪಾರದಿಂದಲೂ ಲಾಭವನ್ನು ಪಡಿಯಲು ಅನುಕೂಲ ವಾಗಿರುತ್ತೆ. ಇನ್ನೂ ವಿಶೇಷವಾದ ಸಂಗತಿಯನ್ನು ತಿಳಿದುಕೊಳ್ಳ ಪೇಕ್ಷೆಯುಳ್ಳವರು ತಾಲ್ಲೂಕ್ ಅಮಲ್ದಾರ್ರವರಿಗೆ ಬರೆದು ತಿಳಿದುಕೊಳ್ಳ ಬಹುದು.

V. B. SOOBBIAH AND SONS, PRINTERS, BANGALORE — 1910.

THE MYSORE

REVENUE & AGRICULTURAL GAZETTE.

ವಾಲ್ಯುಂ ೪.] ಶುಕ್ರವಾರ, ೧೫ನೆ ಏಪ್ರಿಲ್ ೧೯೧೦. [ನಂ. ೧೨.

Contents.

1. Tata's Silk Farm.
2. Agricultural Implements and Machines.
3. Revenue Appeals.
4. Lucerne.
5. Cattle Shows.
6 Occasional Notes.
(i) Sheikdari Candidates. (ii) Aloe Fibre. (iii) Cow-peas. (iv) Outturn of Rice in Madras Presidency. (v) Seed-rate in Sugar-cane Cultivation. (vi) Irrigated Cotton. (vii) Sorghum. (viii) Co-operative Societies, (ix) Hand Looms.

ಅನುಕ್ರಮಣಿಕೆ.

೧. ಟಾಟಾಯವರ ರೇಷ್ಮೆ ಫಾರಂ.
೨. ಜಿರಾಯಿತು ಹತ್ಯಾರುಗಳೂ ಮತ್ತು ಯಂತ್ರಗಳು.
೩. ರೆವಿನ್ಯೂ ಅಪೀಲುಗಳು.
೪. ಮಸಾಲೆ ಸೊಪ್ಪು.
೫. ದನಗಳ ಪ್ರದರ್ಶನಗಳು.
೬. ವಿವಿಧ ವೃತ್ತಾಂತಗಳು.
(i) ಶೇಕದಾರಿ ವಿದ್ಯಾರ್ಥಿಗಳು. (ii) ಕತ್ತಾಳೆ ನಾರು. (iii) ಅಲಸಂದಿ ಕಾಳು. (iv) ಮದರಾಸಿನಲ್ಲಿ ಬತ್ತದ ಫಸಲುತ್ಪತ್ತಿ. (v) ಕಬ್ಬಿನ ಸಾಗುವಳಿಯಲ್ಲಿ ಬಿತ್ತನೆ ಕ್ರಮ. (vi) ನೀರು ಸರಬರಾಜಿನಿಂದ ಹತ್ತಿ ಸಾಗುವಳಿ. (vii) ಜೋಳ. (viii) ಕೋಆಪರೇಟಿವ್ ಸೊಸೈಟಿಗಳು. (ix) ಕೈ ಮಗ್ಗಗಳು.

Tata's Silk Farm.

ಟಾಟಾಯವರ ರೇಷ್ಮೆ ಫಾರಂ.

ಬೊಂಬಾಯಿಯ ಕೋಟ್ಯಾಧೀಶ್ವರರಾದ ಟಾಟಾಯವರು ಬೆಂಗಳೂರು ಸಮೀಪದಲ್ಲಿ ಒಂದು ರೇಷ್ಮೆ ಫಾರಮನ್ನು ಸ್ಥಾಪಿಸಿರುವದು ಸರಿಯಷ್ಟೆ. ಫಾರಂನಲ್ಲಿ ಹುಳುಗಳನ್ನು ಸಾಕುವುದರಲ್ಲಿಯೂ, ಹಿಪ್ಪನೇರಳೆ ಸೊಪ್ಪಿನ

ವ್ಯವಸಾಯದಲ್ಲಿಯೂ ಹೊಸ ಹೊಸ ಕ್ರಮಗಳನ್ನೇ ಸಾಧಾರಣವಾಗಿ ಅನುಸರಿಸುತ್ತಾರೆ. ಮತ್ತು ನಮ್ಮ ಸೀಮೆಯ ರೇಷ್ಮೆ ಕಸಬುದಾರರಿಗೂ ನೂತನ ವಿಧಾನಗಳನ್ನು ಕಲಿಸುವ ಉದ್ದೇಶದಿಂದ ರೇಷ್ಮೆ ಕಸಬು ವಿಶೇಷವಾಗಿ ನೆಲಗೊಂಡಿರುವ ಕಡೆಗಳಲ್ಲಿನ ಕೆಲವು ಸ್ಕೂಲು ಮೇಷ್ಟ್ರುಗಳನ್ನು ಫಾರಂನಲ್ಲಿ ತರಬೇತು ಮಾಡಿ ಇವರ ಮೂಲಕ ಗ್ರಾಮಾಂತರಗಳಲ್ಲಿನ ಕಸಬುದಾರರಿಗೆ ಕಲಿಸಿಕೊಡುವ ಏರ್ಪಾಟನ್ನು ಸರ್ಕಾರದವರು ಮಾಡಿರುವದು ನಮ್ಮ ವಾಚಕರಿಗೆ ಗೊತ್ತೇ ಇದೆ. ಮತ್ತು ಈ ಉದ್ದೇಶದಿಂದಲೇನೇ ಗೌರ್ನಮೆಂಟಿನವರು ಫಾರಂ ನಿವೇಶನವನ್ನು ಕಂದಾಯ ವಗೈರೆ ತಿರ್ವೆಗಳೇನೂ ಇಲ್ಲದೆ ಮುಫತ್ತಾಗಿ ಬಿಟ್ಟು ಕೊಟ್ಟಿರುವದಲ್ಲದೆ ಫಾರಮಿನ ಖರ್ಚಿನ ದೆಶೆಯಿಂದ ಸಾಲೆಯಾನ ೩೦೦೦ ರೂಪಾಯಿ ಗ್ರಾಂಟನ್ನೂ ಕೊಡುತ್ತಿರುವರು.

ಫಾರಮಿನ ಆಡಳಿತವನ್ನೆಲ್ಲಾ ಇದುವರೆಗೂ ತಾತಾ ಕಂಪೆನಿಯವರು ತಮ್ಮ ಕೈಯಲ್ಲೇ ಇಟ್ಟುಕೊಂಡಿದ್ದರು. ಈಗ ಇದನ್ನು ಸಾಲ್ವೇಷನ್ ಆರ್ಮಿಯವರು ವಹಿಸಿಕೊಳ್ಳಬೇಕೆಂತ ತಾತಾ ಕಂಪೆನಿಯವರು ಇಷ್ಟಪಡುವದರಿಂದ ಫಾರವು ತಮ್ಮ ವಶಕ್ಕೆ ಬಂದಮೇಲೆ ಮೇಲ್ಕಂಡ ರಿಯಾಯಿತಿಗಳನ್ನು ಈಗಿನಂತೆಯೇ ತಮಗೂ ನಡೆಸಿಕೊಡಬೇಕೆಂದು ಸದರಿ ಆರ್ಮಿಯವರು ಸರ್ಕಾರದವರನ್ನು ಕೇಳಿಕೊಂಡರು.

ಫಾರವು ಸಾಲ್ವೇಷನ್ ಆರ್ಮಿಯವರ ಕೈಕೆಳಗೆ ಬರುವದು ಈ ಸೀಮೆಯ ನೇಗೇಯುವರಿಗೆ ತಾನೆ ಫಾಯಿದೆಕರವಾಗಿರುವುದರಿಂದ ಆರ್ಮಿಯವರಿಗೆ ಸರ್ಕಾರದಿಂದ ಸಹಾಯ ಮಾಡುವದು ಮುನಾಸಬು ತೋರಿ ಗೌರ್ನಮೆಂಟಿನವರು ಫಾರಮಿಗೆ ಸೇರಿದ ಜಮೀನನ್ನು ಕಂದಾಯವಿಲ್ಲದೆ ಮುಫತ್ತಾಗಿ ಕೊಟ್ಟು ಇದರ ಜೊತೆಗೆ ಸಾಲೆಯಾನ ೩೦೦೦ ರೂಪಾಯಿ ಗ್ರಾಂಟನ್ನೂ ಮಂಜೂರುಮಾಡಿ, ಫಾರವನ್ನು ಆರ್ಮಿಯವರು ತಮ್ಮ ಮತ ಸಂಬಂಧ ಕಾರ್ಯಗಳಿಗೆ ಮಾತ್ರ ಈಷತ್ತೂ ಸಹಕಾರಿಯಾಗಿ ಖಂಡಿತವಾಗಿ ಇಟ್ಟುಕೊಳ್ಳಕೂಡದೆಂತಲೂ ಈಗ ಸ್ಯಾಂಕ್ಷನ್ ಮಾಡಿರುವ ಏರ್ಪಾಟುಗಳು ಸಧ್ಯಕ್ಕೆ ಅಜಮಾಯಿಷಿ ತರೀಕು ಮೂರು ವರುಷಗಳು ಮಾತ್ರ ಜಾರಿಯಲ್ಲಿರತಕ್ಕದ್ದೆಂದೂ ಹುಕುಂ ದಯಪಾಲಿಸಿರುತ್ತಾರೆ.

ಇನ್ನು ಮುಂದೆ ಫಾರಮಿನಲ್ಲಿ ಬಗೆ ಬಗೆಯ ರೇಷ್ಮೆ ಹುಳುಗಳನ್ನು ಸಾಕುವದು, ಉತ್ತಮ ತರಹೆ ಉಪ್ಪುನೇರಳೆಸೊಪ್ಪು ಮತ್ತು ಈ ಹುಳುಗಳು ತಿನ್ನುವ ಇನ್ನೂ ಇತರ ಚಾರಾಗಳ ವ್ಯವಸಾಯ, ವಗೈರೆ ರೇಷ್ಮೆ ಸಂಬಂಧವಾದ ವಿಶಿಷ್ಟ ಅಜಮಾಯಿಷಿಗಳೂ ನಡೆಯುವುದರಜೊತೆಗೆ ರೇಷ್ಮೆ ಬಟ್ಟೆ ಬರೆಗಳನ್ನೂ ನೇಯುವ ಕೆಲಸವೂ ಕೂಡ ಈಗ ಹೊಸದಾಗಿ ಏರ್ಪಟ್ಟಿರುತ್ತದೆ. ಇಷ್ಟೇಅಲ್ಲದೆ ಸಮಸ್ತ ಕ್ರಮಗಳನ್ನೂ ಜನಗಳಿಗೆ ಪ್ರತ್ಯಕ್ಷವಾಗಿ ಕೆಲಸಮಾಡಿ ತೋರಿಸುವದಕ್ಕಾಗಿ ಸಮಯೋಚಿತವಾಗಿ ಆಗ್ಯಾಗ್ಯೆ ನಿದರ್ಶನಗಳನ್ನು ಏರ್ಪಡಿಸುವದೂ ಮತ್ತು ಈ ಕೈಗಾರಿಕೆಯ ಮಾರ್ಗಗಳೆನ್ನೆಲ್ಲಾ ಕಸಬುದಾರಿ ಜನರಿಗೆ ಕಲಿಸಿಕೊಡುವದೂ ಆರ್ಮಿಯವರ ಮುಖ್ಯ ಉದ್ದೇಶಗಳಾಗಿರುತ್ತವೆ.

ಬೋಧಾಕ್ರಮದಲ್ಲಿಯೂ ಬರೀ ಪುಸ್ತಕಗಳಲ್ಲಿ ಮಾತ್ರ ಕಲಿಸಿ ಜನಗಳನ್ನು ಪುಸ್ತಕಪಂಡಿತರನ್ನಾಗಿ ಮಾಡುವದಿಲ್ಲ. ಸ್ವತಃ ಕೆಲಸ ಮಾಡುವದಕ್ಕೆ ಹಚ್ಚಿ ಪ್ರತ್ಯಕ್ಷ ಅನುಭವ ಕೊಡುತ್ತಾರೆ. ರೇಷ್ಮೆ ಕಸಬುದಾರರಾದರೆ ಫೀ ವಗೈರೆ ತೆಗದುಕೊಳ್ಳದೆ ಮುಫತ್ತಾಗಿ ಹೇಳಿಕೊಡುತ್ತಾರೆ. ಇತರರಾದರೆ ಫೀ ಕೊಡಬೇಕಾಗಿರುತ್ತೆ.

ಕೆಲಸ ಕಲಿಯುತ್ತಿರುವಾಗಲೂಕೂಡ ಜನಗಳಿಗೆ ಮೆಹನತ್ತಿಗೆ ತಕ್ಕಂತೆ ಕೂಲಿ ಕೊಡುವದೂ ಉಂಟು. ಮತ್ತೊಂದು ವಿಶೇಷವೇನಂದರೆ, ಆರ್ಮಿಯವರು ಹೆಂಗಸರಿಗೂ ಈ ಕಸಬಿನಲ್ಲಿ ಅನುಭವ ಕೊಡುತ್ತಾರೆ. ಇದಕ್ಕಾಗಿ ಪ್ರತ್ಯೇಕವಾದ ಜನಾನಾವಿಭಾಗ ಏರ್ಪಾಟಾಗುವದು.

ಈ ಆರ್ಮಿಯವರ ಮುಖ್ಯ ಉದ್ದೇಶವೇನೋ ತಮ್ಮ ಮತಾಭಿವೃದ್ಧಿಯೋ ಆಗಿದ್ದರೂ ಈ ಫಾರಂ ಕಾರ್ಯಗಳಲ್ಲಿ ಅದನ್ನು ತೋರ್ಪಡಿಸುವದಿಲ್ಲ ; ಈ ವಿಷಯದಲ್ಲಿ ಯಾರನ್ನೂ ಕಿಂಚಿತ್ತಾದರೂ ನಿರ್ಬಂಧ ಪಡಿಸುವದಿಲ್ಲವಾಗಿ ಯಾವ ಮತಸ್ಥರಾದರೂ ಸರಿಯೇ ನಿರ್ಭಯವಾಗಿ ಫಾರಂನಲ್ಲಿ ಕೆಲಸ ಕಲಿತುಕೊಂಡು ಹೋಗಬಹುದೆಂದು ಆರ್ಮಿಯವರು ಭರವಸೆ ಕೊಟ್ಟಿರುತ್ತಾರೆ.

ನಮ್ಮ ಶೀಮೆಯ ಕಾರೇಗಾರರು ಇಂಥಾ ಒಳ್ಳೆ ಸಮಯ ಒದಗಿರುವಾಗ ಕಾಲಹರಣ ಮಾಡದೆ ಸಾಲ್ವೇಷನ್ಆರ್ಮಿಯವರು ಪರೋಪಕಾರಬು

ದ್ಧಿಯಿಂದ ಕಲ್ಪಿಸಿಕೊಟ್ಟಿರುವ ಸೌಕರ್ಯಗಳನ್ನು ತಮ್ಮ ಪುರೋವೃದ್ಧಿಗೆ ಅನುಕೂಲವಾಗುವ ರೀತಿಯಲ್ಲಿ ಸದುಪಯೋಗಪಡಿಸಿಕೊಂಡು ತನ್ಮೂಲಕ ತಮ್ಮ ಸುಖಸಂಪತ್ತುಗಳನ್ನು ಹೆಚ್ಚಿಸಿ ಕೊಳ್ಳುವರೆಂದು ನಂಬಿದೆ.

Agricultural Implements & Machines.*

ಜಿರಾಯಿತು ಹತ್ಯಾರುಗಳೂ ಮತ್ತು ಯಂತ್ರಗಳು.

ಹೋದವರುಷ ಸಂಸ್ಥಾನದಲ್ಲಿ ಕೋಲಾರ ಮಿಷನವರು ತರಿಸುವ ಹಗುರವಾದ ನೇಗಿಲುಗಳಿಗೆ ಗಿರಾಕಿಯು ವಿಶೇಷವಾಗಿದ್ದು ಬೇಕಾದಷ್ಟನ್ನು ಸಕಾಲಕ್ಕೆ ಒದಗಿಸಿಕೊಡುವದಕ್ಕಾಗಲಿಲ್ಲ. ಮುಂಗಡವಾಗಿ ಇಲಾಖೆಯವರಲ್ಲಿ ಹಣ ಡಿಪಾಜಿಟು ಇಟ್ಟಿದ್ದವರಿಗೇನೇ ದೊರೆಯಲಿಲ್ಲ. ಮಿಷನಿನ ಅಧ್ಯಕ್ಷರಾದ ರೆ|| ಹಾಲಿಸ್ಟರ್‌ಯವರು (Revd.W.H. Hollister) ಈ ಸಲ ಇನ್ನೂ ಹೆಚ್ಚಾಗಿ ನೇಗಿಲುಗಳನ್ನು ತರಿಸುವುವರಾಗಿರುತ್ತಾರಾದ್ದರಿಂದ ಮುಂದಿನ ಉಳುಮೆಯ ಹೊತ್ತಿಗೆ ಬೇಕಾದಷ್ಟು ದೊರಕೀತೆಂದು ನಂಬಿದೆ. ಇಲಾಖೆಯಲ್ಲಿ ನೇಗಿಲು ಗುಳಗಳನ್ನು ಮಾತ್ರ ಕೆಲವರು ಖಾಯಿಷು ಮಾಡಿದರು. ಇವೂ ಕೂಡ ಇರಲಿಲ್ಲವಾಗಿ ಸ್ಥಳದ ಕಮ್ಮಾರರಿಂದ ಕೆಲವನ್ನು ಮಾಡಿಸಿ ಗುಳ ಒಂದಕ್ಕೆ ೮ ಆಣೆಯಿಂದ ೧೨ ಆಣೆವರೆಗೂ ಖರೀದಿಗೆ ಕೊಟ್ಟದ್ದಾಯಿತು. ಜಿರಾಯಿತು ಮುಟ್ಟುಗಳಿಗೆ ವ್ಯಾಪಾರಿಗಳು ಮನಸ್ಸಿಗೆ ಬಂದಹಾಗೆಲ್ಲಾ ಧಾರಣೆ ಹೇಳುವುದರಿಂದ ಈ ಹತ್ಯಾರುಗಳ ವ್ಯಾಪಾರವೇ ಬಹಳಮಟ್ಟಿಗೆ ಕಡಿಮೆಯಾಗಲು ಕಾರಣವಾಗುತ್ತದೆ. ಷುರುವಿನಲ್ಲಿ ಇಂಥಾ ಪ್ರತಿಕೂಲವನ್ನು ತಪ್ಪಿಸಬೇಕಾದರೆ ಈ ಮುಟ್ಟುಗಳನ್ನು ತಯಾರು ಮಾಡಿ ನಿರಖಾದ ಖರೀದಿಗೆ ಕೊಡುವಂತೆ ಸ್ಥಳದ ಅಥವಾ ಪರಸ್ಥಳದ ವ್ಯಾಪಾರಿಗಳೊಂದಿಗೆ ಇಲಾಖೆಯವರು ಒಂದು ಏರ್ಪಾಟು ಮಾಡಿಕೊಳ್ಳುವದು ಒಳ್ಳೇದು. ಈ ವರುಷ ನೇಗಿಲು ಗುಳಗಳನ್ನೇನೋ ಈ ರೀತಿ ಮಾಡಬೇಕೆಂದಿದೆ. ಗುಳಗಳನ್ನು ಇಲ್ಲೇ ತಯಾರುಮಾಡಿ ಹೊರಗಿನಿಂದ ಬರುವ ಸರಕಿಗಿಂತಲೂ ಕಡಿಮೆ ಖರೀದಿಗೆ ಮಾರಿ ಲಾಭ ಪಡಿಯಬಹುದೆಂಬುದರಲ್ಲಿ ಸಂಶಯವೇನೇನೂ ಇರುವದಿಲ್ಲ.

* ಮೈಸೂರು ಸರ್ಕಾರಿ ವ್ಯವಸಾಯ ಇಲಾಖೆಯ ೧೯೦೮—೦೯ನೇ ಸಾಲ್ ರಿಪೋರ್ಟು.

ಈಗ ಮೂರು ವರುಷದ ಕೆಳಗೆ ಡಾಕ್ಟರ್ ಲೇಮನ್‌ಯವರು ತರಿಸಿದ ಫಸಲು ರೇಖೆ ಮಾಡುವ ಯಂತ್ರವು ದಿನೇ ದಿನೇ ಹೆಚ್ಚಾಗಿ ರೂಢಿಯಲ್ಲಿ ಬರುತ್ತಿದೆ. ಅನೇಕರು ಅದನ್ನು ಎರವಲಾಗಿ ಕೇಳಿದರು. ಆದರೆ ಸ್ವಂತವಾಗಿ ಯಂತ್ರವನ್ನು ಕೊಂಡುಕೊಳ್ಳಲು ಇಷ್ಟಪಟ್ಟವರಿಗೇನೇ ಎರವಲು ಕೊಟ್ಟದ್ದಾಯಿತು. ಯಂತ್ರದ ಸವಕಳಿ ಮತ್ತು ನಡೆಸೋಣದ ಖರ್ಚಿಗಾಗಿ ದಿನಕ್ಕೆ ೨ ರೂಪಾಯಿನಂತೆ ಬಾಡಿಗೆ ವಸೂಲು ಮಾಡಲಾಯಿತು. ಆಗಲೆ ಎರಡು ಯಂತ್ರಗಳಿಗೋಸ್ಕರ ಬರೆಸಿರುತ್ತೆ. ಮತ್ತು ಮುಂದಿನ ಫಸಲುರೇಖೆಕಾಲದೊಳಗಾಗಿ ಇನ್ನೂ ಕೆಲವನ್ನು ತರಿಸಬೇಕಾಗುವ ಸಂಭವ ಉಂಟಾದೀತು. ಇದಲ್ಲದೆ ಮೇವು ಕತ್ತರಿಸುವ ಯಂತ್ರಕ್ಕೂ ಕ್ರಮೇಣ ಗಿರಾಕಿಯು ಹೆಚ್ಚುತ್ತಿದೆ. ಹೋದವರುಷ ಜಮೀನುದಾರರಿಗೋಸ್ಕರವಾಗಿ ೩ ಯಂತ್ರಗಳನ್ನು ತರಿಸಿದ್ದಾಯಿತು.

ಮೇಲ್ಕಂಡವು ಅಲ್ಲದೆ ಅರಮನೆ ಕರೋಹಟ್ಟಿ ಇಲಾಖೆಗಾಗಿ ಒಂದು ಫಸಲು ಕಟಾವು ಯಂತ್ರ (Reaping Machine), ಒಂದು ಹುಲ್ಲು ಕೊಯ್ಯುವ ಯಂತ್ರ (Mowing Machine), ಒಂದು ಆವಿ ಬಲದಿಂದ ನಡೆಯುವ ಮೇವು ಕತ್ತರಿಸುವ ಯಂತ್ರ (Power Chaff Cutter), ಮತ್ತು ಒಂದು ಆವಿಬಲದಿಂದ ನಡೆಯುವ ತೂರುವ ಯಂತ್ರ (Power Winnowing Machine), ಈ ನಾಲ್ಕನ್ನು ಕ್ಯಾನಡಾ ದೇಶದಿಂದ ತರಿಸುವವರಾಗಿದಾರೆ. ಮತ್ತು ಇದೇ ಇಲಾಖೆಗಾಗಿ ಆವಿಯಬಲದಿಂದ ಕೆಲಸ ಮಾಡುವ ಒಂದು ಬೀಸುವ ಯಂತ್ರವನ್ನೂ (Power Grinding Mill) ತರಿಸುವದರಲ್ಲಿದೆ.

ವ್ಯವಸಾಯ ಇಲಾಖೆಗಾಗಿ ಒಂದು, ಮತ್ತು ಪೆನ್ಷನ್ ಅಸಿಸ್ಟೆಂಟ್ ಕಮಿಷನರ್ ಮೆ॥ಬಾದಾಮಿ ಕೃಷ್ಣರಾಯರಿಗೋಸ್ಕರ ಒಂದು, ಅಂತು ೨ ಸಕ್ಕರೆ ತಯಾರು ಮಾಡುವ ಯಂತ್ರಗಳಿಗಾಗಿ (Sugar Centrifugals) ಬರೆಸಿರುತ್ತೆಯಲ್ಲದೆ ಮೆ॥ ಕೃಷ್ಣರಾಯರಿಗೋಸ್ಕರವಾಗಿಯೇ ಪಂಜಾಬು ನಾಹನ್ ಕಾರ್ಖಾನೆಯಿಂದ (Nahan Foundary) ಎರಡು ಕಬ್ಬಿನ ಗಾಣಗಳು (Sugar Mills) ತರಿಸಲ್ಪಟ್ಟವು.

Revenue Appeals.

ರೆವಿನ್ಯೂ ಅಪೀಲುಗಳು.

೧೯೦೮—೦೯ನೆ ಇಸವಿಯ ಅಪೀಲು ನಂ. ೨೭.

ಅಪೀಲು ವಾದಿಗಳು.		ಅಪೀಲು ಪ್ರತಿವಾದಿಗಳು.
೧. ಶಂಕರನಾರಣಪ್ಪ.	*vs.*	೧. ನರಸಿಂಹಯ್ಯ.
೨. ಗುಂಡಪ್ಪ.		೨. ಸೀತಾರಾಮಯ್ಯ

ಮೊಕದ್ದಮೆ ವಿದ್ಯಮಾನ.—೧೮೨೨-೨೩ನೆ ಇಸವಿಯಲ್ಲಿ ಸುಬ್ಬಯ್ಯನೆಂಬುವನು ಮಾಗಡಿ ತಾ|| ಯಣ್ಣೆಗೆರೆ, ವಸ್ತಾರಹಳ್ಳಿ ಮತ್ತು ಜೋಡಿ ಕುತಿಮಾಳ್ಯ ಗ್ರಾಮಗಳ ರಿಜಸ್ಟರದಾರ್ ಶಾನುಭೋಗನಾಗಿದ್ದನು. ದೊಡ್ಡನರಸಿಂಹಯ್ಯನೆಂಬುವನು ಮೂಲ ಹಕ್ಕುದಾರನಾದ ಸುಬ್ಬಯ್ಯನಿಂದ ಶಾನುಭೋಗಿ ಹಕ್ಕನ್ನು ಖರೀದಿಗೆ ಪಡೆದನೆಂಬ ಆಧಾರದಮೇಲೆ ಈತನ ಹೆಸರು ೧೮೬೩-೬೪ನೆ ಸಾಲ್ ಬಾರಾಬಲೂತಿ ರಿಜಸ್ಟರಿನಲ್ಲಿ ಶಾನುಭೋಗಿ ಹಕ್ಕುದಾರನೆಂದೂ ಇವನ ಮಗ ಅಪ್ಪಯ್ಯ ಮತ್ತು ಇವನ ತಮ್ಮನ ಮಗ ಲಕ್ಷ್ಮೀನರಸಯ್ಯ ಇವರಿಬ್ಬರೂ ಹಿಸ್ಸೇದಾರರೆಂದೂ ದಾಖಲಾಗಿರುತ್ತೆ. ಆದರೆ ದೊಡ್ಡನರಸಿಂಹಯ್ಯನ ಅಳಿಯ ಕ್ರಿಷ್ಣಪ್ಪನು ಶಾನೆ ಕಾಲದಿಂದ ಶಾನುಭೋಗಿ ಕೆಲಸವನ್ನು ನೋಡುತ್ತಿದ್ದು ಈತನ ಮರಣಾನಂತರ ಚೆನ್ನಯ್ಯನೆಂಬುವನು ಈ ಕೆಲಸಕ್ಕೆ ಬಂದನು. ೧೮೮೦ರಲ್ಲಿ ಚೆನ್ನಯ್ಯನು ನಾಲಾಯಖು ಸಬಬು ಕೆಲಸದಿಂದ ವಜಾ ಮಾಡಲ್ಪಟ್ಟು ಮೂಲ ಹಕ್ಕುದಾರ ಸುಬ್ಬಯ್ಯನ ವಂಶಕ್ಕೆ ಸೇರಿದ ೧ನೆ ಅಪೀಲುವಾದಿ ಶಂಕರನಾರಣಪ್ಪನು ೧೮೮೦ನೆ ಜುಲೈ ೧೩ರಲ್ಲಿ ಶಾನುಭೋಗಿ ಕೆಲಸ ನೋಡುವದಕ್ಕೆ ಮೊಕರರು ಮಾಡಲ್ಪಟ್ಟನು. ತದಾರಭ್ಯ ಇವನು ಮತ್ತು ಇವನ ಮಗ ಗುಂಡಪ್ಪನೂ ಸಹ ನಿರ್ಬಾಧಕವಾಗಿ ಶಾನುಭೋಗಿ ನೌಕರಿಯ ಸ್ವಾಧೀನಾನುಭವದಲ್ಲಿದ್ದುಕೊಂಡು ಗುಮಾಸ್ತರಾಗಿ ಕೆಲಸ ನೋಡುತ್ತಿದ್ದಾರೆ.

೧೮೮೧ನೆ ಮೇ ಮಾಹೆ ೭ನೆ ತಾರೀಖಿನಲ್ಲಿ ಆಗಿನ ಡೆಪ್ಯುಟಿ ಕಮಿಷನರ್ ಮೆ|| ರಿಕೆಟ್ಸ್ ಸಾಹೇಬರವರು ಅಪ್ಪಯ್ಯನ ಹಿರೇ ಮಗ ರಾಮಪ್ಪನ ಹೆಸರಿನಲ್ಲಿ ಶಾನುಭೋಗಿಯನ್ನು ರಿಜಸ್ಟರು ಮಾಡಿದರು. ಆದರೆ ಶಂಕರನಾರಣಪ್ಪ ಮತ್ತು ಗುಂಡಪ್ಪ ಇವರಿಬ್ಬರೂ ಗುಮಾಸ್ತೆ ಕೆಲಸವನ್ನು ನೋಡುತ್ತಲೇ ಇದ್ದರು. ಈ ರಾಮಪ್ಪನು ಚರ್ಚಾಸ್ಪದವಾದ ಶಾನು

ಭೋಗಿ ಹಕ್ಕು ಶಂಕರನಾರಣಪ್ಪನ ಪೂರ್ವಿಕನಾದ ಸುಬ್ಬಯ್ಯನಿಂದ ಭೋಗ್ಯದ್ವಾರ ತನ್ನ ತಾತ ದೊಡ್ಡನರಸಿಂಹಯ್ಯನಿಗೆ ಬಂತೆಂತಲೂ ಈಚೆಗೆ ಶಂಕರನಾರಣಪ್ಪನು ಭೋಗ್ಯವನ್ನು ಬಿಡಿಸಿಕೊಂಡಿರುವದರಿಂದ ಶಾನುಭೋಗಿಯನ್ನು ೨ನೆ ಅಪೀಲುವಾದಿ ಗುಂಡಪ್ಪನ ಹೆಸರಿನಲ್ಲಿ ದಾಖಲಾಗಬಹುದೆಂದೂ ೧೯೦೧-೦೨ನೆ ಇಸವಿಯಲ್ಲಿ ಮಾಗಡಿ ತಾಲ್ಲೂಕು ಅಮಲ್ದಾರರ ಸಮಕ್ಷಮ ಹೇಳಿಕೆ ಕೊಟ್ಟಿರುತ್ತಾನೆ. ನಂತರ ಲಕ್ಷ್ಮೀನರಸಯ್ಯನ ಮಕ್ಕಳು ನರಸಿಂಹಯ್ಯ ಮತ್ತು ಸೀತಾರಾಮಯ್ಯ ಎಂಬುವರು ಸದರಿ ರಾಮಪ್ಪನು ತಮಗೆ ಮೋಸ ಮಾಡಿರುತ್ತಾನೆಂತಲೂ ಶಾನುಭೋಗಿ ಹಕ್ಕಿನಲ್ಲಿ ಅರ್ಧಹಿಸ್ಸೆ ತಮಗೆ ಸಲ್ಲತಕ್ಕದ್ದೆಂತ ಡಿಕ್ರಿ ಆಗಬೇಕೆಂದೂ ದಾವಾ ಮಾಡಿದರು. ಈ ವಿಷಯದಲ್ಲಿ ಕ್ಲೋಸ್ಪೇಟೆ ಸಬ್‌ಡಿವಿಜನ್ ಆಫೀಸರವರು ರಾಮಪ್ಪನ ವಂಶದಲ್ಲಿ ಗಂಡು ಸಂತತಿ ನಷ್ಟವಾದರೂ ಸರಿಯೇ ಅಥವಾ ಆ ಗಂಡು ಸಂತತಿಯಲ್ಲಿ ಶಾನಭೋಗಿ ನೌಕರಿ ಮಾಡುವದಕ್ಕೆ ಲಾಯಖಾದವರು ಇಲ್ಲದೆ ಹೋದರೂ ಸರಿಯೇ ಆಗ್ಯೆ ನರಸಿಂಹಯ್ಯ ಮತ್ತು ಸೀತಾರಾಮಯ್ಯ ಇವರಿಬ್ಬರು ಶಾನುಭೋಗಿಗೆ ಹಕ್ಕುದಾರರು ಆಗುವರೆಂದು ತೀರ್ಮಾನ ಮಾಡಿದರು. ಈ ತೀರ್ಮಾನದಮೇಲೆ ಶಂಕರನಾರಣಪ್ಪನೂ ಗುಂಡಪ್ಪನೂ ಅಪೀಲು ಮಾಡಲು ಡೆಪ್ಯುಟಿ ಕಮಿಷನರ್ ಮೆ|| ಸ್ಪಾರ್ಕ್ಸ್‌ಯವರು ರಾಮಪ್ಪನ ಹೆಸರು ೧೮೮೧ನೆ ಇಸವಿಯಲ್ಲಿ ರಿಜಸ್ಟರು ಆಗಿದ್ದರೂಕೂಡ ಅರ್ಜಿದಾರರು ೧೯೦೦ನೆ ಇಸವಿ ವರಿಗೂ ಏನೂ ತಕರಾರುಮಾಡದೆ ಸುಮ್ಮನಿದ್ದು ಈಗ ತಕರಾರುಮಾಡಲು ಲಿಮಿಟೇಷನ್ ಬಾರಿರುತ್ತದೆಂದು ಅಪೀಲನ್ನು ವಜಾ ಮಾಡಿದರು.

ಗೌರ್ನಮೆಂಟಿನವರ ತೀರ್ಮಾನ.—ಮೊದಲಿನ ದಾವೆಯಲ್ಲಿನ ವಾದಿಗಳ (ನರಸಿಂಹಯ್ಯ ಮತ್ತು ಸೀತಾರಾಮಯ್ಯ) ಹೆಸರಿನಲ್ಲಿ ಶಾನುಭೋಗಿಯು ರಿಜಸ್ಟರಾದ್ದೂ ಇಲ್ಲ; ಇವರು ನೌಕರಿಯನ್ನು ಅನುಭವಿಸಿದ್ದೂ ಇಲ್ಲ. ಆದರೆ ೧೮೨೦-೨೧ರಲ್ಲಿ ತಮ್ಮ ಪೂರ್ವಿಕರಿಗೆ ಹಕ್ಕು ಖರೀದಿಯಾಗಿತ್ತೆಂದು ಹೇಳಿಕೊಂಡು ಈಗ ತಮ್ಮ ಹಕ್ಕನ್ನು ಮುಂದುಮಾಡಿರುತ್ತಾರೆ. ಶಾನುಭೋಗಿಗೆ ಈಗ ರಿಜಸ್ಟರು ಮಾಡಲ್ಪಟ್ಟಿರುವ ರಾಮಪ್ಪನು ಇವರ ಹಕ್ಕನ್ನು ಒಪ್ಪಿಕೊಂಡರೂ ತನಗೂ ಒಂದು ಹಿಸ್ಸೆ ಉಂಟೆಂದು ಹೇ

ಳುವುದರಿಂದ ಇಂಥಾ ಒಪ್ಪಿಕೆಯು ನಿಷ್ಫಲವಾದದ್ದು, ಮತ್ತು ಇದೇ ಮನುಷ್ಯ ಸದರಿ ಶಾನುಭೋಗಿಯು ಶಂಕರನಾರಣಪ್ಪನ ಪೂರ್ವಿಕನಿಂದ ತನ್ನ ತಾತನಿಗೆ ಭೋಗ್ಯವಾಗಿತ್ತೆಂತಲೂ ಆದರೆ ೧೯೦೦ನೆ ಮೇ ೬ರಲ್ಲಿ ಈ ಶಂಕರನಾರಣಪ್ಪನು ಭೋಗ್ಯವನ್ನು ಬಿಡಿಸಿಕೊಂಡನೆಂತಲೂ ೧೯೦೧ನೆ ಜೂನ್ ೨೦ರಲ್ಲಿ ಅಮಲ್ದಾರರ ಸಮಕ್ಷಮ ಹೇಳಿಕೆ ಕೊಟ್ಟಿರುತ್ತಾನೆ. ರಾಮಪ್ಪನಿಗೂ ಮತ್ತು ನರಶಿಂಹಯ್ಯ, ಶೀತಾರಾಮಯ್ಯ ಇವರಿಗೂ ನೆಂಟಸ್ತನ ಹ್ಯಾಗೇ ಇರಲಿ ರಾಮಪ್ಪನು ಜೀವಂತನಾಗಿರುವಾಗ್ಯೆ ಇವರು ಶಾನುಭೋಗಿಯನ್ನು ತಮ್ಮ ಹೆಸರಿಗೆ ವರ್ಗಾಯಿಸಿಕೊಳ್ಳಲಾರರು. ರಾಮಪ್ಪನು ಶಂಕರನಾರಣಪ್ಪನಿಗೂ ಮತ್ತು ಗುಂಡಪ್ಪನಿಗೂ ನೌಕರಿಯನ್ನು ತಪ್ಪಿಸಬೇಕೆಂದು ಉದ್ದೇಶಿಸಿದ್ದರೂಕೂಡ ಇವನು ಕೊಟ್ಟಿರುವ ಒಪ್ಪಿಕೆಗಳನ್ನು ನೋಡಿದರೆ ಇದು ಸಾಧ್ಯವಾಗುತ್ತಿತ್ತೆಂಬುವದು ಅಸಂಭವ. ರಾಮಪ್ಪನು ಅಪೀಲುವಾದಿಗಳಿಗೆ ವಿರೋಧಿಯಾದಮೇಲೆ ಇವರು ಬರೀ ಗುಮಾಸ್ತರೇಯೆಂತ ಹೇಳಿರುತ್ತಾನೆ. ಇದಕ್ಕೆ ಚೆನ್ನಪ್ಪನೆಂಬುವನೂ ಸಾಕ್ಷಿ ಹೇಳಿರುತ್ತಾನೆ. ಆದರೆ ಈ ಬರೀ ಬಾಯಿಮಾತೇ ಸಾಕಾದ ರುಜುವಾತಾಗುವದಿಲ್ಲ. ಮತ್ತು ನೌಕರಿಯು ಶಂಕರನಾರಣಪ್ಪನ ಅನುಭವಕ್ಕೆ ಯಾವಾಗ ಬಂತೆಂಬುದಕ್ಕೆ ಅಸಲ್ ರಿಕಾರ್ಡುಗಳೂ ದೊರೆತಿಲ್ಲ. ಆದರೆ ಚನ್ನಪ್ಪನು ತನ್ನ ಜೂರಿಸ್ಡಿಕ್ಷನ್ನಲ್ಲಿ ಇರಲಿಲ್ಲವೆಂತಲೂ ಆದ್ದರಿಂದ ಶಂಕರನಾರಣಪ್ಪನಿಗೆ ವಸೂಲಿ ಕೆಲಸವನ್ನು ವಹಿಸಿ ಖಾತೆ ಮತ್ತು ಖಿರ್ದಿಯನ್ನು ಇವನವಶಕ್ಕೆ ಕೊಟ್ಟಿತೆಂತಲೂ ತಾಲ್ಲೂಕು ಕರೆಸ್ಪಾಂಡೆನ್ಸ್ ರಿಜಸ್ಟರಿನಲ್ಲಿ ಕೆಲವು ದಾಖಲೆಗಳೇನೋ ಕಾಣುಬರುತ್ತವೆ. ಆದರೆ ನೌಕರಿಯು ಇವನಿಗೆ ಯಾವ ಷರತ್ತುಗಳಮೇಲೆ ಬಂತು ಇವನು ತನ್ನ ಸ್ವಂತ ಹಕ್ಕಿನಮೇಲೆ ಪಡೆದನೆ, ಇಲ್ಲವೆ ಗುಮಾಸ್ತೆಯಾಗಿಯೇ ಪಡೆದನೆ ಎಂಬುವದನ್ನು ಗೊತ್ತುಮಾಡುವದಕ್ಕೆ ಈ ದಾಖಲೆಗಳೇ ಸಾಲದು. ಈ ವಿಷಯದಲ್ಲಿ ಬೇಕಾದ ರುಜುವಾತನ್ನು ಕೊಡುವ ಭಾರವು ನರಸಿಂಹಯ್ಯ ಮತ್ತು ಸೀತಾರಾಮಯ್ಯ ಇವರಿಬ್ಬರದೇ ಆಗಿರುತ್ತದೆ. ಮತ್ತು ಇವರು ತಮ್ಮ ಹಕ್ಕನ್ನು ಸ್ಥಾಪಿಸಿಕ್ಕೊಂಡಿಲ್ಲ. ಆದ್ದರಿಂದ ಕೆಳ ಅಧಿಕಾರಿಗಳ ತೀರ್ಮಾನವನ್ನು ಬದಲಾಯಿಸಿರುತ್ತೆ.

———o———

Lucerne *

ಮಸಾಲೆ ಸೊಪ್ಪು.

ನೀರು ಹಾಯಿಸಿಕೊಂಡು ಮಸಾಲೆ ಸೊಪ್ಪಿನ ಪೈರು ಮಾಡುವ ಸಂದರ್ಭಗಳಲ್ಲಿ ಬಿತ್ತನೆಯನ್ನು ನಾಲ್ಕು ವಿಧವಾಗಿ ಮಾಡಬಹುದು.

ಮೊದಲನೇದು.—ಜಮೀನಿನಲ್ಲಿ ಚಚ್ಚೌಕವಾದ ಪಾತಿಗಳನ್ನು ನಿಂಗಡಿಸಿಕೊಂಡು ನೀರು ಹರಿಯುವುದಕ್ಕಾಗಿ ಎರಡು ಕಡೆಗಳಲ್ಲಿಯೂ ಸಾಲಾಗಿ ಪಾತಿಗಳು ಇರುವಹಾಗೆ ನಡುವೆ ಜಿಗಳು ಹೊಡಿಯುತ್ತಾರೆ. ಸಾಧಾರಣವಾಗಿ ಪಾತಿಯು ೧೦೦ ಚದುರಡಿ ಇರುತ್ತದೆ. ಪಾತಿಗಳನ್ನು ಸಮಪಡಿಸಿಕೊಂಡು ಬಿತ್ತವನ್ನು ಚೆಲ್ಲಿ ಹಲುಬೆಹೊಡೆದು ಮಣ್ಣು ಮುಚ್ಚಬೇಕು. ತರುವಾಯ ಸರಾಸರಿ ೬ ದಿನಕ್ಕೊಂದುಸಲ ಜಿಗಳುಗಳ ಮೂಲಕ ನೀರು ಹಾಯಿಸಿ ಪಾತಿಗಳಿಗೆ ತಿರುವುತ್ತಾರೆ. ಮಳೆಗಾಲದಲ್ಲಿ ಮಧ್ಯೆ ಮಧ್ಯೆ ಮಳೆಗಳು ನಿಂತಾಗಮಾತ್ರವಲ್ಲದೆ ಇತರ ವೇಳೆಗಳಲ್ಲಿ ನೀರು ಹಾಯಿಸ ಕೆಲಸವಿಲ್ಲ. ಆದರೆ ಈ ತರಹೆ ವ್ಯವಸಾಯ ಕ್ರಮದಲ್ಲಿ ೨ ಅಥವಾ ೩ ವರುಷಗಳು ಒಳ್ಳೆ ಹುಲುಸಾದ ಫಸಲು ಬಂದರೂಕೂಡ ಜಮೀನು ಕಳೆಗಳು ಮನಸ್ವಿಯಾಗಿ ಬೆಳೆದು ಅವನ್ನು ಪೂರ್ತಿಯಾಗಿ ಕಿತ್ತುಹಾಕುವುದಕ್ಕಾಗದೇ ಕ್ರಮೇಣ ಶುದ್ಧಾಂಗವಾಗಿ ಕೆಟ್ಟುಹೋಗುತ್ತದೆ. ಇದರಲ್ಲಿ ಮತ್ತೊಂದು ಪ್ರತಿಕೂಲವೇನೆಂದರೆ, ನೀರು ಹಾಯಿಸುವಾಗ ಸ್ವಲ್ಪ ಹುಷಾರಿಯಿಂದ ಎಷ್ಟುಬೇಕೋ ಅಷ್ಟನ್ನೇ ಬಿಡದೆ ಬೇಹುಷಾರಾಗಿ ಹೆಚ್ಚು ನೀರು ಬಿಟ್ಟರೆ ಒಂದು ಪಾತಿಯಲ್ಲಿನ ನೀರು ಮತ್ತೊಂದಕ್ಕೆ ಹರಿದು ಹೋಗುವಾಗ ಎಳೆಪೈರನ್ನು ನೆಲದಿಂದ ಎಬ್ಬಿ ಕೊಚ್ಚಿಕೊಂಡು ಹೋಗುವ ಸಂಭವವುಂಟು. ಮತ್ತು ನೀರು ಹೆಚ್ಚಾಗಿ, ಬಸಿದುಹೋಗದೆ ಪಾತಿಯಲ್ಲೀ ನಿಂತಿದ್ದರೆ ಪೈರು ಸತ್ತುಹೋಗುತ್ತೆ. ಅಲ್ಲದೆ ಮಸಾಲೆ ಸೊಪ್ಪು ಆಳವಾಗಿ ಬೇರೂರಿ ಭೂಮಿಯ ಕೆಳಗಿರುವ ತೇವವನ್ನು ಹೀರಬಲ್ಲದಾದ್ದರಿಂದ ಜಮೀನು ಮೇಲ್ಗಡೆ ನೀರು ನಿಲ್ಲಿಸಬೇಕಾದ ಪ್ರಕೃತವಿರುವದಿಲ್ಲ.

ಎರಡನೇದು.—ಜಮೀನನ್ನು ಮೊದಲು ಪಾಕುಮಾಡಿಕೊಂಡು, ಉ

* ಅಗ್ರಿಕಲ್ಚರಲ್ ಜರ್ನಲ್ ಆಫ್ ಇಂಡಿಯಾ.—ಅಕ್ಟೋಬರು ೧೯೧೯.

ಕ್ಕೆ ವಗೈರೆ ಕೆಲಸಗಳಾದ ಮೇಲೆ ಗೊಬ್ಬರವನ್ನು ಹಾಕಿ ಅನಂತರ ಬಿ
ತ್ತವನ್ನು ಎಕರೆಗೆ ೧೬-೨೦ ಪೌಂಡಿನಂತೆ ಚೆಲ್ಲಿ ಹಲುಬೆ ಹೊಡೆದು ಮ
ಮುಚ್ಚಬೇಕು. ತರುವಾಯ ನೀರು ಬಿಡುವದಕ್ಕಾಗಿ ಮಾಡಿಕೊಂಡಿರುವ
ನಡುಜಿಗಳಿಗೆ ಅಡ್ಡವಾಗಿ ಹತ್ತಿರ ಹತ್ತಿರವಾಗಿ ಸಾಲು ಜಿಗಳುಗಳನ್ನು
ಪುನಃ ಇವುಗಳಿಗೆ ಅಡ್ಡವಾಗಿ ಬೇರೆ ಜಿಗಳುಗಳನ್ನು ಹೊಡೆಯಬೇಕು.
ಅಂದರೆ ಜಮೀನು ಚೌಕಗಳಾಗಿ ವಿಂಗಡಿಸಲ್ಪಟ್ಟ ಜಿಗಳುಗಳಲ್ಲೆಲ್ಲಾ
ನೀರು ಹರಿದು ಚೌಕಗಳಲ್ಲಿನ ಪೈರಿಗೆ ತೇವವು ಒದಗುತ್ತದೆ. ಈ
ಕ್ರಮವು ಮೊದಲನೇದಕ್ಕಿಂತ ಸ್ವಲ್ಪ ಮೇಲಾದದ್ದು. ಇದರಲ್ಲಿ ನೀರು
ಪೈರಿನ ಮೇಲೆಯೇ ಹರಿಯುವದಿಲ್ಲ ಮತ್ತು ನೀರು ಸರಬರಾಜು ಕೆಲಸ
ಜಾಗ್ರತೆಯಾಗಿ ನಡೆಯುತ್ತದೆ. ಆದರೆ ಮೊದಲನೇದರಂತೆಯೇ ಇದರ
ಕಳೆಗಳಲ್ಲಿಯೂ ಪ್ರತಿಕೂಲವೇನೋ ಉಂಟು.

ಮೂರನೇದು.—ಎರಡನೇ ಕ್ರಮದಂತೆಯೇ ಜಮೀನಿನಲ್ಲಿ ಜಿಗಳುಗ
ಳು ಹೊಡೆದು ಚೌಕಗಳು ಮಾಡಿಕೊಂಡು, ಈ ಚೌಕಗಳಲ್ಲಿ ಹೆಂಟೆ ಹೊ
ಡೆದು ನೆಲ ಸಮಪಡಿಸಿ ತರುವಾಯ ಮಮ್ಮಟಿ, ಅಥವಾ ಕಡ್ಡಿಯಿಂದ ನೇಗಿ
ಲು ಸಾಲುಗಳ ಹಾಗೆ ಗೀರಿಕೊಂಡು ಬಿತ್ತವನ್ನು ಈ ಗೀರುಗಳಲ್ಲಿ ಒಂ
ದೊಂದಾಗಿ ಕೈಯಿಂದ ಹಾಕಬೇಕು. ಇದರಲ್ಲಿ ಬೀಜದ ಖರ್ಚು ಕಡಿಮೆ.
ಎಕರೆಗೆ ಸುಮಾರು ೧೨ ಪೌಂಡು ಸಾಕು. ಪೈರಿಗೆ ಯಾವ ಬಾಧಕವೂ
ಉಂಟಾಗದಂತೆ ನೀರನ್ನು ನೇಗಿಲು ಜಿಗಳುಗಳಲ್ಲೇ ಬಿಡಬಹುದಲ್ಲದೆ ಪೈ
ರು ಸಾಲು ಸಾಲಾಗಿ ಬರುವುದರಿಂದ ನಡುವೆ ಕಳೆ ಕಸವನ್ನು ಸುಲಭವಾಗಿ
ತೆಗೆಯಬಹುದು. ಈ ಕ್ರಮವು ಮೇಲಿನದಕ್ಕಿಂತ ಉತ್ತಮವಾದದ್ದು.

ನಾಲ್ಕನೇದು.—ಬೀಜವನ್ನು ಸಮನಾದ ನೆಲದಲ್ಲಿ ಬಿತ್ತದೆ ಬದುಗ
ಳನ್ನು ಕಟ್ಟಿಕೊಂಡು ಈ ಬದುಗಳ ಮೇಲೇ ಬಿತ್ತಬೇಕು. ಇದೇ ಸರ್ವ
ಶ್ರೇಷ್ಠವಾದ ಕ್ರಮ ಮತ್ತು ಮೇಲಿನ ಮೂರು ಕ್ರಮಗಳಿಗಿಂತಲೂ
ಹೊರವಾದ ಬೆಳೆಯನ್ನು ಕೊಡತಕ್ಕದ್ದು. ಸಾಕುಮಾಡಿ ಗೊಬ್ಬರಹಾ
ಕಿ ಚೆನ್ನಾಗಿ ಉತ್ತು ಹಲಿಗೆ ಹೊಡೆದ ಜಮೀನಿನಲ್ಲಿ ಜಿಗಳಿಗೆ ಅಡ್ಡವಾಗಿ
ನೇಗಿಲು ಹೊಡೆದು ಬದುಗಳನ್ನು ಮಾಡಿಕೊಂಡು, ಈ ಬದುಗಳ ಮೇಲೆ
ಯೂ ಸಾಲಾಗಿ ನೇಗಿಲಿನಿಂದ ಗೀರು ಎಳೆದು ಈ ಗೀರಿನಲ್ಲೇ ಬೀಜವನ್ನು

ಲ್ಲೈಯಿಂದ ಬಿತ್ತಬೇಕು. ಪೈರು ಸಾಲುಸಾಲಾಗಿ ಬದುಗಳ ನಡುವೆ ೊರಡುತ್ತದೆ. ಆದ್ದರಿಂದ ಕಳೆಗಳನ್ನು ಅತಿಸುಲಭವಾಗಿ ಕೀಳಬ ರುದು. ಬಿತ್ತದ ಖರ್ಚೂ ಕಮ್ಮಿಯಾಗುತ್ತದೆ. ಎಕರೆಗೆ ೧೦ ಪೌಂಡು ಾದರೆ ಯಥೇಷ್ಟ.

ಹಸಿಮೇವಿಗಾಗಿಯಾಗಲಿ ಅಥವಾ ಒಣಗಿಸಿಡುವದಕ್ಕಾಗಲಿ ಸೊಪ್ಪ ನ್ನು ಕೊಯಿದುಕೊಳ್ಳಬೇಕಾದರೆ ಗಿಡಗಳು ಮಗ್ಗಿಡುವದಕ್ಕೆ ಪ್ರಾರಂಭಿ ಸುವ ಕಾಲವೇ ಸಕಾಲವಾಗಿರುತ್ತದೆ. ಈ ಕಾಲ ಮೀರಿದರೆ ಸೊಪ್ಪಿನಲ್ಲಿನ ಪುಷ್ಟಿಕರವಾದ ಆಹಾರಾಂಶವು ಅತಿಜಾಗ್ರತೆಯಾಗಿ ಕಡಿಮೆಯಾಗಿ ಹೋ ಗುವುದು. ಸೊಪ್ಪನ್ನು ಭೂಮಟ್ಟದವರೆಗೂ ಕತ್ತರಿಸಿ ಕೊಳ್ಳಬಹುದು.

ಗೊಬ್ಬರವಿಲ್ಲದೆ ಮಸಾಲೆಸೊಪ್ಪು ಲಾಭಕರವಾಗಿ ಫಲಿಸುವದಿಲ್ಲ. ಪ್ರ- ಕೊಯಿಲಿಗೆ ಒಂದಾವರ್ತಿ ದನದ ಅಥವಾ ಕುದುರೆಯ ಗೊಬ್ಬರವನ್ನು ಎಕರೆಗೆ ೫—೬ ಟನ್ನಿನಂತೆ ಹಾಕಬೇಕು. ಈ ಗೊಬ್ಬರ ಸಿಕ್ಕದಿದ್ದರೆ ರತ್ತಿ ಅಥವಾ ಹರಳುಹಿಂಡಿಯನ್ನು ಎಕರೆಗೆ ಸುಮಾರು ೫೦೦ ಪೌಂಡು ಹಾಕಬಹುದು. ಈ ರೀತಿ ಸಾಗುವಳಿಯಾದ ಜಮೀನಿನಲ್ಲಿ ಕನಿಷ್ಟಪಕ್ಷ —೮ ವಾರಕ್ಕೊಮ್ಮೆ ಸೊಪ್ಪು ಕೊಯಿದುಕೊಳ್ಳಬಹುದಲ್ಲದೆ ಹೀಗೆ ರುಷಗಟ್ಲೆ ನಡೆಯುತ್ತದೆ.

ಹಸಿಯಾಗಿರುವಾಗಲೇ ಕತ್ತರಿಸಿದ ಸೊಪ್ಪು ಸ್ವಲ್ಪ ಬಾಡಿದಮೇಲೆ ಕುದುರೆಗೂ ದನಕ್ಕೂ ಸರ್ವ ಶ್ರೇಷ್ಠವಾದ ಮತ್ತು ಅಗ್ಗವಾದ ಆಹಾರ ವಾಗಿರುತ್ತದೆ. ತಥಾಪಿ ಇದು ಕರಾವು ಆಕಳಿಗೆ ವಿಶೇಷ ಬಲ ಕೊಡು ವ ಮತ್ತು ರುಚಿಯಾದ ಮೇವು.

—o—

Cattle Shows.

ದನಗಳ ಪ್ರದರ್ಶನಗಳು.

I.

ಹೊನ್ನಾಳಿ ತಾಲ್ಲೂಕು ರಾಂಪುರದಲ್ಲಿ ನಡೆಯುವ ಜಾತ್ರೆ ಕಾಲದಲ್ಲಿ ದನಗಳ ಪ್ರದರ್ಶನವು ನಡೆಯುವುದೆಂದು ಕಳೆದ ಜನವರಿ ೧೫ನೆ ಮ ಯ್ಯಂನ ಸೂಚಿಕೆಯಲ್ಲಿ ನಮೂದಿಸಿತ್ತಷ್ಟೆ.

ಜಾತ್ರೆಗೆ ಸುಮಾರು ೧೨ ಸಾವಿರ ದನಗಳು ಚಿತ್ರದುರ್ಗ, ಕಡೂರು, ಹಾಸನ ಮತ್ತು ಮೈಸೂರು ಡಿಸ್ಟ್ರಿಕ್ಟುಗಳಿಂದಲೂ ಮತ್ತು ಬೊಂಬಾಯಿ ಇಲಾಖೆಯ ಧಾರ್ವಾಡ ಡಿಸ್ಟ್ರಿಕ್ಟಿನಿಂದಲೂ ಬಂದಿದ್ದವಲ್ಲದೆ ಸಹಸ್ರಾರು ಜನರು ಬಹಳ ದೂರದೇಶದಿಂದ ಸೇರಿದ್ದರು. ಕಾಲಸ್ಥಿತಿಯು ಚೆನ್ನಾಗಿದ್ದದ್ದರಿಂದ ಈ ಸಲದ ಜಾತ್ರೆಗೆ ಸೇರಿದ್ದಷ್ಟು ಜನರೂ ದನಗಳೂ ಹಿಂದೆ ಯಾವ ಸಂವತ್ಸರದಲ್ಲೂ ಬಂದಿರಲಿಲ್ಲ. ದನಗಳ ಪೈಕಿ ೨೦೦ ರಾಸುಗಳು ಪ್ರದರ್ಶನಾರ್ಹವೆಂದು ಚುನಾಯಿಸಲ್ಪಟ್ಟು ಇವುಗಳಲ್ಲಿ ಉತ್ತಮವಾದ ರಾಸುಗಳಿಗೆ ಈ ಕೆಳಗೆ ಕಂಡ ಮೇರೆ ೭೫ ರೂಪಾಯಿನ ಬಹುಮಾನಗಳು ಹಂಚಲ್ಪಟ್ಟವು.

ಹೊನ್ನಾಳಿ ತಾಲ್ಲೂಕು ಮಾಸಡಿ ಗ್ರಾಮದ ಹನುಮಪ್ಪನವರ ಒಂದು ಜೊತೆ ಗಾಡಿ ಎತ್ತುಗಳಿಗೆ, ಮೊದಲನೆ ಬಹುಮಾನ ೨೦ ರೂಪಾಯಿ. ದಾವಣಗೆರೆ ತಾಲ್ಲೂಕು ನಲ್ಲೂರು ಹಾಲಪ್ಪನವರ ಒಂದು ಜೊತೆ ಗಾಡಿ ಎತ್ತಿಗೆ, ೨ನೆ ಬಹುಮಾನ ೧೦ ರೂಪಾಯಿ.

ಧಾರ್ವಾಡ ಡಿಸ್ಟ್ರಿಕ್ಟು ರಾಣಿಬೆನ್ನೂರು ತಾಲ್ಲೂಕು ಹೆಡೆಯಾಲಗ್ರಾಮದ ಬಸಪ್ಪನವರ ಒಂದು ಜೊತೆ ಉಳುವ ಎತ್ತಿಗೆ, ಮೊದಲನೆ ಬಹುಮಾನ, ೨೦ ರೂಪಾಯಿ.

ಹೊನ್ನಾಳಿ ಕಸಬಾ ನನ್ನೇಸಾಬರ ಒಂದು ಜೊತೆ ಉಳುವ ಎತ್ತುಗಳಿಗೆ ೨ನೆ ಬಹುಮಾನ, ೧೦ ರೂಪಾಯಿ.

ಧಾರ್ವಾಡಾ ಡಿಸ್ಟ್ರಿಕ್ಟು ಹಿರೆಕೆರೂರು ತಾಲ್ಲೂಕು ಕುಡಪಲ್ಲಿ ಸಣ್ಣ ಬಸಪ್ಪನವರ ಹೋರಿಗರ ಒಂದಕ್ಕೆ, ೧೫ ರೂಪಾಯಿ.

ನಗದು ಬಹುಮಾನದ ಜೊತೆಗೆ ಯೋಗ್ಯತಾ ಪತ್ರಿಕೆಗಳೂ ಕೊಡಲ್ಪಟ್ಟವು. ಜಾತ್ರೆಕಾಲದಲ್ಲಿ ದನಗಳ ವ್ಯಾಪಾರವು ಬಹಳ ಚೆನ್ನಾಗಿ ನಡೆಯಿತೆಂತಲೂ, ರಾಸುಗಳಿಗೆ ಒಳ್ಳೇ ಬೆಲೆಯು ದೊರೆಯಿತೆಂತಲೂ ತಿಳಿಯು ಬರುತ್ತದೆ.

II.

ಕೃಷ್ಣರಾಜಪೇಟೆ ತಾಲ್ಲೂಕು ಹೇಮಗಿರಿಯಲ್ಲಿ ನಡೆದ ಶ್ರೀ ವೆಂಕಟರಮಣಸ್ವಾಮಿ ರಥೋತ್ಸವ ಕಾಲದಲ್ಲಿ, ಅಂದರೆ ಫೆಬ್ರವರಿ ಮಾಹೆ ೧೭ ತೆ

ರೀಖಿನ ದಿನ ಒಂದು ದನಕರುಗಳ ಪ್ರದರ್ಶನ ನಡೆಯಿತು. ಈ ವರು ಕಾಲಸ್ಥಿತಿಯು ಚೆನ್ನಾಗಿದ್ದದ್ದರಿಂದ ಕಳೆದ ಸಾಲಿಗಿಂತ ಎರಡರಷ್ಟು ಂಡರೆ ೨ ಸಹಸ್ರ ದನಕರುಗಳು ಜಮಾಯಿಸಿದ್ದವು. ಜಾತ್ರೆಗೆ ಸುಮಾ ೧೦ ಸಹಸ್ರ ಜನ ಸೇರಿದ್ದರು. ದನಗಳ ಪೈಕಿ ಉತ್ತಮವಾದವೆಂ ಚುನಾಯಿಸಲ್ಪಟ್ಟ ರಾಸುಗಳಿಗೆ ಈ ಕೆಳಗೆ ಕಂಡ ಮೇರೆ ಬಹುಮಾ ಗಳು ಕೊಡಲ್ಪಟ್ಟಿತು.

ರಾಸುಗಳ ತಪ್ಸೀಲು.		ಬಹುಮಾನಗಳ ದರ. I	II	III	IV
(೧) ಬೀಜದ ಹೋರಿಗಳು, ೨, ಗುಜ್ಜ ಮಾವು ಜಾತಿ	ರೂ.	೧೫	೧೦	...	...
೨) ಜಿರಾಯತು ಎತ್ತುಗಳು, ೩ ಜೊತೆ ಹಳ್ಳಿಕಾರಜಾತಿ, ೧ ಜೊತೆ ಸಣ್ಣ ವ.ಲ್ಲಿಗೆ ಜಾತಿ	,,	೨೦	೧೫	೧೦	೧೦
೩) ಕರುಗಳು, ೨ ಗುಜ್ಜಮಾವು, ೨ ಹಳ್ಳಿಕಾರ	ಒಂದೊಂದಕ್ಕೆ ೫ ರೂಪಾಯಿನಂತೆ.				

Occasional Notes.

ವಿವಿಧ ವೃತ್ತಾಂತಗಳು.

೧. ಮೈಸೂರು ಇಂಜನೀರಿಂಗ್ ಸ್ಕೂಲಿನಲ್ಲಿ ವ್ಯಾಸಂಗಮಾಡಲು ಇಷ್ಟ ಳ್ಳ ಶೀಕದಾರಿ ವಿದ್ಯಾರ್ಥಿಗಳು ಬರುವ ಜುಲೈ ಗುತೆ) ಒಳಗಾಗಿ ಸ್ಕೂ ನ್ನು ಸೇರತಕ್ಕದ್ದೆಂತಲೂ, ಅದೇಮಾಹೆ ೧೦ನೆ ತಾರೀಖು ಮಿಾರಿ ಬರುವವ ನ್ನು ಸೇರಿಸಲಾಗುವದಿಲ್ಲವೆಂತಲೂ ವಿದ್ಯಾಭ್ಯಾಸ ಇಲಾಖೆಯು ಇನ್ಸ್ಪೆಕ್ಟ ಜನರಲ್‌ಯವರು ಪ್ರಸಿದ್ಧಪಡಿಸಿರುತ್ತಾರೆ.

೨. ಕತ್ತಾಳೆಯಿಂದ ಒಳ್ಳೇನಾರು ಬರುವದು ಸರಿಯಷ್ಟೆ. ಹಿಂದೂಪು ಲ್ಲಿ ಇದರ ವ್ಯವಸಾಯವು ಹೆಚ್ಚುತ್ತಿದೆಯೆಂತಲೂ, ಅಜಮಾಯಿಷಿಗಾ ಫಸಲು ರೇಖೆಮಾಡಿ ನೋಡಿದ್ದರಲ್ಲಿ ಎಕರೆಗೆ ಸಮಾರು ೧೮ ಮಣ ಒಣ ನಾರು ಬಂದಿರುತ್ತೆಂತಲೂ ಮದರಾಸು ವ್ಯವಸಾಯ ಇಲಾಖೆಯವರು ೦೮—೦೯ನೇ ರಿಪೋರ್ಟಿನಲ್ಲಿ ಘಾಯಿಷು ಮಾಡಿರುತ್ತಾರೆ.

೩. ಅಮೇರಿಕಾ ದೇಶದಿಂದ ಕೆಲವು ರಖಂ ಅಲಸಂದಿ ಕಾಳುಗಳನ್ನು
ರಿಸಿ ಕೋಯಿಲ್‌ಪಟ್ಟಿಯಲ್ಲಿ ಬೆಳೆಸಿ ಅಜಮಾಯಿಷಿ ಮಾಡಿ ನೋಡಿದ್ದ
ಮೊದಲನೇ ಸಲಕ್ಕೆ ಅಷ್ಟು ಅನುಕೂಲ ಕಂಡು ಬಾರದಿದ್ದರೂ ೨ನೆ ವ
ಷ ಶಾನೆ ಫಾಯಿದೆಕರವಾಗಿ ಪರಿಣಮಿಸಿರುತ್ತದು ಮದರಾಸು ವ್ಯವಸ
ಯ ಇಲಾಖಾ ೧೯೦೮—೦೯ನೆ ಸಾಲ್ ರಿಪೋರ್ಟಿನಿಂದ ತಿಳಿದು ಬರುತ್ತ

---

೪. ಮದರಾಸ್ ಆದಿಪತ್ಯದಲ್ಲಿ ಕಳೆದ ಜನವರಿ ಮಾಹೆ ಆಖೈರವರಿಗೆ ಸ
ಮಾರು ೬೪ ಲಕ್ಷ ಎಕರೆಗಳು ಬತ್ತದ ಸಾಗುವಳಿಯಲ್ಲಿದ್ದವೆಂತಲೂ ಈ
ವಿಸ್ತೀರ್ಣವು ಹೋದ ವರ್ಷಕ್ಕಿಂತ ಶೇಕಡಾ ೬ರಷ್ಟು ಹೆಚ್ಚಿರುತ್ತ
ತಲೂ, ಸುಮಾರು ೨೨ ಲಕ್ಷ ಟನ್ನಿನಷ್ಟು ಅಕ್ಕಿ ಆಗಬಹುದೆಂತ ಅಂದ
ಜಾಗಿರುತ್ತೆಂತಲೂ ಮದ್ರಾಸ್ ರೆವಿನ್ಯೂ ಬೋರ್ಡಿನವರು ಫಾಯಿಷ ಮಾ
ಡಿರುವ ಪತ್ರಿಕೆಯಿಂದ ಗೊತ್ತಾಗುತ್ತದೆ.

---

೫. ಕಬ್ಬಿನ ಗದ್ದೆಯಲ್ಲಿ ಎಕರೆಯೊಂದಕ್ಕೆ ೨೪ ಸಾವಿರ ಬೀಜಗಳನ್ನ
ರಿಗೆ ಗಜಿಬಿಜಿಯಾಗಿ ಚೆಲ್ಲುವದಕ್ಕಿಂತ ೧೦ ಸಾವಿರ ಬೀಜಗಳನ್ನು ಮ
ತ್ರ ಸಾಲು ಸಾಲಾಗಿ ನಾಟುವದು ಉತ್ತಮವೆಂತಲೂ, ಈ ಅಂಶವು ಈ
ಗೆ ರೈತರ ತಿಳುವಳಿಕೆಗೆ ಬರುತ್ತಿದೆಯೆಂತಲೂ ಮದರಾಸು ವ್ಯವಸಾಯ
ಇಲಾಖೆಯ ೧೯೦೮—೦೯ನೇ ಸಾಲ್ ರಿಪೋರ್ಟಿನಲ್ಲಿ ನಮೂದು ಇರುತ್ತ

ನಮ್ಮ ಸಂಸ್ಥಾನದಲ್ಲಿ ಸಾಧಾರಣವಾಗಿ ಎಕರೆಗೆ ೮ ಅಥವಾ ೧೦ ಸ
ವಿರ ಬೀಜ ಮಾತ್ರ ಉಪಯೋಗಿಸಲ್ಪಡುತ್ತಿದೆ.

---

೬. ಹಗರಿ ಫಾರಂನಲ್ಲಿ ಹತ್ತಿ ಬೆಳೆಗೆ ಬೇಸಿಗೆಯಲ್ಲಿ ನೀರು ಹಾಯಿಸಿ
ಜಮಾಯಿಷಿ ಮಾಡಿದ್ದರಲ್ಲಿ ನೀರು ಹಾಯಿಸುವದರಿಂದ ನಾಡುಹತ್ತಿ ಪೈರಿ
ಉತ್ಪತ್ತಿಯು ಹೆಚ್ಚಿದರೂ ಕೂಡ, ಜಮೀನನ್ನು ನೀರು ಹತ್ತುವಂತೆ ಸ
ಪಡಿಸಿಕೊಳ್ಳುವದಕ್ಕೂ ನೀರು ತೆರಿಗೆ ಕಟ್ಟುವದಕ್ಕೂ ತಗಲುವ ಲಾಗ
ಡು ಏಳುವಷ್ಟು ಆಗುವದಿಲ್ಲವೆಂತಲೂ, ಕರ್ನೂಲು ಕಡೆಯ ರೈತರು
ತ್ತಿಪೈರಿಗೆ ನೀರು ಹಾಯಿಸುವದೇ ಇಲ್ಲವೆಂತಲೂ ಮತ್ತು ನೀರಾವರಿ ಸ

...ದಿಂದ ಶ್ರೇಷ್ಠಜಾತಿ ಹತ್ತಿಗಳನ್ನು ಬೆಳೆಯುವದಕ್ಕೆ ಮಾಡಿದ ಪ್ರಯ...ಗಳು ನಿಷ್ಫಲವಾಗಿ ಪರಿಣಮಿಸಿದವೆಂತಲೂ ಮದರಾಸು ವ್ಯವಸಾಯ ಇ...ಖಾ ೧೯೦೪—೦೫ನೇ ಸಾಲ್ ರಿಪೋರ್ಟಿನಿಂದ ಗೊತ್ತಾಗುತ್ತೆ.

---

೭. ಜೋಳವನ್ನು ಒತ್ತಾಗಿ ಬಿತ್ತುವದರಿಂದ ಫಸಲುತ್ಪತ್ತಿಯು ಹೆ...ಚ್ಚುವದಲ್ಲದೆ ಕಡ್ಡಿಯು ವಿಶೇಷ ದಪ್ಪನಾಗದೆ ತೆಳ್ಳಗೆ ಬೆಳೆದು ದನಕರುಗ...ಗೆ ಬಹಳ ಪುಷ್ಟಿಕರವಾದ ಆಹಾರವಾಗುತ್ತದೆ. ಕೃಷ್ಣಾ ಡಿಸ್ಟ್ರಿಕ್ಟಿನಲ್ಲಿ ...ಈ ರೀತಿ ಜೋಳವನ್ನು ಬೆಳೆದು ನಿಂತಿರುವ ಪೈರಿನಿಂದ ಪ್ರತಿದಿನವೂ ಹಸಿ ...ಕಡ್ಡಿಗಳನ್ನು ತಂದು ದನಗಳಿಗೆ ಕೈಯಿಂದ ಸ್ವಲ್ಪಸ್ವಲ್ಪವಾಗಿ ತಿನ್ನಿಸು...ವದರಿಂದಲೇನೆ ಅಲ್ಲಿನ ರಾಸುಗಳು ಅಷ್ಟು ಒಳ್ಳೇ ಸ್ಥಿತಿಯಲ್ಲಿರುವದು. ಬೆ...ಜವಾಡಾ ಅಗ್ರಿಕಲ್ಚರಲ್ ಫಾರಂನಲ್ಲಿ ಅಜಮಾಯಿಷಿ ತರೀಕು ಜೋಳವನ್ನು ...ಳೆದು ನೋಡಿದ್ದರಲ್ಲಿ ಅವ್ವಲ್ ರಖಂ ಒಣ ಮೇವು ಎಕರೆಗೆ ೫ ಟನ್ನಿನಂತೆ ...ಟ್ಟಿರುತ್ತೆ.—ಮದರಾಸ್ ವ್ಯವಸಾಯ ಇಲಾಖಾ ೧೯೦೪-೦೫ನೆ ಸಾಲ್ ರಿಪೋರ್ಟು.

---

೮. ಈ ಕೆಳಗೆ ಕಂಡ ಕೋಆಪರೇಟಿವ್ ಸೊಸೈಟಿಗಳು ಖಾನೂನು ಪ್ರಕಾರ ಹೊಸದಾಗಿ ರಿಜಿಸ್ಟರು ಮಾಡಲ್ಪಟ್ಟಿವೆ:—

(೧) ಬೆಂಗಳೂರು ತಾ|| ಕೆಂಗೇರಿಯಲ್ಲಿ ರೈತಾಬಿ ಜನರಿಗೋಸ್ಕರ ಆನರೇರಿ ಆರ್ಗನೈಜರ್ ಮಿ|| ಟಿ. ವೆಂಕಟರಾಮಯ್ಯನವರಿಂದ ಸ್ಥಾಪಿಸಲ್ಪಟ್ಟ ಅನ್ಯೋನ್ಯ ಸಹಾಯ ಸಂಘ.

(೨) ಬೆಂಗಳೂರು ತಾ|| ಗೊಟ್ಟಿಗೆರೆ ಗ್ರಾಮದಲ್ಲಿ ವ್ಯವಸಾಯಗಾರರ ಪ್ರಯೋಜನಕ್ಕಾಗಿ ಆನರೇರಿ ಆರ್ಗನೈಜರ್ರವರಿಂದ ಸ್ಥಾಪಿಸಲ್ಪಟ್ಟ ಗೊಟ್ಟಿಗೆರೆ ಅನ್ಯೋನ್ಯ ಸಹಾಯ ಸಂಘ.

(೩) ಹಾಸನದ ತಾಲ್ಲೂಕು ಕಂದ್ಲಿ ಗ್ರಾಮದಲ್ಲಿ ರೈತಾಬಿ ಜನಗಳ ಅನುಕೂಲಕ್ಕಾಗಿ ಕೋಆಪರೇಟಿವ್ ಸೊಸೈಟಿಗಳ ಇನ್ಸ್ಪೆಕ್ಟರವರಿಂದ ಏರ್ಪಡಿಸಲ್ಪಟ್ಟ „ವ್ಯವಸಾಯ ಸಹಾಯ ಕಂಪೆನಿ.”

---

೯. ಭಾರಿ ಭಾರಿ ಕಾರ್ಖಾನೆಗಳಲ್ಲಿ ಯಂತ್ರಗಳಿಂದ ನಡೆಯುವ ಮಗ್ಗಗ ಕೆಲಸವನ್ನೂ ಸಾಧಾರಣವಾದ ದೇಶೀಯ ಕೈ ಮಗ್ಗಗಳ ಕೆಲಸವನ್ನೂ

ಹೋಲಿಸಿ ನೋಡಿದರೆ ಯಂತ್ರ ಮಗ್ಗಗಳಲ್ಲಿ ಇಲ್ಲದಿರುವ ಕೆಲವು ಸೌ
ಯರ್ಾನುಕೂಲತೆಗಳು ನಮ್ಮ ಕೈ ಮಗ್ಗಗಳಲ್ಲಿ ಉಂಟು ; ಅವು ಯಾ
ವೆಂದರೆ—

(೧) ಕೈ ಮಗ್ಗಗಳಿಗೆ ಹಾನೆ ಬಂಡವಾಳ ಬೇಕಿಲ್ಲ ಮತ್ತು ಇವು
ನೇಕ ವರ್ಷ ಬಾಳಿಕೆ ಬರುತ್ತವೆ.

(೨) ಇಲ್ಲಿನ ಜನರು ಸಾಧಾರಣವಾಗಿ ಉಪಯೋಗಿಸುವ ಚಿತ್ರ ವಿ
ಚಿತ್ರವಾದ ನಾನಾ ಮಾದರಿ ಬಟ್ಟೆ ಬರೆಗಳ ನೇಗೆಯು ಕೈ ಮಗ್ಗಗಳಲ್ಲಿ ಸಾ
ಧ್ಯವಾಗುವ ಹಾಗೆ ಯುಂತ್ರಗಳಲ್ಲಿ ಸಾಧ್ಯವಾಗುವದಿಲ್ಲ.

(೩) ಕೈ ಮಗ್ಗದಲ್ಲಿ ತಯಾರಾಗುವ ವರಟು ಬಟ್ಟೆಗಳು ಬಹಳ
ನ ಬಾಳಿಕೆ ಬರುವುದಾಗಿಯೂ, ದಡವತಿಯಾಗಿಯೂ ಇರುತ್ತವೆಯಾದ್ದ
ರಿಂದ ರೈತರ ವರಟು ಉಪಯೋಗಕ್ಕೆ ಇವು ತಕ್ಕವಾಗಿರುತ್ತವೆ.

(೪) ಕೈ ಮಗ್ಗದ ನೇಗೆಯುವನ ಗೃಹಕೃತ್ಯಕ್ಕೆ ಹಾನೆ ಖರ್ಚ
ಡಿಯುವುದಿಲ್ಲ ಮತ್ತು ಇವನು ಪರಂಪರೆಯಾಗಿ ನಾಜೋಕಾದ ಬಟ್ಟೆ ಬ
ಗಳನ್ನೇ ನೇದು ನೇದು ಇವನಿಗೆ ಕೆಲಸದಲ್ಲಿ ಕೈ ಬಹಳ ಸಲೀಸಾಗಿ ಓಡು
ತ್ತದೆ.

ಅಲ್ಲದೆ ಇವನು ಬರೇ ನೇಗೆ ಕಸಬಿನಿಂದಲೇ ಜೀವನ ಮಾಡುವದಿಲ್ಲ
ಇದರ ಜೊತೆಗೆ ವ್ಯವಸಾಯವನ್ನೂ ಇಟ್ಟುಕೊಂಡಿರುವದರಿಂದ ಒಂದುವೇಳೆ
ಹತ್ತಿ ವ್ಯಾಪಾರದಲ್ಲಿ ಹೆಚ್ಚು ಕಡಿಮೆಗಳು ಬಂದು ನೇಗೆ ಕಸಬಿಗೆ ತೊಂ
ದರೆ ಉಂಟಾದರೂ ಸುಧಾರಿಸಿಕೊಳ್ಳಬಲ್ಲ.—ಅಗ್ರಿಕಲ್ಚರಲ್ ಅಂಡ್ ಇಣ
ಸ್ಟ್ರಿಯಲ್ ಪ್ರೋಗ್ರೆಸ್, ಜನವರಿ ೧೯೧೦.

V. B. SOOBBIAH AND SONS, PRINTERS, BANGALORE —1910.

THE MYSORE
REVENUE & AGRICULTURAL GAZETTE.

ವಾಲ್ಯೂಂ ೪.] ಭಾನುವಾರ, ೧ನೆ ಮೇ ೧೯೧೦. [ನಂ. ೧೩.

Contents.

1. Cultivation of Lac.
2. Deep Draining for Sugar-Cane.
3. Lemon-Grass Oil.
4. Harmful Effects of Grass in Cultivation.
5. Rice Cultivation in Low-Lying Lands.
6. Notifications.
7. Occasional Notes.
   (i) Birds and Agriculture. (ii) Leather Industry. (iii) Inamdars and Levy of Notice Fees. (iv) Co-operative Societies. (v) Maistries for Handling Agricultural Machinery.

ಅನುಕ್ರಮಣಿಕೆ.

೧. ಅರಗಿನ ವ್ಯವಸಾಯ.
೨. ಕಬ್ಬಿನ ಗದ್ದೆಯಲ್ಲಿ ನೀರು ಬಸಿದು ಹೋಗುವದಕ್ಕೆ ಏರ್ಪಾಟು.
೩. ಲಾವಂಚದ ಎಣ್ಣೆ.
೪. ಸಾಗುವಳಿಯಲ್ಲಿ ಹುಲ್ಲಿನಿಂದ ಉಂಟಾಗುವ ಕೆಡಕುಗಳು.
೫. ತಗ್ಗು ಜಮೀನುಗಳಲ್ಲಿ ಬತ್ತದ ವ್ಯವಸಾಯ.
೬. ಇಷ್ತಿಹಾರ್ನಾಮೆಗಳು.
೭. ವಿವಿಧ ವೃತ್ತಾಂತಗಳು.
   (i) ಪಕ್ಷಿಗಳಿಂದ ವ್ಯವಸಾಯಕ್ಕಾಗುವ ಅನುಕೂಲಗಳು. (ii) ಚರ್ಮದ ಕಸಬು. (iii) ಇನಾಂದಾರರು ಮತ್ತು ನೋಟೀಸು ಫೀ ವಸೂಲಿ. (iv) ಕೊಆಪರೇಟಿವ್ ಸೊಸೈಟಿಗಳು. (v) ವ್ಯವಸಾಯ ಯಂತ್ರಗಳನ್ನು ನಡೆಸುವ ಮೇಸ್ತ್ರಿಗಳ ತರಬೇತು.

Cultivation of Lac.*

ಅರಗಿನ ವ್ಯವಸಾಯ.

ಧಾನ್ಯಾದಿ ಪೈರುಗಳ ಜೊತೆಗೆ ಅರಗಿನ ವ್ಯವಸಾಯವನ್ನೂ ಲಾಭ

* ಇಂಡಿಯನ್ ಟ್ರೇಡ್ ಜರ್ನಲ್, ೨೩—೧—೧೦.

ದಿಂದ ತೆಗೆದುಕೊಳ್ಳಬಹುದು. ಸಾಧಾರಣವಾಗಿ ಅರಗಿನ ವ್ಯವಸಾಯದಲ್ಲಿ ಮೂರು ವಿಧಾನಗಳುಂಟು. ಅವು ಯಾವವೆಂದರೆ,

(೧) ಸ್ವಭಾವವಾಗಿ ಅರಗು ಕೊಡುವ ಮರಗಳಿಂದ ಅರಗು ಕಟ್ಟಿದ್ದಾಗಲೆಲ್ಲಾ ಬೀಜಕ್ಕಾಗಿ ಸ್ವಲ್ಪ ಬಿಟ್ಟು ಮಿಕ್ಕ ಅರಗನ್ನು ಕೆರದು ಕೊಳ್ಳುವುದು.

(೨) ಅರಗಿನ ವ್ಯವಸಾಯದಲ್ಲಿರುವ ಮರದಿಂದ ಎಳೇ ಹುಳುಗಳು ಮುತ್ತಿಕೊಂಡಿರುವ ಕಡ್ಡಿಗಳನ್ನು ತೆಗೆದುಕೊಂಡು ಈ ಹುಳುಗಳಿಲ್ಲದ ಮರಗಳ ಕೊಂಬೆಗಳಿಗೆ ಕಟ್ಟಿ ಸಾಕೆಯಾದ ಅರಗು ಕಟ್ಟಿದಹಾಗೆಲ್ಲಾ ಕೆರದುಕೊಳ್ಳುವದು.

(೩) ವರುಷಕ್ಕೆ ಒಂದು ಫಸಲು ಕೊಡುವ ತೊಗರಿ ಮುಂತಾದ ಸಾಲ್ ಪೈರುಗಳಿಗೆ ಹುಳುಗಳನ್ನು ಹತ್ತಿಸಿ ಅರಗಿನ ಫಸಲು ತೆಗೆದುಕೊಂಡು ಅನಂತರ ಗಿಡಗಳನ್ನು ಕಿತ್ತು ಹಾಕಿಬಿಡುವದು.

ಅಶ್ವತ್ಥ, ಆಲ, ಬಿಲ್ವಾರ ಮೊದಲಾದ ಮರಗಳಮೇಲೆ ಅರಗು ಕಟ್ಟುವ ಸಂದರ್ಭಗಳಲ್ಲಿ ಆಕಡೆ ಇರುವ ಈ ಜಾತಿಯ ಎಲ್ಲಾ ಮರಗಳಿಗೂ ಹುಳುಗಳನ್ನು ಹತ್ತಿಸಿ ಅರಗಿನ ಉತ್ಪತ್ತಿಯನ್ನು ಹೆಚ್ಚಿಸಬಹುದು. ಹೊಸ ಮರಗಳಿಗೆ ಅರಗಿನ ಹುಳುಗಳಿರುವ ಕಡ್ಡಿಗಳನ್ನು ಕಟ್ಟುವದಕ್ಕೆ ಯಾವ ಕಾಲವು ಸಕಾಲವಾಗಿರುತ್ತೆಂಬುದನ್ನು ಮಾತ್ರ ಗೊತ್ತುಮಾಡಿಕೊಂಡಪಕ್ಷದಲ್ಲಿ ಮೇಲ್ಕಂಡ ರೀತಿಯಲ್ಲಿ ಅರಗಿನ ವ್ಯವಸಾಯದ ಅಭಿವೃದ್ಧಿಗೆ ವಿಶೇಷ ಅವಕಾಶವುಂಟು. ಮರದಿಂದ ಅರಗನ್ನು ಕೆರದುಕೊಳ್ಳುವಾಗ ಪೂರ್ತಿಯಾಗಿ ತೆಗೆದುಕೊಳ್ಳದೆ ಬೀಜಕ್ಕಾಗಿ ಸ್ವಲ್ಪವನ್ನು ಮರದಲ್ಲೇ ಬಿಟ್ಟಿದ್ದರೆ ಇದು ಪುನಃ ಮರಕ್ಕೆಲ್ಲಾ ಹರಡಿಕೊಂಡು ಮುಂದಿನ ಫಸಲಿಗೆ ಅನುಕೂಲವಾಗುತ್ತದೆ.

ಸಾಗಡೆ, ಮುತ್ತುಗ, ಬೋರೆ, ಕಗ್ಗಲಿ, ಕರೀಜಾಲಿ, ಬಿಲ್ವಾರ, ಆಲ, ಅಶ್ವತ್ಥ, ವಗೈರೆ ಇನ್ನೂ ಇತರ ಮರಗಳು ಅರಗಿನ ವ್ಯವಸಾಯಕ್ಕೆ ಬಹಳ ಅನುಕೂಲವಾಗಿರುತ್ತವೆ. ಇವು ಇಂಡಿಯಾ ದೇಶದಲ್ಲಿ ಸಾಮಾನ್ಯವಾಗಿ ಎಲ್ಲೆಲ್ಲಿಯೂ ಬೆಳೆಯುವುವು ಮತ್ತು ಖರಾಬು ಜಮೀನುಗಳಲ್ಲಿ, ಕೆರೆ ಏರಿಗಳ ಮೇಲೆ, ರಸ್ತೆ ಪಕ್ಕಗಳಲ್ಲಿ, ಹೊಲಗಳಲ್ಲಿ ಅಥವಾ ನದಿಗಳು ಮತ್ತು

ಕಾಲ್ವೆಗಳ ದಡಗಳಮೇಲೆ ಬೆಳೆದಿರುತ್ತವೆ. ಆಯಾಯ ಮರಕ್ಕೆ ತಕ್ಕ ಅರಗಿನ ಹುಳುಗಳನ್ನು ತಂದುಬಿಟ್ಟು ಲಾಭಕರವಾಗಿ ವ್ಯವಸಾಯ ಮಾಡಬಹುದು. ಈ ವ್ಯವಸಾಯದಿಂದ ಇಂಥಾ ಮರಗಳಿರುವ ಜಮೀನಿನಲ್ಲಿ ದನಗಳನ್ನು ಮೇಯಿಸುವದಕ್ಕೇ ಆಗಲಿ ಅಥವಾ ಮರಗಳನ್ನು ಸೌದೆಗೋಸ್ಕರ ಉಪಯೋಗಿಸಿಕೊಳ್ಳುವದಕ್ಕೇ ಆಗಲಿ ಯಾವ ತರದ ಪ್ರತಿಬಂಧಕವೂ ಬರುವದಿಲ್ಲ ; ಅಲ್ಲದೆ ಇನ್ಯಾವ ರೀತಿಯಲ್ಲಿಯೂ ಲಾಭಕರವಲ್ಲದ ಮರದಿಂದ ಸ್ವಲ್ಪ ಖರ್ಚುಮಾಡಿ ಫಾಯಿದೆಯನ್ನು ಪಡೆಯಲು ಅನುಕೂಲವಾಗುತ್ತೆ. ಈರೀತಿಯಲ್ಲಿ ಅರಗಿನ ವ್ಯವಸಾಯವು ೧೯೦೭ರಲ್ಲಿ ಬೆಹಾರದಲ್ಲಿ ಪ್ರಾರಂಭಮಾಡಲ್ಪಟ್ಟು ಈಗ ಬಹಳ ಪ್ರಬಲಗೊಂಡಿರುತ್ತೆ.

ಈ ವ್ಯವಸಾಯದಲ್ಲಿ ಆದಾಯ ವೆಚ್ಚವೇನಾಗುತ್ತದೆ ನೋಡೋಣ. ಲೆಖ್ಖಾಚಾರಕ್ಕಾಗಿ ೨೦ ಗಿಡಗಳನ್ನುಳ್ಳ ಒಬ್ಬ ರೈತನಿಗೆ ತಗಲುವ ಖರ್ಚು ಮತ್ತು ಬರುವ ಆದಾಯವನ್ನೂ ಇಲ್ಲಿ ನಮೂದಿಸಿರುತ್ತೆ.

ಖರ್ಚು. ಮೊದಲನೇ ವರ್ಷ.	ರೂ.	ಆ.	ಪೈ.
೨೦ ಮರಗಳನ್ನು ಕಸಿಮಾಡುವದಕ್ಕೆ, ಒಬ್ಬ ಕೂಲಿಯವನಿಗೆ, ದಿನಕ್ಕೆ $2\frac{1}{2}$ ಆಣೆಯಂತೆ 3 ದಿನಗಳಿಗೆ ...	0	7	6
ಬೀಜದ ಅರಗು, ೨೫ ಕಂತೆಗಳು, ಕಂತೆ ೧ಕ್ಕೆ 4 ಆಣೆ ಮೇರೆ	6	4	0
ಮರಗಳಿಗೆ ಬೀಜದ ಅರಗು ಕಡ್ಡಿಗಳನ್ನು ಕಟ್ಟುವ ಖರ್ಚು ...	0	15	0
ಅರಗು ಕೆರದುಕೊಳ್ಳುವದಕ್ಕೆ	0	10	0
ಜೋರಿ ಕ್ರಯ	1	0	0
ಜುಮ್ಲಾ	9	4	6
ಎರಡನೇ ವರುಷ.			
ಕಸಿಮಾಡುವದಕ್ಕೆ ಒಬ್ಬ ಕೂಲಿ, ೨ ದಿನಗಳು ...	0	5	0
ಮರಗಳಿಗೆ ಬೀಜದ ಅರಗು ಕಡ್ಡಿಗಳನ್ನು ಕಟ್ಟುವದಕ್ಕೆ ...	0	10	0
ಅರಗು ಕೆರದುಕೊಳ್ಳುವದಕ್ಕೆ	0	10	0
ಚಿಲ್ಲರೆ	0	7	0
ಜುಮ್ಲಾ.	2	0	0
ಅಂತು ಒಟ್ಟು ಖರ್ಚು ...	11	4	6

ಕೊಂಡುಕೊಂಡ ಬೀಜದಿಂದ ಸಿಕ್ಕಿದ ಅರಗು, ಬಂಗಾಳಿ ಸೇರುಗಳು		9
ಮೊದಲನೇ ವರುಷದ ಅರಗು ಉತ್ಪತ್ತಿ, ಬಂಗಾಳಿ ಮಣ	...	½
ಎರಡನೇ ವರುಷದ ಉತ್ಪತ್ತಿ, ಡಿಟ್ಟೊ.	...	½
ಜುಮ್ಲಾ		1 ಮಣ 9 ಸೇರು.

ಹಾಲಿ ಅರಗಿನ ಧಾರಣೆ ಕನಿಷ್ಟದರ ಮಣ ಒಂದಕ್ಕೆ ೨೦ ರೂಪಾಯಿ ನಂತೆ, ೧ ಮಣ ೯ ಸೇರಿಗೆ ಆಗುವ ಖರೀದಿ ರೂ. ೨೪—೮—೦ ಪೈಕಿ ೧೧—೪—೬ ಖರ್ಚುಜಾತಾ ೧೩—೩—೬ ರೂಪಾಯಿ ನಿವ್ವಳ ಆದಾಯ ಉಳಿಯುತ್ತೆ. ಅಂದರೆ ೨೦ ಮರಗಳಿಂದ ವರುಷ ಒಂದಕ್ಕೆ ಸರಾಸರಿ ೭ ರೂಪಾಯಿ ಲಾಭ ಗಿಟ್ಟಿದಂತಾಯಿತು.

ಮೇಲೆ ಕೊಟ್ಟಿರುವ ಲೆಖ್ಖಾಚಾರದಲ್ಲಿ ಅರಗಿನ ಉತ್ಪತ್ತಿಯನ್ನು ಮರಕ್ಕೆ ೨ ಸೇರಿನಂತೆ ಕೇವಲ ಕನಿಷ್ಟಪಕ್ಷವನ್ನೇ ಅಂದಾಜಾಗಿ ಇಟ್ಟು ಕೊಂಡಿರುತ್ತೆ. ಭಾರಿ ಮರವಾದರೆ ಸುಮಾರು ೧೦ ಸೇರಿನವರಿಗೂ ಅರಗು ಬರುವುದು. ಸರಿಯಾದ ವ್ಯವಸಾಯ ವಗೈರೆ ನಡೆಸಿದರೆ ಮರ ಒಂದಕ್ಕೆ ಕನಿಷ್ಟಪಕ್ಷ ೧ ರೂಪಾಯಿ ಹುಟ್ಟುವಳಿಯಾಗುತ್ತದೆ. ಕೂಲಿಯವನನ್ನು ಇಟ್ಟುಕೊಳ್ಳದೇ ಸ್ವಂತವಾಗಿ ಕೆಲಸವನ್ನು ಮಾಡುವದಾದರೆ ಖರ್ಚು ಇನ್ನೂ ಕಮ್ಮಿ ಬೀಳುವದು. ಅಂದರೆ ಆದಾಯವು ಹೆಚ್ಚಲೇಬೇಕು.

Deep Draining for Sugar-Cane.*

ಕಬ್ಬಿನ ಗದ್ದೆಯಲ್ಲಿ ನೀರು ಬಸೆದು ಹೋಗುವದಕ್ಕೆ ಏರ್ಪಾಟು.

ಕಬ್ಬಿನ ಗದ್ದೆಗಳಲ್ಲಿ ನೀರು ನಿಲ್ಲದಂತೆ ಚೆನ್ನಾಗಿ ಬಸೆದು ಹೋಗುವದಕ್ಕಾಗಿ ಆಳವಾದ ಕಾಲುವೆಗಳನ್ನು ತೋಡುವುದರಿಂದ ಉಂಟಾಗುವ ಅನುಕೂಲತೆಗಳನ್ನು ಕುರಿತು ಮದರಾಸು ವ್ಯವಸಾಯ ಇಲಾಖಾ ಡೆಪ್ಯುಟಿ ಡೈರೆಕ್ಟರ್ ಮೆ|| ಸಿಂಪ್ಸನ್ನರವರು (Mr. H. C. Simpson)ಬರೆದಿರುವ ಲೇಖನದ ಕೆಲವು ಮುಖ್ಯಾಂಶಗಳನ್ನು ನಮ್ಮ ವಾಚಕರ ತಿಳುವಳಿಕೆ ಬಗ್ಗೆ ಇಲ್ಲಿ ನಮೂದಿಸಿರುತ್ತೇವೆ.

* ಮದರಾಸು ಅಗ್ರಿಕಲ್ಚರಲ್ ಕ್ಯಾಲೆಂಡರ್, ೧೯೧೦.

ಕಬ್ಬು ಸಾಗುವಳಿಯಲ್ಲಿ ಅನೇಕ ಸ್ಥಳಗಳಲ್ಲಿ ಅನೇಕ ಕ್ರಮಗಳು ಆಚರಣೆಯಲ್ಲಿವೆ. ತಥಾಪಿ ಗೊಬ್ಬರ ಹಾಕುವದರಲ್ಲೂ, ನಾಟಿಮಾಡುವದರಲ್ಲೂ, ನೀರು ಸರಫರಾಜು ವಗೈರೆ ಕೆಲಸಗಳಲ್ಲೂ ಈ ವ್ಯತ್ಯಾಸಗಳು ವಿಶೇಷವಾಗಿ ಉಂಟು. ಆದರೆ, ಮುಖ್ಯವಾಗಿ ಕಬ್ಬಿನ ಸಾಗುವಳಿಗೆ ಅನುಕೂಲವಾದ ಭೂಮಿಯ ಚುನಾವಣೆ, ಅದಕ್ಕೆ ನೀರು ಹಾಯಿಸುವ ವಿಧಾನ ಮತ್ತು ಬಿಟ್ಟ ನೀರು ಸಲೀಸಾಗಿ ಬಸಿದು ಹೋಗುವುದಕ್ಕೆ ತಕ್ಕ ಏರ್ಪಾಟು, ಈ ವಿಷಯಗಳಿಗೆ ಮಾತ್ರ ಯಾರೂ ಸರಿಯಾದ ಗಮನ ಕೊಡುವಂತಿಲ್ಲ.

ಸಾಧಾರಣವಾಗಿ ರೈತನು ಕಬ್ಬಿನ ಪೈರಿಡುವದಕ್ಕಾಗಿ ತನಗಿರುವ ಗದ್ದೆಗಳಲ್ಲೆಲ್ಲಾ ಶ್ರೇಷ್ಠವಾದದ್ದನ್ನೇ (ಅದರಲ್ಲೂ ಗೋಡು ಬಿದ್ದು ಬಿದ್ದು ಬಹಳ ಬಂಕೆಯಾಗಿರುವದನ್ನೇ) ಚುನಾಯಿಸಿಕೊಂಡು ಅದಕ್ಕೆ ಯಥೇಷ್ಟವಾದ ನೀರಾವರಿ ಸೌಕರ್ಯವನ್ನು ಮಾತ್ರ ಅನುಕೂಲಪಡಿಸಿಕೊಂಡು ತೃಪ್ತನಾಗುತ್ತಾನೆ. ಬಿಟ್ಟ ನೀರು ಗದ್ದೆಯಲ್ಲಿಯೇ ನಿಲ್ಲದೆ ಚೆನ್ನಾಗಿ ಬಸಿದು ಹೋಗುವದಕ್ಕೆ ತಕ್ಕ ಅನುಕೂಲವುಂಟೇ ಇಲ್ಲವೇ ಗಮನಿಸುವದೇ ಇಲ್ಲ. ಇಂಥಾ ಒಂಡುಭೂಮಿಯಲ್ಲಿ ಬೀಜವು ಮೊಳತು ಬೆಳೆಯುವದೇ ಕಷ್ಟ. ಬೀಜ ನಾಟಿದ ಕೂಡಲೆ ಭಾರಿ ಮಳೆ ಬಿದ್ದರಂತೂ ಮುಕ್ಕಾಲುವಾಸಿ ಬಿತ್ತವೆಲ್ಲಾ ಕೆಟ್ಟುಹೋಗಿ ಮೊಳೆಯುವದೇ ಇಲ್ಲ. ನೀರು ಚೆನ್ನಾಗಿ ಬಸಿದುಹೋಗುವ ಹಗುರವಾದ ಜಮೀನಿನಲ್ಲಾದರೋ ನೆಟ್ಟ ಎಲ್ಲಾ ಬೀಜಗಳೂ ಒಂದೂ ತಪ್ಪದೆ ಮೊಳಕೆ ಬಿಡುತ್ತವೆ. ಒಂಡುಭೂಮಿಯಲ್ಲಿನಪೈರು ಬೆಳೆದು ಮೇಲೆ ಬಂದಬಡನೆ, ಅಂದರೆ, ನೆಟ್ಟ ೨—೩ ತಿಂಗಳಾದ ಮೇಲೆ, ಜಮೀನಿನಲ್ಲಿ ಮೇಲ್ಮಟ್ಟದಿಂದ ಕೆಲವು ಅಂಗುಲ ಆಳಕ್ಕೆ ಮಣ್ಣು ಬಹಳ ತ್ಯಾಮವಾಗಿದ್ದರೂ ಕೂಡ ಪದೇ ಪದೇ ನೀರು ಹಾಯಿಸಲೇಬೇಕಾಗಿರುತ್ತೆ. ಆದರೆ ನೀರು ಚೆನ್ನಾಗಿ ಬಸಿದು ಹೋಗುವ ಜಮೀನಿನಲ್ಲಾದರೋ ಹೀಗೆ ಪದೇ ಪದೇ ನೀರು ಹಾಯಿಸಬೇಕಾದ ಪ್ರಕೃತವಿರುವದಿಲ್ಲ. ಪಶ್ಚಿಮ ಸಮುದ್ರ ತೀರದಕಡೆ ನೀರು ಚೆನ್ನಾಗಿ ಬಸಿದು ಹೋಗುವ ಜಮೀನುಗಳಲ್ಲಿ ನೀರು ಬಿಡಕ್ಕೆ ಅನುಕೂಲವಾಗಿ ಆಳವಾದ ಕಡಗುಗಳನ್ನು ಹೊಡೆದು ಕಬ್ಬಿನ ಪೈರು ಇಡುತ್ತಾರೆ. ಪೈರು

ಮಳೆಗಾಲ ಪೂರೈಸಿದ ನಂತರ ಸುಮಾರು ೫-೬ ತಿಂಗಳು (ಈ ಕಾಲದಲ್ಲಿ ಪ್ರಾಯಶಃ ಶುದ್ಧಾಂಗವಾಗಿ ಮಳೆಯೇ ಆಗುವದಿಲ್ಲ) ನೀರನ್ನು ಅಪೇಕ್ಷಿಸದೇನೆ ಚೆನ್ನಾಗಿ ಬೆಳೆಯುತ್ತದೆ. ಇದಕ್ಕೆ ಕಾರಣವೇನೆಂದರೆ, ಚೆನ್ನಾಗಿ ನೀರು ಬಸಿದು ಹೋಗುವ ಜಮೀನಿನಲ್ಲಿ ಪೈರು ಆಳವಾಗಿ ಬೇರೂರಿ ಅಲ್ಲಿರುವ ತೇವವನ್ನು ಉಪಯೋಗಿಸಿಕೊಳ್ಳಬಲ್ಲದು. ಸಲೀಸಾಗಿ ನೀರು ಬಸಿದು ಹೋಗದ ಒಂಡುಭೂಮಿಯುಳ್ಳಾದರೋ ಬೇರುಗಳಿಗೆ ಘಾಳಿ ಒದಗದೆ ಅವು ಆಳವಾಗಿ ಹೋಗಲಾರವು. ಆದಕಾರಣ ಅವು ಮೇಲ್ಗಡೆಯೇ ನಿಂತು ಬೇಕಾಗುವ ಆಹಾರವನ್ನು ಅಲ್ಲೇ ಹುಡುಕಿಕೊಳ್ಳುತ್ತವೆ. ಈ ಕಾರಣದಿಂದಲೇನೆ ಒಂಡು ಭೂಮಿಯಲ್ಲಿನ ಕಬ್ಬಿನ ಪೈರು ಬೇರುಗಳು ಆಳವಾಗಿ ಇಳಿದಿರುವದಿಲ್ಲವಾದ್ದರಿಂದ ಗಾಳಿ ಎದ್ದರೆ ನೆಲದಮೇಲೆ ಮೊಗಚಿಕೊಳ್ಳುತ್ತದೆ. ಈ ಬಿದ್ದುಹೋದ ಜಲ್ಲೆಗಳಲ್ಲಿ ಶರ್ಕರಾಂಶವು ಬಹಳ ಕಡಿಮೆಯಾಗಿರುತ್ತೆ ಮತ್ತು ಇವುಗಳನ್ನು ಒಳ್ಳೇ ಜಲ್ಲೆಗಳೊಂದಿಗೆ ಸೇರಿಸಿ ಆಲೆಯಾಡಿದರೆ ಕಿರದು ರಖಂ ಬೆಲ್ಲ ಆಗುವುದರಿಂದ ರೈತನಿಗೆ ಕನೆ ನಷ್ಟ ಉಂಟಾಗುತ್ತದೆ. ಆದರೆ ಚೆನ್ನಾಗಿ ನೀರು ಬಸಿದು ಹೋಗುವ ಜಮೀನಿನಲ್ಲಿ ಬೇರುಗಳ ಹಿಡಿತ ಬಲವಾಗಿರುತ್ತದೆಯಾಗಿ ಜಲ್ಲೆಗಳು ಒಂಡು ಭೂಮಿಯುಳ್ಳಾಗುವ ಹಾಗೆ ಸುಲಭವಾಗಿ ಮೊಗಚಿಕೊಳ್ಳುವದಿಲ್ಲ.

ಕಬ್ಬು ಸಾಮಾನ್ಯವಾಗಿ ಭೂಮಿ ಯೊಳಗಿನ ಸಾರವನ್ನು ವಿಶೇಷವಾಗಿ ಉಪಯೋಗಿಸಿಕೊಳ್ಳತಕ್ಕ ಪೈರು. ಸಾಧಾರಣವಾಗಿ ರೂಢಿಯಲ್ಲಿರುವ ಕ್ರಮದಲ್ಲಿ ಕಬ್ಬು ಜಮೀನಿನಲ್ಲಿ ಆಳವಾಗಿ ಬೇರು ಬಿಡದೆ ಮೇಲಿನಿಂದಲೇನೇ ವಿಶೇಷವಾಗಿ ಸಾರವನ್ನು ಉಪಯೋಗಿಸಿಕೊಳ್ಳುತ್ತದೆ. ಬತ್ತದ ಪೈರೂ ಕೂಡ ಇದರ ಹಾಗೆಯೇ ಜಮೀನಿನ ಮೇಲ್ಭಾಗದಿಂದಲೇನೇ ಆಹಾರವನ್ನು ತೆಗದುಕೊಳ್ಳತಕ್ಕ ಸ್ವಭಾವವುಳ್ಳದ್ದು. ಆದಕಾರಣ, ಕಬ್ಬಿನ ಫಸಲು ತೆಗದ ಜಮೀನಿನಲ್ಲಿ ಕೂಡ್ಲೆ ಬತ್ತದ ಪೈರು ಇಟ್ಟರೆ ಇದಕ್ಕೆ ಬೇಕಾದಷ್ಟು ಆಹಾರ ಜಮೀನಿನಲ್ಲಿ ಒದಗದೆ ಫಸಲು ಕೆಟ್ಟು ಹೋಗುತ್ತೆದೆ. ಆದರೆ ನೀರು ಸಲೀಸಾಗಿ ಬಸಿದುಹೋಗುವ ಜಮೀನಿನಲ್ಲಿ ಕಬ್ಬಿನ ಪೈರು ಆಹಾರವನ್ನು ಅಧಿಕ ಆಳವಾದ ಮಣ್ಣಿನಿಂದ ತೆಗದುಕೊಳ್ಳಬಲ್ಲದು. ಆದ್ದರಿಂದ ಮೇಲ್ಮಣ್ಣಿನೊಳಗಿನ ಸಾರವು ಅಷ್ಟು ಕಡಿಮೆಯಾಗುವದಿಲ್ಲ.

ತಿನ್ನವಲ್ಲಿ ಡಿಸ್ಟ್ರಿಕ್ಟಿನಲ್ಲಿ ತರಿ ಜಮೀನ ಗಳಲ್ಲಿಯೂ ಖುಷ್ಕಿ ಜಮೀನುಗಳಲ್ಲಿಯೂ ಬಹಳ ಉತ್ತಮವಾದ ಕಬ್ಬಿನ ಪೈರು ಆಗುತ್ತದೆ. ಆ ಪ್ರಾಂತ್ಯದಲ್ಲಿ ಸರಿಯಾಗಿ ನೀರು ಬಸಿದು ಹೋಗುವದಕ್ಕೆ ತಕ್ಕ ಏರ್ಪಾಟುಗಳು ಮಾಡಿರುವದೇ ಪೈರು ಇಷ್ಟು ಚೆನ್ನಾಗಿ ಆಗುವದಕ್ಕೆ ಕಾರಣವಾಗಿದೆ. ಹೀಗೆಯೇ ಪಶ್ಚಿಮ ಸಮುದ್ರ ತೀರದಲ್ಲಿಯೂ ಕೂಡ ಕಬ್ಬಿನ ಪೈರು ಚೆನ್ನಾಗಿ ಆಗುತ್ತದೆ.

ಒಟ್ಟು ಸಾರಾಂಶವೇನಂದರೆ, ಕಬ್ಬಿನ ಪೈರು ಇಡುವದಕ್ಕೆ ಭೂಮಿಯನ್ನು ಚುನಾಯಿಸುವದರಲ್ಲಿ ಜಮೀನು ಬಹಳ ಶ್ರೇಷ್ಠವಾಗಿರಬೇಕೆಂಬುವ ಅವಶ್ಯಕತೆ ಏನೂ ಇರುವದಿಲ್ಲ. ಆದರೆ ನೀರು ಚನ್ನಾಗಿ ಬಸಿದು ಹೋಗುವದಕ್ಕೆ ತಕ್ಕ ಅನುಕೂಲಗಳುಳ್ಳದ್ದಾಗಿರಬೇಕು. ಇಂಥಾ ಜಮೀನುಗಳಲ್ಲಿ ಹಾಕುವ ಗೊಬ್ಬರವನ್ನೆಲ್ಲಾ ಪೈರು ಪೂರ್ತಿಯಾಗಿ ಉಪಯೋಗಿಸಿಕೊಳ್ಳಬಲ್ಲದು. ಜಮೀನು ಸ್ವಾಭಾವಿಕವಾಗಿಯೂ ನೀರು ಬಸಿದು ಹೋಗುವಹಾಗೆ ಇದ್ದರೂಕೂಡ, ಮಳೆನೀರೇ ಆಗಲಿ ಅಥವಾ ಹಾಯಿಸುವ ನೀರೇಆಗಲಿ ಜಮೀನಿನ ಮೇಲೆ ನಿಂತುಬಿಡದಂತೆ ಸಲೀಸಾಗಿ ಬಸಿದು ಹೋಗುವದಕ್ಕಾಗಿ ತಕ್ಕ ಕಡಗುಗಳನ್ನು ಹೊಡೆಯಬೇಕು.

———o———

Lemon-Grass Oil.*

ಲಾವಂಚದ ಎಣ್ಣೆ.

ತೆಂಗು, ಏಲಕ್ಕಿ, ಲವಂಗಪಟ್ಟೆ, ಜಾಜಿಕಾಯಿ, ಲವಂಗ, ಕರ್ಪೂರ, ಲಾವಂಚದ ಹುಲ್ಲು, ವಗೈರೆ ಉಷ್ಣ ಪ್ರದೇಶಗಳಲ್ಲಾಗುವ ಪದಾರ್ಥಗಳು ಈಸ್ಟರ್ನ್‌ಬೆಂಗಾಲ್ ಮತ್ತು ಅಸ್ಸಾಂ ಪ್ರಾಂತ್ಯದಲ್ಲಿ ಬೆಳೆಯುತ್ತವೆಯೋ ಎಂಬು ಪರೀಕ್ಷೆ ಮಾಡುವದಕ್ಕಾಗಿ ಸರ್ಕಾರದವರು ವಾಹ್ಜೇಯಿನ್ (Wahjain) ಎಂಬ ಸ್ಥಳದಲ್ಲಿ ಒಂದು ಪ್ರಯೋಗದ ಪ್ಲಾಂಟೇಷನನ್ನು ೧೯೦೪ನೆ ಜನವರಿ ಮಾಹೆಯಲ್ಲಿ ಏರ್ಪಡಿಸಿ ಪ್ರಯೋಗಗಳನ್ನು ನಡೆಸುತ್ತಲಿದಾರೆ.

ಇಲ್ಲಿ ಲಾವಂಚದ ಹುಲ್ಲಿನಿಂದ ಎಣ್ಣೆ ತೆಗೆಯುವದುಂಟು ಸುಮಾರು

* ಈಸ್ಟರ್ನ್ ಬೆಂಗಾಲ್ ಮತ್ತು ಅಸ್ಸಾಮಿನ ೧೯೦೭—೦೮ನೆ ಸಾಲ್ ರಿಪೋರ್ಟು.

೩೪ ಎಕರೆಯು ಜಮೀನು ಈ ಹುಲ್ಲಿನ ಸಾಗುವಳಿಯಲ್ಲಿದೆ. ೧೯೦೮—೦೯ನೆ ಸಾಲ್‌ನಲ್ಲಿ ೧೬೦೪ ಬಂಗಾಳಿ ಮಣ ಹುಲ್ಲು ಕಟಾವು ಮಾಡಲ್ಪಟ್ಟು ೫೧೦೪ ಔನ್ಸು ಎಣ್ಣೆ ಬಂತು. ಇದಕ್ಕೆ ಖರ್ಚು ಔನ್ಸು ಒಂದಕ್ಕೆ ೦-೧-೧೧ ಕಾಸು ಬೀಳುತ್ತದೆ. ೧೯೦೭—೦೮ರಲ್ಲಿ ಔನ್ಸಿಗೆ ನಾಲ್ಕಾಣೆ ದರದಂತೆ ೫೨೬ ಔನ್ಸು ಎಣ್ಣೆ ವಿಕರಿಯಾಯಿತು. ೧೯೦೯ನೆ ಫೆಬ್ರವರಿಯಲ್ಲಿ ಕಲ್ಕತ್ತೆಯ ಒಬ್ಬ ವರ್ತಕನು ಔನ್ಸಿಗೆ ಐದಾಣೆಯಂತೆ ೨೭೮ ಔನ್ಸುಗಳನ್ನು ಕೊಂಡುಕೊಂಡನು. ಆದರೆ ಔನ್ಸೊಂದಕ್ಕೆ ಸರಾಸರಿ ೦-೨-೩ ಪೈ ಲಾಭ ಸುಲಭವಾಗಿ ಗಿಟ್ಟಿದಂತಾಯಿತು.

ಈ ಹುಲ್ಲಿನ ವ್ಯವಸಾಯವನ್ನೂ ಮತ್ತು ಎಣ್ಣೆ ತೆಗೆಯುವದನ್ನೂ ಸ್ಥಳೀಯ ರೈತರಿಗೆ ಕಲಿಸುವ ಉದ್ದೇಶದಿಂದ ಸರ್ಕಾರದವರು ೧೯೦೯ನೆ ಮೇ ಮಾಹೆಯಲ್ಲಿ ೧೨ ಔನ್ಸು ಎಣ್ಣೆಗೆ ರೂ. ೧-೮-೦ ಮೇರೆ ಕೂಲಿಕೊಡುವದಾಗಿ ಹೇಳಿ ಹುಲ್ಲು ಕತ್ತರಿಸಿ ಎಣ್ಣೆ ತೆಗೆದು ಸರಬರಾಯಿ ಮಾಡುವ ಕೆಲಸವನ್ನು ಒಬ್ಬ ರೈತನಿಗೆ ಒಪ್ಪಿಸಿದರು. ಆಗಲೆ ನಲವತ್ತು ಜನ ರೈತರು ಹುಲ್ಲನ್ನು ಸರ್ಕಾರಿ ಪ್ಲಾಂಟೇಷನ್ನಿಂದ ತೆಗೆದುಕೊಂಡು ಹೋಗಿ ಸ್ವಂತವಾಗಿ ಬೆಳೆಯಲುಪಕ್ರಮಿಸಿರುತ್ತಾರೆ.

Harmful Effects of Grass in Cultivation. *

ಸಾಗುವಳಿಯಲ್ಲಿ ಹುಲ್ಲಿನಿಂದ ಉಂಟಾಗುವ ಕೆಡಕುಗಳು.

ಪೈರುಗಳಿಗೆ ಹುಲ್ಲು ಬಹಳ ಕೆಡಕನ್ನುಂಟುಮಾಡುತ್ತದೆ. ಇದರಿಂದ ಭೂಮಿಯಲ್ಲಿ ಒಂದು ತರದ ಕೆಟ್ಟ ವಿಷಪದಾರ್ಥವು ಉಂಟಾಗುತ್ತದೆ. ಸಾಗುವಳಿ ಜಮೀನುಗಳಲ್ಲಂತೂ ಹುಲ್ಲು ಬೆಳೆಯುವದಕ್ಕೆ ಅವಕಾಶ ಕೊಟ್ಟರೆ ಇಡುವ ಪೈರೆಲ್ಲಾ ನಾಶವಾಗಿಹೋಗುವದು. ಆದಕಾರಣ ಸಾಗುವಳಿ ಜಮೀನುಗಳಲ್ಲಿ ಸಾಧ್ಯವಾದ ಮಟ್ಟಿಗೂ ಹುಲ್ಲಿನ ಸೆಲೆಯೇ ಇಲ್ಲದಂತೆ ಮಾಡಬೇಕು. ಹುಲ್ಲಿನಿಂದ ಪೈರುಗಳಿಗೆ ಹಾನಿ ವುಂಟಾಗುತ್ತದೆಂಬ ಅಂಶವು ಅನೇಕ ಅಜಮಾಯಿಷಿಗಳಿಂದ ಅನುಮಾನಾಸ್ಪದವಿಲ್ಲದಹಾಗೆ ನಿರ್ಧರಿಸಲ್ಪಟ್ಟಿರುತ್ತದೆ.

---

* ಪ್ಲಾಂಟರ್ಸ್ ಕ್ರಾನಿಕಲ್, ೫—೨—೧೯೧೧.

ಒಂದು ತೋಟದಲ್ಲಿ ಸೇಬು ಗಿಡಗಳನ್ನು ಸಾಲು ಸಾಲಾಗಿ ಸಾಲಿ
ುವ ಸಾಲಿಗೆ ೧೧ಅಡಿ ಬಿಟ್ಟು ಹಾಕಿತ್ತು. ಒಂದು ಸಾಲಿನಲ್ಲಿ ಭೂಮಿ
ಯನ್ನು ಚೆನ್ನಾಗಿ ಉತ್ತು ಪಾಕಾಗಿ ಇಟ್ಟಿತ್ತು. ಮತ್ತೊಂದರಲ್ಲಿ ಉ
ಕ್ಕೆ ವಗೈರೆ ಮಾಡಿರಲಿಲ್ಲ. ಹುಲ್ಲು ಸ್ವೇಚ್ಛೆಯಾಗಿ ಬೆಳೆದಿತ್ತು. ಇವೆರ
ಕ್ಕೂ ಗೊಬ್ಬರವನ್ನು ಒಂದೇ ಸಮನಾಗಿ ಇಟ್ಟಿತ್ತು ಮತ್ತು ಹುಲ್ಲು
ಳೆದಿದ್ದ ಸಾಲಿನಲ್ಲಿ ಕೊಯಿದ ಹುಲ್ಲನ್ನು ಆಚೆಗೆ ಸಾಗಿಸದೇ ಅಲ್ಲೇ ನೆ
ದ ಮೇಲೆ ಕೊಳೆಯುವದಕ್ಕೆ ಬಿಡಲಾಯಿತು. ಉಳುಮೆ ಮಾಡಿದ್ದ ಸಾ
ನಲ್ಲಿ ಗಿಡಗಳು ಸೊಂಪಾಗಿ ಬೆಳೆದು ೧೫-೧೬ಅಡಿ ಅಗಲಕ್ಕೆ ಸುತ್ತಲೂ
ರಡಿಕೊಂಡು ಬಹಳ ಒತ್ತಾಗಿ ಬಂದದ್ದರಿಂದ ಸುಮಾರು ಅರವಾಸಿ ಗಿಡಗ
ನ್ನು ಎತ್ತಿ ಬೇರೆ ಕಡೆ ನೆಡಬೇಕಾಗಿಬಂತು. ಹುಲ್ಲು ಬೆಳೆದಿದ್ದ ಸಾಲಿ
ಲ್ಲಾದರೋ ಗಿಡಗಳು ಬಹಳ ಕಾಲದವರೆಗೂ ಬೆಳವಳಿಕೆಯನ್ನೇ
ೊಂದಲಿಲ್ಲ. ಅವುಗಳ ಬೇರುಗಳು ಬಹಳ ಆಳವಾಗಿ ಊರಿ ಹುಲ್ಲಿನ
ೇರುಗಳಿಗೆ ನಿಲುಕದಂತಾದ ಮೇಲೆ ಸುಮಾರು ಗಿಡಗಳು ಬೆಳವಳಿಕೆಯನ್ನು
ೊಂದಲಾರಂಭವಾಯಿತು. ಆದರೂಕೂಡ ಉಕ್ಕೆ ಮಾಡಿದ್ದ ಸಾಲಿನ
ಡಗಳ ಹಾಗೆ ಸೊಂಪಾಗಿ ಬೆಳೆಯಲೇ ಇಲ್ಲ. ಸರಟೆಕೊಂಡೇ ಇದ್ದವ
ದೆ ಫಸಲುತ್ಪತ್ತಿಯೂ ಕೂಡ ಉಕ್ಕೆ ಮಾಡಿದ್ದ ಸಾಲಿನಲ್ಲಾದ್ದರಲ್ಲಿ
ರಲ್ಲಿ ಒಂದು ಪಾಲೂ ಸಹ ಆಗಲಿಲ್ಲ. ಅದರೆ ಹುಲ್ಲು ಬೆಳೆದಿದ್ದ
್ರದೇಶದ ಮಣ್ಣನ್ನು ಪರೀಕ್ಷೆ ಮಾಡಿ ನೋಡುವಲ್ಲಿ ಮತ್ತೊಂದಕ್ಕಿಂ
ಲೂ ಇದರಲ್ಲಿಯೇ ಅಧಿಕವಾದ ಹುಲುಸು ಕಂಡುಬಂದಿರುತ್ತೆ. ಮತ್ತು
ದರಲ್ಲಿ ಗಿಡಗಳಿಟ್ಟ ಲಾಗಾಯಿತು (೧೫ ವರುಷಗಳಿಗೆ) ಒಂದಾವರ್ತಿ
ಾತ್ರ ಅನ್ಯ ಉಪಯೋಗಕ್ಕಾಗಿ ಹುಲ್ಲು ಕೊಯಿದುಕೊಂಡಿರುತ್ತೆ.
ತ್ತು ಗಿಡಗಳ ಸರಟುಬೆಳವಳಿಕೆಗೆ ತಕ್ಕ ಹಾಗೆ ಬಹಳ ಸ್ವಲ್ಪ
ೂಸಾರ ಮಾತ್ರ ಖರ್ಚಾಗಿರುತ್ತೆ. ಉಕ್ಕೆ ಮಾಡಿದ್ದ ಸಾಲಿನಲ್ಲಾದ
ೋ ಗಿಡಗಳ ಸೊಂಪಾದ ಬೆಳವಳಿಕೆಗೂ ಮತ್ತು ಅವು ಪ್ರತಿವರುಷವೂ
ೊಡುತ್ತಿದ್ದ ಫಸಲಿಗೂ ಅನುಗುಣವಾಗಿ ವಿಶೇಷ ಸಾರವು ಭೂಮಿಯಿಂ
ಖರ್ಚಾಗುತ್ತಲೇ ಇತ್ತೆಂದು ಹೇಳಬೇಕಾದ್ದೇ ಇಲ್ಲ. ಪ್ರಸಕ್ತ ಸಂದ
ರ್ಭದಲ್ಲಿ ಮತ್ತೊಂದು ವಿಶೇಷವೇನಂದರೆ, ಈ ಎರಡು ಸಾಲುಗಳಲ್ಲೂ

ಭೂಮಿಯಲ್ಲಿ ತೇವವೇನೋ ಸ್ವಲ್ಪವೂ ವ್ಯತ್ಯಾಸವಿಲ್ಲದೆ ಒಂದೇ ಸಮನಾಗಿತ್ತು.

ಹುಲ್ಲು ಬೆಳೆದ ಸಾಲಿನಲ್ಲಿ ಗಿಡಗಳು ಚೆನ್ನಾಗಿ ವೃದ್ಧಿಯಾಗದಿರುವದಕ್ಕೆ ಪ್ರಾಯಶಃ ಹುಲ್ಲಿನ ಬೇರುಗಳಲ್ಲಿ ಗಿಡಗಳ ಬೇರುಗಳು ಸಿಕ್ಕು ಬೀಳುವಕಾರಣದಿಂದಲೋ ಅಥವಾ ಗಿಡಕ್ಕಾಗಿ ಕೊಡುವ ಗೊಬ್ಬರ ಮೊದಲಾದ ಸಸ್ಯಾಹಾರ ಪದಾರ್ಥಗಳನ್ನೂ ನೀರನ್ನೂ ಹುಲ್ಲು ಉಪಯೋಗಿಸಿಕೊಂಡು ಗಿಡಕ್ಕೆ ಏನೇನೂ ಉಳಿಸುವದಿಲ್ಲವಾದಕಾರಣದಿಂದಲೋ ಅವುಗಳ ಬೆಳವಳಿಕೆಗೆ ತಡೆಯುಂಟಾಗಿರಬಹುದೆಂದು ಒಂದು ವೇಳೆ ಊಹಿಸಬಹುದು. ಆದರೆ ಇದು ತಪ್ಪು. ಹೇಗಂದರೆ, ಗಿಡಗಳನ್ನು ನೆಲದಲ್ಲಿಡದೆ ಕ್ರೋಟನ್ ಗುಲಾಬಿಮುಂತಾದ ಹೂ ಗಿಡಗಳನ್ನು ಇಡುವ ಮಣ್ಣು ಕುಂಡಗಳಲ್ಲಿ ಇಟ್ಟು ಇವುಗಳಲ್ಲಿ ಹುಲ್ಲನ್ನೂ ಸಹ ಬೆಳಸಿ ಆದರೆ ಹುಲ್ಲಿನ ಬೇರುಗಳೂ ಮತ್ತು ಸೇಬು ಗಿಡದ ಬೇರುಗಳೂ ಬೆರೆಯದಂತೆ ಗಿಡದ ಬೇರುಗಳ ಸುತ್ತಲೂ ಹುಲ್ಲು ಬೇರುಗಳು ಪ್ರವೇಶಮಾಡದಷ್ಟು ಅತಿ ಸೂಕ್ಷ್ಮ ಕಣ್ಣುಗಳುಳ್ಳ ತಂತಿಯ ರಝೂಲರೆಯನ್ನು ಇಟ್ಟು ಎರಡು ದಿನಕ್ಕೊಂದಾವರ್ತಿ ನೀರು ಹಾಕುತಿತ್ತು. ಮತ್ತು ಗಿಡದ ಬೆಳವಳಿಕೆಗಾಗಿಯೇ ಹಾಕಬೇಕೆಂದಿದ್ದ ವಿಶೇಷ ಸಸ್ಯಾಹಾರವನ್ನೂ ನೀರನ್ನೂ ಹುಲ್ಲಿಗೆ ಸಿಕ್ಕದೆ ಗಿಡದ ಬೇರುಗಳಿಗೆ ಮಾತ್ರ ನೇರವಾಗಿ ನಿಲುಕುವಹಾಗೆ ಕುಂಡದ ಕೆಳಗಿನಿಂದಲೇ ಕೊಡುವ ಉಪಾಯ ಮಾಡಿತ್ತು. ಇಷ್ಟೆಲ್ಲಾ ಮಾಡಿಯಾಕೂಡ ಮಣ್ಣಿನಲ್ಲಿ ತೇವವೂ ಮತ್ತು ಹ್ಯಾಲಸೂ ವಿಶೇಷವಾಗಿ ಇದ್ದಾಗ್ಯೂ ಗಿಡಗಳೇನೋ ಚೆನ್ನಾಗಿ ಬರಲೇಇಲ್ಲ.

ಒಂದು ವೇಳೆ ಭೂಮಿಯಲ್ಲಿ ಶಾಖದಲ್ಲೋ, ವಾಯು ಅಂಶದಲ್ಲೋ ಅಥವಾ ಭೂರಚನೆಯಲ್ಲಿರುವ ಇತರ ಅಂಶಗಳಲ್ಲೋ ವ್ಯತ್ಯಾಸ ಬರುವುದರಿಂದ ಗಿಡಗಳಿಗೆ ಪ್ರತಿಕೂಲ ಉಂಟಾಗಬಹುದೇ ಹೊರತು ಹುಲ್ಲಿನಿಂದಲೇ ಆಗಲಾರದೆಂದು ಏಕೆ ಊಹಿಸ ಬಾರದೆಂದರೆ ಇವು ಯಾವವೂ ಅಲ್ಲವೆಂತ ಅಜಮಾಯಿಷಿಗಳಿಂದ ದೃಢಪಡಿಸಲ್ಪಟ್ಟಿರುತ್ತೆ. ಹೀಗೆ ಮೇಲ್ಕಂಡ ಕಾರಣಗಳನ್ನೆಲ್ಲಾ ತಿರಸ್ಕರಿಸಿದನಂತರ ಹುಲ್ಲು ಬೆಳೆಯುವದರಿಂದ ಗಿಡಗಳಿಗೆ ವಿಷವಾಗಿ ಪರಿಣಮಿಸುವ ಒಂದು ತರದ ಪದಾರ್ಥವು ಭೂಮಿಯಲ್ಲಿ ಉಂ

ಾಗುತ್ತದೆಂಬುವದೊಂದು ಕಾರಣವನ್ನು ಮಾತ್ರ ಅಂಗೀಕರಿಸಬೇಕಾ
ುತ್ತೆ.

Rice Cultivation in Low-Lying Lands.*

ತಗ್ಗು ಜಮೀನುಗಳಲ್ಲಿ ಬತ್ತದ ವ್ಯವಸಾಯ.

ದಕ್ಷಿಣ ಬರ್ಮ್ಮಾ ದೇಶದಲ್ಲಿ ತಗ್ಗು ಭೂಮಿ ವಿಶೇಷವಾಗಿರುತ್ತದೆ. ಲ್ಲಿ ಮಳೆಗಾಲದ ಅಂತ್ಯಭಾಗದಲ್ಲಿ ಅಂದರೆ ಆಗಸ್ಟು ಶಪ್ಟಂಬರು ತಿಂಗ ಲ್ಲಿ ಭಾರಿ ಮಳೆಯಾಗುವುದರಿಂದ ಈ ಪ್ರದೇಶವೆಲ್ಲಾ ನೀರು ಮುಳಗಡೆ ಯಾಗುತ್ತದೆ. ಕೆಲವು ಕಡೆಗಳಲ್ಲಿ ಭೂಮಿಯಮೇಲೆ ಸುಮಾರು ೪-೫ ಡಿ ನೀರು ನಿಲ್ಲುವುದೂ ಉಂಟು. ಆ ಸೀಮೆಯಲ್ಲಿ ಮಳೆಗಾಲ ಪ್ರಾ ಂಭವಾದ ಕೆಲವು ದಿನಗಳ ಮೇಲೆ ಬೇಸಾಯ ಕೆಲಸವನ್ನು ಷುರುಮಾಡು ತ್ತಾರೆ. ಮಳೆ ಬೀಳುತ್ತಿದ್ದು ಜಮೀನು ಒದ್ದೆಯಾಗಿರುವಾಗ ಉಳುಮೆ ಲಸ ಸಾಗುತ್ತದೆ. ಪ್ರಾಯಶಃ ಜುಲೈ ತಿಂಗಳಲ್ಲಿ ಬಿತ್ತನೆ ಮಾಡು ತ್ತಾರೆ. ಇದೇ ಆ ಪ್ರಾಂತ್ಯದಲ್ಲಿ ವಾಡಿಕೆಯಾಗಿರುವ ಆರಂಬ ಕಾಲ. ಈ ಕ್ರಮವನ್ನನುಸರಿಸಿ ಮೇಲೆ ಹೇಳಿದ ತಗ್ಗು ಪ್ರದೇಶಗಳಲ್ಲಿ ಜುಲೈ ಾಹೆಯಲ್ಲಿ ಪೈರು ಇಟ್ಟರೆ ಮುಂದೆ ಆಗಸ್ಟಿನಲ್ಲಿ ಭಾರಿ ಮಳೆಯಾಗು ದರಿಂದ ಆಗ್ಯೆ ಸುಮಾರು ೨ ಅಡಿ ಮಾತ್ರ ಬೆಳೆದಿರುವ ಎಳೇ ಸಸಿಗಳ ಮೇ ನೀರು ನಿಂತು ಪೈರು ಶುದ್ಧಾಂಗವಾಗಿ ಕೆಟ್ಟು ಹೋಗುತ್ತದೆ. ನೀರೆ ಲ್ಲಾ ಅಡಗಿದ ನಂತರವಾದರೋ ಆ ಹೊತ್ತಿಗೆ ಮಳೆಗಾಲವೇ ಮುಗಿದು ೋಗಿರುತ್ತದೆ. ಮಳೆ ಆಗುವದೇ ಇಲ್ಲ. ಆದಕಾರಣ ಆಗ್ಯೆ ಉಳು ು, ಬಿತ್ತನೆ ಯಾವದೂ ಸಾಧ್ಯವಿಲ್ಲ. ಕಡೆಗೆ ಕಾರು ಫಸಲಾದರೂ ಇಡಬ ುದಂದರೆ ಈ ಕಾಲದಲ್ಲಿ ಮಳೆಯು ಶೇಖೆಯೇ ಇರುವದಿಲ್ಲವಾಗಿ ಇದೂ ೂಡ ಅನುಕೂಲಿಸುವುದಿಲ್ಲ. ಈ ಪ್ರತಿಕೂಲಗಳಿಂದ ಅಲ್ಲಿನ ತಗ್ಗು ್ರದೇಶಗಳು ಸಾಗುವಳಿಯಾಗದೇನೇ ವಿಶಿಷ್ಟವ್ರಾ ಪಾಳು ಬಿದ್ದಿರುತ್ತೆ.

ಆದರೆ ಇಷ್ಟು ಭಾರಿ ವಿಸ್ತೀರ್ಣದ ಜಮೀನನ್ನು ವೃಥಾ ಪಾಳು ಬಿ ುವದಕ್ಕಿಂತಲೂ ಉಳುಮೆ ಮತ್ತು ಬಿತ್ತನೆ ಕಾಲಗಳನ್ನು ಸ್ವಲ್ಪ ಹಿಂ ು ಮುಂಚು ಮಾಡಿಕೊಂಡು ಒಂದು ವೇಳೆ ಈ ಭೂಮಿಯನ್ನು ಸಾಗಿ

---

*ಅಗ್ರಿಕಲ್ಚರಲ್ ಜರ್ನಲ್ ಆಫ್ ಇಂಡಿಯಾ, ಜುಲೈ ೧೯೦೯.

ನಲ್ಲಿ ತರುವದಕ್ಕೆ ಪ್ರಯತ್ನಪಟ್ಟರೆ ಅನುಕೂಲವಾದೀತೋ ಏನೋ ಅ ಜಮಾಯಿಷಿ ಮಾಡಿ ನೋಡಬೇಕೆಂದು ಮೌಲ್ಮೀರ್ ಪಟ್ಟಣದ ಒಬ್ಬ ಭೂ ರಿ ಜಮೀನುದಾರರು ಉಳುಮೆ ಕೆಲಸವನ್ನು ಸಾಮಾನ್ಯವಾಗಿ ವಾಡಿಕೆಯ ಲ್ಲಿರುವ ಪ್ರಕಾರ ಮಳೆ ಶುರುವಾದ ನಂತರ ಮಾಡುವದಕ್ಕೆ ಬದಲಾಗಿ ಸ್ವಲ್ಪ ಮುಂದಾಗಿಯೇ ಜನವರಿಯಲ್ಲಿ ಮಾಡಿಸಿದರು. ಆದರೆ ಆಗ್ಯೆ ಜ ಮೀನು ಒಣಗಿ ಬಹಳ ಬಿರುಸಾಗಿದ್ದುದರಿಂದ ನಾಡು ನೇಗಿಲಿನಿಂದ ಕೆಲಸ ಸಾಗುವದಿಲ್ಲವೆಂದು ತೋರಿ ಶೀಮೆಯ ನೇಗಿಲನ್ನು ಉಪಯೋಗಿಸಿದರು. ಈ ನೇಗಿಲನ್ನು ಹಿಡಿದು ಕೆಲಸ ಮಾಡುವದು ರೈತರಿಗೆ ಗೊತ್ತಿಲ್ಲದೆ ಮೊ ದಲು ೩—೪ ದಿನ ಬಹಳ ಪ್ರಯಾಸವಾಯಿತು. ಆನಂತರ ಕೊಂಚ ಪ ಳಗಿದ ಮೇಲೆ ಕೆಲಸ ಅತಿಸುಲಭವಾಯಿತು. ಈಚೆಗೆ ಇದರ ಮೇಲ್ಮೆಯ ನ್ನು ಕಂಡು ರೈತರು ನಾಡು ನೇಗಿಲನ್ನು ಬಿಟ್ಟು ಶೀಮೆ ನೇಗಿಲನ್ನೇ ಅ ಪೇಕ್ಷಿಸಲಾರಂಭಿಸಿರುತ್ತಾರೆ.

ಹೀಗೆ ಉಳುಮೆಯಾದ ತರುವಾಯ ಬಿತ್ತನೆ ಮಾಡಲಾಯಿತು. ಬಿ ತ್ತನೆ ಮಾಡುವುದರಲ್ಲಿಯೂ ಕೂಡ ರೂಢಿಯಲ್ಲಿರುವ ಪ್ರಕಾರ ಮೊದ ಲು ಬೀಜದ ಧಾನ್ಯವನ್ನು ೨—೩ ದಿನಗಳು ನೀರಿನಲ್ಲಿ ನೆನೆಹಾಕಿ ಮೊಳ ಕೆಗಳಿಟ್ಟ ತರುವಾಯ ಗದ್ದೆಗೆ ಚೆಲ್ಲುವುದಕ್ಕೆ ಬದಲಾಗಿ ಬಿತ್ತವನ್ನು ಹಾ ಗೆಯೇ ಒಣಗದ್ದೆಗೆ ಚೆಲ್ಲಿ ಮೇಲೆ ಮಣ್ಣು ಮುಚ್ಚುವದಕ್ಕೋಸ್ಕರ ವಾಗಿ ಮೇಲೆ ಮೇಲೆಯೇ ಉಪಾಯವಾಗಿ ನೇಗಿಲು ಆಡಿಸಿದರು. ಇದಲ್ಲ ದೆ ಮಳೆ ಪ್ರಾರಂಭವಾಗುವದಕ್ಕೆ ಮೊದಲೇ ಅಗೆಯಲ್ಲಿ ಸಸಿಗಳನ್ನು ತ ಯಾರು ಮಾಡಿಕೊಂಡು ಮಳೇ ಶುರುವಾದ ಕೂಡ್ಲೆ ನಾಟಿಮಾಡುವ ರೀ ತ್ಯಾ ಮತ್ತೊಂದು ಅಜಮಾಯಿಷಿಯನ್ನೂ ಮಾಡಿದರು. ಇವೆರಡು ಕ್ರ ಮಗಳಲ್ಲೂ ಪೈರು ಬಹಳ ಸೊಂಪಾಗಿಬಂತು. ಆಗಸ್ಟು ಹೊತ್ತಿಗೆ ಪೈ ರು ೬ ಅಡಿ ಎತ್ತರಕ್ಕೆ ಬೆಳೆದಿತ್ತಾದಕಾರಣ ಆಗ್ಯೆ ಭಾರಿ ಮಳೆ ಬಂದು ಗ ದ್ದೆಯಲ್ಲಿ ಸುಮಾರು ೫ ಅಡಿ ನೀರು ನಿಂತರೂ ಫಸಲು ನೀರು ಮುಳಗಡೆ ಯಾಗದೇ ತಡೆದು ನಿಂತು ಬದುಕಿಕೊಂಡಿತು. ಅಲ್ಲದೆ ಬಿತ್ತನೆಯನ್ನು ಮುಂದಾಗಿ ಮಾಡಿದ್ದರೂ ಕೂಡ ಫಸಲೇನೋ ಯಥಾಪ್ರಕಾರ ಹಿಂದಾ ಬಿತ್ತನೆಯಾದ ಪೈರುಗಳು ಕಟಾವಿಗೆ ಬರುವಾಗಲೇ ರೇವೆಗೆ ಬಂತು.

ಹೀಗೆ ಮೂರು ವರುಷಗಳು ಪರೀಕ್ಷೆಮಾಡಿನೋಡುವಲ್ಲಿ ಮೂರು ವರುಷವೂ ಏಕಪ್ರಕಾರವಾಗಿ ಫಲಿತಾಂಶವು ಬಹಳ ಅನುಕೂಲವಾಗಿಯೇ ಕಂಡು ಬಂದಿರುತ್ತೆ.

ಇಂಥಾ ನೀರು ಮುಳುಗಡೆಯಾಗುವ ತಗ್ಗು ಪ್ರದೇಶಗಳಲ್ಲಿ ರೂಢಿಯಲ್ಲಿರುವ ಕ್ರಮಗಳನ್ನನುಸರಿಸಿ ಒಳ್ಳೇ ಬತ್ತವನ್ನು ಬೆಳೆಯುವದಕ್ಕೆ ಸಾಧ್ಯವಾಗದಿದ್ದರೂ ಕೂಡ, ಸಾಗುವಳಿಯನ್ನು ಸ್ವಲ್ಪ ಮುಂದಾಗಿಯೇ ಪ್ರಾರಂಭಿಸುವ ಪಕ್ಷದಲ್ಲಿ ಇದು ಸಾಧ್ಯವಾಗುತ್ತದೆಯಲ್ಲದೆ ಭೂಮಿಯನ್ನು ಜೇಸಿಗೆಯಲ್ಲಿ ಉತ್ತು ಬಿಸಲಾಡುವದಕ್ಕೆ ಬಿಟ್ಟರೆ ಸಾಧಾರಣವಾಗಿ ಫಸಲುತ್ಪತ್ತಿಯೂ ಕೂಡ ಹೆಚ್ಚಾಗುತ್ತದೆಂಬ ಅಂಶಗಳು ಮೇಲಿನ ಪ್ರಯೋಜನವಾಯಿಷಿಯಿಂದ ವ್ಯಕ್ತಪಡುತ್ತದೆ.

Notifications.

ಇಸ್ತಿಹಾರ್ ನಾಮೆಗಳು.

ನಂ. ೧೨೬೪೭ ತಾ|| ೨೨—೪—೧೯೧೦.

ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೧೭೭ನೆ ಪ್ರಕರಣದ ಮೇರೆರಾ ತಾ|| ಆಕ್ಟಿಂಗ್ ಅಮಲ್ದಾರ್ ಮೆ|| ಹೆಚ್. ಬಸವರಾಜ ಅರಸರವರಿಗೆ ೧೯೧೦ನೆ ಇಸವಿ ಮೇ ೨ ನೆ ತಾ|| ಲಾಗಾಯ್ತು ೧೫ ದಿನಗಳ ಪ್ರಿವಿಲೇಜ್ ರಜಾ ಮಂಜೂರ್ಮಾಡಿರುತ್ತೆ.

೨. ಅವರ ಗೈರ್ ಹಾಜರಿಯಲ್ಲಿ ತಾಲ್ಲೂಕು ಶಿರಸ್ತೇದಾರು) ತಾಲ್ಲೂಕು ಛಾರ್ಜಿನಲ್ಲಿರತಕ್ಕದ್ದು.

Occasional Notes.

ವಿವಿಧ ವೃತ್ತಾಂತಗಳು.

೧. ಪಕ್ಷಿಗಳು ವ್ಯವಸಾಯಕ್ಕೆ ಸಹಕಾರಿಗಳಾಗಿರುತ್ತವೆಯೇ ಹೊರತು ಬಾಧಕಗಳಾಗಿಲ್ಲ. ಸಾಧಾರಣವಾಗಿ ಪೈರುಗಳನ್ನು ಕೆಡಿಸುವ ಕ್ರಿಮಿಗಳ

ನ್ನೆಲ್ಲಾ ಪಕ್ಷಿಗಳು ತಿನ್ನುತ್ತವೆ. ಅಲ್ಲದೆ ಪಕ್ಷಿಗಳ ಹಿಕ್ಕೆಯೂ ಕೂಡ ಪೈರುಗಳಿಗೆ ಒಳ್ಳೆ ಗೊಬ್ಬರವಾಗಿ ಉಪಯೋಗವಾಗುವದು.—ಕೊಂಭಕೋ ೞಂ ಅಗ್ರಿಕಲ್ಚರಲ್ ಸ್ಟೇಷನ್ನಿನ ಮಾಸಪತ್ರಿಕೆ, ೧೯೧೦.

———o———

೨. ಬೊಂಬಾಯಿ ಆಧಿಪತ್ಯದಲ್ಲಿನ ಕೈ ಮಗ್ಗಗಳ ಸ್ಥಿತಿಯನ್ನು ಆ ಯಾಯ ಸ್ಥಳವಿದ್ಯಮಾನಗಳಿಂದ ತಿಳಿದು, ಸದರಿ ಕಸಬನ್ನು ಅಭಿವೃದ್ಧಿ ಪಡಿಸುವ ಭಾಗದಲ್ಲಿ ಸರ್ಕಾರದವರು ಕೆಲವು ಏರ್ಪಾಟುಗಳನ್ನು ಮಾಡಿರು ತ್ತಾರೆಂದು ಕಳೆದ ಜನವರಿ ಮಾಹೆ ೩ನೇ ಮರ್ಕ್ಯುರಿಯ ಸಂಚಿಕೆಯಲ್ಲಿ ನ ಮೂದಿಸಿತ್ತಷ್ಟೆ. ಈಚೆಗೆ ಚರ್ಮದ ಕಸಬಿನ ಸ್ಥಿತಿಯನ್ನು ಕುರಿತು ರಿ ಪೋರ್ಟು ಮಾಡಲು ಈ ಕಸಬಿನಲ್ಲಿ ವಿಶೇಷ ಅನುಭವವನ್ನು ಹೊಂದಿರುವ ಮಿ|| ಗುತ್ರಿಯವರನ್ನು (Mr. Guthrie) ಜನವರಿ ೮ಾಗಾಯಿತು ೬ ತಿಂಗ ಳಮಟ್ಟಿಗೆ ಬೊಂಬಾಯಿ ಸರ್ಕಾರದವರು ನೇಮಕ ಮಾಡಿರುತ್ತಾರೆ. ಮಿ|| ಗುತ್ರಿಯವರು ಮುಖ್ಯವಾಗಿ ರಿಪೋರ್ಟು ಮಾಡಬೇಕಾಗಿರುವ ಅಂಶಗ ಳ್ಯಾವವೆಂದರೆ—(೧) ಚರ್ಮದ ಸರಫರಾಜು ಮತ್ತು ಹದ ಮಾಡುವದಕ್ಕೆ ಯಾವಸ್ಥಿತಿಯಲ್ಲಿ ಒದಗುತ್ತದೆ (೨) ಹಾಲಿ ವಾಡಿಕೆಯಲ್ಲಿರುವ ಹದಮಾ ಡುವ ವಿಧಾನ (೩) ಹದಗೊಳಿಸಿದ ಚರ್ಮದ ವಿಲೇವಾರಿ (೪) ಇದರಿಂದ ಸಾಮಾನುಗಳ ತಯಾರಿ (೫) ಈ ಕಾರ್ಯಗಳಲ್ಲಿ ಉದ್ಯುಕ್ತರಾಗಿರುವವ ಸ್ಥಿತಿಗತಿ.—ಇಂಡಿಯನ್ ಟ್ರೇಡ್ ಜರ್ನಲ್, ೭೩—೧—೧೯೧೦.

———o———

೩. ಮಂಡ್ಯದ ತಾಲ್ಲೂಕು ಇನಾಂ ಕೆಸ್ತೂರು ಗ್ರಾಮದಲ್ಲಿ ಬಾಕೀದಾ ರಿಂದ ವಸೂಲಾದ ನೋಟೀಸು ಫೀಯನ್ನು ಸರ್ಕಾರಕ್ಕೆ ಜಮಾಕಟ್ಟಿಕೊ ಳ್ಳಬೇಕೇ ಎಂಬ ವಿಷಯದಲ್ಲಿ ಡೆಪ್ಯುಟಿ ಕಮಿಷನರವರು ಕೇಳಿಕೊಂಡಿರಲು ರೆವಿನ್ಯು ಕಮಿಷನರವರು ಇನಾಂ ಗ್ರಾಮಗಳಲ್ಲಿ ಇನಾಂದಾರರು ನೋಟೀ ಸು ಫೀಸನ್ನು ವಸೂಲು ಮಾಡಬಹುದೆಂಬುವದಕ್ಕೆ ಗೌರ್ನಮೆಂಟು ಹು ಕುಂಆಗಲಿ ಅಥವಾ ಹಿಂದೆ ಮತ್ಯಾವ ದಾಖಲೆಯಾಗಲಿ ಇರುವಂತಿಲ್ಲವೆಂದೂ, ಲ್ಯಾಂಡು ರೆವಿನ್ಯು ರೂಲ್ಸ್ ೯೫ನೆ ರೂಲು ಮೇರೆ ಅಮಲ್ದಾರು ಮತ್ತು ಡೆಪ್ಯುಟಿ ಅಮಲ್ದಾರು ಮಾತ್ರ ತಗಾದೆ ನೋಟೀಸನ್ನು ಕೊಡುವದಕ್ಕೆ ಧಿಕಾರ ಹೊಂದಿರುವರೇ ಹೊರತು ಇನಾಂದಾರು, ಈ ಅಧಿಕಾರವನ್ನು

ಾಯಿಸಲು ಆಧಾರವೇನೂ ಇರುವದಿಲ್ಲವೆಂತಲೂ ಮತ್ತು ಇನಾಂದಾರರು ಾಕೀದಾರನ ಸ್ವತ್ತನ್ನು ಜಪ್ತಿ ಮಾಡುವದಕ್ಕೆ ಮುಂಚೆ ತಗಾದೆ ನೋಟೀಸ ್ನು ಕೊಡಲು ಬದ್ಧರಾಗಿರುವದಿಲ್ಲ. ಆದರೆ ಹೀಗೆ ನೋಟೀಸು ಕೊಟ್ಟ ಪಕ್ಷೆ ಲ್ಲಿ ಬಾಕೀದಾರನಿಂದ ನೋಟೀಸು ಖರ್ಚನ್ನು ಕಂದಾಯ ಬಾಕಿಯಂತೆ ವ ೂಲು ಮಾಡಕೂಡದೆಂತ ಬೊಂಬಾಯಿ ಲ್ಯಾಂಡು ರೆವಿನ್ಯು ಕೋಡು ೮ಗನೆ ಸೆಕ್ಷನ್‌ನಲ್ಲಿ ಸ್ಪಷ್ಟವಾಗಿ ಹೇಳಿರುತ್ತೆಂತಲೂ ಆರ್ಡರು ಮಾಡಿ ತ್ತಾರೆ.

---

೪. ಹಿಂದಿನ ತಿಂಗಳು (ಏಪ್ರೈಲ್ ಮಾಹೆಯಲ್ಲಿ) ಈ ಕೆಳಗೆ ಕಂಡ ಕೋ ಪರೇಟಿವ್ ಸೊಸೈಟಿಗಳು ಕಾನೂನು ಪ್ರಕಾರ ಹೊಸದಾಗಿ ರಿಜಸ್ಟರು ಾಡಲ್ಪಟ್ಟಿರುತ್ತವೆ.

(೧) ತುಮಕೂರು ತಾ|| ವೀರಸಾಗರ ಯಾನೆ ಕುರಿಪಾಳ್ಯ ಗ್ರಾಮದಲ್ಲಿ ೈತಾಬಿ ಜನರ ಉಪಯೋಗಾರ್ಥವಾಗಿ ಏರ್ಪಟ್ಟಿರುವ ಪರಸ್ಪರ ಸಹಾಯ ಸಂಘ.

(೨) ಕುಣಿಗಲು ತಾ|| ಕೋಡಿಹಳ್ಳಿ ಗ್ರಾಮದಲ್ಲಿ ರೈತಾಬಿ ಜನರ ಪಯೋಗಾರ್ಥವಾಗಿ ಏರ್ಪಟ್ಟಿರುವ ಪರಸ್ಪರ ಸಹಾಯಕ ಸಂಘ.

(೩) ಚಿಕ್ಕಮಗಳೂರು ಟವರ್ ಸೊಸೈಟಿ.

(ಈ ಮೂರನ್ನೂ ಆನರೇರಿ ಆರ್ಗನೈಜರ್ ಮೆ|| ಸಿ. ಡಿ. ರಾಮ ್ವಾಮಯ್ಯನವರು ಏರ್ಪಡಿಸಿದ್ದು).

(೪) ಮೈಸೂರು ತಾ|| ವರುಣದಲ್ಲಿ ಆನರೇರಿ ಆರ್ಗನೈಜರ್ರವರು ತ್ತು ಸೊಸೈಟಿಗಳ ಇನ್ಸ್ಪೆಕ್ಟರು ಇವರುಗಳ ಮುತವರ್ಜಿಯಿಂದ ವ್ಯ ಸಾಯಗಾರರ ಅನುಕೂಲತೆಗಾಗಿ ಸ್ಥಾಪಿಸಲ್ಪಟ್ಟ ಪರಸ್ಪರ ಸಹಾಯಕ ಂಘ.

(೫) ಕೊರಟಗೆರೆ ಸಬ್ ತಾ|| ಹುಲಿಕುಂಟೆ ಗ್ರಾಮದಲ್ಲಿ ಸೊಸೈಟಿ ಳ ರಿಜಸ್ಟ್ರಾರವರು ಸರ್ಕ್ಯೂಟ್ ದಯಮಾಡಿದ್ದಾಗ ರೈತಾಬಿ ಜನಗಳಿಗೆ ಪಯೋಗವಾಗಿರುವಂತೆ ಸ್ಥಾಪಿಸಲ್ಪಟ್ಟ ಸಂಘ.

---

೫. ಈಚೆಗೆ ಕೆಲವು ಕಾಲದಿಂದ ಕೈಗಾರಿಕೆ ಕೆಲಸಗಳಲ್ಲಿ ಅನೇಕ ವಿ ವಾದ ಯಂತ್ರಗಳು ವಿಶೇಷವಾಗಿ ಉಪಯೋಗದಲ್ಲಿ ಬರುತ್ತಿವೆ. ಈ ಯಂತ್ರಗಳ ಬಳಿಕೆಯನ್ನು ಸರಿಯಾಗಿ ತಿಳಿದು ಅವುಗಳಿಂದ ಕೆಲಸ ಮ ಡುವ ಜನರೇ ಅತಿ ವಿರಳ. ಅಲ್ಲದೆ ನೀರು ಹಾಯಿಸುವದಕ್ಕಾಗಿ ತುಂಬಾ ಸ ಳಗಳಲ್ಲಿ ರೈತರಿಗೆ ಆಯಿಲ್ ಇಂಜನ್‍ಗಳನ್ನು ನಡೆಸುವದಕ್ಕಾಗಿ ಸರಿಯಾ ಕೆಲಸಗಾರರೂ ಸಿಕ್ಕುವದಿಲ್ಲ. ಆದಕಾರಣ ಇಂಥಾ ಕೆಲಸಗಾರರನ್ನು ತ ಬೇತು ಮಾಡುವದಕ್ಕೋಸ್ಕರ ಮದರಾಸು ಗೌರ್ನ್ಮೆಂಟಿನವರು ಕೆಲ ಏರ್ಪಾಟುಗಳನ್ನು ಮಾಡಿರುತ್ತಾರೆ. ಮದರಾಸಿನಲ್ಲಿ ಮ|| ಪಿ. ಟಿ. ಚಂ ಲ್ವರಾಯನಾಯಕರವರು ಧರ್ಮಕ್ಕಾಗಿ ತೆಗದಿಟ್ಟಿರುವ ಹಣದಿಂದ ತಾಯಿ ತಂದೆಗಳಿಲ್ಲದ ಅನಾಥ ಹುಡುಗರಿಗೆ ಕಬ್ಬಿಣದ ಕೆಲಸ, ಮರಗೆಲಸ, ಮು ತಾದ ಕೈಗಾರಿಕೆಗಳನ್ನು ಹೇಳಿಕೊಡುವದಕ್ಕಾಗಿ ಒಂದು ಪಾಠಶಾಲೆಯು ಏರ್ಪಡಿಸಲ್ಪಟ್ಟಿರುತ್ತದೆ. ಸರ್ಕಾರದವರು ಈ ಪಾಠಶಾಲೆಗೆ ಸ್ವಲ್ಪ ಹ ಸಹಾಯವನ್ನು ಮಾಡಿ ಇಲ್ಲಿ ಯಂತ್ರಗಳನ್ನು ನಡೆಸುವ ಕ್ರಮವನ್ನು ಕೆಲಸಗಾರರಿಗೆ ಹೇಳಿಕೊಟ್ಟು ತರಬೇತು ಮಾಡುವದಕ್ಕಾಗಿ ಅನುಕೂ ಪಡಿಸಿರುತ್ತಾರೆ.

ಆಯಿಲ್ ಇಂಜನ್‍ಗಳನ್ನು ನಡೆಸುವದಕ್ಕೆ ಡ್ರೈವರುಗಳನ್ನು ಕೊ ಯಮತ್ತೂರು ವ್ಯವಸಾಯ ಕಾಲೇಜಿನಲ್ಲಿ ಏಕೆ ತರಬೇತು ಮಾಡಕ ಡದೆಂಬ ವಿಚಾರವು ಸರ್ಕಾರದವರ ಆಲೋಚನೆಯಲ್ಲಿರುತ್ತೆ.—ಕು ಕೋಣಂ ಅಗ್ರಿಕಲ್ಚರಲ್ ಸ್ಟೇಷನ್ನಿನ ಮಾಸಪತ್ರಿಕೆ, ಜನವರಿ, ೧೯೧೦.

V. B. SOOBBIAH AND SONS, PRINTERS, BANGALORE —1910.

THE MYSORE
REVENUE & AGRICULTURAL GAZETTE.

ವಾಲ್ಯೂಂ ೪.] ಭಾನುವಾರ, ೧೫ನೆ ಮೇ ೧೯೧೦. [ನಂ. ೧೪.

Contents.

1. Soy Beans.
2. Agriculture in the United States.
3. Revenue Appeals.
4. Cultivation of Lac.
5. Agave Fibre.
6. Broach Cotton.
7. Government Proceedings.
8. Notifications.
9. Occasional Notes.

   (i) Potatoes. (ii) Oranges. (iii) Cotton Ginning Machine.

ಅನುಕ್ರಮಣಿಕೆ.

೧. ಸೋಯಾ ಅವರೆ.

೨. ಯುನೈಟೆಡ್ ಸ್ಟೇಟ್ಸಿನ ವ್ಯವಸಾಯ ಸ್ಥಿತಿ.

೩. ರೆವಿನ್ಯೂ ಅಪೀಲುಗಳು.

೪. ಅರಗಿನ ವ್ಯವಸಾಯ.

೫. ಕತ್ತಾಳೆ ನಾರು.

೬. ಬ್ರೋಚ್ ಹತ್ತಿ.

೭. ಸರ್ಕಾರಿ ಹುಕುಂಗಳು.

೮. ಇಶ್ತಿಹಾರ್ನಾಮೆಗಳು.

೯. ವಿವಿಧ ವೃತ್ತಾಂತಗಳು.

(i) ಉರುಲುಗಡ್ಡೆ. (ii) ಕಿತ್ತಳೆಹಣ್ಣು. (iii) ಹತ್ತಿರಾಟೆ ಮಾಡುವ ಯಂತ್ರ.

Soy Beans. *

ಸೋಯಾ ಅವರೆ.

ಕೆಲವು ವರುಷಗಳಿಂದೀಚೆಗೆ ಸೋಯಾ ಅವರೆಯ (Soy Beans) ವ್ಯಾಪಾರವು ಇಂಗ್ಲೆಂಡು ಮತ್ತು ಇತರ ಪಾಶ್ಚಿಮಾತ್ಯ ರಾಜ್ಯಗಳಲ್ಲಿ ಅಪಾ

---

* ಇಂಡಿಯನ್ ಟ್ರೇಡ್ ಜರ್ನಲ್, ೧—೭—೦೯.

ರವಾಗಿ ಹೆಚ್ಚುತ್ತಿದೆ. ಈ ಅವರೆಯನ್ನು ಚೀಣಾ ಮತ್ತು ಜರ್ಮ ದೇಶ ಗಳಲ್ಲಿ ವಿಶೇಷವಾಗಿ ಬೆಳೆಯುತ್ತಾರೆ. ಇದು ಮುಸುಕಿನ ಜೋಳ ಬೆಳೆ ಯುವ ಜಮೀನಿನಲ್ಲಿ ಬಹಳ ಚೆನ್ನಾಗಿ ಆಗುವುದು. ಅವರೆ, ಅಲಸಂದಿ, ಉದ್ದು, ಹೆಸರು ಮೊದಲಾದ ಇತರ ದ್ವಿದಳ ಧಾನ್ಯಗಳಲ್ಲಿರುವ ಹಾಗೆ ಇದ ರಲ್ಲೂ ಕೂಡ ಭೂಮಿಯಲ್ಲಿ ನೈಟ್ರೋಜನ್ ವಾಯುವನ್ನು (Nitrogen) ಹೆ ಚ್ಚಿಸುವ ಗುಣಉಂಟು. ಆದಕಾರಣ ಇದನ್ನು ಮುಸುಕಿನಜೋಳ ಮೊದಲಾದ ಪೈರುಗಳೊಂದಿಗೆ ಪರಿವರ್ತನೆಯಿಂದ ಬೆಳೆಯಬಹುದಲ್ಲದೆ ತ ಮ್ಮ ಜಮೀನುಗಳಲ್ಲಿ ಹಟ್ಟವಳಿಯನ್ನು ಹೆಚ್ಚಿಸುವುದಕ್ಕೆ ಗೊಬ್ಬರವ ನ್ನು ಕೊಂಡು ಹಾಕುವಷ್ಟು ಚೈತನ್ಯವಿಲ್ಲದ ನಮ್ಮ ದೇಶದ ರೈತರಿಗೆ ಸೋಯಾ ಅವರೆಯು ವ್ಯವಸಾಯವನ್ನು ಪಕ್ರಮಿಸೆ ಅನುಕೂಲಪಡಿ ಯುವುದಕ್ಕೆ ಮಾರ್ಗವಾಗುತ್ತದೆ.

ಈ ಅವರೆಯು ಅನೇಕ ಕೆಲಸಗಳಿಗೆ ಉಪಯೋಗಪಡುತ್ತದೆ. ಇ ದನ್ನು ಅಲಸಂದಿ, ಕಡ್ಲೆ, ಮೊದಲಾದ ಕಾಳುಗಳಂತೆ ಬೇಯಿಸಿ ಊಟಮಾಡ ಬಹುದು. ಇದು ತಿನ್ನಲಿಕ್ಕೆ ಬಹಳ ರುಚಿಯಾಗಿರುತ್ತದೆ. ಇದರ ಎಣ್ಣೆ ಅಡಿಗೆಗಳಲ್ಲಿಯೂ ದೀಪಗಳಿಗೂ ಉಪಯೋಗ ಪಡುತ್ತದೆ. ಸಾಬೂನು ತಯಾರಿಯಲ್ಲಿಯೂ ಬಣ್ಣದ ಕೆಲಸದಲ್ಲಿಯೂ ಇದು ಉಪಯೋಗವಾ ಗುತ್ತದೆ. ಇದರಲ್ಲಿ ಶೇಕಡ ೧೦ ರಿಂದ ೧೬ ಪಾಲು ಸ್ವಚ್ಛವಾದ ಎ ಣ್ಣೆ ಹೊರಡುತ್ತದೆ. ಹಿಂಡಿಯು ಜಮೀನುಗಳಿಗೆ ಬಹಳ ಸಾರವತ್ತಾದ ಗೊಬ್ಬರವಾಗುತ್ತದೆಯಾಗಿ ಇದಕ್ಕೆ ಗಿರಾಕಿಯು ದಿನೇದಿನೇ ವಿಶೇಷವಾಗಿ ಹೆಚ್ಚುತ್ತಿರುವುದು. ಅಲ್ಲದೆ ದನಗಳಿಗೂ ಒಳ್ಳೆ ಪುಷ್ಟಿಕರವಾದ ಅಹಾರ ವಾಗಿಯೂ ಇರುವುದು. ಹಿಂಡಿಯಲ್ಲಿ ಶೇಕಡ ೪೦ ರಿಂದ ೪೫ ಪಾಲು ಪು ಷ್ಟಿ ಜನ್ಯಾಂಶವು ಇರುತ್ತದೆಂದು ರಸಾಯನ ಶಾಸ್ತ್ರಜ್ಞರು ಕಂಡು ಹಿಡಿ ದಿರುತ್ತಾರೆ. ಕರಾವು ಆಕಳುಗಳಿಗೆ ಇದನ್ನು ತಿನ್ನಿಸಿದರೆ ಅವುಗಳಲ್ಲಿ ಹಾಲು ಹೆಚ್ಚುತ್ತದೆ. ಇದು ಹತ್ತಿ ಹಿಂಡಿಗಿಂತಲೂ ಮೇಲಾದ ಆಹಾರ. ಕಾಳಿನಿಂದ ಹಿಟ್ಟು ಮಾಡಿ ಬಿಸ್ಕತು, ರೊಟ್ಟಿ, ವಗೈರೆ ಪದಾರ್ಥಗಳನ್ನು ಮಾಡುತ್ತಾರೆ ಮತ್ತು ಹಿಟ್ಟನ್ನು ದನಗಳಿಗೂ ತಿನ್ನಿಸುವುದುಂಟು. ಕಾ ಳನ್ನು ಹುರಿದು ಪುಡಿಮಾಡಿ ಕಾಫಿಯಂತೆ ಕುಡಿಯಲೂ ಬಹುದು. ಸ್ವ

...ಇಂಗ್ಲೆಂಡು ಮತ್ತು ಅಮೇರಿಕಾ ದೇಶಗಳಲ್ಲಿ ಸ್ವಾಭಾವಿಕ ಕಾಫಿಗೆ ಬದಲಾಗಿ ಸೋಯಾ ಅವರೆ ಕಾಫಿಯು ಸೇವನೆಯೇ ಹೆಚ್ಚುತ್ತಿದೆ. ಇದರಲ್ಲಿ ಶರ್ಕರಾಂಶವು ಇಲ್ಲದಿರುವುದರಿಂದ ಬಹುಮೂತ್ರ ಜಾಡ್ಯದಿಂದ ನರಳುವವರಿಗೆ ಇದನ್ನು ಆಹಾರವಾಗಿ ಕೊಡಬಹುದು. ಜಪಾನಿಯರು ಇದರಿಂದ ಹಾಲನ್ನು ತಯಾರಿಸಿ, ಘನಿಯಾಗಿ ಮಾಡಿ, ಟಿನ್‌ಗಳಲ್ಲಿ „ ಕಂಡೆನ್ಸ್ಡ್ ಮಿಲ್ಕ್ " (Condensed Milk) ಹಾಗೆ ತುಂಬಿಡುತ್ತಾರೆ. ಅಲ್ಲದೆ ಹಾಲಿನಿಂದ ಬೆಣ್ಣೆಯನ್ನು ತೆಗೆಯುವುದುಂಟು.

ಆಗಲೆ ಮೇಲೆ ಹೇಳಿರುವಂತೆ ಚೀಣಾ ಮತ್ತು ಜಪಾನಿಯರು ಈ ಅವರೆಯನ್ನು ಬೆಳೆದು ಪಾಶ್ಚಿಮಾತ್ಯ ರಾಜ್ಯಗಳೊಂದಿಗೆ ಅಪಾರವಾದ ವ್ಯಾಪಾರ ಮಾಡಿ ವಿಶೇಷ ಲಾಭವನ್ನು ಹೊಂದುತ್ತಿರುವರು ಇಂಗ್ಲೆಂಡಿನಲ್ಲಿ ಆಗಸೆ ಮತ್ತು ಹತ್ತಿ ಎಣ್ಣೆಗಿಂತಲೂ ಸೋಯಾ ಅವರೆಯ ಎಣ್ಣೆಗೆ ಹೆಚ್ಚು ಬೆಲೆಯು ದೊರೆಯುತ್ತದೆ. ಇದು ಅನೇಕ ರೀತಿಗಳಲ್ಲಿ ಉಪಯೋಗ ಪಡುವುದರಿಂದ ಇದರ ವ್ಯಾಪಾರವೇ ಪಾಶ್ಚಿಮಾತ್ಯ ರಾಜ್ಯಗಳಲ್ಲಿ ಹೆಚ್ಚಿ ನಮ್ಮ ದೇಶದವರು ಮಾಡುತ್ತಿರುವ ಆಗಸೆ ಮತ್ತು ಹತ್ತಿ ಬೀಜದ ವ್ಯಾಪಾರಕ್ಕೆ ಕ್ಷೀಣಗತಿ ಬರುವ ಸಂಭವವು ಉಂಟಾಗುವುದರಿಂದ ನಮ್ಮ ದೇಶೀಯರು ಮುಂದಾಳುಗಳಾಗಿ ಬಂದು ಸೋಯಾ ಅವರೆಯ ವ್ಯವಸಾಯವನ್ನು ಅಭಿವೃದ್ಧಿಪಡಿಸಿ ಅನ್ಯದೇಶಗಳೊಂದಿಗೆ ಇದರ ರಫ್ತು ವ್ಯಾಪಾರದಲ್ಲಿ ಭಾಗಿಗಳಾಗುವುದು ಅವಶ್ಯಕವು.

———o———

Agriculture in the United States. *

ಯುನೈಟೆಡ್ ಸ್ಟೇಟ್ಸಿನ ವ್ಯವಸಾಯಸ್ಥಿತಿ.

ಭೂವ್ಯವಸಾಯವು ಅಮೇರಿಕಾ ಖಂಡದ ಯುನೈಟೆಡ್ ಸ್ಟೇಟ್ಸಿಯಾ ಸಂಯುಕ್ತ ಸಂಸ್ಥಾನದಲ್ಲಿ ಉನ್ನತ ಸ್ಥಿತಿಯಲ್ಲಿರುವ ಹಾಗೆ ಮತ್ಯಾವ ದೇಶದಲ್ಲೂ ಇಲ್ಲ. ಅಲ್ಲಿ ರೈತನ ಐಶ್ವರ್ಯವು ವರ್ಷ ವರ್ಷ ವೃದ್ಧಿಯಾಗುತ್ತಲೇ ಇದೆ. ಇಸವಿ ೧೮೯೯ನೆ ಸಾಲಿನಲ್ಲಿ ಫಸಲುತ್ಪತ್ತಿಯ ಬೆಲೆಯನ್ನು ೧೦೦ ಎಂದು ಇಟ್ಟುಕೊಳ್ಳೋಣ. ಇದು ೧೯೦೩ರಲ್ಲಿ ೧೩೩,೧೯೦೪

* ಇಂಡಿಯನ್ ಅಗ್ರಿಕಲ್ಚರಿಸ್ಟ್, ೧-೯-೧೦-೧೧.

ರಲ್ಲಿ ೧೩೧, ೧೯೦೫ರಲ್ಲಿ ೧೩೭೭, ೧೯೦೬ರಲ್ಲಿ ೧೪೩೩, ೧೯೦೭ರಲ್ಲಿ ೧೫೯೯, ಮತ್ತು ೧೯೦೮ರಲ್ಲಿ ೧೬೫೫, ಈ ರೀತಿಯಾಗಿ ಅಧಿಕವಾಗುತ್ತಲೇ ಬಂದಿರುವುದು. ಕಳೆದ ಹತ್ತು ವರ್ಷಗಳ ವ್ಯವಸಾಯದ ಒಟ್ಟು ಉತ್ಪತ್ತಿಯು ೧೮,೦೦೦ ಕೋಟಿಗಿಂತಲೂ ಹೆಚ್ಚಾಗಿರುತ್ತದೆ.

ವ್ಯವಸಾಯ ಬಾಬಿನಲ್ಲಿ ಸರ್ಕಾರದವರು ವಿಶೇಷ ಮುತ್ತವರ್ಜಿಯನ್ನು ವಹಿಸಿ ವ್ಯವಸಾಯ ಕ್ರಮಗಳಲ್ಲಿ ಶಾಸ್ತ್ರೀಯವಾದ ನೂತನ ಮಾರ್ಗಗಳನ್ನು ಹುಡುಕಿ, ಇವುಗಳ ಮೇಲ್ಮೆಯನ್ನು ನಿದರ್ಶನಗಳ ಮೂಲಕ ರೈತರಿಗೆ ಮನಸ್ಸಿಗೆ ನಾಟುವ ಹಾಗೆ ತಿಳಿಯ ಹೇಳಿ, ಈ ಹೊಸ ಮಾರ್ಗಗಳನ್ನು ರೈತರು ಅನುಸರಿಸುವದಕ್ಕೆ ಪ್ರೋತ್ಸಾಹ ಕೊಡುವ ಕಾರ್ಯದಲ್ಲೇ ಸದಾ ತೊಡಗಿರುತ್ತಾರೆ. ಮತ್ತು ಇಲಾಖೆಯ ಶಾಸ್ತ್ರಜ್ಞರನ್ನು ಅನ್ಯ ದೇಶಗಳಿಗೆ ಕಳುಹಿಸಿ ತಮ್ಮಲ್ಲಿಲ್ಲದ ಹೊಸ ಹೊಸ ಪೈರುಗಳನ್ನು ಹೊರಗಿನಿಂದ ತರಿಸಿ ಬೆಳೆದು ತಮ್ಮ ದೇಶದ ಬೆಳೆಗಳ ಜಿನಸುಗಳನ್ನು ಹೆಚ್ಚಿಸುತ್ತಾರೆ. ಸರ್ಕಾರದವರಿಗೂ ರೈತರಿಗೂ ಪರಸ್ಪರ ಹೊಂದಿಕೆಯನ್ನು ಹೆಚ್ಚಿಸುವದೇ ಇಲಾಖೆಯವರು ಸಾಧಿಸಬೇಕೆಂದು ಇಟ್ಟುಕೊಂಡಿರುವ ಕಾರ್ಯಗಳಲ್ಲಿ ಮುಖ್ಯ ಕರ್ತವ್ಯವಾಗಿರುತ್ತದೆ. ರೈತರೂ ಕೂಡ ಕಾಲೋಚಿತವಾಗಿ ನೂತನ ಮಾರ್ಗಗಳನ್ನು ಉತ್ಸಾಹದಿಂದ ಅನುಸರಿಸಿಕೊಂಡು ತಮ್ಮ ಸುಖಸಂಪತ್ತಿಗಳನ್ನು ಹೆಚ್ಚಿಸಿಕೊಳ್ಳುತ್ತಲೇ ಇರುವರು. ಇದರಿಂದ ಅಮೇರಿಕಾದಲ್ಲಿ ಭೂವ್ಯವಸಾಯವು ಸುಲಭವಾಗಿ ನಾನಾ ಭಾಗಗಳಲ್ಲೂ ಅಭಿವೃದ್ಧಿಯನ್ನು ಹೊಂದುತ್ತಿರುವದು. ಅಲ್ಲಿನ ವ್ಯವಸಾಯ ಸ್ಥಿತಿಯು ನಮ್ಮ ದೇಶೀಯರಿಗೆ ಒಳ್ಳೇ ಮೇಲ್ಪಂಕ್ತಿಯಾಗಿರುತ್ತದೆ.

———○———

Revenue Appeals.

ರೆವಿನ್ಯೂ ಅಪೀಲುಗಳು.

೧೯೦೮—೦೯ನೆ ಇಸವಿಯ ಅಪೀಲ್ ನಂ. ೭೨.

ಅಪೀಲು ವಾದಿಗಳು.		ಅಪೀಲು ಪ್ರತಿವಾದಿ.
ಕರಿಕುಂಚ್ಚಪ್ಪ ವಗೈರೆ.	*vs*	ಅಪ್ಪಯ್ಯಣ್ಣ.

ಕಂದಾಯ ಬಾಕಿಗಾಗಿ ಜಮೀನು ಹರಾಜು ವಿಚಾರ.

ಮೊಕದ್ದಮೆಯು ವಿದ್ಯಮಾನ.—ಕೆಲವು ಜಮೀನುಗಳ ಮೇಲೆ ೧೯೦೫—೦೬ನೆ ಇಸವಿಯ ಕಂದಾಯ ೧೨—೧—೩ ರೂಪಾಯಿ ಬಾಕಿ ನಿಂತಕಾರಣ ೧೬—೪—೦೬ರಲ್ಲಿ ಖಾತೇದಾರ ಕರಿಹುಚ್ಚಪ್ಪನ(೧ನೇವಾದಿ) ಮೇಲೆ ತಗಾದೆ ನೋಟೀಸು ಜಾರಿಯಾಗಿ ಜಮೀನುಗಳು ಘಾರ್ಫೀಟಾಗಿ ೩೦—೧೧—೦೬ಕ್ಕೆ ಹರಾಜಿಗೆ ಈಡುಮಾಡಲ್ಪಟ್ಟವು. ಘಾರ್ಫೀಚರ್ ಹುಕುಮಿನಲ್ಲಿ ಜಮೀನುಗಳಿಗೆ ೧೧—೮—೦ ರೂಪಾಯಿ ಬೆಲೆಯಾಗುತ್ತೆಂತ ನಮೂದು ಮಾಡಲ್ಪಟ್ಟಿತು. ಘಾರ್ಫೀಚರ ಹುಕುಮಿನಲ್ಲಿಯೂ ಹರಾಜು ಇಸ್ತಿಹಾರ್‌ನಲ್ಲಿಯೂ ಖಾತೇದಾರ ಕರಿಹುಚ್ಚಪ್ಪನ ಕ್ರಮವಾದ ದಸ್ಕತ್ತು ಇಲ್ಲದಿದ್ದರೂ ಅವನ ಗುರುತು ಇರುವುದಲ್ಲದೆ ಈ ಜಮೀನುಗಳ ಹಿಸ್ಸೇದಾರರ ಪೈಕಿ ಒಬ್ಬನಾದ ಮರಿಹುಚ್ಚಪ್ಪನ (೪ನೇವಾದಿ) ಪರವಾಗಿ ಬಚ್ಚಣ್ಣನೆಂಬಾತನು ರುಜು ಮಾಡಿರುತ್ತಾನೆ. ಹರಾಜು ಇಸ್ತಿಹಾರು ಗ್ರಾಮದಲ್ಲಿ ಟಾಂಟಾಂ ಮೂಲಕ ಪ್ರಸಿದ್ಧ ಮಾಡಲ್ಪಟ್ಟು ಗ್ರಾಮ ಚಾವಡಿಯಲ್ಲಿಯೂ, ಒಂದು ಪ್ರತಿಯು ಸಬ್ ಡಿವಿಜನ್ ಕಛೇರಿಯಲ್ಲಿಯೂ ಚಿಕಟಾಯಿಸಲ್ಪಟ್ಟಿತು. ಇಸ್ತಿಹಾರ್ ಪ್ರತಿಗಳನ್ನು ಖಾತೇದಾರನ ವಾಸಸ್ಥಾನದಲ್ಲಿಯೂ ತಾಲ್ಲೂಕು ಕಛೇರಿಯಲ್ಲಿಯೂ ಚಿಕಟಾಸಿತ್ತೋ ಇಲ್ಲವೋ ರಿಕಾರ್ಡುಗಳಿಂದ ಗೊತ್ತಾಗುವದಿಲ್ಲ. ಹರಾಜು ತಾರೀಖಿನ ದಿನ ಶೇಕದಾರನು ರೂಬರೂಬು ಪಂಚಾಯಿತದಾರರು ಸೇರಿ ಜಮೀನುಗಳಿಗೆ ೧೩—೮—೦ ಅಂದಾಜು ಬೆಲೆ ಕಟ್ಟಿದರು. ಹರಾಜಿನಲ್ಲಿ ಪ್ರತಿವಾದಿ ಅಪ್ಪಿಯ್ಯಣ್ಣನು ೧೭-೬-೦ ರೂಪಾಯಿಗೆ ಜಮೀನುಗಳನ್ನೆಲ್ಲಾ ಪಡೆದನು. ಹರಾಜು ಕಟ್ಟನ್ನು ಮೇಲಕ್ಕೆ ರವಾನಿಸುವಾಗ ಶೇಕದಾರನು ಹರಾಜು ನಡವಳಿಕೆ ಕ್ರಮವಾಗಿ ನಡೆದಿರುತ್ತದೆಂದೂ, ಹರಾಜು ಖೈದಾದ ಕೂಡ್ಲೆ ಖಾತೇದಾರನು ಹಾಜರಾಗಿ ಕಂದಾಯದ ಹಣ ಕೊಡುವದಕ್ಕೆ ಶಕ್ತಿ ಇಲ್ಲ, ಆಗಿರುವ ಹರಾಜು ವಿಷಯದಲ್ಲಿ ತನ್ನ ತಕರಾರು ಏನೂ ಇಲ್ಲವೆಂತ ಹೇಳಿಕೆ ಕೊಟ್ಟನೆಂತಲೂ ನಮೂದಿಸಿದನು.

ಹರಾಜಾದ ಮಾರನೆ ದಿನ, ಅಂದರೆ ೧—೧೨—೦೬ರಲ್ಲಿ ಬುಚ್ಚಣ್ಣನೆಂಬುವನು ಬಹಿರಂಗ ಜಾಹಿರಾತ್ ಇಲ್ಲದೆ ಮೇಲ್ಕಂಡ ಜಮೀನುಗಳನ್ನು ಹರಾಜು ಮಾಡಿರುವದ್ದರಿಂದ ಜಮೀನುಗಳು ಕಂ ಖರೀದಿಗೆ ಹೋಯಿತೆಂತ

ಲೂ, ಅವುಗಳನ್ನು ದುಸರಾ ಹರಾಜು ಮಾಡುವದಾದರೆ ತಾನು ೧೦೦ ರೂಪಾಯಿತನಕ ಕೊಟ್ಟು ತೆಗದುಕೊಳ್ಳುವದಕ್ಕೆ ಸಿದ್ಧನಾಗಿರುತ್ತೇನೆಂತಲೂ ಅಮಲ್ದಾರರಿಗೂ ಸಬ್ ಡಿವಿಜನ್ ಆಫೀಸರಿಗೂ ಅರ್ಜಿ ಬರೆದುಕೊಂಡನು.

ಮುಂದೆ ೫—೧೨—೦೬ರಲ್ಲಿ ದೊಡ್ಡ ಹುಚ್ಚಪ್ಪ ಮತ್ತು ಕೆಂಚಪ್ಪನೆಂಬುವರು (೨ ಮತ್ತು ೩ನೆ ಅಪೀಲು ವಾದಿಗಳು) ತಾವು ಮತ್ತು ಇನ್ನಿಬ್ಬರು (ಮರಿಹುಚ್ಚಪ್ಪ ಮತ್ತು ಪಿಲ್ಲಕೆಂಚಪ್ಪ, ೪ ಮತ್ತು ೫ನೆ ಅಪೀಲು ವಾದಿಗಳು) ಪ್ರಸಕ್ತ ಜಮೀನುಗಳಲ್ಲಿ ಹಿಸ್ಸೇದಾರರಾಗಿದ್ದು ತಂತಮ್ಮ ಹಿಸ್ಸೆಯ ಕಂದಾಯವನ್ನು ಸೀದಾ ಸರ್ಕಾರಕ್ಕೇನೇ ಕಟ್ಟುತ್ತಿದ್ದರೂ ಕೂಡ ಹರಾಜು ನೋಟೀಸನ್ನು ತಮಗೆ ಕೊಡದೇನೇ ಜಮೀನುಗಳನ್ನು ಮೋಸದಿಂದ ಬಹಳ ಸ್ವಲ್ಪ ಖರೀದಿಗೆ ಹರಾಜು ಮಾಡಿರುತ್ತಾರೆಂತ ತಾಲ್ಲೂಕಿಗೆ ತಕರಾರು ಅರ್ಜಿ ಕೊಟ್ಟರು.

ಅದೇ ದಿನವೇ (೫—೧೨—೦೬) ಖಾತೇದಾರ ಕರಿಹುಚ್ಚಪ್ಪನೂ ಕೂಡ ಈಚೆಗೆ ತಾನು ಕಂದಾಯದ ಮೊಬಲಗನ್ನು ಪ್ರೊಟೆಸ್ಟಿಯಾಗಿ ಮನಿಯಾರ್ಡರು ಮೂಲಕ ತಾಲ್ಲೂಕು ಆಫೀಸಿಗೆ ರವಾನಿಸಿರುವುದಾಗಿಯೂ, ಹಿಸ್ಸೇದಾರರು ಅವರವರ ಪಾಲಿನ ಕಂದಾಯವನ್ನು ಕೊಡಲು ತಪ್ಪಿದ್ದರಿಂದ ಸರ್ಕಾರಿ ಕಂದಾಯವು ಬಾಕಿಯಲ್ಲಿ ಬಾತೆಂತಲೂ ಮತ್ತು ಹರಾಜನ್ನು ಕ್ಯಾನ್ಸಲ್ ಮಾಡಬೇಕೆಂತಲೂ ಅಮಲ್ದಾರರವರಿಗೆ ಅರ್ಜಿ ಕೊಟ್ಟನು.

ಅಮಲ್ದಾರರವರು ವಿಚಾರಣೆ ಮಾಡಿ ಹರಾಜು ನಡುವಳಿಕೆಯಲ್ಲಿ ಯಾವ ಲೋಪವೂ ಇರುವದಿಲ್ಲವೆಂಬ ಅಭಿಪ್ರಾಯದೊಡನೆ ರಿಕಾರ್ಡುಗಳನ್ನು ಸಬ್ ಡಿವಿಜನ್ ಆಫೀಸರವರಿಗೆ ರವಾನಿಸಿದರು.

ಸ್ಪೆಷಲ್ ನೋಟೀಸು ರಿಜಿಸ್ಟರಿನಲ್ಲಿ ತಮ್ಮ ಹೆಸರುಗಳನ್ನು ಹಿಸ್ಸೇದಾರರು ದಾಖಲು ಮಾಡಿಸಿರುವದಿಲ್ಲವಾದಕಾರಣ ತಮ್ಮಗಳ ಮೇಲೆ ನೋಟೀಸು ಜಾರಿ ಮಾಡಿರುವದಿಲ್ಲವೆಂದು ತಕರಾರು ಮಾಡಲು ರಹವಿರುವದಿಲ್ಲವೆಂತಲೂ ಯಾವನೋ ಮೂರನೇ ಮನುಷ್ಯನಾದ ಬುಚ್ಚಣ್ಣನೆಂಬುವನು ಜಮೀನುಗಳಿಗೆ ೧೦೦ ರೂಪಾಯಿ ಕೊಡುತ್ತೇನೆಂದು ಹೇಳಿದ ಮಾತ್ರಕ್ಕೇನೆ ದುಸರಾ ಹರಾಜಿಗೆ ಹುಕುಂ ಕೊಡಲು ಸಾಕಾದಕಾರಣವಿರುವದಿ

ಲ್ಲವೆಂದೂ ತಾತ್ಪರ್ಯಪಟ್ಟು ಸಬ್ ಡಿವಿಜನ್ ಆಫೀಸರವರು ಹರಾಜನ್ನು ಮಂಜೂರು ಮಾಡಿದರು. ಇದರ ಮೇಲೆ ಡೆಪ್ಯುಟಿ ಕಮಿಷನರವರಲ್ಲಿ ಅಪೀಲು ಆಯಿತು. ಡೆಪ್ಯುಟಿ ಕಮಿಷನರವರು ಮೊಕದ್ದಮೆಯ ವಿದ್ಯಮಾನಗಳನ್ನೆಲ್ಲಾ ನೋಡುವಲ್ಲಿ ಅಪೀಲುದಾರಿಗೆ ಹರಾಜು ಸಂಗತಿಯು ತಿಳಿದಿತ್ತೆಂದೇ ಊಹಿಸಬೇಕಾಗಿರುವುದರಿಂದ ಅಪೀಲನ್ನು ವಜಾ ಮಾಡಿದರು. ಈ ಹುಕುಮಿನ ಮೇಲೆ ಅಪೀಲುದಾರರು ರೆವಿನ್ಯು ಕಮಿಷನರವರಲ್ಲಿ ೨ನೇ ಅಪೀಲು ತಂದು ಹರಾಜು ತಾರೀಖು ತಮಗೆ ತಿಳಿದೇ ಇರಲಿಲ್ಲವೆಂತಲೂ, ಜಮೀನುಗಳಲ್ಲಿ ಫಸಲುಗಳಿದ್ದ ಪ್ರಯುಕ್ತ ಕಂದಾಯ ವಸೂಲೀಗಾಗಿ ಪ್ರಥಮತಃ ಅವುಗಳ ಮೇಲೆ ಕ್ರಮ ಜರಗಿಸಬೇಕಾಗಿತ್ತೆಂತಲೂ, ಭಾರಿ ಬೆಲೆ ಬಾಳುವ ಜಮೀನುಗಳನ್ನು ಜುಜುಬಿ ಖರೀದಿಗೆ ಹರಾಜು ಮಾಡಿರುವದಾಗಿಯೂ ಮತ್ತು ಪಟೇಲ ಶಾನಭೋಗರುಗಳ ಷರೀಕಿಮೇಲೆ ಪಟೇಲನ ತಮ್ಮ ಅಪೀಲು ಪ್ರತಿವಾದಿ ಅಪ್ಪಯ್ಯಣ್ಣನು ಜಮೀನುಗಳನ್ನು ಕೊಂಡುಕೊಂಡಿರುವುದರಿಂದ ಪ್ರಸಕ್ತವಾದ ಹರಾಜು ಮೋಸಯುಕ್ತವಾದದ್ದೆಂತಲೂ ಈ ಕಾರಣಗಳನ್ನು ನಮೂದಿಸಿ ಹರಾಜನ್ನು ರದ್ದು ಮಾಡಬೇಕೆಂದು ಬಯರ್ಾ ಮಾಡಿಕೊಂಡರು.

ಈ ಅಪೀಲು ಅರ್ಜಿ ಮೇಲೆ ರಿಪೋರ್ಟ್ ಕಳುಹಿಸುವದಕ್ಕೆ ಸ್ಥಾನಿಕ ಅಮಲ್ದಾರರು ಮೇಲ್ಕಂಡ ಅಪೀಲು ಗ್ರೌಂಡ್ಸ್‌ಗಳ ವಿಷಯವಾಗಿ ವಿಚಾರಣೆ ಮಾಡಿದ್ದಲ್ಲದೆ ಜಮೀನುಗಳ ಸರಿಯಾದ ಕಿಮ್ಮತ್ತು ತಿಳಿಯುವ ವುದ್ದಿಶ್ಯ ತಕ್ಕ ಮನುಷ್ಯರನ್ನು ಇಟ್ಟುಕೊಂಡು ಪುನಃ ಅಂದಾಜಾ ಕಟ್ಟಿದರು. ಇದರ ಪ್ರಕಾರ ಹರಾಜು ಕಾಲದಲ್ಲಿ ಆದ ೧೩—೮—೦ ಅಂದಾಜಾಕ್ಕೆ ಬದಲಾಗಿ ರೂಪಾಯಿ ೫೩೮-೧೨-೦ ತನಕ ಬಾಳತಕ್ಕವೆಂದು ಮಹಜರಾಯಿತು. ಈ ವ್ಯತ್ಯಾಸ ವಿಷಯವಾಗಿ ಮೊದಲಿನ ಅಂದಾಜಾ ಪಟ್ಟಿಗೆ ರುಜುಮಾಡಿದ್ದವರನ್ನು ವಿಚಾರಿಸಲಾಗಿ ಅವರ ಪೈಕಿ ಒಬ್ಬಿಬ್ಬರು ಸದರಿ ಅಂದಾಜಾ ವಿಷಯವೇ ತಮಗೆ ಗೊತ್ತೇ ಇಲ್ಲವೆಂದು ಹೇಳಿದರು. ಮತ್ತು ಇದೇ ವಿಚಾರಣೆಯಲ್ಲಿಯೇ ಹಿಸ್ಸೇದಾರರು ಏಕ ಗೃಹಕೃತ್ಯಕ್ಕೆ ಸೇರಿದವರಾಗಿ ತಮ್ಮ ತಮ್ಮ ಹಿಸ್ಸೇಯ ಕಂದಾಯವನ್ನು ಸೀದಾ ಸರ್ಕಾರ

ಕ್ಕೀನೆ ಕೊಡುತ್ತಿದ್ದದ್ದು; ಶಾನುಭೋಗನೂ ಹೇಳಿಕೆ ಕೊಟ್ಟಿರುವ ಮೇರೆ ಇತರ ಹೆಸರುಗಳು ಕಿರ್ದಿಲೆಖ್ಖಗಳಲ್ಲಿಯೂ ದಾಖಲಿರುವದು; ಪಹಣಿ ಲೆಖ್ಖಗಳು ಮತ್ತು ಹರಾಜು ಪಟ್ಟಿಗಳಲ್ಲಿ ದಾಖಲಾಗಿರುವ ಮೇರೆ ಜಮೀನುಗಳಲ್ಲಿ ಷಳತೂಕ್, ಬತ್ತ ವಗೈರೆ ಫಸಲು ನಿಂತಿದ್ದರೂ ಕೂಡ ಮೊದಲು ಫಸಲುಗಳ ಮೇಲೆ ಕ್ರಮ ಜರಗಿಸಿಯೂ ಇಲ್ಲ, ಅವುಗಳಿಗೆ ಬೆಲೆ ಕಟ್ಟಿ ಹರಾಜು ಕಾಲದಲ್ಲಿ ಅವುಗಳನ್ನು ಪ್ರತ್ಯೇಕಿಸಿ ಹರಾಜು ಮಾಡಿಯೂ ಇಲ್ಲ ಎಂಬೀ ಇತರ ಅಂಶಗಳೂ ಕೂಡ ಹೊರಪಟ್ಟಿತು.

ರೆವಿನ್ಯೂ ಕಮೀಷನರವರ ತೀರ್ಮಾನ.—ಜಮೀನು ವಿವರಣೆ ಮತ್ತು ನಿಂತಿದ್ದ ಪೈರುಗಳ ತಪಶೀಲುಗಳನ್ನೂ, ಅಪೀಲು ಅರ್ಜಿ ದಾಖಲಾದ ತರುವಾಯ ಅಮಲ್ದಾರರು ನಡೆಸಿದ ದರ್ಯಾಫ್ತಿಯಲ್ಲಿ ಹೊರಪಟ್ಟ ಸಂಗತಿಗಳನ್ನೂ ನೋಡಿದರೆ ಪ್ರಸಕ್ತವಾದ ಜಮೀನುಗಳಿಗೆ ತೀರಾ ಕಮ್ಮಿ ಬೆಲೆ ಕಟ್ಟಿರುತ್ತಾರೆಂಬುವದಕ್ಕೂ, ಹರಾಜು ಮಾಡುವದಕ್ಕೆ ಶೇಕದಾರನಿಗೆ ಅಧಿಕಾರವಿರಲಿಲ್ಲವೆಂಬುವದಕ್ಕೂ, ಮತ್ತು ಈ ವಿಶಿಷ್ಟ ಕೃತ್ಯವು ಸೀದಾ ಗೌರ್ನಮೆಂಟಿಗೇನೇ ಕಂದಾಯ ಕಟ್ಟುತ್ತಿದ್ದ ಹಿಸ್ಸೇದಾರರ ತಿಳುವಳಿಕೆ ಇಲ್ಲದೇನೇ ನಡೆದಿರುತ್ತೆಂಬುವದಕ್ಕೂ ಸಹ ಲೇಶವೂ ಸಂಶಯವಿರುವದಿಲ್ಲ. ಹಿಸ್ಸೇದಾರರು ತಮ್ಮ ಹೆಸರುಗಳನ್ನು ಸ್ಪೆಷಲ್ ರಿಜಿಸ್ಟರಿನಲ್ಲಿ ದಾಖಲು ಮಾಡಿಕೊಳ್ಳಲಿಲ್ಲವೆಂಬ ಮಾತ್ರಕ್ಕೇನೇ ಗ್ರಾಮ ನೌಕರರು ಕಂದಾಯಕ್ಕಾಗಿ ಇವರ ಮೇಲೆ ತಗಾದೆ ನೋಟೀಸು ಮೊದಲಾದ ಕ್ರಮ ಜರಗಿಸದೆ ಬಿಡುವುದೂ ಮತ್ತು ಅವರು ಷರೀಕಾಗಿ ಜಮೀನುಗಳನ್ನು ಹರಾಜಿಗೆ ಗುರಿಪಡಿಸಿ ತಾವೋ ಅಥವಾ ತಮ್ಮ ಕಡೆಯವರೋ ಕೊಂಡುಕೊಳ್ಳುವದಕ್ಕೆ ಸಹಾಯವಾಗುವದೂ ನ್ಯಾಯ ಸಮ್ಮತವಲ್ಲ. ಇದಲ್ಲದೆ ಪ್ರತಿವಾದಿಯ ವಾದದಿಂದಲೂ ಜಮೀನುಗಳು ಸುಮಾರು ೫೦೦ ರೂಪಾಯಿ ಬಾಳುತ್ತವೆಂದು ತಿಳಿಯಬರುತ್ತೆ. ಆದರೆ ಇವನು ಜಮೀನಿನಲ್ಲಿ ಕೆಲವು ಕಾಸರೀನಾ ಸೊಸಿಗಳನ್ನು ಕಟ್ಟಿ ಗೊಬ್ಬರ ಹೊಡಿಸಿರುವದರಿಂದಲೇನೆ ಜಮೀನುಗಳ ಕಿಮ್ಮತು (ಈಚೆಗೆ ಅಂದರೆ ಅಪೀಲು ಗ್ರೌಂಡ್ಸುಗಳ ವಿಚಾರವಾಗಿ ಅಮಲ್ದಾರರು ದರ್ಯಾಫ್ತಿ ಮಾಡಿದ ಕಾಲದಲ್ಲಿ) ಕಟ್ಟಿರುವ ಮೇರೆ ಹೆಚ್ಚಲು ಕಾರಣವಾಯಿತೆಂದು ಹೇಳುವದಕ್ಕಾಗುವದಿಲ್ಲ.

ಸಾರಾಂಶವಲ್ಲಿ, ಹರಾಜು ನಡೆಸಿದ ಆಫೀಸರಿಗೆ ಸದರಿ ಹರಾಜು ನಡೆಸ ು ಅಧಿಕಾರವೇ ಇರಲಿಲ್ಲ. ಅಲ್ಲದೆ ಪಟೇಲನ ಸಹೋದರನೇ ಸದರಿ ಜಮೀ ುಗಳನ್ನು ಶೀರಾ ಕಮ್ಮಿ ಖರೀದಿಗೆ ಪಡೆದಿರುತ್ತಾನೆ. ಇದರಿಂದ ತಿಳುವಳಿ ಇಲ್ಲದವರು ವಂಚಿಸಲ್ಪಟ್ಟರು. **ಈ** ಹರಾಜನ್ನು ಖಾಯಂಮಾಡು ದು ಕಾನೂನು ಮೇರೆ ಕ್ರಮ ಜರಗಿಸುತ್ತೇವೆಂಬ ನೆಪದಿಂದ ಇತರರನ್ನು ಂಚಿಸುವದರಲ್ಲಿ ತೊಡಗಿರುವ ಮೋಸಗಾರರಿಗೆ ಸಹಾಯ ಮಾಡಿದಂತಾ ುತ್ತೆ. ಆದಕಾರಣ ಹರಾಜನ್ನು ರದ್ದು ಮಾಡಿರುತ್ತೆ.

ಜಮೀನುಗಳಲ್ಲಿ ತನ್ನ ಬಾಧ್ಯತೆಯನ್ನು ಬಲಪಡಿಸಿ ಕೊಳ್ಳುವದ ೋಸ್ಕರ ಅಪೀಲು ಪ್ರತಿವಾದಿಯು ಕಾಸರೀನಾ ಸಸಿಗಳನ್ನು ಕಟ್ಟಿಸಿ ತಾನೆಂಬುವದಕ್ಕೆ ಸಂಶಯವಿಲ್ಲ. ಹಾಗಿದ್ದರೂ ಅವನು ಇಷ್ಟಪಟ್ಟ ತಾನು ಹಾಕಿದ ಸಸಿಗಳನ್ನು ತೆಗದುಕೊಂಡು ಹೋಗಲು ಅಭ್ಯಂತ ವಿರುವದಿಲ್ಲ.

Cultivation of Lac.*

ಅರಗಿನ ವ್ಯವಸಾಯ.

ಅರಗಿನ ವ್ಯವಸಾಯವನ್ನು ಪ್ರಕ್ರಮಿಸುವದಕ್ಕೆ ಮೊದಲು ಅರ ಗೆ ಅನುಕೂಲವಾದ ಮರಗಳು ಎಲ್ಲಿವೆ, ಮತ್ತು ಅವುಗಳಲ್ಲಿ ಸ್ವಭಾ ವಾಗಿ ಅರಗು ಬಿಡುತ್ತದೆಯೇ ಇಲ್ಲವಾದರೆ ಬೇರೆಕಡೆಯಿಂದ ಹುಳು ಗಳನ್ನು ತಂದು ಹತ್ತಿಸಬೇಕಾದಪಕ್ಷದಲ್ಲಿ ಎಷ್ಟು ಸಮೀಪದ ಫಸಲೆ ುಲ್ಲಿ ಹುಳುಗಳು ದೊರೆಯುತ್ತವೆ, ಬೀಜದಕಡ್ಡಿಗಳಲ್ಲಿ ಮರಿಹುಳುಗಳು ಚೆಗೆ ಹೊರಡುವ ಸಮಯ, ವಗೈರೆ ತಪಶೀಲುಗಳನ್ನು ಗೊತ್ತು ಾಡಿಕೊಳ್ಳಬೇಕು. ಸಕಾಲದಲ್ಲಿ (ಅಂದರೆ, ಮರಿ ಹುಳುಗಳು ಹೊರಗೆ ೊರಡುವದಕ್ಕೆ ಮುಂಚೆ) ಕತ್ತರಿಸಿಕೊಂಡ ಬೀಜದ ಕಡ್ಡಿಗಳನ್ನು ದೂರದ ದೇಶಗಳಿಗೂ ಕೂಡ ಸಾಗಿಸಬಹುದು.

ಅರಗಿನ ಹುಳುಗಳಿಗೆ ಅನೇಕ ಉಪದ್ರಗಳೂ ಮತ್ತು ಶತ್ರುಗಳೂ

---

* ಇಂಡಿಯನ್ ಟ್ರೇಡ್ ಜರ್ನಲ್, ೨೩—೧—೧೦.

ಉಂಟು. ಮರಗಳ ಮೇಲೆ ಮರಿ ಹುಳುಗಳಿರುವಾಗ ಇವುಗಳಿಗೆ ಇರುವೆ
ಮುತ್ತುವುದು. ಆದರೆ ಇರುವೆ ಬರುವದು ಹುಳುವನ್ನು ತಿನ್ನುವದಕ್ಕಲ್ಲ
ಅದು ಸ್ರವಿಸುವ ಮಧುರವಾದ ರಾಳಕ್ಕಾಗಿ. ಇರುವೆಯಿಂದ ಹುಳಕ್ಕೆ
ಏನೇನೂ ಬಾಧೆಇಲ್ಲ. ಮರದ ಅಡಿಯಲ್ಲಿ ಸುತ್ತಲೂ ಬೂದಿ ಚೆಲ್ಲಿದರೂ
ಸರಿಯೇ ಅಥವಾ ಬುಡದ ಸುತ್ತಲೂ ಕೀಲೆಣ್ಣೆ ಅಥವಾ ಬೇರೆ ಯಾವದಾದ
ರೂ ಅಂಟು ಪದಾರ್ಥ ಬಳಿದರೂ ಸರಿಯೇ ಇರುವೆ ಕಾಟ ತಪ್ಪುತ್ತದೆ. ಅ
ರಗಿನ ಹುಳಕ್ಕೆ ಕಂಬಳಿ ಹುಳವು ಇರುವೆಗಿಂತಲೂ ಅಧಿಕ ಕೆಡಕು ಮಾಡ
ತಕ್ಕ ಶತ್ರು. ಇದು ಅರಗಿನ ಗೂಡುಗೂಡನ್ನೆ ತಿಂದು ಬಿಡುತ್ತದೆ. ಈ
ಕಂಬಳಿ ಹುಳದಲ್ಲಿಯೂ ಅನೇಕ ಜಾತಿಗಳುಂಟು. ಕೆಲವು ಗಿಡಗಳ ಮೇಲೆ
ಅರಗಿನಲ್ಲಿಯೇ ಸೇರಿಕೊಂಡಿದ್ದು ಅರಗಿನ ಕಡ್ಡಿಗಳನ್ನು ಕತ್ತರಿಸಿಕೊಂಡ
ನಂತರವೂ ಗೂಡುಗಳಲ್ಲಿರುವ ಹುಳುಗಳನ್ನು ತಿಂದು ಜೀವಿಸುತ್ತವೆ
ಮತ್ತೆ ಕೆಲವು ಫಸಲು ತೆಗೆದುಕೊಂಡ ತರುವಾಯ ಒಣಗಿದ ಅರಗಿನ ಕಡ್ಡಿ
ಗಳಿಗೆ ಬರುವುದುಂಟು. ಇವು ಮೇ—ಅಕ್ಟೋಬರು ತಿಂಗಳುಗಳ ಪೈರಿನಲ್ಲಿ
ವಿಶೇಷ. ಛಳಿಗಾಲದ ಪೈರಿನಲ್ಲಿ ಕಡಿಮೆ. ಅರಗಿನ ಕಡ್ಡಿಗಳನ್ನು ಕತ್ತರಿ
ಸಿಕೊಂಡ ಕೂಡ್ಲೆ ಅಥವಾ ಅವನ್ನು ಬೇರೆ ಗಿಡಗಳಿಗೆ ಕಟ್ಟುವದಕ್ಕೆ ಉ
ಪಯೋಗ ಮಾಡಿದ ಕೂಡ್ಲೆ ಕಡ್ಡಿಗಳಲ್ಲಿನ ಅರಗನ್ನೆಲ್ಲಾ ಕೆರದುಕೊಂಡು
ಚೆನ್ನಾಗಿ ತೊಳೆದುಬಿಡಬೇಕು. ಇಲ್ಲವಾದರೆ ಕಂಬಳಿ ಹುಳಗಳು ತಿಂದು
ಕೆಡಿಸುತ್ತವೆ. ಕಡ್ಡಿ ಅರಗನ್ನು ಸ್ವಲ್ಪಕಾಲ ಇಟ್ಟಿರಬೇಕಾದರೆ ಕಂಬಳಿ
ಹುಳುಗಳು ಬರದಂತೆ ಮಾಡಬೇಕು. ಇದಕ್ಕೆ ಅರಗನ್ನು ಚೆನ್ನಾಗಿ ಹೊ
ಗೆಮಾಡಿಸುವದೊಂದೇ ಉಪಾಯ. ಅರಗನ್ನು ತೊಳೆದು ಅದರೊಳಗಿನ
ಬಣ್ಣ ಕಳೆದು ಸಣ್ಣ ಚೂರು ಚೂರಾಗಿರುವಾಗ ಮಾರುವದೇ ವಿಶೇಷ ಅ
ನುಕೂಲವಾದದ್ದು. ಲಾಕಿ ಬಣ್ಣದ ಬೆಲೆ ಸಧ್ಯದಲ್ಲಿ ಕೇವಲ ಅಲ್ಪವಾಗಿ
ರುವುದರಿಂದ ಅವಕ್ಕೆ ವಿಶೇಷ ಗಿರಾಕಿ ಇದ್ದ ಹೊರತೂ ಅದನ್ನು ಅರಗಿನಿಂ
ದ ಪ್ರತ್ಯೇಕಿಸುವದು ಏನೂ ಅಗತ್ಯ ಕಾಣುವುದಿಲ್ಲ. ಭಾರಿಯಾಗಿ ಅರಗ
ನ್ನು ಬೆಳೆಯುವ ಸಂದರ್ಭಗಳಲ್ಲಿ ಬಣ್ಣವನ್ನು ತೆಗದು ಬಣ್ಣದ ಕೆಲಸ
ಕ್ಕೆ ಆಗಲಿ ಅಥವಾ ಗೊಬ್ಬರಕ್ಕಾಗಿಯೇ ಆಗಲಿ ಮಾರಬಹುದು. ಆದರೆ

ನಾಂತರಗಳಲ್ಲಿ ರೈತರು ವಿಸ್ತರವಾಗಿ ಈ ಕಸಬನ್ನು ಇಟ್ಟುಕೊಳ್ಳು
ಭಾಗವಲ್ಲಿ ಬಣ್ಣವನ್ನು ತೊಳೆದು ಬಿಟ್ಟು ಶುದ್ಧ ಅರಗನ್ನೇ ಮಾರಬ
ುದು.

ಮೇಲ್ಕಂಡ ರೀತಿಯಲ್ಲಿ ಅರಗಿನ ವ್ಯವಸಾಯವು ಪ್ಯೂಸಾ ಅಗ್ರಿಕ
ರಲ್ ಸ್ಟೇಷನ್ನಿನಲ್ಲಿ ನಡೆಯುತ್ತಲಿದೆ. ಮತ್ತು ಅಲ್ಲಿ ಸರ್ಕಾರದವರು
ರಗಳನ್ನು ಕಸಿ ಮಾಡುವದು, ಹುಳುಗಳ ಕಡ್ಡಿಯನ್ನು ಹೊಸ ಮರಗ
ೆ ಕಟ್ಟುವುದು, ಅರಗು ಕೆರೆದುಕೊಳ್ಳುವದು,ಇವೇ ಮೊದಲಾದ ವಿಶಿಷ್ಟ
ಮಗಳನ್ನೂ ಅಪೇಕ್ಷೆಪಟ್ಟವರಿಗೆ ಕಲಿಸುವ ಏರ್ಪಾಟು ಇಟ್ಟಿರುವುದಲ್ಲ
ದಿಗರು ಪ್ರದೇಶಗಳಲ್ಲಿ ಈ ವ್ಯವಸಾಯವನ್ನು ಆರಂಭಿಸುವಭಾಗದಲ್ಲೂ
ಾಡ ಪ್ಯೂಸಾದಿಂದಲೇನೇ ತರಬೇತಾದ ಜನರನ್ನು ಕಸಿ ಕೆಲಸವನ್ನುವ
ವಿಸುವ ಬಗ್ಗೆ ಕಳುಹಿಸಿ ಸಾಧ್ಯವಾದ ಸಹಾಯವನ್ನು ಕೊಡುವ
ಕ್ಕೂ ಸಿದ್ಧರಾಗಿರುತ್ತಾರೆ.

[ಅರಗಿನ ವ್ಯವಸಾಯ ವಿಷಯವಾಗಿ ಒಂದು ಸಣ್ಣ ಪುಸ್ತಕವು ಈ ಮೊದಲೆ
ದಲೆ ೧೯೦೮ನೆ ಜೂನ್ ೧೫ನೆ ಮರ್ಕ್ಯುರಿಯ ಸಂಚಿಕೆಯೊಂದಿಗೆ ಸಪ್ಲಿಮೆಂಟಾಗಿ ಪ
ನಿಸಲ್ಪಟ್ಟಿರುತ್ತೆ].

Agave Fibre. *

ಕತ್ತಾಳೆ ನಾರು.

ಅನಂತಪುರ ಜಿಲ್ಲೆಕ್ಕೆ ಸೇರಿದ ಹಿಂದೂಪುರದಲ್ಲಿ ಒಂದು ಸರ್ಕಾರಿ
ವ್ಯವಸಾಯ ಫಾರಂ ಸ್ಥಾಪಿತವಾಗಿರುವುದು. ಇಲ್ಲಿ ಕತ್ತಾಳೆಯನ್ನು ಬೆಳೆ
ಅದರ ಪಟ್ಟೆಗಳಿಂದ ಬಹಳ ನಾಣ್ಯವಾದ ನಾರನ್ನು ತೆಗೆಯುವ ಏರ್ಪಾ
ಜಾರಿಯಲ್ಲಿರುತ್ತೆ.

೧೯೦೮—೦೯ನೆ ಸಾಲಿನಲ್ಲಿ ಫಾರವಿನವರು ಈ ಭಾಗದಲ್ಲಿ ಅನೇಕ
ಪ್ರಯೋಗಗಳನ್ನು ನಡೆಸಿದರು. ಕತ್ತಾಳೆಯನ್ನು ಯಾವರೀತಿ ನಾಟ
ಪೈರು ಜಾಗ್ರತೆ ಬೇರೂರಿ ಬೆಳೆದು ಫಸಲು ಕೈಗೆ ಬರುತ್ತದೆ
ತ್ತು ಎಳೇಸೊಸಿಯನ್ನು ನೆಲದಲ್ಲಿಡುವದಕ್ಕೆ ಮುಂಚೆ ಅದರ ಹಳೇಬೆ

*ಮದ್ರಾಸ್ ವ್ಯವಸಾಯ ಇಲಾಖೆಯ ೦೮-೦೯ನೆ ಸಾಲಿನ ರಿಪೋರ್ಟು.

ರುಗಳನ್ನೂ ಕೆಳಗಣ ಎಲೆಗಳನ್ನೂ ಕತ್ತರಿಸಿ ಅನಂತರ ನಾಟುವುದ ಪರಿಣಾಮವೇನು ಎಂಬ ಅಂಶಗಳನ್ನು ತಿಳಿದುಕೊಳ್ಳುವ ಬಗ್ಗೆ ಒಂದು ತ ಡು ಜವಿಾನನ್ನು ಸರಿಪಡಿಸಿಕೊಂಡು ಜುಲೈ ತಿಂಗಳಲ್ಲಿ ನಾಟಿಮಾಡಲಾ ತು. ಹೀಗೆ ಹಳೇಬೇರುಗಳನ್ನೂ ಎಲೆಗಳನ್ನೂ ಸವರುವುದರಿಂದ ಕತ್ತ ಸಿದ ಬುಡದಿಂದ ಹೊಸಬೇರುಗಳು ಅತಿವೇಗವಾಗಿ ಹೊರಟು ಗಿಡವು ಜಾ ತೆ ಊರಿ ಪ್ರಬಲಗೊಳ್ಳುತ್ತವೆ. ಆದರೆ ಅನುಭವವಿಲ್ಲದವರು ಕಸಿಮಾಡು ದರಲ್ಲಿ ಕತ್ತರಿಸುವಾಗ ಹೆಚ್ಚುಕಡಿಮೆ ಬಂದು ಸುಳಿಗೆ ಪೆಟ್ಟು ತಗಲಿ ಗಿ ವೇ ಸತ್ತುಹೋಗುವ ಸಂಭವವಿರುತ್ತಾದಕಾರಣ ಪಳಗಿದವರಿಂದಲೇನೇ ಕ ಮಾಡಿಸಬೇಕು.

೧೯೦೮ನೆ ಜೂನ್ ಮತ್ತು ನವಂಬರ್ ತಿಂಗಳಲ್ಲಿಯೂ ಮತ ೧೯೦೯ನೆ ಫೆಬ್ರವರಿಯಲ್ಲಿಯೂ ಅಜಮಾಯಿಷಿಗಾಗಿ ಪಟ್ಟೆಗಳನ್ನು ಕತ ಸಿ ಈಮೂರು ಕಟಾವುಗಳ ಪಟ್ಟೆಯಿಂದ ನಾರು ತೆಗೆದು ನೋಡಿದ್ದರಲ್ಲಿ ಎ ಕರೆಗೆ ೪೩೦ ಪೌಂಡು ಒಣಗಿದ ನಾರು ಬಂದಿರುತ್ತೆ.

Broach Cotton.*

ಬ್ರೋಚ್ ಹತ್ತಿ.

ಧಾರವಾಡದ ಹವ ಮತ್ತು ಮಳೆ ಸ್ಥಿತಿಗಳು ಬ್ರೋಚ್ ಹತ್ತಿ ವ ವಸಾಯಕ್ಕೆ ಬಹಳ ಅನುಕೂಲವಾಗಿರುವುದರಿಂದ ಈಗ ೨--೩ ವರು ಗಳಿಂದಲೂ ಧಾರವಾಡದ ಸುತ್ತುಮುತ್ತಲೂ ಈ ಹತ್ತಿಯನ್ನು ವಿಶೇ ವಾಗಿ ಬೆಳೆಯುತ್ತಿದಾರೆ. ಇದು ಕುಂಟಾರಕುಂ ಹತ್ತಿಗಿಂತ ೨ ತಿಂಗಳು ಡವಾಗಿ ರೇಖೆಗೆ ಬರುವುದರಿಂದ ಇದನ್ನು ೨ ತಿಂಗಳು ಮುಂದಾಗಿಯೇ ತ್ತನೆ ಮಾಡಿದರೆ, ಎರಡೂ ಏಕ ಕಾಲದಲ್ಲಿ ಅಂದರೆ, ಮಾರ್ಚಿ ಏಪ್ರ ಹೊತ್ತಿಗೆ ಬಲಿಯುತ್ತವೆ.

ಬ್ರೋಚ್ ಹತ್ತಿಯನ್ನು ಆರಿದ್ರಾ ಮಳೆ ಮುಗಿಯುವುದರೊಳಗ ಗಿ ಬಿತ್ತಬೇಕು. ಬಿತ್ತವು ಕೂರಿಗೆಯ ಕೊಳವೆಗಳಲ್ಲಿ ಸಲೀಸಾಗಿ ಜಾ ಹೋಗುವದಕ್ಕಾಗಿ ಬಿತ್ತನೆಗೆ ಮೊದಲು ಬೀಜಕ್ಕೆ ಮಣ್ಣುಮೆತ್ತಿ ...

* ಅಗ್ರಿಕಲ್ಚರಲ್ ಜರ್ನಲ್ ಆಫ್ ಇಂಡಿಯಾ, ಜುಲೈ ೧೯೧೯.

ತಿಕ್ಕಿ ನುಣುವಾಗಿ ಮಾಡಬೇಕು. ಎಕರೆಗೆ ೭—೮ ಪೌಂಡು ಬಿತ್ತ
ದರೆ ಸಾಕು. ಸಾಲಿನಿಂದ ಸಾಲಿಗೆ ೨ ಅಡಿ ಬಿಟ್ಟುಕೊಂಡು ಬಿತ್ತ
ಯನ್ನು ಸಾಲುಗಳಲ್ಲಿ ಹಾಕಬೇಕು.

ಈ ಬೆಳೆಗೆ ಚೆನ್ನಾಗಿ ಗೊಬ್ಬರ ಹಾಕಿ ಆಬಾದುಮಾಡಿರುವ ಜಮೀನು
ರಶ್ಯಕ.

ಸಸಿಗಳು ೬ ಅಂಗುಲ ಬೆಳೆದಮೇಲೆ ಸೊಸಿಯಿಂದ ಸೊಸಿಗೆ ೧ ಅಡಿ
ಟ್ಟಿರುವಹಾಗೆ ಪೈರನ್ನು ವಿರಳಪಡಿಸಬೇಕು. ನಟಿ ಹೋಗಿರುವ
ಸಿಗಳನ್ನು ಕಿತ್ತು ಬಿಸಾಡಬೇಕು. ಅನಂತರ ಸೊಸಿಗಳು ೧ ಅಡಿ
ಹೆಚ್ಚಾಗಿ ಬೆಳೆದ ಮೇಲೆ ಮೇಲ್ಕುಡಿಯನ್ನು ೧೪ ಅಂಗುಲದಷ್ಟು ಜಿಗ
ಹಾಕಬೇಕು.

ಎಕರೆಗೆ ಸರಾಸರಿ ೨೪ ಮಣ ಹತ್ತಿ (ಬೀಜ ಸಹಿತ) ಉತ್ಪತ್ತಿಯಾ
ತ್ತದೆ. ಮತ್ತು ಇದನ್ನು ಬಿಡಿಸಿದರೆ ಸುಮಾರು ೮ ಮಣ ಅರಳೆ ಹೊರ
ತ್ತದೆ. ಈ ಪ್ರಾಂತ್ಯದಲ್ಲಿ ಅರಳೆಯ ಉತ್ಪತ್ತಿಯನ್ನು ಇನ್ನೂ ಹೆ
ಸುವ ಉದ್ದೇಶ್ಯ ಸರ್ಕಾರದವರು ನಾವ್ಸಾರಿಯಿಂದ ೨೫ ಸಾವಿರ ಪೌಂ
ಶುದ್ಧವಾದ ಬ್ರೋಚ್ ಹತ್ತಿ ಬೀಜವನ್ನು ತರಿಸಿ ಧಾರವಾಡದಲ್ಲಿ ಒಂ
ಕೋಠಿಯನ್ನು ಸ್ಥಾಪಿಸಿ ರೂಪಾಯಿಗೆ ೩೦ ಪೌಂಡಿನಂತೆ ರೈತರಿಗೆ
ಡುವ ಏರ್ಪಾಟು ಮಾಡಿರುತ್ತಾರಲ್ಲದೆ ಬೆಳೆದವರಿಗೆ ಅವರವರ ಸರಕಿಗೆ
ಯಿತಾದ ಬೆಲೆ ಸಿಕ್ಕುವಹಾಗೆ ಮಾಡಬೇಕೆಂಬ ಅಭಿಪ್ರಾಯದಿಂದ ಹೋ
ವರುಷ ಧಾರವಾಡ ಸುತ್ತಲೂ ಆದ ಹತ್ತಿಯನ್ನು ಒಂದು ಮಧ್ಯರಾ
ವಾದ ಸ್ಥಳದಲ್ಲಿ ಜಮಾಯಿಸಿ ಹರಾಜು ಮೂಲಕ ಬಿಕರಿ ಮಾಡುವಲ್ಲಿ
ರೋಚ್ ಹತ್ತಿಗೆ ಮಣ ಒಂದಕ್ಕೆ ೩-೪-೨ ರೂಪಾಯಿನಂತೆಯೂ ಕುಂಟಾ
ಗೆ ರೂ ೨-೬-೪ ನಂತೆಯೂ ಖರೀದಿ ದೊರೆಯಿತು.

ಹೋದ ವರುಷ ಬ್ರೋಚ್ ಹತ್ತಿಯಲ್ಲಿ ಶ್ರೇಷ್ಠವಾದ ಬೆಳೆಯ
ತೆಗೆದವರಿಗೆ ಬಹುಮಾನ ಕೊಡುವದಾಗಿ ಸರ್ಕಾರದವರು ಪ್ರೋ
ಹ ಕೊಟ್ಟು ರೈತರಲ್ಲಿ ಸ್ಪರ್ಧೆಯನ್ನುಂಟುಮಾಡಿರಲು ಸುಮಾರು
೪೪ ಪೌಂಡು ಅರಳೆ ಜಮೆಯಾಗಿ ಕಳೆದ ಏಪ್ರಿಲ್ ಮಾಹೆಯಲ್ಲಿ ಹರಾ
ಯಿತು. ಈ ವರುಷದ ಸರಕಿಗೆ ಮಣ ಒಂದಕ್ಕೆ ರೂಪಾಯಿ ೩-೬-೨

ಯೊಂದ ರೂಪಾಯಿ ೩-೧೦-೦ ವರೆಗೂ ದರ್ಜೆವಾರು ಬೆಲೆ ದೊರೆತಿರುತ್ತದೆ

Government Proceedings.

ಸರ್ಕಾರಿ ಹುಕುಂಗಳು.

ನಂ. ಆರ್. ೭೧೪೦-೩೧—ಎಲ್. ಆರ್. ೩೯-೯-೨ ತಾ|| ೨೧-೬-೧೯೧

ಕಡೂರು ಡಿಸ್ಟ್ರಿಕ್ಟು ಚಿಕ್ಕಮಗಳೂರು ತಾಲ್ಲೂಕು ಕೊಟ್ಲಿ
ಗ್ರಾಮದ ಕಾಫಿ ಖರಾಬು ಸರ್ವೆ ೨೩೫ನೆ ನಂಬರು ೧೫ ಎಕರೆ ವಿಸ್ತೀ
ರ್ಣವುಳ್ಳ ಜಮೀನಿಗೆ ಗಿರಿ ಎಸ್ಟೇಟಿನ ಮೆ|| ರೇಕ್ಸ್ ಎಂಬುವರು (Mr. H. W
Raikes) ಮೆ|| ಹಾಂಕೆ (Mr. Haukey) ಎಂಬುವರಿಗಾಗಿ ದರಖಾಸ್ತು
ಮಾಡಿದರು. ಸ್ಥಳ ಅಜಮಾಯಿಷಿಯಲ್ಲಿ ಈ ಜಮೀನು ೬-೫ ವರುಷಗ
ಳಿಂದಲೂ ಕಾಫಿ ಸಾಗುವಳಿಯಲ್ಲಿದ್ದಹಾಗೂ, ಅಜಮಾಯಿಷಿ ಕಾಲದಲ್ಲಿ
ಫಸಲು ಬಿಟ್ಟಿದ್ದಹಾಗೂ ತಿಳಿದು ಬಂದದ್ದಲ್ಲದೆ, ಮೆ|| ರೇಕ್ಸ್‌ಯವರನ್ನು
ವಿಚಾರಿಸಿದ್ದರಲ್ಲಿ ತಾವು ಸಾಗುವಳಿ ಮಾಡಿದ್ದುಂಟೆಂದು ಇವರು ಕಬೂಲ
ಮಾಡಿದ್ದಲ್ಲದೆ ಸದರಿ ಜಮೀನನ್ನು ಮೆ|| ಹಾಂಕೀಯವರು ಕೆಲವು ವರ
ಷಗಳ ಕೆಳಗೆ ಆಗಿನ ಅಮಲ್ದಾರರಿಂದ ಪಡೆದಿದ್ದರೆಂದು ಹೇಳಿದರೆಂತಲೂ, ಆ
ಹೇಳಿಕೆಗೆ ಆಧಾರವಾಗಿ ಮೆ||ರೇಕ್ಸ್‌ಯವರಲ್ಲೇ ಆಗಲಿ ಅಥವಾ ತಾಲ್ಲೂಕ
ಕಚೇರಿಯಲ್ಲಾಗಲಿ ರಿಕಾರ್ಡು ಏನೂ ಇರುವದಿಲ್ಲವೆಂತಲೂ, ಸದರಿ ಜಮೀ
ನನ್ನು ಮೆ|| ಹಾಂಕೆಯವರ ಪರವಾಗಿ ಮೆ|| ರೇಕ್ಸ್‌ಯವರಿಗೆ ಎಕರೆ ಒಂ
ಕ್ಕೆ ೨೦ ರೂಪಾಯಿನಂತೆ ಖುಷ್ ಖರೀದಿಯನ್ನೂ ಮತ್ತು ಇವರು ಜಮೀ
ನನ್ನು ಅಕ್ರಮವಾಗಿ ಆಕ್ರಮಿಸಿಕೊಂಡ ತಾರೀಖು ಲಾಗಾಯಿತು ಎಕರೆ
ಸಾಲಿಯಾನ ೧-೮-೦ ರೂಪಾಯಿನಂತೆ ಕಂದಾಯವನ್ನೂ ತೆಗದುಕೊಂಡು
ಕೊಡಬಹುದೆಂತಲೂ ಕಡೂರು ಡಿಸ್ಟ್ರಿಕ್ಟು ಡೆಪ್ಯುಟಿ ಕಮೀಷನರವರು
ರಿಪೋರ್ಟು ಮಾಡಿದ್ದನ್ನನುಸರಿಸಿ ರೆವಿನ್ಯು ಕಮೀಷನರವರು ಸಿಫಾರಸು
ಮಾಡಿರಲು ಗೌರ್ನಮೆಂಟಿನವರು ಮೇಲ್ಕಂಡ ಷರತ್ತುಗಳ ಮೇ
ಸರ್ವೆ ೨೩೫ನೆ ನಂಬರು ಜಮೀನನ್ನು ಮೆ|| ಹಾಂಕೆಯವರ ಪರವಾಗಿ ಮೆ
ರೇಕ್ಸ್‌ಯವರಿಗೆ ಮಂಜೂರು ಮಾಡಿರುತ್ತೆಂತಲೂ, ಸಾಮಾನ್ಯ ಸರ್ಕಾ
ಜಮೀನಿನ ಅಕ್ರಮವಾದ ಆಕ್ರಮಣವು ಕಠಿಣ ಶಿಕ್ಷಾರ್ಹವಾದುದಲ್ಲದೆ ಜಮೀ

...ಕೂಡ ಫಾರ್ಫಿಟು ಮಾಡಲ್ಪಡತಕ್ಕದ್ದಾಗಿರುತ್ತದೆಯಾಗಿ ಈ ಮಂಜೂ...ತಿಯನ್ನು ಒಂದು ರಿಸಮಾಯಿತಿಯಾಗಿ ಭಾವಿಸತಕ್ಕದ್ದೆಂದೂ, ಸರಿಯಾದ ...ಕಾರಿಗಳಿಂದ ಲಿಖಿತ ಮೂಲಕ ಅನ್ವಣೆಯಿಲ್ಲದೆ ಜಮೀನನ್ನು ಆಕ್ರಮಿಸಿ... ಅಕ್ರಮ ತರೀಕು ಜಮೀನು ಆಕ್ರಮಿಸಿ ಕೊಂಡಂತೆ ಭಾವಿಸಲ್ಪಡತ...ದ್ದಾಗಿರುತ್ತೆಂತಲೂ ಹುಕುಂ ಮಾಡಿರುತ್ತಾರೆ.

Notifications.

ಇಸ್ತಿಹಾರ್ ನಾಮೆಗಳು.

ನಂ. ೧೧೦೫೭. ತಾ|| ೨—೫—೧೦.

ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೧೭೭ನೆ ಪ್ರಕರಣದಮೇರೆ ...ಳಕೆರೆ ತಾ|| ಅಮಲ್ದಾರ್ ಮೆ|| ಯಂ. ಯಸ್. ರಾಮಚಂದ್ರರಾಯರಿಗೆ ...೧೧ನೆ ಮೇ ೨೫ ತಾ|| ಲಾಗಾಯಿತು ಅಥವಾ ಅವರು ಉಪಯೋಗಿಸಿ...ಳ್ಳುವ ತಾರೀಖು ಲಾಗಾಯಿತು ೧೫ ದಿನಗಳ ಪ್ರಿವಿಲೇಜ್ ರಜಾ ಮಂ...ರಮ್ಮಾಡಿರುತ್ತೆ.

೨. ಅವರ ಗೈರ್ ಹಾಜರಿಯಲ್ಲಿ ತಾಲ್ಲೂಕು ಶಿರಸ್ತೇದಾರ್ ವೆಂಕ...ರಾಯರು ತಾಲ್ಲೂಕು ಛಾರ್ಜಿನಲ್ಲಿರತಕ್ಕದ್ದು.

ನಂ. ೧೧೧ ೧ ತಾ|| ೩—೫—೧೦.

ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೧೭೭ನೆ ಪ್ರಕರಣದ ಮೇರೆ ...ಮಗಡ ತಾ|| ಅಮಲ್ದಾರ್ ಮೆ|| ಸೈಮನ್ ರೂಬೆನವರಿಗೆ ೧೯೧೦ನೆ ಮೇ ...೩ ತಾ|| ಲಾಗಾಯಿತು ೧೫ ದಿನಗಳ ಪ್ರಿವಿಲೇಜ್ ರಜಾ ಕೊಟ್ಟಿರುತ್ತೆ.

೨. ಅವರ ಗೈರ್ ಹಾಜರಿಯಲ್ಲಿ ತಾಲ್ಲೂಕು ಶಿರಸ್ತೇದಾರ್ ಬಿ. ...ಸ್. ತಿರುಮಲಾಚಾರ್ಯರು ತಾಲ್ಲೂಕು ಛಾರ್ಜಿನಲ್ಲಿರತಕ್ಕದ್ದು.

ನಂ. ೧೧೪೦೨. ತಾ|| ೧೩—೫—೧೦.

ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೧೭೭ನೆ ಪ್ರಕರಣದ ಮೇರೆ

ಕಾರ್ಕಾರ್ಜಹಳ್ಳಿ ತಾ|| ಅಮಲ್ದಾರ್ ಮೆ|| ಬಿ. ರಂಗನಾಥರಾಯರಿ
೧೯೧೦ನೆ ಇಸವಿ ಏಪ್ರಿಲ್ ತಾ|| ೧೨ರ ಲಾಗಾಯಿತು ೧೨ ದಿನಗಳ ಪ್ರಿವಿಲೆ
ಜ್ ರಜಾ ಕೊಟ್ಟಿರುತ್ತೆ.

೨. ಅವರ ಗೈರ್ ಹಾಜರಿಯಲ್ಲಿ ತಾಲ್ಲೂಕು ಶಿರಸ್ತೇದಾರು ತಾ
ಲ್ಲೂಕು ಚಾರ್ಜಿನಲ್ಲಿರತಕ್ಕದ್ದು.

Occasional Notes.
ವಿವಿಧ ವೃತ್ತಾಂತಗಳು.

೧. ಉರಲುಗಡ್ಡೆಯಲ್ಲಿ ತುಂಬಾ ಆಳವಾಗಿ ಕಣ್ಣುಗಳುಳ್ಳ ಜಾತಿ ಗಡ್ಡೆ
ಗಳಿಗೇನೇ ಹುಳುಗಳ ಕಾಟ ವಿಪರೀತವೆಂತ ಬೊಂಬಾಯಿ ವ್ಯವಸಾಯ
ಇಲಾಖೆಯು ೧೯೦೮—೦೯ ಸಾಲ್ ರಿಪೋರ್ಟಿನಿಂದ ತಿಳಿದುಬರುತ್ತದೆ.

೨. ಕಿತ್ತಲೆ ಹಣ್ಣನ್ನು ದೇಶದಿಂದ ದೇಶಕ್ಕೆ ಸಾಗಿಸುವ ಸಂದರ್ಭದಲ್ಲಿ ಪ್ಯಾ
ಕು ವಗೈರೆ ಮಾಡುವಾಗ ಹಣ್ಣನ್ನು ಬಳಿಸುವುದರಲ್ಲಿ ಸ್ವಲ್ಪ ಬುದ್ಧಿವಂ
ಕೆಯನ್ನು ಪಯೋಗಿಸಿ ಎಚ್ಚರಿಕೆಯಿಂದ ಪ್ಯಾಕುಮಾಡಿ ಕಳುಹಿಸಿದರೆ ಸಾ
ಸುವದಕ್ಕೆ ಹಿಡಿಯುವ ಕಾಲವೂ ಮತ್ತು ಊರು ಸೇರಿದಮೇಲೂ ಕೂ
ಸ್ವಲ್ಪ ಕಾಲದವರೆಗೂ ಹಣ್ಣು ಕೆಡುವದಿಲ್ಲವೆಂದು ಅಮೇರಿಕಾ ದೇಶ
ವ್ಯವಸಾಯ ಇಲಾಖೆಯವರು ಅಜಮಾಯಿಷಿಗಳಿಂದ ನಿರ್ಧರಿಸಿರುತ್ತಾರೆ.
ಇಂಡಿಯನ್ ಅಗ್ರಿಕಲ್ಚರಿಸ್ಟ್, ೧-೧-೧೯೧೦.

೩. ೧೯೦೮—೦೯ರಲ್ಲಿ ಕಾಲಿನ ತುಳಿತಕ್ಕೆ ತಿರುಗುವ ಜರ್ಮನ್ ದೇಶ
ರಾಟೆಯನ್ನು ತರಿಸಿ ನೋಡಿದ್ದರಲ್ಲಿ ಇದರ ಕೆಲಸವು ಬಹಳ ಸಮರ್ಪ
ವಾಗಿ ಕಂಡುಬಂತು. ಇದರಲ್ಲಿ ಒಬ್ಬ ದೊಡ್ಡ ಆಳು ಮತ್ತು ಒಬ್ಬ ಸ
ಣ್ಣ ಹುಡುಗ ಸೇರಿ ದಿನಕ್ಕೆ ೮ ಘಂಟೆ ಹೊತ್ತು ಕೆಲಸಮಾಡಿದರೆ ಸುಮಾರ
೨೫೦ ಪೌಂಡು ಬೀಜವಿರುವ ಹತ್ತಿಯನ್ನು ಬಿಡಿಸಿ ರಾಟೆ ಆಡಬಹುದೆಂ
ಬೊಂಬಾಯಿ ವ್ಯವಸಾಯ ಇಲಾಖಾ ೧೯೦೮—೦೯ನೆ ಸಾಲ್ ರಿಪೋರ್ಟಿ
ನಲ್ಲಿ ನಮೂದಿದೆ.

V. B. SOOBBIAH AND SONS, PRINTERS, BANGALORE.—1910.

THE MYSORE

REVENUE & AGRICULTURAL GAZETTE.

ವಾಲ್ಯ್ಯೂಂ ೪.] ಬುಧವಾರ, ೧ನೆ ಜೂನ್ ೧೯೧೦. [ನಂ. ೧೫.

Contents.

1. Sugar manufacture in India.
2. Manurial Earths of Mysore.
3. Kole Roga of Supari.
4. Government Proceedings.
5. Notifications.
6. Occasional Notes.
   (i) Cocoanut Trees. (ii) Honorary Organisers of Co-operative Societies. (iii) Paddy. (iv) Gingelly Crop in Madras Presidency. (v) Well Boring Operations. (vi) Onions. (vii) Oil Engines for Irrigation. (viii) Advantages of Sowing by Drill. (ix) Irrigated Ragi. (x) Co-operative Societies. (xi) Accidental Fires. (xii) Irrigated Groundnut.

ಅನುಕ್ರಮಣಿಕೆ.

೧. ಇಂಡಿಯಾ ದೇಶದಲ್ಲಿ ಸಕ್ಕರೆ ತಯಾರಿ ಕ್ರಮ.
೨. ಮೈಸೂರಿನಲ್ಲಿ ದೊರಕುವ ಗೊಬ್ಬರದ ಮಣ್ಣುಗಳು.
೩. ಅಡಿಕೆಗೆ ತಗಲುವ ಕೊಳೆರೋಗ.
೪. ಸರ್ಕಾರಿ ಹುಕುಂಗಳು.
೫. ಇಷ್ತಿಹಾರ್ನಾಮೆಗಳು.
೬. ವಿವಿಧ ವೃತ್ತಾಂತಗಳು.
   (i) ತೆಂಗಿನ ಗಿಡಗಳು. (ii) ಕೋಆಪರೇಟಿವ್ ಸೊಸೈಟಿಗಳ ಆನರೆರಿ ಆರ್ಗನೈಜರುಗಳು. (iii) ಬತ್ತ. (iv) ಮದರಾಸು ಆಧಿಪತ್ಯದ ಅಚ್ಚೆಳ್ಳು ಪೈರು. (v) ಭಾವಿ ತೋಡುವ ಯಂತ್ರಗಳು. (vi) ಈರುಳ್ಳಿ ವ್ಯವಸಾಯ. (vii) ಆಯಿಲ್ ಇಂಜನ್‌ಗಳಿಂದ ನೀರು ಹಾಯಿಸುವಿಕೆ. (viii) ಕೂರಿಗೆಯಿಂದ ಬಿತ್ತನೆ ಮಾಡುವದರ ಪ್ರಯೋಜನ. (ix) ನೀರು ಹಾಯಿಸಿ ರಾಗಿಯನ್ನು ಬೆಳೆಯುವುದು. (x) ಕೋ ಆಪರೇಟಿವ್ ಸೊಸೈಟಿಗಳು. (xi) ಬೆಂಕಿಯಿಂದ ಅನಾಹುತಗಳು. (xii) ನೀರು ಹಾಯಿಸಿ ನೆಲಗಡ್ಲೆಯನ್ನು ಬೆಳೆಯುವದು.

Sugar Manufacture in India.*

ಇಂಡಿಯಾ ದೇಶದಲ್ಲಿ ಸಕ್ಕರೆ ತಯಾರಿ ಕ್ರಮ.

ಇಂಡಿಯಾ ದೇಶದಲ್ಲಿ ಹಾಲಿ ಅನುಸರಿಸುತ್ತಲಿರುವ ಸಕ್ಕರೆಯು ತಯಾರಿ ಕ್ರಮಗಳಲ್ಲಿ ಮೊದಲಿನಿಂದ ಕೊನೆಮುಟ್ಟುವವರಿವಿಗೂ ಸಕ್ಕರೆಯು ವಿಶೇಷವಾಗಿ ನಷ್ಟವಾಗುತ್ತದೆ. ಸಾಮಾನ್ಯವಾಗಿ ಇಲ್ಲಿನ ಗಾಣಗಳು ಕಬ್ಬಿನಿಂದ ಶೇಕಡ ೫೫ ಪಾಲು ಹಾಲು ಹಿಂಡಿದರೆ ಅದೇ ಅತ್ಯಧಿಕವೆಂದು ಹೇಳಬೇಕು. ಕಬ್ಬಿನಲ್ಲಿ ಶೇಕಡ ೮೮ ಪಾಲು ರಸವಿರುತ್ತೆಂದು ಇಟ್ಟುಕೊಂಡರೂ ಇದರಲ್ಲಿ ಸ್ವಲ್ಪ ಹೆಚ್ಚು ಕಡಿಮೆ ಶೇಕಡ ೩೦ರಷ್ಟು ರಸ ವ್ಯರ್ಥವಾಗುತ್ತದೆ. ಈಗಿನ ಹೊಸ ಮಾದರಿ ಗಾಣಗಳಲ್ಲಾದರೋ ಶೇಕಡ ಸುಮಾರು ೮೦ ಪಾಲಿನಷ್ಟು ಹಾಲು ಇಳಿಯುತ್ತದೆ. ಆಲೆಯಾಡುವ ಬಾಬಿನಲ್ಲಿ ಮಾತ್ರವೇ ಇಷ್ಟು ಲುಕ್ಸಾನಾಗುತ್ತದೆ. ಇದಲ್ಲದೆ ಹಾಲನ್ನು ಪಾಕ ಏರುವದಕ್ಕಾಗಿ ಕಾಯಿಸುವದರಲ್ಲಿಯೂ ಸಕ್ಕರೆಯು ಬಹಳ ಹಲಾಕು ಆಗುತ್ತದೆ. ಹೇಗಂದರೆ, ಪಾಕದಲ್ಲಿ ಹದವಿಾರಿ ಕಾವು ಹೆಚ್ಚಿದರೂ ಸರಿಯೇ ಅಥವಾ ಹಾಲನ್ನು ಅನಾವಶ್ಯಕವಾಗಿ ಅಧಿಕ ಕಾಲ ಕಾಯಿಸಿದರೂ ಸರಿಯೇ ಸಕ್ಕರೆಯು ಹರಳು ಹರಳಾಗಿ ಆಗುವುದಿಲ್ಲ. ಹಾಲಿ ರೂಢಿಯಲ್ಲಿರುವಂತೆ ಹಾಲು ಕಾಯಿಸುವಾಗ ಪಾಕವು ಹದವಾದ ಮುಂದಕ್ಕೆ ಬರುವುದರೊಳಗಾಗಿ ಪಾಕದಲ್ಲಿ ಕಾವು ಮಿತಿಮೀರಿ ಏರುವುದರಿಂದ, ಇಷ್ಟು ಅಧಿಕವಾಗಿ ಕಾದ ಪಾಕದಿಂದ ಒಳ್ಳೇ ಸಕ್ಕರೆ ಬರುವುದಿಲ್ಲ. ಹಾಲು ಕಾಯುತ್ತಿರುವಾಗ ಬರುವ ನೊರೆಯಲ್ಲಿಯೂ ಕೊಂಚ ಸಕ್ಕರೆ ಇರುವುದುಂಟು. ಇದು ಹಾಲಿ ಹಲಾಕು ಆಗುತ್ತಿರುವದು. ಇದೇ ರೀತಿ ಶೋಧನೆ ಮೊದಲಾದ ಕ್ರಮಗಳಲ್ಲಿಯೂ ಕೂಡ ವಿಶೇಷ ನಷ್ಟ ಉಂಟಾಗುತ್ತಿರುವುದು. ಸಾಧಾರಣವಾಗಿ ೧ ಟನ್ನಷ್ಟು ಬಿಳಿ ಸಕ್ಕರೆ ತೆಗೆಯಬೇಕಾದರೆ ೨೦-೨೫ ಟನ್‌ಗಳ ಕಬ್ಬನ್ನು ಉಪಯೋಗಿಸುತ್ತಾರೆ. ಮತ್ತು ಕಬ್ಬಿನಲ್ಲಿ ಶರ್ಕರಾಂಶವು ಶೇಕಡಾ ೧೨ ರಷ್ಟು ಮಾತ್ರ ವಿರುತ್ತದೆಂದು ಇಟ್ಟುಕೊಂಡರೆ ೨.೪ ಟನ್ನಷ್ಟು ಶರ್ಕರಾಂಶವು ಉಪಯೋಗಿಸಲ್ಪ

* ಇಂಡಿಯನ್ ಟ್ರೇಡ್ ಜರ್ನಲ್, ೨೭—೧—೧೦.

...ಷ್ಟಿಗಿಂತ ಬಿಳಿ ಸಕ್ಕರೆಯಾಗುತ್ತದೆ. ಸಾರಾಂಶದಲ್ಲಿ, ಸ್ವಲ್ಪ ಹೆಚ್ಚು ಕ...ವೆಂ ಮೂರು ಪಾಲು ಶರ್ಕರಾಂಶಕ್ಕೆ ೧ ಪಾಲು ಬಿಳಿ ಸಕ್ಕರೆ ಹೊರಟಂತಾ...ುತು. ಆದರೆ ಈ ಕೆಲಸಕ್ಕೆ ಈಗಿನ ಕಾಲದ ಹೊಸ ಹೊಸ ರಚುಂ ಯಂ...ತ್ರೋಪಕರಣಗಳನ್ನು ಉಪಯೋಗಿಸಿಕೊಂಡಲ್ಲಿ ೧೦೦ ಪಾಲು ಶರ್ಕರಾಂಶ...ಕ್ಕೆ ಸುಮಾರು ೬೪ ಪಾಲು ಬಿಳಿ ಸಕ್ಕರೆ ಹೊರಡುವದು.

ಮೇಲೆ ಹೇಳಿರುವ ಮೇರೆ ಈಗ ಆಚರಿಸುತ್ತಿರುವ ಹಳೇ ...ಕ್ರಮಗಳಲ್ಲಿ ಸಕ್ಕರೆಯು ವಿಶೇಷವಾಗಿ ನಷ್ಟವಾಗುತ್ತದೆ. ಈ ನಷ್ಟ...ವು ಹೊಸ ವಿಧಾನಗಳನ್ನನುಸರಿಸಿದಲ್ಲಿ ತಪ್ಪುವುದು. ಆದರೆ ಇದಕ್ಕೆ ...ಂದು ದೊಡ್ಡ ಪ್ರತಿಬಂಧಕಉಂಟು. ಸಾಧಾರಣವಾಗಿ ಸಣ್ಣ ಸಣ್ಣ ಹಿ...ಡುವಳಿಗಳೇ ಬಹಳವಾಗಿ ಕಬ್ಬಿನ ಸಾಗಿನಲ್ಲಿರುತ್ತವೆಯೇ ವಿನಹ ಈ ವ್ಯ...ವಸಾಯವು ಭಾರಿ ವಿಸ್ತೀರ್ಣದ ಜಮೀನುಗಳಲ್ಲಿ ನಡೆಯುವದೇ ಅಪರೂ...ಪ. ಕೆಲವು ಸಂದರ್ಭಗಳಲ್ಲಿ ಒಂದು ಗ್ರಾಮಕ್ಕೆಲ್ಲಾ ಎಲ್ಲೋ ಒಂದು ೬ಥ...ವಾ ಎರಡು ಸಣ್ಣ ತಾಕುಗಳಲ್ಲಿ ಮಾತ್ರ ಕಬ್ಬಿನ ಬೆಳೆ ಇಡುವುದುಂಟು. ...ಗೆ ಅಲ್ಪ ಸ್ವಲ್ಪ ಕಬ್ಬನ್ನು ಬೆಳೆಯುವ ಒಬ್ಬೊಬ್ಬ ರೈತನೂ ತಾನೆ ...ಖರ್ಚುಇಟ್ಟು ನೂತನ ಯಂತ್ರೋಪಕರಣಗಳನ್ನು ತರಿಸುವುದೆಂದರೆ ಅ...ಸಾಧ್ಯ ಮತ್ತು ಶುದ್ಧ ಅಸಂಗತವಾಗಿರುತ್ತದೆ. ಆದ್ದರಿಂದ ಕಬ್ಬು ವ್ಯವ...ಸಾಯ ಜರಗುವ ಪ್ರದೇಶದಲ್ಲಿ ಒಂದು ಮಧ್ಯರಾಷ್ಟ್ರವಾದ ಸ್ಥಳದಲ್ಲಿ ...ಭಾರಿ ಕಾರ್ಖಾನೆಯನ್ನು ಸ್ಥಾಪಿಸಿ ಸುತ್ತು ಮುತ್ತಲೂ ಆಗುವ ಕಬ್ಬ...ನ್ನು ಈ ಕಾರ್ಖಾನೆಯಲ್ಲಿ ಆಲೆಯಾಡಿ ಸಕ್ಕರೆಯನ್ನು ತಯಾರುಮಾಡುವ...ದಕ್ಕೆ ಉಪಕ್ರಮಿಸುವದೇ ಸರ್ವ ಸಮ್ಮತವಾದ ಉಪಾಯ. ಇಂಥಾ ಕಾ...ರ್ಖಾನೆಗಳಲ್ಲಿ ಉತ್ತಮತರಹೆ ಯಂತ್ರೋಪಕರಣಗಳಿಂದ ದೊರೆಯುವ ಸ...ರ್ವಾನುಕೂಲಗಳನ್ನು ಹೆಚ್ಚು ಖರ್ಚಿಲ್ಲದೆ ರೈತರು ಹೊಂದಬಹುದಲ್ಲದೆ ...ಅವರವರ ಫಸಲಿಗೆ ಒಳ್ಳೆ ಬೆಲೆಯೂ ದೊರೆಯುವುದು. ಹಾಲಿ ಬೆಲ್ಲದಿಂ...ದ ಸಕ್ಕರೆಯನ್ನು ತಯಾರು ಮಾಡುವ ವಾಡಿಕೆಯುಂಟು. ಆದರೆ ಕ...ಬ್ಬಿನ ಹಾಲಿನಿಂದ ನೇರವಾಗಿಯೆ ಸಕ್ಕರೆಯನ್ನು ತಯಾರು ಮಾಡಿದಲ್ಲಿ ...ರಕು ಬೆಲ್ಲದಿಂದಾಗುವ ಸಕ್ಕರೆಗಿಂತಲೂ ಬಹಳ ಹಸನಾಗಿರುತ್ತದೆ.

ಇಷ್ಟೇ ಅಲ್ಲದೆ ಫಸಲು ರೆಡಿಯಾದ ಮೇಲೆ ಜಲ್ಲೆಯನ್ನು ಗಾಣಕ್ಕೆ

ಕೊಡುವುದರಲ್ಲಿ ಬಹಳ ತಡವಾಗುತ್ತೆ. ಇದರಿಂದ ಜಲ್ಲೆಯಲ್ಲಿನ ಶರ್ಕರಾಂ ವು ಹುಳಿಯಾಗಿ ಸರಕು ಕೆಡುತ್ತದೆ.

ಇದೇ ವಿಷಯದಲ್ಲಿ ಇಂಗ್ಲೆಂಡಿನಲ್ಲಿ ಹೆಸರುಗೊಂಡಿರುವ ಅನುಭವ ಶಾಲಿಗಳಾದೊಬ್ಬರು ಅಭಿಪ್ರಾಯ ಪಡುವುದೇನಂದರೆ:—

ಕಬ್ಬಿನ ಹಾಲಿನಿಂದ ನೇರವಾಗಿ ಸಕ್ಕರೆಯನ್ನು ತೆಗದು ಭಾ ಯಾಗಿ ವ್ಯಾಪಾರ ಮಾಡಬೇಕಾದರೆ ಮಧ್ಯರಾಷ್ಟ್ರವಾಗಿರುವ ಕಡೆಗಳ ದೊಡ್ಡ ಕಾರ್ಖಾನೆಗಳನ್ನು ಸ್ಥಾಪಿಸಿ ಕೆಲಸ ನಡೆಸಬೇಕಾದ್ದು ಅತ್ಯಾ ಶ್ಯಕ. ಇಂಥಾ ಭಾರಿ ಕಾರ್ಖಾನೆಗಳಿದ್ದರೇನೆ ಸಕ್ಕರೆಯ ವ್ಯಾಪಾರದ ಇತರ ದೇಶಗಳೊಂದಿಗೆ ಪ್ರೋಟಾಪ್ರೋಟಿ ಮಾಡುವುದಕ್ಕೆ ಸಾಧ್ಯವಾ ಗುವುದು. ಅಲ್ಲದೆ ಭಾರಿ ಕಾರ್ಖಾನೆಗಳಾದರೆ ಹೆಚ್ಚು ಸಂಬಳವನ್ನು ಕೊಟ್ಟು ಜಾಣರೂ ಅನುಭವಶಾಲಿಗಳೂ ಮತ್ತು ಬುದ್ಧಿವಂತರೂ ಆ ಕೆಲಸಗಾರರನ್ನು ಇಟ್ಟುಕೊಳ್ಳುವದಕ್ಕೆ ಚೈತನ್ಯ ಉಂಟಾಗುತ್ತೆ ಇದು ಬಡತನದಲ್ಲಿ ಗಾಣವನ್ನಿಟ್ಟುಕೊಂಡು ಕೆಲಸ ಮಾಡುವವರಿ ಸಾಧ್ಯವಲ್ಲ. ಕಬ್ಬನ್ನು ಆಲೆ ಮನೆಗೆ ಎಷ್ಟುದೂರ ಫಾಸಲೆಯಿಂದ ಕೆ ದಹಾಗೆ ತರಬಹುದು ಮತ್ತು ಜಲ್ಲೆಗಳನ್ನು ಗಾಣಕ್ಕೆ ಕೊಡುವುದರ ಬಾಧಕವಿಲ್ಲದೆ ಎಷ್ಟು ದಿನಗಳು ತಡಮಾಡಬಹುದು ಎಂಬೀ ವಿಷಯಗಳ ಆಯಾಯ ದೇಶದ ಹವಾಸ್ಥಿತಿಗಳನ್ನನುಸರಿಸಿರುತ್ತವೆ. ಇಂಡಿಯಾ ದೇಶದ ಕಬ್ಬನ್ನು ಕಟಾವು ಮಾಡಿದ ೨ ದಿನಗಳೊಳಗಾಗಿ ಆಲೆಯಾಡಿದರೆ ಕೆಟ್ಟು ಹೋಗುವುದಿಲ್ಲ. ಫಾಸಲೆಯ ವಿಷಯವಾದರೋ ಕಬ್ಬನ್ನು ಸಾಗಿಸುವ ದಕ್ಕೆ ಉಪಯೋಗಿಸುವ ಉಪಕರಣಗಳನ್ನು ಅನುಸರಿಸಿರುತ್ತದೆ. ರೈಲ್ವೆ ರ್ಗವಾದರೆ ದೂರ ಪ್ರದೇಶದಿಂದ ತರಬಹುದು. ಎತ್ತಿನ ಗಾಡಿಗಳಲ್ಲಾ ರೆ ಅಷ್ಟುದೂರದಿಂದ ತರುವುದಕ್ಕಾಗುವುದಿಲ್ಲ.

Manurial Earths of Mysore.*

ಮೈಸೂರಿನಲ್ಲಿ ದೊರಕುವ ಗೊಬ್ಬರದ ಮಣ್ಣುಗಳು.

ಬೆಂಗಳೂರು ಡಿಸ್ಟ್ರಿಕ್ಟಿನ ಕೆಲವು ಕಡೆಗಳಲ್ಲಿ ಹಳೇಗ್ರಾಮನತ್ತ

* ಅಗ್ರಿಕಲ್ಚರಲ್ ಜರ್ನಲ್ ಆಫ್ ಇಂಡಿಯಾ, ಜನವರಿ ೧೯೧೦.

ಮಣ್ಣನ್ನು ಸಾಗುವಳಿ ಜಮೀನುಗಳಿಗೆ ಗೊಬ್ಬರವಾಗಿ ಉಪಯೋಗಿಸುವ ವಾಡಿಕೆಯುಂಟು. ಈ ಡಿಸ್ಟ್ರಿಕ್ಟಿಗೆ ಸೇರಿದ ಚಿಕ್ಕಬಾಣಾವಾರ, ಕಾಕೋಳ, ಕಾತನೂರು, ರಾಜಘಟ್ಟ ಮತ್ತು ಅಂದರಲಹಳ್ಳಿ ಗ್ರಾಮಗಳಿಂದ ಮಣ್ಣನ್ನು ಮಾದರಿಗೋಸ್ಕರ ತಂದು ರಸಾಯನಶಾಸ್ತ್ರ ರೀತ್ಯಾ ಪರಿಶೋಧಿಸಿ ನೋಡಲು ಎಲ್ಲಾ ಮಣ್ಣುಗಳಲ್ಲೂ ಸಸ್ಯಾಹಾರವಾಗಿ ಉಪಯೋಗಿಸಲ್ಪಡುವ ನೈಟ್ರೋಜನ್ (Nitrogen) ಫಾಸ್ಫಾರಿಕ್‌ಆಸಿಡ್ (Phosphoric Acid) ಸುಣ್ಣ (Lime) ಮತ್ತು ಪೊಟ್ಯಾಷ್ (Potash) ಪದಾರ್ಥಗಳು ಕಂಡುಬಂದದ್ದಲ್ಲದೆ, ಇವುಗಳ ಪೈಕಿ ಸುಣ್ಣ ಮತ್ತು ಫಾಸ್ಫಾರಿಕ್ ಆಸಿಡ್ ಅಂಶಗಳೇ ಎಲ್ಲದರಲ್ಲಿಯೂ ವಿಶೇಷವಾಗಿದ್ದವು. ಕೆಲವು ಮಣ್ಣುಗಳಲ್ಲಿ ಮಿಕ್ಕ ಅಂಶಗಳು ಜಾಸ್ತಿಯಾಗಿದ್ದವು. ಕಾಕೋಳದಲ್ಲಿ ದೊರೆತ ಒಂದು ದಖುವಿನಲ್ಲಿ ಮಾತ್ರ ನೈಟ್ರೋಜನ್ವಾಯುವು ಅತ್ಯಧಿಕವಾಗಿದ್ದುದಲ್ಲದೆ, "ನೈಟ್ರೇಟ್" ಉಪ್ಪುಗಳೂ (Nitrates) ಕಂಡುಬಂದಿರುತ್ತವೆ.

ಮೇಲ್ಕಂಡ ಗ್ರಾಮಗಳಲ್ಲಿ ರೈತರು ಈ ಮಣ್ಣನ್ನು ಅಗೆದು ಅಗೆದು ಅನೇಕ ಜಮೀನುಗಳು ಹಳ್ಳವಾಗಿ ಹೋಗಿವೆ. ಬೇಸಾಯಕಾಲ ಶುರುವಾಗುತ್ತಲೆ ರೈತರು ಮಣ್ಣನ್ನು ಅಗೆದುಕೊಂಡು ಗೊಬ್ಬರಕ್ಕಾಗಿ ಮಾರುತ್ತಾರೆ. ಅಥವಾ ಸ್ವಂತಕ್ಕೆ ಉಪಯೋಗಿಸಿಕೊಳ್ಳುವುದೂ ಉಂಟು. ಮಣ್ಣಿಗೆ ಗಾಡಿಯೊಂದಕ್ಕೆ ನಾಲ್ಕಾಣೆಯಿಂದ ಎಂಟಾಣೆವರೆಗೂ ಖರೀದಿ ದೊರೆಯುತ್ತದೆ.

ಮಣ್ಣು ಬೂದಿ ವರ್ಣವಾಗಿರುವುದರಿಂದ ಇದಕ್ಕೆ ಬೂದಿಮಣ್ಣೆಂಬ ಹೆಸರು ಬಂದಿರುತ್ತೆ. ಇದು ಹಗುರವಾಗಿಯೂ ಮತ್ತು ಮರಳು ಮಿಶ್ರವಾಗಿ ನೀರು ಸಲೀಸಾಗಿ ಜನಿಯುವ ಹಾಗೂ ಇರುತ್ತೆ. ಈ ಮಣ್ಣಿನ ಗುಂಡಿಗಳಲ್ಲಿ ಸಾಮಾನ್ಯವಾಗಿ ಜೋಕಿ ಹಂಚಿನ ಮತ್ತು ಎಲಬಿನ ಚೂರುಗಳು ಮಣ್ಣಿನೊಂದಿಗೆ ಬೆರತಿರುವುದುಂಟು.

ಈ ಮಣ್ಣನ್ನು ರಾಗಿ ಪೈರಿಗೆ ಗೊಬ್ಬರವಾಗಿ ಹಾಕುತ್ತಾರೆ. ಇದನ್ನು ಒಂದು ಗ್ರಾಮದಲ್ಲಿ ಗನ್ನಾ ಪೈರಿಗೂ ಉಪಯೋಗಿಸುವುದುಂಟು. ಮಳೆ ಯಥೇಷ್ಟವಾಗಿ ಆಗುವ ವರ್ಷಗಳಲ್ಲಿ ಈ ಮಣ್ಣು ಗೊಬ್ಬರವು ಬಹಳ ಒಳ್ಳೆ ಫಸಲನ್ನು ಕೊಡುತ್ತದಂತೆ. ಪರಂತು ಮಣ್ಣಿನಲ್ಲಿ ಮರಳು ಮಿಶ್ರ

ವಾಗಿರುವುದರಿಂದ ಕಮ್ಮಿ ಮಳೆಯಾಗುವ ವರ್ಷಗಳಲ್ಲಿ ಈ ಮಣ್ಣಿನಿಂ ಪ್ರತಿಕೂಲ ಹೆಚ್ಚೇ ವಿನಹ ಅನುಕೂಲ ಇಲ್ಲವೇ ಇಲ್ಲ. ರಾಜಘಟ್ಟದ ಈ ಮಣ್ಣನ್ನು ರಾಗಿ ಹೊಲಗಳಿಗೆ ವಿಶೇಷವಾಗಿ ಉಪಯೋಗಿಸುತ್ತಾ ಈ ಗ್ರಾಮದಲ್ಲಾಗುವ ರಾಗಿ ಫಸಲು ಸಂಸ್ಥಾನದಲ್ಲೆಲ್ಲಾ ಶ್ರೇಷ್ಠ ದದ್ದೆಂದು ಪೂರ್ವದಿಂದಲೂ ಹೆಸರುಗೊಂಡಿರುತ್ತೆ. ಇಲ್ಲಿ ಸಾಧಾರಣವಾ ಹೊಲಗಳ ಮಣ್ಣೆಲ್ಲಾ ಬೂದೀಮಣ್ಣಿನಂತೆಯೇ ಕಾಣುತ್ತದೆಯಲ್ಲದೆ ತಿ ಹೊಲದಲ್ಲಿಯೂ ಈ ಮಣ್ಣು ಇಷ್ಟೇ ಇರುತ್ತೆಂದು ತಿಳಿದುಬರುತ್ತ

Kole Roga of Supari.

ಅಡಿಕೆಗೆ ತಗಲುವ ಕೊಳೆರೋಗ.

ಅಡಿಕೆಗೆ ತಗಲಿ ಬಹಳ ನಷ್ಟವನ್ನುಂಟುಮಾಡುವ ಕೊಳೆರೋಗ ವಿಷಯದಲ್ಲಿ ಪರೀಕ್ಷೆ ಮಾಡುವುದಕ್ಕಾಗಿ ಸರ್ಕಾರದವರು ಬಹಳ ಹಣ ನ್ನು ಖರ್ಚು ಮಾಡಿದ್ದಾರೆ. ಈ ರೋಗವು ಅನುಕೂಲವಿದ್ದಲ್ಲಿ ಕಾ ಯಿನಿಂದ ಕಾಯಿಗೂ, ಮತ್ತು ಗೊನೆಯಿಂದ ಗೊನೆಗೂ, ಬಹಳ ಜಾಗ ತೆಯಾಗಿ ವ್ಯಾಪಿಸತಕ್ಕ, ಒಂದು ವಿಧವಾದ ಸೂಕ್ಷ್ಮಾಣುವಿನಿಂದ ಉಂಟಾಗ ತ್ತದೆ. ಈ ರೋಗವನ್ನು ನಿರ್ಮೂಲ ಮಾಡುವುದಕ್ಕಾಗಿ ಹೋದ ವ ಷ ಒಂದು ಔಷಧವು ಬಹಳವಾಗಿ ಉಪಯೋಗಿಸಲ್ಪಟ್ಟಿತು. ಈ ಉ ಯದಿಂದ ಕೊಟ್ಟೆಗಳನ್ನು ಕಟ್ಟುವುದರಿಂದಾಗುವ ಪ್ರಯೋಜನಕ್ಕಿಂತಲ ಅತ್ಯಧಿಕವಾದ ಪ್ರಯೋಜನವು ಕಂಡು ಬರುತ್ತಲಿದೆ. ಈ ವಿಷಯವನ ನಿರ್ದೇಶಿಸುವುದಕ್ಕೆ ಸಹಕಾರಿಗಳಾದ ಲೆಖ್ಖಗಳು ಈಗ ಅಚ್ಚಾಗುತ್ತ ರುವ ಕನ್ನಡ ಪುಸ್ತಕದಲ್ಲಿ ಪ್ರಕಟಿಸಲ್ಪಡುತ್ತವೆ. ಒಂದು ಎಕರೆ ಹಾಕುವುದಕ್ಕೆ ಸಾಕಾಗುವಷ್ಟು ಔಷಧಕ್ಕೆ ಆ ಭೂಮಿಯಲ್ಲಿ ಎಷ್ಟು ಡಗಳು ಮತ್ತು ಗೊನೆಗಳು ಇರುತ್ತವೆಯೋ ಅದಕ್ಕನುಸಾರವಾಗಿ ಮಾರು ೩ ರಿಂದ ೫ ರೂಪಾಯಿಗಳವರಿವಿಗೂ ಆಗುತ್ತದೆ.

ಈ ಔಷಧವನ್ನು ಗೊನೆಗಳಿಗೆ ಚಿಮುಕಿಸುವುದಕ್ಕೆ ಬೇಕಾದ ಕ ವು ಯಂತ್ರಗಳನ್ನು ವ್ಯವಸಾಯದ ಇಲಾಖೆಯವರು ಕೊಂಡುಕೊಂ ಪ್ರತಿ ಒಂದು ತಾಲ್ಲೂಕಿನಲ್ಲಿಯೂ ನಾಲ್ಕು ಯಂತ್ರಗಳನ್ನು ಇರಿಸಿ

ಲ್ಲವೆ, ಔಷಧ ಚಿಮುಕಿಸುವುದನ್ನು ಸರಿಯಾಗಿ ಮಾಡುತ್ತಾರೆಯೆ ಇಲ್ಲವೆ ಎಂಬುವುದನ್ನು ನೋಡಿಕೊಳ್ಳುವುದಕ್ಕಾಗಿ ಜನಗಳನ್ನು ಏರ್ಪಾಡು ಮಾಡುತ್ತಾರೆ. ಆದ್ದರಿಂದ ತೋಟದ ಮಾಲೀಕರು ಈ ಚಿಕಿತ್ಸೆಯನ್ನು ಸಂಪೂರ್ಣವಾಗಿ ಪರೀಕ್ಷಿಸಿ ನೋಡಿಯಾರೆಂದು ನಂಬಲ್ಪಟ್ಟಿದೆ. ಇದರಿಂದಾಗತಕ್ಕ ಖರ್ಚು ಕೂಡ ಕೊಟ್ಟಿಗಳನ್ನು ಕ್ರಯಕ್ಕೆ ತೆಗೆದು ಕಟ್ಟುವುದರಿಂದಾಗುವದಕ್ಕಿಂತ ಬಹಳ ಕಡಿಮೆಯಾಗಿರುತ್ತದೆ. ಮಲ್ನಾಡಿನ ಕೆಲವು ಪ್ರಾಂತ್ಯಗಳಲ್ಲಿರತಕ್ಕ ಸುಮಾರು ಇಪ್ಪತ್ತು ತೋಟಗಳ ಮಾಲೀಕರು ತಮ್ಮ ತೋಟಗಳ ಕೆಲವು ಭಾಗಗಳನ್ನು ಈ ರೀತಿಯಾಗಿ ಔಷಧ ಚಿಮುಕಿಸಿಕೊಡಬೇಕೆಂದು ಕೇಳಿಕೊಂಡಿದ್ದಾರೆ. ಆದ್ದರಿಂದ ಈ ರೀತಿಯಾಗಿ ಚಿಕಿತ್ಸೆ ಮಾಡಿಸಲಪೇಕ್ಷೆಯುಳ್ಳವರು ಕಾಲ ವಿಳಂಬವಿಲ್ಲದೆ ಈ ಕೆಳಗೆ ನಮೂದಿಸಿರುವವರಿಗೆ ಬರೆದುಕೊಳ್ಳಬೇಕು:—

ಸಾಗರ ಮತ್ತು ನಗರ ತಾಲ್ಲೂಕಿನವರು ಸಾಗರದಲ್ಲಿ ಮೊಕ್ಕಾಂ ಮಾಡಿರುವ ಅಸಿಸ್ಟೆಂಟ್ ಮೈಕಾಲಜಿಸ್ಟರಾದ ಮ|| ರಾ|| ಎಮ್. ಕೆ. ವೆಂಕಟರಾಯರವರಿಗೂ, ತೀರ್ಥಹಳ್ಳಿ ಮತ್ತು ಕೊಪ್ಪದ ತಾಲ್ಲೂಕಿನವರು ತೀರ್ಥಹಳ್ಳಿಯಲ್ಲಿ ಮೊಕ್ಕಾಂ ಮಾಡಿರುವ ಅಗ್ರಿಕಲ್ಚರಲ್ ಇನ್ಸ್ಪೆಕ್ಟರ್ ಮ||ರಾ||ಇ. ಎಸ್. ರಾಮಸ್ವಾಮಿ ಅಯ್ಯರವರಿಗೂ, ಬರೆದುಕೊಳ್ಳಬೇಕು.

ಈ ಇಲಾಖೆಯವರು ಔಷಧವನ್ನು ಚಿಮುಕಿಸುವ ಯಂತ್ರಗಳನ್ನೂ, ಅವುಗಳನ್ನು ಪಯೋಗಿಸುವುದಕ್ಕೆ ಜನಗಳನ್ನೂ ಒದಗಿಸುವುದಕ್ಕಾಗಿ ಬಹಳ ಹಣವನ್ನು ಖರ್ಚುಮಾಡಿರುವುದರಿಂದ, ಔಷಧಕ್ಕೆ ಆಗುವ ಖರ್ಚನ್ನು ಮಾತ್ರ ತೋಟದ ಮಾಲೀಕರು ಕೊಡಬೇಕೆಂದು ತೀರ್ಮಾನಿಸಿದೆ. ಈ ಔಷಧಗಳು ತೋಟದ ಮಾಲೀಕರಿಗೆ ಅಸಲ್ ಖರೀದಿಗೆ ಕೊಡಲ್ಪಡುತ್ತವೆ.

ಹಿಂದೆ ಹೇಳಿರುವಂತೆ ಈ ಔಷಧಗಳ ಖರೀದಿಯು ಎಕರೆ ಒಂದಕ್ಕೆ …ವೂರು ಮೂರು ರೂಪಾಯಿಗಳಾಗುತ್ತದೆ; ಐದು ರೂಪಾಯಿಗಳಿಗಿಂತ ಜಾಸ್ತಿ ಆಗುವುದೇ ಇಲ್ಲ. ತೋಟದ ಮಾಲೀಕರು ಎಷ್ಟು ಔಷಧವನ್ನು ಉಪಯೋಗಿಸಿಕೊಳ್ಳುತ್ತಾರೆಯೋ ಅಷ್ಟಕ್ಕೆಮಟ್ಟಿಗೆ ಅವರು ಹಣವನ್ನು ಕೊಡಬೇಕಾಗುತ್ತದೆ. ಈ ನಿಬಂಧನೆಗಳಿಗನುಸಾರವಾಗಿ ಅನೇಕ ತೋಟ

ಗಳ ಮಾಲೀಕರುಗಳು ತಮ್ಮ ತೋಟಗಳಲ್ಲಿ ಅರ್ಧ ಎಕರೆಯಿಂದ ಒಂದು
ಕರೆಯವರಿವಿಗೂ ಚಿಕಿತ್ಸೆ ಮಾಡಿಸಲು ಇಷ್ಟವುಳ್ಳವರಾಗಿರಬಹುದೆಂಬ ಸ
ಬಿಕೆ ಇದೆ. ಹೀಗೆ ಮಾಡಿದ್ದೇ ಆದರೆ ಇದರಿಂದಾಗತಕ್ಕ ಉಪಯೋಗವು
ವರಿಗೆ ಅನುಭವಕ್ಕೆ ಬರುತ್ತದೆ. ಔಷಧ ಚಿಮುಕಿಸುವುದರಿಂದ ಉಪಯೋ
ಗ ಉಂಟಾಗಬೇಕಾದರೆ ಮಳೆ ಬರುವುದಕ್ಕೆ ಮುಂಚಿತವಾಗಿಯೇ ಮಾಡಿ
ಬೇಕು. ಆದ್ದರಿಂದ ತಮ್ಮ ತೋಟಗಳಿಗೆ ಔಷಧವನ್ನು ಚಿಮುಕಿಸಬೇಕೆ
ದು ಇಷ್ಟವುಳ್ಳವರು ಒಡನೆಯೇ ತಮ್ಮ ಇರಾದೆಯನ್ನು ತಿಳಿಸಬೇಕು.

Government Proceedings.

ಸರ್ಕಾರಿ ಹುಕುಂಗಳು.

ನಂ. ಆರ್ ೭೭೨೫-೩೮—ಆರ್. ೨೨೭-೧೯-೨ ತಾ|| ೯—೫—೧೯೧೦.

ಮಾಗಡಿ ತಾಲ್ಲೂಕು ಬಂತ್ರಕೊಪ್ಪೆಗ್ರಾಮದ ಶಾನುಭೋಗಿ ಇನಾ
(ಸರ್ವೆ ನಂಬರು ೨ನೆ) ಜಮೀನನ್ನು ಕಾನೂನಿಗೆ ವಿರೋಧವಾಗಿ ಪರಾಧೀ
ನ ಮಾಡಿದ ವಿಚಾರದಲ್ಲಿ ಮೈಸೂರು ಮಹಾರಾಜರವರ ಸರ್ಕಾರದವ
ಮಾಡಿರುವ ಹುಕುಂ.

ಮೇಲ್ಕಂಡ ಜಮೀನನ್ನು ಸನ್ ೧೮೬೮ನೆ ಇಸವಿ ಜೂನ್ ೨೦ರಲ್ಲಿ
ಗ್ಯ ಕೆಲಸ ನೋಡುತ್ತಿದ್ದ ಶಾನುಭೋಗನು ಮತ್ತು ಅವನ ಮಗನು ಜ
ಟಿಯಾಗಿ ಕರ್ಣೀಕ್ ತಿಪ್ಪಯ್ಯನೆಂಬುವನಿಂದ ೭೫ ರೂ. ತೆಗದುಕೊಂ
ಭೋಗ್ಯ ಪತ್ರ ಬರದುಕೊಟ್ಟು ಜಮೀನಿನ ಜೋಡಿಯನ್ನು ತಾವೇ ಕ
ಡುವ ಷರತ್ತಿಗೆ ಒಪ್ಪಿ ಜಮೀನನ್ನು ಸ್ವಾಧೀನ ಮಾಡಿಕೊಟ್ಟಿದ್ದರು.
ಮೀನಿನ ಜೋಡಿಯು ಮೊಬಲಗು ಅದರ ಮೇಲಿನ ಕಂದಾಯದಷ್ಟೆ
ಗಿತ್ತು. ಜೋಡಿಯನ್ನೇನೋ ಭೋಗ್ಯದಾರನೆ ಕೊಡುತ್ತಾ ಇದ್ದದ್ದಲ್ಲ
ಜಮೀನು ಅವನ ವಶದಲ್ಲಿಯೆ ತಹಲುವರಿಗೂ ಇರುತ್ತೆ. ೧೯೦೨ರಲ್ಲಿ ಜಮೀ
ನಿನ ಗೇಣಿದಾರನು ಅದರಮೇಲೆ ಮನೆ ಕಟ್ಟಿಕೊಳ್ಳಲು ಅಪ್ಪ
ಕೇಳಿಕೊಂಡಿದ್ದರಮೇಲೆ ತನಿಖೆ ನಡಿಸಿದ ಸಂದರ್ಭದಲ್ಲಿ ಶಾನುಭೋ
ಇನಾಂತಿಯಾಗಿದ್ದ ಜಮೀನನ್ನು ಪರಾಧೀನ ಮಾಡಿದ ವಿಚಾರ ಸ್ಥಳಾಧಿ
ರಿಗಳಿಗೆ ಗೊತ್ತಾಯಿತು. ತರುವಾಯ ಸಬ್ ಡಿವಿಜನ್ ಆಫೀಸರು ಸ

ಜಮೀನನ್ನು ವಾಪಸು ತೆಗದುಕೊಂಡು ಹಾಲಿ ಕೆಲಸ ಮಾಡುವ ಶಾನು ಭೋಗನಿಂದ ಭೋಗ್ಯದಾರನಿಗೆ ೭೫ ರೂಪಾಯನ್ನು ಕೊಡಿಸಿ ಶಾನು ಭೋಗನ ಅನುಭವಕ್ಕೇನೆ ಬಿಟ್ಟು ಕೊಡುವಂತೆ ಹುಕುಂ ಮಾಡಿದರು. ಹಾಲಿ ಶಾನುಭೋಗನು ಸದರಿ ಮೊಬಲಗನ್ನು ಡಿಪಾಜಿಟ್ಟು ಕಟ್ಟಿರುತ್ತಾನೆ. ಆದರೆ ಭೋಗ್ಯದಾರನು ಅದನ್ನು ತೆಗದುಕೊಳ್ಳುವದಕ್ಕೆ ಒಪ್ಪದೆ ಭೋಗ್ಯವಾದ ಲಾಗಾಯಿತು ತಾನು ಕೊಟ್ಟಿರುವ ಜೋಡಿ ಮೊಬಲಗನ್ನೂ ಕೂಡ ಕೊಡಿಸಬೇಕೆಂದು ಕೋರುತ್ತಾನೆ. ಈ ಆರ್ಡರು ಮೇಲೆ ಅಪೀಲು ಮಾಡಲು ಸಬ್ ಡಿವಿಜನ್ ಆಫೀಸರವರ ಹುಕ್ಕುಂವನ್ನೇ ಡೆಪ್ಯುಟಿ ಕಮಿಷನರವರೂ ಕೂಡ ಮಂಜೂರು ಮಾಡಿರುತ್ತಾರೆ. ಅದರೆ ಈ ವಿಷಯದಲ್ಲಿ ರೆವಿನ್ಯೂ ಕಮಿಷನರವರಿಗೆ ೨ನೆ ಅಪೀಲು ಮಾಡಿಕೊಂಡಿದ್ದರ ಮೇಲೆ (ಡಿ) ಆಫೀಸರವರು ಭೋಗ್ಯದಾರನು ಜಮೀನನ್ನು ಬಹಳಕಾಲ ಅನುಭವಿಸಿರುವದರಿಂದಲೂ ಮತ್ತು ಜೋಡಿಯು ಪೂರ್ತಿ ಕಂದಾಯಕ್ಕೆ ಸಮಾನವಾಗಿರುವದರಿಂದಲೂ ಇನಾಂ ಹಿಡುವಳಿಯನ್ನು ತಪ್ಪಿಸಿ ಭೋಗ್ಯದಾರನಿಗೇನೆ ಖಾಯಂ ಮಾಡಬಹುದೆಂದು ಶಿಫಾರಸು ಮಾಡಿರುತ್ತಾರೆ.

೨. ಹೀಗೆ ಇನಾಂ ಜಮೀನುಗಳನ್ನು ಪರಾಧೀನ ಮಾಡುವದು ಕಾನೂನಿಗೆ ವಿರೋಧವಾಗಿರುವದು. ೧೮೩೫ರಲ್ಲಿ ಚಾಕರಿ ಇನಾಂತಿಗಳನ್ನು ಪರಾಧೀನ ಮಾಡಕೂಡದೆಂದು ಛೀಫ ಕಮಿಷನರವರ ಹುಕ್ಕುಂ ಇರುವದಲ್ಲದೆ ೧೮೭೪ನೆ ಪ್ರೋಟೆಗಿ ರೂಲ್ಸಿನಲ್ಲಿಯೂ ಇದೇ ಅಂಶವು ಸ್ಪಷ್ಟೀಕರಿಸಲ್ಪಟ್ಟಿರುತ್ತೆ. ಆದುದರಿಂದ ಪರಾಧೀನ ಮಾಡಿದಕಾಲವಾಗಲಿ ಅಥವಾ ಕಂದಾಯದಷ್ಟು ಜೋಡಿಯಾಗಿತ್ತೆಂಬ ವಿಷಯವಾಗಲಿ ಪ್ರಕೃತ ಕೇಸಿನಲ್ಲಿ ಅನ್ವಯಿಸುವದಿಲ್ಲ. ಪರಾಧೀನವು ಕಾನೂನಿಗೆ ವಿರೋಧವಾಗಿರುವದು ವ್ಯಕ್ತವಾಗಿರುವದರಿಂದ ಅದನ್ನು ಅನುಮೋದಿಸಲು ಯುಕ್ತವಾಗಿರುವದಿಲ್ಲ. ಆದ್ದರಿಂದ ಡಿಪಾಜಿಟ್ಟು ಕಟ್ಟಿರುವ ೭೫ ರೂಪಾಯನ್ನು ಭೋಗ್ಯದಾರನಿಗೆ ಕೊಟ್ಟು ಅವನಿಂದ ಜಮೀನನ್ನು ವಾಪಸು ತೆಗದುಕೊಂಡು ಹಾಲಿ ಕೆಲಸ ನೋಡುತ್ತಿರುವ ಶಾನುಭೋಗನಿಗೇನೆ ಕೊಡಬೇಕೆಂದು ಸರ್ಕಾರದವರು ಹುಕ್ಕುಂ ಮಾಡುತ್ತಾರೆ. ಭೋಗ್ಯದಾರನಿಗೆ ತಾನು ಕೊಟ್ಟ ಜೋಡಿ ಮೊಬಲಗು ಬರಬೇಕಾಗಿದ್ದರೆ, ಅದಕ್ಕಾಗಿ ಜಮೀನನ್ನೇ

ಸ್ವಾಧೀನದಲ್ಲಿ ಇಟ್ಟುಕೊಳ್ಳಲಾರನು. ಆದರೆ ತನಿಗೆ ಬರತಕ್ಕ ಹ
ಕ್ಕೋಸ್ಕರ ಸಿವಿಲ್ ಕೋರ್ಟಿನಲ್ಲಿ ದಾವೇ ಮಾಡಿಕೊಳ್ಳಬಹುದು.

II.

ಅಡಿಕೆಯ ಜತೆಗೆ ಬೇರೆ ಫಸಲುಗಳನ್ನು ಬೆಳೆಯುವ ಅಡಿಕೆ ತೋ
ಗಳಲ್ಲಿ ಅಡಿಕೆ ಸೆಸ್ಸು ಗೊತ್ತು ಮಾಡುವದಕ್ಕೋಸ್ಕರ ಆರು ಅಡಿ ಎತ
ಕ್ಕೆ ಕಮ್ಮಿ ಇಲ್ಲದ ೮೦೦ ಗಿಡಗಳುಳ್ಳ ಪ್ರದೇಶವನ್ನು ಒಂದು ಎಕರೆಯ
ಗಣಿಸತಕ್ಕದೆಂದು ಗೌರ್ನ್ಮೆಂಟಿನವರು ೧೯೦೭ನೆ ಸೆಪ್ಟೆಂಬರು ೨ನೇ
ನಂ ಆರ್. ೧೬೮೪—೯೩—ಎಲ್. ಆರ್. ೪೯೦-೦೬-೩ನೆ ಪ್ರೊಸೀಡಿಂ
ನಲ್ಲಿ ಹುಕುಂ ಮಾಡಿರುವದು ಸರಿಯಷ್ಟೆ. ಈಚೆಗೆ ರೆಪ್ರೆಸೆಂಟಿಟಿವ್
ಸೆಂಬ್ಲಿಯಲ್ಲಿ ಕೆಲವು ಮೆಂಬರುಗಳು ಗಿಡಗಳು ೧೨ ಅಡಿ ಎತ್ತರವಾಗಿ
ಳೆಯುವದಕ್ಕೆ ಮುಂಚೆ ಫಸಲು ಕೊಡುವದೇ ಇಲ್ಲವೆಂದು ಸೂಚಿಸಿದ್ದರ
ಲೆ ಗೌರ್ನ್ಮೆಂಟಿನವರು ೧೯೧೦ನೆ ಏಪ್ರಿಲ್ ೨೬ನೆ ಮನ್ನಂ ಆರ್. ೭೨೯
೧-ಎಲ್. ಆರ್. ೩೯೫-೦೯-೧ನೆ ಪ್ರೊಸೀಡಿಂಗ್ಸ್‌ನಲ್ಲಿ ಇನ್ನು ಮುಂದೆ
ಸ್ಸು ಹಾಕುವದರಲ್ಲಿ ೧೨ ಅಡಿಗೆ ಕಮ್ಮಿ ಇಲ್ಲದ ಗಿಡಗಳನ್ನೇ ಲೆಕ್ಕಕ್ಕೆ ತೆ
ದುಕೊಳ್ಳಬೇಕೆಂದು ಅಪ್ಪಣೆ ಮಾಡಿರುತ್ತಾರೆ.

Notifications.

ಇಸ್ತಿಹಾರ್ ನಾಮೆಗಳು.

ನಂ. ೧೧೪೯೪ ತಾ|| ೧೪—೫—೧೦.

ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೧೭೭ನೆ ಪ್ರಕರಣದ ಮೇ
ಚನ್ನರಾಯಪಟ್ಟಣದ ತಾ|| ಆಕ್ಟಿಂಗ್ ಅಮಲ್ದಾರ್ ಮ|| ಸಿ. ಶ್ರೀನಿವಾಸ
ಯರಿಗೆ ೧೯೧೦ನೆ ಇಸವಿ ಏಪ್ರಿಲ್ ೧೧ನೆ ತಾರೀಖು ಲಾಗಾಯಿತು ೧೨ ದಿ
ಗಳ ಪ್ರಿವಿಲೇಜ್ ರಜಾ ಕೊಟ್ಟಿರುತ್ತೆ.

೨. ಅವರ ಗೈರ್ ಹಾಜರಿಯಲ್ಲಿ ತಾಲ್ಲೂಕು ಶಿರಸ್ತೇದಾರ್ ಬ
ಗರುಡಾಚಾರ್ಯರು ತಾಲ್ಲೂಕು ಛಾರ್ಜಿನಲ್ಲಿರತಕ್ಕದ್ದು.

Occasional Notes.

ವಿವಿಧ ವೃತ್ತಾಂತಗಳು.

೧. ತೆಂಗಿನ ತೋಟಗಳಲ್ಲಿ ಗಿಡಗಳ ನಡುವೆ ಅವರೆ ಪೈರು ಇಟ್ಟು, ಅವರೆ ಗಿಡಗಳನ್ನು ಸೊಪ್ಪು ಸಹಿತ ಜಮೀನಿನಲ್ಲೇ ಉತ್ತು ಬಿಟ್ಟರೆ ತೆಂಗು ಗಿಡಗಳು ಅತಿಜಾಗ್ರತೆಯಾಗಿ ಬೆಳವಳಿಕೆ ಹೊಂದುವುವು.—ಅಗ್ರಿಕಲ್ಚರಲ್ ಅಂಡ್ ಇಂಡಸ್ಟ್ರಿಯಲ್ ಪ್ರೋಗ್ರೆಸ್, ನವಂಬರು ೧೯೦೯.

---

೨. ಗೌರ್ನ್ಮೆಂಟಿನವರು ಪೇಷಲ್ ಅಸಿಸ್ಟೆಂಟು ಕಮೀಷನರ್ ಮ|| ಬಾದಾಮಿ ಕೃಷ್ಣರಾಯರನ್ನು ಕೋ ಆಪರೇಟಿವ್ ಸೊಸೈಟಿಗಳ ಆನರೇರಿ ಆರ್ಗನೈಜರ್ ಯಾ ಗೌರವ ಸ್ಥಾಪಕರನ್ನಾಗಿ ಕಳೆದ ಏಪ್ರೆಲ್ ೨೦ನೆ ತಾರ್ಖು ಫೈ. ೫೨೪೯-೫೧-ಬಿ. ೧೯—೦೯-೪ನೆ ಹುಕುಮಿನಲ್ಲಿ ನೇಮಕರೂರು ಮಾಡಿರುತ್ತಾರೆ.

---

೩. ಬತ್ತವನ್ನು ನಾಟಿ ಮಾಡುವದರಲ್ಲಿ ಬೇರುಗಳನ್ನು ಒಂದೊಂದಾಗಿ ಹಾಕುವದು ಅಷ್ಟು ಆದಾಯಕರವಲ್ಲವೆಂತಲೂ, ಇದಕ್ಕೆ ಬದಲಾಗಿ ಎರಡೆರಡಾಗಿ ಸೇರಿಸಿ ನಾಟಿ ಮಾಡಿರುವಲ್ಲಿ ಫಸಲು ಚೆನ್ನಾಗಿರುವುದೆಂತಲೂ ತಂಜಾವೂರು ಡಿಸ್ಟ್ರಿಕ್ಟಿನ ಕೆಲವು ರೈತರ ಅನುಭವದಿಂದ ಗೊತ್ತಾಗುತ್ತದೆ.—ಅಗ್ರಿಕಲ್ಚರಲ್ ಅಂಡ್ ಇಂಡಸ್ಟ್ರಿಯಲ್ ಪ್ರೋಗ್ರೆಸ್, ನವಂಬರು ೧೯೦೯.

---

೪. ಮದರಾಸು ಆಧಿಪತ್ಯದಲ್ಲಿ ಕಳೆದ ಮಾರ್ಚಿ ಆಖೈರುವರಿವಿಗೆ ಸುಮಾರು ೫೪ ಲಕ್ಷ ಎಕರೆ ಜಮೀನು ಅಚ್ಚೆಳ್ಳು ಸಾಗುವಳಿಯಲ್ಲಿರುತ್ತೆಂತಲೂ ಈ ವಿಸ್ತೀರ್ಣವು ಹಿಂದಿನ ವರುಷಕ್ಕಿಂತ ಶೇಕಡ ೪ ರಷ್ಟು ಕಡಿಮೆಯಿದ್ದಿರುತ್ತೆಂತಲೂ ಮತ್ತು ಫಸಲು ಉತ್ಪತ್ತಿಯು ಸುಮಾರು ೫೦ ಸಾವಿರ ಟನ್ನಿನಷ್ಟು ಅಂದಾಜಾಗಿರುತ್ತೆಂತಲೂ ಮದರಾಸು ರೆವಿನ್ಯು ಬೋರ್ಡಿನವರು ಫಾಯಿಷಿ ಮಾಡಿರುತ್ತಾರೆ.

---

೫. ಮಧುರೆ ಮತ್ತು ಕೊಯಮುತ್ತೂರು ಅಗ್ರಿಕಲ್ಚರಲ್ ಅಸೋಸಿಯೇಷನ್ನುಗಳು ಭಾವಿಗಳನ್ನು ತೋಡುವ ಯಂತ್ರಗಳನ್ನು ಅನೇಕವಾಗಿ ಕೊಂಡುಕೊಂಡು ಅನುಭವಶಾಲಿಗಳಾದ ಮೇಸ್ತ್ರಿಗಳನ್ನು ನೌಕರರು ಮಾಡಿ ಅಗಿಯುವ ಕೆಲಸಗಳನ್ನು ನಡಿಸುವದರಿಂದ ಬಹಳ ಉಪಯುಕ್ತವಾದ ಕೆಲಸದಲ್ಲಿ ಪ್ರವೇಶಿಸಿರುತ್ತವೆ. ಇದುವರಿಗೆ ಹೀಗೆ ನಡಿಸಿರುವ ಅಗತೆ ಪ್ರಯತ್ನಗಳು ಬಹಳ ಸಫಲಗಳಾಗಿವೆ. ಅನೇಕ ಸ್ಥಳಗಳಲ್ಲಿ ಭಾವಿಗಳ ಹಾಲಿ ನೀರಿನ ಸರಬರಾಯಿಯನ್ನು ಸದರಿ ವಿಧಾನದಿಂದ ಇನ್ನೂ ವಿಶೇಷವಾಗಿ ಉತ್ತಮಪಡಿಸಿಕೊಳ್ಳಬಹುದು.—ಮದರಾಸು ವ್ಯವಸಾಯ ಇಲಾಖಾ ೧೯೦೮—೦೯ನೆ ಸಾಲ್ ರಿಪೋರ್ಟು.

---

೬. ಕೊಯಿಲ್ಪಟ್ಟಿ ಅಗ್ರಿಕಲ್ಚರಲ್ ಸ್ಟೇಷನ್ನಿನಲ್ಲಿ ಈರುಳ್ಳಿಗಡ್ಡೆಗಳ ಸಾಗುವಳಿಗೆ ವಿಶೇಷ ಗಮನ ಕೊಡುತ್ತಿದ್ದಾರೆ. ಟ್ಯೂಟಿಕಾರನ್ನಿನ ಆಜೂಬಾಜು ಊರುಗಳಲ್ಲಿ ಭಾವಿಗಳಿಂದ ನೀರು ಸರಬರಾಯಾಗುವ ಜಮೀನುಗಳಿಗೆ ಈರುಳ್ಳಿಯನ್ನು ಬಿತ್ತಿ ವಿಶೇಷವಾಗಿ ಜನರು ಆದಾಯವನ್ನು ಪಡಿಯುತ್ತಿರುತ್ತಾರೆ. ಸ್ಥಳದ ಗಡ್ಡೆಗಳ ಬಿತ್ತನೆಯಿಂದ ಎಕರೆ ಒಂದಕ್ಕೆ ೫೯೧೮ ಪೌಂಡುಗಳು ಆದದ್ದು ದಕ್ಷಿಣ ಆರ್ಕಾಟು ಮೊಳಿಕೆ ಬಿತ್ತನೆಯಿಂದ ಎಕರೆಗೆ ೭೪೦೦ ಪೌಂಡೂ, ಬೊಂಬಾಯಿ ಆಧಿಪತ್ಯದ ಧೂಲಿಯಾ ಯೆಂಬ ಊರಿನ ಗಡ್ಡೆಗಳ ಬಿತ್ತನೆಯಿಂದ ಎಕರೆಗೆ ೧೧,೧೨೫ ಪೌಂಡೂ ಉತ್ಪತ್ತಿಯಾಯಿತು.—ಮದ್ರಾಸ್ ವ್ಯವಸಾಯ ಇಲಾಖಾ ೧೯೦೮-೦೯ನೆ ಸಾಲಿನ ರಿಪೋರ್ಟು.

---

೭. ಸಾಗುವಳಿ ಜಮೀನುಗಳಿಗೆ ನೀರು ಹಾಯಿಸುವದಕ್ಕೋಸ್ಕರ ಆಯಿಲ್ ಇಂಜನ್‌ಗಳ ಉಪಯೋಗವು ರೂಢಿಯಲ್ಲಿ ಬರುತ್ತಿರುವದು ಸರಿಯಷ್ಟೆ. ಆದರೆ ನಿರಂತರವಾದ ಒಳ್ಳೇ ಜಲಾಶ್ರಯ, ಇದಕ್ಕೆ ತಕ್ಕ ಹಾಗೆ ವಿಸ್ತಾರವಾದ ಅಚ್ಚುಕಟ್ಟು, ಈ ಅಚ್ಚುಕಟ್ಟಿನಲ್ಲಿಯೂ ಕೂಡ ಪಂಪುಗಳನ್ನು ಇಟ್ಟರೆ ನೀರು ಸಲೀಸಾಗಿ ಓಡುವಂತೆ ಮಟ್ಟವಾಗಿಲ್ಲದೆ ಸ್ವಲ್ಪ ಇಳಿಜಾರಾಗಿರುವ ಭೂಮಿ, ನದಿಯ ದಡದ ಮೇಲೆ ಇಂಜನ್ನನ್ನು ಇಡುವ

ಕ್ಷದಲ್ಲಿ ಇದನ್ನು ಸ್ಥಾಪಿಸುವದಕ್ಕೆ ಪ್ರವಾಹ ಬಂದಾಗ ನೀರು ಹತ್ತದ
ಷ್ಟು ಎತ್ತರವಾಗಿರುವ ಒಂದು ಸ್ಥಳ ಮತ್ತು ಬಂಡವಾಳವಿರುವ ಬುದ್ಧಿ
ವಂತನಾಗಿಯೂ ಸಾಹಸಿಯಾಗಿಯೂ ಇರುವ ರೈತ, ಇಷ್ಟ್ಟು ಇದ್ದರೇನೇ
ಯಿಲ್ ಇಂಜಿನ್‌ಗಳಿಂದ ಪೂರ್ಣಪ್ರಯೋಜನವನ್ನು ಹೊಂದಲು ಸಾಧ್ಯ
ವಾಗುತ್ತದೆ.—ಬೊಂಬಾಯಿವ್ಯವಸಾಯಇಲಾಖಾ೧೯೦೪-೦೯ನೇ ಸಾಲ್‌ರಿಪೋರ್ಟು.

---

೪. ಜೋಳದ ಸಾಗುವಳಿಯಲ್ಲಿ ಬೀಜವನ್ನು ಕೂರಿಗೆಗಳ ಮೂಲಕ ಸಾ
ಲುಸಾಲಾಗಿ ಸಾಲಿನಿಂದ ಸಾಲಿಗೆ ೧೨ ಅಂಗುಲ ಬಿಟ್ಟು ಬಿತ್ತಿ ಅನಂತರ
ಬಿತ್ತದಿಂದ ಬಿತ್ತಕ್ಕೆ ೬ ಅಂಗುಲ ಅಂತರವಿರುವ ಹಾಗೆ ವಿರಳಪಡಿಸುವದೇ
ಸರ್ವ ಶ್ರೇಷ್ಠವಾದ ಕ್ರಮವೆಂತಲೂ, ಈರೀತಿ ಬಿತ್ತನೆ ಮಾಡಿ ಎಕರೆಗೆ
ಟನ್ನಿನಂತೆಹಿತ್ತಲುಗೊಬ್ಬರವನ್ನು ಹಾಕಿರಲು ಎಕರೆಗೆ ೨೪೯೧ ಪೌಂಡು
ಕಾಳು, ೬೩೪೦ ಪೌಂಡು ಕಡ್ಡಿ ಮತ್ತು ೪೫೫ ಪೌಂಡು ಹೊಟ್ಟುಉತ್ಪ
ತ್ತಿಯಾಗಿರುತ್ತೆಂತಲೂ, ಹತ್ತಿ ವ್ಯವಸಾಯದಲ್ಲಿ ಸಾಲಿನಿಂದ ಸಾಲಿಗೆ ೧೪
ಅಂಗುಲ ಬಿಟ್ಟು ಬಿತ್ತನೆ ಮಾಡುವದಕ್ಕಿಂತ ೨೪ ಅಂಗುಲ ಬಿಟ್ಟು ಬಿ
ತ್ತನೇ ಮಾಡಿ ಬಿತ್ತದಿಂದ ಬಿತ್ತಕ್ಕೆ೧೪ ಅಂಗುಲ ಅವಕಾಶವಿರುವಂತೆಸಾಲು
ಗಳಲ್ಲಿ ಬಿತ್ತಗಳನ್ನು ವಿರಳಪಡಿಸಿದರೆ ಫಸಲುತ್ಪತ್ತಿಯು ಅಧಿಕವಾಗುತ್ತ
ದೆಂತಲೂ ಧಾರವಾಡ ಫಾರಂನಲ್ಲಿ ನಡೆಸಿದ ಅಜಮಾಯಿಷಿಗಳಿಂದ ತಿಳಿದುಬ
ರುತ್ತೆ.—ಬೊಂಬಾಯಿ ವ್ಯವಸಾಯ ಇಲಾಖೆಯ ೧೯೦೪—೦೯ನೇ ಸಾಲ್ ರಿಪೋ
ರ್ಟ್.

---

೯. ಕೊಯಿಲ್ಪಟ್ಟಿ ಆಗ್ರಿಕಲ್ಚರಲ್ ಸ್ಟೇಷನ್ನಿನಲ್ಲಿ ರಾಗಿ ಮೊಳಿಕೆಗಳ
ನ್ನು ನಾಟುಹಾಕಿ ನೀರು ಕಟ್ಟಿ ಫಸಲು ಮಾಡುವದರ ಅಜಮಾಯಿಷಿಯು
ನಡೆಯುತ್ತಲೆ ಇದೆ. ಫಾರಮಿನವರ ಸಹಾಯದಿಂದ ರೈತರೂ ಕೂಡ
ಈ ವಿಧವಾಗಿ ಫಸಲು ಮಾಡುವದಕ್ಕೆ ಪ್ರಾರಂಭ ಮಾಡಿರುತ್ತಾರೆ. ಜ
ಮೀನನ್ನು ಬದುಗಳಹಾಗೆ ಮಾಡಿಕೊಂಡು ಅವುಗಳಲ್ಲಿ ಬಿತ್ತುವದರಿಂದ
ಜಾಸ್ತಿ ಫಸಲಾಗುತ್ತೆಂಬುವದು ಚೆನ್ನಾಗಿ ಗೊತ್ತಾಯಿತು. ಹೇಗಂದರೆ,
ಒಂದೆಕರೆ ಜಮೀನಿನಲ್ಲಿ ರೂಪಾಯಿ ೫೫—೪—೬ ಕೂಲಿ ಇಟ್ಟು ಸಾಧಾ

ರಣವಾದ ರೀತಿಯಲ್ಲಿ ಮೊಳಿಕೆಗಳನ್ನು ನಾಟಿಸಿ ೨೭೯೭ ಘನ ಅಡಿಯ
ಷ್ಟು ನೀರು ಕಟ್ಟಿ ೧೫೯೭ ಪೌಂಡು ರಾಗಿ ಫಸಲು ಆಗಿದ್ದದ್ದು ಬದಗಳ
ಮೇಲೆ ನಾಟುವದಕ್ಕೆ ೪೩-೩-೨ ರೂಪಾಯಿ ಕೂಲಿ ಆಗಿ ೧೬೧೧೭ ಘನ
ಅಡಿನೀರನ್ನು ಕಟ್ಟಿದ್ದರಮೇಲೆ ೧೭೩೭ ಪೌಂಡು ರಾಗಿ ಆಯಿತು. ಬೇ
ವಿನ ಹಿಂಡಿಯನ್ನು ಗೊಬ್ಬರವಾಗಿ ಉಪಯೋಗಿಸುವದರಿಂದ ಉಂಟಾಗುವ
ಪ್ರಯೋಜನವೂ ಕೂಡ ಕಂಡುಬಂತು. ಹೇಗಂದರೆ ಸದರಿ ಹಿಂಡಿ ಗೊ
ಬ್ಬರ ಹಾಕಿದ್ದರಿಂದ ಎಕರೆ ಒಂದಕ್ಕೆ ೫೦೫ ಪೌಂಡು ರಾಗಿ ಹೆಚ್ಚಾಗಿ ಬೆಳೆ
ಯಾಗಿ ರೂಪಾಯಿ ೧೦—೨—೮ ನಫೆ ಬಂತು.—ಮದರಾಸು ವ್ಯವಸಾಯ
ಇಲಾಖಾ ೧೯೦೮—೧೯೦೯ನೆ ಸಾಲ್ ರಿಪೋರ್ಟು.

———o———

೧೦. ಬೆಂಗಳೂರು ಷಹರು ಮಲ್ಲೇಶ್ವರದಲ್ಲಿ ಒಂದು ಕೋ ಆಪರೇ
ಟಿವ್ ಸೊಸೈಟಿಯು ಏರ್ಪಟ್ಟು ಕಳೆದ ಏಪ್ರಿಲ್ ಮಾಹೆಯಲ್ಲಿ ಕೋ
ಆಪರೇಟಿವ್ ಸೊಸೈಟಿಗಳ ಕಾನೂನ್ ಪ್ರಕಾರ ರಿಜಸ್ಟರ್ಮಾಡಲ್ಪಟ್ಟಿತು.

(೨.) ಮೇ ತಿಂಗಳಲ್ಲಿ ಕೋ ಆಪರೇಟಿವ್ ಸೊಸೈಟಿಗಳ ಆನರರಿ
ಆರ್ಗನೈಸರ್ ಮೆ॥ ಸಿ. ಡಿ. ರಾಮಸ್ವಾಮೈಯ್ಯನವರಿಂದ ಏರ್ಪಡಿಸಲ್ಪಟ್ಟ
ಇವರಡಿ ನಮೂದಿಸಲ್ಪಟ್ಟ ಪರಸ್ಪರ ಸಹಾಯ ಸಂಘಗಳು ಅನ್‌ಲಿಮಿಟೆಡ್
ಲೈಯಬಿಲಿಟಿ ಅಂದರೆ ಮಿತವಲ್ಲದ ಜವಾಬ್ದಾರಿ ಮೇಲೆ ರಿಜಸ್ಟರ್ ಮಾಡಲ್ಪ
ಟ್ಟಿರುತ್ತವೆ.

ಚಿಕ್ಕನಾಯಕನಹಳ್ಳಿ ತಾಲ್ಲೂಕಿನಲ್ಲಿ—

(a) ದಬ್ಬೆಗಟ್ಟದ ಪರಸ್ಪರ ಸಹಾಯ ಸಂಘ.

(b) ಮಾಲನಹಳ್ಳಿ ಪರಸ್ಪರ ಸಹಾಯ ಸಂಘ.

ತಿಪಟೂರು ತಾಲ್ಲೂಕಿನಲ್ಲಿ—

ಗೊರಗೊಂಡನಹಳ್ಳಿ ಪರಸ್ಪರ ಸಹಾಯ ಸಂಘ.

———o———

೧೧. ಚೆನ್ನಗಿರಿ ತಾ॥ ಮೇಡಗೊಂಡನ ಹಳ್ಳಿಯಲ್ಲಿ ಕಳೆದ ಫೆಬ್ರವರಿ
೧೧ನೆ ತಾರೀಖಿನ ದಿನ ಸಕರಯ್ಯ ಮತ್ತು ಬನವಳ್ಳಿ ಎಂಬುವರ ಮನೆಗಳ

ತುವೆ ಖಾಲಿ ಜಾಗಾದಲ್ಲಿ ರಾಸಿಹಾಕಿದ್ದ ಒಣಗಿದ ಜೋಳದ ಕಡ್ಡಿಗಳಿಗೆ
ಂಕಿ ಬಿದ್ದು ೧೮ ಮನೆಗಳೂ, ೧ ಎತ್ತೂ ಮತ್ತು ೨ ಕರುಗಳೂ ಸುಟ್ಟುಹೋ
ಲ್ಲದೆ ಸುಮಾರು ೬೩೦ ರೂಪಾಯಿನ ಸೊತ್ತು ನಷ್ಟವಾಯಿತೆಂದು ವರ್ತ
ಾನ ಬಂದಿರುತ್ತೆ. ಬೆಂಕಿ ಹೇಗೆ ಬಿತ್ತೊ ಗೊತ್ತಾಗುವದಿಲ್ಲ. ಈ ಅ
ಾಹುತದಿಂದ ಉಕ್ಸಾನ್ ಪಟ್ಟವರಿಗೆ ಸಹಾಯ ಕೊಡಲು ಡೆಪ್ಯುಟಿ ಕಮಿ
ನರವರು ತಕ್ಕ ಏರ್ಪಾಟುಗಳನ್ನು ಮಾಡಿರುತ್ತಾರಂತೆ.

ಈಗ ಕೆಲವು ದಿವಸಗಳಿಂದೀಚೆಗೆ ಅನೇಕ ಸ್ಥಳಗಳಲ್ಲಿ ಬೆಂಕಿಯಿಂ-
ಬಹಳ ಅನಾಹುತಗಳು ಉಂಟಾಗಿವೆ. ಗ್ರಾಮಾಂತರಗಳಲ್ಲಿ ಹುಲ್ಲು
ಾವೆಗಳನ್ನು ಹಿತ್ತಲುಗಳಲ್ಲಿಯೇ ಹಾಕುವುದೂ ಮತ್ತು ಮನೆಗಳಿಗೆ
ುಲ್ಲು ಛಾವಣಿಯನ್ನು ಹೊದ್ದಿಸುವದೂ ವಾಡಿಕೆಯುಂಟು. ಇವೇ ಬಹ
ಾಗಿ ಬೆಂಕಿಯ ಅನಾಹುತಗಳಿಗೆ ಕಾರಣವಾಗಿರುತ್ತವೆ. ಜನಗಳು
ಹುಷಾರಾಗಿ ತಮ್ಮ ಮನೆಗಳಲ್ಲಿ ದೀಪ ಹಚ್ಚಿದ ಕೂಡ್ಲೆ ಬೆಂಕಿ
ಡ್ಡಿಗಳನ್ನು ಪೂರ್ತಿಯಾಗಿ ಆರಿಸದೆ ಅಲಕ್ಷ್ಯವಾಗಿ ಬಿಸಾಡುವದರಿಂದ
ೋ ಅಥವಾ ದೀಪ ಹಚ್ಚಿದ ಹಣತೆಗಳನ್ನು ಮೈಮರೆತು ಹುಲ್ಲು ಛಾವ
ಳ ಸಮೀಪದಲ್ಲಿ ಇಡುವದರಿಂದಲೋ, ಅಥವಾ ಅಡಿಗೆ ನೀರು ಒಲೆಗ
ದ ಕಿಡಿಗಳು ಹಾರುವದರಿಂದಲೋ ಯಾವದೊ ಒಂದು ಕಾರಣದಿಂದ
ಾ ಕಷ್ಟ ನಷ್ಟಗಳಿಗೆ ಗುರಿಯಾಗುತ್ತಾರೆ. ಆದ್ದರಿಂದ ಜನಗಳು
ಕ್ಕ ಜಾಗರೂಕತೆಯಿಂದ ಇದ್ದು ಬೆಂಕಿಯ ಅವಾಂತರವನ್ನು ತಪ್ಪಿಸಿ
ೊಳ್ಳಬೇಕು.

---

೧೨. ನೆಲಗಡ್ಲೆಯನ್ನು ನೀರು ಹಾಯಿಸಿ ಬೆಳೆಯುವುದರಲ್ಲಿ ಹುಟ್ಟ
ಯ ತಾರತಮ್ಯವನ್ನು ಗೊತ್ತು ಮಾಡುವದಕ್ಕೋಸ್ಕರ ಸೆಂಟ್ರಲ್
ರ್ವಿಸಸ್‌ಗೆ ಸೇರಿದ ರಾಯಿಪುರದ ಎಕ್ಸ್ಪೆರಿಮೆಂಟಲ್ ಫಾರಂನಲ್ಲಿ ೬ ರ
ನೆಲಗಡ್ಲೆ ಕಾಯಿಗಳನ್ನು ೧೯೦೯ ಮತ್ತು ೧೯೧೦ ರಲ್ಲಿ ಅಜಮಾಯಿಷಿ
ಾಡಿದರು. ಸಾಗುವಳಿ ಖರ್ಚು ನೀರು ಸರದಿ ಸೇರಿ ಎಕರೆಗೆ ಸು
ದು ೩೦| ರೂಪಾಯಿ ಆಗಿರುತ್ತೆ. ಈ ಆರು ರಕಂಗಳಲ್ಲಿ ಸ್ಥಳದ ಕಾ

ಯಿಂದಲೇ ಹೊರಗಿನವುಗಳಿಗಿಂತ ಹೆಚ್ಚು ಫಸಲುತ್ಪತ್ತಿಯೂ ಮತು
ಆದಾಯವೂ ಬಂದಿರುತ್ತೆ.

ಫಸಲುತ್ಪತ್ತಿಯ ತಪಶೀಲುಗಳನ್ನು ಈ ಕೆಳಗೆ ನಮೂದಿಸಿರುತ್ತೆ

ನೆಲಗಡ್ಲೆ ರಖಂ.	09-10ನೆ ಸಾಲುಗಳ ಸರಾಸರಿ				ಎಕರೆಗೆ ಸರಾಸ ನಿವ್ವಳ ಆದಾಯ		
	ಹುಟ್ಟುವಳಿ.	ಬೆಲೆ.					
	ಪೌಂಡುಗಳು.	ರೂ.	ಆ.	ಪೈ.	ರೂ.	ಆ.	ಪೈ.
ವರ್ಜಿನಿಯಾ ...	1,475	93	9	6	55	7	
ಜಪಾನ್ ದೇಶದ ದಪ್ಪ ರಖಂ ...	1,600	101	9	6	63	7	
ಪಾಂಡಿಚೆರಿ ...	1,575	99	11	5	61	9	
ಮದರಾಸು ...	1,920	122	0	6	83	14	
ಮೊಜಾಂಬಿಕ್ ...	1,670	105	14	7	67	12	
ರಾಯಪುರ ಸ್ಥಳದ ರಖಂ ...	2,400	152	13	0	114	11	

(ಸೆಂಟ್ರಲ್ ಪ್ರಾವಿನ್ಸಸ್ ಅಗ್ರಿಕಲ್ಚರಲ್ ಗೆಜೆಟ್, ಫೆಬ್ರವರಿ ೧೯೧೦.)

V. B. SOOBBIAH AND SONS, PRINTERS, BANGALORE.—1910.

THE MYSORE
EVENUE & AGRICULTURAL GAZETTE.

ಲ್ಯುಂ ೪.] ಬುಧವಾರ, ೧೫ನೆ ಜೂನ್ ೧೯೧೦. [ನಂ. ೧೬.

Contents.

King Emperor's Message.

Cambodia Cotton.

Paddy Cultivation.

Lime Fruit.

Revenue Appeals.

Orders of the Revenue Commissioner.

Notifications.

Occasional Notes.

(i) Wheat-Crop Report. (ii) Spread of Agricultural Knowledge. (iii) Sale of Quinine in Post Offices. (iv) Ground-nut Crop. (v) Instruction in the use of Agricultural Implements. (vi) Co-operative Societies in Burma. (vii) Labour in Bombay Presidency. (viii) Cawnpur Sugar Works Ltd.

ಅನುಕ್ರಮಣಿಕೆ.

೧. ಇಂಡಿಯಾ ದೇಶದ ಸಾರ್ವಭೌಮರ ಶಾಸನೆ.

೨. ಕಾಂಬೋಡಿಯಾ ಹತ್ತಿ.

೩. ಭತ್ತದ ಸಾಗುವಳಿ.

೪. ನಿಂಬೇ ಹಣ್ಣಿನ ವ್ಯವಸಾಯ.

೫. ರೆವಿನ್ಯೂ ಅಪೀಲುಗಳು.

೬. ರೆವಿನ್ಯೂ ಕಮಿಷನರವರ ಹುಕುಂಗಳು.

೭. ಇಸ್ತಿಹಾರ್ನಾಮೆಗಳು.

೮. ವಿವಿಧ ವೃತ್ತಾಂತಗಳು.

(i) ಗೋಧಿ ಫಸಲಿನ ರಿಪೋರ್ಟು. (ii) ವ್ಯವಸಾಯ ಶಾಸ್ತ್ರಾಭಿವೃದ್ಧಿ. (iii) ಪೋಸ್ಟಾಫೀಸುಗಳಲ್ಲಿ ಕ್ವೈನಾ ಮಾರುವದು. (iv) ನೆಲಗಡಲೆ ಫಸಲು. (v) ವ್ಯವಸಾಯ ಯಂತ್ರೋಪಕರಣಗಳ ಉಪದೇಶ. (vi) ಬರ್ಮಾ ಪರಸ್ಪರ ಸಹಾಯ ಸಂಘಗಳು. (vii) ಬೊಂಬಾಯಾಧಿಪತ್ಯದಲ್ಲಿ ಕೂಲಿ ಕೆಲಸ. (viii) ಕಾನ್ಪೂರ್ ಷುಗರ್‌ವರ್ಕ್ಸ ಲಿಮಿಟೆಡ್.

King Emperor's Message.

ಇಂಡಿಯಾದೇಶದ ಸಾರ್ವಭೌಮರ ಶಾಸನ.

ಅತ್ಯಂತ ಘನವನ್ನೈದಿದ ಶ್ರೀಮನ್ ಮಹಾರಾಜ ಇಂಡಿಯಾ ಚಕ್ರ

ವರ್ತಿಯವರು ಇಂಡಿಯಾ ದೇಶದ ಸಂಸ್ಥಾನಾಧಿಪತಿಗಳಿಗೂ ಪ್ರಜೆಗಳಿ
ಇದರಡಿ ಕಂಡ ಲೇಖನವನ್ನು ದಯಪಾಲಿಸಿರುತ್ತಾರೆ:—

“ ಇಂಡಿಯಾ ದೇಶದ ಸಂಸ್ಥಾನಾಧಿಪತಿಗಳು ಮತ್ತು ಪ್ರಜೆಗಳಿಗ
ಅತ್ಯಂತ ಪ್ರಿಯರಾದ ನಮ್ಮ ತಂದೆಯವರ ಮುಖಕವಾದ ಮತ್ತು
ರಕ್ಷಣೀಯವಾದ ವರದದ ದೆಸೆಯಿಂದ ಘನತೆ ಹೊಂದಿದ ಈ ಪುರಾ
ರಾಜವಂಶದ ಉತ್ತರಾಧಿಕಾರಿಗಳಾದ ನಾವು ಸಿಂಹಾಸನವನ್ನೇರಿರುವ
ನಮ್ಮ ಇಂಡಿಯಾ ಸಾಂಬ್ರಾಜ್ಯದೊಳಗಿರುವ ರಾಜರುಗಳನ್ನೂ ಸಂಸ್ಥಾ
ಧಿಪತಿಗಳನ್ನೂ ನಾವು ಮಹಾರಾಜ ಚಕ್ರವರ್ತಿಯವರಾಗಿ ಅಭಿವಂ
ತ್ತೇವೆ. ಈ ಸಂದರ್ಭದಲ್ಲಿ ಇಂಡಿಯಾ ದೇಶದಲ್ಲಿರುವ ನಾನಾ ಜನಾಂ
ವರೂ, ಪಂಗಡಗಳವರೂ, ಮತಸ್ಥರೂ ಸಹಾ ಸಾರ್ವಭೌಮಪ್ರಭುತ
ವಿಷಯದಲ್ಲಿ ರಾಜಭಕ್ತಿಯನ್ನೂ, ಆ ಪ್ರಭುತ್ವವನ್ನು ವಹಿಸಿರುವವ
ಷಯದಲ್ಲಿ ಪ್ರೀತಿವಿಶ್ವಾಸಗಳನ್ನೂ ಬಹುಪ್ರಕಾರವಾಗಿ ಮನಸ್ಸು ಕ
ವಂತೆ ತೋರ್ಪಡಿಸಿರುವ ಭಾಗದಲ್ಲಿ ನಾವು ತಮ್ಮಗಳೆಲ್ಲರನ್ನೂ ಮನ
ರ್ವಕವಾಗಿ ವಂದಿಸುತ್ತೇವೆ. ಪೂಜ್ಯಚರಿತರಾದ ವಿಕ್ಟೋರಿಯಾ ಮ
ರಾಜ್ಞಿಯವರು ಸನ್ ೧೮೫೮ನೆ ಇಸವಿಯಲ್ಲಿ ಸ್ವತಃ ರಾಜ್ಯಭಾರವನ್ನು
ಹಿಸಿದಾಗ ಇಂಡಿಯಾ ದೇಶದ ಪ್ರಜೆಗಳಿಗೂ ಸಾಮಂತ ಸಂಸ್ಥಾನಾಧಿಪತಿ
ಗೂ ಸಹಾ ಪ್ರಸಿದ್ಧಪತ್ರಿಕೆಯನ್ನು ದಯಪಾಲಿಸಿದರು ; ಐವತ್ತು ಸ
ತ್ಸರಗಳ ತರುವಾಯ ಆ ಮಹಾರಾಜ್ಞಿಯವರ ಘನಹೊಂದಿದ ಪುತ್ರ
ಗೌರವಭಾಜನರೂ ಪ್ರಿಯತಮರೂ ಆದ ನಮ್ಮ ತಂದೆಯವರು ಆ ವ
ವಿಷಯದ ಜ್ಞಾಪಕಾರ್ಥವಾಗಿ ತಮ್ಮಗಳಿಗೆ ಪ್ರಸಿದ್ಧಪತ್ರಿಕೆಯನ್ನು
ಯಪಾಲಿಸಿದರು. ಸಾರ್ವಭೌಮಪ್ರಭುತ್ವದಲ್ಲಿ ಅವಲಂಬಿಸಲ್ಪಡುತ್ತಿ
ವ ಉದಾರವಾದ ಮತ್ತು ದಯಾಪೂರಿತವಾದ ಭಾವನೆಗೆ ಇವೇ ಶಾಸನ
ಪವಾಗಿವೆ ; ಈ ಭಾವನೆಯನ್ನೇ ಮುಂದೆ ನಮ್ಮ ಯಾವತ್ಕಾಲದಲ್ಲಿ
ವೂ ನಾವೂ ಸಹಾ ಪ್ರಾಮಾಣಿಕವಾಗಿ ಅನುವರ್ತಿಸಲುದ್ಯುಕ್ತರಾಗಿರುವೆ
ಕೀರ್ತಿಶೇಷರಾದ ಚಕ್ರವರ್ತಿಯವರು ಇಂಡಿಯಾ ದೇಶಕ್ಕೆ ಹಿಂದೆ ಸ
ಚಿತ್ತೈಸಿದ್ದಂತೆಯೇ ನಾವೂಕೂಡ ಅವರ ಅಪ್ಪಣೆಯಪ್ರಕಾರ ನ
ಪಟ್ಟಮಹಿಷಿಯೊಡನೆ ಐದು ವರ್ಷಗಳ ಹಿಂದೆ ಇಂಡಿಯಾ ದೇಶಕ್ಕೆ ಚಿತ್ತ

ದ್ದೆವು. ಆ ವಿಸ್ತಾರವಾದ ದೇಶದೊಳಗಿರುವ ಚರಿತ್ರಪ್ರಸಿದ್ಧವಾದ
ರಾಷ್ಟ್ರರಾಜ್ಯಗಳನ್ನೂ ನಮ್ಮ ನಾಗರಿಕತೆಗಿಂತಲೂ ಪುರಾತನವಾದ ನಾಗ
ರಿಕತೆಯನ್ನು ಪ್ರಕಟಿಸುವ ವಿಶೇಷ ಚಿನ್ಹೆಗಳನ್ನೂ, ಪುರಾತನವಾದ ಆ
ಚಾರವ್ಯವಹಾರಗಳನ್ನೂ, ದೇಶೀಯಪ್ರಭುಗಳನ್ನೂ, ನಾನಾ ಜನಾಂಗದ
ವರನ್ನೂ, ನಗರಗಳನ್ನೂ, ಪಟ್ಟಣಗಳನ್ನೂ, ಗ್ರಾಮಗಳನ್ನೂ ಸ್ವತಃ
ನೋಡಿ ಪರಿಚಯಮಾಡಿಕೊಂಡೆವು. ಅತ್ಯಾಶ್ಚರ್ಯದಿಂದೊಡಗೂಡಿದ ಆ
ದೇಶ ಸಂಚಾರದಲ್ಲಿ ನಾವು ನೋಡಿದ ವಿಶೇಷಗಳೂ, ಅಲ್ಲಿನವರ ಪ್ರೀತಿವಿಶ್ವಾ
ಸಗಳೂ, ಈಗಲೂ ಪ್ರತ್ಯಕ್ಷವಾಗಿವೆ; ಇವು ಎಂದೆಂದಿಗೂ ಮರೆತುಹೋ
ಗುವುದೂ ಇಲ್ಲ, ಮಲಿನವಾಗುವುದೂ ಇಲ್ಲ. ನಾವು ಮುಂದೆ ನಡೆಸಬೇ
ಕಾಗಿರುವ ಅತ್ಯಂತ ಶ್ರಮಪ್ರದವಾದ ಮಹಾಕಾರ್ಯಗಳಲ್ಲಿ ತಾವುಗಳೆಲ್ಲ
ರೂ ಭಕ್ತಿಪುರಸ್ಸರವಾಗಿಯೂ, ಉತ್ಸಾಹಭರಿತರಾಗಿಯೂ ಸಹಕಾರಿಗಳಾ
ಗುವಿರೆಂದು ದೃಢವಾಗಿ ನಂಬಿರುತ್ತೇವೆ; ಇಂಡಿಯಾ ದೇಶದ ಕ್ಷೇಮಾಭಿ
ವೃದ್ಧಿಯಲ್ಲಿ ಸದಾಕಾಲವೂ ಅಂತಃಕರಣವಿಡುವುದೇ ನಮ್ಮ ಪ್ರಭುತ್ವದ
ಮುಖ್ಯೋದ್ದೇಶವಾಗಿರುವುದರಿಂದ ತಾವುಗಳೂ ಸಹಾ ಆ ವಿಷಯದಲ್ಲಿ
ಕೇವಲ ಆದರದಿಂದ ಸಹಾಯ ಮಾಡುವಿರೆಂದು ಸಂಪೂರ್ಣ ಭರವಸೆಯು
ಳ್ಳವರಾಗಿರುತ್ತೇವೆ."

Cambodia Cotton.

ಕಾಂಬೋಡಿಯಾ ಹತ್ತಿ.

ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ವ್ಯವಸಾಯ ಶಾಸ್ತ್ರವನ್ನು
ಬೋಧಿಸುತ್ತಿರುವ ಮ॥ ನರಸಿಂಹೈಂಗಾರ್ರವರು ಕಾಂಬೋಡಿಯಾ ಹತ್ತಿ ಬೀಜ
ವನ್ನು ಸದರಿ ಸ್ಕೂಲುಫಾರಮಿನಲ್ಲಿ ಬಿತ್ತಿ ಅಜಮಾಯಿಷಿ ಮಾಡುವದಕ್ಕಾ
ಗಿ ತರಿಸಿಕೊಡಬೇಕೆಂದು ಕೇಳಿಕೊಂಡದ್ದರ ಮೇಲೆ ರೆವಿನ್ಯೂ ಕಮಿಷನರ
ವರು ಮದರಾಸು ಡೆಪ್ಯೂಟಿ ಡೈರೆಕ್ಟರ್ ಆಫ್ ಅಗ್ರಿಕಲ್ಚರವರಿಗೆ (Deputy
Director of Agriculture) ಬರದು ತರಿಸಿಕೊಟ್ಟ ಸಂದರ್ಭದಲ್ಲಿ ಡೈ
ರೆಕ್ಟರವರು ಸದರಿ ಬೀಜದ ಸಾಗುವಳಿ ವಿಷಯವಾಗಿ ಕೆಳಗೆ ವಿವರಿಸಿರುವ
ಅಂಶಗಳನ್ನು ತಿಳಿಸಿರುತ್ತಾರೆ.

ತಿನ್ನುವೆಲ್ಲಿಯಲ್ಲಿ ಇದುವರಿಗೆ ಬಾಗಾಯಿತು ಜಮೀನುಗಳಲ್ಲಿ ಹೊಗೆ
ಸೊಪ್ಪು, ರಾಗಿ, ಮೆಣಸಿನಕಾಯಿ ಮುಂತಾದವುಗಳನ್ನು ಸಾಗುವಳಿ ಮ
ಡುತ್ತಿದ್ದದ್ದು ಬಿಟ್ಟು ಕಾಂಬೋಡಿಯಾ ಹತ್ತಿಯನ್ನು ಬೆಳೆಯುವ
ವಾಡಿಕೆಗೆ ಬಂದು ಇರುತ್ತೆ. ಇದಕ್ಕೆ ಕಾರಣವೇನಂದರೆ, ಮಳೆಗಳಿಲ್ಲದ ಕ
ಲದಲ್ಲಿ ಜಮೀನಿಗೆ ತಿಂಗಳಿಗೆ ಒಂದೆರಡುಸಲ ನೀರು ಹಾಯಿಸುವದಕ್ಕೆ ತಗ
ವ ಖರ್ಚು ಹೊರ್ತು ಸಾಧಾರಣವಾಗಿ ಖುಷ್ಕಿ ಜಮೀನಿನಲ್ಲಿ ಹತ್ತಿ ಬ
ಯುವದಕ್ಕೆ ತಗಲುವ ಖರ್ಚೆ ಬಾಗಾಯಿತು ಜಮೀನಿನಲ್ಲಿ ಕಾಂಬೋ
ಯಾ ಹತ್ತಿಯನ್ನು ಬೆಳೆಯುವದಕ್ಕೂ ತಗಲುವದು.

ಚನ್ನಾಗಿ ಆಬಾಬಿಗೆ ತಂದು ಗೊಬ್ಬರ ಹಾಕಿದ ಜಮೀನಿನಲ್ಲಿ ಸಾ
ರಣವಾಗಿ ಎಕರೆಯೊಂದಕ್ಕೆ ೧೦೦—೧೨೫ ಪೌಂಡು ಹತ್ತಿಯನ
ರೈತರು ಬೆಳೆಯುತ್ತಿದ್ದಾರೆ. ಕೆಲವು ಕಡೆ ಎಕರೆ ಒಂದಕ್ಕೆ ೨೦೦ ಪೌ
ಡುಗಳು ಬೆಳೆ ತೆಗದಿದ್ದಾರೆಂದೂ ಗೊತ್ತಾಗಿದೆ. ಈ ಜಾತಿಹತ್ತಿಗೆ ಮ
ಟಿಯೊಂದಕ್ಕೆ(೨೪೦ ಪೌಂಡು)ಸಾಧಾರಣ ಹತ್ತಿಗಿಂತರೂ ೫—೦—೦ ಜ
ಸ್ತಿಯಾಗಿ ಖರೀದಿ ದೊರೆಯುತ್ತೆ. ಹೀಗೆ ಜಾಸ್ತಿ ಬೆಲೆ ಬಾಳುವದಕ
ಕಾರಣವೇನಂದರೆ, ೫೦೦ ಪೌಂಡು ಬಿಡಿಸಿದ ಹತ್ತಿ ಒದಗುವದಕ್ಕೆ ಬಿಡಿಸ
ಇರುವ ಸ್ಥಳದ ಹತ್ತಿ ೨,೦೦೦ ಪೌಂಡಾಗಬೇಕಾದರೆ ಇಷ್ಟೆ ಒದಗುವದಕ
ಕಾಂಬೋಡಿಯಾ ಹತ್ತಿ ಬಿಡಿಸದೆ ಇರುವದು ೧೫೦೦ ಪೌಂಡು ಆದರೆ ಸಾಕ
ಗಿರುತ್ತೆ. ಇದಲ್ಲದೆ ತಿನ್ನುವೆಲ್ಲಿ ಡಿಸ್ಟ್ರಿಕ್ಟ್ ಹತ್ತಿ ಕಾರಖಾನೆಗಳಲ್ಲಿ ಕಾ
ಬೋಡಿಯಾ ರಖಮಿಗೆ ಖಂಡಿ ಒಂದಕ್ಕೆ ಸಾಧಾರಣ ಹತ್ತಿಗೆ ಕೊಡುವ
ಕ್ಕಿಂತ ೫—೦—೦ ರೂ|| ಜಾಸ್ತಿ ಖರೀದಿ ಕೊಡುತ್ತಾರೆ.

ಕಾಂಬೋಡಿಯಾ ಹತ್ತಿಯ ಸಾಗುವಳಿಯು ಅತಿ ಸುಲಭ. ನೀರ
ಬಸಿದು ಹೋಗುವ ಹಾಗೆ ಇರುವ ಎಂಥಾ ಜಮೀನಿನಲ್ಲಿಯೇ ಆಗಲಿ ಚನ್ನಾ
ಗಿ ಗೊಬ್ಬರ ಹಾಕಿದರೆ ಒಳ್ಳೇ ಬೆಳೆ ಆಗುತ್ತೆ. ಜಮೀನನ್ನು ಚನ್ನಾ
ಉತ್ತು ಸ್ಥಳೀಯ ಬೀಜವನ್ನು ಬಿತ್ತುವ ಕಾಲದಲ್ಲಿಯೇ ಈ ರಖಮ ಬೀ
ವನ್ನು ಕೈಯಿಂದ ಚೆಲ್ಲಿ ಆಮೇಲೆ ಹಗುರವಾಗಿರುವ ನೇಗಲಿಂದ ಉತ್ತ

ೀಜವು ಮಣ್ಣಿನಿಂದ ಮುಚ್ಚಲ್ಪಡುವದು. ಹೀಗೆ ಚೆಲ್ಲುವದಕ್ಕೆ ಒಂದೆಕ
ೆ ಹತ್ತು ಪೌಂಡು ಬೀಜವಾದರೆ ಸಾಕು. ಬೀಜ ಬಿತ್ತಿದ್ದಾದ ಮೇಲೆ
ಮೀನಿಗೆ ನೀರನ್ನು ಕಟ್ಟಬೇಕು. ಮೊಳಕೆ ಹೊರಟು ಸಸಿಗಳು ಎರಡೆ
ಲೆಗಳನ್ನಿಡುತ್ತಲೆ ಕೈಯಿಂದ ಕಳೆಯನ್ನು ಕಿತ್ತು ಮೇಲ್ಭಾಗದ ಮಣ್ಣ
್ನು ಕೆದರಬೇಕು. ಸಸಿಗಳು ಒಂದು ಗೇಣು ಎತ್ತರವಾಗುತ್ತಲೆ ಸಸಿ
ಂದ ಸಸಿಗೆ ಎರಡಡಿ ಅಂತರವಿರುವಂತೆ ಹತ್ತಿರವಾಗಿರುವವುಗಳನ್ನು
ತ್ತುಹಾಕಬೇಕು. ಜಮೀನಿಗೆ ಚನ್ನಾಗಿ ಗೊಬ್ಬರ ಹಾಕಿದ್ದಲ್ಲಿ ಸಸಿ
ಂದ ಸಸಿಗೆ ೩|| ಅಡಿಯಿಂದ ೪ ಅಡಿವರಿಗೂ ಅಂತರವಿರಬಹುದು. ಹ
್ತಿರತ್ತರ ಬೆಳದಿರುವವುಗಳನ್ನು ಕಿತ್ತುಹಾಕದೇ ಇದ್ದಲ್ಲಿ ಸಸಿಗಳು ಒತ್ತಾ
ಬೆಳೆಯುತ್ತವೆ. ಕೊಂಬೆಗಳು ಕೇವಲ ಕೃಶವಾಗುವದರಿಂದ ದಪ್ಪವಾಗಿ
ತುವ ಕಾಯಿಗಳನ್ನು ಹೊರಲಾರದೆ ಹೋಗುವವು. ಸಸಿಗಳು ಜಮೀ
್ನೆಲ್ಲಾ ಮುಚ್ಚಿಕೊಳ್ಳುವಷ್ಟು ಬೆಳೆಯುವದರೊಳಗಾಗಿ ಇನ್ನೊಂದು
ರಿ ಮೇಲಿನ ಮಣ್ಣನ್ನು ಕೆದರುವದು ಒಳ್ಳೇದು. ಗಿಡಗಳ ನೆರಳು ಆಮೇ
ಬೀಳುವದರಿಂದ ಕಳೆ ಬೀಳುವದಕ್ಕೆ ಅವಕಾಶಕೊಡುವದಿಲ್ಲ. ಗಿಡಗಳಿಗೆ
ರಶ್ಯವಿದ್ದ ಹೊರ್ತು ನೀರನ್ನು ಹಾಯಿಸಕೂಡದು. ಗಿಡಗಳಲ್ಲಿ ಕಾಯಿ
ು ಒಡೆಯುವದಕ್ಕೆ ಪ್ರಾರಂಭವಾಗುತ್ತಲೆ ಮೊದಲು ಸಾರಿ ಹತ್ತಿ ಬಿಡಿಸಿ
್ದಿಗುವವರಿಗೂ ನೀರನ್ನು ಕಟ್ಟಕೂಡದು. ಹೀಗೆ ಮೊದಲಿನ ಫಸಲನ್ನು
ದುಕೊಂಡಮೇಲೆ ಪುನಃ ನೀರನ್ನು ಕಟ್ಟುತ್ತಾಬಂದರೆ ಎರಡನೇ ಸಾರಿ
ಡಿಗಳು ಹುಪ್ಪ ಕಾಯಿ ಬಿಡುವವು. ಕಾಯಿಗಳು ದೊಡ್ಡವುಗಳಾಗಿ ಬಿಡು
ದರಿಂದಲೂ ಮತ್ತು ಕಾಯಿಗಳು ಚನ್ನಾಗಿ ಹೊಡೆಯುವದರಿಂದಲೂ ಹ
ಯನ್ನು ಬಿಡಿಸಿಕೊಳ್ಳುವದು ಅತಿ ಸುಲಭವಾಗಿರುತ್ತೆ. ಸಾಧಾರಣ
ಗಿ ಒಬ್ಬ ಮನುಷ್ಯನು ದಿನ ಒಂದಕ್ಕೆ ೧೦೦ ರಿಂದ ೧೨೫ ಪೌಂಡುವರಿಗೆ
ತಗಳಿಂದ ಹತ್ತಿಯನ್ನು ಬಿಡಿಸಿಕೊಳ್ಳಬಹುದು. ಮುಖ್ಯವಾಗಿ ಭಾವಿ
ಿರತಕ್ಕ ಜಮೀನುಗಳಲ್ಲಿ ಧಾನ್ಯಗಳ ಫಸಲುಗಳನ್ನಿಡುವದಕ್ಕೆ ನೀರಿನ
ಫರಾಜು ಸಾಲದೆ ಇದ್ದರೆ ಕಾಂಬೋಡಿಯಾ ಹತ್ತಿಯನ್ನು ಬೆಳೆಯುವ
ಬಹಳ ಅನುಕೂಲವಾಗಿರುತ್ತದೆ.

Paddy.

ಬತ್ತ.

ಮದರಾಸು ವ್ಯವಸಾಯ ಇಲಾಖಾ ೧೯೧೪—೧೫ನೆ ಸಾಲ್ ರಿಪೋ
ರ್ಟಿನಲ್ಲಡಗಿರುವ ಅನೇಕ ಅಂಶಗಳಲ್ಲಿ ಬತ್ತದ ವಿಷಯಕವಾದ್ದು ಒ
ಗಿರುತ್ತದೆ. ಈ ಪೈರಿನ ಬಿತ್ತನೆ, ಬೀಜದ ಚುನಾವಣೆ ಸಾಗುವಳಿ ಕ
ಮೊದಲಾದ ಭಾಗಗಳಲ್ಲಿ ನಡೆದ ಅನೇಕ ಉಪಯುಕ್ತವಾದ ಅಜಮಾ
ಷಿಗಳ ಫಲಿತಾಂಶಗಳು ಸದರಿ ರಿಪೋರ್ಟಿನಲ್ಲಿ ಘಾಯಿಷ್ ಮಾಡಲ್ಪಟ್ಟಿ
ತ್ತವೆ. ಅವು ಯಾವುವೆಂದರೆ.

(೧) ಬತ್ತದ ನಾಟಿಗಳನ್ನು ಒತ್ತಾಗಿ ಹಾಕುವುದಕ್ಕೆ
ದಲಾಗಿ ನಾಟಿಯಿಂದ ನಾಟಿಗೆ ಕೊಂಚ ಸ್ಥಳಬಿಟ್ಟು ಬಿಟ್ಟು ಹಾಕುವ
ರಿಂದ ಸಸಿಯು ಚೆನ್ನಾಗಿ ಬಲಿತು ಪೂರ್ತಿಯಾಗಿ ಕವಲುಗಳು ಬಿಡುತ್ತ
ಹೀಗೆ ಸಸಿಗಳ ನಡುವೆ ಬಿಟ್ಟಿರುವ ಅಂತರವನ್ನನುಸರಿಸಿ ಸಸಿಗಳಲ್ಲಿ
ಲೊಡೆಯುವ ಶಕ್ತಿಯು ಹೆಚ್ಚು ಕಡಿಮೆ ಯಾಗುತ್ತದೆ.

(೨) ೨—೩ ಸಸಿಗಳನ್ನು ಕೂಡಿಸಿ ನಾಟುವದಕ್ಕೆ ಬದಲ
ಒಂದೊಂದೇ ನಾಟುವುದರಿಂದ ಹೊರವಾದ ಫಸಲು ಬರುತ್ತದೆ. ಮತ್ತ
ಈ ಫಸಲಿನಿಂದ ಬೀಜಗಳನ್ನು ಚುನಾಯಿಸಿಕೊಂಡು ಬಿತ್ತನೆ ಮಾಡಿ
ದ ಫಸಲಿನಿಂದ ಪುನಃ ಬಿತ್ತವನ್ನು ಚುನಾಯಿಸಿಕೊಂಡು ಮುಂದಿನ ವ
ಗೆ ಉಪಯೋಗಿಸಿಕೊಳ್ಳುವದು. ಈ ಪ್ರಕಾರವಾಗಿ ಬೀಜದ ಚುನಾವ
ಮಾಡುತ್ತಾಬಂದರೆ ಧಾನ್ಯದ ರಖಂ ಕೂಡ ಅತಿಜಾಗ್ರತೆಯಾಗಿ ಉತ್ತ
ಪಡುವದು. ಅಲ್ಲದೆ ಹೀಗೆ ಒಂದೊಂದೇ ಪೈರನ್ನು ನಾಟುವುದರಿಂದ
ತ್ತದ ಖರ್ಚೂಕೂಡ ಶಾನೆ ಕಡಿಮೆಯಾಗಿ ಹಾಲಿ ರೂಢಿಯಲ್ಲಿರುವ
ಬಿತ್ತವು ವಿಶೇಷ ಹಲಾಕು ಆಗುವದು ತಪ್ಪುತ್ತದೆ. ಈ ಪ್ರಕಾರ ಎ
ಗೆ ಸುಮಾರು ೯॥ ಸೇರು ಬತ್ತ ಸಾಕಾಗುತ್ತದೆ. ಸಾಮಾನ್ಯವಾಗಿ ಹಾ
ಎಕರೆಗೆ ೩೬ ಸೇರು ಬತ್ತವನ್ನು ಉಪಯೋಗಿಸುವುದುಂಟು. ಈ ಅ
ಗಳನ್ನು ತಿಳಿದು ಆಗಲೆ ತಂಜಾವೂರು ತಿನ್ನವಲ್ಲಿ ಡಿಸ್ಟ್ರಿಕ್ಟುಗಳ ರೈತ
ಈ ಹೊಸ ಮಾರ್ಗವನ್ನು ವಿಶೇಷವಾಗಿ ರೂಢಿಸುತ್ತಿರುವರು.

(೩) ಸೊಪ್ಪಿನ ಗೊಬ್ಬರಕ್ಕಾಗಿ ಬತ್ತದ ಗದ್ದೆಗಳಲ್ಲಿ ಹೆಸರು, ದ್ದು, ಕಡ್ಲೆ ಮೊದಲಾದ ದ್ವಿದಳ ಧಾನ್ಯಾದಿಗಳನ್ನು ಬೆಳೆಯುವದು ಸ ರಿಷ್ಟೆ. ಈ ಶ್ರೇಷ್ಟ ಪದ್ಧತಿಯನ್ನು ಇನ್ನೂ ಉತ್ತಮ ಪಡಿಸಲು ಸಾ ವಾದೀತೆ ಎಂಬ ಉದ್ದೇಶದಿಂದ ಅಜಮಾಯಿಷಿಗಳು ನಡೆದವು.

(೪) ಹಗರಿ ಫಾರಂನಲ್ಲಿ ಹತ್ತಿ ಬೆಳೆಯುವ ಕಪ್ಪು ಭೂಮಿಯಲ್ಲಿ ಸಂಬೆ, ಸಣಬು ನಾರು, ಹುರಳಿ ಮುಂತಾದ ಸೊಪ್ಪಿನ ಗೊಬ್ಬರವಾಗುವ ರುಗಳು ಬಹಳ ಚೆನ್ನಾಗಿ ಬಂದರೂ ಇವನ್ನು ಗೊಬ್ಬರಕ್ಕಾಗಿ ಭೂಮಿ ಲ್ಲೇ ಉತ್ತು, ಕೂಡಲೆ ಬತ್ತವನ್ನು ಚೆಲ್ಲಿದ್ದರಲ್ಲಿ ಪೈರು ಕೆಟ್ಟು ಹೋ ತು.

(೫) ಕಾಡು ನೀಲಿ ಸೊಪ್ಪಿನ ಗೊಬ್ಬರವು ಬತ್ತದ ಪೈರಿಗೆ ಬ ಪ್ರಯೋಜನ ಕಾರಿಯೆಂದು ಗೊತ್ತಾಗುವುದು.

(೬) ತಯಾರಿಸಿದ ಗೊಬ್ಬರಗಳಲ್ಲಿ (Artificial Manures) ಟ್ರೋಟಾಷ್" ಉಪ್ಪೇ (Potash) ಬತ್ತದ ಪೈರಿಗೆ ಮುಖ್ಯವಾಗಿ ಬೇಕಾ ಪದಾರ್ಥವೆಂದು ತಿಳಿಯಬರುತ್ತೆ.

(೭) ಬತ್ತದ ಗದ್ದೆಗೆ ಹಳೆಗ್ರಾಮ ನತ್ತದ ಮಣ್ಣು ಒಳ್ಳೇ ಗೊ ರ. ಇದು ಬೇಕಾದ ಹಾಗೆಲ್ಲಾ ದೊರಕುವದು ಕಷ್ಟ. ಆದಕಾರಣ ಇದ ಬದಲಾಗಿ ಪ್ರೋಟಾಷು ಉಪ್ಪನ್ನು ಉಪಯೋಗಿಸಬಹುದು.

(೮) ಬತ್ತದ ಪೈರನ್ನು ಸೆಪ್ಟಂಬರು ಡಿಶಂಬರು ಮಧ್ಯೆ ಇಡುವು ಲ್ಲಿ ವ್ಯರ್ಥವಾಗಿ ಪೈರಿನ ಬೆಳವಳಿಕೆ ಕಾಲವು ದೀರ್ಘಕ್ಕೆ ಬೀಳುವದೇ ರತು, ಪೈರನ್ನು ಮುಂದಾಗಿಟ್ಟ ಮಾತ್ರಕ್ಕೆ ಫಸಲೇನೋ ಮುಂಚಿತ ಕಟಾವಿಗೇನೂ ಬರುವದಿಲ್ಲ. ಹೀಗೆ ಅಧಿಕಕಾಲ ಹಿಡಿಯುವುದರಿಂದ ೂ ವೃಥಾ ಹೆಚ್ಚು ಖರ್ಚಾಗುವದು. ಇದಕ್ಕೆ ಬದಲಾಗಿ ಜನವರಿ ಹೆಯಲ್ಲಿ ಬಿತ್ತನೆ ಮಾಡಿದರೆ ಮೇಲ್ಕಂಡ ಪ್ರತಿಕೂಲಗಳು ತಪ್ಪುವುದು. ಾಗ್ಯೂ ಶಪ್ಟಂಬರಿಂದ ಡಿಶಂಬರು ವರೆಗೆ ಗದ್ದೆಯನ್ನು ಸುಮ್ಮನೆ ಖಾಲಿ

ಬಿಡುವದಕ್ಕಿಂತಲೂ ಈ ಮೂರು ತಿಂಗಳಲ್ಲಿ ಕಟಾವಿಗೆ ಬರುವಂಥಾ ರ... ಬತ್ತವನ್ನು ಹುಡುಕಿ ಬೆಳೆಯುವದಕ್ಕೆ ಪ್ರಯತ್ನ ಪಡಬಹುದು.

(೯) ಹಗರಿ ಫಾರಂನಲ್ಲಿ ಹತ್ತಿ ಬೆಳೆಯುವ ಕಪ್ಪು ಭೂಮಿಯ... ನೀರು ಹಾಯಿಸಿ ಬೆಳದ ಬತ್ತದ ಪೈರು ಚೆನ್ನಾಗಿ ಬರಲಿಲ್ಲ.

Lime Fruit *

ನಿಂಬೆ ಹಣ್ಣು.

ಸಿಸಲಿ ದ್ವೀಪದಲ್ಲಿ ನಿಂಬೆ ಹಣ್ಣನ್ನು ವಿಶೇಷವಾಗಿ ಬೆಳೆಯುತ್ತಾರ... ಇಲ್ಲಿ ದೊರೆಯುವಂಥಾ ಶ್ರೇಷ್ಠವಾದ ಹಣ್ಣು ಮತ್ತೆಲ್ಲಿಯೂ ಸಿಕ್ಕುವು... ಲ್ಲವಂತೆ. ಖರೀದಿಯೂ ಕೂಡ ಬಹಳ ಅಗ್ಗವಾಗಿರುವದೂ ಅಲ್ಲ... ನಿಂಬೆ ಹಣ್ಣಿನ ವ್ಯವಸಾಯದಿಂದ ಇಲ್ಲಿನವರು ಹಣಮಾಡುವ ಹಾಗೆ ಮ... ಲ್ಲಿಯೂ ಮಾಡುವುದಿಲ್ಲ. ನಿಂಬೆ ವ್ಯವಸಾಯವೇ ಸಿಸಲಿಯ ರೈತರ ಮು... ಖ್ಯವಾದ ಜೀವನೋಪಾಯವಾಗಿರುವುದು. ಹಣ್ಣಿನಿಂದ ರಸವನ್ನು ತೆಗೆ... ವ್ಯಾಪಾರ ನಡೆಸುವದೂ ಉಂಟು. ರಸವನ್ನು ಪರಿಶೋಧಿಸಿ ಜಾಡಿಗಳಲ್ಲಿ ... ರ್ತಿಮಾಡಿ ಇಂಗ್ಲೆಂಡು ಮುಂತಾದ ರಾಜ್ಯಗಳಿಗೆ ರಫ್ತು ಮಾಡುತ್ತಾರ... ೧,೯೦೭ರಲ್ಲಿ ೩೪ ಲಕ್ಷ ರೂಪಾಯಿ ಬೆಲೆಯಾಗುವ ರಸವು ಈ ದ್ವೀಪದಿಂದ ... ನ್ಯದೇಶಗಳಿಗೆ ಕಳುಹಿಸಲ್ಪಟ್ಟಿರುತ್ತೆ. ಇದೂ ಅಲ್ಲದೆ ರಸವನ್ನು ಕಾ... ಒಂದು ವಿಧವಾದ ಉಪ್ಪನ್ನು ತಯಾರು ಮಾಡುತ್ತಾರೆ. ಈ ಉಪ್ಪನ್ನು... ಅಡಿಗೆಗಳಲ್ಲಿ ಉಪಯೋಗಿಸಿದರೆ ಒಳ್ಳೇ ರುಚಿಯನ್ನು ಕೊಡುತ್ತದೆ. ಆದ... ರಿಂದಲೇನೆ ಈ ಉಪ್ಪಿಗೆ ಯೂರೋಪು ರಾಜ್ಯಗಳಲ್ಲಿ ಬಹಳ ಗಿರಾಕಿ ಹ... ಟ್ಟಿರುತ್ತದೆ. ೧೯೦೭ರಲ್ಲಿ ಇಂಗ್ಲೆಂಡು ದೇಶ ಒಂದಕ್ಕೇ ಸುಮಾರು ೬,೫೦೦ ಟನ್‌ಗಳ ಉಪ್ಪು ರಫ್ತಾಯಿತು. ನಿಂಬೆ ಹಣ್ಣಿನ ಸಿಪ್ಪೆಯಿಂದ ... ಳ್ಳೇ ಸುವಾಸನೆಯಾದ ಎಣ್ಣೆ ತೆಗೆಯುವದೂ ಉಂಟು. ಈ ಎಣ್ಣೆಗೆ ಪೌ... ಸು ಒಂದಕ್ಕೆ ಸುಮಾರು ೫ ಆಣೆ ಖರೀದಿ ದೊರೆಯುವದು. ಎಣ್ಣೆ ತೆ...

---

* ಕುಂಭಕೋಣಂ ವ್ಯವಸಾಯ ಸಂಘದ ಮಾಸಪತ್ರಿಕೆ, ಸೆಪ್ಟೆಂಬರು ೧೯...

ದ ನಂತರ ಶಿಪ್ಪೆಯನ್ನು ಕಾಲ್ನಡೆಗಳಿಗೆ ಮೇವಾಗಿ ಹಾಕುತ್ತಾರಲ್ಲ
ಜಮೀನುಗಳಿಗೆ ಗೊಬ್ಬರವಾಗಿಯೂ ಉಪಯೋಗಿಸುವುದುಂಟು.

Revenue Appeals.

ರೆವಿನ್ಯೂ ಅಪೀಲುಗಳು.

೧೯೦೯—೧೦ನೆ ಸಾಲಿನ ೩ನೆ ನಂಬರು ಅಪೀಲು.

ಅಪೀಲುವಾದಿ		ಅಪೀಲು ಪ್ರತಿವಾದಿ.
ನೆಲಮಂಗಲದ ಈರಮಾಯಣ್ಣ	*vs.*	ಬಸಪ್ಪ.

ಮೊಕದ್ದಮೆಯ ವಿದ್ಯಮಾನಗಳು:—೧೯೦೬ನೆ ಜನವರಿ ೮ರಲ್ಲಿ ನೆಲ
ಮಂಗಲದ ಮಾಯಣ್ಣ ನೆಂಬುವನು, ಸದರಿ ತಾಲ್ಲೂಕು ಬ್ಯಾಡರಹಳ್ಳಿ ಸ
ರ್ವೆ ೧೭-೧ನೇ ನಂಬರು ಹಿಡುವಳಿದಾರ ಬಸಪ್ಪನು ಸದರಿ ಜಮೀನಿನಲ್ಲಿ ಹರಿ
ಯುತ್ತಿದ್ದ ನಾಲೆಗೆ ಬೇ ಹುಕ್ಕುಂ ಅಣೆ ಕಟ್ಟಿ ನೀರನ್ನು ಬೇರೆಕಡೆ ನುಗ್ಗಿ
ಸುವದರಿಂದ ಅದೇಗ್ರಾಮದಲ್ಲಿ ಸರ್ವೆ ೨೩-೨ನೆ ನಂಬರು ತನ್ನ ಜಮೀನಿ
ಗೆ ಕುಂದುಕ ಮಾಡಿರುತ್ತಾನೆಂದು ಅಮಲ್ದಾರರಲ್ಲಿ ಫಿರ್ಯಾದಿ ಅರ್ಜಿಕೊಟ್ಟ
ನು. ಇದನ್ನು ೧೯೦೫—೬ನೆ ಸಾಲಿನ ತಕರಾರು ತಖ್ತೆಗೆ ತರಲು ಮೆ॥
ಆರ್. ಶ್ರೀನಿವಾಸಯ್ಯಂಗಾರ್ರು ಖುದ್ದು ಸ್ಥಳದಲ್ಲಿ ಅಜಮಾಯಿಷಿಮಾ
ಡಿ ಅರ್ಜಿದಾರನ ಜಮೀನಿಗೆ ವಾಸ್ತವಿಕವಾಗಿ ವಿಶೇಷ ಕುಂದುಕವೇನೂ
ಸಂಭವಿಸಿಲ್ಲವೆಂದು ಫಿರ್ಯಾದನ್ನು ನಿರಾಕರಿಸಿದರು. ಇವರ ಹುಕ್ಕುಮಿನ
ಮೇಲೆ ಈರಮಾಯಣ್ಣನು ಡೆಪ್ಯುಟಿ ಕಮೀಷನರಿಗೆ ಅಪೀಲು ಮಾಡಿಕೊಂ
ಡದ್ದರಲ್ಲಿ ಸದರಿಯವರು ಗ್ರಾಮ ನಖಾಶೆಯನ್ನು ಪರೀಕ್ಷಿಸಿ ನಾಲೆಯು
ಪ್ರಥಮದಲ್ಲಿ ಸರ್ವೆ ೧೮, ೧೯, ೨೦, ೨೩/೨ ಜಮೀನುಗಳ ದಕ್ಷಿಣದಲ್ಲಿ
ಹರಿಯುತ್ತಿದ್ದದ್ದು ಆಮೇಲೆ ಸರ್ವೆ ೧೮, ೧೯, ೨೦ನೆ ನಂಬರು ಜಮೀನು
ಗಳ ಉತ್ತರಕ್ಕೆ ಹರಿಯುವಹಾಗೆ ತಿರಗಿಸಲ್ಪಟ್ಟು ಸರ್ವೆ ೨೩/೨ನೇ ನಂಬರು
ಜಮೀನಿನಲ್ಲಿ ಹಾದುಹೋಗುವಂತೆ ಮಾಡಿರುತ್ತಾನೆಂದು ಬಸಪ್ಪನಿಗೆ ೨೦
ರೂಪಾಯಿ ಜುಲ್ಮಾನೆ ವಿಧಿಸಿ ಅಣೆಯನ್ನು ತಕ್ಷಣ ತೆಗದು ಹಾಕುವಂತೆ

ಆರ್ಡರ್ ಮಾಡಿದರು. ರೆವಿನ್ಯೂ ಕಮಿಾಷನರವರಲ್ಲಿ ಅಪೀಲು ಬರಲು ಸ
ರಿಯುವರು ನಾಲೆಯು ಈಚೆಗೆ ತಿರುಗಿಸಲ್ಪಟ್ಟದ್ದಲ್ಲವೆಂದೂ ಈರವಾಯ
ನು ಸರ್ವೆ ೨೩—೨ ಜಮಿಾನನ್ನು ಕೊಂಡಕೊಂಡಾಗಲೆ ಹಾಗಿತ್ತ
ದೂ ಅಭಿಪ್ರಾಯಪಟ್ಟು ಡೆಪ್ಯುಟಿ ಕಮಿಾಷನರವರ ಹುಕ್ಕುಮನ್ನು ರದ್ದು
ಮಾಡಿದರು. ಇದರಮೇಲೆ ಸರಕಾರದಲ್ಲಿ ಹಾಲಿ ಅಪೀಲಾಗಿರುತ್ತೆ.

ಸರ್ಕಾರದವರ ತೀರ್ಮಾನ.—ಅಪೀಲು ಪ್ರತಿವಾದಿಯು ಜಮಿ
ನಲ್ಲಿ ಹರಿಯುವ ನಾಲೆಗೆ ಅಣೆಹಾಕುವದರಮೂಲ್ಕ ಅಪೀಲ್‌ವಾದಿಯು ತನ್ನ
ಜಮಿಾನಿನಲ್ಲಿ ನೀರು ನುಗ್ಗಿ ಅದು ಕೊರಡು ಹೋಗಿರುವುದೆಂದ
ಪ್ರತಿಪಾದಿಸುತ್ತಾನೆ. ಅಮಲ್ದಾರರು ಮತ್ತು ಡೆಪ್ಯುಟಿ ಕಮಿಾಷನರವರ
ಈ ಮೊಕದ್ದಮೆಯನ್ನು ತಕರಾರು ಕೇಸಿನಂತೆ ಭಾವಿಸಿ ಇತ್ಯರ್ಥಮಾಡಿ
ತ್ತಾರೆ. ರೆವಿನ್ಯೂ ಕಮಿಾಷನರವರು, ಅಪೀಲು ಪ್ರತಿವಾದಿಯು ನಿಘ
ರಿಸಲ್ಪಟ್ಟ ನಡತೆಗಳಿಂದ ಅಪೀಲುವಾದಿಗೆ ಯಾವ ನಷ್ಟವೂ ಆಗಿಲ್ಲವೆಂದ
ಎಣಿಸಿ ಅಪೀಲುವಾದಿಗೆ ಯಾವ ಪರಿಹಾರವನ್ನೂ ಕೊಡುವದಿಲ್ಲವೆಂದ
ಆರ್ಡರ್ ಮಾಡಿರುತ್ತಾರೆ. ಈ ಮೊಕದ್ದಮೆಯು ಸಿವಿಲ್‌ಕೋರ್ಟಿನ
ಇತ್ಯರ್ಥವಾಗತಕ್ಕದ್ದೆ ಹೊರ್ತು ರೆವಿನ್ಯೂ ಕಾನೂನಿನ ಮೇರೆ ತೀರ್ಮಾ
ನಿಸತಕ್ಕದ್ದಲ್ಲ. ಆದ್ದರಿಂದ ಗೌರ್ನಮೆಂಟಿನವರು ಮೊಕದ್ದಮೆಯಲ್ಲಿ ಪ್ರ
ವೇಶಿಸದೆ ಅಪೀಲನ್ನು ವಜಾ ಮಾಡಿರುತ್ತಾರೆ.

—o—

Orders of the Revenue Commissioner.

ರೆವಿನ್ಯೂ ಕಮಿಾಷನರವರ ಹುಕುಂಗಳು.

ನಂ. ೧೨೦೩೩, ತಾ|| ೨೮—೩—೧೯೧೦.

ಬೆಂಗಳೂರು ತಾಲ್ಲೂಕು ರಾಮೋಹಳ್ಳಿ ಹನುಮಂತರಾಜು ಎಂಬ
ವನು ಇನ್ನೂ ಕೆಲವರು ಬೊನ್ನೆಗಳ ವ್ಯಾಪಾರ ಮಾಡುತ್ತಾರೆಂಬ ಸಬ
ನ ಮೇಲೆ ಪ್ರತಿಯೊಬ್ಬನಮೇಲೂ ೨ ರೂಪಾಯಿ ಮೊಹತರ್ಫ ಕಂದ
ಯವನ್ನು ಹಾಕಲು ಅವರು ರೆವಿನ್ಯೂ ಕಮಿಾಷನರವರ ಜನಾಬಿಗೆ
ಜಿ೯ ಬರದು ಕೊಂಡರು.

ರೆವಿನ್ಯೂ ಕಮಿಷನರವರ ಹುಕುಂ.—ಅರ್ಜಿದಾರರು ಸರ್ಕಾರಿ
ಾಮೋಹಳ್ಳಿಯಲ್ಲಿ ವಾಸವಾಗಿದ್ದುಕೊಂಡು ಹಿಕ್ಮಿ ಸಾಗುವಳಿ ಮಾಡು
ತ್ತಿರುವದಾಗಿಯೂ, ಅರ್ಜಿದಾರರ ಪೈಕಿ ಕೆಲವರು ಬಾಜೂ ಖಾಯಂಗು
ತ್ತು ಮಾಲಗೊಂಡನಹಳ್ಳಿಯಲ್ಲಿ ಜಮೀನು ಹಿಡುವಳಿದಾರರಾಗಿರುವದಾಗಿ
ಯೂ ತಿಳಿದುಬಂದಿರುತ್ತೆ. ಕಣಗಳು ತೀರಿದಮೇಲೆ ಇವರು ಕೊಮ್ಮ
ಟ್ಟ ಮತ್ತು ಇತರ ಬಾಜೂ ಗ್ರಾಮಗಳಲ್ಲಿ ಒಣಗಿದ ಬಾಳೆಲೆಗಳನ್ನು
ೊಂಡುಕೊಂಡು ಅವುಗಳಿಂದ ದೊನ್ನೆಗಳನ್ನು ಮಾಡಿ ಬೆಂಗಳೂರಲ್ಲಿ
ಾರುತ್ತಾ ಇರುತ್ತಾರೆ. ಇದಕ್ಕಾಗಿ ಜಮಾಬಂದಿ ಆಫೀಸರವರು ಒಬ್ಬೊ
ಬ್ಬರಿಂದ ೨ ರೂಪಾಯಿ ಮೊಹತರ್ಫಾ ಕಂದಾಯ ವಸೂಲಾಗುವಂತೆ
ಹುಕುಂ ಮಾಡಿದರು. ಡೆಪ್ಯುಟಿ ಕಮಿಷನರವರು ಅರ್ಜಿದಾರರಿಂದ ಸದ
ಕಂದಾಯವನ್ನು ವಸೂಲು ಮಾಡುವದು ನ್ಯಾಯವಾಗಿದೆ ಎಂದು ಅಭಿ
ಪ್ರಾಯ ಪಡುತ್ತಾರೆ. ಆದರೆ ಈ ವಿಷಯದಲ್ಲಿನ ನಡವಳಿಕೆಯನ್ನು ಪ
ರೀಶೀಲಿಸಿ ನೋಡಿದ್ದರಲ್ಲಿ ಅರ್ಜಿದಾರರು ರಾಮೋಹಳ್ಳಿಯಲ್ಲಿ ಅಂಗಡಿ
ಯನ್ನೇನೂ ಇಟ್ಟಿಲ್ಲವೆಂದೂ, ತಮ್ಮ ತಮ್ಮ ಮನೆಯವರು ತಯಾರು
ಮಾಡುವ ದೊನ್ನೆಗಳನ್ನು ಮಾರುತ್ತಾರೆಯೇ ಹೊರ್ತು ಇತರರ ಸರಕ
ನ್ನು ಮಾರುವದಕ್ಕಾಗಿ ಗ್ರಾಮದಿಂದ ಗ್ರಾಮಕ್ಕೆ ತಿರುಗುತ್ತಾ ಇರುವದಿ
ಲ್ಲವೆಂದೂ ಕಂಡು ಬರುತ್ತೆ. ಇವರು ಖುದ್ದಾಗಿ ತಯಾರು ಮಾಡಿದ್ದನ್ನು
ಮಾತ್ರ ಮಾರಾಟ ಮಾಡುತ್ತಿರುವುದರಿಂದ ಇದು ವ್ಯಾಪಾರವಾಗುವದಿಲ್ಲ.
ಕಂದಾಯ ದಾಖಲ್ಮಾಡಿರುವದು ನ್ಯಾಯವಿರುದ್ಧವಾಗಿರುತ್ತೆ. ಆದಕಾರಣ
ಅರ್ಜಿದಾರರ ಮೇಲೆ ಹಾಕಿರುವ ಕಂದಾಯವನ್ನು ತೆಗೆದು ಹಾಕಿರುತ್ತೆ.

ಶ್ರೀಮನ್ಮಹಾರಾಜರವರ ಸರ್ಕಾರದವರು ೧೯೧೦ನೆ ಏಪ್ರಿಲ್ ೨ನೆ
ತಾರೀಖು ಆರ್. ೭೮೪೯—೪೯ನೆ ಪ್ರೊಸೀಡಿಂಗ್ಸಿನಲ್ಲಿ ರೈತರು ಕೊಡತ
ಕ್ಕ ಕಂದಾಯಗಳಿಗೆ ಪಟ್ಟೆಗಳಲ್ಲಿ ಬಿಟ್ಟು ಬೇರೆ ರಶೀತಿಗಳನ್ನು ಕೊಡುವ
ಪದ್ಧತಿಯನ್ನು ಸಂಪೂರ್ಣವಾಗಿ ನಿಲ್ಲಿಸಿ ಪ್ರತಿಯೊಬ್ಬ ಖಾತೇದಾರನಿಗೂ
ಒಂದು ಪಟ್ಟೆಯನ್ನು ಕೊಟ್ಟು ಆದರಲ್ಲಿಯೇ ಅವನು ಕೊಡತಕ್ಕ ಮೊಬ
ಲಗನ್ನೆಲ್ಲಾ ಕಾಣಿಸುವ ಹಾಗೆ ಮಾಡಬೇಕೆಂದು ಕೊಟ್ಟ ಹುಕುಮನ್ನು

ನುಸರಿಸಿ ರೆವಿನ್ಯೂ ಕಮಿಷನರವರು ಸದರಿ ಹುಕ್ಕುಮನ್ನು ಖಂಡಿತವಾ
ಜಾರೀಗೆ ತರಬೇಕೆಂತಲೂ, ಯಾವ ಪಟೇಲನೇ ಆಗಲಿ ಶಾನುಭೋಗನೆ
ಗಲಿ ಮೊಕರೂರಾಗಿರುವ ಪಟ್ಟಿಯಲ್ಲಿ ರಶೀತಿಕೊಡದೆ ವಸೂಲು ಮಾಡಿದ್ದ
ಆದರೆ ಅಂಥಾವನಿಗೆ ತಕ್ಕ ಶಿಕ್ಷೆ ಕೊಡುವದೆಂತಲೂ ರೆವಿನ್ಯೂ ಆಫೀಸರು
ಳಿಗೆಲ್ಲಾ ಸರ್ಕ್ಯುಲರ್ ಹುಕ್ಕುಂ ಕೊಟ್ಟಿರುತ್ತಾರೆ. (ರೆವಿನ್ಯೂ ಕಮಿ
ನರವರ ಹುಕುಂ ತಾರೀಖು ೧೯೧೦ನೆ ಮೆ ೨೭.)

Notifications.

ಇಸ್ತಿಹಾರ್‌ನಾಮೆಗಳು.

ಗೌ|| ನೋ|| ನಂ. ಆರ್ ೪೦೦೮—ಎಲ್. ಆರ್ ೯೦-೦೯-೬.

ತಾ|| ೩೦—೫—೧೯೧೦.

ಜಗಲೂರು ತಾಲ್ಲೂಕು ಅಮಲ್ದಾರರಾದ ಮೆ|| ಇ. ಸಿ. ಸದಾಶಿವ
ಳ್ಳಿಯವರಿಗೆ ೧೯೧೦ನೆ ಮೇ ೪ರ ಲಾಗಾಯಿತು ಒಂದು ತಿಂಗಳು ಪ್ರಿವಿ
ಜ್ ರಜಾ ಕೊಟ್ಟಿರುತ್ತೆ. ಇವರ ಗೈರು ಹಾಜರಿಯಲ್ಲಿ ಅಥವ ಮತೊ
ದು ಹುಕ್ಕುಂ ಕೊಡುವವರಿಗೆ ತಾಲ್ಲೂಕು ಶಿರಸ್ತೇದಾರ್ ಟಿ. ನರಸಿ
ರಾಯರನ್ನು ಬದಲಿಯಾಗಿ ಅಮಲ್‌ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಸ್ಟ
ಟರನ್ನಾಗಿ ನೇಮಕಮಾಡಿಧೆ.

ನಂ. ೧೨೩೭. ತಾ|| ೬—೬—೧೯೧೦.

ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೧೭೭ನೆ ಪ್ರಕರಣದ ಮೇ
ಹೊನ್ನಾಳಿ ತಾಲ್ಲೂಕು ಅಮಲ್ದಾರ್ ಮೆ|| ಎಮ್. ಎಸ್. ಹಯಗ್ರೀವ
ಯರಿಗೆ ೧೯೧೦ನೆ ಜೂನ್ ೧೬ನೆ ತಾರೀಖು ಲಾಗಾಯಿತು ಒಂದು ತಿಂಗ
ಪ್ರಿವಿಲೇಜ್ ರಜಾ ಮಂಜೂರಾಗಿರುತ್ತೆ.

ಇವರ ಗೈರು ಹಾಜರಿಯಲ್ಲಿ ಶಿವಮೊಗ್ಗ ಡಿಸ್ಟ್ರಿಕ್ಟ್ ಆಫೀಸ್
ಕ್ಟಿಂಗ್ ಹೆಡ್‌ಕ್ಲಾರ್ಕು ಸಿ. ಬಿ. ಶಾಮರಾಯರು ತಾಲ್ಲೂಕು ಛಾರ್ಜಿ
ಲ್ಲಿರತಕ್ಕದ್ದು.

೧೯೧೦ನೆ ಇಸವಿ ಮಾರ್ಚಿ ೧೮ನೆ ತಾರೀಖು ೯೩೩೭ನೆ ನಂಬರ್ ಹುಕು
ುನಲ್ಲಿ ಶಿಕ್ಷ ಘಟ್ಟದ ತಾಲ್ಲೂಕು ಅಮಲ್ದಾರರಾದ ಮೆ|| ಕೆ. ಕೇಶವಾಚಾ
ರಿಗೆ ಮಂಜೂರಾಗಿದ್ದ ೧೪ ದಿವಸದ ರಜಾವನ್ನು ಅವರು ಉಪಯೋಗಿಸಿ
ೊಳ್ಳದೆ ಇರುವದರಿಂದ ಕ್ಯಾನ್ಸಲ್ ಮಾಡಿರುತ್ತೆ.

ನಂ. ೧೨೨೪೩. ತಾ|| ೪—೬—೧೯೧೦.

ಮೈಸೂರು ಸರ್ವಿಸ್ ರೆಗ್ಯುಲೇಷನ್ ೧೭೭ನೆ ಪ್ರಕರಣದ ಮೇರೆ
ೊಣಸೂರು ತಾಲ್ಲೂಕು ಅಮಲ್ದಾರರಾದ ಮೆ||ಎಸ್.ಶ್ರೀನಿವಾಸೈಯ್ಯಂಗಾ
್ರಗೆ ಅವರು ಉಪಯೋಗಿಸಿ ಕೊಳ್ಳುವ ತಾರೀಖು ಲಾಗಾಯಿತು ೧೫ ದಿ
ಗಳ ಪ್ರಿವಿಲೇಜ್ ರಜಾವನ್ನು ಮಂಜೂರು ಮಾಡಲ್ಪಟ್ಟಿರುತ್ತೆ. ಇವರ
ೈರು ಹಾಜರಿಯಲ್ಲಿ ತಾಲ್ಲೂಕು ಶಿರಸ್ತೇದಾರ್ ಪಿ. ರಾಮಣ್ಣನವರು ತಾ
ೂಕು ಛಾರ್ಜಿನಲ್ಲಿರತಕ್ಕದ್ದು.

ನಂ. ೧೨೪೩೧. ತಾ|| ೮—೬—೧೦.

ಶಿರಾ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮೆ|| ಹೆಚ್. ಬಸವರಾಜೇ
ರಸ್‌ರವರಿಗೆ ೧೯೧೦ನೆ ಇಸವಿ ಏಪ್ರೆಲ್ ೨೨ನೆ ತಾರೀಖಿನ ೧೦೬೪೭ನೆ
೦. ನಲ್ಲಿ ಕೊಟ್ಟಿದ್ದ ೧೫ ದಿನಗಳ ಪ್ರಿವಿಲೇಜ್ ರಜಾ ಪೈಕಿ ಅವರು ೧೧
ನಗಳ ರಜಾವನ್ನು ಮಾತ್ರ ಉಪಯೋಗಿಸಿಕೊಂಡದ್ದರಿಂದ ಬಾಕಿ ೪
ನಗಳ ರಜಾವನ್ನು ಕ್ಯಾನ್ಸಲ್ ಮಾಡಿರುತ್ತೆ.

ನಂ. ೧೨೪೩೫. ತಾ|| ೮—೬—೧೦.

ಬೆಂಗಳೂರು ತಾಲ್ಲೂಕು ಅಮಲ್ದಾರ್ ಮೆ|| ಎ. ಹೇಸ್‌ರವರಿಗೆ ೧೯೧೦
ಇಸವಿ ಮಾರ್ಚಿ ೧೨ನೆ ತಾರೀಖಿನ ೯೦೭೬ನೆ ನಂಬರಿನಲ್ಲಿ ಕೊಟ್ಟಿದ್ದ
ಂದು ತಿಂಗಳ ಪ್ರಿವಿಲೇಜ್ ರಜಾ ಪೈಕಿ ಅವರು ೨೮ ದಿನಗಳ ರಜಾವನ್ನು
ಾತ್ರ ಉಪಯೋಗಿಸಿಕೊಂಡದ್ದರಿಂದ ಬಾಕಿ ೨ ದಿನಗಳ ರಜಾವನ್ನು
್ಯಾನ್ಸಲ್ ಮಾಡಿರುತ್ತೆ.

Occasional Notes.

ವಿವಿಧ ವೃತ್ತಾಂತಗಳು.

೧. ಇಂಡಿಯಾ ದೇಶದಲ್ಲಿ ೧೯೦೯—೧೯೧೦ನೇ ಸಾಲಿನಲ್ಲಿ ೨೭, ೭ ೫೦೦ ಎಕರೆ ಗೋಧಿ ಸಾಗಿನಲ್ಲಿದ್ದು ೯, ೫೫೭,೦೦೦ ಟನ್‌ಗೋಧಿ ಫಸಲ ಬಹುದೆಂದೂ, ಮೈಸೂರು ಸೀಮೆಯಲ್ಲಿ ಮಾತ್ರ ಇದೇ ಸಾಲಿನಲ್ಲಿ ೩,೨ ಎಕರೆಗೆ ಗೋಧಿ ಸಾಗುವಳಿ ಮಾಡಿ ೪೦೦ ಟನ್‌ಗೋಧಿ ಆಗಬಹುದೆಂದ ಅಂದಾಜುಮಾಡಲ್ಪಟ್ಟಿದೆ. ೧೯೦೮—೯ರಲ್ಲಿ ನಮ್ಮ ಸಂಸ್ಥಾನದಲ್ಲಿ ೧೬ ಎಕರೆ ಸಾಗಿನಲ್ಲಿದ್ದು ೨೦೦ ಟನ್ ಗೋಧಿ ಹುಟ್ಟುವಳಿಯಾಗಿತ್ತು.

———o———

೨. ಬಂಗಾಳದಲ್ಲಿ ಡಿಸ್ಟ್ರಿಕ್ಟ ಮತ್ತು ಸೆಷನ್ಸ ಜಡ್ಜಿಗಳಾಗಿದ್ದ ಮಿ ಎ.ಸಿ.ಸೆನ್ ಎಂಬುವರು ಪಿಂಚನ್ ಪಡದ ಮೇಲೆಯೂ ಕೂಡ ತಾವು ಇಂಗ್ಲೆಂ ಡಿನಲ್ಲಿ ಕಲಿತುಕೊಂಡಿದ್ದ ವ್ಯವಸಾಯ ಶಾಸ್ತ್ರವನ್ನು ರೈತರಿಗೆ ಮುಫತ್ತಾ ಕಲಿಸುತ್ತಿರುವದಲ್ಲದೆ, ಎಲ್ಲರಿಗೂ ತಿಳಿಯುವ ಹಾಗೆ ಅನೇಕ ಉಪನ್ಯಾಸಗ ನ್ನೂ ಕೊಡುತ್ತಾ ಇರುತ್ತಾರೆ. ವ್ಯವಸಾಯಾಭಿವೃದ್ಧಿ ವಿಷಯದ ಹೀಗೆ ನಿಸ್ಪೃಹರಾಗಿ ಮೆಹನತ್ತು ಮಾಡುವಂಥಾವರು ಸರ್ವರಿಂದಲ ಗೌರವಿಸಲ್ಪಡುವರು.

———o———

೩. ಇದುವರಿಗೂ ಸಂಸ್ಥಾನದ ಪೋಸ್ಟಾಫೀಸುಗಳಲ್ಲಿ ಏಳು ಗ್ರೇ ಕ್ವೈನಾ ಪಟ್ಟಣಗಳನ್ನು ಮೂರುಕಾಸಿಗೊಂದರಂತೆ ಮಾರುತ್ತಿದ್ದದ್ದು ಸ ಯಷ್ಟೆ. ಇನ್ನು ಮುಂದೆ ಬರುವ ಅಕ್ಟೋಬರು ೧೫ರ ಲಾಗಾಯ ಏಳು ಗ್ರೇನ್ ಪಟ್ಟಣಗಳಿಗೆ ಬದಲಾಗಿ ಹತ್ತು ಗ್ರೇನ್ ಪಟ್ಟಣಗಳನ್ನು ಮ ಚಿನ ಖರೀದಿ ಅಂದರೆ ಮೂರುಕಾಸಿಗೊಂದರಂತೆಯೆ ಮಾರಲ್ಪಡುವದ ಕ್ವೈನಾವನ್ನು ಜೌಗು ಹತ್ತದಂತೆ ನೋಡಿಕೊಳ್ಳದೆ ಹೋದರೆ ಕೆಟ್ಟು ಹೋಗುತ್ತದೆ ಯಾದ್ದರಿಂದ ಹುಷಾರಾಗಿಟ್ಟುಕೊಳ್ಳಬೇಕು.—(ನಂ. ೬೬ ೫೭—೩. ಎಸ್. ೭೮೭—೧೯—೭ ತಾ|| ೩೧—೫—೧೯೧೦.)

———o———

೪. ದಕ್ಷಿಣ ಕನ್ನಡಾ ಜಿಲ್ಲೆಯ ಕೆಲವು ಕಡೆಗಳಲ್ಲಿ ನೆಲಗಡ್ಲೆ ಫಸಲಿ
ಲ್ಲಿ ಕಾಯಿಗಳೇನೋ ನೋಟಕ್ಕೆ ದಪ್ಪನಾಗಿಯೂ, ಸಾಧಾರಣವಾಗಿಯೂ
ಕಂಡರೂ ಒಳಗೆ ಬೀಜ ಕಟ್ಟಿರಲಿಲ್ಲ. ಈ ಜಮೀನಿನ ಮಣ್ಣನ್ನು ಅಜ
ಮಾಯಿಷಿ ಮಾಡಲು ಇದರಲ್ಲಿ ಸುಣ್ಣವಿರಲೇಇಲ್ಲ. ಮಣ್ಣಿ ಏಕ್ಕ ಅಂ
ಗಳಲ್ಲಿ ಸರಿಯಾಗಿದ್ದ ಕಾರಣ, ಪ್ರಾಯಶಃ ಸುಣ್ಣ ಕಮ್ಮಿಯಾದ್ದರಿಂದ
ಲೇನೆ ಹೀಗೆ ಕಾಯಿಯಲ್ಲಿ ಬೀಜ ಕಟ್ಟದಿರಬಹುದೆಂದು ಊಹಿಸಬೇಕಾ
ಗುತ್ತದೆ.

———o———

೫. ಮದರಾಸಾಧಿಸತ್ಯದಲ್ಲಿ ಅನೇಕ ಭಾರಿ ರೈತರು ವ್ಯವಸಾಯಕ್ಕೆ
ಸಮ್ಬಂಧಪಟ್ಟ ಎಂತ್ರೋಪಕರಣಗಳ ಉಪಯೋಗವನ್ನು ಕಲಿಯಲಿ
ಚ್ಛಿಸುತ್ತಿರುವದರಿಂದ ಸದರಿ ಆಧಿಸತ್ಯದ ವ್ಯವಸಾಯ ಇಲಾಖೆಯವರು
ಅಂಥಾ ರೈತರಿಗತಕ್ಕ ಆಯಾ ಹಳ್ಳಿಗಳಲ್ಲಿಯೇ ಇದನ್ನು ಕಲಿಸಿಕೊಡತಕ್ಕ
ಏರ್ಪಾಟುಗಳನ್ನು ಮಾಡಿರುತ್ತಾರೆ. ವಂಶಪರಂಪರೆಯಾಗಿ ರೈತಾಪಿ ಕಸ
ಬುದಾರರಾಗಿದ್ದುಕೊಂಡು ಸರ್ಕಾರಿ ಫಾರಂಗಳಿಗೆ ಹೋಗಿ ಕಲಿತುಕೊಂಡು
ಬರಲು ಸಂಕೋಚಪಡುವಂಥಾವರಿಗೆ ಈ ಏರ್ಪಾಟು ಬಹಳ ಅನುಕೂಲವಾ
ಗಿದ್ದೆಂಬುವದರಲ್ಲಿ ಸಂಶಯವಿಲ್ಲ.

———o———

೬. ಬರ್ಮಾದೇಶದಲ್ಲಿ ಕಳೆದ ವರುಷ ಪರಸ್ಪರ ಸಹಾಯ ಸಂಘಗಳು
೯೧ ರಿಂದ ೧೭೪ ರವರಿಗೂ, ಸದರಿ ಸಂಘಗಳಲ್ಲಿನ ಮೆಂಬರುಗಳ ಸಂ
ಖ್ಯೆಯು ೩೦೮೫ ರಿಂದ ೫೩೫೬ ರವರಿಗೂ, ಮೂಲಧನ ರೂಪಾಯಿ ೧,೮೦,
೯೫೮ ರಿಂದ ರೂ ೪, ೯೨, ೨೪೫ ರವರಿಗೂ ಹೆಚ್ಚಾದವು. ಸಂಘಗಳು
ಹೀಗೆ ವಿಶೇಷವಾಗಿ ವೃದ್ಧಿಯಾಗುವದಕ್ಕೆ ಅನೇಕ ದೊಡ್ಡ ಮನುಷ್ಯರು
ಸರ್ಕಾರದವರಿಗೆ ಕೊಟ್ಟ ಸಹಾಯವೇ ಮುಖ್ಯಕಾರಣವಾಗಿರುತ್ತೆ.

———o———

೭. ಇಂಡಿಯಾ ದೇಶದಲ್ಲಿ ಈಚೆಗೆ ಅನೇಕ ಹೊಸ ಕೈಗಾರಿಕೆಗಳು ಸ್ಥಾ
ಪಿಸಲ್ಪಟ್ಟಿರುವದರಿಂದ ಕೂಲಿಯಿಂದ ಜೀವನ ಮಾಡತಕ್ಕವರಿಗೆ ಬಹಳ ಅ
ನುಕೂಲವಾಗಿರುತ್ತೆ. ಹೇಗೆಂದರೆ ೧೯೦೮—೯ರಲ್ಲಿ ಬೊಂಬಾಯಿಾಧಿಸತ್ಯ

ದಲ್ಲಿ ವ್ಯಾಪಾರಕ್ಕೆ ಕುಂದಕ ಸಂಭವಿಸಿದ್ದರೂ ಕೂಡ ಕಸಬುದಾರಿ ಕಾ
ಖಾನೆಗಳಲ್ಲಿಯೂ ಸರ್ಕಾರಿ ಮತ್ತು ಇತರ ಕಾಮಗಾರಿಗಳಲ್ಲಿಯೂ ಮ
ಮೂಲಿಗಿಂತ ಹೆಚ್ಚಾಗಿ ಕೂಲಿಗಳನ್ನು ಕೊಟ್ಟ ಹೊರ್ತು ಕೂಲೀಮಾರ
ವವರೆ ಶಿಕ್ಕುತ್ತಿರಲಿಲ್ಲ. ಜಿರಾಯಿತಿ ಕೆಲಸಕ್ಕಾದರೂ ಕೂಲೀಯುವ
ದೊರಕುವದು ಮತ್ತಷ್ಟು ಕಷ್ಟವಾಯಿತಂತೆ. ಈಗ್ಯೂ ಸದರಿ ಅಧಿಸ
ದ ಕೆಲವು ಡಿಸ್ಟ್ರಿಕ್ಟುಗಳಲ್ಲಿ ವ್ಯವಸಾಯಕ್ಕೆ ಕೂಲಿಯವರು ಶಿಕ್ಕುವ
ಬಹಳ ಪ್ರಯಾಸವಾದ್ದರಿಂದ ಜಿರಾಯಿತಿ ಕಸಬಿನ ಅಭಿವೃದ್ಧಿಗೆ ಕುಂದ
ವಾದೀತೆಂದು ಬಹಳ ಯೋಚನೆಯಲ್ಲಿರುತ್ತದಂತೆ. ಮೇಲೆ ಹೇಳಿದ ಕಾ
ಣಗಳಲ್ಲದೆ ಕೂಲಿ ದರಗಳು ಹೆಚ್ಚಾಗುವದಕ್ಕೆ ಮತ್ತೊಂದು ಕಾರಣವ
ಟು. ಅದು ಯಾವದಂದರೆ, ಸರ್ಕಾರದವರು ಜಮೀನು ಹಿಡುವಳಿ ವಿಷಯದ
ಮಾಡಿರುವ ನಿಯಮಗಳು, ಜಮೀನನ್ನು ಆಬಾದಿಗೆ ತರಲು ಕೊಡತಕ
ತಕಾವಿ ಅಡ್ವಾನ್ಸುಗಳು ಮತ್ತು ಇತರ ಸಹಾಯಗಳು, ಜಿರಾಯಿತಿ ಮ
ಡುವವರಿಗೆ ಬಹಳ ಅನುಕೂಲವಾಗಿರುವದರಿಂದ ಇದುವರಿಗೆ ಕೂಲಿಯಿಂ
ಜೀವನ ಮಾಡುತ್ತಿದ್ದವರೆಲ್ಲಾ ಸ್ವಂತವಾಗಿ ಜಮೀನು ಸಾಗುವಳಿ ಮಾಡು
ದಕ್ಕೆ ಪ್ರಾರಂಭಿಸಿರುತ್ತಾರೆ.—(ಇಂಡಿಯನ್ ಅಗ್ರಿಕಲ್ಚರಿಸ್ಟ ೧-೩-೧೯೧೦

———o———

೮. ಕಾನ್ಪೂರದ ಷುಗರ್ ವರ್ಕ್ಸ್ ಲಿಮಿಟೆಡ್ ಎಂಬ ಭಾರಿ ಸಕ್ಕರೆ ಕ
ರಖಾನೆಯವರು ಇಂಡಿಯಾ ದೇಶದಲ್ಲಿ ಸಕ್ಕರೆ ತಯಾರು ಮಾಡುವವರೆಲ್ಲಾ
ಶೇರಿ ಒಂದು ಸಂಘ ಮಾಡಿಕೊಳ್ಳುವದಕ್ಕೆ ಯತ್ನಗಳನ್ನು ನಡಿಸುತ್ತಿದಾ
ರೆ. ಕಬ್ಬಿನ ಸಾಗುವಳಿ ಮತ್ತು ಸಕ್ಕರೆ ತಯಾರಿ ಕ್ರಮಗಳನ್ನು
ದ್ದುಪಾಟು ಮಾಡಿ ಕೊಳ್ಳುವದೆ ಈ ಸಂಘದ ಮುಖ್ಯೋದ್ದೇಶವಾಗಿದೆ. ಈ
ಗಾಗಲೆ ಅನೇಕ ದೊಡ್ಡ ದೊಡ್ಡ ಕಾರಖಾನೆಗಳವರು, ವ್ಯಾಪಾರಸ್ತರು ಮ
ತ್ತು ವ್ಯವಸಾಯಗಾರರು ಮೆಂಬರುಗಳಾಗುವದಕ್ಕೆ ಒಪ್ಪಿರುತ್ತಾರೆ.
ಕ್ಕ ಚಿಕ್ಕ ವ್ಯಾಪಾರಸ್ತರೂ ಕೂಡ ಮೆಂಬರುಗಳಾಗುವಂತೆ ಮಾಡಲು ಯ
ತ್ನಗಳಾಗುತ್ತಿವೆ.—ಇಂಡಿಯನ್ ಅಗ್ರಿಕಲ್ಚರಿಸ್ಟ್, ೧—೩—೧೦.

V. B. SOOBBIAH AND SONS, PRINTERS, BANGALORE —1910.

THE MYSORE

REVENUE & AGRICULTURAL GAZETTE.

ವಾಲ್ಯೂಂ ೪.] ಶುಕ್ರವಾರ, ೧ನೆ ಜುಲೈ ೧೯೧೦. [ನಂ. ೧೨.

Contents.

Manurial Earths of Mysore.

Cultivation of Tree Cottons.

Programme of work for Agricultural Associations in Central Provinces.

Government Proceedings.

Notifications.

Occasional Notes.

(i) Renewing of Old Rubber. (ii) Consumption of Salt. (iii) Cotton yield of India. (iv) Poultry Farming. (v) Tomito Leaf. (vi) Mango. (vii) Finding underground water. (viii) Indian Wheat. (ix) Banku Paddy. (x) Cattle Show at Oangole. (xi) The use of sun's heat. (xii) Cucumber cultivation.

ಅನುಕ್ರಮಣಿಕೆ.

೧. ಸಂಸ್ಥಾನದಲ್ಲಿ ಸಿಕ್ಕುವ ಗೊಬ್ಬರದ ಮಣ್ಣುಗಳು.

೨ ಮರದ ಹತ್ತಿಯು ಸಾಗುವಳಿ.

೩. ಸೆಂಟ್ರಲ್‌ಪ್ರಾವಿನ್ಸಸ್ಸಿನಲ್ಲಿ ವ್ಯವಸಾಯಸಂಘಗಳು ಮಾಡಬೇಕಾದ ಕಾರ್ಯಗಳು.

೪. ಸರ್ಕಾರಿ ಹುಕುಂಗಳು.

೫. ಇಸ್ತಿಹಾರ್ನಾಮೆಗಳು.

೬. ವಿವಿಧ ವೃತ್ತಾಂತಗಳು.

(i) ಹಳೇರಬ್ಬರನ್ನು ಹೊಸದನ್ನಾಗಿ ಮಾಡುವಿಕೆ. (ii) ಉಪ್ಪಿನ ಖರ್ಚು. (iii) ಹತ್ತಿಯ ಉತ್ಪತ್ತಿ. (iv) ಕೋಳಿ ಮುಂತಾದವುಗಳನ್ನು ಸಾಕುವಿಕೆ. (v) ಶೀಮೆಬದನೆಕಾಯಿಯ ಎಲೆ. (vi) ಮಾವು. (vii) ಜಮೀನುಗಳಲ್ಲಿ ಜಲವಿರುವ ಸ್ಥಳವನ್ನು ತಿಳಿದು ಕೊಳ್ಳುವುದು. (viii) ಇಂಡಿಯಾ ದೇಶದ ಗೋಧಿ. (ix) ಬಂಕೂ ಬತ್ತ. (x) ಒಂಗೋಲಿನಲ್ಲಿನ ದನಕರುಗಳ ಪ್ರದರ್ಶನ. (xii) ಬೇಸಾಯಕ್ಕೆ ಬಿಸಿಲಿನ ಉಪಯೋಗ. (xii) ಸೌತೆಕಾಯಿಯ ವ್ಯವಸಾಯ.

Manurial Earths of Mysore.

ಮೈಸೂರು ದೇಶದಲ್ಲಿ ದೊರಕುವ ಗೊಬ್ಬರದ ಮಣ್ಣುಗಳು

ಮೈಸೂರು ಸೀಮೆಯಲ್ಲಿ ಕೆಲವುಕಡೆ ಹಳೇಗ್ರಾಮ ನತ್ತದ ಮ
ಣ್ಣನ್ನು (ಬೂದಿ ಮಣ್ಣೆಂದೂ ಕರೆಯುವರು) ಸಾಗುವಳಿ ಜಮೀನುಗಳಿ
ಗೆ ಗೊಬ್ಬರವಾಗಿ ರೈತರು ಉಪಯೋಗಿಸುವ ವಾಡಿಕೆ ಇರುವದರಿಂದ ಸ
ರಿ ಮಣ್ಣುಗಳನ್ನು ಸಂಸ್ಥಾನದ ವ್ಯವಸಾಯ ಇಲಾಖೆಯವರು ರಸಾಯನ
ಶಾಸ್ತ್ರರೀತ್ಯಾ ಅಜಮಾಯಿಷಿ ಮಾಡಿ ಕಂಡು ಬಂದ ಅಂಶಗಳಲ್ಲಿ ಕೆಲವನ್ನು
ನಮ್ಮ ಜೂನ್ ತಿಂಗಳು ಮೊದಲನೆ ತಾರೀಖಿನ ಸಂಚಿಕೆಯಲ್ಲಿ ತಿಳಿಸಿರುತ್ತೆ
ವಷ್ಟೆ. ಇದೇ ಬೂದಿಮಣ್ಣಿನ ವಿಷಯವಾಗಿ ಸಂಸ್ಥಾನದ ವ್ಯವಸಾಯ
ಇಲಾಖೆಯವರು ಪ್ರಕಟ ಮಾಡಿರುವ ಲೇಖನದಿಂದ ಮತ್ತೆ ಕೆಲವಂಶಗಳ
ನ್ನು ನಮ್ಮ ವಾಚಕರಿಗೋಸ್ಕರ ಇಲ್ಲಿ ಪ್ರಚುರಪಡಿಸಿಧೆ.

ಕೃಷ್ಣಾ ಡಿಸ್ಟ್ರಿಕ್ಟಿನ ರೈತರು ರಾಸುಗಳ ಮೇವಿಗೋಸ್ಕರ ಗೊ
ಡ್ಡುಮಂಜಿಸೊಪ್ಪನ್ನು ಬತ್ತದ ಗದ್ದೆಗಳಲ್ಲಿ ಕಟಾವಾದನಂತರ ಬೆಳೆದು
ಕೂಳೆಯು ಗದ್ದೆಯಲ್ಲೇ ಕೊಳೆಯುವಂತೆ ಉಳುತ್ತಾರೆಂದು ಹ್ಯಾರಿಸನ್
ರವರು ಹೇಳುತ್ತಾರೆ. ನಮ್ಮ ಮೈಸೂರು ಸೀಮೆಯಲ್ಲಿ ಖುಷ್ಕಿ ಜಮೀ
ನುಗಳಿಗೆ ಹಸಿ ಸಸಿಗೊಬ್ಬರವನ್ನು ಹಾಕಲು ಒಂದು ತಕ್ಕ ಪದಾರ್ಥ
ನ್ನು ಕಂಡು ಹಿಡಿಯುವ ಉದ್ದಿಶ್ಯವಾಗಿ ಹೆಬ್ಬಾಳದ ಫಾರಂನಲ್ಲಿ ಪರೀಕ್ಷೆಗ
ಳು ನಡಿಯುತ್ತಿವೆ. ಆ ಪರೀಕ್ಷೆಗಳ ವಿಧಾನ ಮತ್ತು ವಿಸ್ತಾರವು ಈ ಇ
ಲಾಖೆಯ ಒಂಭತ್ತನೇ ರಿಪೋರ್ಟಿನಲ್ಲಿ ವಿವರಿಸಲ್ಪಟ್ಟಿವೆ. ಅವುಗಳ ಫ
ಲಿತಾಂಶಗಳು ಮುಂದೆ ಪ್ರಚುರಪಡಿಸಲ್ಪಡುತ್ತವೆ. ಅದ್ದರಲ್ಲಿ ಹಸಿ
ಸಸಿ ಗೊಬ್ಬರದಿಂದಾಗುವ ಲಾಭಗಳನ್ನೇ ಬಹುಮಟ್ಟಿಗೆ ದನದ ಗೊಬ್ಬ
ರದ ಮೂಲಕ ದೊರೆಯುವಹಾಗೆ ದನದ ಗೊಬ್ಬರದ ಗುಣವನ್ನು ಹೆಚ್ಚಿ
ಸುವ ವಿಷಯದಲ್ಲಿ ಎಷ್ಟೋ ಮಾಡಬಹುದು. ನಮ್ಮ ಸೀಮೆಯಲ್ಲಿ ರಾ
ಗಿಯೊಂದಿಗೆ ಅವರೆ, ತೊಗರಿ ಮುಂತಾದ ಪೈರುಗಳನ್ನು ಬೆಳೆಯುವ ವಾಡಿ
ಕೆ ಇರುವದರಿಂದ ಕಾಯಿಗಳನ್ನು ಬಿಡಿಸಿಕೊಂಡನಂತರ ಹಸಿ ಸಸಿ ಗೊಬ್ಬ
ರಕ್ಕೆ ಯೋಗ್ಯವಾದ ಹಸಿ ಅವರೆಗಿಡಗಳು ರೈತನಿಗೆ ಬಹಳವಾಗಿ ದೊರೆ
ಯುವವು. ಕಟಾವಾದಮೇಲೆ ಆ ಹಸಿ ಗಿಡಗಳಲ್ಲಿ ಹೆಚ್ಚು ಪಾಲು ಭೂ

ುಯಲ್ಲೇ ಸೇರುವಂತೆ ಉಳುವದಕ್ಕೆ ಕಾಲವು ಅನುಕೂಲಿಸುವದಿಲ್ಲವಾದ್ದ
ಂದಲೂ,ಆ ಕಡ್ಡಿ ಸೊಪ್ಪು ಮುಂತಾದ್ದನ್ನು ಹೊಲದಲ್ಲಿಯೇ ಬಿಡುವದಕ್ಕಾ
ುವದಿಲ್ಲವಾದ್ದರಿಂದಲೂ ಅವುಗಳಲ್ಲಿ ಹೆಚ್ಚು ಭಾಗವೆಲ್ಲಾ ಗೊಬ್ಬರದ ರಾ
ಯನ್ನು ಸೇರಬೇಕು. ಹಾಗೆ ಸೇರಿ ಗೊಬ್ಬರವನ್ನು ಉಪಯೋಗಿಸು
ೆ ಕಾಲ ಬರುವವರಿಗೂ ಗುಂಡಿಯಲ್ಲಿ ಕೊಳೆಯಿಸಬೇಕು. ದೊಡ್ಡ ದೊಡ್ಡ
ೂರುಗಳ ಆಜೂಬಾಜಿನಲ್ಲಿ ಆ ಸೊಪ್ಪುಗಳನ್ನು ಮೇವಾಗಿ ಮಾರಬಹು
ಾದ್ದರಿಂದ ರೈತನಿಗೆ ಸ್ವಲ್ಪ ದುಡ್ಡೇನೋ ದೊರೆಯುವದು. ಆದರೆ
ೇರೆ ಕಡೆಯಲ್ಲಿ ಅಂದರೆ ಸೊಪ್ಪನ್ನು ಒಣಗಿಸಿ ಸೌದೆಗಾಗಿ ಕೂಡಿಡುವ
್ಥಳಗಳಲ್ಲಿ ಹೀಗೆ ಮಾಡದೆ ಸೊಪ್ಪು, ಕಡ್ಡಿ ಮುಂತಾದವುಗಳನ್ನು ಗೊಬ್ಬ
ದ ರಾಶಿಗೆ ಹಾಕುವುದನ್ನು ಆಚರಣೆಗೆ ತರುವುದು ಒಳ್ಳೇದು. ಆ
ೊಪ್ಪನ್ನೆಲ್ಲಾ ರೈತನು ತನ್ನ ರಾಸುಗಳಿಗೇನೇ ಮೇವಾಗಿ ಉಪಯೋ
ಸಿ ಅವುಗಳಿಂದಾಗುವ ಗೊಬ್ಬರವನ್ನು ಸರಿಯಾಗಿ ಕೂಡಿಟ್ಟು ತನ್ನ ಜ
ಾನಿಗೆ ಹಾಕಿದರೂ ಸ್ವಲ್ಪ ಹೆಚ್ಚು ಕಡಿಮೆ ಆ ಸೊಪ್ಪನ್ನೇ ಗೊಬ್ಬರ
ಾಗಿ ಹಾಕಿದಷ್ಟು ಪ್ರಯೋಜನ ಉಂಟು. ಇದೂ ಅಲ್ಲದೆ ಇರುವ ದನದ
ೊಬ್ಬರದೊಂದಿಗೆ ಹಸುರು ಎಲೆಗಳನ್ನೂ ಕಡ್ಡಿಗಳನ್ನು ಕೈಲಾದಮಟ್ಟಿ
ೂ ತಪ್ಪದೆ ಸೇರಿಸುತ್ತಾ ಬಂದರೆ ಬೂದಿಮಣ್ಣಿನ ಜೊತೆಗೆ ಸೇರಿ ಹೆಚ್ಚು
್ರಯೋಜನವಾಗುವದಲ್ಲದೆ ಅಂಥಾ ಗೊಬ್ಬರವು ಸಾಮಾನ್ಯವಾಗಿ ದನದ
ೊಬ್ಬರವೆಂದು ಕರೆಯಲ್ಪಡುವ ತಿಪ್ಪೆ ರಾಶಿಗಿಂತಲೂ ಎಷ್ಟೋ ಉತ್ತ
ುವಾಗಿರುವದು.

ಬೂದಿಮಣ್ಣು ನಮ್ಮ ಶೀಮೆಯಲ್ಲಿ ಇನ್ನೂ ಅನೇಕ ಕಡೆಗಳಲ್ಲಿ ಸಿ
್ಕಬಹುದು. ಪೈರಿಗೆ ಬೇಕಾದಷ್ಟು ದನದ ಗೊಬ್ಬರವು ರೈತನಿಗೆ ಸಾ
ಾರಣವಾಗಿ ಸಿಕ್ಕುವದಿಲ್ಲವಾದ್ದರಿಂದಲೂ ಅವನಿಗೆ ಸಿಕ್ಕುವದರಲ್ಲಿ ಸಾರವು
ಹಳ ಕಮ್ಮಿಯಾಗಿರುವದರಿಂದಲೂ, ಈ ಬೂದಿಮಣ್ಣು ಸಿಕ್ಕುವ ಕಡೆ
ಯಲ್ಲೆಲ್ಲಾ ಅದು ಎಷ್ಟು ಅಲ್ಪಸ್ವಲ್ಪವಾದಾಗ್ಯೂ ಗೊಬ್ಬರ ದೊರೆಯು
ದಕ್ಕೆ ಅದೊಂದು ಅಧಿಕವಾದ ಮೂಲವೆಂದು ತಿಳಿದು ಅದನ್ನು ದನದ ಗೊ
್ಬರದೊಂದಿಗೆ ಲಾಭಕರವಾಗಿ ಉಪಯೋಗಿಸಬಹುದು.

ಈ ವಿಷಯವನ್ನು ಮುಗಿಸುವದಕ್ಕೆ ಮುಂಚೆ ಗಮನಿಸಬೇಕಾದ

ಅಂಶವಿನ್ನೊಂಬಿರುವದು. ಈ ಬೂದಿಮಣ್ಣಿನಲ್ಲಿರುವ ಸುಣ್ಣ, ರಂಜ
ಕಾಮ್ಲಗಳಿಂದಲೇ ಈ ಮಣ್ಣಿಗೆ ಗೊಬ್ಬರದ ಪ್ರಶಸ್ತ್ಯವೆಂದು ನಾವು
ನೋಡಿದ್ದೇವೆ. ಇವೆರಡು ಪದಾರ್ಥಗಳೂ ಮೂಳೆಯಲ್ಲಿ ಹೇರಳವಾಗಿವೆ
ಹ್ಯಾಗೆಂದರೆ, ಎರಡು ಸಾವಿರದ ಇನ್ನೂರನಲವತ್ತು ಪೌಂಡಿನಲ್ಲಿರುವಷ್ಟು
ಸುಣ್ಣವೂ ರಂಜಕಾಮ್ಲವೂ ಇನ್ನೂರು ಪೌಂಡು ಮೂಳೆಯಲ್ಲಿರ
ವದು. ರೈತರು ತಮ್ಮ ಗ್ರಾಮದಲ್ಲಿ ಸಿಕ್ಕುವ ಮೂಳೆಗಳನ್ನೆಲ್ಲಾ ಗೊ
ಬ್ಬರಕ್ಕಾಗಿ ಕೂಡಿಸಿ ಉಪಯೋಗಿಸುವ ಪಕ್ಷದಲ್ಲಿ ಅವರ ಜಮೀನುಗಳ
ಫಸಲು ಹೆಚ್ಚುವುದರಲ್ಲಿ ಯಾವ ಸಂದೇಹವೂ ಇಲ್ಲ. ಮೇಲೆ ಹೇಳಿದ ಹ
ಳ್ಳಿಗಳಲ್ಲಿ ಬೂದಿಮಣ್ಣು ವಿಶೇಷವಾಗಿ ಗೊಬ್ಬರಕ್ಕೋಸ್ಕರ ಉಪಯೋ
ಗಿಸಲ್ಪಟ್ಟಿರುವದನ್ನು ನೋಡಿದರೆ ರೈತನಿಗೆ ರೂಢಿಯಾಗಿ ದೊರೆಯುವ
ಗೊಬ್ಬರವಲ್ಲದೆ ಇತರ ಗೊಬ್ಬರವನ್ನು ಉಪಯೋಗಿಸಬೇಕೆಂಬುವ ಅಭ
ಲಾಷೆ ಇರುವದೆಂದು ತೋರುತ್ತದೆ. ಮೂಳೆಗಳೆನೋ ಹಳ್ಳಿಗಳಲ್ಲಿ ಅ
ರೂಪವಸ್ತುವಲ್ಲದ್ದರಿಂದ ಅವನ್ನು ಗೊಬ್ಬರವಾಗಿ ಉಪಯೋಗಿಸುವ ವಿಷ
ಯವನ್ನು ರೈತರು ಮನಸ್ಸಿಗೆ ತಂದುಕೊಳ್ಳುವರೆಂದು ನಾವು ನಂಬುತ್ತ
ವೆ. ಈ ವಿಷಯದಲ್ಲಿ ಈ ಇಲಾಖೆಯ ಮೂರನೇ ವಾರ್ಷಿಕ ರಿಪೋ
ರ್ಟಿನಿಂದ ತೆಗೆದು ಕೆಳಗೆ ಬರೆದಿರುವಂಶವು ಉಪಯೋಗವಾಗಬಹುದು
ಮೂಳೆಗಳನ್ನು ಗೊಬ್ಬರವಾಗಿ ಮಾಡುವುದಕ್ಕೆ ಅತಿ ಸುಲಭಮಾರ್ಗಯಾ
ವದಂದರೆ, ಅದಕ್ಕೋಸ್ಕರ ತಯಾರಾಗುವ ಯಂತ್ರಗಳಿಂದ ಪುಡಿಮಾಡಿ
ಕಾರ ಹೊಂದುವಂತೆ ಮಾಡುವದು. ಹೇರಳವಾಗಿ ಮೂಳೆಗಳಿಲ್ಲದಪಕ್ಷಕ್ಕೆ
ಈ ವಿಧವಲ್ಲಿ ದುಬಾರಿ ಖರ್ಚಾಗುತ್ತದೆ. ಸುತ್ತಿಗೆಗಳಿಂದ ಮೂಳೆಗಳ
ನ್ನು ಚೂರು ಚೂರಾಗಿ ಮಾಡಿ ಗಂಧಕಾಮ್ಲ ಪ್ರಯೋಗದಿಂದ ಅವು ಪ
ಣಾಮ ಹೊಂದುವಂತೆ ಮಾಡುವದು ಕೂಡ ದುಬಾರಿಯಾಗುತ್ತದೆ. ಯಾ
ಕೆಂದರೆ ನಮ್ಮ ಇಂಡಿಯಾ ದೇಶದಲ್ಲಿ ಗಂಧಕಾಮ್ಲವು ಅಗ್ಗವಾಗಿ ಸಿಕ್ಕು
ದಿಲ್ಲ. ಇದೂ ಅಲ್ಲದೆ ಈ ಕೆಲಸಕ್ಕೆ ಸಾಧಾರಣ ರೈತನಿಗಿರುವ ಚಾತುರ್ಯ
ಸಾಲದು. ಇನ್ನೂ ಹೆಚ್ಚಾಗಿ ಬೇಕಾಗುವುದು. ಮೂಳೆಯನ್ನು ಗೊ
ಬ್ಬರವಾಗಿ ಮಾಡಬಹುದಾದ ಇತರ ವಿಧಗಳಲ್ಲಿ ನಮ್ಮ ಮೈಸೂರು ಸ
ಮೆಯಲ್ಲಿ ಫಲಿಸಬಹುದಾದ ಮಾರ್ಗ ಯಾವದಂದರೆ, ಸುತ್ತಿಗೆಗಳಿಂದ

ಮೂಳೆಗಳನ್ನು ಚೂರು ಚೂರಾಗಿ ಮಾಡಿ ಅಂಥಾ ಚೂರುಗಳೊಂದುಪಾಲನ್ನೂ ಅದರಮೇಲೆ ಸಮಪಾಲು ಬೂದಿಯನ್ನೂ ಹರಡಬೇಕು. ಹೀಗೆ ಒಂದರಮೇಲೊಂದನ್ನು ಹರಡಿದ ರಾಶಿಗೆ ಚನ್ನಾಗಿ ತ್ಯಾವವಾಗುವಷ್ಟು ನೀರನ್ನು ಪ್ರೋಲಾಗದಂತೆ ಸುರಿಯಬೇಕು. ಆ ರಾಶಿಯನ್ನು ಕೆಲವು ವಾರಗಳವರಿವಿಗೂ ಅಥವಾ ಯರಡು ತಿಂಗಳವರಿವಿಗೂ ತ್ಯಾವವಾಗಿಟ್ಟರಬೇಕು. ರಾಶಿಯು ಉದ್ದ ಅಥವಾ ಅಗಲ ಎಷ್ಟಿರುತ್ತದೋ ಅಷ್ಟು ಎತ್ತರ ವಿದ್ದರೆ ಬಹಳ ಒಳ್ಳೇದು. ರಾಶಿಯು ಮುಖ ಕೊಂಚವಾಗಿರಬೇಕು. ರಾಶಿಯು ಕೆಳಗೂ ಮೇಲೂ ಸುತ್ತಲೂ ಬೂದಿ ಇದ್ದೇ ಇರಬೇಕು. ಹೀಗೆ ಮಾಡುವದರಿಂದ ಒಳ್ಳೇ ಫಲಿತಾಂಶಗಳು ಬಂದಿರುವವೆಂದು ತಿಳಿಯಬಂದಿವೆ. ಆದ್ದರಿಂದ ಈ ರೀತಿ ಮಾಡಿ ನೋಡುವುದಕ್ಕೆ ಯೋಗ್ಯವಾಗಿದೆ. ಮೂಳೆಯ ಚೂರುಗಳನ್ನು ಗೊಬ್ಬರದ ರಾಶಿಯಲ್ಲಿ ಹಾಕುವದಿನ್ನೊಂದುವಿಧ—ಗೊಬ್ಬರದ ರಾಶಿಯಲ್ಲಿ ಗಂಜಳವೂ, ಹುಲ್ಲೂ, ಸ್ವಲ್ಪ ಕುದುರೆ ಗೊಬ್ಬರವೂ ಕೇರಿದ್ದರೆ ಬಹಳ ಅನುಕೂಲ. ಆದರೆ ಸಾಧಾರಣ ರೈತನು ವಾಡಿಕೆಯಾಗಿರುವ ಗೊಬ್ಬರದ ಗುಂಡಿಯಲ್ಲಿ ಮೂಳೆಗಳ ಚೂರುಗಳನ್ನು ಹಾಕೋಣದರಿಂದ ತೃಪ್ತಿಕರವಾದ ಫಲಿತಾಂಶ ಉಂಟಾಗಬಹುದೇ ಎಂಬುವುದು ಸ್ವಲ್ಪ ಸಂದೇಹವು. ಆದರೂ ಇದು ಒಂದಾವರ್ತಿ ಮಾಡಿನೋಡಲು ಅರ್ಹವಾದದ್ದು.

Cultivation of Tree Cottons. *
ಮರಹತ್ತಿಯ ಸಾಗುವಳಿ.

ಮರಹತ್ತಿಯ ಗಿಡಗಳು ಅನೇಕ ವರುಷಗಳಿರುವವಲ್ಲದೆ ಸದಾ ಫಸಲು ಕೊಡುತ್ತಾ ಇರುತ್ತವೆ. ಈ ಜಾತಿ ಗಿಡಗಳನ್ನು ಸಾಗುವಳಿ ಮಾಡಬೇಕಾದರೆ ಚೆನ್ನಾಗಿ ಗೊಬ್ಬರ ಹಾಕಿ ಹದವಾಗಿರುವ ಜಮೀನಿನಲ್ಲಿ ಸುಮಾರು ಆರಾರು ಅಡಿಯಷ್ಟು ಸ್ಥಳವನ್ನು ಬಿಟ್ಟು ಒಂದೊಂದು ಗುಣಿಗೆ ೩-೪ ಬೀಜದಂತೆ ಬಿತ್ತಬೇಕು. ಅಥವಾ ಗೊಬ್ಬರ ಹಾಕಿ ಶಬ್ಬಿಯಾಗಿರುವ ಅಗೆಯಲ್ಲಿ ಮೂರು ಮೂರು ಅಂಗುಲಗಳಿಗೊಂದರಂತೆ ಮಾರ್ಚಿತಿಂಗ

* ಅಗ್ರಿಕಲ್ಚರಲ್ ಜರ್ನಲ್ ಆಫ್ ಇಂಡಿಯಾ.

ಳಲ್ಲಿ ಬೀಜವನ್ನು ಬಿತ್ತಿ ಮೊಳಿಕೆಗಳಿಗೆ ನೀರು ಕಟ್ಟುತ್ತಾ ಇದ್ದು ಜೂ
ಜುಲೈ ತಿಂಗಳುಗಳಲ್ಲಿ (ಅಂದರೆ ಮುಂಗಾರು ಮಳೆ ಪ್ರಾರಂಭದಲ್ಲಿ) ಅವು
ಳನ್ನು ಸಾಗುವಳಿಯಾಗತಕ್ಕ ಜಮೀನಿನಲ್ಲಿ ಗಿಡದಿಂದ ಗಿಡಕ್ಕೆ ೪ರಿಂದ
ಅಡಿ ಅಂತರವಿರುವಂತೆ ತೋಡಿರುವ ೧೫-೨ ಅಡಿ ಆಳವುಳ್ಳ ಗುಂಡಿಗಳ
ನೆಡಬೇಕು. ಮೊಳಿಕೆಗಳನ್ನು ಅಗೆಯಿಂದ ಎತ್ತುವಾಗ ಅವುಗಳ ಬೇರು
ಗಳು ಕಿತ್ತುಹೋಗದಂತೆ ಹುಷಾರಾಗಿರಬೇಕು. ಬೇರುಗಳಿಗೆ ಅಪ
ಯು ತಟ್ಟದಂತೆ ಮಾಡಿಕೊಳ್ಳುವ ಉಪಾಯು ಉಂಟು. ಅದೇನೆಂದರೆ,
ಅಂಗುಲ ಎತ್ತರ ೪ ಅಂಗುಲ ಅಗಲವುಳ್ಳ ಬಿದರು ಬುಟ್ಟಿಗಳ
ಮಣ್ಣನ್ನು ತುಂಬಿ ಅವುಗಳಲ್ಲಿ ಒಂದೊಂದು ಬೀಜದಂತೆ ಬಿತ್ತಿ ಬುಟ್ಟಿ
ಳನ್ನೆಲ್ಲಾ ಒಂದರಪಕ್ಕದಲೊಂದು ಇಟ್ಟು ಸಂದುಗಳಿಗೆ ಮಣ್ಣ
ನ್ನು ಶೇರಿಸಿ ಸಮಭೂಮಿಯಂತೆ ಮಾಡಿಕೊಂಡು ಮೊಳಿಕೆಗಳಿ
ಕೈನೀರು ಹಾಕುತ್ತಾ ಅಥವ ನೀರು ಹಾಯಿಸುತ್ತಾ ಇರುವದು. ಮೊ
ಕೆಗಳಿಗೆ ಬಿಸಿಯಾದ ಗಾಳಿ ಬಂದು ತಗಲದಂತೆ ಮರೆಯನ್ನು ಮಾಡಿ
ಬೇಕು. ಹೀಗೆಮಾಡಿದಲ್ಲಿ ಮೊಳಿಕೆಗಳನ್ನು ಸಾಗುವಳಿ ಜಮೀನಿನ
ನೆಡುವಾಗ ಬೇರುಗಳು ಕಿತ್ತುಹೋಗದಂತೆ ಬಹು ಸುಲಭವಾಗಿ ಬುಟ್ಟಿ
ಗಳಿಂದ ತೆಗದುಕೊಳ್ಳಬಹುದು. ಮೊಳಿಕೆಗಳನ್ನು ನೆಡುವದಕ್ಕೆ ಮು
ಚೆ ಗುಂಡಿಗಳಲ್ಲಿನ ಮಣ್ಣಿನ ಜೊತೆಗೆ ದನಗಳ ಸಗಣಿಯನ್ನು ಚೆನ್ನಾಗಿ
ರಿಸಿರಬೇಕು. ಮೇಲೆ ಹೇಳುವರೀತಿ ಮೊಳಿಕೆಗಳನ್ನು ಸಾಗುವಳಿ ಜಮೀ
ನಿನಲ್ಲಿ ನೆಟ್ಟಮೇಲೆ ಜುಲೈ, ಆಗಸ್ಟು, ಸೆಪ್ಟಂಬರು ತಿಂಗಳುಗಳಲ್ಲಿ ಮ
ಸಾಧಾರಣವಾಗಿ ಬೀಳುತ್ತಲೇ ಇರುವದರಿಂದ ಸಸಿಗಳು ಬಹಳ ಸೊಂಪಾ
ಬೆಳೆಯುವವು. ಬೀಜವನ್ನು ಜುಲೈ ತಿಂಗಳಲ್ಲಿ ಬುಟ್ಟಿಗಳಲ್ಲಾಗಲಿ,
ಗೆಯಲ್ಲಾಗಲಿ ಬಿತ್ತಿ ಸೆಪ್ಟಂಬರಿನಲ್ಲಿ ಮೊಳಿಕೆಗಳನ್ನು ನಾಟಿ ಮಾಡಿದರ
ಮಾಡಬಹುದು. ಬಿತ್ತಿ ೧೨ ತಿಂಗಳಾದ ಕೂಡಲೆ ಮುಂಗಾರು ಮಳೆಗಳ
ಪ್ರಾರಂಭವಾಗುವದರೊಳಗಾಗಿ ಸಸಿಗಳನ್ನು ಕೆಳ ರೆಂಬೆಗಳ ವರಿಗೂ
ತ್ತರಿಸಿದರೆ ಮುಂದೆ ಬರುವ ಛಳಿಕಾಲದಲ್ಲಿ ಹೊಸದಾಗಿ ರೆಂಬೆಗಳು ಬಿ
ತ್ತವೆ. ಸಸಿಗಳನ್ನು ಕತರಾಯಿಸುವದರಿಂದ ವರುಷದ ಸದಾಕಾಲ
ಹತ್ತಿ ಬಿಡದಂತೆ ತಡೆಸು ಗಿಡಗಳು ಚೇತರಿಸಿಕೊಳ್ಳುವಂತೆ ಮಾಡುವದಾ

ತ್ತದೆ. ಮಳೆಗಾಲದಲ್ಲಿ ಹತ್ತಿ ಫಸಲು ಬಂದರೂ ನೀರು ಬಿದ್ದು ಕೆಡುವು
ದಾದ್ದರಿಂದ ಸಕಾಲದಲ್ಲಿ ಗಿಡಗಳನ್ನು ಕತರಾಯಿಸಿದಲ್ಲಿ ಆಗ ಫಸಲು ಬಂ
ದು ವ್ಯರ್ಥವಾಗುವದನ್ನು ತಪ್ಪಿಸಿಕೊಳ್ಳಬಹುದು. ಮರದ ಹತ್ತಿಗೆ
ಹುಳುಗಳು ಸುಲಭವಾಗಿ ಬೀಳುವುವಾದ್ದರಿಂದ ಬಹಳ ಹುಷಾರಾಗಿ
ನೋಡಿಕೊಳ್ಳಬೇಕು. ಈ ರಖಂ ಗಿಡಗಳು ಅನೇಕ ವರುಷಗಳಿರುವವಾ
ದ್ದರಿಂದ ಒಂದು ಸಾರಿ ಹುಳುಗಳು ಬಿದ್ದುಬಿಟ್ಟರೆ ಅವುಗಳನ್ನು ನಾಶಮಾ
ಡುವದು ಬಹಳ ಕಷ್ಟ.

Programme of work for Agricultural Associations in Central Provinces.

ಸೆಂಟ್ರಲ್ ಪ್ರಾವಿನ್ಸಸ್‌ನಲ್ಲಿ ವ್ಯವಸಾಯ ಸಂಘಗಳು ಮಾಡತಕ್ಕ ಕಾರ್ಯಗಳು.

ಸೆಂಟ್ರಲ್ ಪ್ರಾವಿನ್ಸೆಸ್ಸನಲ್ಲಿ ಡೆಪ್ಯೂಟಿ ಡೈರೆಕ್ಟರ್ ಆಫ್ ಅಗ್ರಿಕಲ್ಚ
ರವರು (Deputy Director of Agriculture) ಅಲ್ಲಿನ ವ್ಯವಸಾಯ
ಸಂಘಗಳು ನಡೆಸಬೇಕಾದ ಕಾರ್ಯಗಳನ್ನು ಕುರಿತು ಕೆಳಗೆ ನಮೂದು
ಮಾಡಿರುವಂತೆ ಸಲಹೆಗಳನ್ನು ಕೊಟ್ಟಿರುತ್ತಾರೆ.

ವ್ಯವಸಾಯ ಸಂಘಗಳು ಸೆಂಟ್ರಲ್ ಪ್ರಾವಿನ್ಸೆಸ್ ಮತ್ತು ಬೇರಾ
ರು ದೇಶಗಳಲ್ಲಿ ಅಭಿವೃದ್ಧಿಗೆ ಬಂದಿರುವಂತೆ ಇಂಡಿಯಾದೇಶದ ಮತ್ಯಾವ
ಭಾಗದಲ್ಲಿಯೂ ಬಂದಿರಲಾರವು. ಆದರೂ ಇಲ್ಲಿನ ಸಂಘಗಳು ಮಾಡತಕ್ಕ
ದ್ದು ಇನ್ನೂ ಬಹಳವಿರುತ್ತೆ. ಮೆಂಬರುಗಳು ಮಾಡಬಹುದಾದಷ್ಟು
ಮೆಹನತ್ತು ಮಾಡುತ್ತಾ ಇಲ್ಲ. ಸರ್ಕಾರಿ ನೌಕರರ ಮೇಲೆ ಎಲ್ಲಾ ಭಾ
ರವನ್ನೂ ಹಾಕಿ ತಾವು ತಟಸ್ಥರಾಗಿರುತ್ತಾರೆ. ಇದು ಸರಿಯಲ್ಲ. ಲಾ
ಭಕರವಾದ ಹೊಸ ಹೊಸ ವ್ಯವಸಾಯ ಪದ್ಧತಿಗಳನ್ನು ತಿಳುವಳಿಕೆ ಇಲ್ಲ
ದ ರೈತರಿಗೆ ತಿಳಿಸುವ ಪ್ರಯತ್ನದಲ್ಲಿ ಮೆಂಬರುಗಳೆಲ್ಲಾ ಸರ್ಕಾರದವರೊಂ
ದಿಗೆ ಮೆಹನತ್ತು ಮಾಡುತ್ತಾ ಬರಬೇಕು.

೧. ಬತ್ತದ ಮೊಳಕೆಗಳನ್ನು ತಂಡತಂಡವಾಗಿ ನಾಟಿ ಹಾಕ
ಬಾರದು. ಒಂದೊಂದೆ ಮೊಳಕೆಯಾಗಿ ನಾಟಬೇಕು. ವ್ಯವಸಾಯ

ಸಂಘಗಳ ಪ್ರತಿಯೊಬ್ಬ ಮೆಂಬರು ಈ ಕ್ರಮವನ್ನು ತನ್ನ ಮತ್ತು ಇ
ರಬಾಜೂ ನಾಲ್ಕು ಗ್ರಾಮಗಳಲ್ಲಿ ರೈತರು ಅನುಸರಿಸುವ ಹಾಗೆ ಮೇಹನತು
ಮಾಡಿ ಇದರಿಂದ ಎಷ್ಟುಮಟ್ಟಿಗೆ ಬೀಜ ಕೂಡಿ ಬರುವದೊ, ಫಸಲಿನಲ್ಲಿ
ನೇನು ಗುಣಾವಗುಣಗಳು ಕಂಡು ಬರುವವೋ ಅವುಗಳ ವಿಷಯವಾಗಿ
ವಿಗೆ ತಿಳಿಸಬೇಕು.

೩. ವ್ಯವಸಾಯ ಸಂಘಗಳು ಉತ್ತಮ ತರಹೆ ಬೀಜಗಳನ್ನು
ತ್ತಿ ಫಸಲು ಬಂದನಂತರ ಪುನಃ ಅದರಿಂದ ಒಳ್ಳೇ ಬೀಜವನ್ನು ಚನಾಯಿ
ಕೊಂಡು ಬೇಕಾದವರಿಗೆ ಲಾಭಕರವಾಗಿ ಮಾರುವದರಲ್ಲಿ ಉದ್ಯುಕ್ತವಡ
ದು ಮತ್ತೊಂದು ಪ್ರಯೋಜನಕರವಾದ ಕೆಲಸ. ವ್ಯವಸಾಯ ಇಲ
ಖೆಯವರು ವಿಶೇಷ ಮುತುವರ್ಜಿಯಿಂದ ಚನಾಯಿಸಲ್ಪಟ್ಟ ಬತ್ತದ ಬೀ
ಜವನ್ನು ಇಟ್ಟು ಇರುತ್ತಾರೆ. ಸದರಿ ಬೀಜವನ್ನು ಅವರ ಸಲಹೆಗಳಿಗನು
ಸಾರವಾಗಿ ಬಿತ್ತನೆ ಮುಂತಾದ್ದನ್ನು ನಡೆಸುವದಕ್ಕೂ ಆದ ಫಸಲನ್ನು
ಮುಂದಿನ ವರುಷ ಬೀಜಕ್ಕಾಗಿಯೇ ಉಪಯೋಗಿಸುವದಕ್ಕೂ ಒಪ್ಪುವ
ರಿಗೆ ಸರಫರಾಜು ಮಾಡುತ್ತಾರೆ.

೪. ಅಕ್ಟೋಬರುನಲ್ಲಿ ನೀರು ಹಾಯಿಸುವುದಕ್ಕೆ ಅನುಕೂಲ
ರುವ ಜಮೀನುಗಳಲ್ಲಿ ಮೆಂಬರುಗಳು ನೆಲಗಡಲೆ ಫಸಲನ್ನು ಬೆಳೆಯಬಹು
ದು. ವ್ಯವಸಾಯ ಇಲಾಖೆಯವರು ಖುದ್ದು ಅಜಮಾಯಿಷಿಗಳಿಂದ ಒ
ಫಸಲು ಕೊಡುವಂತೆ ಕಂಡು ಬಂದಿರುವ ದೇಶೀಯ ನೆಲಗಡ್ಲೆ ಬೀಜವನ್ನು
ಅರ್ಧ ಖರೀದಿಗೆ ಸರಫರಾಜು ಮಾಡುತ್ತಾರೆ.

೫. ಕಬ್ಬನ್ನು ಬೆಳೆಯುವದಕ್ಕೆ ಇಷ್ಟವುಳ್ಳ ಮೆಂಬರುಗಳು
ಯಪುರ ಫಾರಮಿನಿಂದ ಉತ್ತಮ ತರದ ಬೀಜವನ್ನು ತರಿಸಿಕೊಂಡು
ಸಲನ್ನು ಮಾಡಬಹುದು. ಆದರೆ ಇದಕ್ಕೆ ಯಥೇಚ್ಛವಾಗಿ ಗೊಬ್ಬರ
ನೀರಿನ ಸರಬರಾಯಿಯೂ ಇರಬೇಕು.

ದನಗಳ ಗಂಜಲವನ್ನು ನಷ್ಟವಾಗಿ ಹೋಗದಂತೆ ಒಣಗಿದ ಪುಡಿಮ
ಣಿನೊಡನೆ ಬೆರಿಸಿಟ್ಟುಕೊಂಡು ಅದನ್ನು ಗೊಬ್ಬರವಾಗಿ ಉಪಯೋಗಿ
ಕೊಳ್ಳುವ ಪದ್ಧತಿಯನ್ನು ಪ್ರತಿಯೊಬ್ಬ ಮೆಂಬರು ಅನುಸರಿಸಬೇಕು

Government Proceedings.

ಸರ್ಕಾರಿ ಹುಕುಂಗಳು.

I.

ನಂ. ಆರ್. ೮೦೪೬—೪೭. ತಾ|| ೧—೬—೧೯೧೦.

ನಾಗಮಂಗಲದ ತಾಲ್ಲೂಕು ಎಲಡಹಳ್ಳಿ ಗ್ರಾಮದಲ್ಲಿ ಒಕ್ಕಲಿಗರಿಗೂ ೂಲೆಯರಿಗೂ ಪ್ರತ್ಯೇಕ ಒಂದೊಂದು ಆಕಾರ ಕಾಣದ ತಾಕನ್ನು ಕೀರೆ ಡಿಗಾಗಿ ಬಿಟ್ಟಿತ್ತು. ೧೮೮೮—೧೮೮೯ನೆ ಇಸವಿಯ ಸರ್ವೆ ಮತ್ತು ಟಲ್‌ಮೆಂಟು ಕಾಲದಲ್ಲಿ ಒಕ್ಕಲಿಗರ ಅನುಭವದಲ್ಲಿದ್ದ (೧೪ ಗುಂಟೆ) ಕೀರೆ ಡಿಯನ್ನು ಸರ್ವೆ ೭೩ನೆ ನಂಬರನ್ನಾಗಿ ಮಾಡಿ ಇದರ ಮೇಲೆ ಕಂದಾಯ ೇನೂ ಕೊಡತಕ್ಕದ್ದಿಲ್ಲವೆಂದು ಗೊತ್ತುಮಾಡಲ್ಪಟ್ಟಿತು. ಹೊಲೆಯರ ನುಭವದಲ್ಲಿದ್ದ (೯ ಗುಂಟೆ) ಕೀರೆಮಡಿಯನ್ನು ಮಾತ್ರ ಸರ್ವೆ ೭೪ನೆ ನಂ ರಾಗಿ ಮಾಡಿ ಇದಕ್ಕೆ ೦—೧೨—೦ ಆಕಾರ ದಾಖಲಾಯಿತು. ಆದರೆ ಅಂದಿ ವ ಹೊಲೆಯರು ಸದರಿ ಜಮೀನನ್ನು ಕೀರೆಮಡಿಯಾಗಿ ಉಪಯೋಗಿ ತ್ತಾ ಬಂದಿದ್ದರೂ ಕಂದಾಯ ಕಟ್ಟುತ್ತಾ ಬರಲಿಲ್ಲ. ಈ ವಿಷಯ ೧೯೦೦—೧೯೦೧ರಲ್ಲಿ ಜಮಾಬಂದಿ ಆಫೀಸರವರ ನೋಟೀಸಿಗೆ ಬಂದಾಗ ಕ್ಕಲಿಗರಿಗೆ ತೋರಿಸಿರುವ ರಿಯಾಯಿತಿಯನ್ನು ತಮಗೂ ತೋರಿಸತಕ್ಕ ಂದು ಹೊಲೆಯರು ಹೇಳಿಕೊಂಡದ್ದರ ಮೇಲೆ ಸದರಿ ಆಫೀಸರವರು ಮೇ ಕ್ಕೆ ಶಿಫಾರಸು ಮಾಡಿದರು.

೨. ಡೆಪ್ಯೂಟಿ ಕಮೀಷನರವರು ಮತ್ತು ರೆವಿನ್ಯೂ ಕಮೀಷನರವರು ಮಾಬಂದಿ ಆಫೀಸರವರ ಶಿಫಾರಸ್ಸನ್ನೆ ಅನುಮೋದಿಸುತ್ತಾರೆ.

೩. ಸರ್ವೆ ಮತ್ತು ಸೆಟಲ್‌ಮೆಂಟು ಸೂಪರಿಂಟೆಂಡೆಂಟ್‌ರವರ ಅಭಿಪ್ರಾ ಯವನ್ನು ಕೇಳಿದ್ದರಲ್ಲಿ ಅವರು ಕೀರೆಮಡಿಗೋಸ್ಕರ ಜಮೀನನ್ನು ಬಿಡಿಸಿ ೊಳ್ಳುವದು ಪೂರ್ವಕಾಲದಿಂದ ಸಂಸ್ಥಾನದ ಅನೇಕ ಗ್ರಾಮಗಳಲ್ಲಿ ರೈ ರ ಹಕ್ಕಾಗಿದೆ; ಹಾಗೆ ಬಿಡಿಸಿಕೊಂಡ ಜಮೀನಿನಲ್ಲಿ ಯಾವ ಒಬ್ಬ ರೈತನಿ ಾಗಲಿ ಸ್ವಂತ ಹಕ್ಕು ಹುಟ್ಟುವದಿಲ್ಲ; ಗ್ರಾಮಸ್ಥರೆಲ್ಲಾ ಕಂದಾಯ ೊಡದೆ ಅನುಭವಿಸತಕ್ಕದ್ದಾಗಿದೆ; ಮತ್ತು ಇಂಥಾ ಅನುಭವವು ಖಂಡು ಳಿ ಹಕ್ಕನ್ನುಂಟುಮಾಡುವದಿಲ್ಲವೆಂದು, ಸೂಚಿಸಿರುತ್ತಾರೆ.

೪. ಮೇಲ್ಕಂಡ ಸಂದರ್ಭಗಳಿಂದ ಸರ್ಕಾರದವರು ಇದುವರಿವಿಗ ಗೌರವಿಸಲ್ಪಟ್ಟಿರುವ ಸದರಿ ಪದ್ಧತಿಯನ್ನು ಅಂಗೀಕರಿಸಿ ಸರ್ವೆ ೨೪ ನಂಬರಿಗೋಸ್ಕರ ಸಲ್ಲತಕ್ಕ ಕಂದಾಯವನ್ನು ಮಾಫ್ ಮಾಡಿ ಇದನ್ ಹೊಲೆಯರಿಗೇನೆ ಕೀರೆಮಡಿಗಾಗಿ ಬಿಟ್ಟುಕೊಟ್ಟಿರುತ್ತಾರೆ.

II.

ನಂ. ಆರ್ ೮೯೯೦—೯೯ ಎಲ್. ಆರ್. ೨೬೪-೦೮-೪ ತಾ|| ೨—೬—೧೦.

ತಹಲ್ ಜಾರಿಯಲ್ಲಿರುವ ಹುಕುಮುಗಳ ಪ್ರಕಾರ ಕಬ್ಬಿಣ ತಯ ರಿ ಮಾಡುವವನು ಕೊಲಿಮೆ ಯೊಂದಕ್ಕೆ ಸರಕಾರಕ್ಕೆ ಸಾಲಿಯಾ ೨೧ ರಿಂದ ೩೦ ರೂ ವರಿಗೆ ಮೊಹತರ್ಫಾ ಕಂದಾಯವನ್ನು ಆಯಾ ಸ್ಟ್ರಿಕ್ಟು ವಿದ್ಯಮಾನಗಳನ್ನನುಸರಿಸಿ ಕೊಡುತ್ತಾ ಇರುತ್ತಾನೆ. ದರೆ ತಯಾರಿ ಬಗ್ಗೆ ಬೇಕಾಗುವ ಇದ್ದಲು ಮಾತ್ರ ಡಿಸ್ಟ್ರಿಕ್ಟ ಫ ರೆಸ್ಟುಗಳಿಂದ ಮುಫತ್ತು ತಂದುಕೊಳ್ಳುತ್ತಾನೆ.

೨. ಈ ವಿಷಯವಾಗಿ ಮೈಸೂರು ದಸರಾ ರೆಪ್ರಜೆಂಟೇಟಿವ್ ಸೆಂಬ್ಲಿಯವರು ಪದೇ ಪದೇ ಅಹವಾಲ್ ಹೇಳಿಕೊಂಡಿರುವದರಿಂದಲೂ ಈ ಕಸಬು ಇನ್ನೂ ಬಹಳ ಹೀನ ಸ್ಥಿತಿಯಲ್ಲಿರುವದರಿಂದಲೂ ಬ್ಬಿಣ ತಯಾರಿ ಮಾಡುವವರಿಗೆ ಸ್ವಲ್ಪ ರಿಯಾಯಿತು ತೋರಿಸುವದ ಯುಕ್ತವೆಂದು ಸರ್ಕಾರದವರಿಗೆ ತೋರುತ್ತೆ. ಆದ್ದರಿಂದ ಸರ್ಕಾರದವ ೧೯೧೦ನೆ ಇಸವಿ ಜುಲೈ ಗುರೆ೧ ತಾರೀಖು ಲಾಗಾಯಿತು ಕಬ್ಬಿಣ ತಯಾ ಮಾಡುವವರು ಮೇಲೆ ಹಾಕಿರುವ ಮೊಹತರ್ಫಾ ಕಂದಾಯವನ್ನು ವಜ ಮಾಡಿ ತಯಾರಿ ಬಗ್ಗೆ ಸಾಗಿಸುವ ಇದ್ದಲಿನ ಮೇಲೆ ಮಾತ್ರ ಸುಂಕವನ್ನು ವಸೂಲು ಮಾಡತಕ್ಕದ್ದೆಂದು ಅಪ್ಪಣೆ ಕೊಟ್ಟಿರುತ್ತಾರೆ.

ಇದ್ದಲಿನ ಸುಂಕವನ್ನು ಫಾರೆಸ್ಟು ಇಲಾಖೆಯ ಅನುಕೂಲತೆಗಳನ್ನು ಅನುಸರಿಸಿ ಫಾರೆಸ್ಟ್ ಕನ್ಸರ್ವೇಟರವರು ಆಯಾ ಡಿಸ್ಟ್ರಿಕ್ಟು ಡೆಪ್ಯುಟಿ ಮಿಷನರವರ ಅಭಿಪ್ರಾಯದ ಮೇರೆ ಗೊತ್ತುಮಾಡಿ, ಯಥಾ ವಿಧಿಯಾ ಇಸ್ತಿಹಾರಿನ ಮೂಲಕ ಪಬ್ಲಿಷ್‌ಮಾಡಿದ ಮೇಲೆ ಸರ್ಕಾರಕ್ಕೆ ಇಸ್ತಿಹಾ ನ ಕಾಪಿಯನ್ನು ಕಳುಹಿಸತಕ್ಕದ್ದು.

೩. ಸದರಿ ಏರ್ಪಾಟು ೫ ವರುಷಗಳವರಿಗೆ ಹಂಗಾಮಿಯಾಗಿ ಮಂ
ಜೂರು ಮಾಡಿರುತ್ತೆ. ಪ್ರತಿವರ್ಷದ ಅಂತ್ಯದಲ್ಲಿ ಡೆಪ್ಯೂಟಿ ಕಮಿಾಷನರ
ರುಗಳು ಆಯಾ ಡಿಸ್ಟ್ರಿಕ್ಟಿನಲ್ಲಿ ಎಷ್ಟೆಷ್ಟು ಕೊಲಿಮೆಗಳು ಇರುತ್ತ
ವೆಯೋ, ಎಷ್ಟೆಷ್ಟು ಕಬ್ಬಿಣವು ತಯಾರಾಗುತ್ತೊ, ಇದ್ದಿಲು ಖರ್ಚು
ಸುಂಕದ ಹುಟ್ಟುವಳಿ ಯೆಷ್ಟೊ ಈ ಅಂಶಗಳಿಗೆ ರಿಪೋರ್ಟುಗಳನ್ನು
ಸರ್ಕಾರಕ್ಕೆ ಕಳುಹಿಸುತ್ತಿರಬೇಕು.

Notifications.

ಇಸ್ತಿಹಾರ್‌ನಾಮೆಗಳು.

ನಂ. ೧೨೬೭. ತಾ|| ೧೧—೬—೧೯೧೦.

ಮೈಸೂರ್ ಸರ್ವಿಸ್ ರೆಗ್ಯುಲೇಷನ್ ೨೦೧ನೆ ಪ್ರಕರಣದಮೇರೆ
ಕಡೂರ್ ಸಬ್ ಡಿವಿಜನ್ ಅಕ್ಟಿಂಗ್ ಅಸಿಸ್ಟೆಂಟ್ ಕಮಿಾಷನರ್ ಮೆ|| ಯಂ.
ಕೃಷ್ಣಸ್ವಾಮಿ ಅಯ್ಯಂಗಾರ್ರವರಿಗೆ ೧೯೧೦ನೆ ಮೇ ೧೬ನೆ ತಾರೀಖು ಲಾ
ಗಾಯಿತು ೨೪ನೆ ತಾರೀಖಿನ ವರಿವಿಗೆ ೯ ದಿನಗಳ ಎಗ್ಸಾಮಿನೇಷನ್ ರಜಾ
ಮಂಜೂರಾಗಿತ್ತು.

ಇವರ ಗೈರ್ ಹಾಜರಿಯಲ್ಲಿ ಕಡೂರ್ ಡಿಸ್ಟ್ರಿಕ್ಟ್ ಟ್ರೆಜರಿ ಅಸಿಸ್ಟೆಂ
ಟು ಕಮಿಾಷನರವರು ಕಡೂರ್ ಸಬ್ ಡಿವಿಜನ್ ಛಾರ್ಜಿನಲ್ಲಿದ್ದರು.

ನಂ. ತಾ|| ೧೪—೬—೧೯೧೦.

ಮೈಸೂರ್ ಸರ್ವಿಸ್ ರೆಗ್ಯುಲೇಷನ್ ೧೭೭ನೆ ಪ್ರಕರಣದ ಮೇರೆ
ದಾವಣಗೆರೆ ತಾಲ್ಲೂಕ್ ಅಮಲ್ದಾರ್ ಮೆ|| ಟಿ. ವೆಂಕಟ್ರಾಮಯ್ಯನವರಿಗೆ
೧೯೧೦ನೆ ಜೂನ್ ೬ನೆ ತಾರೀಖು ಲಾಗಾಯಿತು ಅಥವಾ ಅವರು ಉಪಯೋ
ಗಿಸಿಕೊಳ್ಳುವ ತಾರೀಖು ಲಾಗಾಯಿತು ೧೫ ದಿನಗಳ ಪ್ರಿವಿಲೇಜ್ ರಜಾ
ಮಂಜೂರಾಗಿರುತ್ತೆ.

ಇವರ ಗೈರು ಹಾಜರಿಯಲ್ಲಿ ತಾಲ್ಲೂಕು ಶಿರಸ್ತೇದಾರ್ ತಾಲ್ಲೂಕು
ಛಾರ್ಜಿನಲ್ಲಿರತಕ್ಕದ್ದು.

ನಂ. ೧೨೭೫೧. ತಾ|| ೧೪—೬—೧೯೧೦.

ಪಾವಗಡ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮಿ|| ಸೈಯದ್ ರೂಬ
ರವರಿಗೆ ೧೯೧೦ನೆ ಇಸವಿ ಮೇ ೩ನೆ ತಾರೀಖಿನ ೧೧೧೨೧ನೆ ಇಸ್ತಿಹಾರ
ಮೆಯಲ್ಲಿ ಕೊಟ್ಟಿದ್ದ ೧೫ ದಿನಗಳ ಪ್ರಿವಿಲೇಜ್ ರಜಾಪೈಕಿ ೧೨ ದಿನಗ
ಮಾತ್ರ ಅವರು ಉಪಯೋಗಿಸಿಕೊಂಡದ್ದರಿಂದ ಬಾಕಿ ೩ ದಿನಗಳ ರಜ
ವನ್ನು ರದ್ದುಮಾಡಿರುತ್ತೆ.

Occasional Notes.

ವಿವಿಧ ವೃತ್ತಾಂತಗಳು.

೧. ಹಳೆರಬ್ಬರನ್ನು ಹೊಸದನ್ನಾಗಿ ಮಾಡುವಿಕೆ:—ಈಚೆಗೆ ರಬ್ಬರಿ
ಖರೀದಿಯು ದಿನೆ ದಿನೆ ಹೆಚ್ಚುತ್ತಿರುವುದರಿಂದ ಕೆಟ್ಟುಹೋದ ಹಳೇ ರಬ
ರನ್ನು ಹೊಸದನ್ನಾಗಿ ಮಾಡುವದಕ್ಕೆ ಪ್ರಯತ್ನಗಳು ನಡೆಯುತ್ತಿ
೧೯೦೬—೦೭—೦೮ನೆ ಸಾಲುಗಳಲ್ಲಿ ಇಂಡಿಯಾ ದೇಶದ ರೈಲ್ವೆ ಕಂಪೆನಿಗ
ಸುಮಾರು ೮೫ ಟನ್ ಹಳೇ ರಬ್ಬರನ್ನು ಮಾರಿರುತ್ತಾರೆ. ಹೀಗೆ ಮಾ
ದ್ದಕ್ಕೆ ಸರಾಸರಿ ಪೌಂಡು ಒಂದಕ್ಕೆ ೦-೩-೧ ಖರೀದಿ ದೊರೆತಿರುತ್ತೆ.—
ಇಂಡಿಯನ್ ಅಗ್ರಿಕಲ್ಚರಿಸ್ಟ ೧—೩—೧೦.

---

೨. ಉಪ್ಪಿನ ಕರ್ಚು.—ಹತ್ತುವರ್ಷಗಳ ಹಿಂದೆ ಇಂಡಿಯಾ ದೇಶ
ಜನರು ೯ ತಿಂಗಳುಗಳ ಕಾಲದಲ್ಲಿ ೨೬,೧೭೨೦೦ ಮಣಗಳ ಉಪ್ಪನ್ನು ಕೊ
ಡುಕೊಳ್ಳುತ್ತಿದ್ದವರು ಈಚೆಗೆ ಉಪ್ಪಿನ ಸುಂಕವು ಕಮ್ಮಿ ಮಾಡಿದ್ದರಿಂ
ಕಳೆದ ಜುಲೈ ಲಾಗಾಯಿತು ೯ ತಿಂಗಳುಗಳ ಕಾಲದಲ್ಲಿ ೩೨೪೮೮೦೦
ಮಣಗಳ ಉಪ್ಪನ್ನು ಕೊಂಡುಕೊಂಡು ಇರುವಂತೆ ಅಂದಾಜು ಮಾಡಲ
ಟ್ಟಿರುತ್ತೆ.

---

೩. ಹತ್ತಿ ಫಸಲು.—ಇಂಡಿಯಾ ದೇಶವು ವಿಶೇಷ ಹತ್ತಿ ಬೆಳೆಯು
ದೇಶಗಳಲ್ಲೊಂದಾಗಿದೆ. ಈಗ ವರುಷಗಟ್ಲೆ ಸುಮಾರು ೫,೫೦,೦೦೦ ಬಿ
೮,೫೦,೦೦೦ ಟನ್‌ಗಳಷ್ಟು ಹತ್ತಿ ಉತ್ಪತ್ತಿಯಾಗುತ್ತಾ ಇದೆ. ಇನ್

ುಂದೆ ೪-೫ ವರುಷಗಳೊಳಗಾಗಿ ಇಂಡಿಯಾ ದೇಶದ ಹತ್ತಿಯ ಉತ್ಪತ್ತಿ ಯು ಈಗಿರುವದಕ್ಕಿಂತ ೪ರಷ್ಟು ಹೆಚ್ಚಾಗಿ ಆಗಬಹುದೆಂದು ನಿಪುಣರು ಊ ಸುತ್ತಾರೆ.—ಇಂಡಿಯನ್ ಅಗ್ರಿಕಲ್ಚರಿಸ್ಟ್, ೧—೩—೧೯೧೦.

---

೪. ಕೋಳಿ ಮುಂತಾದವುಗಳನ್ನು ಸಾಕುವಿಕೆ:—ಲಾಹೋರಿನ ಹತ್ತರೆ ಫೇದಾರ್ ಗುಲಾಂ ಮಹಮ್ಮದ್ ಎಂಬುವರು ಸರ್ಕಾರದಿಂದ ಜಮೀನನ್ನು ಲವು ರಿಯಾಯಿತಿಗಳ ಮೇಲೆ ಪಡದು ಅದರಲ್ಲಿ ಆಹಾರ ಯೋಗ್ಯವಾದ ರಹೇವಾರಿ ಕೋಳಿಗಳು, ಬಾತುಗಳು ಮುಂತಾದವುಗಳನ್ನು, ಬಹು ಹೆ ಚ್ಚಾಗಿಯೂ ಮತ್ತು ಅತಿಶಯವಾಗಿಯೂ ಸಾಕಿ ವಿಶೇಷವಾಗಿ ಮಾರಾಟ ಾಡುವದಕ್ಕೆ ಉಪಕ್ರಮಿಸಿರುವಂತೆ ತಿಳಿದು ಬಂದಿರುತ್ತೆ.

---

೫. ಪಿಚೀಸು ಮುಂತಾದ ಹಣ್ಣಿನ ಗಿಡಗಳಿಗೆ ಹುಳುಗಳು ಬಿದ್ದಲ್ಲಿ ಾಮಿಟೊ(ಅವಗೂದೆ ಅಥವಾ ಶೀಮೆಬದನೆ)ಎಲೆಯ ಕಷಾಯವನ್ನು ಮಾಡಿ ಮುಕಿಸಿದರೆ ಅವೆಲ್ಲಾ ಸಾಯುವವೆಂದು ಒಬ್ಬ ಫ್ರಾನ್ಸು ದೇಶದ ರೈತ ಅಜಮಾಯಿಷಿ ಮಾಡಿ ಕಂಡು ಹಿಡಿದಿರುತ್ತಾನೆ. ಆದ್ದರಿಂದ ಸಾಮಾನ್ಯ ಾಗಿ ಟಾಮಿಟೊ ಗಿಡಗಳನ್ನು ಬೆಳೆಯುವವರು ಇತರ ಹಣ್ಣಿನ ಗಿಡಗಳಿಗೆ ಂಭವಿಸುವ ಹುಳಗಳ ಬಾಧೆಯನ್ನು ಸುಲಭವಾಗಿ ಜಾಸ್ತಿ ವ್ಯಯವಿಲ್ಲದೆ ಪ್ಪಿಸಿಕೊಳ್ಳಬಹುದು.—ಇಂಡಿಯನ್ ಅಗ್ರಿಕಲ್ಚರಿಸ್ಟ್, ೧—೩—೧೦.

---

೬. ಮಾವಿನ ಗಿಡವು ವಿಶೇಷವಾಗಿ ಬೆಳೆದು ಹೋಗದಂತೆ ರಂಬೆಗಳನ್ನು ತ್ತರಿಸುವದರಲ್ಲಿ ಕೂಡಿದ ಮಟ್ಟಿಗೆ ಬುಡದಿಂದ ಹೊರಡುವ ದಿಂಡಿಗೆ ಸ ಾನವಾಗಿರುವಂತೆ ಕತ್ತರಿಸುವದು ಒಳ್ಳೇದು. ಏಕಂದರೆ ಹೀಗೆ ಮಾಡಿದಲ್ಲಿ ತದ ಗಾಯಗಳು ಬೇಗ ಮಾಯುವವು. ರಂಬೆಗಳನ್ನು ಕತ್ತರಿಸಿದ ಮೇ ಶಿವರುಗಳು ನಿಲ್ಲದಂತೆ ಮೊನಚಾದ ಕತ್ತಿಯಿಂದ ಸಮಮಾಡಿ ಕೊನೆಗ ೆ ಟಾರನ್ನು ಬಳಿಯಬೇಕು. ಬಲಿತ ಮರಗಳ ರಂಬೆಗಳನ್ನು ಬೇಹು ಾರಾಗಿ ಕಡದರೆ ಗಾಯಗಳಿಗೆ ಹುಳುಗಳು ಬೀಳುವದಲ್ಲದೆ ರೋಗ ತಗಲಿ ೀಗ ಒಣಗಿಹೋಗುವವು.

---

೭. ಮದರಾಸು ಪಟ್ಟಣದ ಕಿಲ್ಪಾಕೆಂಬ ಸ್ಥಳದಲ್ಲಿ ಮೆ|| ಡಬ್ಲ್ಯು ಎಚ್. ಪಾರ್ಗ್ಸ್ ಎಂಬುವರೊಬ್ಬರು ಇರುತ್ತಾರೆ. ಇವರು ಜಮೀನಿನ ಯಾವ ಭಾಗದಲ್ಲಿ ಭಾವಿಗಳನ್ನು ತೋಡಿದರೆ ನೀರು ತಪ್ಪದೆ ಯಥೇಚ್ಛವಾಗಿ ಸಿಕ್ಕುತ್ತದೆಯೋ ಅದನ್ನು ಹೇಳಲು ಶಕ್ತಿ ಉಳ್ಳವರಾಗಿರುತ್ತಾರಂತೆ. ಫೀಜುಕೊಟ್ಟರೆ ಬೇಕಾದವರಿಗೆ ಇವರ ಸಹಾಯ ದೊರಿಯುತ್ತೆ.

ಮೆ|| ಪಾರ್ಗ್ಸ್‌ರವರು ಕಯ್ಯಲ್ಲಿ ಒಂದು ಕಡ್ಡಿಯನ್ನು ಹಿಡಿದು ಕೊಂಡು ಜಮೀನಿನಲ್ಲಿ ನಿಂತಾಗ ಆ ಕಡ್ಡಿಯು ತಿರುಗುವ ರೀತಿಯಿಂದ ಜಲವಿರುವದು ಅಥವ ಇಲ್ಲದೆ ಇರುವದನ್ನು ಗೊತ್ತುಮಾಡುತ್ತಾರಂತೆ.

---

೮. ಇಂಡಿಯಾದೇಶದ ವನಸ್ಪತಿ ನೀತಿಶಾಸ್ತ್ರಜ್ಞರಾದ (Imperial Economic Botanist) ಮೆ|| ಹೋವರ್ಡೆಂಬುವರು ಹೇಳುವದೇನೆಂದರೆ: ಹಾಲಿ ಈ ದೇಶದಲ್ಲಿ ಆಗುವ ಗೋಧಿ ಫಸಲಿಗೆ ಸಾಮಾನ್ಯವಾಗಿ ಒಂದು ವಿಧ ಬೂಜು ಸಂಬಂಧವಾದ ರೋಗವು ತಗಲುತ್ತದೆ. ಧಾನ್ಯವೂ ಕೂಡ ಅಷ್ಟು ಉತ್ತಮ ರಖಮಿನದಲ್ಲ. ಇದರ ಹುಲ್ಲೂ ದೀರ್ಘಕಾಲವಿಟ್ಟರೆ ಕೆಟ್ಟು ಹೋಗುತ್ತದೆ. ಈ ದೋಷಗಳನ್ನು ಸರಿಪಡಿಸಿಕೊಳ್ಳುವದು ಅಸಾಧ್ಯವಾಗಿರುವದಿಲ್ಲ. ಹಾಗೆ ಮಾಡಿದ ಪಕ್ಷದಲ್ಲಿ ಇಂಡಿಯಾದೇಶಕ್ಕೆ ಗೋಧಿ ಬೆಳೆಯಿಂದಲೆ ಸುಮಾರು ೯ ಕೋಟಿ ರೂಪಾಯಿಯಷ್ಟು ಹೆಚ್ಚು ಆದಾಯ ಉಂಟಾಗಬಹುದು.—ಇಂಡಿಯನ್ ಅಗ್ರಿಕಲ್ಚರಿಸ್ಟ್, ೬—೩—೧೯

---

೯. ಬಂಕೂಬತ್ತವನ್ನು ಕುಟ್ಟುವದರಿಂದ ಕರಗುವಡಿಯಾಗುವಷ್ಟು ಅಕ್ಕಿಯು ಇನ್ಯಾವತರಹದ ಬತ್ತದಿಂದಲೂ ಆಗುವದಿಲ್ಲವೆಂದು ಮದರಾಸ ಧಿಪತ್ಯದ ವ್ಯವಸಾಯ ಇಲಾಖೆಯ ಮೆ|| ಎಚ್. ಸಿ. ಸಾಂಪ್ಸನ್ ಎಂಬುವ ರು ತಿಳಿಸಿರುತ್ತಾರೆ. ಈ ಬತ್ತದ ಮೊಳಕೆಗಳನ್ನು ಒಂದೊಂದು ಅಥ ತಂಡ ತಂಡವಾಗಿ ಹೇಗೆ ನಾಟಿದರೂ ಒಳ್ಳೆ ಫಸಲಾಗುತ್ತೆ. ಮುಂಗಾರು ಮ ಳೆ ಪ್ರಾರಂಭವಾಗುತ್ತಲೆ ಬಿತ್ತಿದರೆ ೪—೪½ ತಿಂಗಳುಗಳಲ್ಲಿ ಫಸಲು ಕಟಾ ವಿಗೆ ಸಿದ್ಧವಾಗುತ್ತೆ. ನೀರು ಹಾಯಿಸದೆ ಹೋಗುವದರಿಂದ ಬೆಳೆಯನ್ನು

ಡುವದಿಲ್ಲ. ಜನವರಿಯಿಂದ ಮೇ ತಿಂಗಳು ವರಿಗಿನ ಮಧ್ಯಕಾಲದಲ್ಲಿ ಾತ್ರ) ಬಂಕು ಬತ್ತವು ಸಾಗುವಳಿ ಮಾಡತಕ್ಕದ್ದಲ್ಲ.

---

೧೦. ಒಂಗೋಲ್ ಪಟ್ಟಣದಲ್ಲಿ ಕಳೆದ ಫೆಬ್ರವರಿ ತಿಂಗಳಲ್ಲಿ ಒಂದು ದನ ರುಗಳ ಪ್ರದರ್ಶನವು ಜರುಗಿತು. ಆಗ್ಯೆ ಪ್ರದರ್ಶನಾಧ್ಯಕ್ಷರಾದ ಮೆ|| ್ಯಸೆಲ್‌ಸ್ಟ್ಯುಯರ್ಟ್ ಸ್ಟ್ಯುಯರ್ಟ್ ಎಂಬುವರು ದನಗಳ ಸಂರಕ್ಷಣೆಯು ಷಯುವಾಗಿ ಹೇಳಿರುವದೇನಂದರೆ:—ಕರುವು ಎಳೆದಾಗಿರುವಾಗ ಅದಕ್ಕೆ ಥೇಚ್ಛವಾಗಿ ಆಹಾರ ಸಿಕ್ಕದಹಾಗೆಲ್ಲಾ ಹ್ಯಾಗೆಮ ನೋಹರವಾಗಿ ಬೆಳೆ ದಡೂತಿಯಾಗುತ್ತದೆಯೋ ಹಾಗೆ ಎಳೆತನ ತೀರಿ ವಯಸ್ಸು ಹೆ ಚ್ಚಗುತ್ತಾ ಆಹಾರ ಯಥೇಚ್ಛವಾಗಿದ್ದರೂ ಮೈ ಇಡುವದಿಲ್ಲ. ಡು ಹಲ್ಲು ಮಾತ್ರವಾಗಿರುವ (ಅಂದರೆ ೨—೨| ವರುಷ ವಯ ಸ್ಸುಮಾತ್ರವಾಗಿರುವ) ಕಡಸುಗಳು ಕರುಗಳನ್ನು ಹಾಕಿದಲ್ಲಿ ಹಾಲು ಡದೋಣದರಿಂದ ಚೆನ್ನಾಗಿ ಮೈ ಇಟ್ಟು ಅವುಗಳು ಬೆಳೆಯುವದಿಲ್ಲ. ರುಗಳುಕೂಡ ಅಕಾಲದಲ್ಲಿ ಈಯುವ ತಾಯಿ ಹಸುಗಳು ಯಥೇಚ್ಛವಾಗಿ ಾಲು ಕೊಡಲಾರವಾದುದರಿಂದ ಮೈ ಇಟ್ಟು ಬೆಳೆಯದೆ ಕೆಟ್ಟುಹೋಗುವ ು. ಆದಕಾರಣ ರೈತರು ದನಗಳ ದಾರಣೆವಾಸಿಗಳು ಚಡಾವಿನಲ್ಲಿದ್ದರೂ ೇಗಬೇಗ ಕರುಗಳನ್ನು ತೆಗದುಕೊಂಡು ದನಗಳ ಮಂದೆಯನ್ನು ಹೆಚ್ಚಿ ಬೇಕೆಂಬುವ ಆಶೆಯನ್ನು ಬಿಟ್ಟುಬಿಟ್ಟು ನ್ಯಾಯವಾದ ವಯಸ್ಸಿಗೆ ಬ ುವದಕ್ಕಿಂತ ಮುಂಚೆ ಕಡಸುಗಳಿಗೆ ಗೂಳಿಗಳನ್ನು ಕೊಡದಹಾಗೆ ಎಚ್ಚ ವಾಗಿರಬೇಕು.—ಇಂಡಿಯನ್ ಅಗ್ರಿಕಲ್ಚರಿಸ್ಟ್, ೧—೩—೧೦.

---

(೧೧) ಬೇಸಾಯಕ್ಕೆ ಬಿಸಲಿನ ಉಪಯೋಗ.—ಮೆ||ಗಳಾದ ಹೋ ರ್ಕ್‌ರೆಂಬುವರು ಹೇಳುವದೇನಂದರೆ:—

ಕಬ್ಬು, ಹೊಗೆಸೊಪ್ಪು, ಪಟ್ಟಣಗಳ ಹತ್ತಿರ ಇಡುವ ತರಕಾರಿ ಫ ಲು ಇವುಗಳ ವಿನಾ ಬಾಕಿ ಫಸಲಿಗೆ ಗೊಬ್ಬರ ಹಾಕುವದು ಇಂಡಿಯಾ ೇಶದಲ್ಲಿ ಬಹಳ ಕಡಿಮೆ. ಯವಕ್ಷಾರ (Nitrogen)ಯುಕ್ತವಾದ ಗೊ ಬ್ಬರವನ್ನು ತಹಲಿಗಿಂತ ಹೆಚ್ಚಾಗಿ ಹೊಲ ಗದ್ದೆಗಳಿಗೆ ಹಾಕುವದು ಲಾಭ

ಕರವಾದದ್ದೆ; ಆದಾಗ್ಯೂ ರೈತರು ಜಮೀನುಗಳ ಮೇಲ್ಮಣ್ಣು ವಿಶೇಷ
ಸಲಿನಿಂದ ಸುಡಲ್ಪಡುವಂತೆ ಕ್ರಮಗಳನ್ನು ಆಚರಿಸಿದರೆ ಇನ್ನೂ ಅತಿಶ
ವಾಗಿ ಲಾಭಕರವಾಗುವದರಲ್ಲಿ ಸಂಶಯ ವಿರುವದಿಲ್ಲ. ಸದ್ಯದಲ್ಲಿ ರೈ
ರು ಉಪಯೋಗಿಸುತ್ತಿರುವ ಮರದ ನೇಗಿಲುಗಳು ಅಷ್ಟು ಪ್ರಯೋಜ
ಕಾರಿಗಳಲ್ಲ. ಯಾಕಂದರೆ, ಇವುಗಳಿಂದ ಮಳೆಯಿಂದ ನೆನೆಯದ ಜಮೀನು
ಳು ಹರಿಯುವದಿಲ್ಲವಾದಕಾರಣ ಮಳೆಗಾಲ ಬರುವವರಿಗೂ ಜಮೀನುಗ
ನ್ನು ಉಳುಮೆ ಮಾಡದೆ ಸುಮ್ಮನೆ ಬಿಡಬೇಕಾಗುತ್ತದೆ. ಆದಕಾರ
ವೈಶಾಖ ಬೆಳೆ ಕಟಾವಾಗುತ್ತಲೆ ಸುಲಭ ಕ್ರಯಕ್ಕೆ ದೊರೆಯುವ ಮತ
ಮೇಲ್ಮಣ್ಣನ್ನು ತಲೆಕೆಳಗುಮಾಡುವ ಕಬ್ಬಿಣದ ನೇಗಿಲುಗಳನ್ನು ಕೊಂ
ಕೊಂಡು ಅವುಗಳಿಂದ ಪದೆ ಪದೆ ಬೇಸಿಗೆಯಲ್ಲಿ (ಏಪ್ರಿಲ್ ಮತ್ತು ಮೆ
ಉಳುತ್ತಾ ಬಂದರೆ ಜಮೀನಿನಲ್ಲಿ ರೋಗ ಹರಡುವ ಕ್ರಿಮಿಕೀಟವೆಲ್ಲಾ
ತ್ತು ಒಳ್ಳೇ ಫಸಲಾಗುವದಕ್ಕೆ ದಾರಿಯಾಗುವದು.

ಸೌತೆಕಾಯಿ ಬಳ್ಳಿಗಳನ್ನು ನೆಲದಮೇಲೆಯೆ ಹರಡಿಕೊಳ್ಳುವ
ಕ್ಕೆ ಬಿಡದೆ ಚಪ್ಪರದಮೇಲೆ ಹಬ್ಬಿಸಿದರೆ ಕಾಯಿಗಳು ಉದರಿಹೋಗ
ಮತ್ತು ನರಟಿಕೊಂಡಿರದೆ ದಪ್ಪನಾಗುತ್ತವೆಯೆಂತಲೂ ಹೀಗೆ ಹಬ್ಬಿಸು
ದಕ್ಕೆ ಬಳ್ಳಿಗಳಲ್ಲಿ ಹೂ ಬಿಡುವದು ಪ್ರಾರಂಭವಾಗುತ್ತಲೆ ಒಳ್ಳೆ ಸಮಯ
ವಾಗಿರುತ್ತೆಂತಲೂ ಬೊಂಬಾಯಿ ಸರ್ಕಾರಿ ವ್ಯವಸಾಯ ಇಲಾಖಾ ೧೯೦೮—
೦೯ನೆ ಸಾಲ್ ರಿಪ್ರೋರ್ಟಿನಿಂದ ತಿಳಿಯಬರುತ್ತೆ.

V. B. SOOBBIAH AND SONS, PRINTERS, BANGALORE —1910.

THE MYSORE

REVENUE & AGRICULTURAL GAZETTE.

ವಾಲ್ಯೂಂ ೪.] ಶುಕ್ರವಾರ, ೧೫ನೆ ಜುಲೈ ೧೯೧೦. [ನಂ. ೧೭.

Contents.

Cattle Manure.

The Kirkee Civil Dairy.

Agricultural Impliments.

A few points regarding Paddy Cultivation.

Revenue Appeals.

Notifications.

Occasional Notes.

(i) Co-operative Society at Chickballapur. (ii) Composition of Rice. (iii) Soy bean Seeds. (iv) Progress of Co-operative Movement. (v) Application of Manure. (vi) Loss occasioned by using Cattle dung as Fuel. (vii) Honey.

ಅನುಕ್ರಮಣಿಕೆ.

೧. ದನಗಳ ಗೊಬ್ಬರ.

೨. ಕರ್ಕಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಕರೆಹಟ್ಟಿ.

೩. ವ್ಯವಸಾಯ ಮುಟ್ಟುಗಳು.

೪. ಬತ್ತದ ಸಾಗುವಳಿ ವಿಷಯವಾಗಿ ಕೆಲವು ಸಲಹೆಗಳು.

೫. ರೆವಿನ್ಯು ಅಪೀಲುಗಳು.

೬. ಇಸ್ತಿಹಾರುನಾಮೆಗಳು.

೭. ವಿವಿಧ ವೃತ್ತಾಂತಗಳು.

(i) ಚಿಕ್ಕಬಳ್ಳಾಪುರದ ಪರಸ್ಪರ ಸಹಾಯ ಸಂಘ (ii) ಅಕ್ಕಿಯಲ್ಲಿರುವ ಪದಾರ್ಥಗಳು (iii) ಸೋಯಾ ಅವರೆ ಬೀಜ (iv) ಕೋಆಪರೇಟಿವ್ ಸೊಸೈಟಿಗಳ ಅಭಿವೃದ್ಧಿ. (v) ಜಮೀನಿಗೆ ಗೊಬ್ಬರವನ್ನು ಕೊಡುವ ರೀತಿ (vi) ದನಗಳ ಸಗಣಿಯನ್ನು ಬೆರಣಿಮಾಡಿ ಉರಿಸುವದರಿಂದ ಆಗುವ ನಷ್ಟ (vii) ಜೇನುತುಪ್ಪ.

Cattle Manure.

ದನದ ಗೊಬ್ಬರ.

ದನಗಳ ಗೊಬ್ಬರದಲ್ಲಿ ಯವಕ್ಷಾರ (Nitrogen) ರಂಜಕಾವ್ಲ (Phosphoric Acid) ಮತ್ತು ಪೋಟಾಷ್ (Potash) ಉಪ್ಪುಗಳು

ಇರುವದ್ದರಿಂದ ಎಲ್ಲಾ ಸಸ್ಯಾಹಾರಗಳನ್ನು ಒಡಗೂಡಿರುವ ಸರ್ವೋ
ತ್ತಮವಾದ ಗೊಬ್ಬರವೆಂದು ಹೇಳಬಹುದು. ಆದರೆ ಒಳ್ಳೆ ತರಹೆ ದ
ನದ ಗೊಬ್ಬರವು ಸಿಕ್ಕುವದು ಬಹಳ ದುರ್ಲಭ. ಇದಲ್ಲದೆ ಭಾರಿ ಜ
ಮೀನುಗಳುಳ್ಳ ರೈತನು ತನ್ನ ಜಮೀನುಗಳಿಗೆಲ್ಲಾ ಸಾಕಾಗುವ ಹಾಗೆ
ಸಗಣಿ ಗಂಜಲಗಳನ್ನು ಕೊಡುವಷ್ಟು ದನಗಳನ್ನು ಸಾಕುವದೆಂದರೆ ಬಹಳ
ಕಷ್ಟ. ಯಾಕಂದರೆ ಅವುಗಳಿಗೆಲ್ಲಾ ಬಿಸಲುಕಾಲದಲ್ಲಿ ಮೇವನ್ನು ನೀ
ರನ್ನು ಒದಗಿಸುವದು ವಿಶೇಷ ಪ್ರಯಾಸಕರವಾಗುತ್ತದೆ. ಇಂಥಾ ಸಂದ
ರ್ಭದಲ್ಲಿ ಎಷ್ಟುಮಟ್ಟಿಗೆ ರೈತನು ದನಗಳ ಗೊಬ್ಬರವನ್ನು ಒದಗುವಂತೆ
ಮಾಡಿಕೊಳ್ಳಬಹುದೊ ಅಂಥ ಏರ್ಪಾಟುಗಳನ್ನು ತಿಳಿದುಕೊಳ್ಳುವದು
ಒಳ್ಳೇದು.

ದನಗಳು ಸಗಣಿ ಮತ್ತು ಗಂಜಲ ರೂಪವಾಗಿ ಎರಡು ವಿಧ ಗೊಬ್ಬ
ರವನ್ನು ಕೊಡುವವು. ಏನುಚ ಸಗಣಿಯಲ್ಲಿರುವದಕ್ಕಿಂತ ೨-೩ ಪಾಲು
ಹೆಚ್ಚಾಗಿ ಗಂಜಲದಲ್ಲಿ ಸಸ್ಯಾಹಾರ ಪದಾರ್ಥಗಳು ಇರುವ ಅಂಶವನ್ನು
ಚನ್ನಾಗಿ ನೆನಪಿನಲ್ಲಿ ಇಟ್ಟುಕೊಳ್ಳಬೇಕು.

ಕುಪ್ಪೆ ಹಾಕಿದ ಗೊಬ್ಬರದಲ್ಲಿ ಸಾರವು ಕಡಿಮೆಯಾಗುವದಕ್ಕೆ ಎರ
ಡು ಕಾರಣಗಳುಂಟು. ಗೊಬ್ಬರದ ಕುಪ್ಪೆಗೆ ಬಿಸಲು ಮಳೆ ಬಿದ್ದರೆ ಸಾ
ರ ಕಡಿಮೆಯಾಗುವದು. ಗೊಬ್ಬರವು ಅತಿಜಾಗ್ರತೆಯಾಗಿ ಕೊಳತರೂ
ಸಾರ ಕಡಿಮೆಯಾಗುವುದು. ಕೂಡಿಹಾಕುವ ಗೊಬ್ಬರವು ಒಳ್ಳೆ ಸಸ್ಯಾ
ಹಾರವಾಗಬೇಕಾದರೆ ಅದು ಕೊಳೆಯುವಾಗ ಹುಟ್ಟುವ ನೈಟ್ರಿಕ್ ಆಮ್ಲ
ವೆಂಬ ವಾಯುವು ಅದರಲ್ಲಿನ ಕ್ಷಾರಗಳೊಂದಿಗೆ ಸೇರಿ ಯವಕ್ಷಾರಗಳಾಗಬೇ
ಕು. ಗೊಬ್ಬರವೆಲ್ಲಾ ಹೀಗೆ ಯವಕ್ಷಾರಯುಕ್ತವಾದದ್ದಾಗಬೇಕಾದರೆ
ಅದಕ್ಕೆ ಗಾಳಿಯು ಹೊಡೆತ ಬಹಳ ಕಮ್ಮಿಮಾಡಿ ನಿದಾನವಾಗಿ ಕೊಳೆಯು
ವಂತೆ ಮಾಡಬೇಕು. ಬಿಸಲು ಗಾಳಿಗಳು ವಿಶೇಷವಾಗಿ ಗೊಬ್ಬರದ ಮೇ
ಲೆ ಹಾಯುವ ಹಾಗಿದ್ದಲ್ಲಿ ಅತಿಜಾಗ್ರತೆಯಾಗಿ ಅದು ಕೊಳೆತು ನೈಟ್ರಿಕ್
ಆಮ್ಲವು ವಿಶೇಷವಾಗಿ ಹುಟ್ಟಿ ಕ್ಷಾರಗಳೊಂದಿಗೆ ಸೇರಿ ಯವಕ್ಷಾರಗಳೇರ್ಪ
ಡದೇನೆ ವ್ಯರ್ಥವಾಗಿ ನಷ್ಟವಾಗಿ ಹೋಗುವುದು. ಆದ್ದರಿಂದ ದನಗಳು
ಸಗಣಿ ಗಂಜಲಗಳನ್ನು ವಿಸರ್ಜಿಸುತ್ತಲೆ ಅವುಗಳನ್ನು ಸಾಗುವಳಿ ಜಮೀ

ನಿಗೆ ಸಾಧ್ಯವಾಗಿದ್ದಲ್ಲಿ ಸಾಗಿಸಿ ಗೊಬ್ಬರವಾಗಿ ಉಪಯೋಗಿಸುವದು ಒ ಳ್ಳೇದು. ಯಾಕಂದರೆ ಗೊಬ್ಬರವು ಜಮೀನಿನ ಮೇಲ್ಮಣ್ಣಿನೊಡನೆ ಬೆರೆ ಯುವದರಿಂದ ನಿದಾನವಾಗಿ ಕೊಳೆಯುಹತ್ತುವುದು ಮತ್ತು ನೈಟ್ರಿಕ್ ಆ ಮ್ಲವು ಉಂಟಾವಹಾಗೆಲ್ಲಾ ತಕ್ಷಣ ಭೂಮಿಯಲ್ಲಿನ ಕ್ಷಾರಗಳೊಂದಿಗೆ ಸೇ ರಿ ಯವಕ್ಷಾರಗಳುಂಟಾಗುವವು.

ಹಾಲಿ ನಮ್ಮ ದೇಶದಲ್ಲಿ ದನಗಳ ಗೊಬ್ಬರವನ್ನು ಜಮಾಯಿಸುವ ದರಲ್ಲಿ ರೈತರು ಮಾಡಿಕೆಯಾಗಿ ಗಂಜಲವನ್ನೆಲ್ಲಾ ವ್ಯರ್ಥವಾಗಿ ನಷ್ಟಮಾಡಿ ಸಗಣಿಯನ್ನು ಮಾತ್ರ ಹುಲ್ಲುಕಸದೊಂದಿಗೆ ಊರಾಚೆ ಕುಪ್ಪೆಗಳನ್ನು ಹಾಕುತ್ತಾರೆ. ಈ ಕುಪ್ಪೆಗಳು ಬಿಸಲು, ಮಳೆ, ಗಾಳಿಗಳ ಹೊಡತಕ್ಕೆ ಸಿಕ್ಕಿ ಗೊಬ್ಬರವೆಲ್ಲಾ ನಿಸ್ಸಾರವಾಗಿ ಹೋಗುವದು. ಈ ಕೆಟ್ಟ ಪದ್ಧತಿ ಯನ್ನು ಬಿಟ್ಟು ಮುಂದೆ ಹೇಳುವ ಎರಡು ಕ್ರಮಗಳಲ್ಲೊಂದನ್ನು ಆಚ ರಿಸುವದು ಒಳ್ಳೇದು.

ದನಗಳ ಗೊಬ್ಬರವನ್ನು ಕೂಡಿಡುವದರಲ್ಲಿ ಅತ್ಯುತ್ತಮವಾದ ಕ್ರಮವು ದನಗಳನ್ನು ಕಟ್ಟುವ ಕೊಟ್ಟಿಗೆಯಲ್ಲಿಯೇ ಗೊಬ್ಬರವು ಜ ಮಾಯಿಸುವಂತೆ ಮಾಡುವದಾಗಿರುತ್ತದೆ. ಇದಕ್ಕೆ ಕೊಟ್ಟಿಗೆಯ ನೆಲವು ಸುತ್ತುಮುತ್ತಲಿನ ನೆಲ ಮಟ್ಟಕ್ಕಿಂತ ೧-೨ ಅಡಿ ತಗ್ಗಿನಲ್ಲಿರುವಂತೆ ಮಾ ಡಬೇಕು. ಗಂಜಲವನ್ನಾಗಲಿ ಸಗಣಿಯ ತೇವವನ್ನಾಗಲಿ ಹೀರದಂತೆ ನೆಲ ಕ್ಕೆ ಗಾರೆ ಅಥವ ಕಲ್ಲು ಹಾಸಿರಬೇಕು. ದಿನೆ ದಿನೆ ಬಿದ್ದ ಗಂಜಲವನ್ನು ಸಗಣಿಯನ್ನು ಒಣಗಿದ ಕಸಕಡ್ಡಿಯಿಂದ ತೇವವೆಲ್ಲಾ ಬತ್ತಿ ಹೋಗುವಂತೆ ಮುಚ್ಚಿ ದನಗಳ ಅಥವ ಜನಗಳ ತುಳಿತದಿಂದ ಗೊಬ್ಬರವೆಲ್ಲಾ ಮುದ್ದೆ ಕಟ್ಟಿಕೊಂಡು ಮೇಲ್ಭಾಗವು ಗಟ್ಟಿಯಾಗಿರುವಂತೆ ಮಾಡಬೇಕು. ಸಗಣಿ ಗಂಜಲಗಳನ್ನು ಮುಚ್ಚುವದಕ್ಕೆ ಜಂಗ್ಲಿ ಗಿಡಗಳ ಸೊಪ್ಪುಸದೆಯನ್ನು ಒಣಗಿಸಿ ಉಪಯೋಗಿಸಬಹುದು. ಯಾವ ವಿಧವಾದ ಕಸಕಡ್ಡಿಯಾಗಲಿ ಸೊಪ್ಪುಸದೆಯಾಗಲಿ ಸಿಕ್ಕದೆ ಹೋದಲ್ಲಿ ಒಣಗಿದ ಪುಡಿಮಣ್ಣಿನಿಂದ ಗೊ ಬ್ಬರದ ತ್ಯಾವವೆಲ್ಲಾ ಬತ್ತಿ ಹೋಗುವ ಹಾಗೆ ಮಾಡಬೇಕು. ಹಾಗೆ ದಿನೆ ದಿನೆ ಮಾಡುತ್ತಾ ಗೊಬ್ಬರವು ಕೊಟ್ಟಿಗೆ ಮಟ್ಟಕ್ಕೆ ಬಂದಮೇಲೆ ಅದನ್ನು ಬೇಕಾಗುವಳಿ ಜಮೀನಿಗೆ ಸಾಗಿಸಿಕೊಳ್ಳಬಹುದು.

ದನಗಳ ಗೊಬ್ಬರವನ್ನು ಜಮಾಯಿಸುವ ಬೇರೊಂದು ಕ್ರಮ ಉಂಟು. ದನಗಳ ಕೊಟ್ಟಿಗೆ ಆಚೆ ಒಂದು ಗುಣಿಯನ್ನು ತೋಡಿ ಆ ಗುಣಿಯೊಳಕ್ಕೆ ಕೊಟ್ಟಿಗೆಯಲ್ಲಿ ಬಿದ್ದ ಗಂಜಲವೆಲ್ಲಾ ಬಂದು ಬೀಳುವಂತೆ ಬಚ್ಚಲನ್ನು ಇಟ್ಟಿರಬೇಕು. ಕೊಟ್ಟಿಗೆಯಲ್ಲಿ ಬಿದ್ದ ಸಗಣಿಯನ್ನು ದಿನ ದಿನವೂ ಈ ಗುಣಿಯಲ್ಲಿ ತಂದುಹಾಕಿ ಗೊಬ್ಬರದಮೇಲೆ ನಿತ್ಯವು ಸ್ವಲ್ಪ ಮಣ್ಣನ್ನು ಹಾಕಿ ಮುಚ್ಚಬೇಕು. ಗೊಬ್ಬರದಲ್ಲಿನ ತೇವವು ಸ್ವಲ್ಪವಾದರು ಭೂಮಿಯು ಹೀರದಂತೆ ಗುಣಿಯ ಗೋಡೆಗಳು ಮತ್ತು ನೆಲವು ಸಿಮೆಂಟಿನಿಂದ ಗಾರೆ ಮಾಡಿರಬೇಕು. ಬಿಸಲು ಮತ್ತು ಮಳೆಗಳ ಹೊಡೆತಕ್ಕೆ ಗೊಬ್ಬರವು ಶಿಕ್ಕದಂತೆ ಗುಣಿಯಮೇಲೆ ಒಂದು ಛಾವಣಿಯನ್ನು ಹಾಕಿರಬೇಕು. ಹೀಗೆ ಮಾಡುತ್ತಾ ಇದ್ದು ಜಮೀನಿಗೆ ಗೊಬ್ಬರವನ್ನು ಹಾಕುವಕಾಲವು ಬಂದಾಗ ಅದನ್ನು ಸಾಗಿಸಿಕೊಳ್ಳಬೇಕು.

ಹಿಂದೆ ದನಗಳ ಗೊಬ್ಬರವನ್ನು ಕೊಟಿಗೆಯಲ್ಲಾಗಲಿ, ಕೊಟಿಗೆಯ ಹೊರಗೆ ಇರುವ ಗುಣಿಯಲ್ಲಾಗಲಿ ಜಮಾಯಿಸತಕ್ಕದ್ದೆಂದು ಹೇಳಿರುತ್ತಷ್ಟೆ. ಎವಂಚ ಗುಣಿಯಲ್ಲಿ ಜಮಾಯಿಸುವದಕ್ಕಿಂತ ಕೊಟ್ಟಿಗೆಯಲ್ಲಿಯೇ ಜಮಾಯಿಸುವದು ಉತ್ತಮವೆಂಬದು ಕೆಳಗಿನ ಪಟ್ಟಿಯಿಂದ ತಿಳಿದು ಕೊಳ್ಳಬಹುದು.

ಒಂದು ಟನ್ ಗೊಬ್ಬರದಲ್ಲಿ.	ಸಾಧಾರಣ ಕುಪ್ಪೆ ಗೊಬ್ಬರದಲ್ಲಿ.	ಗುಣಿಯಲ್ಲಿ ಜಮಾಯಿಸಿದ್ದರಲ್ಲಿ.	ಕೊಟ್ಟಿಗೆಯಲ್ಲಿಯೆ ಜಮಾಯಿಸಿದ್ದರಲ್ಲಿ.
ಶಾರೀರಕ ಪದಾರ್ಥ.	833·7 ಪೌ.	887·3 ಪೌ	1230 ಪೌ
ಯವಕ್ಷಾರ ...	17·5 ,,	28·2 ,,	43·5 ,,
ರಂಜಕಾಮ್ಲ ...	11·2 ,,	17·7 ,,	21·3 ,,
ಪೊಟಾಷ್ ...	34·3 ,,	52·6 ,,	80·4 ,,

ಅಂತು ದನಗಳ ಕೊಟ್ಟಿಗೆಯಲ್ಲಿಯೆ ತಯಾರಾದ ೧ ಟನ್ ಗೊಬ್ಬ
ರವು ೨॥ ಟನ್ ಸಾಧಾರಣ ಕುಪ್ಪೆ ಗೊಬ್ಬರಕ್ಕೂ, ೧॥ ಟನ್ ಗುಣಿಯಲ್ಲಿ
ಜಮಾಯಿಸಿದ ಗೊಬ್ಬರಕ್ಕೂ ಸಮಾನವೆಂತ ಕಂಡು ಬರುವದು.

ದನಗಳ ಗೊಬ್ಬರವು ಬಹು ಉತ್ಕೃಷ್ಟವಾದ ಗೊಬ್ಬರವೆಂ
ದು ಮೇಲೆ ಹೇಳಲ್ಪಟ್ಟಿರುವದರಿಂದ ಗೊತ್ತಾದರೂ ಅದರಲ್ಲಿ ರಂಜಕ
ಕ್ಷಾರವು ಸ್ವಲ್ಪಮಟ್ಟಿಗೆ ಕಮ್ಮಿ ಇರುವದರಿಂದ, ಗೊಬ್ಬರವು ಜಮಾಯಿಸಿ
ದ ಹಾಗೆಲ್ಲಾ ಆಗಾಗ್ಯೆ ಸ್ವಲ್ಪ ಎಲಬಿನ ದೂಳನ್ನು ಸೇರಿಸುತ್ತಾ ಬಂದರೆ
ವರಮ ಉತ್ಕೃಷ್ಟವಾದ ಗೊಬ್ಬರವಾಗುವುದು. ಇಂಥಾ ಗೊಬ್ಬರವ
ನ್ನು ಜಮೀನಿಗೆ ಕೊಟ್ಟರೆ ಅದರಲ್ಲಿ ಯಾವಾಗಲು ತೇವು ನಿಲ್ಲುವುದು,
ಮೇಲ್ಮಣ್ಣು ಯಾವಾಗ್ಯು ಹದವಾಗಿಯೇ ಇರುವದಲ್ಲದೆ ಹಿಮ ಅಥವ ಮಳೆ
ಬಿದ್ದಾಗ ಚನ್ನಾಗಿ ತೇವನ್ನು ಹೀರಿ ಕೊಳ್ಳುವದು. ಇಂಥಾ ಗೊಬ್ಬರ
ವು ಎಲ್ಲಾ ಸಸ್ಯಾಹಾರಗಳನ್ನು ಎಥೇಚ್ಛವಾಗಿ ಉಂಟಾಗಿರೋಣದರಿಂದ
ಪೈರು ಬಹಳ ಹುಲಸಾಗಿ ಬೆಳದು ಬೆಳೆ ಚನ್ನಾಗಿ ಆಗುವದು.

——:o:——

The Kirkee Civil Dairy.*

ಕರ್ಕಿಯಲ್ಲಿ ಸ್ಥಾಪಿಸಲ್ಪಟ್ಟಿರುವ ಕರೆಹಟ್ಟಿ.

ಬೊಂಬಾಯಾಧಿಪತ್ಯದ ಕರ್ಕಿ ಯೆಂಬ ಊರಲ್ಲಿ ಆಕಳುಗಳನ್ನು
ಎಮ್ಮೆಗಳನ್ನು ಆರೋಗ್ಯಶಾಸ್ತ್ರ ರೀತಿಯಾಗಿ ಸಾಕಿ ಹಾಲು, ಮಸರು,
ಬೆಂಣೆ ಮುಂತಾದವುಗಳನ್ನು ಮಾರುವ ಕರೆಹಟ್ಟಿಯೊಂದನ್ನು ಸ್ಥಾಪಿಸಿ
ರುತ್ತಾರೆ. ಈ ಕರೆಹಟ್ಟಿಯ ಉದ್ದೇಶಗಳು ಯಾವವಂದರೆ:—ಪೂನಾ
ವ್ಯವಸಾಯ ಕಲಾಶಾಲೆಯಲ್ಲಿ ಓದುತ್ತಿರುವ ವಿದ್ಯಾರ್ಥಿಗಳನ್ನು ಈ
ಕಸಬಿನಲ್ಲಿ ತರಬೇತುಮಾಡುವದು ; ಜನಸಾಮಾನ್ಯಕ್ಕೆ ಕಮಾಡಿಗ
ಕೆಲಸ ನಡೆಯುವ ಸ್ಥಳವು ಹೇಗಿರಬೇಕೆಂಬ ವಿಷಯದಲ್ಲಿ ಮೇಲ್ಪಂಗ್ತಿ
ಹಾಕಿ ಕೊಡುವುದು ; ದನಗಳಿಗೆ ಬೇರೆ ಬೇರೆ ಮೇವುಗಳನ್ನು ಕೊಡು
ವದೇ ಮುಂತಾದ ಅಜಮಾಯಿಷಿಗಳನ್ನು ನಡಿಸುವುದು ; ದನಗಳ ರಖಂಗ

*ಕರ್ಕಿ ಸಿವಿಲ್ ಡೈರಿಯ ೧೯೦೮—೦೯ನೆ ಸಾಲ್ ರಿಪೋರ್ಟು.

ಳನ್ನು ಉತ್ತಮಪಡಿಸಿಕೊಳ್ಳುವ ಏರ್ಪಾಟುಗಳನ್ನು ಆಚರಣೆಗೆ ತರುವು
ದು; ಪೂನಾ ಮತ್ತು ಕರ್ಕಿ ಪಟ್ಟಣಗಳಲ್ಲಿನ ಮಕ್ಕಳಿಗೂ ರೋಗಿಷ್ಟ
ಗೂ ಒಳ್ಳೆ ಅಪ್ಪಟವಾಗಿರುವ ಹಾಲನ್ನು ಸರಬರಾಯಿ ಮಾಡುವುದು; ಒಳ್ಳೆ
ಗೂಳಿಗಳನ್ನು ಬೀಜಕ್ಕಾಗಿ ಕೋರುವವರಿಗೆ ಒದಗಿಸಿ ಕೊಡುವುದು

ಈ ಕರೆಹಟ್ಟಿಯವರು ಮಕ್ಕಳಿಗೆ ಪ್ರತ್ಯೇಕವಾಗಿ ಉತ್ತಮವಾ
ಹಾಲನ್ನು ಮಾರುತ್ತಿದ್ದಾರೆಂದು ಹೇಳಬೇಕಷ್ಟೆ. ಈ ಹಾಲಿಗೆ ಗಿರಾಕಿ
ಳು ದಿನೆ ದಿನೆ ಹೆಚ್ಚುತ್ತಾ ಬಂದಿವೆ. ಮಕ್ಕಳ ಹಾಲನ್ನು ಕರೆಯು
ಹಸುಗಳಿಗೆ ಹಿಂಡಿಯನ್ನಾಗಲಿ, ಹತ್ತೀಕಾಳನ್ನಾಗಲಿ ಹಸಿ ಮೇ
ನ್ನಾಗಲಿ ತಿನ್ನಿಸುತ್ತಾ ಇರಲಿಲ್ಲ. ಅವುಗಳನ್ನು ಮನಸ್ಸು ಬಂದಂ
ಮೇಯುವದಕ್ಕೂ ಬಿಡುತ್ತಿರಲಿಲ್ಲ. ಅವುಗಳಿಗೆ ಒಣಗಿದ ಹುಲ್ಲು, ಕೊ
ಟ್ಟು, ತೌಡು, ಚೂನಿ ಮತ್ತು ಹುರುಳಿ ಇವುಗಳನ್ನು ಮೇವಾಗಿ ಉ
ಯೋಗಿಸುತ್ತಿದ್ದರು.

ಈ ಹಟ್ಟಿಯಲ್ಲಿ ಹಸುಗಳು ಎಮ್ಮೆಗಳು ಎಷ್ಟೆಷ್ಟು ಹಾಲನ್ನು
ಕೊಡಬಹುದೆಂದು ಅಜಮಾಯಿಷಿ ಮಾಡಿ ನೋಡಿದ್ದರಲ್ಲಿ, ಸಿಂಧಿ ಜಾತಿ
ಸೇರಿದ ಒಂದು ಹಸುವು ೪೫೫೩ ಪೌಂಡು ಹಾಲನ್ನು ಸೂರತಿ ಜಾತಿಯ
ಒಂದು ಎಮ್ಮೆಯು ೪೯೭೯ ಪೌಂಡು ಹಾಲನ್ನು ೧೯೦೮—೯ನೆ ಸಾಲಿನ
ಪ್ರಾರಂಭದಿಂದ ಆಖೈರುವರಿಗೆ ಕೊಟ್ಟಿರುತ್ತವೆ. ಅಂದರೆ ಸರಾಸರಿ ದಿ
ಒಂದಕ್ಕೆ ಹಸುವು ೧೨|| ಪೌಂಡು ಹಾಲನ್ನು, ಎಮ್ಮೆಯು ೧೩|| ಪೌಂ
ಹಾಲನ್ನು ಕೊಟ್ಟಂತಾಗುವುದು.

—o—

Agricultural Implements.*

ವ್ಯವಸಾಯದ ಮುಟ್ಟುಗಳು.

ಬರ್ಮ್ಮದೇಶದ ಡೆಪ್ಯೂಟಿ ಡೈರೆಕ್ಟರ್ ಆಫ್ ಅಗ್ರಿಕಲ್ಚರವರಾದ ಮ
ಎ. ಮೆಕ್ಕೇರಲ್ ಎಂಬುವರು ವ್ಯವಸಾಯ ಮುಟ್ಟುಗಳ ವಿಷಯವಾಗಿ ಹ
ಳಿರುವುದೇನಂದರೆ:—

*ಇಂಡಿಯನ್ ಟ್ರೇಡ್ ಜರ್ನಲ್, ೨೬—೫—೧೯೧೦.

ಶೀಮೆಯಲ್ಲಿ ತಯಾರಾದ ವ್ಯವಸಾಯ ಮುಟ್ಟುಗಳನ್ನು ಬರ್ಮಾ ಪ್ರೇ
ಶದಲ್ಲಿ ಪ್ರಚಾರಕ್ಕೆ ತರುವುದರಲ್ಲಿ ಕೆಲವು ತೊಂದರೆಗಳಿವೆ. (೧) ಶೀಮೆ
ಯಲ್ಲಿ ತಯಾರಾದ ಮುಟ್ಟುಗಳೆಲ್ಲಾ ಪ್ರಾಯಶಃ ಬಹು ಭಾರವಾದವು
ಗಳಾಗಿರುವದು ಮೊದಲನೇ ತೊಂದರೆ. ಬರ್ಮಾ ಎತ್ತುಗಳು ಸಾಧಾರ
ಣವಾಗಿ ಚನ್ನಾಗಿ ಸಾಕಲ್ಪಟ್ಟ ಕಾಯಪುಷ್ಟಿಯಾದವುಗಳೇನೋ
ಹೌದು. ಆದರೆ ಮದರಾಸಾಧಿಸತ್ಯದ ಎತ್ತುಗಳಿಗಿಂತ ಗಾತ್ರದಲ್ಲಿ
ಸಣ್ಣ, ಮತ್ತು ಭಾರವಾದ ಮುಟ್ಟುಗಳನ್ನು ಎಳೆಯುವ ಶಕ್ತಿ
ಯನ್ನುಂಟಾಗಿಲ್ಲ. (೨) ಶೀಮೆ ಮುಟ್ಟುಗಳೆಲ್ಲಾ ಪ್ರಾಯಶಃ ಬಹಳ
ತೊಡಕು ತೊಡಕಾಗಿ ನಿರ್ಮಿಸಲ್ಪಟ್ಟಿರುವುದು ಎರಡನೇ ತೊಂದರೆ. ಹಳ್ಳಿ
ಗಾಡುಗಳಲ್ಲಿ ಇಂಥಾ ಮುಟ್ಟುಗಳೇನಾದರು ಮುರಿದರೆ ಇಲ್ಲವೆ ಭಾಗಗಳು
ಕಳಚಿ ಹೋದರೆ ಅವುಗಳನ್ನು ಸರಿಮಾಡುವ ಕಮ್ಮಾರರು ಇಲ್ಲದೆ ಹೋ
ಗುವದರಿಂದ ಉಪಯೋಗಕ್ಕೆ ಬರುವವಿಲ್ಲ. (೩) ಶೀಮೆ ಮುಟ್ಟುಗ
ಳೆಲ್ಲಾ ಪ್ರಾಯಶಃ ಬಹಳ ಬೆಲೆಯುಳ್ಳವುಗಳಾಗಿರುವುದು ಮತ್ತೊಂದು
ತೊಂದರೆ. ತನ್ನ ಹಳ್ಳಿಯ ಹತ್ತಿರಿರುವ ಜಂಗಲಿನಲ್ಲಿ ಮರವನ್ನು ಕಡಿದು
ನೇಗಲನ್ನು ಖುದ್ದು ತಯಾರುಮಾಡಿಕೊಂಡು ಸಾಗುವಳಿ ಮಾಡಿ ಸಾಧಾ
ರಣ ಬೆಳೆಯನ್ನು ರೂಡಿಸಿಕೊಳ್ಳುವ ರೈತನು ೮೦—೧೦೦ ರೂಪಾಯಿಗ
ಳನ್ನು ಕೊಟ್ಟು ಶೀಮೆ ನೇಗಲು ಮುಂತಾದವುಗಳನ್ನು ಕೊಳ್ಳುವದಕ್ಕೆ
ಅಂಜರಿಯುವನು. ಆದ್ದರಿಂದ ಶೀಮೆ ಮುಟ್ಟುಗಳು ರೂಡಿಗೆ ಬರಬೇಕಾದರೆ
ಅವುಗಳು ಸಾಧ್ಯವಾದ ಮಟ್ಟಿಗೆ ಹಗುರವಾಗಿಯೂ ತೊಡಕಿಲ್ಲದ್ದಾಗಿ
ಯೂ ಮತ್ತು ಬಹಳ ಅಗ್ಗವಾಗಿಯೂ ಇರಬೇಕು.

———o———

A few points regarding Paddy Cultivation.*

ಬತ್ತದ ಸಾಗುವಳಿ ವಿಷಯವಾಗಿ ಕೆಲವು ಸಲಹೆಗಳು.

ಕೆಲವು ರೈತರು ಬತ್ತದ ಸಾಗುವಳಿ ವಿಷಯವಾಗಿ ಸೆಂಟ್ರಲ್ ಪ್ರಾ
ವಿನ್ಸೆಸ್ಸಿನ ಡೈರೆಕ್ಟರ್ ಆಫ್ ಅಗ್ರಿಕಲ್ಚರವರಿಗೆ ಕೆಲವು ಪ್ರಶ್ನೆಗಳನ್ನು

*ಸೆಂಟ್ರಲ್ ಪ್ರಾವಿನ್ಸಸ್ ಅಗ್ರಿಕಲ್ಚರಲ್ ಗಜೆಟ್, ಫಿಬ್ರವರಿ ೧೯೧೦.

ಹಾಕಿ ಅವುಗಳಿಗೆ ಉತ್ತರಗಳು ಅಪ್ಪಣೆ ಆಗಬೇಕೆಂದು ಕೇಳಿಕೊಂಡದ
ರಮೇಲೆ ಡೈರೆಕ್ಟರವರು ಹೇಳಿರುವುದೇನೆಂದರೆ:—

(೧) ಬತ್ತದ ಫಸಲಿನಲ್ಲಿ ಜಳ್ಳುಬೀಳುವದಕ್ಕೆ ಎರಡು ಕಾರ
ಗಳುಂಟು. ಅವು ಯಾವವೆಂದರೆ, ಪೈರು ಮಿತಿಮೀರಿ ಬೆಳೆಯುವದು
ಅಥವ ಕಾಲ ಮೀರಿ ಬಿತ್ತುವದು ಇಲ್ಲವೆ ನಾಟಿ ಹಾಕುವದು. ಭೂಮಿ
ಯು ಬಹಳ ಸಾರವತ್ತಾಗಿರುವ ಪಕ್ಷದಲ್ಲಿ ಪೈರು ಎಥೇಚ್ಛೆಯಾಗಿ ಬೆಳೆದ
ತೆನೆಗಳಲ್ಲಿ ವಿಶೇಷವಾಗಿ ಕಾಳುಗಳ ಹೊಟ್ಟುಗಳನ್ನು ಇಟ್ಟರೂ ಅವುಗ
ಳೆಲ್ಲಾ ಹಾಲು ತುಂಬಿ ಕಾಳುಮಾಡುವ ಶಕ್ತಿ ಉಂಟಾಗದೆ ಹೋದ
ಜಳ್ಳುಬೀಳುತ್ತೆ. ಕಾಲಮೀರಿ ಬಿತ್ತಿದಾಗಲೂ ಹೀಗೆಯೇ ಆಗುತ್ತೆ.

(೨) ಗದ್ದೆಗಳು ಗ್ರಾಮಕ್ಕೆ ಬಹಳ ಹತ್ತಿರವಾಗಿದ್ದಾಗಲೂ ಪ
ರು ವಿಶೇಷವಾಗಿ ಬೆಳೆದು ಮೊದಲು ಹೇಳಿರುವ ಕಾರಣದಿಂದಲೇ ಜಳ್ಳುಬಿ
ಳುವದುಂಟು. ಆದರೆ ಇದು ಸೂಪರ್ ಫಾಸ್ಫೇಟೆಂಬ ಉಪ್ಪನ್ನು ಉ
ಯೋಗಿಸಿದಲ್ಲಿ ಪರಿಹಾರವಾಗಬಹುದು. ಸದರಿ ಉಪ್ಪನ್ನು ಮಾತ
ಗೊಬ್ಬರವಾಗಿ ಉಪಯೋಗಿಸುವದಾದರೆ ಬಹಳ ಖರ್ಚು ಬೀಳುತ್ತೆ.

(೩) ಸಾಧಾರಣವಾಗಿ ಅಗೆಯಲ್ಲಿ ಎರಡು ತಿಂಗಳಷ್ಟು ದೀರ್ಘಕಾ
ಮೊಳಕೆಗಳನ್ನು ಬೆಳೆಯುವ ಹಾಗೆ ಬಿಟ್ಟುಬಿಟ್ಟು ಆಮೇಲೆ ಅವುಗಳನ
ನಾಟಿಹಾಕಿದರೆ ಸರಿಯಾಗಿ ಬೆಳೆಯಾಗುವದಿಲ್ಲಾ. ಆದಾಗ್ಯೂ ಮಳೆಗಳ
ಷುರುವಾಗುವದಕ್ಕೆ ಮುಂಚೆಯೇ ನೀರು ಹಾಯಿಸಿಕೊಂಡು ಅಗೆಯ
ಬಿತ್ತಿ ಆಗಸ್ಟು ತಿಂಗಳು ಬರುವದರೊಳಗಾಗಿ ಮೊಳಕೆಗಳನ್ನು ನಾಟಿಹ
ಕಿದಲ್ಲಿ ಅವುಗಳು ಎರಡು ತಿಂಗಳಾದಾಗ್ಯೂ ಫಸಲು ಕೆಡಲಾರದು.

(೪) ಕಟ್ಟಿಗೆ ಬೂದಿಯಲ್ಲಿ ವಿಶೇಷವಾಗಿ ಪೊಟಾಷ್ (Potash
ಎಂಬ ಉಪ್ಪು ಇರುವದು. ಆದರೆ ನಮ್ಮ ದೇಶದ ಭೂಮಿಗಳಲ್ಲಿ ಈ ಉ
ಪ್ಪು ಸಾಕಾದಷ್ಟು ಇರುತ್ತೆಯಾದ್ದರಿಂದ ಬೂದಿಯನ್ನು ಗೊಬ್ಬರವಾ
ಉಪಯೋಗಿಸುವುದರಿಂದ ಅಷ್ಟು ಪ್ರಯೋಜನವಿಲ್ಲ.

—:o:—

Revenue Appeals.

ರೆವಿನ್ಯೂ ಅಪೀಲುಗಳು.

ಅಪೀಲ್ ನಂ. ೩೬. ತಾ|| ೧೯೦೯-೧೯೧೦.

ಕುಂಸಿ ಸಬ್ ತಾಲ್ಲೂಕು ಮೈಸವಳ್ಳಿ ಗ್ರಾಮದಲ್ಲಿ ಸರ್ವೆ ೫, ೭, ...ನೆ ನಂಬರು ಜಮೀನುಗಳ ೧೯೦೫—೧೯೦೬ನೆ ಸಾಲಿನ ಕಂದಾಯವ... ಖಾತೇದಾರನು ಪಾವತಿಮಾಡದೇಯಿದ್ದದ್ದರಿಂದ ಕ್ರಮಜರಿಗಿ ೧೯೦೮ನೆ ...ನವಿ ಸೆಪ್ಟಂಬರು ೫ನೇ ತಾರೀಖಿಗೆ ಅವು ಹರಾಜಿಗೆ ಇಡಲ್ಪಟ್ಟವು. ಆ ...ರ ಹರಾಜಿಗೆ ಮುಂಚೆ ಖಾತೇದಾರನು ತನ್ನ ಖಾತೆಯಲ್ಲಿರುವ ೫ನೆ ನಂಬ... ಜಮೀನನ್ನು ೪೫೦ ರೂಪಾಯಿಗೆ ನಾಗಣ್ಣ ಮತ್ತು ಸುಬ್ಬಣ್ಣನೆಂಬುವ...ಗೆ ಮಾರಿರುವದಾಗಿಯೂ, ಸದರಿ ನಾಗಣ್ಣ ಸುಬ್ಬಣ್ಣನೆಂಬುವವರು ಅ...ವರ ಅರ್ಧ ಹಿಸ್ಸೆಯನ್ನು ಬಸಲಿಂಗಪ್ಪ ಮತ್ತು ಹಾಲಸಿದ್ದಪ್ಪನೆಂಬು...ಗೆ ಭೋಗ್ಯ ಹಾಕಿರುತ್ತಾರೆಂಬದಾಗಿಯೂ ಡೆಪ್ಯುಟಿ ಅಮಲ್ದಾರರಲ್ಲಿ ವಾ...ಮ್ರಲ ಕೊಟ್ಟನು. ಆದರೂ ಸದರಿ ಆಫೀಸರಿಂದ ಹರಾಜು ನಡಿಸಲ್ಪ...ಟ್ಟ ನಂಜುಂಡೈಯ್ಯನೆಂಬುವನ ಹೆಸರಿಗೆ ೪೦೦ ರೂಪಾಯಿಗೆ ನಿಂತಿತು. ಹ...ಜಾದ ೨ ದಿನಗಳ ಮೇಲೆ ಭೋಗ್ಯದಾರ ಹಾಲಿಸಿದ್ದಪ್ಪನು ಸಬ್ ಡಿ...ಜನ್ ಕೋರ್ಟಿಗೆ ಒಂದು ಅರ್ಜಿಯನ್ನು ಕೊಟ್ಟನು. ಆ ಅರ್ಜಿಯ... ಹರಾಜುಕಾಲದಲ್ಲಿ ತಾನು ಕಂದಾಯದ ಬಾಕಿಯನ್ನು ಕೊಡಲು ಸಿದ್ಧ...ಗಿರುವ ಅಂಶವನ್ನೂ, ಖಾತೇದಾರನ ಬೇರೆ ಜಮೀನುಗಳನ್ನು (ಅಂದರೆ ...೭೬ ನಂಬರುಗಳನ್ನು) ಹರಾಜುಮಾಡಿ ಸರ್ಕಾರಕ್ಕೆ ಸಲ್ಲುವ ಬಾಕಿಯು ...ರಡಬೇ ಇದ್ದಲ್ಲಿ ಕಮ್ಮಿ ಬರುವ ಮೊಬಲಗನ್ನೂ ಕೊಡುವದಕ್ಕೆ ಮು...ಳಿಕೆ ಬರದು ಕೊಡಲು ಸಿದ್ಧವಾಗಿರುವ ಅಂಶವನ್ನು ಅಮಲ್ದಾರರಲ್ಲಿ ...ಳಿಕೊಂಡಾಗ್ಯೂ ಹರಾಜು ನಡಿಸಿರುತ್ತಾರೆಂದು ಪುಕಾರು ಹೇಳಿಕೊಂ...ಇದ್ದನು. ಹಾಲಸಿದ್ದಪ್ಪನ ಹೇಳಿಕೆ ಸುಳ್ಳೆಂದು ಡೆಪ್ಯುಟಿ ಅಮಲ್ದಾರರು ...ರ್ಪೋರ್ಟು ಬರದದ್ದರಮೇಲೆ ಸಬ್ ಡಿವಿಜನ್ ಮತ್ತು ಡೆಪ್ಯುಟಿ ಕಮಿಷ...ರವರ ಕೋರ್ಟುಗಳಲ್ಲಿ ಹರಾಜು ಮಂಜೂರು ಮಾಡಲ್ಪಟ್ಟಿತು. ಈ

ಮಂಜೂರು ಹುಕುಂಗಳ ಮೇಲೆ ಈಗ ಹಾಜಿಸಿದ್ದಷ್ಟನ್ನು ಅಪೀಲ್ ತಂ
ತ್ತಾನೆ.

ರೆವಿನ್ಯೂ ಕಮಿಷನರವರ ಹುಕುಂ:—ಸರ್ವೆ ೫ನೆ ನಂಬರು
ಮೀನು ಮಾರಲ್ಪಟ್ಟು ನಂತರ ಭೋಗ್ಯವಾಗಿದ್ದ ಸಂಗತಿ ಖಾತೇದಾ
ಹರಾಜಿಗೆ ಮುಂಚೆ ತಿಳಿಸಿದನೆಂದು ಡೆಪ್ಯುಟಿ ಅಮಲ್ದಾರರು ಒಪ್ಪಿಕೊ
ತ್ತಾರೆ. ಇಂಥಾ ಸಂದರ್ಭದಲ್ಲಿ ತಕರಾರಿಗೆ ಆಸ್ಪದವಾಗಿದ್ದ ಸದರಿ
ಮೀನನ್ನು ಹರಾಜು ಮಾಡುವ ಅವಶ್ಯವಿರಲಿಲ್ಲ. ತಕರಾರಿಗೇನೂ
ಸ್ಪದವಿಲ್ಲದ ೭ ಮತ್ತು ೭೬ನೆ ನಂಬರುಗಳನ್ನು ಡೆಪ್ಯುಟಿ ಅಮಲ್ದಾ
ಹರಾಜು ಮಾಡಬೇಕಾಗಿತ್ತು.

ಸರ್ಕಾರಕ್ಕೆ ೪೦—೧೧—೦ರೂ|| ಮಾತ್ರ ಬಾಕಿ ಬರಬೇಕಾದದ್ದ
೫, ೭, ೭೬ನೆ ನಂಬರು ಜಮೀನುಗಳು ಹರಾಜಿಗೆ ಇಡಲ್ಪಟ್ಟು ೧೦೦,
೫೦ರೂಪಾಯಿ ಬೆಲೆ ಬಾಳಬಹುದಾಗಿ ಅಂದಾಜು ಮಾಡಲ್ಪಟ್ಟಿದ್ದವು.
ಖೇದಾರನು ಸರ್ವೆ೫ನೆನಂಬರನ್ನು ೪೫೦ರೂಪಾಯಿಗೆ ಮಾರಿರುವಂತೆ ಹೇ
ಮೇಲಾದರು ೧೦೦ ರೂಪಾಯಿನ ಅಂದಾಜು ಅದಕ್ಕೆ ಕಮ್ಮಿಯೆಂಬ ಸಂ
ಯನ್ನೂ ಮತ್ತು ಸರ್ಕಾರಕ್ಕೆ ಸಲ್ಲಬೇಕಾದ ಜುಜುಬಿ ಬಾಕಿಗೋಸ
ಭಾರಿಬೆಲೆಯುಳ್ಳ ಅದನ್ನು ಹರಾಜು ಮಾಡಬಾರದೆಂಬ ಸಂಗತಿಯನ
ಡೆಪ್ಯುಟಿ ಅಮಲ್ದಾರರು ಗಮನಕ್ಕೆ ತಂದುಕೊಂಡು ಇತರಜಮೀನು
ನ್ನು ಹರಾಜು ಮಾಡಬೇಕಾಗಿತ್ತು. ಹಕ್ಕುದಾರರು ಯಾರೆಂಬ ಸಂ
ಯು ಗೊತ್ತಾಗಿದ್ದಾಗ್ಯೂ ಅವರಿಗೆ ತಿಳಿಸದೆಯೂ, ಹರಾಜಿಗೆ ಯೋ
ವಾಗಿರುವ ಬೇರೆ ಜಮೀನುಗಳು ಇದ್ದರೂ ಅವುಗಳನ್ನು ಮುಂಚೆ ಹ
ಜು ಮಾಡದೆಯೂ, ಸರ್ವೆ ೫ನೆ ನಂಬರನ್ನು ಅಕ್ರಮವಾಗಿ ಹರಾಜು ಮಾ
ಅಪೀಲ್‌ವಾದಿಗೆ ನಷ್ಟವಾಗಿರುವದರಿಂದ ಕೆಳ ಕೋರ್ಟಿನವರು ಮಾಡಿ
ಸದರಿ ನಂಬರಿನ ಹರಾಜು ಮಂಜೂರಾತಿಯನ್ನು ಅನುಮೋದಿಸಲಾಗು
ಲ್ಲ. ಹರಾಜಿನಲ್ಲಿ ಪಡೆದುಕೊಂಡಿರುವ ನಂಜುಂಡೈಯ್ಯನಿಗೆ ಆತ
ಸರ್ಕಾರಕ್ಕೆ ಪಾವತಿ ಮಾಡಿರುವ ಹಣಕ್ಕಾಗಿ ಬಡ್ಡಿ ಇಲ್ಲದ ಹಾಗೆ ವಾ
ವದೂ ನ್ಯಾಯವಾಗಿರುವದಿಲ್ಲ. ಆದ್ದರಿಂದ ಜಮೀನಿನ ಕಂದಾಯವನ

ಬಾಕಿ ಮಾಡಿಕೊಳ್ಳತಕ್ಕದ್ದು ಅಪೀಲ್‌ವಾದಿಯ ಕರ್ತವ್ಯವಾಗಿದ್ದಕಾ
ಆತನು ಬರುವ ಜೂಲೈ ೩೧ನೆ ತಾರೀಖಿನೊಳಗಾಗಿ ನಂಜುಂಡೈಯ್ಯ
ಕೊಟ್ಟಿರುವ ಮೊಬಲಗಿಗೆ ಹರಾಜುಲಾಗಾಯಿತು ಶೇಕಡಾ ೬ ರಂತೆ
ಗುವ ಬಡ್ಡಿಯನ್ನೂ ಮತ್ತು ಸರ್ಕಾರಕ್ಕೆ ಸಲ್ಲತಕ್ಕ ಕಂದಾಯದ ಮೊ
ಲಗನ್ನೂ ಡೆಪ್ಯುಟಿ ಅಮಲ್ದಾರರಲ್ಲಿ ಯಾವಾಗ ಹಾಜರ್ ಮಾಡುತ್ತಾ
ರೋ ಆಗ ಹರಾಜನ್ನು ರದ್ದುಮಾಡಲಾಗುತ್ತೆಂದು ತೀರ್ಮಾನಿಸಿರುತ್ತೆ.

Notifications.

ಇಸ್ತಿಹಾರ್‌ನಾಮೆಗಳು.

ಕಾಡುನೀಲಿ ಸೊಪ್ಪನ್ನು (ಕೊಳಿಂಜಿಯೆಂತಲೂ ಹೇಳುವರು)
ತ್ತದ ಜಮೀನಿಗೆ ಗೊಬ್ಬರವಾಗಿ ಉಪಯೋಗಿಸುವದರ ಪ್ರಯೋಜನ
ನ್ನು ಕುರಿತು ೧೯೦೯ನೆ ಇಸವಿ ಮೇ ೧೪ನೆ ತಾರೀಖು ರೆವಿನ್ಯೂ
ತ್ತು ವ್ಯವಸಾಯದ ಗೆಜೆಟ್ಟಿನಲ್ಲಿ ಪ್ರಕಟಿಸಿರುತ್ತದೆಯಷ್ಟೆ. ಈಗ
ವಿನ್ಯೂ ಕಮಿಷನರವರ ಆಫೀಸಿಗೆ ಸ್ವಲ್ಪ ಕಾಡುನೀಲಿ ಬೀಜವನ್ನು
ಸಿರುತ್ತೆ. ಈ ಬೀಜವನ್ನು ಉಪಯೋಗಿಸಿ ಅಜಮಾಯಿಷಿ ಮಾಡ
ಕೆಂದು ಇರಾದೆ ಇರುವ ರೈತರು ರೆವಿನ್ಯೂ ಕಮಿಷನರವರ ಮೊದಲನೆ
ಸ್ಟೆಂಟರವರ ಹೆಸರಿಗೆ ಜೀಗ ಅರ್ಜಿ ಬರೆದುಕೊಂಡು ತರಿಸಿಕೊಳ್ಳ
ಹುದು. ೫ ಶೇರಿನೊಳಗಾಗಿ ಬೇಕಾಗಿದ್ದಲ್ಲಿ ಮುಫತ್ತಾಗಿ ಕೊಡಲ್ಪ
ವುದು. ರವಾನಿಸುವ ಖರ್ಚು ಮಾತ್ರ ತರಿಸಿಕೊಳ್ಳುವವರೇ ಕೊಡ
ಕು. ೫ ಶೇರಿಗಿಂತ ಹೆಚ್ಚಾಗಿ ಬೇಕಾಗಿದ್ದಲ್ಲಿ ೧೦ ಶೇರಿಗೆ ೧ ರೂ
ಯಿನಂತೆ ಖರೀದಿ ಕೊಡಬೇಕು. ರವಾನೆ ಖರ್ಚು ತರಿಸಿಕೊಳ್ಳು
ವರೇ ವಹಿಸತಕ್ಕದ್ದು.

ನಂ. ೩೪೬. ತಾ|| ೮—೭—೧೯೧೦.

ಮೈಸೂರ್ ಸರ್ವಿಸ್ ರೆಗ್ಯುಲೇಷನ್ ೧೭೭ನೆ ಪ್ರಕರಣದ ಮೇರೆ
ಬ್ಬ ತಾಲ್ಲೂಕ್ ಅಮಲ್ದಾರ್ ಮೆ|| ಯಂ. ಸದಾಶಿವರಾಯರಿಗೆ ೧೯೧೦ನೆ

ಜುಲೈ ೧೧ನೆ ತಾರೀಖು ಲಾಗಾಯಿತು ೧೫ ದಿನಗಳ ಪ್ರಿವಿಲೇಜ್ ರ
ಮಂಜೂರಾಗಿರುತ್ತೆ.

ಇವರ ಗೈರ್ ಹಾಜರಿಯಲ್ಲಿ ತಾಲ್ಲೂಕು ಶಿರಸ್ತೇದಾರ್ ಪಿ.
ಜೀವರಾಯರು ತಾಲ್ಲೂಕು ಛಾರ್ಜಿನಲ್ಲಿರತಕ್ಕದ್ದು.

Occasional Notes.

ವಿವಿಧ ವೃತ್ತಾಂತಗಳು.

(೧) ಕಳೆದ ಜೂನ್ ಮಾಹೆಯಲ್ಲಿ ಕೋಲಾರದ ಡಿಸ್ಟ್ರಿಕ್ಟ್ ಚಿಕ್
ಳ್ಳಾಪುರದ ಟವರ್ನಲ್ಲಿ ಚಿಕ್ಕಬಳ್ಳಾಪುರದಲ್ಲಿರುವ ಜನಗಳ ಉಪಯೋ
ಕ್ಕಾಗಿ ಒಂದು ಪರಸ್ಪರ ಸಹಾಯ ಸಂಘವು ಏರ್ಪಟ್ಟು ಕೋಆಪರೇಟ
ಸೊಸೈಟಿಗಳ ಕಾನೂನು ಪ್ರಕಾರ ರಿಜಿಸ್ಟರು ಮಾಡಲ್ಪಟ್ಟಿತು.

---

(೨) ಅಕ್ಕಿಯ ಮಿಶ್ರಣ:—ಕೆಲವು ರಖಂ ಅಕ್ಕಿಗಳು ಇತರ ರಖಂ
ಗಿಂತ ವಿಶೇಷ ಪುಷ್ಟಿಕರವಾಗಿರುತ್ತವೆ. ಹೀಗಿರುವುದು ಆಯಾ ಅಕ್ಕಿ
ಜಾತಿಯ ಸ್ವಭಾವವೆಂದರಿಯಲಾಗದು. ಅಕ್ಕಿಯು ನೋಟಕ್ಕೆ ಮಾ
ಚನ್ನಾಗಿರುವದರಿಂದಲೇನೆ ಪುಷ್ಟಿಕರವಾಗಿರುವದೆಂಬದೂ ಅಲ್ಲ. ಅಕ್ಕಿ
ಮಾದರಿಗಳನ್ನು ರಸಾಯನ ಶಾಸ್ತ್ರರೀತ್ಯಾ ಪರೀಕ್ಷಿಸಿ ನೋಡಿದ್ದರಲ್ಲಿ
ತ್ತವನ್ನು ಸಾಗುವಳಿ ಮಾಡುವಾಗ ಎಥೇಷ್ಟವಾಗಿ ಉತ್ತಮವಾದ ಗ
ಬ್ಬರವನ್ನು ಹಾಕಿದ ಹಾಗೆಲ್ಲಾ ಅಕ್ಕಿಯ ಪೌಷ್ಟಿಕಗುಣವು ಹೆಚ್ಚು
ಹಾಗೆ ಕಂಡು ಬಂದಿರುತ್ತೆ.—ಅಗ್ರಿಕಲ್ಚರಲ್ ಲೆಡ್ಜರ್ ೧೯೦೮—೯.

---

(೩) ಸೋಯಾ ಅವರೆ ಬೀಜ:—೧೯೧೦ನೆ ಇಸವಿ ಮೇ ೧೫ನೆ ತಾ
ಖಿನಲ್ಲಿ ಫಾಯಿಷ್ ಮಾಡಿರುವ ರೆವಿನ್ಯು ಮತ್ತು ಅಗ್ರಿಕಲ್ಚರಲ್ ಗೆಜೆಟ್
ಲ್ಲಿ ಸೋಯಾ ಜಾತಿಯ ಅವರೆಯನ್ನು ಸಾಗುವಳಿ ಮಾಡುವದರಿಂದ
ಟಾಗುವ ನಾನಾ ತರಹೆ ಲಾಭಗಳನ್ನು ಕುರಿತು ಬರಿಯಲ್ಪಟ್ಟಿತು
ಅರಸೀಕೆರೆ ತಾಲ್ಲೂಕು ಜಾವಗಲ್ಲು ಹೋಬಳಿ ಮಾದನಹಳ್ಳಿ ಫಿರ್ಕಾ

ೀಗ ರಾಮಚಂದ್ರಯ್ಯನವರು ಒಂದು ಎಕರೆಗೆ ಆಗುವಷ್ಟು ಬೀಜವ
ು ಕರೀದಿಗೆ ಕೊಡಿಸಿ ಕೊಟ್ಟಲ್ಲಿ ಸಾಗುವಳಿ ಮಾಡಿ ಅಜಮಾಯಿಷಿ ಮಾ
ತ್ತೇನೆಂದು ಹಜರತ್ ರೆವಿನ್ಯು ಕಮಿಷನರವರಿಗೆ ಅರ್ಜಿ ಬರದುಕೊಂ
ರು. ರೆವಿನ್ಯು ಕಮಿಷನರವರ ಆಫೀಸಿನಲ್ಲಿ ಸದರಿ ಬೀಜ ಬಹಳ ಕೊಂ
ವಿದ್ದದ್ದರಿಂದ ಅದನ್ನು ರಾಮಚಂದ್ರಯ್ಯನವರಿಗೆ ಮುಫತ್ತಾಗಿ ಕಳುಹಿ
ಕೊಟ್ಟು ಇನ್ನೂ ಹೆಚ್ಚಾಗಿ ಬೇಕಾಗಿದ್ದಲ್ಲಿ ಸರ್ಕಾರಿ ತೋಟಗಳ ಸೂ
ಂಟೆಂಡೆಂಟರಾದ ಮೆ|| ಕ್ರುಂಬೀಗಲ್‌ರವರಿಗೆ ಬರೆದು ತರಿಸಿಕೊಳ್ಳಬಹು
ದು ಅವರಿಗೆ ತಿಳಿಸಲಾಯಿತು.

---

(೪) ಪರಸ್ಪರ ಸಹಾಯ ಸಂಘಗಳ ಅಭಿವೃದ್ಧಿ:—ಇಂಡಿಯಾ ದೇಶದ
ಪರಸ್ಪರ ಸಹಾಯ ಸಂಘಗಳ ಕಾನೂನು ೧೯೦೪ರಲ್ಲಿ ಜಾರೀಗೆ ಬಂದ
ಮೊದಲುಗೊಂಡು ದೇಶದ ಎಲ್ಲಾ ಭಾಗಗಳಲ್ಲಿಯೂ ಸದರಿ ಸಂಘಗ
ಹರಡಿಕೊಳ್ಳುತ್ತಾ ಇರುವವು. ೧೯೦೯ನೇ ಇಸವಿ ಜೂನ್ ಆಖೈರುವರಿಗೆ
ಘಗಳು ಹೊಂದಿದ ಅಭಿವೃದ್ಧಿಯನ್ನು ಕೆಳಗಿನ ಪಟ್ಟಿಯಿಂದ ತಿಳಿದು
ಳ್ಳಬಹುದು.

	1906—7	1907—8	1908—9
ಘಗಳ ಸಂಖ್ಯೆ.	843	1357	2008
ಘದ ಮೆಂಬರುಗಳ ಸಂಖ್ಯೆ.	90844	1,49,160	1,84,889
ಡವಾಳ.	23,71,683	44,14,086	80,65,111
ಬರುಗಳಿಗೆ ಸಾಲ ಕೊಟ್ಟದ್ದು.	23,83,971	36,93,018	59,99,924
ಸಂಪಾದಿಸಿದ್ದು.	1,12,614	1,80,916	3,26,265

(೫) ಮರಗಳನ್ನು ಬೆಳೆಸುವ ಶಾಸ್ತ್ರದಲ್ಲಿ ನಿಪುಣತ್ವವನ್ನು ಹೊ
ರುವ ಮೆ|| ರುಡಾಲ್ಫ ಡಿ. ಆನ್ಸ್ಟೆಡ್ ಎಂಬುವರು ಸಾಗುವಳಿ ಜಮೀನಿ
ಗೊಬ್ಬರ ಕೊಡುವದನ್ನು ಕುರಿತು ಹೇಳುವದೇನೆಂದರೆ:—ಜಮೀನಿಗೆ ಗೆ
ಬ್ಬರವನ್ನು ಕೊಡುವದರಲ್ಲಿ ಅತ್ಯುತ್ತಮವಾದ ವಿಧಾನವ್ಯಾವದೆಂದು ಪ
ಪದೇ ನನಗೆ ಲೇಖನಗಳು ಬರುತ್ತಲೇ ಇವೆ. ಸಾಧಾರಣವಾಗಿ ಎಲ
ತರಹೆ ಗೊಬ್ಬರಗಳನ್ನು ಜಮೀನಿನಮೇಲೆ ಕೈಯಿಂದ ಒಂದೆ ಸ
ವಾಗಿ ಚೆಲ್ಲಬೇಕು. ಚೆಲ್ಲಿದ ಗೊಬ್ಬರವನ್ನು ಚನ್ನಾಗಿ ಪುಡಿಪುಡಿಯಾ
ರುವ ಮಣ್ಣಿನಿಂದ ಹಗುರವಾಗಿ ಮುಚ್ಚಬೇಕು. ಈ ಪ್ರಕಾರ ಜಮಿ
ನಿಗೆ ಗೊಬ್ಬರವನ್ನು ಕೊಟ್ಟಲ್ಲಿ ಗುಣಿಗಳನ್ನು ತೋಡಿ ಅವುಗಳ
ಗೊಬ್ಬರವನ್ನು ಹಾಕಿದ್ದಕ್ಕಿಂತಲೂ ಉತ್ತಮವಾದ ಫಲಿತಾಂಶಗ
ಕಂಡುಬರುವವು. ಯಾವ ಗೊಬ್ಬರಗಳು ಸುಲಭವಾಗಿ ಕರಗಿಹೋಗ
ವದಿಲ್ಲವೊ ಅವುಗಳನ್ನು ಜಮೀನಿನ ಮೇಲ್ಮಣ್ಣಿನೊಡನೆ ಚನ್ನಾಗಿ ಬ
ಯುವಂತೆ ಮಾಡಬೇಕು. ಸುಲಭವಾಗಿ ಕರಗಿಹೋಗುವ ಗೊಬ್ಬರಗ
ವರೋ ಹಿಮ ಅಥವ ಮಳೆಯಲ್ಲೇ ಕರಗಿ ಭೂಮಿಯಲ್ಲಿ ಸೇರಿಹೋಗು
ದು. ಗೊಬ್ಬರವು ಜಮೀನಿನ ಮೇಲೆ ಎಷ್ಟು ಮುತವರ್ಜಿಯಿಂದ ಒ
ಸಮವಾಗಿ ಹರಡಲ್ಪಡುವುದೊ ಅಷ್ಟು ಸಲೀಸಾಗಿ ಅದು ಜಮೀನಿನ
ಹೀರಲ್ಪಡುವುದು. ಜಮೀನಿಗೆ ಕೊಡತಕ್ಕ ಗೊಬ್ಬರವು ಕೊಂಚವಾ
ದ್ದಲ್ಲಿ ಅದನ್ನು ಮರಳಿನೊಡನೆಯಾಗಲಿ ಒಣಗಿದ ಮಣ್ಣಿನ ಪುಡಿಯೊಡ
ಯಾಗಲಿ ಚನ್ನಾಗಿ ಕಲಿಸಿ ಜಮೀನಿನ ಮೇಲೆಲ್ಲಾ ಒಂದೇ ಸಮವಾಗಿರುವಂ
ತೆ ಕೈಯಿಂದ ಚೆಲ್ಲಬೇಕು.—ಪ್ಲಾಂಟರ್ಸ್ ಕ್ರಾನಿಕಲ್, ೨೬—೩—೧೦.

---

(೬) ದನವಿನ ಸಗಣಿಯನ್ನು ಬೆರಣಿಮಾಡಿ ಉರಿಸುವುದು:—ಪ್ರೊ
ವ್ಯವಸಾಯ ಕಲಾಶಾಲೆಯ ಪ್ರೊಫೆಸರ್ ಜೆ. ಬಿ. ನೈಟ್ ಎಂಬವರು ದ
ಗಳ ಸಗಣಿಯನ್ನು ಬೆರಣಿಮಾಡಿ ಕಟ್ಟಿಗೆಗೆ ಬದಲಾಗಿ ಉರಿಸುವದರಿಂ
ಉಂಟಾಗುವ ನಷ್ಟವನ್ನು ಕುರಿತು ಹೇಳಿರುವದೇನೆಂದರೆ:—ಮುಸಲಾ
ಮ್ಮಲ್ಲಿ ಒಂದು ಜೊತೆ ಎತ್ತುಗಳಿವೆಯೆಂದು ಅಂದುಕೊಳ್ಳೋಣ.

ಅತೆಯು ದಿನ ಒಂದಕ್ಕೆ ೨೦ ಪೌಂಡು ಸಗಣಿಯನ್ನು ಹಾಕುವದು. ಈ
ಶಿ ಸಗಣಿಯಿಂದ ಗಾಳಿಗೆ ಒಣಗಿದ ೧೧ ಪೌಂಡು ಗೊಬ್ಬರದ ಪುಡಿಯು
ರಗುಸಡಿಯಾಗುವದು. ಇದರಿಂದ ಸುಮಾರು ೨ ಔನ್ಸು ಯವಕ್ಷಾರ ಶಿ
ಬಹುದು. ಹೀಗೆ ಒಂದು ವರುಷಕ್ಕೆ ೪೫¼ ಪೌಂಡು ಯವಕ್ಷಾರ
ಕ್ಕುವದು. ಇಷ್ಟು ಯವಕ್ಷಾರವುಳ್ಳ ಗಾಣದಹಿಂಡಿ ರೂ. ೨೨—೧೨—೦
ಶಿಕ್ಕುತ್ತೆ. ಅಂತು ಸಗಣಿಯಲ್ಲಿರುವ ಇತರ ಸಸ್ಯಾಹಾರಗಳೆಲ್ಲಾ
ರಿ ಒಂದು ಜೊತೆ ಎತ್ತಿನ ಗೊಬ್ಬರದಿಂದ ಸುಮಾರು ೨೫ ರೂಪಾಯಿ
ಕವಿಮ್ಮ ಇಲ್ಲದೆ ಸಂಪಾದನೆ ಬರಬಹುದಾಗಿದೆ. ಇನ್ನು ಬೆರಣಿಮಾಡಿ
ಉರಿಸುವದರಿಂದ ಉಂಟಾಗುವ ಫಲಿತಾಂಶವನ್ನು ನೋಡೋಣ. ದಿನ
ಂದಕ್ಕೆ ೧೧ ಪೌಂಡಿನಂತೆ ವರುಷಕ್ಕೆ ೪೦೧೫ ಪೌಂಡು ಬೆರಣಿಯಾ
ತ್ತೆ. ಕಾಸಿಗೆ ಒಂದು ಪೌಂಡು ಬೆರಣಿಯಂತೆ ಒಂದು ವರುಷಕ್ಕೆ
೧ ರೂಪಾಯಿ ಸಂಪಾದನೆ ಆಗಿ ೪ ರೂಪಾಯಿ ನಷ್ಟವಾಗುವುದು. ಕೆ
ೋಸಿನ್ ಯೆಣ್ಣೆ, ಕಟ್ಟಿಗೆ ಮುಂತಾದವುಗಳನ್ನೂ ಬೆರಣಿಯನ್ನೂ
ೇರೆ ಬೇರೆ ಉರಿಸಿ ಇವುಗಳಲ್ಲಿ ಯಾವದು ಬಹಳ ಪ್ರಿಯವಾದದ್ದೆಂದು
ೋಡಿದ್ದರಲ್ಲಿ ಬೆರಣಿಯನ್ನು ಉರಿಸುವದರಿಂದ ಬಹಳ ಲುಕ್ಸಾನಾಗುವ
ದು ಕಂಡುಬಂದಿರುತ್ತೆ. ಆದ್ದರಿಂದ ದನಗಳ ಸಗಣಿಯನ್ನು ಗೊಬ್ಬರ
ಕ್ಕಾಗಿಯೇ ಉಪಯೋಗಿಸುವುದು ಬಹಳ ಲಾಭಕರವಾಗಿರುತ್ತದೆ.—
ಡಿಯನ್ ಟ್ರೇಡ್ ಜರ್ನಲ್, ೯—೧೨—೦೯.

———o———

(೭) ಜೇನು ತುಪ್ಪ.—ಅಮೇರಿಕಾದೇಶದ ಮೆ|| ರಸೆಲ್ ಎಚ್. ಮಿಲ್ಸ
ರ್ ಎಂಬುವರು ಜೇನುಹುಳುಗಳನ್ನು ಸಾಕಿ ಜೇನು ತುಪ್ಪವನ್ನು ಹೊಂ
ವ ವಿಷಯವಾಗಿ ಒಂದು ಲೇಖನವನ್ನು ಬರೆದಿರುತ್ತಾರೆ. ಈ ಲೇಖ
ದಲ್ಲಿ ಅವರು ಹೇಳಿರುವುದೇನಂದರೆ:—ಈಗ ಪ್ರಪಂಚದ ಎಲ್ಲಾ ದೇಶಗಳ
ಯೂ ತಯಾರಾಗುತ್ತಿರುವ ಜೇನುತುಪ್ಪವು ಸಾಲೀಯಾನ ಸುಮಾರು
೦೦,೦೦೦ ಟನ್ನುಗಳಷ್ಟಾಗಬಹುದು. ಇದರ ಪೈಕಿ ಮೂರರಲ್ಲಿ ಎರಡು
ಾಗದಷ್ಟು ಅಮೇರಿಕಾದೇಶದ ರಿಪಬ್ಲಿಕ್ಕುಗಳಲ್ಲಿ (Republics=ಪ್ರಜಾ
ಭುತ್ವ ಸಂಸ್ಥಾನಗಳು) ತಯಾರಾಗುತ್ತಾ ಇವೆ. ಯುನೈಟೆಡ್

ಸ್ಟೇಟ್ಸು (United States) ಎಂಬ ಸಂಯುಕ್ತ ರಾಜ್ಯದಲ್ಲಿ ಸ
ಯಾನ ೬,೦೦೦೦,೦೦೦ ರೂಪಾಯಿ ಬೆಲೆಯಾಗುವಷ್ಟು ತುಪ್ಪ
೬೦,೦೦,೦೦೦ ರೂಪಾಯಿ ಬೆಲೆಯಾಗುವಷ್ಟು ಜೇನು ಮೇಣವು ತಯ
ರಾಗುತ್ತಿದ್ದರೂ ಆ ದೇಶದವರು ೨೫,೦೦,೦೦೦ ಪೌಂಡು ಜೇ
ತುಪ್ಪವನ್ನೂ, ೭,೫೦,೦೦೦ ಪೌಂಡು ಮೇಣವನ್ನೂ ಪರದೇಶಗಳ
ಕೊಂಡುಕೊಳ್ಳುತ್ತಾ ಇದ್ದಾರೆ. ಪ್ರಪಂಚದಲ್ಲಿ ಹಾಲಿ ತಯಾರಾಗು
ರುವ ಜೇನು ತುಪ್ಪದಲ್ಲಿ ಅರ್ಧಪಾಲು ಬಿಸ್ಕತ್ತು, ಮಿಠಾಯಿ, ಔಷ
ಮುಂತಾದವುಗಳನ್ನು ಮಾಡುವುದರಲ್ಲಿ ಉಪಯೋಗಿಸಲ್ಪಡುತ್ತಾ ಇ
ಸದರಿ ಪದಾರ್ಥಗಳನ್ನು ಮಾಡುವವರಿಗೆ ಬೇಕಾದಷ್ಟು ಜೇನು
ಪ್ಪವು ಅಗ್ಗವಾಗಿ ಸಿಕ್ಕುವದಾದರೆ, ಅವರು ಬೆಲ್ಲ, ಸಕ್ಕರೆ ಮುಂ
ದವುಗಳ ಉಪಯೋಗವನ್ನು ಬಹಳ ಕಡಿಮೆ ಮಾಡುವರು. ಏಕಂದ
ಜೇನುತುಪ್ಪದಿಂದ ಮಾಡಿದ ಪದಾರ್ಥಗಳು ಬೆಲ್ಲ ಮುಂತಾದವುಗಳಿ
ಮಾಡಲ್ಪಟ್ಟವುಗಳಷ್ಟು ಜಾಗ್ರತೆಯಾಗಿ ಕೆಡದೆ ಹೆಚ್ಚು ದಿವಸವಿರುತ
ಜೇನುಮೇಣದಿಂದ ಮೇಣದ ಬತ್ತಿ (Candles) ವಗೈರೆಗಳನ್ನು ಮಾ
ವುರು.

ಅಮೇರಿಕಾ ಮೊದಲಾದ ದೇಶಗಳಲ್ಲಿ ಜೇನು ಹುಳಗಳನ್ನು ವಿ
ಷವಾಗಿ ಸಾಕುತ್ತಾರೆ. ಜೇನು ಹುಳುಗಳಲ್ಲಿ ಎರಡು ಜಾತಿಗಳಿ
ಇವುಗಳಲ್ಲಿ ಒಂದು ಜಾತಿಗೆ ಕೊಂಡಿಗಳುಂಟು. ಇನ್ನೊಂದು ಜಾ
ಕೊಂಡಿಗಳಿಲ್ಲ. ಜೇನಿನ ಗೂಡುಗಳಿಗೆ ಕಪ್ಪು ಇರುವೆಗಳು ಶತ್ರುಗ
ದ್ದರಿಂದ ಸಾಕುವವರು ನೀರಿನಿಂದ ಸುತ್ತಲ್ಪಟ್ಟಿರುವ ಮಣ್ಣು ದಿಬ್ಬ
ಮೇಲೆ ಹುಳುಗಳು ಗೂಡುಗಳನ್ನಿಡುವಂತೆ ಮಾಡುವ ಪದ್ಧತಿಯುಂಟು.

ಇಂಡಿಯನ್ ಟ್ರೇಡ್ ಜರ್ನಲ್, ೨—೬—೧೯೧೦.

———o———

V. B. S. & SONS, BANGALORE.—1910.

THE MYSORE

REVENUE & AGRICULTURAL GAZETTE.

ವಾಲ್ಯೂಂ ೪.] ಸೋಮವಾರ, ೧ನೆ ಆಗಸ್ಟ್ ೧೯೧೦. [ನಂ. ೧೯.

Contents.

1. Experimental Work of the Dharwar Agricultural Station.
2. Some Fungoid Diseases of Garden Plants.
3. Appeals.
4. Weeds.
5. Notifications.
6. Occasional Notes.
(i) Top Dressing of Sugar Cane. (ii) Flour Phosphates. (iii) Bordeaux Mixture. (iv) Co-operative Societies.

ಅನುಕ್ರಮಣಿಕೆ.

೧. ಧಾರ್ವಾಡದ ಅಗ್ರಿಕಲ್ಚರಲ್ ಸ್ಟೇಷನ್ನಿನಲ್ಲಿ ನಡೆದ ಶೋಧನೆಗಳು.
೨. ತೋಟಗಳಲ್ಲಿ ಗಿಡಗಳಿಗೆ ತಗಲುವ ಕೆಲವು ರೋಗಗಳ ಚಿಕಿತ್ಸೆ.
೩. ಅಪೀಲುಗಳು.
೪. ಕಳೆಗಳು.
೫. ಇಸ್ತಿಹಾರುನಾಮೆಗಳು.
೬. ವಿವಿಧ ವೃತ್ತಾಂತಗಳು.
(i) ಕಬ್ಬು ಬೆಳೆಯುತ್ತಿರುವಾಗ ಗೊಬ್ಬರ ಕೊಡುವಿಕೆ. (ii) ರಂಜಕ ಕ್ಷಾರಗೊಬ್ಬರ. (iii) ಬೊರ್ಡೊ ಮಿಕ್ಸ್ಚರ್. (iv) ಕೋ ಆಪರೇಟಿವ್ ಸೊಸೈಟಿಗಳು.

Experimental Work of the Dharwar Agricultural Station.

ಧಾರ್ವಾಡದ ಅಗ್ರಿಕಲ್ಚರಲ್ ಸ್ಟೇಷನ್ನಿನಲ್ಲಿ ನಡೆದ ಶೋಧನೆಗಳು.

ಬೊಂಬಾಯಿ ಸರ್ಕಾರದವರು ಧಾರ್ವಾಡದಲ್ಲಿ ಒಂದು ಅಗ್ರಿಕಲ್ಚರಲ್ ...ಷನನ್ನು (Agricultural Station) ಸ್ಥಾಪಿಸಿ ಬೇಸಾಯ ಸಮಂ

ಥವಾದ ಅಜಮಾಯಿಷಿಗಳನ್ನು ನಡಿಸುತ್ತಾ ಇರುತ್ತಾರೆ. ಸದರಿ ಸ್ಟೇ
ಸ್ನಿನ ೧೯೦೮—೦೯ನೆ ಸಾಲಿನಲ್ಲಿ ನಡಿಸಿದ ಅಜಮಾಯಿಷಿಗಳನ್ನು ಕುರಿತ
ಬರದ ರಿಪೋರ್ಟಿನಿಂದ ಕೆಲವಂಶಗಳನ್ನು ಕೆಳಗೆ ಉದಹರಿಸಿರುತ್ತೆ.

(೧) ಕಾಂಬೋಡಿಯಾ ಹತ್ತಿಯು ಚೆಳೆ ಇಟ್ಟಿತ್ತು. ಬಾಕಿ ರಖಂ
ತ್ತಿಗಳ ಹಾಗೆ ಇದಕ್ಕೆ ರೋಗವು (Red leaf blight) ತಗಲ್ಲಿಲ್ಲ.

(೨) ಕಾಂಬೋಡಿಯಾ ಕುಂಪ್ಟಾ ಮತ್ತು ಬ್ರೋಚ್ ಜಾತಿ ಹತ್ತಿ
ಳನ್ನು ಬೇರೆ ಬೇರೆ ಸಾಗುವಳಿ ಮಾಡಿ ನೋಡಿದ್ದರಲ್ಲಿ ಬಿಡಿಸಿದ ಅರಳೆ ಎಕ
ಒಂದಕ್ಕೆ ಕುಂಪ್ಟಾ ಜಾತಿಯಿಂದ ೧೪೪ ಪೌಂಡು, ಬ್ರೋಚ್ ಜಾತಿಯಿಂದ ೧
ಪೌಂಡು, ಕಾಂಬೋಡಿಯಾ ಜಾತಿಯಿಂದ ೧೮೬ ಪೌಂಡು, ಹುಟ್ಟುವಳಿಯ
ಯಿತು. ಕಾಂಬೋಡಿಯಾ ಗಿಡಗಳಲ್ಲಿ ಬಿಡುವ ಹತ್ತಿಯು ಶಿಂಬಿಗಳು ದೆ
ಷ್ಟವುಗಳಾಗಿರುತ್ತವೆ. ಮತ್ತು ಇವುಗಳಿಂದ ಹೆಚ್ಚಾಗಿ ಅರಳೆಯೂ ಶಿಕ
ವದು. ಈ ಹತ್ತಿ ಉಳಿದವುಗಳಿಗಿಂತ ಉದ್ದವಾದ ತಂತುಗಳುಳ್ಳದ್ದಾಗಿ
ಸನಾಗಿರುತ್ತೆಯಾದ್ದರಿಂದ ಇದಕ್ಕೆ ಒಳ್ಳೇ ಖರೀದಿಯೂ ದೊರೆಯುವದು

(೩) ೧೨ ರಖಂ ನೆಲಗಡಲೆಕಾಯಿ ಬೀಜವನ್ನು ಬಿತ್ತಿ ಅಜಮಾಯಿ
ಮಾಡಿ ನೋಡಿದ್ದಾಯಿತು. ಯಾವ ರಖಂಗಳಿಂದ ಅತಿ ಪುಷ್ಕಲವಾಗಿ ಪ
ಲು ಬಂತೋ ಆ ರಖಂಗಳಲ್ಲಿ ಹಾಗೆಯೇ ಎಣ್ಣೆಯೂ ಉಳಿದವುಗಳಿಗಿಂ
ಅತಿ ಪುಷ್ಕಲವಾಗಿ ಹೊರಡಲಿಲ್ಲ. ಹೇಗಂದರೆ, ದೊಡ್ಡ ಜಪನೀಸ್ ರಖ
ಬೀಜದಿಂದ ಎಕರೆ ಒಂದಕ್ಕೆ ೨,೧೬೧ ಪೌಂಡಿನಂತೆ ಕಾಯಿ ಹುಟ್ಟುವ
ಯಾಯಿತು. ಇತರ ಯಾವ ರಖಂ ಬೀಜದಿಂದಲೂ ಎಕರೆ ಒಂದಕ
ಇಷ್ಟು ಪಸಲು ಬರಲಿಲ್ಲ. ಆದರೆ ಜರ್ಮಾದೇಶದ ನೆಲಗಡಲೆಯ ಎಣ್ಣೆ ಇ
ತವನ್ನು ನೋಡಿದರೆ ಇದು ಸಿನಿಗಲ್ ಮತ್ತು ಪಾಂಡುಚರಿ ರಖಂಗಳ ಹಿಂ
ಬೀಳುವುದು. ಎಕರೆ ಒಂದಕ್ಕೆ ಸಿನಿಗಲ್ ಜಾತಿಯು ೨,೧೨೦ ಪೌಂಡು ಕಾಯಿ
ಯನ್ನು ೮೬೬ ಪೌಂಡು ಎಣ್ಣೆಯನ್ನು, ಪಾಂಡುಚರಿ ಜಾತಿಯು ೧೯೧
ಪೌಂಡು ಕಾಯಿಯನ್ನು ೭೭೦ ಪೌಂಡು ಎಣ್ಣೆಯನ್ನು, ದೊಡ್ಡ ಜಪಾನಿ
ಜಾತಿಯು ೨೧೬೧ ಪೌಂಡು ಕಾಯಿಯನ್ನು ೭೪೯ ಪೌಂಡು ಎಣ್ಣೆಯನ್ನು
ಕೊಟ್ಟಿರುತ್ತವೆ.

ನೆಲಗಡಲೆಯನ್ನು ಕೊಂಡುಕೊಳ್ಳುವವರಲ್ಲಿ ಜನರು ಎಣ್ಣೆ ತಾ

ವ್ಯವನ್ನು ಲಕ್ಷಿಸದೆ ಇರುವವರಿಗೂ ರೈತರು ದೊಡ್ಡ ಜರ್ಮ ಮತ್ತು ಸಿನಿಗಲ್ ಜಾತಿಗಳನ್ನೇ ಸಾಗುವಳಿ ಮಾಡುವುದು ಲಾಭಕರವಾಗಿ ಕಾಣುತ್ತೆ.

(೪) ನೆಲಗಡಲೆಯ ಬೆಳೆ ಆದಮೇಲೆ ಜಮೀನಿನಿಂದ ಕಾಯನ್ನು ಕೈಯಿಂದಲೆ ಅಗದು ತೆಗೆಯಬೇಕಾಗಿರುವದರಿಂದ ಇದರ ವ್ಯವಸಾಯಕ್ಕೆ ಬಹಳ ದುಬಾರಿ ಖರ್ಚು ಬೀಳುತ್ತಾ ಇರುತ್ತೆ. ಇಂಥಾ ದುಬಾರಿ ಖರ್ಚನ್ನು ಸಾಂಗರಾಜ್ಯದ ಮತ್ತು ಸತಾರಾ ಡಿಸ್ಟ್ರಿಕ್ಟಿನ ರೈತರು ಮುಂದೆ ವಿವರಿಸುವ ರೀತಿಯಿಂದ ತಪ್ಪಿಸಿಕೊಂಡಿರುತ್ತಾರೆ. ಈ ರೈತರು ಫಸಲು ಪೂರ್ತಿಯಾಗಿ ಬೆಳೆದ ಮೇಲೆ ಒಣ ಪೈರನ್ನೆಲ್ಲಾ ಮೊದಲು ತೆಗೆದುಹಾಕುತ್ತಾರೆ. ಆಮೇಲೆ ಭಾರವಾಗಿರುವ ದೊಡ್ಡ ಕುಂಟೆಗೆ ನಾಲ್ಕು ಎತ್ತುಗಳನ್ನು ಕಟ್ಟಿ ೨—೩ ಸಾರಿ ಜಮೀನಿನ ಮೇಲೆ ಎಳಿಸುತ್ತಾರೆ. ಹೀಗೆ ಮಾಡುವದರಿಂದ ಕಾಯಿಗಳೆಲ್ಲಾ ಹೊರಬೀಳುವುವು. ಆಮೇಲೆ ಕಾಯಿಗಳನ್ನೆಲ್ಲಾ ಸುಲಭವಾಗಿ ಕೈಯಿಂದ ಆರಿಸಿಕೊಳ್ಳಬಹುದು.

(೫) ಒಂದು ಜಮೀನಿನಲ್ಲಿ ಸಾಗುವಳಿ ಮಾಡಿದ್ದ ನೆಲಗಡಲೆ ಪಸಲೆಲ್ಲಾ ಒಂದೆ ಕಾಲದಲ್ಲಿ ಕಟಾವಿಗೆ ಸಿದ್ಧವಾಗದೆ ಕಾಯಿಗಳು ಬಲಿತು ಪಕ್ವಕ್ಕೆ ಬರುವದರಲ್ಲಿ ಕಾಲಭೇದ ಕಂಡುಬಂದದ್ದರಿಂದ, ಬೇಗ ಬೇಗ ಬಲಿತ ಕಾಯಿಗಳಿಂದ ಬೀಜವನ್ನು ಚುನಾಯಿಸಿ ಅದನ್ನು ಬೇರೆ ಸಾಗುವಳಿ ಮಾಡಿ ಅಜಮಾಯಿಷಿ ಮಾಡಿ ನೋಡಿದ್ದಾಯಿತು. ಹೀಗೆ ಮಾಡಿದ್ದರಿಂದ ಫಸಲು ಕಟಾವಿಗೆ ಸಿದ್ಧವಾಗುವ ಕಾಲವನ್ನು ತಕ್ಕಮಟ್ಟಿಗೆ ಕಮ್ಮಿಪಡಿಸಿಕೊಳ್ಳಬಹುದಾದರೂ ಈ ಫಸಲಿನಿಂದ ಆಗುವ ಬೀಜದಲ್ಲಿ ಎಣ್ಣೆಯ ಮೊತ್ತವು ಕಮ್ಮಿ ಇರುತ್ತೆಂದು ತೋರುತ್ತೆ.

(೬) ಅನೇಕ ತರಹೆ ಅರಳೆ ಬೀಜಗಳನ್ನು (Castors) ಬಿತ್ತಿ ಫಸಲು ತೆಗೆದು ಯಾವ ಜಾತಿ ಬೀಜದಿಂದ ಎಣ್ಣೆಯು ಹೆಚ್ಚಾಗಿ ಹೊರಡುತ್ತೆಂದು ನೋಡಿದ್ದರಲ್ಲಿ ಅತನೀಯೆಂಬ ಊರಿನಲ್ಲಿ ಬೆಳೆದ ಚಿಟ್ಟಬೌಡ್ಲ ಬೀಜವು ಉಳಿದವುಗಳನ್ನು ಮೀರಿಸಿ ಶೇಕಡಾ ೫೯ರಂತೆ ಎಣ್ಣೆಯನ್ನು ಬಿಟ್ಟಿತು.

(೭) ಎಳ್ಳುಗಳಲ್ಲಿಯೂ ಎಣ್ಣೆಯನ್ನು ಹೆಚ್ಚಾಗಿ ಅಥವ ಕಮ್ಮಿಯಾಗಿ ಕೊಡುವ ಜಾತಿಗಳುಂಟು. ಸಾಧಾರಣವಾಗಿ ರೈತರು ಬಿತ್ತುವ ಎಳ್ಳೆಲ್ಲಾ ಅನೇಕ ಜಾತಿಗಳ ಬೆರಿಕೆಯಾಗಿಯೇ ಇರುತ್ತದೆ. ಬೆರಿಕೆಯಿಲ್ಲದಂತೆ

ಆರಿಸಿ ೯ ರಖಂಗಳನ್ನು ಬಿತ್ತಿ ನೋಡಿದ್ದರಲ್ಲಿ ಬಿಳಿ ಕನರಾ ಜಾತಿಯು ಎಳು
ಉಳಿದ ಜಾತಿಗಳನ್ನು ವಿಾರಿಸಿ, ೧೦ಂಕ್ಕೆ ೫೭ರಂತೆ ಎಣ್ಣೆಯನ್ನು
ಕೊಟ್ಟಿರುತ್ತೆ.

(೮) ಅನೇಕ ಜಾತಿ ಆಲೂಗಡ್ಡೆಗಳನ್ನು ಸಾಗುವಳಿ ಮಾಡಿ ನೋ
ದ್ದರಲ್ಲಿ ಎಕರೆ ಒಂದಕ್ಕೆ ೩೮ ಜಾತಿಗಳು ೫ ಟನ್ನುಗಳಿಗಿಂತ ಹೆಚ್ಚಾಗಿ
ಯೂ, ೫ ಜಾತಿಗಳು ೧೦ ಟನ್ನುಗಳಿಗಿಂತ ಹೆಚ್ಚಾಗಿಯೂ, ೨ ಜಾತಿಗಳ
೧೫ ಟನ್ನುಗಳಂತೆಯೂ, ಫಸಲಿನ್ನು ಕೊಟ್ಟವು. ಅತಿ ಸಮೃದ್ಧಿಯಾ
ಫಸಲು ಕೊಟ್ಟಿರುವ ಎರಡು ರಖಮುಗಳು ಇಂಗ್ಲೀಷು ಜಾತಿಗೆ ಸೇ
ದವುಗಳಾಗಿವೆ.

(೯) ಕಪ್ಪು ಭೂಮಿಯಲ್ಲಿ ಬೆಳದಿದ್ದ ಆಲೂಗಡ್ಡೆಗೆ ಬೇಗ ಹುಳ
ದ್ದು ಕೊಳೆತುಹೋಯಿತು. ಕೆಂಪು ಭೂಮಿಯಲ್ಲಿ ಹಾಗೆ ಕೆಟ್ಟು
ಹೋಗಲಿಲ್ಲ.

(೧೦) ಆಲೂಗಡ್ಡೆಗಳನ್ನು ಪ್ರೂರ್ತಿಯಾಗಿ ಬಿತ್ತುವದಕ್ಕಿಂತ ಹೋ
ಳು ಮಾಡಿ ಬಿತ್ತಿದರೆ ಫಸಲು ಹುಲುಸಾಗಿ ಆಗುವದೆಂದು ಬೆಳಗಾವಿನ
ಶೋಧನೆಮಾಡಿದ್ದರಿಂದ ಗೊತ್ತಾಯಿತು. ಹೋಳುಗಳನ್ನಾಗಿ ಮಾಡಿ ಬಿ
ತ್ತುವದರಿಂದ ಮತ್ತೊಂದು ಅನುಕೂಲವೇನಂದರೆ, ರೈತನು ಹೋಳುಮ
ಡುವಾಗ ಬೀಜದಲ್ಲಿ ರೋಗವೇನಾದರೂ ಇದ್ದಲ್ಲಿ ಕಂಡುಹಿಡಿದು ಅದನ್ನು
ಬಿತ್ತದೆ ಬಿಸಾಡಬಹುದು.

———o———

Some Fungoid Diseases of Garden Plants.*

ತೋಟಗಳಲ್ಲಿ ಗಿಡಗಳಿಗೆ ತಗಲುವ ಕೆಲವು ರೋಗಗಳ ಚಿಕಿತ್ಸೆ

ತೋಟಗಳಲ್ಲಿ ಗಿಡಗಳಿಗೆ ತಗಲುವ ಬೂದು ಸಮ್ಮಂಧವಾದ ರೋಗ
ಗಳನ್ನು ಮೂರು ಬಗೆಯಾಗಿ ವಿಂಗಡಿಸಬಹುದು.—

೧. ಬೇರುಗಳ ರೋಗಗಳು. ೨. ಎಲೆಗಳಿಗೂ ಎಳೆ ರೆಂಬೆಗಳಿಗೂ
ತಗಲುವ ರೋಗಗಳು. ೩. ಗಿಡಗಳ ದಿಂಡುಗಳಿಗೆ (ಬುಡದಿಂದ ಹಿಡಿದು
ರೆಂಬೆಗಳವರೆಗೆ) ತಗಲುವ ರೋಗಗಳು.

* ಪ್ಲಾಂಟರ್ಸ್ ಕ್ರಾನಿಕಲ್, ೫—೩—೧೦.

ಬೇರುಗಳ ರೋಗಗಳು.—ಬೇರುಗಳಿಗೆ ರೋಗ ತಗಲಿದಾಗ ಗಿಡಕ್ಕೆ ನೀರು ಸಾಲದೆ ಇದ್ದರೆ ಹ್ಯಾಗೊ ಹಾಗೆ ಕಾಣುವುದು. ರೋಗವು ನಿದಾನವಾಗಿ ಹರಡಿಕೊಳ್ಳುತ್ತಿದ್ದರೆ ಮೊದಲು ಗಿಡದ ಕೆಳ ರೆಂಬೆಗಳಲ್ಲಿ ಎಲೆಗಳು ಜೋಲು ಬಿದ್ದು ಅಂಚುಗಳಲ್ಲಿ ಒಣಗಿ ಉದುರಿಹೋಗುವವು. ಆಮೇಲೆ ಗಿಡದ ತುದಿ ರೆಂಬೆಗಳ ವರಿಗೂ ಎಲೆಗಳೆಲ್ಲಾ ಹೀಗೆಯೆ ಉದುರಿ ಕೊನೆಗೆ ಗಿಡವು ಸತ್ತುಹೋಗುತ್ತದೆ. ರೋಗವು ಪ್ರಬಲವಾಗಿ ತಗಲಿದಲ್ಲಿ ಎಲೆಗಳೆಲ್ಲಾ ಏಕಾಏಕಿ ಜೋಲುಬಿದ್ದು ೧-೨ ದಿನಗಳಲ್ಲಿ ಉದುರುವವಕ್ಕೆ ಪ್ರಾರಂಭವಾಗಿ ಗಿಡವು ಬಹುಬೇಗ ಸತ್ತುಹೋಗುವುದು. ಗಿಡದ ಎಲೆಗಳು ಜೋಲು ಬೀಳುವುದು ನೀರು ಸಾಲದ್ದರಿಂದಲೊ ಇಲ್ಲವೆ ರೋಗದಿಂದಲೊ ಎಂಬ ಅಂಶವನ್ನು ಬಹು ಸುಲಭವಾಗಿ ತಿಳಿಯಬಹುದು. ಎಲೆಗಳು ನೀರಿಲ್ಲದೆ ಜೋಲು ಬಿದ್ದಿದ್ದಪಕ್ಷದಲ್ಲಿ ನೀರನ್ನು ಹಾಯಿಸಿದಕೂಡ್ಲೆ ಗಿಡವು ಚೇತರಿಸಿಕೊಂಡು ಎಲೆಗಳೆಲ್ಲಾ ಸರಿಯಾಗುವವು. ಬೇರುಗಳಿಗೆ ರೋಗ ತಗಲಿದಾಗಾದರೊ ನೀರು ಹಾಯಿಸಿದರೂ ಪ್ರಯೋಜನವಿಲ್ಲ. ರೋಗ ತಗಲಿ ಸತ್ತುಹೋದ ಗಿಡವನ್ನು ಬುಡಸಹಿತ ಕಿತ್ತು ನೋಡಿದಲ್ಲಿ ಬೇರುಗಳಿಗೆ ಬಿಳುಪಾಗಿ ಬೂಜುಕಟ್ಟಿರುವುದು ಕಣ್ಣಿಗೆ ಕಂಡುಬರುವುದು. ರೋಗ ತಗಿಲಿದ ಗಿಡವನ್ನು ಕಿತ್ತುಹಾಕದೆ ಇದ್ದಲ್ಲಿ ರೋಗವು ಚನ್ನಾಗಿರುವ ಬಾಜು ಗಿಡಗಳಿಗೂ ಹರಡುವುದು. ಆದ್ದರಿಂದ ಬೇರುಗಳಿಗೆ ರೋಗವು ತಗಲಿದೆಯೆಂದು ತಿಳಿದ ಕೂಡ್ಲೆ ಗಿಡವನ್ನು ಬುಡಸಹಿತ ಕಿತ್ತು ಬೆಂಕಿಯಲ್ಲಿ ಸುಟ್ಟು ಗಿಡವಿದ್ದ ಸ್ಥಳದಲ್ಲಿ ೧ ಚದರಡಿಗೆ ಅರ್ಧ ಪೌಂಡಿನಂತೆ ಸುಣ್ಣದ ಪುಡಿಯನ್ನು ಹರಡಬೇಕು. ಕೊಂಚ ಸುಣ್ಣದ ದೂಳನ್ನು ಆಜುಬಾಜು ಚನ್ನಾಗಿರುವ ಗಿಡಗಳ ಬೇರುಗಳ ಸುತ್ತಲೂ ಚೆಲ್ಲಬೇಕು. ಹೀಗೆ ಮಾಡಿದಮೇಲೆ ಚನ್ನಾಗಿದ್ದ ಗಿಡಗಳಿಗೇನಾದರೂ ರೋಗ ತಗಲಿದಹಾಗೆ ಕಂಡುಬಂದರೆ ಅವುಗಳನ್ನು ತಕ್ಷಣವೆ ಕಿತ್ತುಹಾಕಿ ಸುಟ್ಟು, ಆಯಾ ಭಾಗಗಳಲ್ಲಿ ಸುಣ್ಣವನ್ನು ಪೂರ್ವದಂತೆಯೇ ಹರಡತಕ್ಕದ್ದು. ಒಂದು ಮಡಿಯಲ್ಲಿರುವ ಗಿಡಗಳಿಗೆಲ್ಲಾ ರೋಗ ತಗಲಿದ್ದಾಗ, ಅವುಗಳನ್ನೆಲ್ಲಾ ಕಿತ್ತುಹಾಕಿ ಸುಟ್ಟು, ಚದರಡಿಗೆ ಅರ್ಧ ಪೌಂಡಿನಂತೆ ಮಡಿಗೆಲ್ಲಾ ಸುಣ್ಣವನ್ನು ಹರಡಿ ಎರಡು ತಿಂಗಳುವರಿಗೆ ಬಂಜರು ಬಿಟ್ಟುಬಿಡಬೇಕು. ಎರಡು

ತಿಂಗಳುಗಳಾದಮೇಲೆಯೂ ಕೂಡ ಮೊದಲು ಹಾಕಿದ್ದ ಗಿಡಗಳ ಬದಲಿಗ
ಬೇರೆ ಜಾತಿ ಗಿಡಗಳನ್ನು ಹಾಕುವುದು ಒಳ್ಳೇದು. ಬೇಲಿಯಾಗಿ ಬೆಳಸಿ
ರುವ ಗಿಡಗಳ ಪೈಕಿ ಒಂದು ಭಾಗದಲ್ಲಿನ ಗಿಡಗಳ ಬೇರುಗಳಿಗೆಲ್ಲಾ ರೋಗ
ತಗಲಿದ್ದಲ್ಲಿ ಅಂಥಾವುಗಳನ್ನೆಲ್ಲಾ ಕಿತ್ತು ಹಾಕಿ ಸುಟ್ಟಮೇಲೆ ರೋಗ ತಗ
ಲಿದ ಪ್ರದೇಶದ ಸುತ್ತಲೂ ೧॥ ಅಡಿ ಆಳ, ೨ ಅಡಿ ಅಗಲವಿರುವಂತೆ ಒಂದು
ಕಡಗನ್ನು ತೆಗಿಯಬೇಕು. ತೋಡುವಾಗ ಹೊರಡುವ ಮಣ್ಣನ್ನು
ರೋಗವಿದ್ದ ಪ್ರದೇಶದಲ್ಲಿಯೇ ಹಾಕಬೇಕು. ಆಮೇಲೆ ಮೇಲೆ ಹೇಳಿ
ರುವಂತೆ ಸುಣ್ಣವನ್ನು ರೋಗವಿದ್ದೆಡೆಯಲ್ಲಿ ಹರಡಿ ಆರು ತಿಂಗಳು ಬಂಜ
ರು ಬಿಡಬೇಕು.

೨. ಎಲೆಗಳ ಮತ್ತು ಎಳೆ ರೆಂಬೆಗಳ ರೋಗ.—ಗಿಡಗಳಲ್ಲಿ ಎಲೆಗ
ಳಿಗೂ ಎಳೆರೆಂಬೆಗಳಿಗೂ ವಿಧವಿಧ ರಂಗುಗಳು, ಕಿಟ್ಟಗಳು ಮತ್ತು
ಬೂಜಿನ ಗೂಡುಗಳು ಹತ್ತಿರುವುದುಂಟು. ರಂಗುಗಳು ಕಿಟ್ಟಗಳು
ಹತ್ತಿರುವಾಗ ಪೊಟಾಸಿಯಂ ಸಲ್ಫೈಡ್ (Potassium Sulphide
ದ್ರಾವಕವನ್ನು ಚಿಮುಕಿಸಿದರೆ ಶಮನವಾಗುತ್ತೆ. ಅರ್ಧ ಪೌಂಡು
ಪೊಟಾಸಿಯಂ ಸಲ್ಫೈಡು ಒಂದು ಕ್ವಾರ್ಟರ್ (೨ ಕೆರೋಸಿನ್‌ಸೀಷೆ
ಬಿಸಿನೀರಿನಲ್ಲಿ ಕರಗಿಸಿದ ಮೇಲೆ ನೀರು ಸುರಿದು ೭೪ ಗ್ಯಾಲೆ
ದ್ರಾವಕವನ್ನು ತಯಾರು ಮಾಡಿಕೊಳ್ಳಬಹುದು. ಪೊಟಾಸಿಯಂ
ಸಲ್ಫೈಡಿಗೆ ಬದಲಾಗಿ ಪೊಟಾಸಿಯಂ ಪರಮಾಂಗನೇಟ್ (Potassium
Permanganate or Condy's fluid) ದ್ರಾವಕವನ್ನೂ ಚಿಮುಕಿಸುವ
ದಕ್ಕಾಗಿ ಉಪಯೋಗಿಸಿಕೊಳ್ಳಬಹುದು. ಈ ದ್ರಾವಕವು ಗುಲಾಬಿ
ಹೂ ರಂಗುಳ್ಳದ್ದಾಗಿರುವಂತೆ ಮಾಡಿಕೊಳ್ಳಬೇಕು. ಮೇಲೆ ಹೇಳಿದ ದ್ರಾ
ವಕಗಳನ್ನು ಚಿಮುಕಿಸುವದಕ್ಕೆ ಮೊದಲು ರೋಗ ತಗಲಿದ ಮತ್ತು ಒಣ
ಗಿಹೋಗಿರುವ ಎಲೆಗಳು ಮತ್ತು ರೆಂಬೆಗಳನ್ನೆಲ್ಲಾ ಕೂಡಿಹಾಕಿ ಸುಟ್ಟು
ಬಿಟ್ಟಿರಬೇಕು. ಎಲೆಗಳಿಗೂ ಎಳೆ ರಂಬೆಗಳಿಗೂ ಬೂಜು ಹಿಡಿದಿರುವಾಗ
ಲೂ ಪೂರ್ವದಂತೆಯೇ ರೋಗ ತಗಲಿದ ಭಾಗಗಳನ್ನೆಲ್ಲಾ ಕೂಡಿಹಾಕಿ
ಸುಟ್ಟಮೇಲೆ ಎರಡು ಭಾಗ ಗಂಧಕದ ಚೂರ್ಣಕ್ಕೆ ಒಂದು ಭಾಗ ಗಾಳಿ
ಯಿಂದ ಪುಡಿಯಾದ ಸುಣ್ಣವನ್ನು ಚನ್ನಾಗಿ ಜರಿಸಿಟ್ಟುಕೊಳ್ಳಬೇಕು

ಮೇಲೆ ಒಂದುವರಟು ಮಸಲಿನ್ ಬಟ್ಟೆಯಲ್ಲಿ ಸ್ವಲ್ಪಸ್ವಲ್ಪವಾಗಿ ಈ ಗಳನ್ನು ಹಾಕಿ ಕೊನೆಗಳನ್ನು ಕೈಯಲ್ಲಿ ಹಿಡಿದು ಗಿಡಗಳಿಗೆ ನೀರೆರಚಿ ತ್ಯಾವ ಮಾಡಿಕೊಂಡು ಅಥವ ಮಳೆ ಬಿದ್ದು ತ್ಯಾವವಾಗಿರುವಾಗ ಅವುಗಳ ಮೇಲೆ ಪದೆಪದೆ ಝಾಡಿಸುತ್ತಾ ಧೂಳು ಬಟ್ಟೆಯಿಂದ ಕೆಳಕ್ಕೆ ಉದುರಿ ಲೆಗಳ ಮೇಲೆ ಕೂರುವಂತೆ ಮಾಡಬೇಕು.

೩. ಗಿಡಗಳ ದಿಂಡುಗಳ (ಪ್ರಕಾಂಡ) ರೋಗಗಳು.—ಗಿಡ ಗಳಿಗೆ ಉಂಟಾಗುವ ರೋಗಗಳು ಅವುಗಳ ದಿಂಡುಗಳಲ್ಲಿ ಕಾಣಿಸಿ ಕೊಳ್ಳುವದುಂಟೆಂದು ಹೇಳಿರುತ್ತೇವೆ. ಹೀಗಾದಲ್ಲಿ ದಿಂಡುಗಳ ಮೇಲಿನ ತೊಗಟೆಯಲ್ಲಿ ಬಿರುಕು ಬೀಳುವುದು, ಅಲ್ಲಲ್ಲಿ ಕಪ್ಪು ಕಟ್ಟುವುದು, ಬೆಂಡು ಅಥವ ವ್ರಣವಾಗುವದು, ಉಂಟು. ರೋಗ ತಗಲಿದ ಭಾಗಗಳು ಕಪ್ಪು, ಕೆಂಪು, ಎಳೆಹಸರು ಮತ್ತು ಬೂದು ಬಣ್ಣಗಳು ಮತ್ತು ನಾನಾ ಆಕೃ ಗಳುಳ್ಳವುಗಳಾಗಿಯೂ ಕಣ್ಣಿಗೆ ಕಾಣಬಹುದು. ಮೊನೆಯಾಗಿರುವ ಚೂರಿಯಿಂದ ರೋಗ ತಗಲಿದ ಭಾಗವೆಲ್ಲವನ್ನೂ ಅದಕ್ಕೆ ಸಮೀಪವಾ ರೋಗ ತಗಲದೆ ಇರುವ ಕೊಂಚ ಭಾಗವನ್ನೂ ಜವರಿಹಾಕಿ ಗಾಯಗ ಗೆ ಟಾರನ್ನು ಬಳಿದರೆ ರೋಗವು ಶಮನವಾಗುತ್ತದೆ.

Appeals.

ಅಪೀಲುಗಳು.

ಚೀಫ್‌ಕೋರ್ಟು ಸಿವಿಲ್ ಅಪೀಲ್. ನಂ. ೨೬೮—ಸನ್ ೧೯೦೬—೭.

ಅಪೀಲ್ ವಾದಿ.		ಅಪೀಲ್ ಪ್ರತಿವಾದಿಗಳು.
ಅಬ್ದುಲ್ ರಹಿಮಾನ್.	*vs.*	

ಜಡ್ಜಮೆಂಟು.—ಮೂರನೇ ಪ್ರತಿವಾದಿಯ ಹೆಸರಿನಲ್ಲಿ ಸರ್ವೆ ೩೨ನೆ ನಂಬರು ಜಮೀನು ಇದ್ದು ಜಮೀನಿನ ಕಂದಾಯವನ್ನು ಅವನು ಪಾವತಿ ಕೊಡದೆ ಇದ್ದದ್ದರಿಂದ ೩—೮—೯೯ರಲ್ಲಿ ಅದು ಹರಾಜಿಗೆ ಇಡಲ್ಪಟ್ಟು ಸ ದರಿ ಹರಾಜಿನಲ್ಲಿ ಚನ್ನಲಿಂಗಪ್ಪನೆಂಬುವನು ಛಡಸವಾಲುಮಾಡಿ ಪಡೆದನು. ಮೇಲೆ ಅದೇ ಜಮೀನಿನ ಪೈಕಿ ೫ ಎಕರೆ ೨೦ ಗುಂಟೆಯನ್ನು ೧೦—೩— ೯೦೦ರಲ್ಲಿ ಹರಾಜುದಾರನು ವಾದಿಗೆ ಕ್ರಯಕ್ಕೆ ಕೊಟ್ಟನು. ೧—೨ನೆ

ಪ್ರತಿವಾದಿಗಳು, ತಮಗೆ ೨—೪ನೆ ಪ್ರತಿವಾದಿಗಳು ಆದೆ ಸರ್ವೆ ೨೦ನೆ ನಂಬ
ನ್ನು ಮೊದಲೆ ಆಧಾರಮಾಡಿ ಬರದುಕೊಟ್ಟಿದ್ದ ಪತ್ರದಮೇಲೆ ಡಿಕ್ರಿಂ
ನ್ನು ಪಡೆದು ಜಮೀನನ್ನು ಹರಾಜಿಗೆ ಗುರಿಪಡಿಸಿರುತ್ತಾರೆ. ವಾದಿಯು
ಜಮೀನು ತನ್ನದಾಗಿರುತ್ತೆ, ಇದು ಕಂದಾಯದ ಬಾಕಿಗಾಗಿ ಹಿಂದೆ ಹರಾ
ಜುಮಾಡಲ್ಪಟ್ಟಿರುವದರಿಂದ ೧—೨ನೆ ಪ್ರತಿವಾದಿಗಳ ಡಿಕ್ರಿಗೋಸ್ಕರ ಮ
ರಲ್ಪಡತಕ್ಕದ್ದಲ್ಲವೆಂತ ಪ್ರತಿಪಾದಿಸುತ್ತಾನೆ.

ರೆವಿನ್ಯೂ ಬಾಕೀಗೋಸ್ಕರ ಜಮೀನು ಹರಾಜಾದದ್ದರಲ್ಲಿ ಕಪಟ
ಮತ್ತು ಪಕ್ಷಪಾತವು ಆಗಿರುತ್ತೆ; ಹರಾಜುದಾರನಾಗಲಿ (ಚನ್ನಮಲ್ಲಪ್ಪ
ಹರಾಜುದಾರನಿಂದ ಪಡಕೊಂಡವನಾಗಲಿ (ವಾದಿ) ಜಮೀನನ್ನು ಸ್ವಾಧೀ
ಪಡಿಸಿಕೊಂಡಿಲ್ಲ; ಮೂರನೇ ಪ್ರತಿವಾದಿ ಕಡೆಯಿಂದ ಮೊದಲೇ ಕೊಂ
ಕೊಂಡಿದ್ದ ಅಬ್ದುಲ್ ಕರೀಂ ಎಂಬುವನ ಸ್ವಾಧೀನದಲ್ಲಿ ಜಮೀನಿರುತ್ತೆಂ
೧—೨ನೆ ಪ್ರತಿವಾದಿಗಳು ಹೇಳಿಕೊಳ್ಳುತ್ತಾರೆ. ಕೆಳಕೋರ್ಟಿನಲ್ಲಿ, ವಾ
ಜ್ಯದಲ್ಲಿರುವ ಜಮೀನನ್ನು ಅಬ್ದುಲ್ ಕರೀಂ ಎಂಬುವನು ೨—೪ನೆ ಪ್ರ
ವಾದಿಗಳಿಂದ ಕೊಂಡುಕೊಂಡಿದ್ದರೂ ಸ್ವಾಧೀನ ಮಾಡಿಕೊಂಡಿರುವದಿ
ನೆಂತಲೂ, ೨—೪ನೆ ಪ್ರತಿವಾದಿಗಳು ಕಂದಾಯ ಕೊಡದೆ ಮೋಸಮಾಡಿ
ವದಕ್ಕಾಗಿ ಜಮೀನನ್ನು ಹರಾಜಿಗೆ ಗುರಿಪಡಿಸಿರುತ್ತಾರೆ ಆದರೆ ಹರಾ
ದಾರ ಚನ್ನಮಲ್ಲಪ್ಪನು ಈ ಮೋಸದಲ್ಲಿ ಸೇರಿರುವದಿಲ್ಲವೆಂತಲೂ, ವಾ
ಯು ಚನ್ನಮಲ್ಲಪ್ಪನಿಂದ ಕೊಂಡುಕೊಂಡಿರುವದಾಗಲಿ ಈ ವಿಷಯ
ಪತ್ರವಾಗಲಿ ನಿಜವಲ್ಲವೆಂತಲೂ ವ್ಯವಸ್ಥೆಯಾಗಿರುತ್ತದೆ. ವಾದಿಯು ಹರಾ
ಜುದಾರನಿಂದ ಕೊಂಡುಕೊಂಡಿರುವದು ಸುಳ್ಳೆಂದು ಕೆಳಕೋರ್ಟಿನವ
ಮಾಡಿರುವ ತೀರ್ಮಾನವನ್ನು ಅಂಗೀಕರಿಸುವದು ಕಷ್ಟವಾಗಿರುತ್ತೆ. ರೆ
ನ್ಯೂ ಬಾಕಿಗೋಸ್ಕರವಾದ ಹರಾಜಿನಲ್ಲಿ ಚನ್ನಮಲ್ಲಪ್ಪನು ಪಡದಿರುವ
ನಿಜವೆಂತ ಕೆಳಕೋರ್ಟಿನವರೆ ಒಪ್ಪಿರುತ್ತಾರೆ. ದರ್ಯಾಫ್ತಿಯಲ್ಲಿ ತ
ನು ವಾದಿಗೆ ೫ ಎಕರೆ ೨೦ ಗುಂಟೆಯನ್ನು ಮಾರಿರುವದು ನಿಜವೆಂತ ಚನ್ನ
ಮಲ್ಲಪ್ಪನು ಒಪ್ಪಿಕೊಳ್ಳುತ್ತಾನೆ. ಪತ್ರವನ್ನು ಬರದು ದಸ್ಕತ್ತನ್ನು
ಕೊಟ್ಟಿರುವನು (ಚನ್ನಮಲ್ಲಪ್ಪನು) ಹೇಳುವ ಹೇಳಿಕೆಯನ್ನು ನಂ
ದೇ ಇರುವದಕ್ಕೆ ಕಾರಣವಿಲ್ಲ. ಹರಾಜುದಾರ ಚನ್ನಮಲ್ಲಪ್ಪನು ಮತ್ತು ವಾ

ದಿಯು ಕ್ರಯ ಪತ್ರದಲ್ಲಿ ಕಂಡಂತೆ ಶೇರಿ ಹರಾಜಿನಲ್ಲಿ ಕೊಂಡುಕೊಂಡು ಹರಾಜು ಚನ್ನಮಲ್ಲಪ್ಪನ ಹೆಸರಿಗೆ ಖಾಯಂ ಆದಮೇಲೆ ಇವನು ವಾದಿಗೆ ಕೊಂಚ ಭಾಗವನ್ನು ಕ್ರಯ ಪತ್ರದ ಮೇಲೆ ಬಿಟ್ಟುಕೊಟ್ಟಿದ್ದರೂ ಬಿಟ್ಟು ಕೊಟ್ಟಿರಬಹುದು.

೧—೨ನೆ ಪ್ರತಿವಾದಿಗಳಿಗೆ ಮಾಡಿರುವ ಆಧಾರವು ಜಮೀನನ್ನು ಕಂದಾಯಕ್ಕಾಗಿ ಹರಾಜುಮಾಡಿರುವದರಿಂದ ಊರ್ಜಿತ ಪಡುತ್ತಯೇ ಇಲ್ಲವೆ ಎಂಬ ಅಂಶವನ್ನು ಇನ್ನು ಚರ್ಚಿಸಬೇಕಾಗಿದೆ. ರೆವಿನ್ಯುಕೋಡು ೫೪ನೆ ಪ್ರಕರಣದ ಮೇರೆಗೆ, ಕಂದಾಯವು ಬಾಕೀ ಬಿದ್ದಾಗ ಅದಕ್ಕೆ ಸಮ್ಮಂಧಪಟ್ಟ ಜಮೀನೆ ಮುಖ್ಯ ಹೊಣೆಯಾಗಿರುತ್ತೆ. ಜಮೀನನ್ನು ಕಂದಾಯದ ಬಾಕೀಗಾಗಿ ಮೊದಲು ಪರ್ಫೀಟುಮಾಡಿ ಹರಾಜುಮಾಡಿದ ಕೂಡ್ಲೆ ಆ ಹಿಂದಿನ ಆಧಾರಭೋಗ್ಯಾದಿಗಳೆಲ್ಲ ನಿರರ್ಥಕಗಳಾಗುವವು. ಈ ಕೇಸಿನ ಹರಾಜು ನಡವಳಿಕೆಯನ್ನು ಪರಿಶೀಲಿಸಿ ನೋಡಿದ್ದರಲ್ಲಿ ಚರ್ಚಾಸ್ಪದ ಜಮೀನು ಕಂದಾಯದ ಬಾಕೀಗಾಗಿಯೇ ಹರಾಜಾಗಿರುವದು ವ್ಯಕ್ತವಾಗಿರುತ್ತದೆ. ರೆವಿನ್ಯು ರೂಲ್ಸಿನ ೩೪ನೆ ಪ್ರಕರಣವು, ಯಾವ ಜಮೀನಿನ ಕಂದಾಯ ಬಾಕಿ ನಿಲ್ಲುತ್ತೊ ಅದನ್ನು ಫರ್ಫೀಟ್‌ಪಡಿಸಿದೆ ಯೆಂದು ಮೊದಲು ಕಂಠೋಕ್ತವಾಗಿ ಹೇಳಿ ಆ ಮೇಲೆ ಅದರಿಂದಲೇ ಬಾಕಿಯನ್ನು ಬರಮಾಡಿಕೊಳ್ಳಲಿಕ್ಕೆ ಕ್ರಮವನ್ನನುಸರಿಸತಕ್ಕದ್ದೆಂದು ಹೇಳಿರುತ್ತೆ. ರೆವಿನ್ಯುಕೋಡಿನ ೧೫೪ನೆ ಪ್ರಕರಣವೂ ಕೂಡ ಯಾವ ಹಿಡುವಳಿ ಜಮೀನಿನ ಕಂದಾಯ ಬಾಕಿ ನಿಲ್ಲುತ್ತೊ ಅದನ್ನು ಮಾರುವ ಅಥವ ಆದರ ವಿಷಯದಲ್ಲಿ ಮತ್ತ್ಯಾವ ಕ್ರಮವನ್ನಾದರು ಅನುಸರಿಸುವದಕ್ಕೆ ಮುಂಚೆ ಫರ್ಫೀಟ್‌ಮಾಡಬೇಕೆಂದು ನಿರ್ದೇಶಿಸಿರುತ್ತೆ. ರೆವಿನ್ಯು ಇಲಾಖೆಯಿಂದ ಕೋರ್ಟಿನವರು ತರಿಸಿಕೊಂಡ ರಿಕಾರ್ಡಿನಲ್ಲಿ ಚರ್ಚಾಸ್ಪದವಾದ ಜಮೀನಿನ ಫರ್ಫೀಚರ್ ಆರ್ಡರ್ ಕಾಣುವದಿಲ್ಲ. ಆದರೆ ನಿರ್ದೇಶಿಸಲ್ಪಟ್ಟಿರುವ ರೀತಿಯಲ್ಲಿ ಫರ್ಫೀಚರ್ ಆರ್ಡರನ್ನು ಮಾಡಿರುವದಿಲ್ಲವೆಂತಲೂ, ಬಾಕೀದಾರನಿಗೆ ಇದ್ದ ಹಕ್ಕು ಬಾಧ್ಯತೆ ಅಕ್ಕರೆಗಳು ಮಾತ್ರ ಹರಾಜಾಗಿರುತ್ತೆಂದೂ ರುಜುವಾತು ಬರವೆ ಇರುವದರಿಂದ ಹರಾಜಿನ ಅಮಲ್‌ನಲ್ಲಿ ರೆವಿನ್ಯು ಕಾನೂನಿನಲ್ಲಿ ಸೂಚಿಸಲ್ಪಡುವ ಕ್ರಮಗಳೆಲ್ಲಾ ಜಾರೀಯಾಗಿರುತ್ತೆಂತಲೇ ತಿಳಿಯಬೇಕಾಗಿದೆ.

ಹಕ್ಕು ಸ್ವಾಧೀನತೆಗಳೆರಡನ್ನೂ ಉಂಟಾಗಿರುವ ವಾದಿಯುವಿವಾದವು ಮತ್ತು ಅವನು ಕೇಳಿಕೊಳ್ಳುವ ಪರಿಹಾರವು ನ್ಯಾಯುವಾಗಿರುತ್ತೆ. ಆದ್ದರಿಂದ ಕೆಳಕೋರ್ಟಿನ ತೀರ್ಮಾನವನ್ನು ರದ್ದುಮಾಡಿದೆ. ಚರ್ಚಾಸ್ಪದವಾದ ಜಮೀನು ೧—೨ನೆ ಪ್ರತಿವಾದಿಗಳು ಹೊಂದಿರುವ ಡಿಕ್ರಿ ಮೇಲೆ ಮಾರಲ್ಪಡತಕ್ಕದ್ದಲ್ಲವೆಂತ ವಾದಿಗೆ ಡಿಕ್ರಿ ಹುಕುಮನ್ನು ಕೊಡುವದಾಗಿದೆ.

Weeds. *
ಕಳೆಗಳು.

ಕಳೆಯೆಂದರೆ ಬೆಳೆಯಬಾರದ ಸ್ಥಳದಲ್ಲಿ ಬೆಳೆದ ಸಸ್ಯವೆಂಬದನ್ನು ಮೊದಲು ಚನ್ನಾಗಿ ತಿಳಿಯಬೇಕು. ಯಾವ ಸಸ್ಯಗಳು ಕೆಲವು ಸಂದರ್ಭಗಳಲ್ಲಿ ಕಳೆಗಳೆನ್ನಿಸಿಕೊಂಡು ನಿರ್ಮೂಲವಾಡಲ್ಪಡತಕ್ಕವುಗಳೋ ಅವುಗಳೇ ಬೇರೆ ಸಂದರ್ಭಗಳಲ್ಲಿ ಪ್ರಯೋಜನಕಾರಿಗಳಾಗಿ ರಕ್ಷಿಸಲ್ಪಡತಕ್ಕವುಗಳಾಗಬಹುದು. ಹೇಗಂದರೆ, ಉದ್ದಿಷ್ಟ ಪೈರಿನ ನಡುವೆ ಬೆಳೆಯುವ ಗಿಡಗೆಂಟೆಗಳ ಮುಖಾಂತ್ರ ಜಮೀನಿಗೆ ಯವಕ್ಷಾರಗಳು (Nitrogen Elements) ಒದಗಿ ಅದರ ಸಾರವು ಹೆಚ್ಚಾಗಬಹುದು; (೨) ಗಿಡಗೆಂಟೆಗಳು ನೆರಳನ್ನು ಕೊಟ್ಟು ಜಮೀನಿನಲ್ಲಿ ಉದ್ದಿಷ್ಟ ಪೈರು ಬೆಳೆಯುವದಕ್ಕಾಗಿ ತಂಪು ನಿಲ್ಲುವಂತೆ ಮಾಡಬಹುದು. (೩) ತಿಟ್ಟು ಪ್ರದೇಶಗಳಲ್ಲಿ ಸಾಗುವಳಿ ಮಾಡಿದ್ದೇ ಆದರೆ ಮಳೆ ಬಂದಾಗ ಜಮೀನಿನ ಮೇಲ್ಮಣ್ಣೆಲ್ಲಾ ಕೊಚ್ಚಿ ಹೋಗದಂತೆ ಗಿಡಗೆಂಟೆಗಳು ತಡೆಯಬಹುದು ; (೪) ಉದ್ದಿಷ್ಟ ಪೈರು ಬಿಸಲು ಮಳೆ ಗಾಳಿಗಳನ್ನು ಸಹಿಸಲಾರದೆ ಇದ್ದಲ್ಲಿ ಗಿಡಗೆಂಟೆಗಳು ಮರೆಯನ್ನು ಕೊಟ್ಟು ಕಾಪಾಡಬಹುದು ; (೫) ಮರಳಿನ ಮೇಲೆ ಗಿಡಗೆಂಟೆಗಳು ಬೆಳೆದು ಮರಳು ಗಾಳಿಗೆ ಕೊಚ್ಚಿ ಹೋಗದಂತೆ ಮಾಡಬಹುದು ; (೬) ಹಲವು ಬಗೆ ಗಿಡಗೆಂಟೆಗಳು ಸ್ಥಳವೆಲ್ಲಾ ಆಕ್ರಮಿಸುವದರಿಂದ ಇತರ ಕಳೆಗಳನ್ನು ಬೆಳೆಯದಂತೆ ಅಡ್ಡಿಮಾಡಬಹುದು.

ಆದ್ದರಿಂದ ಕಳೆಗಳನ್ನು ನಿರ್ಮೂಲವಾಡಬೇಕೆಂದು ಹೇಳಿರುವ ಕಾಲಗಳಲ್ಲಿ ಉದ್ದಿಷ್ಟ ಬೆಳೆಗೆ ಅಪಾಯವೆಂದು ಕಂಡುಬಂದಿರುವ ಗಿಡಗೆಂಟೆಗಳ

---

* ಪ್ಲಾಂಟರ್ಸ್ ಕ್ರಾನಿಕಲ್ ೫—೩—೧೯೧೦.

ನ್ನು ಮಾತ್ರ ನಿರ್ಮೂಲಮಾಡಬೇಕೆಂದು ತಿಳಿಯಬೇಕೆ ಹೊರ್ತು, ಮೇಲೆ ಮೂದಿಸಿರುವಂತೆ ಪ್ರಯೋಜನಕರವಾಗಿರುವವುಗಳನ್ನು ನಿರ್ಮೂಲಮಾ ಬೇಕೆಂಬುವದಲ್ಲ. ಇಂಥಾ ಗಿಡಗೆಂಟೆಗಳನ್ನು ತೆಗದುಹಾಕುವದಕ್ಕೆ ಬದ ಾಗಿ ಅವುಗಳನ್ನು ಮುತವರ್ಜಿಯಿಂದ ಬೆಳೆಯಿಸುವದರಲ್ಲಿ ಪ್ರಯತ್ನಮಾಡ ೇಕು. ಶಿಂಬಿ ಧಾನ್ಯಗಳ ಗಿಡಗಳಿಗೆ ಗಾಳಿಯಲ್ಲಿನ ನೈಟ್ರೋಜನನ್ನು (Nitrogen) ಹೀರಿ ಭೂಮಿಯಲ್ಲಿ ಯವಕ್ಷಾರವನ್ನು ವೃದ್ಧಿಪಡಿಸುವ ಗು ವಿರುತ್ತೆಂತ ಕಂಡುಬಂದಿರುತ್ತೆಯಾದ್ದರಿಂದ ಅವುಗಳನ್ನು ಉದ್ದಿಷ್ಟ ಳೆಗೆ ನಡುವೆ ರಕ್ಷಣಾರ್ಥವಾಗಿ ಬೆಳಿಯಿಸುವದು ಒಳ್ಳೇದು. ಅತು ಹೀಗೆ ಕ್ಷಣಾರ್ಥವಾದ ಗಿಡಗಳನ್ನು ಬೆಳೆಯುವದಕ್ಕೆ ಮುಂಚೆ ಇತರ ಕಳೆಗ ನ್ನು ಎಳೇದಾಗಿರುವಾಗಲೆ ನಿರ್ಮೂಲಪಡಿಸಿರಬೇಕು.

Notifications.

ಇಸ್ತಿಹಾರ್ ನಾಮೆಗಳು.

ಸನ್ ೧೯೧೦ನೆ ಇಸವಿ ಜನವರಿ ೨೯ನೆ ತಾರೀಖು ಆರ್. ೫೧೮೦—೯೪ . S. ೧೧—೦೭—೩ನೆ ನಂಬರು ಪ್ರೊಸೀಡಿಂಗ್ಸಿನಲ್ಲಿ ಶ್ರೀಮನ್ಮ ಹಾರಾಜರವರ ಸರ್ಕಾರದವರು ಅಪ್ಪಣೆ ಕೊಡಿಸಿರುವಂತೆ ನಾಳೆ ಆಗಸ್ಟ ೫ನೆ ತಾರೀಖು ಲಾಗಾಯಿತು ಚಿತ್ರದುರ್ಗದ ಟೌನಿನಲ್ಲಿ ಸದರಿ ಡಿಸ್ಟ್ರಿ ನ ಶಾನುಭೋಗ ಪಟೇಲರನ್ನು ಸರ್ವೆ ಕೆಲಸದಲ್ಲಿ ತರಬೇತು ಮಾಡುವ ಂದು ಸ್ಕೂಲನ್ನು ಸ್ಥಾಪಿಸುವ ಏರ್ಪಾಟಾಗಿರುತ್ತೆ.

ನಂ. ರೆ|| ೧೬೬. ತಾ ೧೭—೭—೧೦.

ಮೆ|| ಬಿ. ಕೃಷ್ಣರಾಯರು ಸ್ಪೆಷಲ್ ಡ್ಯೂಟೀಮೇಲೆ ಇರುವ ಸಬಬು ರಮೊಗ್ಗ ಡಿಸ್ಟ್ರಿಕ್ಟ್ ಕೋರ್ಟ್ ಹೆಡ್ ಮುನ್ಷಿ ಮೆ|| ಇ. ಹೆಚ್. ಥಾಂಪ ಯುವರನ್ನು ಸಾಗರ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮತ್ತು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರನ್ನಾಗಿ ನೇಮಕರೂರು ಮಾಡಿರುತ್ತೆ.

ನಂ. ೬೧೨. ತಾ|| ೧೬—೭—೧೦.

ಮೈಸೂರು ಸರ್ವೀಸ್ ರೆಗ್ಯುಲೇಷನ್ಸ್ ೧೭೭ನೆ ಪ್ರಕರಣದ ಮೇ
ಹೊಳಲ್ಕೆರೆ ತಾಲ್ಲೂಕ್ ಅಮಲ್ದಾರ್ ಮೆ|| ಅಬ್ದುಲ್ ಹಕೀಂಯವರಿಗೆ ೧೯೧
ನೆ ಇಸವಿ ಜುಲೈ ೨ಂರ ಲಾಗಾಯಿತು ೧೫ ದಿನಗಳ ಪ್ರಿವಿಲೇಜ್ ರಜ
ಕೊಟ್ಟಿರುತ್ತೆ.

ಅವರ ಗೈರ್‌ಹಾಜರಿಯಲ್ಲಿ ತಾಲ್ಲೂಕು ಶಿರಸ್ತೇದಾರ್ ಹನುಮಯ
ನವರು ತಾಲ್ಲೂಕು ಛಾರ್ಜಿನಲ್ಲಿರತಕ್ಕದ್ದು.

ನಂ. ಆರ್. ೨೫೯-ಎಲ್. ಆರ್. ೯೦-೦೯-೮. ತಾ|| ೧೮—೭—೧೦.

ಜಗಲೂರು ತಾಲ್ಲೂಕು ಅಮಲ್ದಾರ್ ಮೆ|| ಇ. ಸಿ. ಸದಾಶಿವ ಪಿ
ಯವರಿಗೆ ೧೯೧೦ನೆ ಮೇ ೩ಂನೆ ತಾರೀಖಿನ ಆರ್. ೮೦೨೪-ಎಲ್. ಆ
೯೦-೦೯-೬ನೆ ನಂಬರಿನಲ್ಲಿ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೇಜ್ ರಜ
ಜೊತೆಗೆ ೨೮ ದಿನಗಳ ಪ್ರಿವಿಲೇಜು ರಜಾವನ್ನು ಜಾಸ್ತಿಯಾಗಿ ಕೆ
ಟ್ಟಿರುತ್ತೆ.

ನಂ. ಆರ್. ೨೬೨-ಎಲ್. ಆರ್. ೧೯-೧೦-೭. ತಾ|| ೧೮—೭—೧೦.

ನಾಗಮಂಗಲ ತಾಲ್ಲೂಕ್ ಅಮಲ್ದಾರ್ ಮೆ|| ಷೇಕ್ ಅಬ್ದುಲ್ಲಾ ಯ
ರಿಗೆ ೧೯೧೦ನೆ ಆಗಸ್ಟು ೧ನೆ ತಾರೀಖು ಲಾಗಾಯಿತು ಮೂರು ತಿಂಗಳ
ಳ ಪ್ರಿವಿಲೇಜ್ ರಜಾ ಮಂಜೂರ್ಮಾಡಿರುತ್ತೆ.

೨. ಅವರ ಗೈರ್‌ಹಾಜರಿಯಲ್ಲಿ ಮೈಸೂರು ಡೆಪ್ಯುಟಿ ಕಮಿಷನ
ವರ ಆಫೀಸ್ ಜುಡಿಷಿಯಲ್ ಹೆಡ್ ಮುನ್ಷಿ ಯಂ. ಯನ್. ಶ್ರೀನಿವಾಸಯ್ಯ
ಗಾರ್ ಬಿ.ಎ., ಯವರನ್ನು ನಾಗಮಂಗಲದ ತಾಲ್ಲೂಕ್ ಆಕ್ಟಿಂಗ್ ಅಮಲ್ದಾ
ಮತ್ತು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರನ್ನಾಗಿ ನೇಮಕರೂಪ ಮಾಡಿರುತ್ತೆ

ನಂ. ೨೬೪-ಎಲ್. ಆರ್. ೪೬೭-೦೯-೭೧. ತಾ|| ೧೮—೭—೧೦.

ಮೆ|| ಯಸ್. ಯನ್. ಅಪ್ಪಣ್ಣಯ್ಯಂಗಾರ್ ಬಿ.ಎ., ಬಿ. ಎಲ್., ಯ
ವರು ಇತರ ಕೆಲಸದ ಮೇಲೆ ಇರುವ ಸಬಬು ಹಾಸನದ ಆಕ್ಟಿಂಗ್ ಡಿಸ್ಟ್ರಿ
ಕ್ಟು ಶಿರಸ್ತೇದಾರ್ ಜಿ. ಯಸ್. ರಾಮಸ್ವಾಮಯ್ಯಂಗಾರ್ರನ್ನು ಹಾಸನ

ಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮತ್ತು ೩ನೇ ಕ್ಲಾಸು ಮ್ಯಾಜಿಸ್ಟ್ರೇಟ
ನ್ನಾಗಿ ಮೊಕರರೂರು ಮಾಡಿರುತ್ತೆ.

———o———

ನಂ. ೨೬೬-ಎಲ್. ಆರ್. ೪೮೩-೧೯-೨. ತಾ|| ೧೮—೩—೧೦.

ಅರಕಲ್‌ಗೂಡು ತಾಲ್ಲೂಕು ಅಮಲ್ದಾರ್ ಮೆ|| ವಿ. ಯಸ್. ರಾಜ
ಗೋಪಾಲಾಚಾರ್ಯರಿಗೆ ೧೯೧೦ನೇ ಇಸವಿ ಜುಲೈ ೨ನೇ ತಾರೀಖು ಲಾಗಾಯಿ
ು ಒಂದು ತಿಂಗಳ ಪ್ರಿವಿಲೇಜ್ ರಜಾ ಕೊಟ್ಟಿರುತ್ತೆ.

೨. ಅವರ ಗೈರ್ ಹಾಜರಿಯಲ್ಲಿ ಹಾಲಿ ಹಾಸನದ ತಾಲ್ಲೂಕು ಆಕ್ಟಿಂಗ್
ಮಲ್ದಾರ್ ಮೆ|| ಜಿ. ಯಸ್. ರಾಮಸ್ವಾಮಯ್ಯಂಗಾರಿ)ಗೆ ಬಿಡುಗಡೆ ಆದ
ಂತರ ಅರಕಲ್‌ಗೂಡು ತಾಲ್ಲೂಕು ಛಾರ್ಜಿನಲ್ಲಿರತಕ್ಕದ್ದು.

———o———

ನಂ. ಆರ್. ೨೬೮-ಯಲ್. ಆರ್. ೨೬-೧೦-೨. ತಾ|| ೧೮—೩—೧೦.

ಕೋಲಾರ ತಾಲ್ಲೂಕು ಅಮಲ್ದಾರ್ ಮೆ||ಬಿ. ಯಸ್. ವೆಂಕಟೇಶಯ್ಯ
ವರಿಗೆ ೧೯೧೦ನೇ ಇಸವಿ ಜುಲೈ ೨೦ನೇ ತಾರೀಖು ಲಾಗಾಯಿತು ೩ ತಿಂಗಳು
ಳ ಪ್ರಿವಿಲೇಜ್ ರಜಾ ಮಂಜೂರ್ಮಾಡಿರುತ್ತೆ.

೨. ಅವರ ಗೈರ್‌ಹಾಜರಿಯಲ್ಲಿ ಚನ್ನಪಟ್ಟಣದ ಸಬ್ ರಿಜಸ್ಟ್ರಾರ್ ಯಮ್.
. ನರಸ್ಸಿಹ್ಮಯ್ಯಂಗಾರ್, ಬಿ. ಎ., ಯವರನ್ನು ಕೋಲಾರ ತಾ|| ಆಕ್ಟಿಂ
 ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರನ್ನಾಗಿ ಮೊಕರೂ
ು ಮಾಡಿರುತ್ತೆ.

———:o:———

ನಂ. ಆರ್. ೨೩೨-ಎಲ್. ಆರ್. ೧೯-೧೯-೪. ತಾ|| ೧೮—೩—೧೦.

ಎಳಂದೂರು ಜಹಗೀರ್ ಅಮಲ್‌ದಾರ್ ಮೆ|| ಮಹಮ್ಮದ್ ಪೀರ್‌ಯವ
ಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯಿತು ಎರಡು
ಿಂಗಳುಗಳ ಪ್ರಿವಿಲೇಜ್ ರಜಾ ಮಂಜೂರ್ಮಾಡಿರುತ್ತೆ.

೨. ಅವರ ಗೈರ್‌ಹಾಜರಿಯಲ್ಲಿ ಚನ್ನಪಟ್ಟಣದ ತಾ|| ಪೋಲೀಸ್ ಇನ್
ಸ್ಪೆಕ್ಟರ್ ಯಂ. ವಾಸುದೇವರಾಯರನ್ನು ಎಳಂದೂರು ಜಹಗೀರ್ ಆಕ್ಟಿಂಗ್

ಅಮಲ್ದಾರ್ ಮತ್ತು ೩ನೇ ಕ್ಲಾಸ್ ಮ್ಯಾಜಿಸ್ಟ್ರೇಟರನ್ನಾಗಿ ನೌಕರಿ ಮಾಡಿರುತ್ತೆ.

ನಂ. ೧೨೬೭. ತಾ|| ೨೬—೭—೧೦.

ಮೈಸೂರು ಸರ್ವಿಸ್ ರೆಗ್ಯುಲೇಷನ್ಸ್ ೧೭೭ನೆ ಪ್ರಕರಣದ ಮೇ ಹೊನ್ನಾಳಿ ತಾ|| ಆಕ್ಟಿಂಗ್ ಅಮಲ್ದಾರ್ ಮೆ|| ಯಂ. ಯಸ್. ಹಯಗ್ರೀ ರಾಯರಿಗೆ ೧೯೧೦ನೆ ಇಸವಿ ಆಗಸ್ಟ್ ೧ನೆ ತಾರೀಖು ಲಾಗಾಯಿತು ೧ ದಿನಗಳ ಪ್ರಿವಿಲೇಜ್ ರಜಾ ಮಂಜೂರ್ಮಾಡಿರುತ್ತೆ.

೨. ಅವರ ಗೈರುಹಾಜರಿಯಲ್ಲಿ ತಾಲ್ಲೂಕು ಶಿರಸ್ತೇದಾರು ತಾಲ್ಲ ಕು ಛಾರ್ಜಿನಲ್ಲಿರತಕ್ಕದ್ದು.

೩. ೧೯೧೦ನೆ ಜೂನ್ ೬—೮ನೆ ತಾರೀಖಿನ ೧೨೩೯ನೆ ನಂಬರಿ ಲ್ಲಿ ಮೆ|| ಹಯಗ್ರೀವರಾಯರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೇ ರಜಾ ರದ್ದುಮಾಡಿರುತ್ತೆ.

ನಂ. ೬೦೬—೭. ತಾ|| ೧೫—೭—೧೦.

ಈ ಕೆಳಗಿನ ತಾಲ್ಲೂಕು ಶಿರಸ್ತೇದಾರರ ವರ್ಗಾವರ್ಗಿಗಳನ್ನು ಹ ಕ್ಕುಂ ಮಾಡಿರುತ್ತೆ.

ಹೆಸರು.	ಇಂದ.	ಗೆ.
೧. ಯಂ. ವಿ. ಗಂಗಾಧರರಾವ್	ಯಡತೊರೆ	ಚಾಮರಾಜನಗ
೨. ಯನ್. ವೆಂಕಟಕೃಷ್ಣಯ್ಯ	ಚಾಮರಾಜನಗರ	ಮಂಡ್ಯ.
೩. ಯಂ. ಯಸ್. ಚಕ್ರವರ್ತಿ ಅಯ್ಯಂಗಾರ್	ಟಿ. ನರಸೀಪುರ	ನಂಜನಗೂಡು
೪. ಯನ್. ನಾಗೇಶ ಶಾಸ್ತ್ರಿ	ನಂಜನಗೂಡು	ಹುಣಸೂರು.
೫. ಯಂ. ರಾಮಚಂದ್ರರಾವ್	ಮಂಡ್ಯ	ಯಡತೊರೆ.

೬. ಮಂಡ್ಯದ ಸಬ್ ರಿಜಿಸ್ಟ್ರಾರ್ ಯು. ನಾರಾಯಣರಾಯರನ್ನು ೨ ಕ್ಲಾಸ್ ಶಿರಸ್ತೇದಾರರನ್ನಾಗಿ ನೌಕರರೂರು ಮಾಡಿ ಟಿ. ನರಸೀಪುರಕ್ಕೆ ವರ್ಗಾ ಯಿಸಿರುತ್ತೆ.

Occasional Notes.
ವಿವಿಧ ವೃತ್ತಾಂತಗಳು.

೧. ಕಬ್ಬು ಬೆಳೆಯುತ್ತಿರುವಾಗ ಗೊಬ್ಬರ ಕೊಡುವುದು.—ಕಬ್ಬು ಬೆಳೆಯುತ್ತಿರುವಾಗ ಯವಕ್ಷಾರ ಗೊಬ್ಬರವನ್ನು ಬುಡಗಳ ಸುತ್ತಲೂ ಡುವುದು ಬಹಳ ಲಾಭಕರವೆಂದು ಬೊಂಬಾಯಿ ಆಧಿಪತ್ಯದ ವ್ಯವಸಾಯ ಇಲಾಖೆ ೧೯೦೮—೯ನೆ ಸಾಲ್ ರಿಪೋರ್ಟಿನಿಂದ ತಿಳಿಯಬರುತ್ತೆ.

---

೨. ಮದರಾಸಾಧಿಪತ್ಯದ ಟ್ರಿಚ್ಚಿಪಟ್ಟಣದ ಸುತ್ತುಮುತ್ತಲಿನ ಪ್ರ ದೇಶದಲ್ಲಿ ರಂಜಕಕ್ಷಾರಯುಕ್ತವಾದ ಒಂದು ಬಗೆ ಗೊಬ್ಬರವು ಶಿಕ್ಕುತ್ತೆ. ಇದನ್ನು ಕೊಯಂಬತೂರಿನಲ್ಲಿರುವ ಟಿ. ಸ್ಟೇನ್ಸ್ ಅಂಡ್ ಕೊ ಕಂಪನಿಯು ವರು ಕೂಡಿಹಾಕಿ ನುಣ್ಣಗೆ ಪುಡಿಮಾಡಿ ಬೇಕಾದವರಿಗೆ ಗೊಬ್ಬರವಾಗಿ ಉ ಪಯೋಗಿಸಲೋಸುಗ ಮಾರುತ್ತಾರೆ. ಈ ಪುಡಿಯಲ್ಲಿ ಶೇಕಡ ೨೭-೩೮ ರಂತೆ ರಂಜಕಾಮ್ಲವು (Phosphoric Acid) ಶೇಕಡ ೪೩-೯೪ರಂತೆ ಸು ಣ್ಣವು ಇರುತ್ತಾದ್ದರಿಂದ, ಗೊಬ್ಬರವಾಗಿ ಉಪಯೋಗಿಸಿದಲ್ಲಿ ಜಮೀನು ನಿ ಧಾನವಾಗಿ ಸಾರವನ್ನು ತೆಗದುಕೊಂಡು ಒಳ್ಳೆ ಫಸಲನ್ನು ಕೊಡಬಹುದು. ಪ್ಲಾಂಟರ್ಸ್ ಕ್ರಾನಿಕಲ್ ೩—೪—೧೯೧೦.

---

೩. ಬೊಡೋರ್ಮಿಕ್ಸ್ಚರ್.—ಈಗ ಅನೇಕಕಡೆಗಳಲ್ಲಿ ಕ್ರಿಮಿಗಳನ್ನು ಪರಿಹಾರಮಾಡುವದಕ್ಕೆ ಉಪಯೋಗಿಸಲ್ಪಡುತ್ತಿರುವ (Bordeaux Mixture) ಬೋಡೋರ್ ಮಿಕ್ಸ್ಚರೆಂಬದನ್ನು ಬೆಂಗಳೂರಲ್ಲಿರುವ ಜೆ.ಬಿ. ಫಾಸ್ಟ ಅಂಡ್ ಕೊ ಕಂಪನಿಯವರು ಸರಬರಾಯಿ ಮಾಡುವದಕ್ಕೆ ಏರ್ಪಾಟು ಮಾಡಿರುತ್ತಾರೆ. ಈಮಿಕ್ಸ್ಚರನ್ನು ತಯಾರುಮಾಡಿಕೊಳ್ಳುವದು ಹೇಗಂ ದರೆ, ಎರಡು ಕಲ್ಲು ಜಾಡಿಗಳಲ್ಲಿ ಬೇರೆ ಬೇರೆ ಔಷಧಗಳು ಇರುತ್ತವೆ. ಇವು ಗಳನ್ನು ಸಮಭಾಗಗಳಾಗಿ ಬೆರಸಿಕೊಂಡು ಇದಕ್ಕೆ ೧೯ಕ್ಕೆ ೨೫ರಷ್ಟು ನೀರ ನ್ನು ಸೇರಿಸಿದರೆ ಉಪಯೋಗಿಸುವದಕ್ಕೆ ಸಿದ್ಧವಾಗುತ್ತೆ. ಒಂದೊಂದು ಜಾಡಿಯಲ್ಲಿ ಎರಡೆರಡು ಗ್ಯಾಲನ್ ಔಷಧವನ್ನು ತುಂಬಿರುತ್ತಾರೆ. ಈ ಎರಡು ಜಾಡಿಗಳಿಂದ ಒಟ್ಟು ೧೦೦ ಗ್ಯಾಲನ್ ಬೋಡೋರ್ ಮಿಕ್ಸ್ಚರ್ ದಾ ಸಕವಾಗುತ್ತೆ. ಇಷ್ಟಕ್ಕೆ ರೂ|| ೭—೮—೦ ಬೆಲೆಯಾಗುತ್ತೆ. ಒಂದು

ದಿನ ಮಾಡಿದ ದ್ರಾವಕವು ಎರಡನೇ ದಿನಕ್ಕೆ ಕೆಟ್ಟುಹೋಗುತ್ತಿಯಸ
ದ್ದರಿಂದ ಆಯಾ ದಿನಕ್ಕೆ ಎಷ್ಟೆಷ್ಟು ಬೇಕೋ ಅಷ್ಟ ತಯಾರುಮಾಡಿಕೊ
ಳ್ಳಬೇಕು.—ಪ್ಲಾಂಟರ್ಸ್ ಕ್ರಾನಿಕಲ್ ೫—೩—೧೯೧೦.

---

೪. ಕೋ ಆಪರೇಟಿವ್ ಸೊಸೈಟಿಗಳು.-೧೯೧೦ನೆ ಮೇ ತಿಂಗಳಲ್ಲಿ ಬೆಂ
ಗಳೂರು ಸೆಂಟ್ರಲ್ ಕೋ ಆಪರೇಟಿವ್ ಬ್ಯಾಂಕಿನವರು ತುರ್ವೆಕೆರೆ ಕಸಬ
ದಲ್ಲಿರುವ ಕೋ ಆಪರೇಟಿವ್ ಸೊಸೈಟಿಗೆ ಮೆಂಬರುಗಳ ವ್ಯವಸಾಯ ಸಂಬಂ
ಧವಾದ ಕಾರ್ಯಗಳನ್ನು ನೆರವೇರಿಸುವುದಕ್ಕೆ ೧೫೦೦ ರೂಪಾಯಿಯನ್ನು ಸಾ
ಲವಾಗಿ ರಿಜಿಸ್ಟ್ರಾರ್‌ರವರ ಶಿಫಾರಸ್ ಮೇಲೆ ಕೊಟ್ಟಿರುತ್ತಾರೆ. ತುರ್ವೆಕೆರೆ
ಸೊಸೈಟಿಯವರಂತೆ ಸಾಲ ಕೇಳಿರುವ ಇತರ ಸೊಸೈಟಿಗಳಿಗೂ ಸಾಲ ಮೇ
ಲ್ಕಂಡ ಬ್ಯಾಂಕಿನಿಂದ ಕೊಡಿಸಲು ಸ್ಥಳ ವಿದ್ಯಮಾನಗಳನ್ನು ಕುರಿತು ರಿಜಿ
ಸ್ಟ್ರಾರ್‌ರವರಿಗೆ ಸಲಹೆಕೊಡಲು ಈಚೆಗೆ ಗವರ್ನಮೆಂಟಿನಿಂದ ಒಬ್ಬ ಡೆ
ಪ್ಯೂಟಿ ಅಮಲ್ದಾರರವರು ನಿರ್ಮಾಣವಾಗಿರುತ್ತಾರೆ. ಈ ಜುಲೈ ಮಾಹೆಯ
ಲ್ಲಿ ಸದರಿ ಆಫೀಸರವರು ಕೊರಟಿಗೆರೆ ಸಬ್ ತಾಲ್ಲೂಕು ಹುಲಿಕುಂಟೆ
ಪರಸ್ಪರ ಸಹಾಯ ಸಂಘಕ್ಕೆ ಸೆಂಟ್ರಲ್ ಬ್ಯಾಂಕಿನವರು ಕೊಟ್ಟಿರುವ
೨೦೦೦ ರೂಪಾಯಿ ಸಾಲವನ್ನು ಸಾಲ ಅಪೇಕ್ಷೆ ಮಾಡಿರುವ ಮೆಂಬರುಗಳಿಗೆ
ತಕ್ಕ ರಿಕಾರ್ಡು ಮಾಡಿಕೊಂಡು ಹಂಚುವುದಕ್ಕೋಸ್ಕರ ಕೊರಟಿಗೆರೆಗೆ
ಹೋಗಿರುತ್ತಾರೆ.

೨. ಸೊಸೈಟಿಗಳು ನಮ್ಮ ಸಂಸ್ಥಾನದಲ್ಲಿ ಹೆಚ್ಚುತ್ತಾ ಬರುತ್ತಿರಲು
ಸರಿಯಾಗಿ ಆಗಿಂದಾಗ್ಯೆ ತನಿಖೆಮಾಡುವುದಕ್ಕೋಸ್ಕರ ಗವರ್ನಮೆಂಟಿನವ
ರು ಮೊದಲು ಇದ್ದ ಒಬ್ಬ ಇನ್ಸ್‌ಪೆಕ್ಟರ್ ಅಲ್ಲದೆ ಮತ್ತೊಬ್ಬ ಇನ್ಸ್‌ಪೆಕ್ಟರ
ನ್ನು ಮೊಕರರ್ ಮಾಡಿರುತ್ತಾರೆ. ಈ ಇಬ್ಬರು ಪೈಕಿ ಬೆಂಗಳೂರು
ಸಿಟಿ ಕೋ ಆಪರೇಟಿವ್ ಸೊಸೈಟಿಗೆ ಸೆಕ್ರೆಟರಿಯವರಾಗಿರುವ ಮೆ|| ವಿ.
ಸುಬ್ಬರಾಯರು ಒಬ್ಬರಾಗಿರುತ್ತಾರೆ. ಮತ್ತೊಬ್ಬ ಇನ್ಸ್‌ಪೆಕ್ಟರ್
ಮೆ|| ಎಂ. ಪುಟ್ಟಸ್ವಾಮಿ, ಬಿ. ಎ., ಎಂಬುವರು ಮೈಸೂರು ಡಿಸ್ಟ್ರಿಕ್ಟ್
ಕೋ ಆಪರೇಟಿವ್ ಸೊಸೈಟಿಗಳನ್ನು ತನಿಖೆಮಾಡಲು ಸದ್ಯಕ್ಕೆ ಮೈ
ಸೂರಿನಲ್ಲಿಯೇ ಇರುವಂತೆ ನಿರ್ಮಾಣವಾಗಿರುತ್ತೆ.

V. B. S. & SONS, BANGALORE.—1910.

THE MYSORE

REVENUE & AGRICULTURAL GAZETTE.

ವಾಲ್ಯೂಂ ೪.] ಸೋಮವಾರ, ೧೫ನೆ ಆಗಸ್ಟು ೧೯೧೦. [ನಂ. ೨೦.

Contents.

1. Mysore Dasara Exhibition of 1910.
2. Hairy Caterpillars.
3. Cotton Seed as Human Food.
4. Agricultural Calendar for 1910-11.
5. Government Orders.
6. Notifications.
7. Occasional Notes.
   (i) Alahabad Exhibition.

ಅನುಕ್ರಮಣಿಕೆ.

೧. ೧೯೧೦ನೆ ಇಸವಿ ದಸರಾ ಮಹೋತ್ಸವದ ಕೈಗಾರಿಕೆ, ವ್ಯವಸಾಯ ಮತ್ತು ರಾಸುಗಳ ಪ್ರದರ್ಶನ.
೨. ಕಂಬಳಿ ಹುಳುಗಳು
೩. ಹತ್ತೀ ಬೀಜ ಮನುಷ್ಯಾಹಾರವಾಗಬಹುದು.
೪. ಸಾಧಾರಣ ಸಂವತ್ಸರದ ವ್ಯವಸಾಯ ಪಂಚಾಂಗ.
೫. ಸರ್ಕಾರಿ ಹುಕುಂಗಳು.
೬. ಇಸ್ತಿಹಾರುನಾಮೆಗಳು.
೭. ವಿವಿಧ ವೃತ್ತಾಂತಗಳು.
   (i) ಅಲಹಾಬಾದಿನಲ್ಲಿ ಜರಗುವ ಪ್ರದರ್ಶನ.

Mysore Dasara Exhibition of 1910.

೧೯೧೦ನೆ ಇಸವಿ ದಸರಾ ಮಹೋತ್ಸವದ ಕೈಗಾರಿಕೆ ವ್ಯವಸಾಯ ಮತ್ತು ರಾಸುಗಳ ಪ್ರದರ್ಶನ.

ಈ ವರುಷ ಪ್ರದರ್ಶನವು ಅಕ್ಟೋಬರು ೫ನೇ ತಾರೀಖು ಬುಧವಾರದ ಲಾಗಾಯಿತು ೯ನೇ ತಾರೀಖು ಭಾನುವಾರದವರಿವಿಗೆ ಪ್ರದರ್ಶಿಸಿದ ವಸ್ತುಗಳ ಯೋಗ್ಯತಾಯೋಗ್ಯತೆಗಳನ್ನು ಪರೀಕ್ಷಿಸಿ ಬಹುಮಾನಗಳನ್ನು

ಕೊಡತಕ್ಕ ಬಗ್ಗೆ ಜಡ್ಜಿಗಳಿಗೂ ಮತ್ತು ನ್ಯೂಸುಪೇಪರು ಯಾನೆ ವ
ತ್ತಾಂತ ಪತ್ರಿಕೆಗಳ ಬಾತ್ಮೀದಾರರಿಗೂ, ನಂತರ ಅದೇವಾರೆ ೧೮ನೆ
ತಾರೀಖು ಸೋಮವಾರದ ಲಾಗಾಯಿತು ೨೫ನೆ ಮಂಗಳವಾರದ ವರಿಗೆ ಜ
ಹಿರಂಗಕ್ಕೂ ತೆರೆಯಲ್ಪಡುವುದು. ದನಗಳ ಮತ್ತು ಕೋಳಿಗಳ ಪ್ರ
ರ್ಶನವು ಅಕ್ಟೋಬರ್ ೧೫ನೇ ತಾರೀಖು ಶನಿವಾರ ಪ್ರಾರಂಭವಾಗಿ ೧೮ನೆ
ತಾರೀಖು ಮಂಗಳವಾರ ಪೂರೈಸಲ್ಪಡುವುದು.

ಎಗ್ಸಿಬಿಷನ್ ಕಮಿಟಿಯವರು ಈ ಪ್ರದರ್ಶನ ಮೂಲಕವಾಗಿ ರೈ
ರು, ಶಿಲ್ಪಿಕಾರರು, ಮುಂತಾದ ಸಂಸ್ಥಾನದ ಪ್ರಜೆಗಳ ಸಮಕ್ಷಮ ವಿ
ವಿಧವಾದ ಪದಾರ್ಥಗಳನ್ನೂ, ಯಂತ್ರಗಳನ್ನೂ ಮತ್ತು ಆಯುಧಗ
ನ್ನೂ ಜಮಾಯಿಸಿ ಇಟ್ಟು ಅವುಗಳ ಪ್ರಯೋಜನಗಳನ್ನೂ ಮತ್ತು
ಯಾರಾಗುವ ರೀತಿಗಳನ್ನೂ ತಿಳಿಸಿ ಅವರನ್ನು ವಿಚಾರಪರರನ್ನಾಗಿ ಮಾ
ಬೇಕೆಂದು ಅಭಿಪ್ರಾಯಪಡುತ್ತಾರೆ. ಪ್ರದರ್ಶಿಸತಕ್ಕ ಸಾಮಾನುಗ
ಒಂದೊಂದು ನಮೂನೆಯನ್ನು ಮಾತ್ರ ಇಡೋಣದರಿಂದ, ಅಂಥಾವುಗ
ತಯಾರಿ ಮುಂತಾದ ವಿಷಯವಾಗಿ ಸಾಕಾದಷ್ಟು ತಿಳುವಳಿಕೆ ಆಗಲಾರದೆ
ದೂ ಮತ್ತು ಜನರಂಜಕವಾಗಿರಲಾರದೆಂದೂ ತಿಳಿದು ವಿಕ್ರಯದ ಬಗ್ಗೆ ತ
ಬಹುದಾದ ಸಾಮಾನುಗಳನ್ನೂ ಸಹ ಅಂಗೀಕರಿಸುತ್ತಾರೆ.

ವಿಕ್ರಯಿಸುವದಕ್ಕೆ ಮಾತ್ರ ಕಳುಹಿಸುವ ವಿಶೇಷವಾದ ಸಾಮಾನ
ಗಳು ಬೇರೆ ಕೊಠಡಿಗಳಲ್ಲಿ ಪ್ರದರ್ಶಕರ ಅಥವಾ ಅವರ ಏಜಂಟರ ಸುಫರ್ದಿ
ನಲ್ಲಿಡಲ್ಪಡುವವು. ನಮೂನೆಗೋಸ್ಕರ ಕಳುಹಿಸಿದ ಸಾಮಾನುಗಳನ್ನು
ಮಾರುವದಕ್ಕೆ ಆಕ್ಷೇಪಣೆ ಇಲ್ಲವು. ಆದರೆ, ಅವುಗಳನ್ನು ಪ್ರದರ್ಶನ
ಮುಗಿಯುವವರಿಗೆ ಸಾಗಿಸಕೂಡದು. ಮಾರುವ ಉದ್ದೇಶದಿಂದಲೇ ಕಳ
ಹಿಸುವ ಸಾಮಾನುಗಳನ್ನು ಮಾರಾಟವಾದ ತಕ್ಷಣವೇ ಸಾಗಿಸಬಹುದು
ಪ್ರದರ್ಶನಶಾಲೆಯಿಂದ ಯಾವ ಸಾಮಾನನ್ನೂ ಅಪ್ಪಣೆಚೀಟಿ ಇಲ್ಲದೆ ಹೊ
ರಗೆ ಸಾಗಿಸಕೂಡದು.

ಫಲಪುಷ್ಪ ಇತ್ಯಾದಿ ಸಾಮಾನುಗಳ ಪ್ರದರ್ಶನವು ೧೯೧೦ನೇ ಇಸ
ವಿ ಅಕ್ಟೋಬರ್ ೧೫ನೇ ತಾರೀಖಿನಲ್ಲಿ ಪ್ರಾರಂಭಿಸಲ್ಪಟ್ಟು ಮಾರನೇದಿನ
ಸಾಯಂಕಾಲದವರಿಗೆ ತೆರೆಯಲ್ಪಟ್ಟಿರುವುದು.

ಇಂಗ್ಲೀಷು ಮತ್ತು ಕನ್ನಡ ಭಾಷೆಗಳಲ್ಲಿ ತಕ್ಕ ಅರ್ಹತೆಯುಳ್ಳ ಪ
ಿರುವ ಜನರಿಂದ ವ್ಯವಸಾಯ, ಕೈಗಾರಿಕೆ ಎಂತ್ರಾಯುಧಗಳ ಪ್ರಯೋ
ನ, ಬೆಲೆ, ತಯಾರಿ ಮತ್ತು ರಿಪೇರಿಗಳ ವಿಷಯವಾಗಿ ಉಪನ್ಯಾಸಗಳು
ಾಡುವುದಕ್ಕೆ ತಕ್ಕ ಏರ್ಪಾಡು ಮಾಡಲ್ಪಡುತ್ತೆ. ಉಳುವ, ನೇಯುವ,
ಡಿಕೆ ತಯಾರುಮಾಡುವ ಮತ್ತು ಕಸೂತಿ ಇತ್ಯಾದಿ ನೂತನ ಕೈಗಾರಿಕೆ
ಸಬುಗಳಲ್ಲಿಯೂ ಮತ್ತು ಅವುಗಳ ವಿಧಾನಗಳಲ್ಲಿಯೂ ಒಂದು ಪ್ರೋ
ಪ್ರೋಟಿಯು ಪ್ರದರ್ಶನವೂ ನಡೆಸಲ್ಪಡುವುದಕ್ಕೆ ತಕ್ಕ ಏರ್ಪಾಡು ಮಾ
ಲ್ಪಡುತ್ತೆ. ಉಪನ್ಯಾಸ ಮುಂತಾದವುಗಳು ನಡೆಸತಕ್ಕ ಸ್ಥಳ ಮತ್ತು
ಾಲ ಐದ ನೋಟೀಸುಗಳ ಮೂಲಕ ತಿಳುಹಿಸಲ್ಪಡುತ್ತೆ.

ನೋಟಕರಿಂದ ಒಂದು ದಫೆಕ್ಕೆ ಇಸಂ ೧ಕ್ಕೆ ಎರಡಾಣೆ ಪ್ರಕಾರ
ಸುಂ ವಸೂಲ್ಮಾಡಲ್ಪಡುವುದು. ಸೀಜನ್ (Season) ಟಿಕೆಟ್ಟುಗಳು
ಸಂ ೧ಕ್ಕೆ ಒಂದು ರೂಪಾಯಿನಂತೆ ಕೊಡಲ್ಪಡುವುವು. ಇವುಗಳು ಅವ
ಾಯಿಗಳು, ಆದರೆ ಎಂಟು ಟಿಕೆಟ್ಟುಗಳುಳ್ಳ ಒಂದು ಪುಸ್ತಕವು ಒಂದು
ಾಯಿಗೆ ಮಾರಲ್ಪಡುವುದು. ಅನುಕೂಲವಾದರೆ, ಬೆಂಗಳೂರಿಂದ
ೈಸೂರಿಗೆ ಕಮ್ಮಿದರದ ಸೀಜನ್ (Season) ಟಿಕೆಟ್ಟುಗಳನ್ನು ಮಾರತ
ಬಗ್ಗೆ ರೈಲ್ವೇ ಇಲಾಖೆಯವರೊಂದಿಗೆ ಏರ್ಪಾಡು ಮಾಡಲ್ಪಡುವುದು.
ಂಥಾ ಸೀಜನ್ (Season) ಟಿಕೆಟ್ಟುಗಳನ್ನು ತೆಗದುಕೊಂಡಿರುವವರು
ರದರ್ಶನಶಾಲೆಗೆ ಪ್ರವೇಶಿಸಲು ಅಡ್ಡೀ ಇರುವದಿಲ್ಲ.

ಪ್ರತಿಯೊಂದು ಪ್ರದರ್ಶಿಸಲ್ಪಡುವ ವಸ್ತುವಿನ ವಿಷಯದಲ್ಲೂ
ೂಕರೂರಾಗಿರುವ ದರಖಾಸ್ತು ನಮೂನೆಯಲ್ಲಿ ತಪಶೀಲುಗಳನ್ನು ಬರೆ
ು ಪ್ರದರ್ಶನದ ಸೆಕ್ರೆಟರಿಯವರಿಗೆ ರವಾನಿಸತಕ್ಕದ್ದು. ಅಚ್ಚುಮಾ
ದ ದರಖಾಸ್ತು ನಮೂನೆಗಳನ್ನು ಡಿಸ್ಟ್ರಿಕ್ಟ್, ಡಿವಿಜನಲ್ ಮತ್ತು ತಾ
ೂಕು ಅಧಿಕಾರಿಗಳಿಂದಾಗಲಿ, ಕಮಿಟಿಯ ಸೆಕ್ರೆಟರಿಯವರಿಂದಾಗಲಿ
ಡೆಯಬಹುದು. ಅಚ್ಚು ದರಖಾಸ್ತು ನಮೂನೆಗಳ ಬದಲಾಗಿ ಫೂಲ್
ಸ್ಕ್ಯಾಪ್ ಸೈಜಿನ ಕಾಗದದಲ್ಲಿ ಸದರಿ ನಮೂನೆಯ ಹೆಡ್ಡುಗಳನ್ನು ನಕ
ು ಮಾಡಿಕೊಂಡು ತಪ್ಸೀಲುಗಳನ್ನು ಭರ್ತಿಮಾಡಿಯಾದರೂ ರವಾನಿಸಬ
ುದು. ಪ್ರತಿ ಸೆಕ್ಷನ್‌ಗೂ ಬೇರೆಬೇರೆ ಫಾರಂ ಉಪಯೋಗಿಸಬೇಕು.

ಪ್ರದರ್ಶಕರು ಮೇಲ್ಕಂಡ ನಮೂನೆಯನ್ನು ಅನುಸರಿಸಿ ಬರೆದ ದ
ಖಾಸ್ತುಗಳನ್ನು ಕಮಿಟಿ ಸೆಕ್ರೆಟರಿಯವರಿಗೆ ಶಪಟಂಬರು ತಾರೀಖು ೧
ರೊಳಗಾಗಿ ತಲಪುವಂತೆ ರವಾನಿಸತಕ್ಕದ್ದು. ಪ್ರತಿ ದಖಾಸ್ತಿಗೂ ದ
ಖಾಸ್ತುದಾರನ ಹೆಸರು, ವಿಳಾಸ, ಪೋಸ್ಟುಗಳನ್ನು ವಿಶದವಾಗಿ ಬರೆ
ರುವ ಒಂದು ಪೋಸ್ಟ್ ಕಾರ್ಡನ್ನು ಲಗತ್ತು ಮಾಡಿರಬೇಕು.

ವಸ್ತುಗಳನ್ನು ಪ್ರದರ್ಶಿಸುವದಕ್ಕಾಗಲಿ, ರಿಜಸ್ಟರು ಮಾಡುವು
ಕ್ಕಾಗಲಿ, ಪ್ರದರ್ಶಿಸುವ ಕಟ್ಟಡದಲ್ಲಿ ಸ್ಥಳಕ್ಕಾಗಲಿ ಶರಗೆಗಳೇನೂ ಹಾ
ರುವದಿಲ್ಲ.

ಪ್ರದರ್ಶನಕ್ಕೆ ಕಳುಹಿಸಲ್ಪಡುವ ಸಾಮಾನುಗಳನ್ನು ಪ್ರದರ್ಶಕರ
ಗಲಿ, ಅವರ ಏಜಂಟ್ ಯಾ ಸೇವಕರಾಗಲಿ ತಂದು ಪ್ರದರ್ಶನದ ಸ್ಥಳದ
ಒಪ್ಪಿಸಬಹುದು. ಅಥವಾ ಟಪ್ಪಾಲ್ ಯಾ ರೈಲ್ವೇ ಮೂಲಕವಾಗಿಯ
ಗಲಿ ಕಳುಹಿಸಬಹುದು, ಆದರೆ ಎಲ್ಲಾ ತಾಲ್ಲೂಕು ಅಥವಾ ಡಿಸ್ಟ್ರಿಕ್ಟ
ಳ ಸಾಮಾನುಗಳು ಆಯಾಯ ಡಿಸ್ಟ್ರಿಕ್ಟ ಡೆಪ್ಯುಟಿ ಕಮೀಷನರವ
ಮೂಲಕವೇ ಕಳುಹಿಸಬೇಕು.

ಪ್ರದರ್ಶನ ಸ್ಥಳಕ್ಕೆ ಸಾಮಾನುಗಳನ್ನು ರವಾನಿಸುವ ಛಾರ್ಜುಗ
ಗೆ ಪ್ರದರ್ಶಕರೇ ಗುರಿಯಾಗಿರುತ್ತಾರೆ. ಛಾರ್ಜುಗಳನ್ನು ಪಾವತಿ ಮಾ
ದೆ ಕಳುಹಿಸಲ್ಪಡುವ ಸಾಮಾನುಗಳನ್ನು ಕಮಿಟಿಯವರು ಅಂಗೀಕಾ
ಮಾಡುವುದಿಲ್ಲ.

ಪ್ರದರ್ಶನಕ್ಕಾಗಿ ರವಾನಿಸಲ್ಪಟ್ಟ ಸಾಮಾನುಗಳುಳ್ಳ ಭಾಂಗಿಗಳ
ಎತ್ರಗಳ ಮತ್ತು ಆಯುಧಗಳ ಮೇಲೆ ಆಯಾ ಪದಾರ್ಥಗಳ ಹೆಸರು
ಸಂಖ್ಯೆ ಮತ್ತು ಪ್ರದರ್ಶಕನ ರಿಜಸ್ಟರ್ ನಂಬರು ನಮೂದಿಸುವದಲ್ಲದೆ
"ಪ್ರದರ್ಶನ ಸೆಕ್ರೆಟರಿಯವರಿಗೆ" ಎಂದು ಬರೆದಿರುವ ವಿಳಾಸವುಳ್ಳ ಒಂದ
ಲೇಬಲ್ಲನ್ನೂ ಹಚ್ಚಿರತಕ್ಕದ್ದು. ಆಯಾ ವಸ್ತುವಿನೊಂದಿಗೆ ದ್ವಿಪ್ರ
ಪಟ್ಟಿಗಳಲ್ಲಿ ಅದರ ಹೆಸರು ಅಥವಾ ವಿವರಣ, ಕಿಮ್ಮತ್ತು, ಬೆಳೆದ ಅಥವ
ತಯಾರ್ಮಾಡಿದ ಸ್ಥಳ, ಪ್ರದರ್ಶಕನ ಅಥವಾ ತಯಾರ್ಮಾಡಿದವನ ಹೆ
ಸರು ನಮೂದಿಸಬೇಕು. ವ್ಯವಸಾಯ ಸಂಬಂಧ ತರಗತಿಗೆ ಸೇರಿದ್ದ
ಈ ಕೆಳಗೆ ಕಂಡ ತಪ್ಸಿಲುಗಳನ್ನು ನಮೂದಿಸಬೇಕು.

೧. ಬಿತ್ತನೆಕಾಲ.

೨. ಬೆಳೆಯುತಕ್ಕ ಭೂಸ್ಥಿತಿ.

೩. ಎಕರೆ ೧ಕ್ಕೆ ಬೇಕಾವಾದ ಬೀಜದ ಪರಿಮಾಣ.

೪. ಉಪಯೋಗಿಸಿದ ಗೊಬ್ಬರ.

೫. ನೀರಿನ ಆಸರೆ ಬೇಕೇ?

೬. ಎಷ್ಟು ದಿವಸಗಳಲ್ಲಿ ಫಸಲು ಕಟಾವಿಗೆ ಬರುತ್ತೆ.

೭. ಎಕರೆ ೧ಕ್ಕೆ ಸರಾಸರಿ ಉತ್ಪತ್ತಿ.

೮. ಇತರ ವ್ಯವಸಾಯ ಸಂಬಂಧ ತಪ್ಸೀಲುಗಳು.

ಸನ್ ೧೯೧೦ನೆ ಇಸವಿ ಸೆಪ್ಟೆಂಬರ್ ೧ನೆ ತಾರೀಖಿನೊಳಗಾಗಿ ಮೈ ೂರು ಪಟ್ಟಣದಲ್ಲಿ ಸೆಕ್ರೆಟರಿಯವರಿಗೆ ತಲಪುವ ಹಾಗೆ ಸಾಮಾನುಗಳ ನ್ನು ರವಾನಿಸತಕ್ಕದ್ದು. ಆದರೆ ಸೆಪ್ಟೆಂಬರ್ ೨೦ನೆ ತಾರೀಖಿನ ನಂತರ ರುವ ಸಾಮಾನುಗಳನ್ನು ಅಂಗೀಕರಿಸುವುದಿಲ್ಲ.

ಮೈಸೂರು ಸಂಸ್ಥಾನದ ಅಥವಾ ಇತರ ದೇಶದ ರೈತರಾಗಲೀ ಅಥ ಶಿಲ್ಪಿಗಳಾಗಲೀ ರುಸುಂ ಕೊಟ್ಟು ಪ್ರದರ್ಶನಶಾಲೆಗೆ ಹೋಗಲು ಶಕ್ತ ಲ್ಲದ ಪಕ್ಷದಲ್ಲಿ ಅಯಾಯ ತಾಲ್ಲೂಕು ಅಧಿಕಾರಿಗಳಿಂದ ಬರಶಿಕೊಂಡು ಂದಲ್ಲಿ ಅಂಥಾವರನ್ನು ಮುಫತ್ತಾಗಿ ಪ್ರದರ್ಶನಶಾಲೆಯಲ್ಲಿ ಬಿಡಲ್ಪಡುತ್ತೆ.

ಪ್ರದರ್ಶನವು ಮುಗಿದ ಒಂದು ವಾರದೊಳಗಾಗಿ ಸಾಮಾನುಗಳನ್ನು ಪಸು ಸಾಗಿಸಿಕೊಂಡು ಹೋಗಬೇಕು. ಅದಕ್ಕೆ ತಪ್ಪಿದಲ್ಲಿ ಕಮಿಟಿಯ ರು ತಮಗೆ ಯುಕ್ತವಾದ ರೀತಿಯಲ್ಲಿ ಅವುಗಳನ್ನು ವಿಲೇವಾರಿ ಮಾಡು ರೆ. ಕೆಟ್ಟುಹೋಗತಕ್ಕ ಸಾಮಾನುಗಳನ್ನು ಪ್ರದರ್ಶನವು ಪ್ರಾರಂ ವಾದ ೨೪ ಘಂಟೆಗಳಮೇಲೆ ಪ್ರದರ್ಶಕರಾಗಲಿ, ಕೊಂಡುಕೊಂಡವರಾ ಸಾಗಿಸಿಕೊಂಡು ಹೋಗಬಹುದು.

ಪ್ರದರ್ಶನಕ್ಕೆ ನಿಷ್ಕರಿಸಿದ ಕಾಲವು ಮಾಲೀಕರಿಗೆ ರಾಸುಗಳನ್ನು ದರ್ಶಿಸಲು ಅವರ ವ್ಯವಸಾಯ ಕಸಬಿಗೆ ಪ್ರತಿಕೂಲವಾದದ್ದೆಂದು ೀರಿ ಈ ವರುಷ ಕಮಿಟಿಯವರು ಮೈಸೂರು ಪಟ್ಟಣದ ಒಳ್ಳೆ ರಾ ಗಳು ಮಾತ್ರ ಪ್ರದರ್ಶನಕ್ಕೆ ತರಬಹುದೆಂದು ತೀರ್ಮಾನಿಸಿರುತ್ತಾರೆ.

ಕಮಿಟಿಯವರು ರಾಸುಗಳಿಗೆ ಬಾಡಿಗೆ ಇಲ್ಲದೆ ಸ್ಥಳ ಸರಬರಾಜು ಮಾಡುತ್ತಾರೆ.

ಜಿರಾಯಿತಿ ಮುಂತಾದ ಕಷ್ಟ ಕೆಲಸವನ್ನು ಮಾಡತಕ್ಕ ರಾಸುಗಳು ಸ್ವಂತಕರ್ತನು ಸಮ್ಮತಿಸಿದಲ್ಲಿ, ಭಾರಗಳನ್ನು ಎಳಸಿ ಪರೀಕ್ಷಿಸಲ್ಪಡುವುವು.

ಈ ವರುಷ ಬಹುಮಾನದ ಲಿಸ್ಟಿನಲ್ಲಿ ಕೋಳಿಗಳಿಗೆ ಬಂದೂತರಗಳಿಯು ಏರ್ಪಟ್ಟಿರುವದು ಮತ್ತು ಉತ್ತಮಜಾತಿಗಳಿಗೆ ಬಹುಮಾನಗಳು ಕೊಡಲ್ಪಡುವವು. ಬಹುಮಾನವು ಮೇಲ್ಕಂಡ ಪ್ರಾಣಿಗಳ ಸಂಬಂಧ ಎಂತ್ರ ಮತ್ತು ಉಪಕರಣಗಳಿಗೂ ಕೊಡಲ್ಪಡುವುದು.

ಪ್ರದರ್ಶನಕ್ಕೆ ಸಂಬಂಧಪಟ್ಟ ದರಖಾಸ್ತು ವಗೈರೆ ಕಾಗದಪತ್ರಗಳನ್ನು ಮೈಸೂರು ದಸರಾ ಪ್ರದರ್ಶನದ ಕಮಿಟಿಯ ಸೆಕ್ರಿಟರಿಯವರ ವಿಳಾಸಕ್ಕೆ ಮೈಸೂರಿಗೆ ಕಳುಹಿಸತಕ್ಕದ್ದು.

ಪ್ರದರ್ಶನಕ್ಕೆ ಸಂಬಂಧಪಟ್ಟ ಬಾಕಿ ಯೆಲ್ಲಾ ಸಂಗತಿಗಳಿಗೆ ಇದೇ ಆಗಸ್ಟು ತಿಂಗಳು ೪ನೇ ತಾರೀಖಿನಲ್ಲಿ ಪ್ರಾಯಿಷ್ ಮಾಡಿರುವ ಕನ್ನಡದ ಮೈಸೂರು ಗೆಜಟ್ಟನ್ನು ಓದಿನೋಡಿ ತಿಳಿದುಕೊಳ್ಳಬಹುದು.

ಬಹುಮಾನಾರ್ಹವಾದ ಸಾಮಾನುಗಳ ಸೆಕ್ಷನ್ಗಳು ಕ್ಲಾಸುಗಳು ಮತ್ತು ಗೂಪುಗಳ ವಿವರ.

ಸೆಕ್ಷನ್ ಎ. ವ್ಯವಸಾಯ ಸಂಬಂಧ ಸಾಮಾನುಗಳು.

ಕ್ಲಾಸ್ I. ತರಿ ಮತ್ತು ಖುಷ್ಕಿ ಪದಾರ್ಥಗಳು.

ಗೂಪ್:—೧. ಧಾನ್ಯಗಳು, ೨. ದ್ವಿದಳ ಧಾನ್ಯಗಳು, ೩. ಎಣ್ಣೆ ಮತ್ತು ಎಣ್ಣೇ ಬೀಜಗಳು, ೪. ಕಬ್ಬು.

ಕ್ಲಾಸ್ II. ಸಸ್ಯಗಳು ಮತ್ತು ಬಾಗಾಯಿತು ಪದಾರ್ಥಗಳು.

ಗೂಪ್:—೧. ಬಾಗಾಯಿತು ಪದಾರ್ಥಗಳು, ೨. ತರಕಾರಿ ಮತ್ತು ಹಣ್ಣುಗಳು.

ಕ್ಲಾಸ್ III. ನಾರುಗಳು.

ಕ್ಲಾಸ್ IV. ಮೇವಾಗತಕ್ಕ ಗಿಡಗಳು.

ಕ್ಲಾಸ್ V. ಜಂಗ್ಲೀ ಪದಾರ್ಥಗಳು.

ಕ್ಲಾಸ್ VI. ಸಕ್ಕರೆ, ಜೇನುತುಪ್ಪ, ಜೇನುಮೇಣ ವಗೈರೆ.

ಕ್ಲಾಸ್ VII. ಆಹಾರ ಜಿನಸಿಗಳು ಮತ್ತು ಕವಾಡಿಗ ಸಾಮಾನು ಗಳು.

ಕ್ಲಾಸ್ VIII. ಗೊಬ್ಬರಗಳು.

ಸೆಕ್ಷನ್ ಬಿ. ವ್ಯವಸಾಯ ಮತ್ತು ಕೈಗಾರಿಕೆ ಎಂತ್ರ ಮುಂತಾದವು.

ಕ್ಲಾಸ್ I. ವ್ಯವಸಾಯ ಸಂಬಂಧ ಎಂತ್ರಗಳು ಮತ್ತು ಮುಟ್ಟು ಗಳು.

ಗ್ರೂಪ್:—೧. ಯಂತ್ರಗಳು, ೨. ವ್ಯವಸಾಯ ಸಂಬಂಧ ಆಯುಧಗಳು, ೩ ೋಟದ ಕೆಲಸ ಸಂಬಂಧ ಆಯುಧಗಳು.

ಕ್ಲಾಸ್ II. ಕೈಗಾರಿಕೆ ಸಂಬಂಧ ಯಂತ್ರಗಳು ಮತ್ತು ಆಯು ಗಳು.

ಗ್ರೂಪ್:—೧. ಸಾಧಾರಣ ಯಂತ್ರಗಳು, ೨. ನೇಯಿಗೆ ಯಂತ್ರಗಳು ಮ ೩. ಹತ್ಯಾರುಗಳು.

ಸೆಕ್ಷನ್ ಸಿ. ಕೈಗಾರಿಕೆ ಸಂಬಂಧ ಪದಾರ್ಥಗಳು.

ಕ್ಲಾಸ್ I. ಬಟ್ಟೆಗಳು.

ಗ್ರೂಪ್:—೧. ಹತ್ತಿ ಸಂಬಂಧ, ೨. ರೇಷ್ಮೆ ಬಟ್ಟೆಗಳು, ೩. ಉಣ್ಣೆ ಬಟ್ಟೆ ಳು, ೪. ಮಿಶ್ರ ಬಟ್ಟೆಗಳು.

ಕ್ಲಾಸ್ II. ಕಸೂತಿ ಮತ್ತು ಹೆಣಿಕೆ.

ಗ್ರೂಪ್:—೧. ಸಾಧಾರಣ ಕಸೂತಿ, ೨. ನೂತನ ಕಸೂತಿ (ಎ) ಗೋ ದ ಕೆಲಸ (ಬಿ) ಜರೀ ಕಸೂತಿ, ೩. ಹೆಣಿಕೆ ಪ್ರೋಟಾಪ್ರೋಟಿ ಹೆಂಗಸರಿಗೆ ಮಾತ್ರ) ಕೈ ತಯಾರಿ (ಬಿ) ಯಂತ್ರದ ತಯಾರಿ.

ಕ್ಲಾಸ್ III. ಲೋಹದ ಕೆಲಸ.

ಗ್ರೂಪ್:—೧. ಕಬ್ಬಿಣ ಮತ್ತು ಉಕ್ಕು, (ಅತ್ಯುತ್ತಮ ವಸ್ತುವಿಗೆ ಬಂದು ಷ್ಟದ ಪದಕ), ೨. ಹಿತ್ತಾಳೆ ತಾಮ್ರ ಎರಕ ವಗೈರೆ ಸಾಮಾನುಗಳು, ೩. ಲ್ಯುಮಿನಿಯಂ, ೪. ಭಂಗಾರ ಮತ್ತು ಬೆಳ್ಳಿ.

ಕ್ಲಾಸ್ IV. ಕಲ್ಲಿನ ಕೆಲಸ.

ಗ್ರೂಪ್.—೧. ಸಾದಾಕೆಲಸ ಬಳಾಪು, ೨. ಚಿತ್ರಕೆಲಸ, ೩. ಕೆತ್ತನೆಕೆಲಸ, ೪. ಶಿಮೆಂಟು ಕೆಲಸ.

ಕ್ಲಾಸ್ V. ಮಣ್ಣಿನ ಕೆಲಸ.

ಗ್ರೂಪ್.—೧. ಸಾಧಾರಣ ಕೆಲಸ, ೨. ಚಿತ್ರಕೆಲಸದ ಹೊಳಪುಳ್ಳ ಮಡಿಕೆ ಸಾಮಾನು.

ಕ್ಲಾಸ್ VI. ಮರಕೆಲಸ.

ಗ್ರೂಪ್.—೧. ಸಾಧಾರಣ ಕೆಲಸ, ೨. ಚಿತ್ರಕೆಲಸ.

ಕ್ಲಾಸ್ VII. ರಸಸಂಬಂಧ ಪದಾರ್ಥಗಳು.

ಕ್ಲಾಸ್ VIII. ಇತರ ಸಾಮಾನುಗಳು.

ಸೆಕ್ಷನ್ ಡಿ. ಚಮತ್ಕಾರ ವಸ್ತುಗಳು.

ಕ್ಲಾಸ್ I. ಚಿತ್ರಗಳು.

ಕ್ಲಾಸ್ II. ಸಂಗೀತವಾದ್ಯಗಳು.

ಸೆಕ್ಷನ್ ಇ. ಜಾನವಾರುಗಳು.

ಸೆಕ್ಷನ್ ಎಫ್. ಚಿಲ್ಲರೆ ಬಾಬುಗಳು.

Hairy Caterpillars.

ಕಂಬಳಿ ಹುಳುಗಳು.

ಮದರಾಸಾಧಿಸತ್ಯದ ವ್ಯವಸಾಯಇಲಾಖೆಯವರು ಕಂಬಳಿ ಹುಳಗಳ ವಿಚಾರವಾಗಿ ಬರೆದು ಪ್ರಕಟಿಸಿಮಾಡಿರುವ ಲೇಖನದಲ್ಲಿ ಕಂಡುಬರುವ ಕೆಲವು ಅಂಶಗಳನ್ನು ಇಲ್ಲಿ ಉದಹರಿಸಿದೆ.

ಕಂಬಳಿ ಹುಳಗಳು ಮಳೆಗಳಾದ ಒಡನೆ ಕಾಣಿಸಿಕೊಂಡು ಪೈರುಗಳಿಗೆ ವಿಶೇಷ ಹಾನಿಯನ್ನುಂಟುಮಾಡುತ್ತವೆ. ಕಬ್ಬು, ಜೋಳ, ನೆಲಗಡ್ಲೆ ಮುಂತಾದವುಗಳಿಗೆ ಈಹುಳಗಳಿಂದ ವಿಶೇಷ ಹಾನಿ ಉಂಟಾಗುತ್ತೆ. ಪೈರುಗಳನ್ನು ನಾಶಮಾಡಿದಮೇಲೆ ಇವುಗಳು ಖರ್ಜೂರದ ಬೀಜದಂತೆ ರೂಪವನ್ನುಹೊಂದಿ ಭೂಮಿಯೊಳಗೆ ಸೇರಿ ಮುಂದಿನ ಮಳೆಗಳ ವರಿಗೂ

ಹೊರಕ್ಕೆ ಬರುವದಿಲ್ಲ. ಮಳೆ ಬಿದ್ದ ವಡನೆ ಇವುಗಳು ರೆಕ್ಕೆಯಿಂದ ಕೂಡಿದ ಕೆಂಪು ಮತ್ತು ಹಳದಿ ಬಣ್ಣದ ಚಿಟ್ಟೆಗಳಾಗಿ ಮೇಲಕ್ಕೆ ಬರುತ್ತವೆ. ಗುಂಪುಗುಂಪಾಗಿ ದೀಪದ ಸುತ್ತುಮುತ್ತಲೂ ಹಾರಾಡುತ್ತಿರುವ ಈಚಿಟ್ಟೆಗಳನ್ನು ಎಲ್ಲರೂ ನೋಡಿರಬಹುದು. ಈ ಚಿಟ್ಟೆಗಳಲ್ಲಿ ಹೆಣ್ಣಾದವುಗಳು ಕಂಬು, ಜೋಳ, ನೆಲಗಡ್ಲೆ ಎಲೆಗಳ ತಳದಲ್ಲಿ ಮೊಟ್ಟೆ ಇಟ್ಟಿರುವದನ್ನೂ ನೋಡಿರಬಹುದು. ಈ ಮೊಟ್ಟೆಗಳೇ ಒಡೆದ ನಂತರ ಕಂಬಳಿ ಹುಳಗಳಾಗುವದು.

ಒಂದು ಚಿಟ್ಟೆಯು ೫೦೦ರಿಂದ ೧೦೦೦ರ ವರಿಗೂ ಮೊಟ್ಟೆ ಇಡುತ್ತೆ. ಆದ್ದರಿಂದ ಒಂದನ್ನು ಕೊಂದರೆ ೫೦೦ರಿಂದ ೧೦೦೦ರಷ್ಟು ಕಂಬಳಿ ಹುಳಗಳನ್ನು ಕೊಂದಹಾಗೆ ಆಗುವದು.

ಒಳ್ಳೆ ಮಳೆ ಬಿದ್ದು ಭೂಮಿಯು ಚನ್ನಾಗಿ ತೇವವಾದ ಕೂಡ್ಲೆ ಏಕಕಾಲದಲ್ಲಿ ಚಿಟ್ಟೆಗಳು ಗುಂಪುಗುಂಪಾಗಿ ಮೇಲಕ್ಕೆ ಬರುವವು. ಇವುಗಳು ದೀಪದ ಹತ್ತರ ಸಾಮಾನ್ಯವಾಗಿ ಹೆಚ್ಚಾಗಿ ಸೇರುವದರಿಂದ ಇವುಗಳ ಬಾಧೆಯು ವಿಶೇಷವಾಗಿರತಕ್ಕ ಸ್ಥಳಗಳಲ್ಲಿ ದೀಪಗಳನ್ನಿಟ್ಟು ಗುಂಪುಗುಂಪಾಗಿ ನಾಶಮಾಡಬಹುದು. ಹೇಗಂದರೆ; ಒಂದು ದೀಪವನ್ನಿಟ್ಟು ಅದರ ಕೆಳಗೆ ಒಂದು ತಟ್ಟೆಯಲ್ಲಿ ಶೀಮೆಯೆಣ್ಣೆ ಬೆರಸಿದ ನೀರನ್ನು ಇಟ್ಟಲ್ಲಿ ದೀಪದ ಬಳಿಗೆ ಬಂದ ಹುಳುಗಳು ತಮ್ಮಷ್ಟಕ್ಕೆ ತಾವೇ ತಟ್ಟೆಯಲ್ಲಿ ಬಿದ್ದು ಸತ್ತುಹೋಗುವವು. ಈ ದೀಪಗಳನ್ನು ಕೆಳಗೆ ತಿಳಿಸುವಮೇರೆ ತಯಾರುಮಾಡಿಕೊಳ್ಳಬಹುದು. ಒಂದು ಲಾಂದ್ರದಲ್ಲಿ ಒಂದು ಕೆರೋಸಿನ್ ದೀಪವನ್ನು ಇಟ್ಟು ಅದರ ಕೆಳಗೆ ೨ ಅಡಿ ಚದರ ೩ ಅಂಗುಲ ಆಳವುಳ್ಳ ಒಂದು ತಟ್ಟೆಯಲ್ಲಿ ಚಿಮಣಿ ಎಣ್ಣೆ ಬೆರಸಿದ ನೀರನ್ನು ತುಂಬಿಡಬಹುದು. ದೀಪಕ್ಕೆ ಶೀಮೆ ಎಣ್ಣೆ ಜೊತೆಗೆ ಕೊಬರಿ ಎಣ್ಣೆ ಬೆರಸಿದರೆ ಉರಿಯು ಪ್ರಕಾಶವಾಗುವದಲ್ಲದೆ ಹೊಗೆಯೂ ಕಮ್ಮಿಯಾಗಿ ಚಿಟ್ಟೆ ಹುಳುಗಳನ್ನು ಚನ್ನಾಗಿ ಆಕರ್ಷಿಸುತ್ತದೆ. ಒಂದು ಬೊಂಬನ್ನು ನೆಟ್ಟು ಅದಕ್ಕೆ ಲಾಂದ್ರವನ್ನು ತೂಗುಹಾಕಿ ಅದರ ಕೆಳಗೆ ತಟ್ಟೆಯನ್ನು ಇಟ್ಟರೂ ಇಡಬಹುದು, ಅಥವಾ ತಟ್ಟೆಯ ಮಧ್ಯೆ ಒಂದು ಕಲ್ಲು ಇಟ್ಟು ದೀಪವನ್ನು ಇಟ್ಟರೂ ಸರಿಯೆ. ಅಂತು ಬೆಳಕು ದೂರದಿಂದ ಕಾಣುವಂತೆ ಹೊಲದಲ್ಲಿ ಪೈರಿನ ಮಟ್ಟಕ್ಕಿಂತ ಎತ್ತರದಲ್ಲಿ ದೀಪವನ್ನು ಇಡಬೇಕು.

ಆರ್ಕಾಟ್ ಡಿಸ್ಟ್ರಿಕ್ಟಿನ ಕೆಲವು ಗ್ರಾಮಗಳಲ್ಲಿ ೧೯೧೯ನೆ ಸಾಲ್ ಜುಲೈ ಮತ್ತು ಆಗಸ್ಟು ತಿಂಗಳುಗಳಲ್ಲಿ ಈ ದೀಪಗಳನ್ನಿಟ್ಟು ಅಜಮಾಯಿಷಿ ಮಾಡಲ್ಪಟ್ಟಿತು. ಜುಲೈ ತಿಂಗಳಲ್ಲಿ ಒಂದು ರಾತ್ರಿ ಒಂದು ಇಂಚು ಮಳೆ ಆಯಿತು; ಮೂರನೆ ದಿನರಾತ್ರಿ ಮೊದಲುಗೊಂಡು ಮೇಲೆ ಹೇಳಿದ ರೀತಿಯಲ್ಲಿ ಒಂದು ದೀಪವನ್ನು ಇಡಲು ಹುಳುಗಳು ಕಾಣಿಸಿಕೊಂಡು ನಾಲ್ಕು ದಿನಗಳಲ್ಲಿ ೪೦೦ ನಾಶವಾದವು. ಆಗಸ್ಟು ತಿಂಗಳು ಒಂದುರಾತ್ರಿ ಬಿದ್ದ ೧೫ ಇಂಚು ಮಳೆಯಿಂದ ೨ ದಿನದ ಮೇಲೆ ಮತ್ತೊಂದು ಗುಂಪು ಕಾಣಿಸಿಕೊಂಡು ೪ ದಿನಗಳಲ್ಲಿ ೭೪೦೦ ಹುಳಗಳು ನಾಶವಾದವು. ಇದರಲ್ಲಿ ಮೊದಲನೆ ರಾತ್ರಿಯೇ ೩೮೦೦ ಹುಳಗಳಿಗಿಂತ ಹೆಚ್ಚಾಗಿ ಸಿಕ್ಕಿಕೊಂಡವು. ಹುಳಗಳಲ್ಲಿ ಅರ್ಧ ಅಂದರೆ ೩೮೦೦ರಷ್ಟು ಹೆಣ್ಣು ಹುಳಗಳು. ಒಂದು ಹೆಣ್ಣು ಹುಳವು ೫೦೦ರಿಂದ ೧೨೦೦ರವರಿಗೆ ಮೊಟ್ಟೆ ಇಡಬಹುದೆಂಬುದನ್ನು ಯೋಚಿಸಿದಲ್ಲಿ ಪೈರಿಗೆ ಲುಕ್ಸಾನು ಎಷ್ಟರಮಟ್ಟಿಗೆ ತಪ್ಪಿಸಲ್ಪಟ್ಟಿತೆಂಬುದನ್ನು ತಿಳಿಯಬಹುದು. ಹೀಗೆ ಮಾಡಿದ್ದರಿಂದ ಹುಳಗಳ ಬಾಧೆಯು ಬಹಳಮಟ್ಟಿಗೆ ಸುತ್ತಮುತ್ತಲೂ ಕಮ್ಮಿಯಾಯಿತು. ಸಾಧ್ಯವಾದಮಟ್ಟಿಗೆ ರೈತರು ಎಲ್ಲರೂ ಸೇರಿ ಈ ದೀಪಗಳನ್ನು ಇಡುವದರಿಂದ ಬಹಳ ಪ್ರಯೋಜನ. ಆದ್ದರಿಂದ ಏಕಕಾಲದಲ್ಲಿ ಈ ದೀಪಗಳನ್ನು ಪ್ರತಿಯೊಬ್ಬ ರೈತನೂ ತನ್ನತನ್ನ ಜಮೀನಿನಲ್ಲಿ ಇಟ್ಟಲ್ಲಿ ಒಂದು ದಫಾಕ್ಕೆ ೧೫ ದಿನಗಳಿಗಿಂತ ಹೆಚ್ಚಾಗಿ ಇಡಬೇಕಾದ್ದಿಲ್ಲ. ಅಂತು ಈ ವಿಚಾರದಲ್ಲಿ ಮುಖ್ಯವಾಗಿ ಗಮನಿಸತಕ್ಕ ಎರಡು ವಿಷಯಗಳು ಯಾವವಂದರೆ.—(೧) ಮಳೆಗಳು ಬಂದು ನಿಂತ ಕೂಡಲೆ ಈ ದೀಪಗಳನ್ನು ಇಡಬೇಕೇ ಹೊರ್ತು ಸಾವಕಾಶ ಮಾಡಕೂಡದು. (೨) ಚಿಟ್ಟೆಗಳು ಗರ್ಭ ಕಟ್ಟುವದಕ್ಕೆ ಮುಂಚೆಯೇ ಇಡತಕ್ಕದ್ದು. ಲಾಗವಡಿನ ವಿಚಾರ, ಲಾಂದ್ರ ಕ್ರಯ ಸುಮಾರು ೬ ಆಣೆ, ಟಿನ್ ತಟ್ಟೆ ಕ್ರಯ ಸುಮಾರು ೮ ಆಣೆ, ಇದನ್ನು ಜೋಡಿಸಿಂದ ನೇತುಹಾಕುವ ಪಕ್ಷ ಇದರ ಕ್ರಯ ೧ ಆಣೆ, ಎಣ್ಣೆ ಖರ್ಚು ೧೫ ದಿನಕ್ಕೆ ೮ ಆಣೆ. ಇಷ್ಟು ಅಲ್ಪ ವೆಚ್ಚವನ್ನು ಮಾಡಿ ದೀಪಗಳನ್ನು ಇಡುವದರಿಂದ ಹುಳಗಳ ಹಾವಳಿ ಕಮ್ಮಿ ಮಾಡಿ ಎಕರೆ ಒಂದಕ್ಕೆ ಸರಾಸರಿ ೩೦೪೦ ರೂಪಾಯಿನ ಲುಕ್ಸಾನು ತಪ್ಪಿಸಬಹುದು.

Cotton Seed *

ಹತ್ತೀ ಬೀಜ.

ಹತ್ತೀ ಬೀಜವು ದನಗಳಿಗೆ ಒಳ್ಳೇ ಮೇವೆಂಬ ಸಂಗತಿಯನ್ನು ತಿಳಿಯಪಡಿಸಿರುತ್ತೇವಷ್ಟೆ. ಈ ಬೀಜದ ಮೇಲಿನಹೊಟ್ಟನ್ನು ತೆಗದು ಒಳಪಪ್ಪನ್ನು ಬೀಸಿ ಅದರಿಂದ ಆಗುವ ಹಿಟ್ಟು ಮನುಷ್ಯರಿಗೂ ಕೂಡ ಉತ್ಕೃಷ್ಟವಾದ ಆಹಾರವಾಗಿರುತ್ತೆಂಬದಾಗಿ ಅಮೆರಿಕಾ ಖಂಡದ ಟೆಕ್ಸಾಸ್ ರಾಜ್ಯದ ರಸಾಯನ ಇಲಾಖೆ ಮುಖ್ತೆಸರರಾದ ಡಾಕ್ಟರ್ ಟಿ. ಯರ್ಕ್ ಪ್ರಾಕ್ಸ್ ಯೆಂಬುವರು ಅಭಿಪ್ರಾಯ ಪಟ್ಟಿರುತ್ತಾರೆ. ಮೇಲ್ಕಂಡಂತೆ ಹೊಟ್ಟು ತೆಗದು ತಯಾರು ಮಾಡಿದ ಹಿಟ್ಟು ಸೊಗಸಾದ ಹಳದಿ ವರ್ಣವಾಗಿಯೂ ಸುವಾಸನೆಯಾಗಿಯೂ ಮತ್ತು ಸವಿರುಚಿಯಾಗಿಯೂ ಇರುತ್ತೆ. ರಸಾಯನ ಶಾಸ್ತ್ರರೀತಿಯಿಂದ ಹಿಟ್ಟನ್ನು ಪರೀಕ್ಷಿಸಿದ್ದರಲ್ಲಿ ಅದರ ರಚನಾತಿಶಯವು (Chemical Composition) ಹೆಚ್ಚಾಗಿ ಮಾಂಸದಂತೆಯೇ ಇರುವದಲ್ಲದೆ ಇದರಲ್ಲಿರುವ ರಕ್ತಮಾಂಸ ಶಕ್ತಿವರ್ಧಕ ಪದಾರ್ಥಗಳು ಜಂತುಗಳ ಮಾಂಸದಲ್ಲಿರುವದಕ್ಕಿಂತ ಎರಡರಷ್ಟು ಹೆಚ್ಚಾಗಿಯೂ, ಮೊಟ್ಟೆಗಳಲ್ಲಿರುವದಕ್ಕಿಂತ ನಾಲ್ಕರಷ್ಟು ಹೆಚ್ಚಾಗಿಯೂ (ಕೊಬ್ಬು ಹೀಗೆ ನಾಲ್ಕರಷ್ಟು) ಗೋಧಿ ಹಿಟ್ಟಿನಲ್ಲಿರುವದಕ್ಕಿಂತ ನಾಲ್ಕರಷ್ಟು ಹೆಚ್ಚಾಗಿಯೂ ಇರುವದಾಗಿನಿಷ್ಕರಿಸಲ್ಪಟ್ಟಿರುತ್ತೆ.

ಗೋಧಿಯು ದಿನದಿನಕ್ಕೆ ಬಹಳ ಪ್ರಿಯವಾಗುತ್ತಾ ಬರುತ್ತಿರುವದರಿಂದ ಹತ್ತಿ ಬೀಜವನ್ನು ಆಹಾರವಾಗಿ ಉಪಯೋಗಿಸುವದು ಸುಲಭೋಪಾಯವಾಗಿರುತ್ತದೆ. ಅಲ್ಲದೆ ಹತ್ತಿ ಬೀಜದ ಹಿಟ್ಟಿನಲ್ಲಿ ಮಂಡ ಪದಾರ್ಥವು (Starch) ಇಲ್ಲವೇನೇ ಇರುವದ್ದರಿಂದ ಮಂಡಯುಕ್ತ ಆಹಾರಗಳು ಸರಿಬೀಳದ ಕೆಲವು ರೋಗಿಷ್ಠರಿಗೆ ಈ ಹಿಟ್ಟನ್ನು ಆಹಾರವಾಗಿ ಕೊಡಬಹುದು. ಮಾಂಸದಲ್ಲಿರುವದಕ್ಕಿಂತಲೂ ಹೆಚ್ಚಾಗಿ ಈ ಹಿಟ್ಟಿನಲ್ಲಿ ಸಾರವಿರುವದ್ದರಿಂದ ಮಾಂಸವನ್ನು ತಿನ್ನುವದಕ್ಕೆ ಅಸಹ್ಯಪಡುವವರೂ ಕೂಡ ಇದನ್ನು ಆಹಾರವಾಗಿ ಉಪಯೋಗಿಸಬಹುದು. ಆದರೆ ಈ ಹಿಟ್ಟನ್ನು ಯಾವ ದಾವಸ್ತಾ ಇತರ ಪದಾರ್ಥಗಳೊಡನೆ ಆಹಾರಪದಾರ್ಥವಾಗಿ ಉಪ

* ಮದರಾಸ್ ಮೆಯಿಲ್, ೬ನೇ ಜುಲೈ ೧೯೧೦.

ಯೋಗಿಸಬಹುದೆಂದು ಕೇಳಿದರೆ.—ಅನುಭವ ಪರೀಕ್ಷೆಗಳಿಂದಲೇ ಈ ಅಂಶವನ್ನು ತಿಳಿದುಕೊಳ್ಳುವದಾಗಿರುತ್ತೆ. ಈ ಹಿಟ್ಟು ವಿಶೇಷ ಸಾರವುಳ್ಳದ್ದಾಗಿರುವದರಿಂದ ಯದ್ವಾತದ್ವಾ ಉಪಯೋಗಿಸಿದಲ್ಲಿ ಅಜೀರ್ಣವಾಗಬಹುದಾದ್ದರಿಂದ ಸಾಧಾರಣವಾಗಿ ಇದನ್ನು ಇತರ ಹಿಟ್ಟುಗಳೊಂದಿಗೆ ಸೇರಿಸಿಯೇ ಉಪಯೋಗಿಸಿಕೊಳ್ಳಬೇಕು. ಸುಮಾರು ನಾಲ್ಕರಷ್ಟು ಇತರಜಾತಿ ಹಿಟ್ಟುಗಳೊಂದಿಗೆ ಒಂದರಷ್ಟು ಈ ಹಿಟ್ಟನ್ನು ಬೆರಿಸಿಕೊಂಡು ರೊಟ್ಟಿ ದೋಸೆ ಬಿಸ್ಕತ್ತುಗಳನ್ನು ಮಾಡಿಕೊಳ್ಳುವದು ಉತ್ತಮವಾಗಿ ಕಾಣುತ್ತಂಬದಾಗಿ ಮೇಲೆ ಹೇಳಿದ ಡಾಕ್ಟರ್ ಪಾಪ್ಸ್‌ರವರು ಅಭಿಪ್ರಾಯ ಪಟ್ಟಿರುತ್ತಾರೆ. ಸಾಧಾರಣವಾಗಿ ಸಾಲೀಯಾನ ೧೫ ಲಕ್ಷ ಟನ್ನುಗಳಷ್ಟು ಹತ್ತಿ ಬೀಜ ನಮ್ಮ ಇಂಡಿಯಾ ದೇಶದಲ್ಲಿ ಉತ್ಪತ್ತಿಯಾಗುತ್ತಾ ೩-೪ ಲಕ್ಷ ಟನ್ನುಗಳವರಿಗೆ ಪರದೇಶಗಳಿಗೆ ರಫ್ತು ಮಾಡುತ್ತಾ ಇರುವದರಿಂದ ಈ ವಿಷಯದಲ್ಲಿ ನಮ್ಮ ದೇಶೀಯರು ತುಂಬಾ ನಿಗಾ ಕೊಡುವುದು ಒಳ್ಳೇದು.

Agricultural Calendar.

ವ್ಯವಸಾಯ ಪಂಚಾಂಗ.

ರಿಟೈರ್ಡ್ ಅಸಿಸ್ಟೆಂಟ್ ಕಮಿಷನರ್ ಮೆ|| ಬಾದಾಮಿ ಕೃಷ್ಣರಾಯರು ನಮ್ಮ ಸಂಸ್ಥಾನದ ರೈತಾಬಿ ಕಸಬುದಾರರೆಲ್ಲರಿಗೂ ವಿಶೇಷ ಉಪಯೋಗವಾಗಿರುವಂತೆ ಚಾಲ್ತಿ ೧೯೧೦-೧೧ನೆ ಸಾಧಾರಣನಾಮ ಸಂವತ್ಸರದ ವ್ಯವಸಾಯ ಪಂಚಾಂಗವನ್ನು ತಯಾರುಮಾಡಿ ಮುದ್ರಿಸಿ ಪ್ರಚಾರಪಡಿಸಿರುತ್ತಾರೆ. ಈಗ ಇವರು ಮೈಸೂರು ರಾಜಧಾನಿಯಲ್ಲಿ ಏರ್ಪಡಿಸಲ್ಪಟ್ಟಿರುವ ಶ್ರೀ ಕೃಷ್ಣರಾಜ ಕೃಷಿ ಮತ್ತು ಶಿಲ್ಪಾಭಿವರ್ಧಕ ಸಭೆಗೆ ಸೆಕ್ರೆಟರಿಗಳಾಗಿರುತ್ತಾರೆ. ಸದರಿ ಪಂಚಾಂಗದಲ್ಲಿ ಬಾಕಿ ಪಂಚಾಂಗಗಳಂತೆ ಸಾಧಾರಣ ಸಂವತ್ಸರದ ತಿಥಿ, ವಾರ, ನಕ್ಷತ್ರ ಮೊದಲಾದವುಗಳನ್ನು ಸೂಚಿಸುವ ತಖ್ತೆಗಳಿರುವದಲ್ಲದೆ, ಮೈಸೂರು ಸರಕಾರದ ಅಧಿಕಾರಕ್ಕೆ ಸಂಬಂಧಪಟ್ಟ ದಿವಾನ್ ಸಾಹೇಬರೇ ಮೊದಲಾದ ಅಧಿಕಾರಿಗಳ ಹೆಸರು, ಮೈಸೂರು ದೇಶದ ರೆವಿನ್ಯೂ ಇಲಾಖಾ ಏರ್ಪಾಡು, ರೈತರಿಗೆ ತಿಳಿಯಬೇಕಾದ ಮುಖ್ಯ ರೆವಿನ್ಯೂ ವಿಷಯಗಳೂ, ವ್ಯವಸಾಯಾಭಿವೃದ್ಧಿ ಕೆಲಸಗಳಿಗಾ

ಗಿ ಶ್ರೀಮನ್ಮಹಾರಾಜರವರ ಸರಕಾರದಿಂದ ರೈತರ ಪರವರಬಿಗಾಗಿ ಸುಲಭ ಬಡ್ಡಿಯಿಂದಲೂ ದೀರ್ಘಕಾಲ ವಾಯಿದೆಯಿಂದಲೂ ವಾಪಸು ಕೊಡುವಂತೆ ಮಾಡಿರತಕ್ಕ ರೂಲ್ಸುಗಳ ವಿಷಯಗಳೂ, ಗ್ರಾಮದ ಪಾಕೀಜಿನ ವಿಷಯದಲ್ಲಿ ರೈತರಿಗೆ ತಿಳಿಯಬೇಕಾದ ಸಂಗತಿಗಳೂ, ಕಾಲರಾ (ವಾಂತಿ ಭೇದಿ ಉಪದ್ರ) ಬಂದಾಗ ಅವಶ್ಯಕವಾಗಿ ಮಾಡಬೇಕಾದ ಕೆಲಸಗಳೂ, ಡಿಸ್ಟ್ರಿಕ್ಟು ಜಾಗಲುಗಳಲ್ಲಿ ರೈತನಿಗೆ ಇರತಕ್ಕ ಹಕ್ಕುಗಳ ವಿಷಯಗಳೂ, ರೈತರ ಹಿಡುವಳೀ ಜಮೀನುಗಳಲ್ಲಿ ಬೆಳೆದಿರುವ ಮತ್ತು ಇನ್ನುಮೇಲೆ ಬೆಳೆಯಬಹುದಾದ ಗಂಧದ ಮರಗಳನ್ನು ಶ್ರದ್ಧೆಯಿಂದ ಉಸ್ತುವಾರಿ ತೆಗೆದುಕೊಂಡು ಬೆಳೆದಲ್ಲಿ ರೈತನ ಲಾಭಕ್ಕಾಗಿ ಶ್ರೀಮನ್ಮಹಾರಾಜರವರ ಗೌರ್ನಮೆಂಟಿನವರು ಮಾಡಿರುವ ಏರ್ಪಾಡು, ಧರ್ಮ ಕೆಲಸಗಳನ್ನು ಪ್ರೋತ್ಸಾಹಪಡಿಸುವದಕ್ಕೂ ರೈತನ ಪ್ರೋತ್ಸಾಹಕ್ಕೂ ಶ್ರೀಮನ್ಮಹಾರಾಜರವರಿಂದ ಮಾಡಲ್ಪಟ್ಟಿರುವ ರಿಯಾಯಿತಿಗಳೂ, ಋತುಗಳೂ ಮತ್ತು ಋತುಧರ್ಮಗಳೂ, ಮಳೆಗಳ ಹೆಸರೂ ಅವುಗಳ ಅವಧಿ ಮತ್ತು ಅವುಗಳಲ್ಲಿ ಬಿತ್ತಬಹುದಾದ ಧಾನ್ಯಗಳಹೆಸರು, ಮಣ್ಣುಗಳ ಸ್ವಭಾವ ಮತ್ತು ಅವುಗಳಲ್ಲಿ ಬೆಳೆಯಬಹುದಾದ ಪೈರುಗಳು, ಗೊಬ್ಬರಗಳ ತರಹೆ ಮತ್ತು ಅವುಗಳ ಗುಣಗಳ ವಿಷಯ, ರೈತನಿಗೆ ಸಾಧಾರಣವಾಗಿ ತಿಳಿಯಬೇಕಾದ ಇತರ ಸಂಗತಿಗಳು, ದನಗಳ ಅಭಿವೃದ್ಧಿಯ ವಿಷಯ ಅವುಗಳಿಗೆ ಬರುವ ಹೊಟ್ಟೆ ಉಬ್ಬರ, ದನಗಳಿಗೆ ಹಾವು ಕಚ್ಚಿದರೆ ಚಿಕಿತ್ಸೆ, ಕೆಲೆರೋಗ ಚಿಕಿತ್ಸೆ, ನರಡಿ ಚಿಕಿತ್ಸೆ, ದೊಡ್ಡರೋಗದ ಚಿಕಿತ್ಸೆ, ಜಂತುಗಳ ಚಿಕಿತ್ಸೆ, ಚಟ್ಟೇ ಜಾಡ್ಯದ ಚಿಕಿತ್ಸೆ, ಗಾಯಗಳ ಚಿಕಿತ್ಸೆ, ಜ್ವರ, ಕಾಲುಜ್ವರ ಬಾಯಿ ಜ್ವರ ಇವುಗಳ ಚಿಕಿತ್ಸೆ, ಭೇದಿ ಕೆಮ್ಮುಗಳ ಚಿಕಿತ್ಸೆ, ಕರೆಯುವ ದನಗಳಿಗೆ ಕೊಡಬೇಕಾದ ಆಹಾರ, ದನಗಳ ವಯಸ್ಸು ತಿಳಿದುಕೊಳ್ಳುವ ವಿಧಾನ, ಕಾಲುನಡೆಗಳ ರೋಗದವಿಷಯದಲ್ಲಿ ತಿಳಿಯಬೇಕಾದ ಸಂಗತಿಗಳೂ, ಕಾಲ್ನಡೆಗಳ ಬೆಳವಳಿಕೆ ವಯಸ್ಸು ಮತ್ತು ಆಯುಸ್ಸು, ಪಳಗಿದ ಕಾಲ್ನಡೆಗಳು ಮುಂತಾದವುಗಳು ಯವ್ವನಕ್ಕೆ ಬರುವ ವಯಸ್ಸು ಗರ್ಭಧಾರಣೆಕಾಲ ಗರ್ಭವಾಗಬಹುದಾದ ವಯಸ್ಸು, ಜಾನುವಾರುಗಳಿಗೆ ಅಂಟುರೋಗಗಳು ಬರದಂತೆ ಮಾಡಬೇಕಾದ ಏರ್ಪಾಟುಗ

ಳು, ಧಾನ್ಯಗಳ ಪೇರಾವ ಮತ್ತು ಉತ್ಪತ್ತಿ ವಗೈರೆಗಳನ್ನು ಸಂಕ್ಷೇಪವಾಗಿ ತಿಳಿಸುವ ತಖ್ತೆ, ಇವೇ ಮೊದಲಾದ ಉಪಯುಕ್ತ ವಿಷಯಗಳು ನಮೂದಿಸಲ್ಪಟ್ಟಿರುವವು. ಪ್ರತಿಯೊಬ್ಬ ರೈತನೂ ಈ ಪಂಚಾಂಗವನ್ನು ತರಿಸಿಕೊಂಡು ಓದುತ್ತಾ ಬಂದಲ್ಲಿ ತನ್ನ ಕಸಬಿಗೆ ಸಂಬಂಧಪಟ್ಟ ಅನೇಕ ವಿಷಯಗಳನ್ನು ಸುಲಭವಾಗಿ ಅರಿತುಕೊಳ್ಳಬಹುದಾಗಿದೆ. ಇಷ್ಟು ಉಪಯೋಗವುಳ್ಳ ಪುಸ್ತಕಕ್ಕೆ ೭ ಆಣೆ ಕ್ರಯವನ್ನು ಇಟ್ಟಿರುತ್ತಾರೆ. ಇದನ್ನು ಮೈಸೂರು ಲಕ್ಷ್ಮೀವಿಲಾಸದ ರೋಡಿನಲ್ಲಿರುವ ಜನರಲ್ ಏಜೆನ್ಸಿ ಎಂಬ ಷಾಪಿನಲ್ಲಿ ಬಿಕರಿಮಾಡುತ್ತಾರೆ.

Government Orders.

ಸರ್ಕಾರಿ ಹುಕುಂಗಳು.

ಸನ್ ೧೯೧೦ನೆ ಇಸವಿ ಏಪ್ರೆಲ್ ಮಾಹೆ ತಾ|| ೧೬ ನಂ. ೯೨೯೪—ಮೆಡಿಕಲ್ ೧೨೨—೦೯—೧ನೆ ಹುಕುಂನಲ್ಲಿ ಶ್ರೀಮನ್ಮಹಾರಾಜರವರ ಗೌರ್ನಮೆಂಟಿನವರು, ಸಂಸ್ಥಾನದ ಸರ್ಕಾರ ನೌಕರರು ವಗೈರೇರುಗಳ ಮನೆಗಳಿಗೆ ರೋಗ ಚಿಕಿತ್ಸೆಗಾಗಿ ಇಲಾಖಾ ವೈದ್ಯರುಗಳು ಬರತಕ್ಕ ವಿಷಯದಲ್ಲಿಯೂ ಮತ್ತು ಅದಕ್ಕಾಗಿ ಅವರುಗಳಿಗೆ ಕೊಡಬೇಕಾದ ಫೀಜುಗಳ ವಿಷಯದಲ್ಲಿಯೂ ಮೊಕರರೂರು ಮಾಡಿರುವ ಕಟ್ಟುಪಾಟುಗಳಲ್ಲಿ ಕೆಲವನ್ನು ಖಾಸಗಿ ಜನಸಮುದಾಯಕ್ಕೆ ತಿಳಿಯಪಡಿಸಲೋಸುಗ ಉದಹರಿಸುತ್ತೆ; ಅವು ಯಾವವಂದರೆ.—

ಒಬ್ಬನೇ ಒಬ್ಬ ವೈದ್ಯ ಆಫೀಸರು ಇರುವ ಸ್ಥಳದಲ್ಲಿ ಕೇವಲ ಬಡಜನರು ಆಸ್ಪತ್ರೆಗೆ ಬಂದು ಚಿಕಿತ್ಸೆ ಮಾಡಿಕೊಂಡು ಹೋಗಲಾರದಷ್ಟು ಕಾಯಿಲೆಯಾಗಿದ್ದರೆ, ಸಾಮಾನ್ಯವಾಗಿ, ಅಂಥವರ ಮನೆಗೆ ಹೋಗಿ ಸದರಿ ವೈದ್ಯ ಆಫೀಸರು ಮುಫತ್ತಾಗಿ ಚಿಕಿತ್ಸೆ ಮಾಡಬೇಕು. ಡಿಸ್ಟ್ರಿಕ್ಟ್ ಕಸಬಾ ಸ್ಥಳಗಳಲ್ಲಿ ಈ ನಿಬಂಧನೆಯ ಉದ್ದೇಶವನ್ನು ನೆರವೇರಿಸುವದಕ್ಕಾಗಿ ಡಿಸ್ಟ್ರಿಕ್ಟ್ ಮೆಡಿಕಲ್ ಮತ್ತು ಶ್ಯಾನಿಟರಿ ಆಫೀಸರರು ತಕ್ಕ ಏರ್ಪಾಟು ಮಾಡಬೇಕು.

ಸಿವಿಲ್ ಇಲಾಖಾ ಸರ್ಕಾರ್ ನೌಕರರ ಸಂಸಾರದವರಿಗೆ ರೋಗ ಚಿಕಿತ್ಸೆ ಮಾಡುವ ವಿಚಾರದಲ್ಲಿ ವಿಧಿಸಲ್ಪಟ್ಟ ಫೀಜಿನ ದರವನ್ನೇ ಖಾಸಗಿ ಜನಗಳೂ ಅನುಸರಿಸತಕ್ಕದ್ದು.

ವೈದ್ಯ ಆಫೀಸರುಗಳೂ ರೋಗಿಗಳೂ ತಮ್ಮೊಳಗೆ ತಾವೇ ಮಾಡಿಕೊಂಡಿರುವ ಖಾಸಗಿ ಏರ್ಪಾಟುಗಳಿಗೆ ಮೇಲ್ಕಂಡ ನಿಬಂಧನೆಗಳಿಂದ ಬಾಧಕ ಉಂಟಾಗಬೇಕೆಂಬುವನು ಇದರ ಉದ್ದೇಶವಲ್ಲ.

ವೈದ್ಯ ಆಫೀಸರುಗಳು ಖಾಸಗಿ ಔಷಧಶಾಲೆಗಳಿಂದ ತಮ್ಮ ವೈದ್ಯ ಚೀಟಿಗಳ ಮೇಲೆ ದಳ್ಳಾಳಿ ರುಸುಂಗಳನ್ನು ಖಂಡಿತವಾಗಿ ತೆಗದುಕೊಳ್ಳಕೂಡದು.

ಸಿವಿಲ್ ಸರ್ಜನ್ ದರ್ಜೆಗೆ ಕೀಳ್ಪಟ್ಟ ವೈದ್ಯ ಆಫೀಸರುಗಳು ಸೀನಿಯರ್ ಸರ್ಜನ್‌ರವರ ಹುಕ್ಕುಂ ಇಲ್ಲದೇಲೂ, ಅವರಿಗೆ ಮೇಲ್ಪಟ್ಟ ಆಫೀಸರುಗಳು ಸರ್ಕಾರದವರ ಹುಕ್ಕುಂ ಇಲ್ಲದೇಲೂ, ಫೀಜು ವಸೂಲುಮಾಡುವ ಬಗ್ಗೆ ಕೋರ್ಟುಗಳಿಗೆ ಹೋಗಕೂಡದು.

ಯಾವುದಾದರೂ ಸಮಾಜ ಅಥವ ಸಂಘದವರು ವೈದ್ಯ ಆಫೀಸರರ ಉಪಕಾರಕ್ಕೆ ದ್ರವ್ಯರೂಪವಾಗಿ ಪ್ರತಿಫಲ ಕೊಡಲು ಇಷ್ಟಪಟ್ಟರೆ ವೈದ್ಯ ಆಫೀಸರುಗಳು ಅಂಥಾ ಪ್ರತ್ಯುಪಕಾರವನ್ನು ಹೊಂದಕೂಡದೆಂದು ನಿಷೇಧಿಸಿಲ್ಲ. ಪರಂತು, ಅಂಥಾ ಸಂದರ್ಭಗಳಲ್ಲೆಲ್ಲಾ ವೈದ್ಯ ಆಫೀಸರು ಸರ್ಕಾರದವರಿಂದ ಪೂರ್ವಭಾವಿಯಾಗಿ ಹುಕ್ಕುಂ ಹೊಂದಬೇಕು.

Notifications.

ಇಸ್ತಿಹಾರ್‌ನಾಮೆಗಳು.

ತಾ|| ೫ನೇ ಆಗಸ್ಟ್ ೧೯೧೦.

ನಂ. ರೆ. ೬೩೬—ಮ್ಯಾ. ರೆ. ೨೩—೧೦—೩, ಇದರಡಿ ಕಂಡ ವರ್ಗಾವರ್ಗಿಯನ್ನೂ ಸ್ಥಳ ನೌಕರರಾತಿಯನ್ನೂ ಮಂಜೂರ್ಮಾಡಿರುತ್ತೆ.

೧. ಶಿವಮೊಗ್ಗಾ ತಾಲ್ಲೂಕ್ ಆಕ್ಟಿಂಗ್ ಅಮಲ್ದಾರ್ ಮೆ|| ಎ. ರ
ಜಾರಾಮರಾವ್‌ಯವರನ್ನು ಕಡೂರು ತಾಲ್ಲೂಕಿಗೆ ವರ್ಗಾಯಿಸಿರುತ್ತೆ.

೨. ಶಿವಮೊಗ್ಗಾ ಡಿಸ್ಟ್ರಿಕ್ಟ್‌ಕೋರ್ಟು ಶಿರಸ್ತೇದಾರ್ ಮೆ|| ಇ
ಎಚ್. ತಾಂರ್ಕರವರನ್ನು ಶಿವಮೊಗ್ಗಾ ತಾಲ್ಲೂಕು ಅಮಲ್ದಾರ್ ಮತ್ತು
೩ನೆ ಕ್ಲಾಸ್ ಮ್ಯಾಜಿಸ್ಟ್ರೇಟರನ್ನಾಗಿ ಬದಲಿ ತರೀಕು ಮೊಕರರ್‌ಮಾಡಿರುತ್ತೆ

Occasional Notes.

ವಿವಿಧ ವೃತ್ತಾಂತಗಳು.

ಅಲಹಾಬಾದಿನ ಪ್ರದರ್ಶನ.—ವಾಯುವ್ಯ ಪ್ರಾಂತ್ಯಗಳಲ್ಲಿನ ಅಲ
ಹಾಬಾದಿನಲ್ಲಿ ಇದೆ ಇಸವಿ ಡಿಸೆಂಬರು ಮಾಹೆ ಗುರ್ರ ತಾರೀಖು ಲಾಗಾಯಿ
ತು ಸುಮಾರು ಮೂರು ತಿಂಗಳುಗಳವರಿಗೂ ಒಂದು ಭಾರಿ ವ್ಯವಸಾಯ
ಮತ್ತು ಕೈಗಾರಿಕೆ ಸಂಮಂಧವಾದ ಪ್ರದರ್ಶನವು ಜರಗಿಸುವ ಏರ್ಪಾಟಾಗಿ
ರುತ್ತೆ. ಇಂಡಿಯಾ ದೇಶದ ವ್ಯವಸಾಯ ಕೈಗಾರಿಕೆ ಮತ್ತು ಇತರ ಕಸ
ಬುದಾರಿ ವೃತ್ತಿಗಳನ್ನು ವೃದ್ಧಿಗೊಳಿಸುವ ಎಲ್ಲಾ ಪದಾರ್ಥಗಳನ್ನೂ ಯಂ
ತ್ರೋಪಕರಣಗಳನ್ನೂ ಪ್ರದರ್ಶನಕ್ಕಾಗಿ ಕಳುಹಿಸಬಹುದು. ಪ್ರದರ್ಶ
ನಕ್ಕೆ ಸಂಬಂಧಪಟ್ಟ ಯಾವತ್ತು ಸಂಗತಿಗಳೆಲ್ಲಾ ಚಾಲ್ತಿ ಸಾಲ್ ಜೂ
೩ನೆ ತಾರೀಖಿನ ಮೈಸೂರು ಸರ್ಕಾರಿ ಇಂಗ್ಲಿಷ್ ಗೆಜೆಟ್ಟನ್ನು ನೋಡಿದರೆ
ಗೊತ್ತಾಗುತ್ತೆ.

V. B. S. & SONS, BANGALORE.—1910.

THE MYSORE

REVENUE & AGRICULTURAL GAZETTE.

ವಾಲ್ಯುಂ ೪.] ಗುರುವಾರ, ೧ನೆ ಸೆಪ್ಟಂಬರ್ ೧೯೧೦. [ನಂ. ೨೧.

Contents.

1. Sun Hemp Cultivation.
2. Rice Factory at Yedatore.
3. Hand Cotton Gins.
4. Insecticide for Crops.
5. Government Orders.
6. Notifications.
7. Occasional Notes.
(i) Egyption Cotton. (2) Harihar Cattle Show. (3) Dry cultivation. (4) Agricultural Statistics of the Mysore State for 1908-09.

ಅನುಕ್ರಮಣಿಕೆ.

೧. ಸಣಬಿನ ಗಿಡದ ವ್ಯವಸಾಯ.
೨. ಎಡತೊರೆಯ ಅಕ್ಕಿ ಮಾಡುವ ಕಾರಖಾನೆ.
೩. ಹತ್ತಿ ಬಿಡಿಸುವ ಕೈ ಯಂತ್ರಗಳು.
೪. ಪೈರುಪಚ್ಚೆಗಳಿಗೆ ಬೀಳುವ ಹುಳುಗಳನ್ನು ಪರಿಹಾರ ಮಾಡುವ ಔಷಧ.
೫. ಸರ್ಕಾರಿ ಹುಕ್ಕುಂಗಳು.
೬. ಇಸ್ತಿಹಾರುನಾಮೆಗಳು.
೭. ವಿವಿಧ ವೃತ್ತಾಂತಗಳು.
(i) ಈಜಿಪ್ಟು ದೇಶದ ಹತ್ತಿಬೀಜ. (ii) ಹರಿಹರದಲ್ಲಿ ನಡೆದ ವ್ಯವಸಾಯ, ಕೈಗಾರಿಕೆ ಮತ್ತು ದನಗಳ ಪ್ರದರ್ಶನ. (iii) ಕಾಡಾರಂಬ. (iv) ೧೯೦೮-೦೯ನೆ ಸಾಲಿನ ವ್ಯವಸಾಯಕ ಲೆಖ್ಖಗಳು.

Sun Hemp.*
ಸಣಬು ಗಿಡ.

ಬಂಗಾಳಾ ಆಧಿಪತ್ಯದ ಪಾಬ್ನಾ ಡಿಸ್ಟ್ರಿಕ್ಟಿನಲ್ಲಿ ಸಣಬಿನ ಸಾಗುವ ಳಿ ಮತ್ತು ಅದರಿಂದ ನಾರು ತಯಾರ್ಮಾಡಿ ಮಾರುವ ಕಸಬು ವಿಶೇಷವಾಗಿ

*ಅಗ್ರಿಕಲ್ಚರಲ್ ಲೆಡ್ಜರ್ ೧೯೦೮—೦೯, ನಂ. ೨.

ರುವುದು. ಈ ಕಸಬಿನ ವಿಷಯವಾಗಿ ಇಂಡಿಯಾ ಸರ್ಕಾರದವರು ಪ್ರ
ಯಿಷ್ ಮಾಡಿರುವ ಲೇಖನದಲ್ಲಿನ (Agricultural Ledger 1908–9,
No. 7) ಕೆಲವು ಸಾರಾಂಶಗಳನ್ನು ವಾಚಕರಿಗೋಸ್ಕರ ಇಲ್ಲಿ ಉದಹರಿಸಿ
ರುತ್ತೆ.

(೧) ಎಲ್ಲೆಲ್ಲಿ ಗೋಣಿನಾರು (ಚಾಂಬಲುಗಿಡ) ಅಥವಾ ಬತ್ತ
ನ್ನು ಬೆಳೆಯಬಹುದೋ ಅಲ್ಲೆಲ್ಲಾ ಸಣಬಿನ ಗಿಡವನ್ನು ಬೆಳೆಯಬಹುದು.
ಆವರೆ ಗಿಡವು ಬೆಳೆದ ಮೇಲೆ ಅದನ್ನು ನೀರಿನಲ್ಲಿ ಕೊಳೆಸಬೇಕಾಗುವುದ
ರಿಂದ ಮುಖ್ಯವಾಗಿ ನದಿಗಳ ಮತ್ತು ಜೌಗಾಗಿ ಯಾವಾಗಲೂ ನೀರು
ನಿಂತೇ ಇರುವಂಥಾ ಪ್ರದೇಶಗಳ ಸಮೀಪದಲ್ಲಿ ಸಾಧಾರಣವಾಗಿ ಸಾಗುವಳಿ
ಮಾಡುವರು.

(೨) ಪಾಟ್ನಾ ಡಿಸ್ಟ್ರಿಕ್ಟಿನಲ್ಲಿ ಬೋರ್ಗ ಮತ್ತು ಛೋಟ್ಕಾ ಎಂಬ
ದಾಗಿ ಎರಡು ತರಹೆ ಸಣಬನ್ನು ಬೆಳೆಯುತ್ತಾರೆ. ಬೋರ್ಗ ಜಾತಿಯ
ನ್ನು ನಾರಿಗೋಸ್ಕರ ಬಿತ್ತುವರು. ಛೋಟ್ಕಾ ಜಾತಿಯನ್ನು ನಾರಿಗೋ
ಸ್ಕರ ಬಿತ್ತುವದಿಲ್ಲ, ಆದರೆ ಈ ಜಾತಿ ಪೈರನ್ನು ಕತ್ತರಿಸಿ ಜಮೀನಿನ
ಮೇಲೆ ಬಿಟ್ಟುಬಿಟ್ಟರೂ ಸರಿಯೆ, ಅಥವಾ ಅದನ್ನು ಭೂಮಿಯೊಳಗೆ
ಚೆನ್ನಾಗಿ ಬೆರೆತು ಹೋಗುವಂತೆ ಉತ್ತುಬಿಟ್ಟರೂ ಸರಿಯೆ, ಜಮೀನಿನಲ್ಲಿ
ಮುಂದೆ ಇಡುವ ಗೋಣಿ ನಾರು ಅಥವ ಬತ್ತದ ಪೈರಿಗೆ ಗೊಬ್ಬರವಾ
ಗುತ್ತದೆ. ಅನೇಕವೇಳೆ ಪೈರನ್ನು ಮೇಯುವುದಕ್ಕೆ ದನಗಳನ್ನು ಜ
ಮೀನಿನಮೇಲೆ ಅಟ್ಟುವುದೂ ಉಂಟು.

(೩) ಜಮೀನನ್ನು ಹೆಚ್ಚು ಫಲವತ್ತಾಗಿ ಮಾಡುವುದಕ್ಕೆ ಸಣಬಿನ
ಎರಡು ಬಗೆಗಳಲ್ಲಿ ಯಾವುದಾದರೊಂದನ್ನು ಸಾಗುವಳಿ ಮಾಡುವುದು ಆವ
ಶ್ಯಕ. ಮುಂಚೆ ಸಣಬನ್ನು ಬೆಳೆದು ಆಮೇಲೆ ಅದೇ ಜಮೀನಿನಲ್ಲಿ ಗೋ
ಣಿ ಗಿಡಗಳನ್ನು ಬೆಳಸುವುದರಿಂದ ಒಂದು ಎಕರೆಗೆ ೨೧-೨೬ *ಮಣಗ
ಗೋಣಿ ನಾರು (ಮಣಕ್ಕೆ ೮೨ ಪೌಂಡು) ಉತ್ಪತ್ತಿಯಾಗುವಕಡೆ ಸಾಗು
ವಾಡದೇನೇ ಗೋಣಿ ಫಸಲನ್ನು ಇಟ್ಟರೆ ೯-೧೪ *ಮಣಗಳ ನಾರು
ಮಾತ್ರ ಉತ್ಪತ್ತಿಯಾಗುತ್ತದೆ. ಆದರೆ ಸಣಬನ್ನು ಒಂದು ಜಮೀನಿನಲ್ಲಿ

*ಮಣ = ಬಂಗಾಳದ ಮಣ, ೮೨ ಪೌಂಡು.

ವರುಷ ವರುಷವೂ ಬೆಳೆಯುತ್ತಿರುವುದರಿಂದ ಭೂಮಿಯ ಸಾರವು ಇಳಿದುಹೋಗಿ ಅದರ ಫಸಲು ಕಮ್ಮಿ ಬೀಳುವುದರಿಂದ ಸಾಧಾರಣವಾಗಿ ೨-೩ ವರುಷಗಳು ಸೆಣಬನ್ನು ಬೆಳೆದ ಮೇಲೆ ಜಮೀನಿನಲ್ಲಿ ಒಂದು ವರುಷ ಹುರುಳಿಯನ್ನು ಚೆಲ್ಲಿ ಫಸಲು ಮಾಡಿಕೊಂಡು ತರುವಾಯ ಗೋಣಿ ಅಥವಾ ಬತ್ತದ ಬೆಳೆಯನ್ನು ಇಡುವ ವಾಡಿಕೆಯುಂಟು.

(೪) ಸೆಣಬಿನ ಬೀಜವನ್ನು ಕಾರ್ತೀಕ ಮಾಸದಲ್ಲಿ ಜಮೀನಿನಲ್ಲಿ ಇನ್ನೂ ತೇವವಿರುವಾಗಲೇ ಬಿತ್ತುವರು. ಬೀಜವನ್ನು ಬಿತ್ತುವುದಕ್ಕೆ ಮೊದಲು ಎರಡುಸಾರಿ ನೇಗಲಿನಿಂದ ಜಮೀನು ಉತ್ತಲ್ಪಟ್ಟಿರುತ್ತೆ. ಬಿತ್ತಿದ್ದಾದಮೇಲೆಯೂ ಕೂಡ ಮತ್ತೊಂದುಸಾರಿ ಉತ್ತು ನಂತರ ಹಲುಬೆಯನ್ನು ಹೊಡೆದರೆ ಮತ್ತೇನೂ ಮಾಡಬೇಕಾಗಿರುವುದಿಲ್ಲ. ಒಂದು ಎಕರೆಗೆ ಸಾಧಾರಣವಾಗಿ ನಮ್ಮ ದೇಶದ ಒಂದು ಮಣ ಬೀಜ ಬೇಕಾಗುತ್ತೆ. ಬೀಜವನ್ನು ಮಣ* ೧ಕ್ಕೆ ೬-೮ ರೂಪಾಯಿನಂತೆ ಮಾರುತ್ತಾರೆ. ಫಸಲು ಮಾಘ ಫಾಲ್ಗುಣ ಮಾಸಗಳಲ್ಲಿ ಕಟಾವಿಗೆ ಸಿದ್ಧವಾಗುತ್ತೆ. ಗಿಡಗಳಲ್ಲಿ ಯಾವಾಗ ಹುವ್ವು ಮತ್ತು ಬೀಜಗಳು ಕಾಣಿಸಿಕೊಳ್ಳುತ್ತವೆಯೋ ಆಗ ಫಸಲು ಕಟಾವಾಗುವುದಕ್ಕೆ ಸಿದ್ಧವಾಗಿದೆಯೆಂದು ಗೊತ್ತುಮಾಡಿಕೊಳ್ಳಬಹುದು. ಫಸಲು ಕಟಾವಿಗೆ ಸಿದ್ಧವಾಗುತ್ತಲೇ ಪ್ರತಿ ಗಿಡವನ್ನೂ ಬೇರು ಸಹಿತ ಕಿತ್ತು ಇತರ ಗಿಡಗಳೊಂದಿಗೆ ಸಣ್ಣ ಸಣ್ಣ ಕಂತೆಗಳನ್ನು ಕಟ್ಟಿ ಒಂದು ವಾರದ ವರಿಗೆ ನೀರಿನಲ್ಲಿ ಕೊಳೆ ಹಾಕುತ್ತಾರೆ. ಹೀಗೆ ಕೊಳೆಯಿಸಿದ್ದಾದಮೇಲೆ ಕಂತೆಗಳನ್ನು ಒಂದೊಂದಾಗಿ ಎಡಕೈಯಿಂದ ಹಿಡಿದುಕೊಂಡು ಬಲಗೈಯಲ್ಲಿನ ದೊಣ್ಣೆಯಿಂದ ಬುಡಗಳ ಕಡೆ ಜಜ್ಜುಗುಟ್ಟುತ್ತಾರೆ. ಹೀಗೆ ಮಾಡಿದಲ್ಲಿ ನಾರು ಮಿಂಗಡ ಬಿಳುತ್ತೆ. ಆಮೇಲೆ ಬುಡದಿಂದ ಒಂದಡಿ ಬಿಟ್ಟು ಕತ್ತರಿಸಿ ಕಡ್ಡಿಗಳನ್ನು ನಾರನ್ನು ಬೇರೆ ಬೇರೆ ಮಾಡಿ ನಾರಿನಲ್ಲಿನ ನೀರನ್ನೆಲ್ಲಾ ಹಿಂಡಿಬಿಟ್ಟು ಬಿಸಿಲಲ್ಲಿ ಆರಹಾಕಿ ಚೆನ್ನಾಗಿ ಒಣಗಿಸುತ್ತಾರೆ. ಒಂದು ಮಣ* ನಾರಿಗೆ ಸಾಧಾರಣವಾಗಿ ೬ ರೂಪಾಯಿ ಖರೀದಿ ದೊರೆಯುತ್ತಾದ್ದರಿಂದ ಒಂದೆಕರೆಯಲ್ಲಿ ಆಗುವ ಸುಮಾರು ೧೦ ಮಣ* ನಾರಿಗೆ ೭೦ ರೂಪಾಯಿವರಿಗೆ ಸಂಪಾದಿಸಿ ಖರ್ಚು

---

*ಮಣ = ಬಂಗಾಳದ ಮಣ, ೮೦ ಪೌಂಡು.

ಕಳೆಸು ಸುಮಾರು ೩೪ ರೂಪಾಯಿ ನಿವ್ವಳ ಆದಾಯವನ್ನು ಹೊಂದಬಹುದು.

Rice Factory at Yedatore.

ಯಡತೊರೆಯ ಅಕ್ಕಿ ಮಾಡುವ ಕಾರ್ಖಾನೆ.

ಮೈಸೂರು ಇಂಜನಿಯರ್ ಸ್ಕೂಲಿನ ಹೆಡ್ ಮಾಸ್ಟರಾದ ಮೆ|| ವೈ. ಅಶ್ವತ್ಥನಾರಾಯಣರಾವ್, ಬಿ.ಎ., ಬಿ.ಸಿ.ಇ., ಯವರು ಯಡತೊರೆಯಲ್ಲಿ ಬತ್ತ ಕುಟ್ಟಿ ಹಸನಾದ ಅಕ್ಕಿಯನ್ನು ಕೊಡುವಂಥಾ ಭಾರಿಯಾದ ಒಂದು ಕಾರ್ಖಾನೆಯನ್ನು ಮೊನ್ನೆ ಭಾನುವಾರದ ದಿನ ಪ್ರಾರಂಭ ಮಾಡಿದರು. ಮೈಸೂರು ಡೆಪ್ಯುಟಿ ಕಮೀಷನರವರಾದ ಮೆ|| ಎಂ. ಕಾಂತರಾಜ ಅರಸಿನವರು ಆ ದಿನ ಅಲ್ಲಿ ನಡೆದ ಸಭೆಯನ್ನಲಂಕರಿಸಿ, ಸ್ವಾರಸ್ಯವಾದ ಭಾಷಣ ಮಾಡಿದರು. ಈ ಕಾರಖಾನೆಯಲ್ಲಿ ಯಂತ್ರಗಳು ಬತ್ತವನ್ನು ಎರಡಾವರ್ತಿ ಕಲ್ಲು ಮಣ್ಣನ್ನು ತಾವೇ ತೂರಿಕೊಂಡು ಕಾಳನ್ನು ಒಡೆದು, ನಂತರ ತೂರಿ, ಅಕ್ಕಿಯನ್ನು ನುಣುಪು ಮಾಡಿ ಅಡಿಗೆಗೆ ಸಿದ್ಧಪಡಿಸಿಕೊಡುತ್ತವೆ.

ಮೆ|| ಅಶ್ವತ್ಥನಾರಾಯಣರಾಯರ ಭಾಷಣದ ಕೆಲವು ಸಾರಾಂಶಗಳು.—

(೧) ಯಾವ ಊರಾದರೂ ಅಭಿವೃದ್ಧಿಸ್ಥಿತಿಗೆ ಬರಬೇಕಾದರೆ ಅದು ವ್ಯಾಪಾರಸ್ಥಳವಾಗಿಯೋ ಆಗಲಿ ಅಥವಾ ಕೈಗಾರಿಕೆಗೆ ಆಶ್ರಯಸ್ಥಾನವಾಗಿಯೋ ಆಗಲಿ ಇರಬೇಕು. ಪ್ರಕೃತ ಈ ಊರು ಯಾವ ವಿಧವಾದ ಕೈಗಾರಿಕೆಯಿಂದ ಅಭಿವೃದ್ಧಿಗೆ ಬರಬಹುದೆಂದು ಪರ್ಯಾಲೋಚಿಸಿ ಈ ಪ್ರಾಂತ್ಯ ಬತ್ತ ವಿಶೇಷವಾಗಿ ಬೆಳೆಯುವುದರಿಂದ ಅಕ್ಕಿ ಕಾರ್ಖಾನೆಯನ್ನು ಇಡುವದೇ ಉತ್ತಮವೆಂದು ನಿಶ್ಚಯಿಸಿದೆನು. ಯಾವ ಕಾರ್ಖಾನೆಯನ್ನು ಸ್ಥಾಪಿಸಿದರೂ ಆ ಪ್ರಾಂತ್ಯ ಬೆಳೆಯತಕ್ಕ ಸಾಮಾನನ್ನು ಉಪಯೋಗಿಸಿಕೊಳ್ಳಬೇಕೇ ಹೊರತು ಬೇರೆ ಕಡೆಯಿಂದ ಸಾಮಾನನ್ನು ತಂದರೆ ಅಲ್ಲಿನ ಜನರಿಗೆ ಅಷ್ಟು ಪ್ರಯೋಜನವಾಗುವದಿಲ್ಲ. ಇಲ್ಲಿ ಸಕ್ಕರೆ ಯಂತ್ರನಿರ್ಮಾಣವೆಂದರೆ ಕಬ್ಬು ಬೆಳೆಯುವದಿಲ್ಲ. ನೂಲಿನ ಯಂತ್ರ

ಇಡೋಣವೆಂದರೆ ಹತ್ತಿ ಬೆಳೆಯುವದಿಲ್ಲ. ಇಲ್ಲಿ ಬೆಳೆಯುವದು ಬತ್ತ. ಆದ್ದರಿಂದ ಇಲ್ಲಿಗೆ ಬೇಕಾದುದು ಅಕ್ಕಿಯ ಕಾರ್ಖಾನೆಯೇ.

(೨) ಈ ಸಂದರ್ಭದಲ್ಲಿ ಇಂತಹ ಕಾರ್ಖಾನೆಯಿಂದ ಉಂಟಾಗುವ ಕೆಲವು ಪ್ರಯೋಜನಗಳನ್ನು ತಿಳಿಸುವದು ಅವಶ್ಯಕವೆಂದು ತೋರುತ್ತೆ. ಈಗ ಯಡತೊರೆ ಪ್ರಾಂತ್ಯದಲ್ಲಿ ಬೆಳೆಯತಕ್ಕ ಬತ್ತವೆಲ್ಲಾ ಮೈಸೂರಿಗೆ ಸಾಗಿ ಅಲ್ಲಿ ಬಿಕರಿಯಾಗುತ್ತಿರುವದು ಎಲ್ಲರಿಗೂ ತಿಳಿದೇ ಇದೆ. ಈ ಬತ್ತವನ್ನು ಮೈಸೂರಿನ ವರ್ತಕರು ಬತ್ತವನ್ನಾಗಿಯೇ ಬಿಕರಿಮಾಡದೆ ಅಕ್ಕಿ ಮಾಡಿಸಿ ಮೈಸೂರಿನಲ್ಲಿಯೂ ಬೆಂಗಳೂರು ಪ್ರಾಂತ್ಯದಲ್ಲಿಯೂ ಮಾರುತ್ತಿರುವರು. ಆದುದರಿಂದ ವರ್ತಕರಿಗೆ ಬೇಕಾಗಿರುವದು ಅಕ್ಕಿಯೇ ವಿನಹ ಭತ್ತವಲ್ಲ. ಅವರಿಗೆ ಅಕ್ಕಿಯನ್ನೇ ಕೊಟ್ಟರೆ ಯಾವ ವಿಧವಾದ ಅನಾನುಕೂಲವೂ ಆಗುವದಿಲ್ಲ. ಇಲ್ಲಿನ ರೈತರಿಗಾದರೋ ಮೈಸೂರಿಗೆ ಅಕ್ಕಿಯನ್ನು ತೆಗದುಕೊಂಡುಹೋಗುವ ಬದಲು ಹೊಟ್ಟು ಕೂಡಿದ ಅಕ್ಕಿ ಅಂದರೆ ಬತ್ತವನ್ನು ತೆಗದುಕೊಂಡು ಹೋಗೋಣದರಿಂದ ತುಂಬಾ ನಷ್ಟ. ಎತ್ತುಗಳಿಗೆ ಆಯಾಸ. ಲಾಭವಿಲ್ಲದ ಹೊಟ್ಟನ್ನು ಸುಮ್ಮನೆ ಮೈಸೂರಿಗೆ ಗಾಡಿಯಮೇಲೆ ಹೇರಿಕೊಂಡು ಹೋದಂತೆ ಆಗುವದು. ಒಂದು ಗಾಡಿಯಲ್ಲಿ ೪ ಅಥವಾ ೪|| ಖಂಡಗ ಬತ್ತವನ್ನು ಮೈಸೂರಿಗೆ ತುಂಬುವರಷ್ಟೆ. ಇದರ ಬದಲು ಅಕ್ಕಿಯನ್ನೇ ಸಾಗಿಸುವದಾದರೆ ಗಾಡಿಯೊಂದಕ್ಕೆ ೩ ಅಥವಾ ೩|| ಖಂಡಗನನ್ನು ಭರ್ತಿಮಾಡಬಹುದು. ಆದರೆ ೩|| ಖಂಡಗ ಅಕ್ಕಿಯು ೪|| ಖಂಡಗ ಬತ್ತದಿಂದ ಆಗುವದಿಲ್ಲ. ೮ ಖಂಡಗ ಭತ್ತ ಬೇಕು. ೮ ಖಂಡಗ ಬತ್ತಕ್ಕೆ ೨ ಗಾಡಿಬೇಕು. ೩|| ಖಂಡಗ ಅಕ್ಕಿಗೆ ಒಂದೇ ಗಾಡಿ ಸಾಕು. ಆದುದರಿಂದ ರೈತನು ೨ ಗಾಡಿ ಬತ್ತವನ್ನು ಮೈಸೂರಿಗೆ ತೆಗದುಕೊಂಡುಹೋಗುವುದರಿಂದ ಎಷ್ಟು ಲಾಭವನ್ನು ಸಂಪಾದಿಸುವನೋ ಕಡೇಪಕ್ಷ ಅದೇ ಲಾಭವನ್ನು ಒಂದು ಗಾಡಿ ಅಕ್ಕಿಯನ್ನು ತೆಗದುಕೊಂಡುಹೋಗುವುದರಿಂದಲೇ ಸಂಪಾದಿಸಬಹುದು.

(೩) ಒಂದುಗಾಡಿ ಬತ್ತವನ್ನು ಮೈಸೂರಿಗೆ ಹೊಡೆಯಬೇಕಾದರೆ ೭ ರೂಪಾಯಿ ಬಾಡಿಗೆಯನ್ನು ಕೊಡಬೇಕು. ಬತ್ತದ ಬದಲು ಒಂದು ಗಾಡಿಯಿಂದ ಆಗುವ ಅಕ್ಕಿಯನ್ನು ಮೈಸೂರಿಗೆ ಹೊಡೆದರೆ ಅರ್ಧ

ಗಾಡಿ ಹೊರೆಯೇ ಆಗುವುದರಿಂದ ೧ ರೂಪಾಯಿ ಬಾಡಿಗೆ ಆದಹಾಗೆ ಆಗು ತ್ತೆ. ಈ ಯಾತತೊರೆ ಪ್ರಾಂತ್ಯದಲ್ಲಿ ಪ್ರತಿ ವರುಷವೂ ಸುಮಾರು ೨ ಲಕ್ಷ ಖಂಡಿ ಬತ್ತ ಬೆಳೆಯುತ್ತೆ. ಇದನ್ನು ಪ್ರತಿ ವರುಷವೂ ಮೈಸೂರಿಗೆ ಸಾಗಿಸಬೇಕಾದರೆ ೫೧,೦೦೦ ಗಾಡಿಬೇಕು. ಭತ್ತವನ್ನು ತೆಗದುಕೊಂಡು ಹೋಗುವ ಬದಲು ಅಕ್ಕಿಯನ್ನು ತೆಗದುಕೊಂಡುಹೋದರೆ ೩೦,೦೦೦ ಗಾಡಿ ಸಾಕು. ಆದುದರಿಂದ ೨೧,೦೦೦ ಗಾಡಿ ದಂಡವಾಗಿ ಮೈಸೂರಿಗೆ ಹೋದಹಾಗೆ ಆಯಿತು. ಇದರ ಬಾಡಿಗೆ ೪೨,೦೦೦ ರೂಪಾಯಿ ಪ್ರತಿ ವರುಷವೂ ಈ ಪ್ರಾಂತ್ಯದವರಿಗೆ ಲುಕ್ಸಾನು ಆಗುವದು. ಈ ೪೦,೦೦೦ ರೂಪಾಯಿ ಇಲ್ಲಿಯೇ ಉಳಿದರೆ ಈಗ ಹೊಳೇಲಿ ಹಾಕಿದಹಾಗೆ ಹೋಗುವ ಹಣವು ರೈತರಿಗೆ ಉಳಿದು ಅವರು ಐಶ್ವರ್ಯವಂತರಾಗಲು ಸಂದೇಹವೇ ಇಲ್ಲ.

(೪) ಈಚಿಗೆ ಈ ಪ್ರಾಂತ್ಯ ನಾಲಾ ಬಡಾವಣೆಯಿಂದ ಸಾವಿರಾರು ಎಕರೆ ತರೀಸಾಗುವಳಿಗೆ ಬಂದಿರುವದು ಇದರ ವ್ಯವಸಾಯಕ್ಕೆ ಸಾಕಾದಷ್ಟು ರೈತರೂ ಉಳುವ ಎತ್ತೂ ಇಲ್ಲದೆ ತೊಂದರೆಯುಂಟಾಗಿರುವದು ತಿಳಿದ ವಿಷಯವೇ. ಮೇಲೆ ಹೇಳಿದಂತೆ ೨೧,೦೦೦ ಗಾಡಿಗಳು ವೃಥಾ ಮೈ ಸೂರಿಗೆ ಹೋಗುತ್ತಿರುವವಷ್ಟೆ. ಇದನ್ನು ತಪ್ಪಿಸಿದಲ್ಲಿ ೨೧,೦೦೦ ಜೊತೆ ಎತ್ತನ್ನೂ ೨೧,೦೦೦ ಆಳನ್ನೂ ಹೊಸದಾಗಿ ತರೀ ಜಮೀನಿನ ವ್ಯವಸಾಯದಲ್ಲಿ ಉಪಯೋಗಿಸುವುದರಿಂದ ಇಲ್ಲಿನಬೇಸಾಯು ಬೇಕಾದಷ್ಟುಹೆಚ್ಚುವುದು.

(೫) ಈಗಿನ ಕಾಲದಲ್ಲಿ ಕೈಗಾರಿಕೆ ಕೆಲಸವನ್ನೆಲ್ಲಾ ಕೂಡಿದವು ಟ್ಟಿಗೆ ಯಂತ್ರದಿಂದ ಮಾಡುವದು ನಮ್ಮದೇಶದಲ್ಲಿ ಅಷ್ಟು ರೂಢಿ ಇಲ್ಲದಿದ್ದರೂ ಇಂಗ್ಲೆಂಡ್ ಮುಂತಾದ ಇತರ ದೇಶಗಳಲ್ಲಿ ಸಾಧಾರಣವಾದ ವಾಡಿಕೆಯಾಗಿದೆ. ಕೆಲವು ವಿಷಯಗಳನ್ನು ಇಲ್ಲಿ ಹೇಳಿದರೆ ಎಲ್ಲರಿಗೂ ಆಶ್ಚರ್ಯವಾಗಬಹುದು. ಆ ದೇಶಗಳಲ್ಲಿ ಉಳಬೇಕಾದರೂ, ಬಿತ್ತಬೇಕಾದರೂ, ಕೊಯ್ಯಬೇಕಾದರೂ, ಬಡಿಯಬೇಕಾದರೂ, ತೂರಬೇಕಾದರೂ ಯಂತ್ರವಿನಾ ನಮ್ಮಕಡೆ ಮಾಡುವಹಾಗೆ ಎತ್ತು ಆಳುಗಳನ್ನು ಇಟ್ಟುಕೊಂಡು ಕೆಲಸ ಮಾಡುವುದಿಲ್ಲ. ಹೀಗೆ ಪ್ರತಿಯೊಂದು ಕೆಲಸವೂ ಯಂತ್ರದ ಸಹಾಯದಿಂದ ನಡೆಯುತ್ತಿರುವಾಗ್ಗೆ ನಾವುಮಟ್ಟಿಗೆ ಯಂತ್ರ ಜೋಡಿಸಿದರೆ ಇತರರು ಯಾರಾದರೂ ನಮ್ಮ ಬದಲು ಯಂತ್ರಗಳನ್ನು ತಂದಿಟ್ಟು

ಕೆಲಸಮಾಡುತ್ತಾರೆಯೇ ವಿನಾ ಯಂತ್ರಗಳು ಚಾಲ್ತಿಗೆ ಬರದೇ ಇರುವದಿಲ್ಲ. ಮೈಸೂರಿನಲ್ಲಿ ಈಗ ಇರುವ ಎರಡು ಅಕ್ಕಿಯ ಯಂತ್ರದ ಜೊತೆಗೆ ಸದ್ಯದಲ್ಲೇ ರೈಲ್ವೆ ಸ್ಟೇಷನ್ ಬಳಿ ಭಾರಿಯಾದ ಇನ್ನೊಂದು ಅಕ್ಕಿ ಕಾರ್ಖಾನೆಯು ತಯಾರಾಗುವುದು. ಆದುದರಿಂದ ಇತರದೇಶಗಳಲ್ಲಿ ಯಂತ್ರದ ಸಹಾಯದಿಂದ ಹೇಗೆ ಕೆಲಸಗಳನ್ನು ಮಾಡಿ ಐಶ್ವರ್ಯವಂತರಾಗುತ್ತಾರೆಯೋ ಹಾಗೆಯೇ ನಾವುಗಳೂ ಮಾಡದಿದ್ದಲ್ಲಿ ಎಲ್ಲರಿಗಿಂತಲೂ ನಾವು ಹಿಂದೆ ಬೀಳುವದಲ್ಲದೆ ನಾವು ಸಂಪಾದಿಸಬಹುದಾದ್ದು ಇತರರ ಪಾಲಾಗುವದು.

(೬) ಯಂತ್ರದಿಂದ ತಯಾರಾದ ಅಕ್ಕಿಯು ಕೊಟ್ಟಣದಲ್ಲಿ ಕುಟ್ಟಿದ ಅಕ್ಕಿಯಷ್ಟು ಹಸನಾಗಿರುವದಿಲ್ಲವೆಂದು ಕೆಲವರು ಆಕ್ಷೇಪಿಸಬಹುದು. ಆ ಆಕ್ಷೇಪಣೆಯು ನಿರಾಧಾರವಾದದ್ದು. ಜಪಾನ್ ದೇಶದಲ್ಲಿರುವ ೩ ಕೋಟಿ ಜನರು ನಮ್ಮಹಾಗೆ ಅಕ್ಕಿಯನ್ನೆ ಊಟಮಾಡುತ್ತಾರೆ. ಅವರೆಲ್ಲರೂ ಅಕ್ಕಿಯನ್ನು ಯಂತ್ರದಿಂದ ತಯಾರ್ಮಾಡಿಸಿಕೊಳ್ಳುತ್ತಾರೆಯೇ ವಿನಾ ಒಂದುಕಾಳು ಬತ್ತವನ್ನಾದರೂ ಕೊಟ್ಟಣ ಕುಟ್ಟಿಸುವದಿಲ್ಲ. ಗೋದಾವರೀ ಕೃಷ್ಣಾ ತೀರದಲ್ಲಿ ಬೆಳೆಯುತಕ್ಕ ಬತ್ತವನ್ನೆಲ್ಲಾ ಯಂತ್ರದಲ್ಲೇ ಅಕ್ಕಿ ಮಾಡಿಸುವದನ್ನು ನಾನು ಕಣ್ಣಾರ ನೋಡಿರುವೆನು. ಯಂತ್ರದಲ್ಲಿ ಕುಟ್ಟಿದ ಅಕ್ಕಿಗೂ ಕೊಟ್ಟಣದ ಅಕ್ಕಿಗೂ ವ್ಯತ್ಯಾಸವೇ ಕಾಣುವದಿಲ್ಲ. ಅಲ್ಲದ ಯಂತ್ರದಿಂದ ಎಷ್ಟುಮಟ್ಟಿನ ಹಸನು ಅಕ್ಕಿಯನ್ನು ಬೇಕಾದರೂ ತಯಾರ್ಮಾಡಬಹುದು. ಕೊಟ್ಟಣದಲ್ಲಿ ಒನಕೆಗಳಿಂದಲೂ ಯೊತಗಳಿಂದಲೂ ಬತ್ತವನ್ನು ಕುಟ್ಟುವರು. ಯಂತ್ರವು ಬತ್ತವನ್ನು ಒಡೆಯುವದು. ಆದುದರಿಂದ ಯಂತ್ರದ ಅಕ್ಕಿಯಲ್ಲಿ ವಿಶೇಷ ನುಚ್ಚು ಆಗುವದಿಲ್ಲ. ಅಕ್ಕಿಯನ್ನು ತೊಳಿಸುವವರಲ್ಲಿ ಸಣ್ಣ ತೌಡು ಎಷ್ಟರಮಟ್ಟಿಗೆ ಬೇಕಾದರೂ ತೆಗೆಯಬಹುದು. ತೆಗೆಯದೇನೂ ಇರಬಹುದು. ಮೈಸೂರಿನಲ್ಲಿ ಅನೇಕಾವರ್ತಿ ನಾನೂ ನನ್ನ ಸ್ನೇಹಿತರೂ ಯಂತ್ರದಿಂದ ಅಕ್ಕಿ ಮಾಡಿಸಿ ಉಪಯೋಗಿಸಿರುತ್ತೇವೆ. ಈ ಅಕ್ಕಿಯು ಎಲ್ಲಾ ವಿಧದಲ್ಲೂ ಸಮರ್ಪಕವಾಗಿರುವದು. ಕೆಲವುಮಂದಿ ಮೈಸೂರು ವರ್ತಕರೂ ಯಂತ್ರದಿಂದ ತಯಾರಾದ ಅಕ್ಕಿಯನ್ನು ಮಾರುತ್ತಾ ಇದಾರೆ.

(೭) ಚೇಣತಕ್ಕಿಯಲ್ಲದೆ ಕುಸುಬಲಕ್ಕಿಯನ್ನೂ ಯಂತ್ರದಿಂದ ಮಾಡಬಹುದು. ಸದ್ಯಕ್ಕೆ ಈ ಕಾರ್ಖಾನೆಯಲ್ಲಿ ಅನುಕೂಲವಿಲ್ಲ. ಕೂಡಲೇ ಕುಸುಬಲಕ್ಕಿಯನ್ನು ತಯಾರುಮಾಡುವದಕ್ಕೆ ಬೇಕಾದ ಸಲ ಕರಣೆಗಳು ಸಿದ್ಧವಾಗುವವು.

(೮) ಈ ಪ್ರಾಂತ್ಯದ ಅಕ್ಕಿಯನ್ನು ಬೆಂಗಳೂರು ಮುಂತಾದ ಸ್ಥಳಗಳಿಗೆ ಇದುವರೆಗೂ ಇಲ್ಲಿಂದಲೇ ನೇರವಾಗಿ ಕಳುಹಿಸುತ್ತಾ ಇರಲಿಲ್ಲ. ಅದು ಮೈಸೂರು ವರ್ತಕರ ಮೂಲಕ ಹೋಗುತ್ತಾ ಇತ್ತು. ಇನ್ನು ಮೇಲೆ ಇಲ್ಲಿ ತಯಾರಾದ ಅಕ್ಕಿಯನ್ನು ನಾವೇ ನೆಟ್ಟಗೆ ರೈಲುಮಾರ್ಗ ವಾಗಿ ಪರಸ್ಥಳಕ್ಕೆ ಕಳುಹಿಸಬಹುದು.

ಮೆ|| ಕಾಂತರಾಜ ಅರಸಿನವರು ಕೆಳಗೆ ಕಂಡರೀತಿ ಭಾಷಣ ಮಾ ಡಿದರು.—

(೧) ಈ ಶತಮಾನದಲ್ಲಿ ಯಂತ್ರಗಳ ಉಪಯೋಗವು ನಾನಾಮು ಖವಾಗಿರುತ್ತದೆ. ವ್ಯವಸಾಯದಲ್ಲಾಗಲಿ, ಕೈಗಾರಿಕೆಯಲ್ಲಾಗಲಿ, ಸಂಚಾ ರದ ಸೌಲಭ್ಯಕ್ಕಾಗಲಿ ಯಂತ್ರವು ಕೇವಲ ಪ್ರಾಮುಖ್ಯತೆಯನ್ನು ಹೊಂದಿ ರುವುದು. ಇದುವರಿಗೆ ಭೂಮಿ ಮತ್ತು ಜಲ ಇವುಗಳಮೇಲೆ ಸಂಚರಿಸತ ಕ್ಕವರುಗಳಿಗೆ ಈ ಯಂತ್ರಗಳು ಅನುಕೂಲ್ಯತೆಯನ್ನು ಉಂಟುಮಾಡು ತ್ತಿದ್ದವು. ಕೆಲವು ಕಾಲದಿಂದೀಚೆಗೆ ಮನುಷ್ಯರೂಕೂಡ ದೇವತೆಗಳಂತೆ ಆಕಾಶದಲ್ಲಿ ಸಂಚರಿಸಲು ಈ ಯಂತ್ರಗಳು ಸಹಕಾರಿಗಳಾಗಿವೆ. ಅದ್ದರಿಂ ದ ಯಂತ್ರಗಳುಮಾಡದೇ ಇರತಕ್ಕ ಕೆಲಸವ್ಯಾವದೂ ಇರುವದಿಲ್ಲವೆಂದು ದೃಢವಾಗಿ ಹೇಳಬಹುದು. „ಸನ್ನೆ ಸಾವಿರಾಳು ಬಲ" ವೆಂದಂತೆ ಒಂದು ಯಂತ್ರವು ಸಾವಿರಾರು ಜನಗಳು ಮಾಡಲಿಕ್ಕೆ ಅಸಾಧ್ಯವಾದ ಕೆಲಸವನ್ನು ಮಾಡಬಲ್ಲದು. ಆದ್ದರಿಂದ ಯಂತ್ರಗಳು ರೂಢಿಗೆ ಬಂದರೆ ತುಂಬಾ ಫಲವುಂಟು. ಪರಂತು ಇವುಗಳಿಂದ ಯಾರಿಗೂ ಬಾಧಕವಾದದ್ದಲ್ಲ. ಈ ವಿಷಯದಲ್ಲಿ ಯಾರಿಗಾದರೂ ಸಂದೇಹ ವುಂಟಾದರೆ ಅಂಥಾ ಮಹನೀ ಯರು ಬೊಂಬಾಯಿ ಪಟ್ಟಣಕ್ಕೆ ದಯಮಾಡಿ ಅಲ್ಲಿನ ಸ್ಥಿತಿಯನ್ನು ಸ್ವ ತಃ ಪರಾಮರ್ಶಿಸಿದರೆ ಸಂದೇಹನಿವೃತ್ತಿ ಕೂಡಲೇ ಆಗುತ್ತೆ. ಆ ಮಹಾ ಪಟ್ಟಣದಲ್ಲಿ ಎಷ್ಟು ಯಂತ್ರಗಳಿದ್ದರೂ ಆ ಯಂತ್ರಾಲಯಗಳಲ್ಲೀ

ಲಕ್ಷಾಂತರ ಜನ ಕೂಲಿಯವರಿಗೆ ಜೀವನೋಪಾಯ ನಡೆಯುವುದು. ಹೆಂಗಸರೂ ಮಕ್ಕಳೂ ಕೂಡ ತಮ್ಮ ತಮ್ಮ ಹೊಟ್ಟೆಗೆ ಬೇಕಾದಷ್ಟನ್ನು ತುಂಬಾ ದೇಹಶ್ರಮವಿಲ್ಲದೆ ಸಂಪಾದಿಸುತ್ತಲಿದಾರೆ. ಹೀಗಿರೋಣದರಿಂದ ಯಂತ್ರಗಳು ಕೂಲಿ ಜನಗಳನ್ನು ಬದುಕಿಸುವದಕ್ಕೆ ಬಂದಿವೆಯೇ ಹೊರ್ತು ಕೆಡಿಸುವದಕ್ಕೆ ಅಲ್ಲ.

(೨) ಈ ಕಾಲಕ್ಕೆ ಮುಖ್ಯವಾಗಿ ಎಲ್ಲರೂ ಸಾಧ್ಯವಾದಷ್ಟು ಕಾಲ ಸಂಗ್ರಹಣ ಮಾಡುವದರಲ್ಲೂ ಮತ್ತು ದೇಹಶ್ರಮವನ್ನು ಕಡಮೆ ಮಾಡಿಕೊಳ್ಳುವದರಲ್ಲೂ ಪ್ರಯತ್ನಪಡುತ್ತಾರೆ. ಈ ಎರಡು ಕೆಲಸಗಳು ಯಂತ್ರಗಳಿಂದ ಸುಲಭಸಾಧ್ಯವಾಗುತ್ತವೆಂಬುವುದರಲ್ಲಿ ಯಾವ ಸಂಶಯವೂ ಇಲ್ಲ.

Hand Cotton Gins.*

ಅರಳೆಯನ್ನು ಬಿಡಿಸುವ ಕೈ ಯಂತ್ರಗಳು.

ಈಚೆಗೆ ಹತ್ತಿಯನ್ನು ರೈತರು ಮನೆಗಳಲ್ಲಿಯೇ ರಾಟೆಯಾಡಿ ಅರಳೆಯನ್ನು ಬಿಡಿಸಿಕೊಳ್ಳದೆ ಅರಳೆ ಕಾರ್ಖಾನೆಗಳಿಗೆ ಫಸಲು ಬಂದಕೂಡ್ಲೆ ಸಾಗಿಸುವದು ವಾಡಿಕೆಗೆ ಬರುತ್ತಾ ಇದೆ. ಪೂರ್ವದಲ್ಲಿ ಮನೆಗಳಲ್ಲಿಯೇ ರಾಟೆಯಾಡಿಕೊಳ್ಳುತ್ತಿದ್ದಾಗ ಮೊದಲುಮೊದಲು ಕೂಡಿಸಲ್ಪಟ್ಟ ಹತ್ತಿಫಸಲಿನಿಂದ ಮುಂದಿನ ಫಸಲಿಗೆ ಅನುಕೂಲಿಸುವಂತೆ ಒಳ್ಳೇ ಬೀಜವನ್ನು ಒದಗಿಸಿಕೊಳ್ಳುತ್ತಿದ್ದರು. ಈಗಲಾದರೊ ಫಸಲಾದ ಕೂಡ್ಲೆ ಹತ್ತಿಯನ್ನೆಲ್ಲಾ ಕಾರ್ಖಾನೆಗಳಿಗೆ ಸಾಗಿಸುವುದರಿಂದ ಒಳ್ಳೇ ಬೀಜ ಸಿಕ್ಕುವದೆ ದುರ್ಲಭವಾಗಿಧೆ. ಅಲ್ಲದೆ ಹತ್ತಿ ಬೀಜದನ್ನು ಅಲ್ಪಸ್ವಲ್ಪವಾದರೂ ದಾಸ್ತಾನುಮಾಡಿ ಬೀಜಕ್ಕೂ ದನಕರುಗಳ ಪೋಷಣೆಗೂ ಉಪಯೋಗಿಸಲ್ಪಡುವದಕ್ಕೆ ಮತ್ತೊಂದು ಭಾರಿ ವಿಘ್ನವು ಬಂದೊದಗಿದೆ; ಅದು ಯಾವದೆಂದರೆ: ೧೯೦೪ನೆ ಇಸವಿಯಲ್ಲಿ ೧೦೦ ಪೌಂಡು ಬೀಜಕ್ಕೆ ೧ ರೂಪಾಯಿಯಂತೆ ಮಾರುತ್ತಿತ್ತು. ಈಗ ವಿಲಾಯಿತಿ ಮುಂತಾದ ಪರದೇಶಗಳವರು ೧ ರೂಪಾಯಿಗೆ ಸುಮಾರು ೪೦ ಶೇರಿನಂತೆ ಎಷ್ಟು ಬೀಜವಿದ್ದರೂ ಕೊಂ

---

* ಧಾರವಾಡದ ಅಗ್ರಿಕಲ್ಚರಲ್ ಸ್ಟೇಷನ್ನಿನ ರಿಪೋರ್ಟ್—೧೯೦೮-೧೯೦೯.

ಡುಕೊಳ್ಳುವದಕ್ಕೆ ಸಿದ್ಧವಾಗಿದ್ಧಾರೆ. ಇದರಿಂದ ರೈತನು ಹಣದಮೇಲೆ ಆಶೆಪಟ್ಟು ಬೀಜವೆಲ್ಲವನ್ನೂ ಮಾರಿ, ದನಗಳಿಗೆ ಮೇವಾಗಿ ಕೊಡುವದೂ ಕೂಡ ಬಿಟ್ಟುಬಿಟ್ಟಿರುತ್ತಾನೆ. ಈ ಕುಂದುಕಗಳನ್ನೆಲ್ಲಾ ತಪ್ಪಿಸುವದಕ್ಕೆ ಹತ್ತಿಯಿಂದ ಅರಳೆಯನ್ನು ತ್ವರೆಯಾಗಿ ಬಿಡಿಸುವ ಕೈಯಂತ್ರಗಳನ್ನು ರೈತರು ಮನೆಗಳಲ್ಲಿಯೇ ಉಪಯೋಗಿಸುತ್ತಾ ಬರುವದು ಒಳ್ಳೇದು. ಇಂಥಾ ಕೈ ಯಂತ್ರಗಳ ಪೈಕಿ ಜಪಾನಿನಲ್ಲಿ ತಯಾರಾಗುತ್ತಿರುವದೊಂದು (Japanese Gin) ಬಹಳ ಶ್ಲಾಘ್ಯವಾಗಿರುತ್ತೆ. ಈ ಯಂತ್ರವು ಬಹಳ ಹಗುರ. ಇದರ ಬೆಲೆ ೧೨೫ ರೂಪಾಯಿ. ಇದು ಹತ್ತಿಯಿಂದ ಅರಳೆಯನ್ನು ಕಡು ಹಸನಾಗಿಯೂ ತ್ವರೆಯಾಗಿಯೂ ಬಿಡಿಸಬಲ್ಲದು. ಒಬ್ಬನೇ ಕಾಲಿನಿಂದ ಒತ್ತಿ ಯಂತ್ರವನ್ನು ನಡಿಸಲೂ ಬಹುದು, ಕೈಯಿಂದ ಹತ್ತಿಯನ್ನು ಯಂತ್ರಕ್ಕೆ ಕೊಡುತ್ತಲೂ ಇರಬಹುದು. ಈ ಎರಡು ಕೆಲಸಗಳನ್ನೂ ಒಬ್ಬನೆ ಮಾಡುವದು ಶ್ರಮವೂ ಮತ್ತು ಅನಾನುಕೂಲವೂ ಆಗುವ ಪಕ್ಷದಲ್ಲಿ ೧೦ ವರುಷದ ಒಬ್ಬ ಹುಡುಗನನ್ನು ಹತ್ತಿ ಕೊಡುವದಕ್ಕೆ ನೇಮಿಸಿಕೊಂಡರೆ ಕೆಲಸವು ಸಲೀಸಾಗಿ ಸಾಗುತ್ತದೆ. ಹೀಗೆ ಒಬ್ಬ ದೊಡ್ಡಾಳು ಮತ್ತು ಹುಡುಗನು ದಿನಗಟ್ಲೆ (ದಿನ ಒಂದಕ್ಕೆ ೮ ಘಂಟೆಗಳಂತೆ) ೨೫೦ ಪೌಂಡು ಹತ್ತಿಯನ್ನು ಬೀಜ ಬೇರೆ ಅರಳೆ ಬೇರೆ ಮಾಡಬಹುದು. ಒಂದು ದಿನಕ್ಕೆ ಈ ತರಹೆ ಯಂತ್ರದಿಂದ ಇಷ್ಟುಮಟ್ಟಿಗೆ ಕೆಲಸ ಜರುಗುವದು ನೋಡಿದರೆ ದೊಡ್ಡ ಕಾರ್ಖಾನೆಗಳಲ್ಲಿ ಅರಳೆಯನ್ನು ಬಿಡಿಸುವದಕ್ಕೆ ತಗಲುವ ಲಾಗವಡಿಗಿಂತ ಹೆಚ್ಚಾಗಲಾರದೆಂದು ಕಾಣುತ್ತೆ.

Insecticide for Crops *

ಹುಳಗಳನ್ನು ಪರಿಹಾರಮಾಡುವ ಔಷಧ.

ಪೈರುಪಚ್ಚೆಗಳಿಗೆ ಹುಳುಗಳು ಬಿದ್ದು ಬೆಳೆಯನ್ನು ಹಾಳುಮಾಡುವದನ್ನು ನಿಲ್ಲಿಸುವ ವಿಷಯದಲ್ಲಿ ಇಂಡಿಯಾ ಸರ್ಕಾರದ ಕ್ರಿಮಿಶಾಸ್ತ್ರವಿಚಾರದರಾದ (Imperial Entomologist) ಮೆ|| ಎಚ್. ಮಾಕ್ಸ್ವೆಲ್

---

* ಪ್ಲಾಂಟರ್ಸ್ ಕ್ರಾನಿಕಲ್ ೫—೩—೧೯೧೧.

ಕೆನೆ)ಯ್ ಎಂಬುವರು ಹೇಳಿರುವುದೇನಂದರೆ.—ಒಂದು ಪೌಂಡು ಲೆಡ್‌ಕ್ರೊ
ಮೇಟೆಂಬ (Lead Chromate) ಉಪ್ಪನ್ನು ೬೪ ಗ್ಯಾಲನ್ ನೀರಿನಲ್ಲಿ ಕರಗಿ
ಸಿ ಹುಳ ಬಿದ್ದಿರುವ ಪೈರುಪಚ್ಚೆಗಳ ಮೇಲೆ ಚಿಮುಕಿಸಿದರೆ ಹುಳುಗಳೆ
ಲ್ಲಾ ಸತ್ತುಹೋಗುತ್ತವೆ. ಇದೇ ಉಪ್ಪು ಒಂದು ಪೌಂಡಿಗೆ ೧೦೦ ಗ್ಯಾ
ಲನ್ ನೀರು ಬೆರಸಿ ಪೈರುಪಚ್ಚೆಗಳ ಮೇಲೆ ಚಿಮುಕಿಸಿದರೆ ಅವುಗಳಿಗೆ ಹು
ಳುಗಳು ಬೀಳುವುದೇ ಇಲ್ಲ. ಈ ಔಷಧವನ್ನು ಚಿಮುಕಿಸಿ ಬೆಳೆದ ಪೈರುಪ
ಚ್ಚೆಗಳು ಮೇವಾಗಿಯಾಗಲಿ ಆಹಾರವಾಗಿಯಾಗಲಿ ಉಪಯೋಗಿಸುವದರಿಂ
ದ ಯಾವ ಅಪಾಯವು ಉಂಟಾಗುವದಿಲ್ಲವೆಂದು ಅನುಭವದಿಂದ ಗೊತ್ತಾ
ಗಿರುತ್ತೆ. ಆದರೆ ಔಷಧವನ್ನೆಲ್ಲಾ ಒಂದೇ ಕಡೆ ಅತಿಯಾಗಿ ಚಿಮುಕಿಸಕೂ
ಡದು. ಈ ಔಷಧವು ಬಾರವಾಸಿ ಪದಾರ್ಥವು ಮತ್ತು ಅರಸಿನ ಬಣ್ಣವುಳ್ಳ
ದ್ದಾಗಿರುವದರಿಂದ ಪೈರೆಲ್ಲಾ ಚಿಮುಕಿಸಲ್ಪಟ್ಟಿರುವದು ಇಲ್ಲದೆ ಇರುವದು
ಚೆನ್ನಾಗಿ ಕಣ್ಣಿಗೆ ಗೋಚರವಾಗುತ್ತದೆ. ಎಲೆಗಳನ್ನು ಸ್ವಲ್ಪಮಟ್ಟಿಗಾದ
ರೂ ಸುಡದೆ ಅವುಗಳಿಗೆ ಚನ್ನಾಗಿ ಅಂಟಿಕೊಂಡು ಮಳೆಗಾಳಿಗಳ ಬಡಿತ
ಕ್ಕೂ ಕೂಡ ತಡೆಯುತ್ತದೆ. ಪ್ಯೂಸಾ ಅಜಮಾಯಿಷಿ ವ್ಯವಸಾಯದ ಫಾ
ರಂನಲ್ಲಿ ಈ ಔಷಧಿಯನ್ನು ಚಿಮುಕಿಸಿದ ಮೇಲೆ ಆರು ವಾರಗಳವರಿಗೂ
ಬಹು ಜೋರಾಗಿ ಮಳೆ ಬಂತು. ಆದರೂ ಔಷಧವು ಎಲೆಗಳಿಗೆ ಹತ್ತಿ
ಕೊಂಡೆ ಇತ್ತು. ಪೈರುಪಚ್ಚೆಗಳನ್ನು ತಿಂದುಹಾಕುವ ಕಂಬಳಿ ಹುಳ
ಮುಂತಾದವುಗಳನ್ನು ಕೊಲ್ಲುವದಕ್ಕೆ ಬಹಳ ಒಳ್ಳೆ ಔಷಧವಾಗಿರುತ್ತೆ.
ಲೆಡ್‌ಕ್ರೊಮೇಟನ್ನು ಪೌಂಡಿಗೆ ೦—೧೩—೦ ಆಣೆಯಂತೆ ಮಾರುವದಕ್ಕೆ
ನಾರ್ಟುವನಾಗಿರುತ್ತೆ.

Government Orders.

ಸರ್ಕಾರಿ ಹುಕುಂಗಳು.

I.

೧೯೧೯ನೆ ಇಸವಿಯ ಪ್ರಜಾಪ್ರತಿನಿಧಿ ಸಭೆಯಲ್ಲಿ ಕೆಲವರು ಮೆಂಬ
ರುಗಳು—ಗ್ರಾಮ ಪಟೇಲ ಶ್ಯಾನುಭೋಗರು ರೈತರಿಂದ ಕಂದಾಯ ಸಂ
ದಾಯಕ್ಕಾಗಿ ಅನೇಕ ಸಂದರ್ಭಗಳಲ್ಲಿ ಪಟ್ಟಿಗಳನ್ನು ಕೊಡುತ್ತಾ ಇಲ್ಲ; ಸಂ

ದ ಕಂದಾಯದ ಮೊಬಲಗುಗಳನ್ನು ಸರಿಯಾಗಿ ಜಮಾ ಕಟ್ಟಿಕೊಳ್ಳುತ್ತ
ಲೂ ಇಲ್ಲ ; ಹೀಗೆ ಮಾಡುತ್ತಿರುವುದಕ್ಕೆ ಕಾರಣವೇನಿರಬಹುದೆಂದು ಕೇಳಿ
ದರೆ ಶಾನುಭೋಗರು ಪಟ್ಟಿ ನಮೂನೆಗಳನ್ನು ಸ್ವಂತ ಹಣದಿಂದ ಕೊಂ
ಡುಕೊಂಡು ಇದ್ದು ರೈತರಿಗೆ ಬಿಕರಿ ಮಾಡಿ ತಮ್ಮ ಹಣವನ್ನು ಬರಮಾಡಿ
ಕೊಳ್ಳಬೇಕಾಗಿದೆ ; ಹೀಗೆ ಸ್ವಂತ ಹಣವನ್ನು ಮುಂಗಡವಾಗಿ ವೆಚ್ಚ ಮಾ
ಡುವದಕ್ಕೆ ಅವರು ಸಾಧಾರಣವಾಗಿ ಹಿಂಜರಿಯುತ್ತಾರೆ ; ಇದರಿಂದ ರೈತ
ರು ಪಟ್ಟಿಗಳನ್ನು ಪಡೆಯುವದೇ ಬಹಳ ಕಷ್ಟವಾಗಿರುತ್ತೆ ; ಆದಕಾರಣ
ವರುಷಗಟ್ಲೆ ಹುಜೂರು ಜಮಾಬಂದಿ ನಡೆಸುವಾಗ ಪಟ್ಟಿಗಳಿಲ್ಲದ ಖಾತೇ
ದಾರರಿಗೆಲ್ಲಾ ಮಜೂರಿ ತೆಗದುಕೊಳ್ಳದೆ ಪಟ್ಟಿಗಳನ್ನು ಮುಫತ್ತಾಗಿ ಕೊ
ಡುವ ಏರ್ಪಾಡು ಅಪ್ಪಣೆ ಕೊಡಿಸಬೇಕು"—ಎಂಬದಾಗಿ ಬೇಡಿಕೊಂಡಿದ್ದ
ರಮೇಲೆ ಶ್ರೀಮನ್ಮಹಾರಾಜರವರ ಸರ್ಕಾರದವರು ಮಾಡಿರುವ ಹುಕುಂ
ಏನೆಂದರೆ :—

ನಂ. ಆರ್. ೭೪೩-೫೩—ಎಲ್. ಆರ್. ೪೬೮-೧೯-೩. ತಾ|| ೬-೮-೧೯೧೦.

೧೯೦೫ನೆ ಇಸವಿ ಫೆಬ್ರವರಿ ೧೫ನೆ ತಾರೀಖು ಆರ್. ೭೩೪೮-೫೮ನೆ
ನಂಬರು ಹುಕುಂನಲ್ಲಿ ಪಟ್ಟಾ ನಮೂನೆಗಳನ್ನು ಫೂಲ್‌ಸ್ಕೇಪ್ ಕಾಗದಗಳ
ಲ್ಲಿ ಅಚ್ಚು ಹಾಕಿ ಪುಸ್ತಕಗಳನ್ನಾಗಿ ಹೊಲದು ನಮೂನೆ ಒಂದಕ್ಕೆ ೩
ಕಾಸಿನ ಖರೀದಿಯಂತೆ ಪ್ರತಿಯೊಬ್ಬ ಡೆಪ್ಯುಟಿ ಕಮಿಷನರಿಗೂ ಸರಬರಾ
ಯಿ ಮಾಡಬೇಕೆಂದು ಅಚ್ಚು ಇಲಾಖೆ ಸೂಪರಿಂಟೆಂಡೆಂಟರವರಿಗೆ ಅಪ್ಪಣೆ
ಕೊಟ್ಟಿರುತ್ತೆ. ಪ್ರಜಾಪ್ರತಿನಿಧಿ ಮೆಂಬರುಗಳು ಸೂಚಿಸಿರುವ ಕುಂದಕ
ಗಳನ್ನು ತಪ್ಪಿಸಲೋಸುಗ ಇನ್ನುಮೇಲೆ ಪ್ರತಿಯೊಬ್ಬ ಶಾನುಭೋಗನಿ
ಗೂ ೧೦೦-೨೦೦ ಪಟ್ಟಿಗಳನ್ನು ಸಾಲೀಯಾನ ಸರಬರಾಯಿ ಮಾಡುತ್ತಿರತ
ಕ್ಕದ್ದು. ಪಟ್ಟಿಗಳ ಖರೀದಿ ಮೊಬಲಗನ್ನು ಶಾನುಭೋಗನಿಗೆ ಅಡ್ವಾನ್ಸಿ
ನಂತೆ ಭಾವಿಸಿ ಅವನ ಖಾತೆಗೆ ದಾಖಲ್ಮಾಡಿದ್ದು ಸಾಲು ಮುಗಿಯುವದ
ರೊಳಗಾಗಿ ಅವುಗಳನ್ನು ಮಾರಿ ಬಂದ ಹಣವನ್ನು ಸರ್ಕಾರಕ್ಕೆ ಅವನು
ವಾಪಸು ಮಾಡದೆ ಇದ್ದಲ್ಲಿ ಆ ವರುಷದ ಅವನ ಪ್ರೋಟಿಗಿಯಿಂದ ಉತ್ತಾ
ರಹಾಕಿಕೊಳ್ಳಬೇಕು.

II.

ಸರ್ಕಾರಿ ಹುದ್ದೇದಾರರು, ತಮ್ಮ ಕ್ಳಿಗೆ ಅರ್ಜೀದಾರರು ಗುಜರಾಯಿಸಿಕೊಳ್ಳುವ ಅರ್ಜಿಗಳ ಮೇಲೆ, ಕೊಡುವ ಹುಕುಂಗಳಲ್ಲಿ, ಆಯಾ ಹುಕುಂಗಳು ಹುಟ್ಟುವದಕ್ಕೆ ಕಾರಣಗಳನ್ನು ನಮೂದಿಸದೆ ಇದ್ದಲ್ಲಿ ಸಂಬಂಧಪಟ್ಟ ರಿಕಾರ್ಡು ಇಲ್ಲದೆ ಅವುಗಳನ್ನು ಸರಿಯಾಗಿ ತಿಳಿದುಕೊಳ್ಳುವದು ಸಾಧ್ಯವಾಗಿರುವದಿಲ್ಲವಾದ್ದರಿಂದ ಯಾವ ಕೀಳ್ಪಟ್ಟ ಹುದ್ದೇದಾರರ ರಿಪೋರ್ಟುಗಳ ಮೇಲೆ ಸದರಿ ಹುಕುಂಗಳು ಆಗಿರುತ್ತವೋ ಅಂಥಾ ರಿಪೋರ್ಟುಗಳ ಕಾಪಿಗಳನ್ನೂ ಅರ್ಜೀದಾರರು ಅಪೇಕ್ಷಿಸಿದಲ್ಲಿ ಕೊಡುವಂತೆ ಅಪ್ಪಣೆಯಾಗಬೇಕೆಂತ ೧೯೦೯ನೆ ಇಸವಿ ದಸರಾ ಪ್ರಜಾಪ್ರತಿನಿಧಿ ಸಭೆಯಲ್ಲಿ ಕೆಲವರು ಮೆಂಬರುಗಳು ಕೇಳಿಕೊಂಡಿದ್ದರಮೇಲೆ ಸರ್ಕಾರದವರು ಅಪ್ಪಣೆ ಕೊಟ್ಟಿರುವದೇನಂದರೆ:—

ನಂ. ಆರ್. ೭೦೧-೪೨—ಎಲ್. ಆರ್. ೫೦೦-೦೯-೧. ತಾ|| ೬.೮-೧೯೧೦.

ಸನ್ ೧೯೦೪ನೆ ಇಸವಿ ಜುಲೈ ಮಾಹೆ ೧೬ನೆ ತಾರೀಖಿನಲ್ಲಿ ಸಾದರಾದ ಆರ್. ೨೬೭-೭೬—ಆರ್. ಎಸ್. ೬೬-೦೪-೧ನೆ ಪ್ರೊಸೀಡಿಂಗ್ಸಿನಲ್ಲಿ ಸರ್ಕಾರಿ ಹುದ್ದೇದಾರರು ಅರ್ಜೀದಾರರಿಗೆ ಕೊಡತಕ್ಕ ಹುಕುಂಗಳು ಸಹೇತುಕಗಳಾಗಿಯೂ ಸ್ಪಷ್ಟನಾಗಿಯೂ ಇರತಕ್ಕದ್ದೆಂದು ಅಪ್ಪಣೆಯಾಗಿರುತ್ತಷ್ಟೆ. ಇನ್ನು ಮುಂದೆ ಹುದ್ದೇದಾರರು ಕೊಡತಕ್ಕ ತೀರ್ಮಾನ ಹುಕುಂಗಳಲ್ಲಿ ಅವುಗಳಿಗೆ ಸಂಬಂಧಪಟ್ಟ ವಿದ್ಯಮಾನಗಳು ಮತ್ತು ಕಾರಣಗಳು ಇವೆರಡನ್ನು ನಮೂದಿಸಬೇಕು. ಹುದ್ದೇದಾರರು ಕೊಡೋಣಾಗುವ ಹುಕುಮುಗಳಲ್ಲಿ ಹೀಗೆ ಕಾರಣಗಳು ನಮೂದಿಲ್ಲದೆ ಇದ್ದರೆ ಸದರಿ ಹುಕುಮುಗಳಿಗೆ ಆಧಾರಭೂತಗಳಾದ ಕೀಳ್ಪಟ್ಟ ಆಫೀಸರುಗಳ ರಿಪೋರ್ಟುಗಳ ಕಾಪಿಗಳನ್ನಾಗಲಿ ಅಥವ ಸದರಿ ರಿಪೋರ್ಟುಗಳ ಅವಶ್ಯಕವಾದ ಭಾಗಗಳ ಕಾಪಿಗಳನ್ನಾಗಲಿ ಅರ್ಜೀದಾರರು ಕೇಳಿಕೊಂಡರೆ ಕೊಡಬೇಕು.

Notifications.

ಇಸ್ತಿಹಾರ್‌ನಾಮೆಗಳು.

ನಂ. ೨೫೮೬. ತಾ|| ೨೬—೮—೧೯೧೦.

ಮೈಸೂರು ಸರ್ವಿಸ್ ರೆಗ್ಯುಲೇಷನ್ಸ ೧೭೭ನೆ ಪ್ರಕರಣದ ಮೇರೆ

ನಗರದ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮೆ|| ಯಂ. ರಾಮಚಂದ್ರರಾ
ಯರಿಗೆ ಸೆಪ್ಟಂಬರು ೧ನೆ ತಾರೀಖು ಲಾಗಾಯಿತು ಅಥವ ಅವರು ಉಪ
ಯೋಗಿಸಿಕೊಳ್ಳುವ ತಾರೀಖು ಲಾಗಾಯಿತು ೧ ತಿಂಗಳ ಪ್ರಿವಿಲೇಜ್ ರಜಾ
ಮಂಜೂರ್ಮಾಡಿರುತ್ತೆ.

೧೯೧೦ನೆ ಇಸವಿ ಆಗಸ್ಟ್ ೬ನೆ ತಾರೀಖಿನ ೮೮೪—ಎಲ್. ಆರ್
೩೦-೧೦-೨ನೆ ನಂಬರಿನಲ್ಲಿ ತಾಲ್ಲೂಕ್ ಶಿರಸ್ತೇದಾರ್ ಡಿ. ಲಕ್ಷ್ಮಣರಾಯ
ರನ್ನು ಆಕ್ಟಿಂಗ್ ಅಮಲ್ದಾರ್ ಮತ್ತು ೩ನೆ ಕ್ಲಾಸ್ ಮ್ಯಾಜಿಸ್ಟ್ರೇಟನ್ನಾ
ಗಿ ಮೊಕರರೂರು ಮಾಡಿರುವದ್ದರಿಂದ ಇವರೇ ಸದರೀ ತಾಲ್ಲೂಕು ಛಾರ್ಜ್
ನಲ್ಲಿರತಕ್ಕದ್ದು.

ನಂ. ೨೪೯೩. ತಾ|| ೧೭—೮—೧೯೧೦.

ಗುಬ್ಬಿ ತಾ|| ಅಮಲ್ದಾರ್ ಮೆ|| ಯಂ. ಸದಾಶಿವರಾಯರಿಗೆ ಕಳೆದ
೬ನೆ ತಾರೀಖಿನ ೩೪೬ನೆ ನಂಬರ್ ಇಸ್ತಿಹಾರ್‌ನಲ್ಲಿ ಕೊಟ್ಟಿದ್ದ ೧೫ ದಿನಗಳ
ಪ್ರಿವಿಲೇಜ್ ರಜಾ ಪೈಕಿ ೧೪ ದಿನಗಳು ಮಾತ್ರ ಉಪಯೋಗಿಸಿಕೊಂಡ
ದ್ದರಿಂದ ಬಾಕಿ ೧ ದಿನವನ್ನು ರದ್ದು ಮಾಡಿರುತ್ತೆ.

ಚಾಲ್ತಿ ಸಾಲ್ ಜುಲೈ ಮಾಹೆ ೧೫ನೆ ತಾರೀಖಿನ ರೆವಿನ್ಯೂ ಮತ್ತು
ವ್ಯವಸಾಯದ ಗೆಜೆಟ್ಟಿನಲ್ಲಿ ಸೋಯಾ ಅವರೆಯನ್ನು ಬೆಳೆಸು ಅಜಮಾ
ಯಿಷಿ ಮಾಡಬೇಕೆಂದು ಕುತೂಹಲವುಳ್ಳವರು ಬೆಂಗಳೂರಿನಲ್ಲಿರುವ ಸ
ಸ್ಥಾನದ ತೋಟಗಳ ಸೂಪರಿಂಟೆಂಡೆಂಟರೂ ಮತ್ತು ವನಸ್ಪತಿ ರಾಜನೀ
ತಿಜ್ಞರೂ ಆದ ಮೆ|| ಕ್ರುಂಬೀಗಲ್‌ರವರಿಗೆ ಬರೆದು ಬೀಜವನ್ನು ತರಿಸಿಕೊ
ಳ್ಳಬಹುದೆಂದು ಪ್ರಕಟಿಸಲ್ಪಟ್ಟಿತ್ತಷ್ಟೆ. ಈಚೆಗೆ ಮೆ|| ಕ್ರುಂಬೀಗಲ್‌ರ
ವರು ತಮ್ಮಲ್ಲಿ ಕೊಂಚ ಸೋಯಾ ಅವರೆ ಬೀಜವು ರೈತರಿಗೆ ಸರಬರಾಯಿ
ಮಾಡಲೋಸುಗ ಉಳಿದಿರುತ್ತೆಂತಲೂ, ಬೇಕಾದವರು ತಮ್ಮಲ್ಲಿಗೆ ಅರ್ಜಿ
ಬರೆದುಕೊಂಡಲ್ಲಿ ಪೌಂಡು ಒಂದಕ್ಕೆ ಒಂದು ರೂಪಾಯಿಯಂತೆ ವಿಕರಿಗ
ಸಿದ್ಧಪಡಿಸಿರುತ್ತಾರೆಂತಲೂ ತಿಳಿಸಿರುತ್ತಾರೆ.

Occasional Notes.

ವಿವಿಧ ವೃತ್ತಾಂತಗಳು.

೧ ಇಂಡಿಯಾ ಸರ್ಕಾರದ ಹತ್ತಿ ವ್ಯವಸಾಯ ಪರಿಶೋಧಕರಾದ ಮಿ|| ಗ್ಯಾಮ್ಮಿಯವರು ನವ್ಸ್ರಿ ಸಂಸ್ಥಾನದಲ್ಲಿ ಈಜಿಪ್ಟ ದೇಶದ ಹತ್ತಿ ಬೀಜವನ್ನು ಬಿತ್ತಿ ಬೆಳಿಸುವ ವಿಷಯವಾಗಿ ಅಭಿಪ್ರಾಯಪಟ್ಟಿರುವದೇನಂದರೆ:- ಮೈಸೂರು ದೇಶದಲ್ಲಿ ಈಜಿಪ್ಟ ದೇಶದ ಹತ್ತಿ ಬೀಜವನ್ನು ಬಿತ್ತಿ ಬೆಳೆಸುವದು ಯುಕ್ತವಾಗಿ ಕಾಣುವದಿಲ್ಲ. ಏಕಂದರೆ, ಸಂಸ್ಥಾನದ ವಿದ್ಯಮಾನಗಳು ಸದರಿ ಜಾತಿ ಹತ್ತಿಯ ಬೆಳವಳಿಕೆಗೆ ಅನುಕೂಲವಾಗಿಲ್ಲ. ಪ್ರಾಯಶಃ ಕಾಂಬೋಡಿಯಾ, ಭೂರಿ, ಅಥವಾ ಬೌರ್ಬನ್ ಜಾತಿಗಳನ್ನು ಬೆಳಿಸ ಯತ್ನಿಸಿದರೆ ಸಾರ್ಥಕವಾಗಬಹುದು.

———o———

೨. ಕಳೆದ ಏಪ್ರಿಲ್ ಮಾಹೆಯಲ್ಲಿ ಚಿತ್ರದುರ್ಗ ಡಿಸ್ಟ್ರಿಕ್ಟ್ ಹರಿಹರದಲ್ಲಿ ನಡೆದ ಶ್ರೀ ಸಂಗಮೇಶ್ವರಸ್ವಾಮಿಯ ಜಾತ್ರೆ ಕಾಲದಲ್ಲಿ ಒಂದು ಭಾರಿ ವ್ಯವಸಾಯ ಕೈಗಾರಿಕೆ ಮತ್ತು ದನಗಳ ಪ್ರದರ್ಶನವನ್ನು ಜರುಗಿಸಿದರು. ಪ್ರದರ್ಶನಕಾಲಕ್ಕೆ ಸರಿಯಾಗಿ ಹಜರತ್ ರೆವಿನ್ಯೂ ಕಮಿಷನರವರೂ ದಯಮಾಡಿದ್ದದ್ದು ಅಲ್ಲದೆ ರೈತಾಬಿ ಜನರಿಗೆ ಉಪಯುಕ್ತವಾಗಿರುವಂತೆಯೂ, ಅವರನ್ನು ಪ್ರೋತ್ಸಾಹಪಡಿಸುವಂತೆಯೂ ಉಪನ್ಯಾಸವನ್ನು ಕೊಟ್ಟರು. ಸಾಧಾರಣವಾಗಿ ೬,೬೦೦ ಜಾನುವಾರು ಪ್ರದರ್ಶನದಬಗ್ಗೆ ತರಲ್ಪಟ್ಟಿತ್ತು. ಪ್ರದರ್ಶನವನ್ನು ನೋಡುವದಕ್ಕೆ ಸುಮಾರು ೨೦,೦೦೦ ಮಂದಿ ಬಂದಿದ್ದರು. ಪ್ರದರ್ಶನದ ಕಮಿಟಿಯಲ್ಲಿದ್ದ ಖಾಸಗಿ ದೊಡ್ಡ ಮನುಷ್ಯರು ವಿಶೇಷ ಉತ್ಸಾಹವನ್ನು ತೋರಿಸಿ ಸದರಿ ಮಹೋತ್ಸವವನ್ನು ಬಹಳ ವಿಜೃಂಭಣೆಯಿಂದ ಜರುಗಿಸಿರುವದರಿಂದ ಬಹಳ ಸ್ತೋತ್ರಾರ್ಹರಾಗಿರುತ್ತಾರೆ.

———o———

೩. ಬೊಂಬಾಯಿಯಾಧಿಪತ್ಯದ ದೋಹದ್ದೆಂಬ ಊರಲ್ಲಿ ಒಂದು ತಾಕಿಗೆ ನವಣೆ ಚೆಲ್ಲಿತ್ತು. ಪೈರು ಜುಲೈ ಆಗಸ್ಟ್ ತಿಂಗಳುಗಳಲ್ಲಿ ಆದ ಅತಿವೃಷ್ಟಿಯಿಂದ ಶುದ್ಧಾಂಗವಾಗಿ ಕೆಟ್ಟುಹೋದ್ದರಿಂದ ಸೆಪ್ಟಂಬರು ತಿಂಗಳಲ್ಲಿ ಅದನ್ನೆಲ್ಲಾ ಕಿತ್ತುಹಾಕಿ ಜಮೀನು ಖುಲಾಸೆ ಆದಕೂಡಲೇ ನೇಗಲಿನಿಂದ ಉತ್ತುಬಿಟ್ಟಿತು. ತರುವಾಯ ಆಗಿಂದಾಗ್ಯೆ ಕಳೆ ತೆಗದು ಹೆಂಟೆ ಹೊಡದು ಜಮೀನನ್ನು ಸಾಗುವಳಿಗೆ ಸಿದ್ಧಪಡಿಸಿದ್ದಲ್ಲದೆ ಅನೇಕವೇಳೆ ನೇಗಲು ಹೊಡ

ದು ಮೇಲ್ಮಣ್ಣು ಚನ್ನಾಗಿ ಬಿಸಲಿನಿಂದ ಕಾಯುವಂತೆ ಮಾಡಿದ್ದರಿಂದ ಜ
ಮೀನು ಬಹಳ ಹಸನಾಯಿತು. ಆವೇಳೆ ಅಕ್ಟೋಬರು ಅಂತ್ಯಭಾಗದ
ಲ್ಲಿ ಜಮೀನಿಗೆಲ್ಲಾ ಹುರುಳಿಯನ್ನು ಚಲ್ಲಿಸಿತು. ಮಳೆಯು ಸೆಪ್ಟೆಂಬ
ಲ್ಲಿ ಮಾತ್ರ ೬೩ ಸೆಂಟು ಆಗಿದ್ದದ್ದು ಆವೇಳೆ ಬರಲೇಯಿಲ್ಲ. ಆದರೂ ಎಕ
ರೆ ಒಂದಕ್ಕೆ ೨೧೮೫ ಪೌಂಡಿನಂತೆ ಫಸಲು ಬಂತು. ಪೈರಿಗೆ ಎಥೇಚ್ಛ
ವಾಗಿ ಮಳೆಯು ಒದಗದೆ ಇದ್ದರೂ, ಜಮೀನಿಗೆ ಅನೇಕ ವರುಷಗಳಿಂದ
ಗೊಬ್ಬರವನ್ನು ಹಾಕದಿದ್ದರೂ, ಬಿದ್ದ ಅಲ್ಪಸ್ವಲ್ಪ ಮಳೆಯು ಜಮೀನಿನಲ್ಲಿ
ನಿಂತು ತಂಗುವ ಹಾಗೆ ಮಾಡಿದ್ದರಿಂದಲೇನೆ ಹೀಗೆ ಒಳ್ಳೆ ಫಸಲು ಬಂತೆಂದು
ತಿಳಿದುಕೊಳ್ಳಬೇಕು.—(ಬೊಂಬಾಯಿ ವ್ಯವಸಾಯ ಇಲಾಖೆ ೧೯೦೮—೦೯ನೆ
ಸಾಲ್ ರಿಪೋರ್ಟು.)

———o———

೪. ಸಂಸ್ಥಾನದ ೧೯೦೮-೦೯ನೆ ಸಾಲಿನ ವ್ಯವಸಾಯಕ ಬಾಬುವಾರ್ ತ
ಖ್ತೆಗಳನ್ನು ಹಿಂದಿನ ಮಾಹೆ ೪ನೆ ತಾರೀಖಿನ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಸಿ
ದ್ಧಪಡಿಸಿರುತ್ತೆ. ಈ ತಖ್ತೆಗಳಿಂದ ಸಂಸ್ಥಾನದಲ್ಲಿ ಒಟ್ಟು ೧೯,೦೦೦,೦೦೦
ಎಕರೆ ಜಮೀನಿರುವಂತೆ ಗೊತ್ತಾಗುತ್ತೆ. ಇದರ ಪೈಕಿ ಸುಮಾರು
೧,೩೩೦,೦೦೦ ಎಕರೆಗಳು ಇನಾಂ ಮತ್ತು ಜಹಗೀರುಗಳಿಗೆ ಸೇರಿದೆ. ಸದ
ರಿ ಸಾಲಿನಲ್ಲಿ ೨೦,೦೨,೦೦೦ ಎಕರೆ ಫಾರೆಸ್ಟುಗಳಾಗಿ ಏರ್ಪಟ್ಟಿತು.
೪೮,೫೬,೦೦೦ ಎಕರೆಗಳನ್ನು ಗೋಮಾಳ ಮತ್ತು ಹುಲ್ಲುಬನ್ನಿಗೋಸ್ಕರ
ಬಿಟ್ಟಿತ್ತು. ೮೫,೦೦,೦೦೦ ಎಕರೆಗಳು ವ್ಯವಸಾಯಕ್ಕೆ ಲಾಯಖಾಗಿದ್ದ
ರೂ ಸುಮಾರು ೭೩,೩೦,೦೦೦ ಎಕರೆಗಳು ಮಾತ್ರ ಸಾಗುವಳಿಯಲ್ಲಿದ್ದ
ಬಾಕಿ ೧೨೫೦೦೦ ಎಕರೆಗಳು ಬಂಜರಾಗಿದ್ದವು.

ಸದರಿ ತಖ್ತೆಗಳಲ್ಲಿ ಬೇರೆಬೇರೆ ಬೆಳೆಗಳ ಸಾಗುವಳಿ ವಿಸ್ತೀರ್ಣ,
ಇವುಗಳಲ್ಲಿ ಮುಖ್ಯವಾದವುಗಳ ಹುಟ್ಟುವಳಿ, ಮುಖ್ಯ ಆಹಾರಪದಾರ್ಥಗ
ಳ ಧಾರಣೆವಾಸಿಗಳು, ರೈತವಾರಿ ಹಿಡುವಳಿ ಜಮೀನುಗಳ ಸಂಖೆ, ಜಮೀ
ನುಗಳ ವರ್ಗಾವರ್ಗಿಗಳ ಸಂಖೆ ಮತ್ತು ಅವುಗಳ ವಿಸ್ತೀರ್ಣ, ಕಾಫೀ
ಫಸಲಿನ ಸಾಗುವಳಿ ವಿಸ್ತೀರ್ಣ ಮತ್ತು ಹುಟ್ಟುವಳಿ, ಸದರಿ ವರುಷದಲ್ಲಿ
ಆದ ಮಳೆ ಮೊದಲಾದ ಸಂಗತಿಗಳನ್ನೆಲ್ಲಾ ತಿಳಿಸುವ ಲೆಖ್ಖಗಳಡಗಿರುವವು.

V. B. S. & SONS, BANGALORE.—1910.

THE MYSORE

REVENUE & AGRICULTURAL GAZETTE.

ವಾಲ್ಯೂಂ ೪.] ಗುರುವಾರ, ೧೫ನೆ ಸೆಪ್ಟೆಂಬರ್ ೧೯೧೦. [ನಂ. ೨೨.

Contents.

1. Co-operative Societies in Rural Parts.
2. The Mulch.
3. The Ground-nut Crop.
4. The Signs of Coming Rains.
5. Trial of an American Plough by a Mysore Ryot.
6. Stone-Roller Thresher.
7. Government Orders.
8. Revenue Appeal.
9. Notifications.
10. Occasional Notes.
    (i) Starting of certain Co-operative Societies.

ಅನುಕ್ರಮಣಿಕೆ.

೧. ಪರಸ್ಪರ ಸಹಾಯ ಸಂಘಗಳ ಅವಶ್ಯಕತೆ ಮತ್ತು ಅವುಗಳನ್ನು ಗ್ರಾಮಾಂತರಗಳಲ್ಲಿ ಸ್ಥಾಪಿಸುವದಕ್ಕೆ ಕೆಲವು ಸಲಹೆಗಳು.
೨. ಗಿಡ ವೃಕ್ಷಗಳ ಬೇರುಗಳನ್ನು ಸಂರಕ್ಷಿಸುವ ವಿಧಾನ.
೩. ನೆಲಗಡ್ಲೆ ಫಸಲು.
೪. ಮಳೆ ಬರುವಿಕೆಯ ಲಕ್ಷಣಗಳು.
೫. ಸೀಮೆ ನೇಗಲಿನಿಂದ ಕೆಲಸ ಮಾಡಿಸಿದ ಒಬ್ಬ ಸಂಸ್ಥಾನದ ಜಮೀನ್ದಾರನ ಅನುಭವಗಳು.
೬. ಕಲ್ಲು ಗುಂಡನ್ನು ಅರಿಯ ಮೇಲೆ ಉರುಳಿಸುವದರಿಂದ ಕಾಳು ಬಿಡಿಸಿಕೊಳ್ಳುವಿಕೆ.
೭. ಸರ್ಕಾರಿ ಹುಕುಂಗಳು.
೮. ರೆವಿನ್ಯೂ ಅಪೀಲು.
೯. ಇಷ್ತಿಹಾರುನಾಮೆಗಳು.
೧೦. ವಿವಿಧ ವಿಷಯಗಳು.
    (i) ಕೆಲವು ಪರಸ್ಪರ ಸಹಾಯ ಸಂಘಗಳ ಸ್ಥಾಪನೆ.

Co-operative Societies in Rural Parts.

ಗ್ರಾಮಾಂತರಗಳಲ್ಲಿ ಪರಸ್ಪರ ಸಹಾಯ ಸಂಘಗಳನ್ನು ಏರ್ಪಡಿಸಲು ತಿಳಿಯಬೇಕಾದ ಕೆಲವು ವಿಷಯಗಳು.

ಮೈಸೂರು ಸಂಸ್ಥಾನದ ಪರಸ್ಪರ ಸಹಾಯ ಸಂಘಗಳ ರಿಜಿಸ್ಟ್ರಾರವರು ಗ್ರಾಮಾಂತರಗಳಲ್ಲಿ ಸದರಿ ಸಂಘಗಳನ್ನು ಏರ್ಪಡಿಸುವ ವಿಷಯವಾಗಿ ಕೆಳಗೆ ಕಂಡರೀತಿ ಬರೆದು ಪ್ರಕಟಿಸಿರುತ್ತಾರೆ:—

೧. ಪರಸ್ಪರ ಸಹಾಯವು ಜನರ ಜೀವನೋಪಾಯಕ್ಕೆ ಹೆಚ್ಚಾಗಿ ಅನ್ವಯಿಸತಕ್ಕ ವಿಷಯವಾಗಿದೆ. ಪರೋಪಕಾರ ದೃಷ್ಟಿಯಿಂದಲೇ ಸ್ವಪ್ರಯೋಜನವೇನೂ ಇಲ್ಲದೆ ನಡೆಯತಕ್ಕ ವಿಷಯವಲ್ಲ. ಕೃಷಿ ಮತ್ತು ಕೈಗಾರಿಕೆ ಕೆಲಸ ಮಾಡುವವರು ತಮ್ಮ ತಮ್ಮ ಉದ್ಯೋಗಗಳನ್ನು ನಿರ್ವಿಘ್ನವಾಗಿ ನಡೆಸಿಕೊಂಡು ಹೋಗಲು ಅನೇಕ ಪ್ರತಿಬಂಧಕಗಳು ಅವರನ್ನು ಬಾಧಿಸುತ್ತವೆ. ರೈತಾಬಿ ಜನಗಳಂತೂ ಕೇವಲ ದುರ್ದಶೆಯಲ್ಲಿದ್ದುಕೊಂಡು ಕಷ್ಟಪಟ್ಟು ಕೆಲಸ ಮಾಡಿದಾಗ್ಯೂ ತಮ್ಮಗಳ ದಿಕ್ಕಾವಸ್ಥೆಯನ್ನು ಅಣಗಿಸಲು ಅಶಕ್ತರಾಗಿರುವರು. ಹೊಸ ಜಮೀನು, ದಾಸು, ನೇಗಿಲು, ಬೀಜ, ಗೊಬ್ಬರ ಮುಂತಾದ ಸಾಮಾನುಗಳನ್ನು ಕೊಂಡುಕೊಳ್ಳುವುದಕ್ಕೂ ಮತ್ತು ಹಾಳಿ ಇರುವ ಜಮೀನುಗಳನ್ನು ಅಬಾದು ಮಾಡುವುದಕ್ಕೂ ಪ್ರತಿಯೊಬ್ಬ ರೈತನಿಗೂ ದ್ರವ್ಯ ಸಹಾಯ ಬೇಕಾಗಿರುತ್ತದೆಂಬ ಭಾಗವನ್ನು ನಾವು ಹೆಚ್ಚಾಗಿ ಹೇಳಬೇಕಾದ್ದು ಪ್ರಕೃತವಿಲ್ಲ. ಸುಗ್ಗೀ ಕಾಲದಲ್ಲಿ ವಿನಹಾ ಮಿಕ್ಕ ಕಾಲಗಳಲ್ಲಿ ರೈತರ ಬಳಿಯಲ್ಲಿ ಸಾಧಾರಣವಾಗಿ ಹಣವು ಹಾಜರಿಲ್ಲದಿರುವುದು ಸಕಲರಿಗೂ ವೇದ್ಯವೇ ಇದೆ. ಮೇಲ್ಕಂಡ ಉದ್ದೇಶ್ಯಗಳಿಗಾಗಿ ದುಬಾರಿ ಬಡ್ಡೀ ಮೇಲೆ ಹಣವನ್ನು ಸಾಲವಾಗಿ ತೆಗೆದು ಕಾರ್ಯಾನಂತರ ದೇಹಶ್ರಮಪಟ್ಟು ಸಂಪಾದಿಸಿದ ಹಣದಿಂದ ಬಡ್ಡಿ ಕೊಟ್ಟು ಸಾಲ ತೀರಿಸುವುದಕ್ಕೆ ಅನುಕೂಲವಿಲ್ಲದೆಯೂ ಮತ್ತು ಜೀವನಕ್ಕೆ ಮಾರ್ಗವಿಲ್ಲದೆಯೂ ಕಷ್ಟಪಡುತ್ತಾರೆ. ಹೀಗೆ ಹೊರಗಿನಿಂದ ಸಾಲ ತರುವುದಕ್ಕೆ ಬದಲಾಗಿ ಒಂದು ಗ್ರಾಮದಲ್ಲಿ ಮುಖ್ಯರಾದ ಜನಗಳು ಒಗ್ಗಟ್ಟಾಗಿ ಸೇರಿ ಮೂಲ ಧನವನ್ನು ಜೊತೆಗೂಡಿಸಿ ತಮ್ಮ ನೆರೆಹೊರೆ

ಯುವರಿಗೆ ಸುಲಭ ಬಡ್ಡಿಮೇಲೆ ಬೇಕಾದ ಸಾಲಗಳನ್ನು ಕೊಡುವುದರ ಮೂಲಕ ಲೇವಾದೇವಿ ನಡೆಸಿ ತಾವು ತಾವುಗಳೇ ಪರಸ್ಪರ ಸಹಾಯ ಮಾಡಿಕೊಳ್ಳುವಂತೆ ಒಂದು ಪರಸ್ಪರ ಸಹಾಯ ಸಂಘವನ್ನು ಏರ್ಪಡಿಸಿಕೊಂಡು ತಮ್ಮ ಕೆಲಸ ಕಾರ್ಯಗಳನ್ನು ಸುಲಭೋಪಾಯದಲ್ಲಿ ನಡೆಸಿಕೊಂಡಲ್ಲಿ ಸ್ವಲ್ಪಮಟ್ಟಿಗಾದರೂ ಅನುಕೂಲ ಉಂಟಾಗುತ್ತೆಂಬ ಭಾಗದಲ್ಲಿ ಸಂಶಯವಿಲ್ಲ. ಈ ತರಹ ಪರೋಪಕಾರಿಗಳಾದ ದೊಡ್ಡ ಮನುಷ್ಯರುಗಳಿಗೆ ಸಂಘಗಳನ್ನು ಏರ್ಪಡಿಸಲು ಸಹಕಾರಿಯಾಗಿರುವಂತೆ ಕೆಲವು ವಿಷಯಗಳು ಈ ಕೆಳಗೆ ವಿವರಿಸಲ್ಪಟ್ಟಿರುತ್ತವೆ.

ಸ್ಥಳ.

೧. ಸಮೀಪದಲ್ಲಿರತಕ್ಕ ಗ್ರಾಮಗಳನ್ನು ಮಾತ್ರ ಸಂಘಕ್ಕೆ ಸೇರಿಸಬೇಕು. ದೂರದಲ್ಲಿರತಕ್ಕ ಗ್ರಾಮಗಳನ್ನು ಸಂಘಕ್ಕೆ ಸೇರಿಸಿಕೊಳ್ಳೋಣದರಿಂದ ಸಂಘದ ಉದ್ದೇಶ್ಯವನ್ನು ಚೆನ್ನಾಗಿ ನೆರವೇರಿಸಲು ಆಗುವದಿಲ್ಲ. ಅವಶ್ಯಕವಿದ್ದರೆ ಪ್ರತಿ ಒಂದು ಗ್ರಾಮದಲ್ಲಿಯೂ ಒಂದೊಂದು ಸಂಘವನ್ನು ಏರ್ಪಡಿಸುವುದರಿಂದ ಬಾಧಕವೇನೂ ಕಾಣಬರುವದಿಲ್ಲ.

ಕಾರ್ಯದರ್ಶಿ.

೨. ಸಂಘವನ್ನು ಏರ್ಪಡಿಸಬೇಕೆಂದಿರುವ ಗ್ರಾಮದಲ್ಲಿ ಕನಿಷ್ಠ ಪಕ್ಷ ಅಕ್ಷರಸ್ಥರೊಬ್ಬರಾದರೂ ಇದ್ದೇ ತೀರಬೇಕು. ಸಂಘದ ಲೆಖ್ಖ ಪತ್ರಗಳನ್ನು ಬರಿಯಲು ಅಂಥವರ ಸಹಾಯವು ಅತ್ಯವಶ್ಯಕ. ಅಕ್ಷರಸ್ಥರಿಲ್ಲದ ಗ್ರಾಮಗಳಲ್ಲಿ ಸಂಘಗಳನ್ನು ಏರ್ಪಡಿಸುವುದರಿಂದ ಪ್ರಯೋಜನವೇನೂ ತೋರಿಬರುವದಿಲ್ಲ. ಇಂತಿಮಾದ ಸಂದರ್ಭಗಳಲ್ಲಿ ಮಟ್ಟಿಗೆ ರುಸುಮ್ಮಿಗೆ ಗುಮಾಸ್ತರೊಬ್ಬರನ್ನು ಸಂಘದಲ್ಲಿಟ್ಟು ಕೆಲಸ ಕಾರ್ಯಗಳನ್ನು ನಡೆಸಬಹುದು. ಯಾವಾಗಲೂ ನಂಬಿಕಸ್ಥರಾದ ಮನುಷ್ಯರನ್ನೇ ಸೆಕ್ರೆಟರಿ ಯಾ ಕಾರ್ಯದರ್ಶಿಯಾಗಿ ಚುನಾಯಿಸಬೇಕು.

ಪರಿಮಿತಿಯಿಲ್ಲದ ಜವಾಬ್ದಾರಿ.

೩. ಗ್ರಾಮಾಂತರಗಳಲ್ಲಿ ಸ್ಥಾಪಿಸಲ್ಪಡುವ ಸಂಘಗಳು „ಪರಿಮಿತಿ ಇಲ್ಲದ ಜವಾಬ್ದಾರಿ" ಯನ್ನು ವಹಿಸಿಕೊಳ್ಳುವುದು ಲೇಸು ಅಂದರೆ ಸಂಘದ ಹೆಸರಿನಲ್ಲಿ ಹೊರಗಿನಿಂದ ತರತಕ್ಕ ಸಾಲಕ್ಕೆ ಮೆಂಬರುಗಳೆಲ್ಲರೂ ಜಂಟಿಯಾಗಿಯೂ,

ಪ್ರತ್ಯೇಕ ಪ್ರತ್ಯೇಕವಾಗಿಯೂ ಜವಾಬ್ದಾರರಾಗಿರತಕ್ಕದ್ದೆಂದು ತಿಳಿದು ಕೊಳ್ಳಬೇಕು. ಪರಿಮಿತಿ ಇಲ್ಲದ ಜವಾಬ್ದಾರಿ ಎಂದರೆನೆಂಬುದನ್ನು ರೈತರುಗಳಿಗೆ ಚೆನ್ನಾಗಿ ತಿಳಿಸಬೇಕಾದದ್ದು ಅವಶ್ಯಕವಾಗಿರುತ್ತೆ. ಸದರಿ ಜವಾಬ್ದಾರಿಯನ್ನು ವಹಿಸಿಕೊಳ್ಳೋಣದರಿಂದ ಸಂಘಕ್ಕೆ ಅನೇಕ ಅನುಕೂಲಗಳುಂಟು. ಹೊರಗಿನಿಂದ ಸುಲಭವಾಗಿ ಸಾಲವನ್ನು ತರಬಹುದು. ಸಂಘಕ್ಕೆ ಹೊಸ ಮೆಂಬರುಗಳನ್ನು ಸೇರಿಸಿಕೊಳ್ಳುವುದರಲ್ಲಿಯೂ ಮತ್ತು ಸಂಘದಿಂದ ಮೆಂಬರುಗಳಿಗೆ ಸಾಲಗಳನ್ನು ಕೊಡುವುದರಲ್ಲಿಯೂ ಕೇವಲ ಹುಷಾರಿಯಿಂದ ನಡೆಸುಕೊಳ್ಳಬೇಕೆಂಬ ಭಯವೂ, ಮೆಂಬರುಗಳಲ್ಲಿ ಪರಸ್ಪರ ಸಹಾಯವೂ ಮತ್ತು ನಂಬಿಕೆ ಇಡಬೇಕೆಂಬ ಅಭಿಲಾಷೆಯೂ, ಎಲ್ಲರ ಮನಸ್ಸಿನಲ್ಲಿಯೂ ಅಂಕುರಿಸುತ್ತದೆ. ಸಂಘದ ಸಾಲವು ಮೆಂಬರುಗಳ ಜಮೀನುಗಳ ಖಾತರಿಮೇಲೆ ತರಲ್ಪಡುತ್ತಾದ್ದರಿಂದ ಗಂಟಿಗೇನೂ ಮೋಸವಿಲ್ಲ. ಅಲ್ಲದೆ ಆಗಾಗ್ಯೆ ಇಲಾಖಾ ಮಾರಿಫತ್ತು ಸಂಘದ ಲೇಣೇ ದೇಣಿ ಅಜಮಾಯಿಷಿ ಆಗುತ್ತಾ ಇರುತ್ತೆ. ಮಿತವಾದ ಜವಾಬ್ದಾರಿಯನ್ನು ವಹಿಸಿಕೊಂಡಿರುವ ಸಂಘಕ್ಕಿಂತಲೂ ಪರಿಮಿತಿ ಇಲ್ಲದ ಜವಾಬ್ದಾರಿಯನ್ನು ವಹಿಸಿಕೊಳ್ಳುವ ಸಂಘದ ಮೆಂಬರುಗಳಲ್ಲಿ ಅನ್ಯೋನ್ಯ ಅನುರಾಗವು ಹೆಚ್ಚಿ ಸ್ವಾರ್ಥತೆಬಿಟ್ಟು ಎಲ್ಲರ ಪ್ರಯೋಜನಕ್ಕಾಗಿಯೂ ಐಕಮತ್ಯದಿಂದ ಮೆಂಬರುಗಳೆಲ್ಲರೂ ಸಂಘದ ಕೆಲಸ ಕಾರ್ಯಗಳಲ್ಲಿ ಹೆಚ್ಚಾಗಿ ಪ್ರವರ್ತಿಸಬೇಕು.

(ಸಶೇಷ)

The Mulch. *

ಬೇರುಗಳ ಸಂರಕ್ಷಣೆ.

ಮೋಜಾಂಬಿಕ್ ದೇಶದ ವ್ಯವಸಾಯ ಇಲಾಖಾ ಮೇಸ್ತ್ರೇಸರರಾದ ಮೆ॥ ಬ್ಯಾರೆಟ್ ಎಂಬುವರು ತೆಂಗು ಕಿತ್ತಲೆ ಮೊದಲಾದ ಫಲ ವೃಕ್ಷಗಳನ್ನೂ, ಟೀ ಕಾಫಿ ಮುಂತಾದ ಗಿಡಗಳನ್ನೂ ಹೆಚ್ಚು ಫಲವತ್ತಾಗಿ ಮಾಡುವ ವಿಷಯದಲ್ಲಿ ಈ ಕೆಳಗೆ ಕಂಡರೀತಿ ಹೇಳಿರುತ್ತಾರೆ.

* ಪ್ಲಾಂಟರ್ಸ್ ಕ್ರಾನಿಕಲ್, ೧೭—೮—೧೯.

ಬೇಸಾಯಗಾರನು ಗಿಡ ವೃಕ್ಷಗಳನ್ನು ಬೆಳೆಸುವದರಲ್ಲಿ ಅವುಗಳ ಬೇರುಗಳನ್ನು ಬಿಸಲಿನ ಮತ್ತು ಅನಾವೃಷ್ಟಿಯ ತಾಪದಿಂದ ರಕ್ಷಿಸುವದರಲ್ಲಿ ಸಾಕಾದಮಟ್ಟಿಗೆ ಮುತವರ್ಜಿಯನ್ನು ತೋರಿಸುತ್ತಾ ಇಲ್ಲ. ಸಾಗುವಳಿ ಜಮೀನನ್ನು ಉಳುವದೇ ಮುಂತಾದ ಕೆಲಸಗಳಿಂದ ಹಸನು ಮಾಡಿಕೊಳ್ಳುವದು ಅವಶ್ಯವೇನೋ ಹೌದು. ಆದರೆ ಆ ಮೇಲೆ ಜಮೀನಿನ ಮೇಲ್ ಮಣ್ಣಿನಲ್ಲಿರುವ ಅಣು ಪ್ರಾಣಿಗಳು (Microbes) ಅದರೊಂದಿಗೆ ಕಲತಿರುವ ಅಪಕ್ವವಾದ ಸಸಿಗಿಡ ಪ್ರಾಣಿಸಂಬಂಧ ಪದಾರ್ಥಗಳನ್ನು ಕೊಳೆಯಿಸಿ ಯವಕ್ಷಾರ ಮುಂತಾದ ರಸವರ್ಗಗಳನ್ನಾಗಿ ಮಾಡುವದರಲ್ಲಿಯೂ, ಲೋಹ ಸಂಬಂಧವಾದ ಧಾತುಗಳನ್ನು ತಮ್ಮಿಂದ ವಿಸರ್ಜಿಸಲ್ಪಡುವ ನಂಜು ಮತ್ತು ಮಲಗಳಿಂದ ಮಾರ್ಪಡಿಸಿ ಕರಗಿಸಿ ಸಸ್ಯಾಹಾರವನ್ನಾಗಿ ಮಾಡುವದರಲ್ಲಿಯೂ ಪ್ರವರ್ತಿಸಿದ ಹೊರ್ತು ಬೆಳೆಯೇ ಆಗುವದಿಲ್ಲ. ಹೀಗೆ ಅಣು ಪ್ರಾಣಿಗಳು ತಮ್ಮ ಕೆಲಸವನ್ನು ನಿರುಪಾಧಿಕವಾಗಿ ನಡೆಸುವದಕ್ಕೂ, ಜಮೀನಿನ ಮೇಲ್ಮಣ್ಣು ಶಬ್ಬಿಯಾಗಿಯೂ, ತೇವವುಳ್ಳದ್ದಾಗಿಯೂ, ಸಮಧಾತುವಾಗಿಯೂ ಇರುವದಕ್ಕೂ, ಮೇಲ್ಮಣ್ಣು ಗಾಳಿಯಿಂದ ಒಣಗದೆಯೂ, ಬಿಸಲಿನ ಝಳದಿಂದ ಸುಡದೆಯೂ, ಬೇರುಗಳು ತಮ್ಮ ದ್ರವರೂಪವಾದ ಆಹಾರವನ್ನು ಯಥೇಚ್ಛವಾಗಿ ಗ್ರಹಿಸುವದಕ್ಕೂ ಮತ್ತು ಗಿಡಗಳ ಕೆಳಗೆ ಹುಲ್ಲು ಬೆಳೆದು ಅವುಗಳನ್ನು ಹಾಳುಮಾಡದೆ ಇರುವದಕ್ಕೂ, ರೈತರು ಗಿಡ ವೃಕ್ಷಗಳ ಬೇರುಗಳನ್ನು ಯಾವದಾದರೊಂದು ರೀತಿಯಲ್ಲಿ ಮುಚ್ಚಿ ರಕ್ಷಿಸಬೇಕು. ಬೇರುಗಳನ್ನು ಮುಚ್ಚದೆ ಬೇಸಾಯ ನಡೆಸುವದರಿಂದ ಸಾಧಾರಣವಾಗಿ ಆರರಲ್ಲಿ ಒಂದು ಪಾಲು ಬೆಳೆ ಕೈಹತ್ತದೆ ವ್ಯರ್ಥವಾಗಿ ಹೋಗುತ್ತಾ ಇದೆಯೆಂದು ಹೇಳಬಹುದು.

ಬೇರುಗಳನ್ನು ಮುಚ್ಚುವದು ವಿಶೇಷ ಖರ್ಚಿನ ಅಥವ ಕಷ್ಟದ ಬಾಬಲ್ಲ. ದೂಳಿನಿಂದಾದರೂ ಬೇರುಗಳನ್ನು ಮುಚ್ಚಬಹುದು. ಒಣ ಹುಲ್ಲನ್ನಾಗಲಿ ಅಥವ ಎಲೆ ತರಗುಗಳನ್ನಾಗಲಿ ಗಿಡ ವೃಕ್ಷಗಳ ಬುಡಗಳ ಸುತ್ತಲೂ ಕಂಬಳಿಯಂತೆ ಹರಡಿದರೆ ವಿಶೇಷ ಆದೀಕ ಉಂಟಾಗುವದು. ಭೂಮಿಯಲ್ಲಿ ಯವಕ್ಷಾರಗಳನ್ನು ಉಂಟುಮಾಡಿ ತ್ಯಾವವನ್ನು ನಿಲ್ಲಿಸಿ ಬೇರುಗಳನ್ನು ರಕ್ಷಿಸಬಲ್ಲ ಹುರುಳಿ ನೆಲಗಡ್ಲೆ ಮೊದಲಾದ ಶಿಂಬಿ ಧಾನ್ಯಗ

ಳ ಪೈರನ್ನು ಗಿಡ ವೃಕ್ಷಗಳ ಮರಿಗಳಲ್ಲಿ ಬೆಳೆದರೂ ಪ್ರಯೋಜನವಾಗ ಬಹುದು.

The Groundnut.
ನೆಲಗಡ್ಲೆ ಕಾಯಿ.

ಮೈಸೂರು ನಾರ್ಮಲ್ ಸ್ಕೂಲಿನಲ್ಲಿ ವ್ಯವಸಾಯ ಶಾಸ್ತ್ರ ಬೋಧ ಕರಾಗಿರುವ ಮಿ॥ ಕೆ. ನರಸಿಂಹಯ್ಯಂಗಾರ್ರವರು ಕೆಳಗೆ ಕಂಡ ನೆಲಗಡ್ಲೆ ಫಸಲಿನ ವಿಷಯಕವಾದ ಸಮಾಚಾರವನ್ನು ರೈತಾಪಿ ಜನರ ತಿಳುವಳಿಕೆ ಬಗ್ಗೆ ಪ್ರಕಟ ಮಾಡಬೇಕೆಂದು ಕೇಳಿಕೊಂಡಿರುತ್ತಾರೆ.

ಕಳೆದ ವರ್ಷ ನಾರ್ಮಲ್ ಸ್ಕೂಲಿಗೆ ಸೇರಿದ ವ್ಯವಸಾಯದ ಹೊಲ ಗಳಲ್ಲಿ ಸುಮಾರು ಹತ್ತೊಂಬತ್ತು ಪಲ್ಲ ನೆಲಗಡಲೆ ಕಾಯಿ ಬೆಳೆಯಲ್ಪ ಟ್ಟಿತು. ಬೆಳೆದ ವಿಧವಿಧವಾದ ಕಾಯಿಗಳಲ್ಲಿ ಸುಮಾರು ೭ ಪಲ್ಲ ಕಾ ಯಿ ಗಳಿಗಿಂತಲೂ ಹೆಚ್ಚಾಗಿ ಮೈಸೂರು ಶೀಮೆಯಲ್ಲಿರುವ ವ್ಯವಸಾಯ ಸಂಘಗಳವರಿಗೆ ಬಿತ್ತುವುದಕ್ಕಾಗಿ ಮಾರಲ್ಪಟ್ಟಿತು. ಚಿತ್ರದುರ್ಗ, ಕ ಡೂರು, ಕೋಲಾರ, ತುಮಕೂರು ಈ ಡಿಸ್ಟ್ರಿಕ್ಟುಗಳ ಸಂಘದವರು ಕೊಂ ಡುಕೊಂಡರು. ಈ ಮಾದರಿಗಳ ಪೈಕಿ ಭೂಮಿಯಮೇಲೆ ಹರಡದೆ ನಿಂ ತು ಬೆಳೆಯುವ ಜರ್ಮ ದೇಶದ ಕೆಂಪು ಜಾತಿ ಕಾಯಿ ಮತ್ತು ಸ್ಪಾನಿ ದೇಶದ ಕಾಯಿ ಇವುಗಳನ್ನು ಕೋಲಾರದಲ್ಲಿ ಬೆಳೆಯುವ ವಾಡಿಕೆ ಹೆಚ್ಚು ತ್ತಿದೆ. ಈ ಎರಡು ಜಾತಿ ಪೈರುಗಳ ಬುಡದಲ್ಲಿ ಕಾಯಿಗಳ ಗೊಂಚಲು ಆಳದಲ್ಲಿ ಬಿಡದೆ ಮೇಲ್ಗಡೆಯಲ್ಲಿಯೇ ಬಿಡುವುದರಿಂದ ಕಾಯಿಗಳು ಬಲಿ ಯುತ್ತಿರುವಾಗ ಕಾಗೆಗಳ ಹಾವಳಿ ಹೆಚ್ಚಾಗಿದೆಯೆಂತಲೂ, ಗಿಡಗಳ ಕೆ ಗೆ ಮಣ್ಣಿನಲ್ಲಿರುವ ಕಾಯಿಗಳ ಗೊಂಚಲುಗಳನ್ನು ಕಾಗೆಗಳು ತಿಳಿ ಅವುಗಳ ಮೂಗಿನಿಂದ ಮಣ್ಣನ್ನು ಕೆದರಿ ಕಾಯಿಗಳನ್ನು ಕಿತ್ತು ತಿನ್ನು ತ್ತವೆಂದೂ ತಿಳಿದುಬರುತ್ತದೆ. ಮುಂದೆ ಬರೆದಿರುವ ಹಾಗೆ ಮಾಡಿದ ಇಂತಹ ತೊಂದರೆ ಕಡಮೆಯಾಗಬಹುದು.

ಪೈರು ಸುಮಾರು ಒಂದು ತಿಂಗಳಲ್ಲಿ ಹೂ ಬಿಟ್ಟು ಹೀಚಾಗುವುದಕ್ಕೆ ಪ್ರಾರಂಭವಾಗುತ್ತದೆ. ಒಂದೂವರೆ ತಿಂಗಳಲ್ಲಿ ಹೀಚುಗಳು ಸ್ವಲ್ಪ ಗ

ತ್ರವಾಗುತ್ತದೆ. ಆ ಸಮಯಕ್ಕೆ ಸರಿಯಾಗಿ ಮಣ್ಣಿನಲ್ಲಿ ಹದ ನೋಡಿ ನೇಗಿಲಿನಿಂದ ಸಾಲುಗಳಮಧ್ಯೆ ಉದ್ದಕ್ಕೂ ಉತ್ತರೆ, ಗಿಡಗಳ ಸಾಲುಗಳ ಪಕ್ಕದಲ್ಲಿ ಹೆಚ್ಚು ಮಣ್ಣು ಬಿದ್ದು ಗಿಡಗಳು ಬದುಗಳಮೇಲೆ ಬೆಳೆಯುತ್ತಿರುವಹಾಗೆ ಕಾಣುತ್ತವೆ ಈ ಸಂದರ್ಭದಲ್ಲಿ ಕಾಗೆಗಳಿಗೆ ಅಷ್ಟು ಸುಲಭವಲ್ಲಿ ಕಾಯಿಗಳು ದೊರೆಯುವುದಿಲ್ಲ. ಇದಲ್ಲದೆ ಹೀಗೆ ಮಾಡಿದರೆ ಕಳೆಗಳು ಕಡಮೆಯಾಗುವದಲ್ಲದೆ ಪೈರಿಗೆ ಮಧ್ಯವ್ಯವಸಾಯವಾಗುತ್ತದೆ. ಹೊಲದ ಅಂಚಿನಲ್ಲಿ ಮಣ್ಣು ಸರಿಯಾಗಿ ಬೀಳದ ಕಡೆ ಕಾಗೆಗಳ ತೊಂದರೆ ಇಷ್ಟೇ ಇರಬಹುದು. ರೈತನು ಹೊಲದಲ್ಲಿ ಕಾದು ಇರಬೇಕು. ಜೋಳಕ್ಕೆ ಪಕ್ಷಿಗಳ ತೊಂದರೆ ಇಷ್ಟೇ ಇದೆ. ಇಲ್ಲಿನ ಸರ್ಕಾರಿ ಹೊಲದಲ್ಲಿ ಈ ಕ್ರಮವನ್ನು ಮಾತ್ರ ಅನುಸರಿಸುತ್ತೇವೆ. ಬೇಕಾದವರು ಪರೀಕ್ಷಿಸಿ ನೋಡಿ ಉಂಟಾಗುವ ಪ್ರಯೋಜನವನ್ನು ತಿಳಿಯಬಹುದು.

---o---

The Signs of Coming Rains. *
ಮಳೆ ಬರುವಿಕೆಯ ಲಕ್ಷಣಗಳು.

ಕೆಲವು ಕಾಲದ ಹಿಂದೆ ಪೂನಾ ಪಟ್ಟಣದಲ್ಲಿ ಶಸ್ತ್ರಚಿಕಿತ್ಸಕರಾಗಿದ್ದ ಮೆ|| ಅಲೆಗ್ಸಾಂಡರ್ ಗಿಬ್ಸನ್ ಎಂಬುವರು ಮಳೆ ಬರುವಿಕೆಯ ಲಕ್ಷಣಗಳನ್ನು ಕುರಿತು ಹೇಳಿರುವದೇನೆಂದರೆ :—

(೧) ಪ್ರತಿ ವರುಷದ ಮೇ ತಿಂಗಳಿನ ಕೊನೆಕೊನೆಯಲ್ಲಿ ಮಳೆ ಬರುತ್ತೆ. ಆಗ ಜಮೀನು ಇನ್ನೂ ತನುವಾಗಿರುವಾಗಲೇ ಬಿತ್ತಿದ್ದೇ ಆದರೆ ಪೈರು ಚನ್ನಾಗಿ ಬೇರೂರಿ ಬೆಳೆಯುವದಲ್ಲದೆ ಖಂಡಿತವಾಗಿ ಸೊಂಪಾಗಿಯೂ ಇರುವದು. ಆದ್ದರಿಂದ ರೈತನು ಹತ್ಯಾರುಗಳನ್ನೆಲ್ಲಾ ಸಿದ್ಧಪಡಿಸಿಕೊಂಡು ಜಮೀನನ್ನು ಸಾಗುವಳಿ ಮಾಡುವದಕ್ಕೆ ಸದರಿ ಮಳೆಯ ಬರುವಿಕೆಯನ್ನು ಎದುರು ನೋಡುತ್ತಾ ಇರುವದು ಒಳ್ಳೇದು.

(೨) ಶುಕ್ಲಪಕ್ಷದಲ್ಲಿ ಮೊದಲನೆ ವಾರ ಬಿಟ್ಟು ಎರಡನೆ ವಾರವೇನಾದರು ಮಳೆ ಪ್ರಾರಂಭವಾದಲ್ಲಿ ಸಾಧಾರಣವಾಗಿ ಪೌರ್ಣಿಮಿವರಿಗೂ

---

* ಅಗ್ರಿಕಲ್ಚರಲ್ ಪ್ರೋಗ್ರೆಸ್.—ಏಪ್ರಿಲ್ ೧೯೧೦.

ಮಳೆ ಬರುತ್ತಲೇ ಇರುವದು. ಆದರೆ ಅದೇ ರೀತಿಯಲ್ಲಿ ಕೃಷ್ಣಪಕ್ಷದಲ್ಲಿ
ಪ್ರಾರಂಭವಾದರೆ ಅಮಾವಾಸ್ಯೆವರಿಗೂ ಜರುಗುವದಿಲ್ಲ.

(೨) ದಕ್ಷಿಣದ ಕಡೆಯಿಂದ ೨-೩ ದಿನಗಳು ಪಟ್ಟಾಗಿ ಗಾಳಿ ಬೀ
ಸುತ್ತಾ ಬಂದಲ್ಲಿ ಮೇಘಗಳು ಆಕಾಶದಲ್ಲಿ ಖಂಡಿತವಾಗಿ ಕಾಣಿಸಿಕೊಳ್ಳುವವು.

(೩) ಚಂದ್ರನು ಧೂಮ್ರವರ್ಣವಾಗಿ ಕಾಣಿಸಿಕೊಂಡಲ್ಲಿ ಅದು
ಮಳೆ ಬರತಕ್ಕದ್ದನ್ನು ಸೂಚಿಸುತ್ತದೆ. ಚಂದ್ರನು ಕೆಂಪುಛಾಯೆಯುಳ್ಳ
ನಾಗಿದ್ದಲ್ಲಿ ಜೋರಾಗಿ ಗಾಳಿ ಬೀಸುವದು. ಚಂದ್ರನ ಸುತ್ತಲೂ ಮೇ
ಘವಿದ್ದುತ್ತಿದ್ದರೆ ಜಾಗ್ರತೆಯಾಗಿ ಮಳೆ ಬರುವದೆಂದು ತಿಳಿದುಕೊಳ್ಳಬೇಕು.

(೪) ಸೂರ್ಯನ ಕಡೆಗೆ ನೋಡಿರಿ, ಸೂರ್ಯನು ಪ್ರಕಾಶಯುಕ್ತ
ನಾಗಿ ಮುಳುಗಿದಲ್ಲಿ ಮಳೆ ಬರುವ ಸಂಭವವಿರುವದಿಲ್ಲ. ಸೂರ್ಯನು ಮುಳು
ಗುವಾಗ ಬಿಂಬದಲ್ಲಿ ಕಪ್ಪು ಮತ್ತು ಮಲಮಲವಾಗಿ ಕಂಡಲ್ಲಿ ಕ್ಷಿಪ್ರದಲ್ಲಿಯೆ
ಮಳೆಯಾಗುವದು. ಸೂರ್ಯನು ಮುಳುಗುವಾಗ ಪೂರ್ವ ದಿಕ್ಕನ್ನು ದೃ
ಷ್ಟಿಸಿ ನೋಡಿರಿ, ಆಗ ಸೂರ್ಯನ ಕಿರಣಗಳು ಪೂರ್ವ ದಿಕ್ಕಿನಲ್ಲಿನ ಮೇ
ಘಗಳ ಮೇಲೆ ನೇರವಾಗಿ ಬೀಳುತ್ತಾ ಇದ್ದಲ್ಲಿ, ಮೇಘಗಳು ಕರಗಿ ಕೊಂ
ಚವಾಗಿ ಮಳೆ ಬೀಳುವದಾದೀತು. ಪೂರ್ವ ದಿಕ್ಕಿನಲ್ಲಿ ಆಕಾಶವು ಕಡು
ಕೆಂಪಾಗಿ ಕಂಡು ಬಂದರೆ ಒಳ್ಳೇ ಮೇಘಗಳು ತುಂಬಿರುವದಾಗಿಯೂ, ಕ್ಷಿ
ಪ್ರದಲ್ಲಿಯೇ ಮಳೆ ಬರಬಹುದಾಗಿಯೂ ಗೊತ್ತುಮಾಡಿಕೊಳ್ಳಬೇಕು.

(೬) ಮಳೆ ಬರುವ ಹಾಗಿದ್ದರೆ ಗುಬ್ಬಿಗಳು ಅಂತರಿಕ್ಷದಲ್ಲಿ ಯ
ತ್ತರವಾಗಿ ಹಾರಿ ಹೋಗುವದಿಲ್ಲ. ಕಪ್ಪೆಗಳು ಒಣ ನೆಲದ ಮೇಲೆ ಹಾ
ರಾಡುತ್ತವೆ. ನೊಣ ಮುಂತಾದವುಗಳು ಹೆಚ್ಚುವವು.

———o———

Experience of a Mysore Ryot with an American Plough.

ಸೀಮೆಯ ನೇಗಿಲಿನಿಂದ ಕೆಲಸ ಮಾಡಿಸಿದ ಸಂಸ್ಥಾನದ ಒಬ್ಬ ಜಮೀನ್ದಾರನ ಅನುಭವಗಳು.

ಅರಕಲಗೂಡು ತಾಲ್ಲೂಕು ರಾಮನಾಥಪುರದಲ್ಲಿರುವ ಗುಂಡಭಟ್ಟ

ಮಗ ಜವಿರ್ಣದಾರ ಸುಬ್ರಹ್ಮಣ್ಯಶಾಸ್ತ್ರಿಗಳು, ಶೀಮೆಯ ನೇಗಿಲನ್ನು ಉಪಯೋಗಿಸಿ ಅದರಿಂದ ಉಂಟಾದ ಅನುಭವವನ್ನು ವ್ಯವಸಾಯ ಗೆಜೆಟ್ಟಿನಲ್ಲಿ ದಯವಿಟ್ಟು ಪ್ರಕಟಿಸಬೇಕೆಂದು ಕೋರಿರುವ ಮೇರಿಗೆ ಈ ಕೆಳಗೆ ಛಾಪಿಸಿರುತ್ತೆ :—

ಕಳೆದ ಏಪ್ರಿಲ್ ತಿಂಗಳಲ್ಲಿ ಮೈಸೂರಿನಲ್ಲಿರುವ ನಾರ್ಮಲ್ ಸ್ಕೂಲಿಗೆ ಸಂಬಂಧಪಟ್ಟ ವ್ಯವಸಾಯದ ಫಾರಂನಿಂದ 'ನ್ಯೂಕಾಲೀಪ್ಲೋ' ಎಂಬ ಸಣ್ಣ ನೇಗಿಲನ್ನು ಪರೀಕ್ಷೆ ಮಾಡುವದಕ್ಕೋಸ್ಕರ ಯರವಲಾಗಿ ತೆಗೆದುಕೊಂಡೆನು.

ಆ ಲಾಗಾಯಿತು ಇದುವರಿಗೂ ಆ ನೇಗಿಲನ್ನು ತರೀ ಸಾಗುವಳಿಗೋಸ್ಕರ ಉಪಯೋಗಿಸಿದೆನು. ಆ ನೇಗಿಲು ವಿನಾ ಮತ್ಯಾವ ನೇಗಿಲನ್ನೂ ಈ ವರುಷ ನಾನು ಉಪಯೋಗಿಸಲೇ ಇಲ್ಲ. ಅದರ ಸಹಾಯದಿಂದ ಹತ್ತು ಎಕರೆ ಗದ್ದೆಯನ್ನು ಸಿದ್ಧಮಾಡಿ ನಾಟಿಹಾಕುವ ಕೆಲಸವನ್ನೆಲ್ಲಾ ಸಕಾಲದಲ್ಲಿ ಮುಗಿಸಿದೆನು.

ಕೆಸರು ಗದ್ದೆ ಉಳುವದಕ್ಕೂ ಬರೀಗದ್ದೆ ಉಳುವದಕ್ಕೂ ಇದೆ ಉಪಯೋಗವಾಯಿತು. ಆದರೆ ಕೆಸರು ಗದ್ದೆ ಉಳುವದರಲ್ಲಿ ಮಾತ್ರ ಕೆಲಸ ನಿಧಾನವಾಯಿತು. ಇದೇ ತರಹ ನೇಗಿಲು ಒಂದನ್ನು ೧೬-೮-೦ ರೂಪಾಯಿಗೆ ಮೈಸೂರು ಫಾರಂ ಅಧಿಕಾರಿಗಳ ಮೂಲಕ ಬೆಂಗಳೂರು ವ್ಯವಸಾಯದ ಇಲಾಖೆಯಿಂದ ತರಿಸಿದೆನು. ಗುಳ ಒಂದಕ್ಕೆ ೦-೧೨-೦ ಆಣೆ ಮೇರಿಗೆ ಮೂರು ಗುಳಗಳನ್ನು ತರಿಸಿದೆನು. ಈ ಭಾಗದಲ್ಲಿ ಒಟ್ಟು ಖರ್ಚು ರೂ. ೧೯-೨-೦ ಹಿಡೀತು. ನಮ್ಮ ಊರಿನಲ್ಲಿ ಆಜುಬಾಜು ರೈತರಾದ ನನ್ನ ಸ್ನೇಹಿತರು ಈ ನೇಗಿಲಿನ ಪ್ರಯೋಜನವನ್ನು ನೋಡಿ ಕೊಂಡುಕೊಳ್ಳಬೇಕೆಂದು ಆಶಿಸುತ್ತಿರುವರು. ನನ್ನ ಜಮೀನು ಮರಳು ಮಿಶ್ರವಾದ ಬಿಡಿ ಮಣ್ಣಾದ್ದರಿಂದ ೧೬ ವಯಸ್ಸುಳ್ಳ ನನ್ನ ಆಳು ಸುಲಭದಲ್ಲಿ ಒಬ್ಬನೇ ಈ ನೇಗಿಲಿನಿಂದ ಉಳುವದಕ್ಕೆ ಶಕ್ತನಾಗಿರುತ್ತಾನೆ.

Stone-Roller Thresher.*

ಅರಿಯಿಂದ ಕಾಳು ಬಿಡಿಸುವ ಉರುಳು ಗುಂಡು.

ರೈತರು ಅರಿಯಿಂದ ಕಾಳು ಮಾಡಿಕೊಳ್ಳುವದಕ್ಕೆ ಎತ್ತುಗಳಿಂದ
ಅದನ್ನು ತುಳಿಸುತ್ತಿರುವುದು ವಾಡಿಕೆಯಷ್ಟೆ. ಈಚೆಗೆ ಬೊಂಬಾಯಿ
ಧಿಪತ್ಯದ ಕೆಲವು ಭಾಗಗಳಲ್ಲಿ ಹಾಗೆ ಮಾಡುವದಕ್ಕೆ ಬದಲಾಗಿ ರಸ್ತೆ ಕ
ಮಂಗಾರಿಗಳಿಗೆ ಉಪಯೋಗಿಸಲ್ಪಡುತ್ತಿರುವ ಉರುಳುಗುಂಡುಗಳಹಾಗಿರು
ವ ಕಲ್ಲುಗಳನ್ನು ಮಾಡಿಸಿ ಅವುಗಳನ್ನು ಎಳೆಯುವಹಾಗೆ ಎತ್ತುಗಳನ್ನು
ಕಟ್ಟುವದಕ್ಕೂ, ಒಬ್ಬ ಮನುಷ್ಯನು ಎತ್ತುಗಳನ್ನು ಚಮಕಾಯಿಸುತ್ತಾ
ಕೂರುವದಕ್ಕೂ ಅನುಕೂಲವಾಗಿರುವಂತೆ ಚೌಕಟ್ಟನ್ನು ಹಾಕಿಸಿ ಅರಿಯ
ಮೇಲೆ ಉರುಳಿಸುವದರಿಂದ ಕಾಳನ್ನು ಬಿಡಿಸಿಕೊಳ್ಳುವದು ಪ್ರಚಾರಕ್ಕೆ
ಬರುತ್ತಾ ಇದೆ. ಇಂಥಾ ಗುಂಡಿನ ಸಹಾಯದಿಂದ ಅನೇಕ ಎತ್ತುಗಳ
ನ್ನು ಸಾಲು ಕಟ್ಟಿ ತುಳಿಸಿದ್ದಕ್ಕಿಂತಲೂ ಇನ್ನೂ ಜಾಗ್ರತೆಯಾಗಿ ಕಾ
ನ್ನೆಲ್ಲಾ ಬಿಡಿಸಿಕೊಳ್ಳಬಹುದು. ಇಷ್ಟೆ ಅಲ್ಲದೆ ಕಲ್ಲು ಅಥವ ಮರದ ಗುಂ
ಡುಗಳನ್ನು ಉಪಯೋಗಿಸುತ್ತಾ ಬಂದಲ್ಲಿ ಅರಿ ತುಳಿಸುವದಕ್ಕಾಗಿ ಇದುವ
ರಿಗೂ ಉಪಯೋಗಿಸಲ್ಪಡುತ್ತಿದ್ದ ಒಂದು ಜೊತೆಗೆ ಹೆಚ್ಚಾದ ಎತ್ತುಗಳ
ವನ್ನೂ ಮಾಗೀಕಾಲದ ಬೆಳೆಗೆ ಹಸನಾಗತಕ್ಕ ಜಮೀನನ್ನು ಉಳುವದ
ಮುಂತಾದ ಇತರ ಕೆಲಸಗಳಿಗೆ ಅನುಕೂಲಿಸಿಕೊಳ್ಳಬಹುದು. ಒಂದು
ಜೊತೆ ಎತ್ತನ್ನಿಟ್ಟುಕೊಂಡಿರುವನೂ ಕೂಡ ಸ್ವತಂತ್ರವಾಗಿ ಇತರರ ಸ
ಹಾಯಾಪೇಕ್ಷೆಯಿಲ್ಲದೆ ಬೇಸಾಯವನ್ನು ನಡಿಸಿಕೊಳ್ಳಬಹುದು. ಇ
ರಿಂದ ಕಾಳು ಸ್ವಲ್ಪವೂ ನುಚ್ಚಾಗುವದೂ ಇಲ್ಲ.

———o———

Government Orders.

ಸರ್ಕಾರಿ ಹುಕುಂಗಳು.

ವಿವಿಧ ಪುಸ್ತಕಗಳನ್ನು ಮತ್ತು ಬೆಲೆ ನಮೂನೆಗಳನ್ನು
ಕಾರಿನವರೆ ಅಚ್ಚು ಹಾಕಿಸಿ ವ್ಯವಸಾಯಗಾರರಿಗೆ ಮುಫತ್ತು ಕೊಡಬೇಕೆ

* ಮುಂಬಾಯಿ ಡಿಪಾರ್ಟ್‌ಮೆಂಟ್ ಆಫ್ ಅಗ್ರಿಕಲ್ಚರಲ್ ಸ್ಟೇಷನ್ [illegible]

ಬ ವಿಷಯದಲ್ಲಿ ೧೯೦೯ನೆ ಇಸವಿಯ ಪ್ರಜಾಪ್ರತಿನಿಧಿ ಸಭೆಯ ಪ್ರತಿನಿಧಿಗಳು ಅರಿಕೆ ಮಾಡಿಕೊಂಡ ೬೮ನೆ ನಂಬರ್ ವಿಷಯದಲ್ಲಿ ಶ್ರೀಮನ್ಮಹಾರಾಜರವರ ಸರ್ಕಾರದವರು ಮಾಡಿರುವ ಹುಕ್ಕುಂ ಏನಂದರೆ :—

ನಂ. ರೆವಿನ್ಯೂ ೯೯೪.೧೦೦೩—ಲ್ಯಾ. ರೆ. ೩೬೭-೦೯-೩.

ತಾರೀಖು ೧೫ನೆ ಆಗಸ್ಟ್ ೧೯೧೦.

ಲ್ಯಾಂಡ್ ರೆವಿನ್ಯೂ ಕೋಡು ಅನುಸರಿಸಿ ಸಾದರಾದ ನಿಬಂಧನೆಗಳಲ್ಲಿ ವಿಧಾಯಿಸಿರುವ ಹೊಸ ನಮೂನೆಗಳಲ್ಲಿ ಗ್ರಾಮ ಲೆಕ್ಕಗಳನ್ನು ತಯಾರ್ಮಾಡುವದಕ್ಕಾಗಿ ಬೇಕಾಗುವ ಸಾದಿಲ್ವಾರು ಹೆಚ್ಚು ಖರ್ಚನ್ನು ಒದಗಿಸುವದಕ್ಕಾಗಿ ಶ್ಯಾನುಭೋಗರ ಸಾದಿಲ್ವಾರು ವೇತನವನ್ನು ಬಡತಿ ಮಾಡಬೇಕೆಂದು ವಿಧಿಸುವದೇ ೧೮೯೮ನೆ ಫೆಬ್ರವರಿ ೧೨ನೆ ತಾರೀಖಿನ ೭೬೪೪-೫೩—ಆರ್. ಎಫ್. ೫೩-೯೬ನೆ ನಂಬರ್ ಸರ್ಕಾರಿ ಹುಕುಮಿನ ಉದ್ದೇಶವಾಗಿರುತ್ತೆ. ಖರಿದಿ ನಮೂನೆಗಳನ್ನು ಸರ್ಕಾರಿ ಖರ್ಚಿನಲ್ಲಿ ಅಚ್ಚು ಹಾಕಿಸಿ ಶ್ಯಾನುಭೋಗರಿಗೆ ಸರಬರಾಯಿ ಮಾಡಿದಪಕ್ಷದಲ್ಲಿ ಅವರ ಸಾದಿಲ್ವಾರು ವೇತನವನ್ನು ಅದಕ್ಕನುಗುಣವಾಗಿ ಕಮ್ಮಿ ಮಾಡಬೇಕಾಗುತ್ತೆ. ಆದರೆ ಅದನ್ನು ಆ ರೀತಿ ಕಮ್ಮಿ ಮಾಡುವದು ಯುಕ್ತವಲ್ಲವೆಂದು ಸರ್ಕಾರದವರು ಭಾವಿಸುತ್ತಾರೆ. ಶ್ಯಾನುಭೋಗರುಗಳು ಸಾದಿಲ್ವಾರಿಗಾಗಿ ತಮಗೆ ಕೊಟ್ಟಿರುವ ವೇತನದ ಮೊಬಲಗಿನಿಂದ ಈ ನಮೂನೆಗಳನ್ನು ಅಚ್ಚು ಹಾಕಿಸುವ ಖರ್ಚನ್ನು ತಾವು ಸ್ವಂತವಾಗಿ ವಹಿಸಿ ಅಚ್ಚು ಹಾಕಿಸಿಕೊಳ್ಳುವ ವಿಷಯದಲ್ಲಿ ಸರ್ಕಾರದವರಿಗೆ ಯಾವ ಆಕ್ಷೇಪಣೆಯೂ ಇರುವದಿಲ್ಲ.

೨. ಚಲರ್ ನಮೂನೆಗಳ ವಿಷಯದಲ್ಲಿ, ಸರ್ಕಾರಿ ಛಾಪಾಖಾನೆ ಸೂಪರಿಂಟೆಂಡೆಂಟರವರು ಬೇಕಾದಷ್ಟು ಈ ನಮೂನೆಗಳನ್ನು ಅಚ್ಚು ಹಾಕಿಸಿ ದಾಸ್ತಾನು ಇಟ್ಟುಕೊಂಡು ತಾಲ್ಲೂಕುಗಳಿಗೆ ಇಂಡೆಂಟಿನ ಮೇಲೆ ಕಳುಹಿಸಬೇಕೆಂದು ಕೋರಿ ಇದೆ. ಶ್ಯಾನುಭೋಗರಿಗೆ ಇವುಗಳನ್ನು ಬೇಕಾದ ಕೂಡಲೆ ಕೊಡುವದಕ್ಕೋಸ್ಕರ, ಅಮಲ್ದಾರುಗಳು ಈ ನಮೂನೆಗಳನ್ನು ಖಜಾನೆಯಲ್ಲಿ ದಾಸ್ತಾನು ಇಟ್ಟುಕೊಳ್ಳಬೇಕೆಂದು ಅವರುಗಳಿಗೆ ಚಾಪ್ಪಾಗಿ ತಿಳುವಳಿಕೆ ಕೊಡಬೇಕು.

ನಂ. ೧೩೭೯-೯೮, ಸ್ಯಾ. ತಾ|| ೧೦—೮—೧೯೧೦.

ಗ್ರಾಮದ ಮಾಕೀಜಾ ವಿಚಾರದಲ್ಲೂ, ಸಾಂಕ್ರಾಮಿಕ ಉಪದ್ರಗಳು ವಗೈರೆ ಗ್ರಾಮಗಳಲ್ಲಿ ಕಾಣಿಸಿಕೊಂಡಾಗಲೂ, ಗ್ರಾಮ ಪಟೇಲರು ಅನುಸರಿಸಬೇಕಾದ ನಡವಳಿಕೆಯನ್ನು ಗೊತ್ತು ಮಾಡಿರುವ ಈ ಕೆಳಗೆ ಕಂಡ ನೋಟೀಸಿನ ನಕಲನ್ನು ಸಂಸ್ಥಾನದ ಎಲ್ಲಾ ಪಟೇಲರೂ ತಮ್ಮ ತಮ್ಮ ಗ್ರಾಮದ ಮೇಲ್ವಿಚಾರಣೆ ಪುಸ್ತಕದ (ಇನ್ಸ್ಪೆಕ್ಷನ್ ಬುಕ್ಕು) ಬೈಂಡಿನ ಒಳಗಡೆಯಲ್ಲಿ ಅಂಟಿಸಿಟ್ಟುಕೊಂಡು ಪ್ರಕೃತ ಬಿದ್ದಾಗ ಅದರಂತೆ ನಡೆಯುತ್ತಾ ಬರಬೇಕೆಂದು ಶ್ರೀಮನ್ಮಹಾರಾಜರವರ ಸರ್ಕಾರದವರು ಅಪ್ಪಣೆ ಮಾಡಿರುತ್ತಾರೆ.

ನೋ ಟೀ ಸ್.

ಗ್ರಾಮದಲ್ಲಿ ಏನಾದರೂ ಶಿಡುಬಾಗಲಿ, ಕಲರಾ (ವಾಂತಿ ಭ್ರಾಂತಿ) ಅಥವ ಸಂಶಯಾಸ್ಪದವಾದ ಅತಿಸಾರವಾಗಲಿ ಕಾಣಿಸಿಕೊಂಡಾಗಲೂ, ಇಲಿಗಳು ಸತ್ತು ಬಿದ್ದಾಗಲೂ, ಆಕಸ್ಮಿತವಾಗಿ ಬಾಯಿಲೆ ಬಿದ್ದು ಗಡ್ಡೆಗಳು ಕಾಣಿಸಿಕೊಂಡು ಶೀಘ್ರಕಾಲದಲ್ಲಿ ಯಾರಾದರೂ ಸತ್ತಾಗಲೂ, ಹಾಗೆ ಗಡ್ಡೆಗಳು ಕಾಣಿಸಿಕೊಳ್ಳದೆ ಇದ್ದರೂ ಎರಡು ಮೂರು ದಿನಗಳಲ್ಲಿ ಜ್ವರದಿಂದ ಯಾರಾದರೂ ಸತ್ತಾಗಲೂ, ತತ್‌ಕ್ಷಣ ಕಾಲ ವಿಳಂಬ ಮಾಡದೆ ಸಮೀಪದಲ್ಲಿರುವ ಆಸ್ಪತ್ರಿ ಅಸಿಸ್ಟೆಂಟರಿಗೆ ತಿಳಿಸುವದೂ, ಮತ್ತು ಆಸ್ಪತ್ರಿ ಅಸಿಸ್ಟೆಂಟರು ಗ್ರಾಮಕ್ಕೆ ಬಂದಾಗ ಅವರು ಕೊಟ್ಟ ಆಜ್ಞೆಗಳನ್ನು ಸಾಧ್ಯವಾದಮಟ್ಟಿಗೆ ನಡೆಸುವದೂ ಪಟೇಲನ ಕರ್ತವ್ಯವಾಗಿರುತ್ತದೆ.

ಮೇಲ್ಕಂಡ ಸಂಗತಿಗಳಿಗೆ ಪಟೇಲನು ಆಸ್ಪತ್ರಿಯ ಅಸಿಸ್ಟೆಂಟರಿಗೆ ಹೇಳಿ ಕಳುಹಿಸುತ್ತಲೇ, ದಿನಕೂಲಿ ಮೇಲೆ ಜನಗಳು ದೊರೆಯುವ ಗ್ರಾಮವಾಗಿದ್ದಲ್ಲಿ ಒಬ್ಬಿಬ್ಬರನ್ನು ಗ್ರಾಮದಲ್ಲಿ ರೋಗದ ಸುಂಕನ್ನು ಮುರಿಯುವದೇ ಮೊದಲಾದ ಕೆಲಸಗಳನ್ನು ಮಾಡುವದಕ್ಕೆ ಒದಗುವ ಹಾಗೆ ಗೊತ್ತುಮಾಡಿಕೊಂಡಿರಬೇಕು. ಇಲಿಗಳು ಸತ್ತು ಬಿದ್ದ ಸಂದರ್ಭದಲ್ಲಿ ಗ್ರಾಮಸ್ಥರೆಲ್ಲಾ ಊರು ಬಿಟ್ಟು ಹೊರಗೆ ಗುಡಿಸಲುಗಳು ಹಾಕಿಕೊಂಡು ಕೆಲವು ದಿನಗಳವರೆಗೆ ವಾಸಮಾಡುವಂತೆ ಅವರನ್ನು ಪ್ರೇರೇಪಿಸಬೇಕು.

ನಂ. ರೆ. ೯೭೮-೯—ಲ್ಯಾ. ರೆ. ೬೭-೦೯-೬೭.

ಬೆಂಗಳೂರು, ತಾರೀಖು ೧೨ನೆ ಆಗಸ್ಟು ೧೯೧೦.

ಮಾರೀಕಣಿವೆ ಕೆರೆಯ ನಾಲೆಗಳ ಕೆಳಗೆ ಸಾಲೀಸಾಲ್ ಸಾಗುವಳಿಗೆ ಬರತಕ್ಕ ಜಮೀನಿನ ಕಂದಾಯದ ಹುಟ್ಟುವಳಿಗೆ ತಕ್ಕಂತೆ ಪ್ರೋಟಿಗೆ ರಿವಿಜನ್ ಮಾಡುತ್ತಾ ಇರಬೇಕೆಂದು ಹಿರಿಯೂರು ತಾಲ್ಲೂಕಿನ ಪಟೇಲರು ಮತ್ತು ಶಾನುಭೋಗರು ಕೇಳುವಂತೆ ನಡೆಸಿಕೊಡುವದು ಯುಕ್ತವಾದದ್ದೆಂದು ಸರ್ಕಾರದವರು ಅಭಿಪ್ರಾಯಪಡುವ ಕಾರಣ, ಹಿರಿಯೂರು ತಾಲ್ಲೂಕಿನಲ್ಲಿ ಈಗಿನ (ರಿವೈಜ್ಡ್) ಸೆಟ್ಲ್‌ಮೆಂಟ್ ಜಾರಿಯಲ್ಲಿರುವ ಪರ್ಯಂತ, ಮಾರಿಕಣಿವೆ ಕೆರೆಯ ನಾಲೆಗಳಿಂದ ನೀರು ಸರಬರಾಯಿ ಆಗತಕ್ಕ ಗ್ರಾಮಗಳ ಪಟೇಲರ ಮತ್ತು ಶಾನಭೋಗರ ಪ್ರೋಟಿಗೆಯನ್ನು ವಿಶೇಷ ರಿಯಾಯಿತಿ ತರೀಕು ೫ ವರ್ಷಕ್ಕೊಂದಾವರ್ತಿ ರಿವಿಜನ್ ಮಾಡತಕ್ಕದ್ದೆಂದು ಸರ್ಕಾರದವರು ಹುಕುಂ ಮಾಡಿರುತ್ತಾರೆ.

ನಂ. ಆರ್. ೪೪೬-೫೫—ಅಗ್ರಿ. ೬-೧೦-೨. ತಾ|| ೨೫—೭—೧೯೧೦.

ಸಂಸ್ಥಾನದಲ್ಲಿ ಆಹಾರವಾಗಿ ಉಪಯೋಗಿಸಲ್ಪಡುತ್ತಿರುವ ಧಾನ್ಯ ವಗೈರೆ ಪದಾರ್ಥಗಳ ಖರೀದಿ ತಃಖ್ತೆಗಳನ್ನು ಡಿಸ್ಟ್ರಿಕ್ಟುವಾರಾಗಿ ಆರಾರು ತಿಂಗಳಿಗೊಂದಾವರ್ತಿ ಸರ್ಕಾರಿ ಗೆಜೆಟ್ಟಿನಲ್ಲಿ ಪ್ರಾಯಿಷ್ ಮಾಡುತ್ತಿರುವದು ಸರಿಯಷ್ಟೆ. ಇನ್ನು ಮುಂದೆ ಹೀಗೆ ಡಿಸ್ಟ್ರಿಕ್ಟುವಾರಾಗಿ ಪ್ರಾಯಿಷ್ ಮಾಡುವದಕ್ಕೆ ಬದಲಾಗಿ ಸದರೀ ತಃಖ್ತೆಗಳನ್ನು ತಾಲ್ಲೂಕುವಾರಾಗಿ ಆರಾರು ತಿಂಗಳಿಗೊಂದಾವರ್ತಿ ಪ್ರಾಯಿಷ್ ಮಾಡುತ್ತಾ ಬರತಕ್ಕದ್ದು. ಸರ್ಕಾರಿ ಗೆಜೆಟ್ಟುಗಳನ್ನು ಸಂಸ್ಥಾನದ ಇಲಾಖೆಗಳಲ್ಲಿ ಖಾಯಂ ರಿಕಾರ್ಡಾಗಿ ಎಣಿಸಿ ನಾಶಪಡಿಸದೆ ಇಡಲ್ಪಡುವದರಿಂದ ಇನ್ನು ಮೇಲೆ ಆಯಾ ತಾಲ್ಲೂಕುಗಳಲ್ಲಿನ ಆಹಾರ ಸಾಮಗ್ರಿಗಳ ಖರೀದಿ ವಗೈರೆ ಬಾಬತು ವರ್ತಮಾನಗಳೆಲ್ಲಾ ಎಷ್ಟು ವರುಷಗಳ ಮೇಲಾದರೂ ಸಿಕ್ಕುವಂತಾಗುವದು.

Revenue Appeal.

ರೆವಿನ್ಯೂ ಅಪೀಲು.

ದೇವನಹಳ್ಳಿ ತಾಲ್ಲೂಕು ದೊಡ್ಡ ಕುರುಬರಹಳ್ಳಿ ಗ್ರಾಮದ ವಾಸಿ

ಭೂವಿಕೆ ನೌಕರಿ ಇನಾಂ ಜಮೀನುಗಳನ್ನು ಬರಾವರ್ದಾರ ರಾಮಚಂದ್ರಪ್ಪನು ಮತ್ತು ಸದರೀ ನೌಕರಿ ಹಕ್ಕಿಗೆ ಸಂಬಂಧಪಟ್ಟ ಇತರರು ಹಿಸ್ಸೇದಾರರಾಗಿ ಅನುಭವಿಸುತ್ತಿದ್ದರು. ರಾಮಚಂದ್ರಪ್ಪನು ಸತ್ತು ಜಮೀನುಗಳು ಪೌತಿ ತಖ್ತೆಗೆ ತರಲ್ಪಟ್ಟ ನಂತರ ಹಿಸ್ಸೇದಾರರ ಪೈಕಿ ಮೂರುಮಂದಿ ಅಮಲ್ದಾರರ ಮುಂದೆ ಹಾಜರಾಗಿ “ರಾಮಚಂದ್ರಪ್ಪನು ಬದುಕಿದ್ದಾಗ ತನ್ನ ಭಾಗದ ಇನಾಂತಿಗಳಲ್ಲಿನ ಹಕ್ಕನ್ನು ಭೋಗ್ಯ ಹಾಕಿಕೊಂಡಿರುವ ಕಾರಣ ತಮ್ಮ ಹಕ್ಕುಗಳಿಗೆ ಬಾಧಕವೇನೂ ಸಂಭವಿಸದೆ ಇರುವದಕ್ಕೋಸ್ಕರ ಜಮೀನುಗಳ ಪಟ್ಟೆಯನ್ನು ಹಿಸ್ಸೇದಾರರ ಪೈಕಿ ಒಬ್ಬನಾದ ಗುಂಡಪ್ಪನ ಹೆಸರಿನಲ್ಲಿ ಮಾಡಬೇಕು. ಹೀಗೆ ಮಾಡುವದಕ್ಕೆ ಆಗುವದಿಲ್ಲವೆಂಬ ಪಕ್ಷದಲ್ಲಿ ಪೌತಿ ರಾಮಚಂದ್ರಪ್ಪನ ಹೆಂಡತಿ ರಾಮಕ್ಕನ ಮತ್ತು ಗುಂಡಪ್ಪನ ಹೆಸರುಗಳಲ್ಲಿ ಜಂಟಿಪಟ್ಟೆ ಆಗಬೇಕು” ಎಂಬದಾಗಿ ಕೇಳಿಕೊಂಡರು. ಹಿಸ್ಸೇದಾರರ ಕೋರಿಕೆಯಂತೆ ೧೯೦೦ರಲ್ಲಿ ಜಂಟಿ ಪಟ್ಟೆಯಾಯಿತು. ೧೯೦೭-೧೯೦೮ರಲ್ಲಿ ರಾಮಕ್ಕನು ಸತ್ತು ಅನುಭವಿಕೆಯು ಆಕೆಯ ಮಗಳಾದ ವೆಂಕಟಲಕ್ಷ್ಮಮ್ಮನ ಹೆಸರಿಗೆ ಬರಾವರ್ದು ಮಾಡಲ್ಪಟ್ಟಿತು. ಇನಾಂತಿಗಳು ಸಹ ಯಥಾಪ್ರಕಾರ ವೆಂಕಟಲಕ್ಷ್ಮಮ್ಮನ ಹೆಸರಿಗೆ ಜಂಟಿ ಖಾತೆಯಾಗುವ ಹಾಗೆ ಅಮಲ್ದಾರರು ಶಿಫಾರಸ್ ಮಾಡಿದರು. ಆದರೆ ಜಮಾಬಂದಿ ಆಫೀಸರರು ಇದಕ್ಕೆ ಅನುಮೋದಿಸದೆ ಜಂಟಿ ಪಟ್ಟೆ ಕಾನೂನಿಗೆ ವಿರೋಧವಾಗಿರುವದರಿಂದ ರಾಮಕ್ಕನ ಹೆಸರನ್ನೇ ಖಾತೆಯಿಂದ ವಜಾ ಮಾಡುವದಾಗಿ ಹುಕ್ಕುಂ ಕೊಟ್ಟಿದ್ದರ ಮೇಲೆ ಈಗ ಸದರಿ ವೆಂಕಟಲಕ್ಷ್ಮಮ್ಮನು (ಅಪೀಲ್ ವಾದಿ) ಅಪೀಲ್ ತಂದಿರುತ್ತಾಳೆ.

ರೆವಿನ್ಯೂ ಕಮೀಷನರವರ ಹುಕ್ಕುಂ—ಖಾತೆಯಲ್ಲಿ ಆಸಾಮಿಗಳ ಹೆಸರುಗಳನ್ನು ರಿಜಿಸ್ಟರ್ ಮಾಡುವ ಬಗ್ಗೆ ಜಾರಿಯಲ್ಲಿರುವ ಸಾಧಾರಣ ನಿಬಂಧನೆಗಳು ಪ್ರಕೃತ ಸಂದರ್ಭದಲ್ಲಿ ಸಂಪೂರ್ಣವಾಗಿ ಅನ್ವಯಿಸಲಾಗದು. ಕೆಲವು ಅಪರೂಪ ಸಂದರ್ಭಗಳಲ್ಲಿ ಮಾತ್ರ ಪೂರ್ವ ವಿನ್ಯಾಸಕ್ಕನುಗುಣವಾಗಿ ಹಿಸ್ಸೇದಾರರೆಲ್ಲ ಇನಾಂ ಜಮೀನುಗಳನ್ನು ಅನುಭವಿಸುತ್ತಿರಬಹುದು. ಆದರೆ ನ್ಯಾಯವಾಗಿ ನೌಕರಿ ಇನಾಂ ಜಮೀನುಗಳು ಬರಾವರ್ದಾರನ ಸ್ವಾಧೀನಾನುಭವದಲ್ಲಿಯೇ ಇರತಕ್ಕದ್ದಾಗಿರುತ್ತದೆ.

ಅಪೀಲ್ ವಾದಿಯ ಹೆಸರಿನಲ್ಲಿ ಕಾನುಭಾವಿಕೆ ಹಕ್ಕು, ಈಗ ರಿಜಿಸ್ಟರಾಗಿರುವದರಿಂದ ಈಕೆಯ ಹೆಸರಿಗೇನೇ ರಾಮಕ್ಕನ ಹೆಸರಿನಲ್ಲಿರುವ ಇನಾಂ ಜಮೀನುಗಳ ಖಾತೆಯನ್ನು ಬದಲಾಯಿಸಬೇಕು. ಜಮೀನುಗಳ ಹಿಡುವಳಿಯ ಸ್ವಭಾವವನ್ನು ಸ್ಥಿರಪಡಿಸುವದಕ್ಕೂ, ಇನಾಂತಿಗಳಿಂದ ಸಲ್ಲಬೇಕಾದ ಜೋಡಿಯನ್ನು ವಸೂಲ್ಮಾಡುವದಕ್ಕೂ ಇದು ಅವಶ್ಯಕವಾಗಿರುತ್ತೆ.

೨ ೧೮೯೯-೯೦ರಲ್ಲಿ ಹಿಸ್ಸೆದಾರರು ಜಂಟಿ ಪಟ್ಟಿ ಆಗಬೇಕೆಂದು ಅಪೇಕ್ಷಿಸಿದ್ದಕ್ಕೆ, ರಾಮಚಂದ್ರಪ್ಪನ ಭಾಗವನ್ನು ಆತನು ಭೋಗ್ಯ ಹಾಕಿದ್ದದ್ದೇ ಕಾರಣವಾಗಿದೆ. ಪರಾಧೀನ ಮಾಡಿದ್ದು ನಿಜವಾಗಿದ್ದಲ್ಲಿ ಆಗಲೇ ರೆವಿನ್ಯು ಅಧಿಕಾರಿಗಳು ಇನಾಂತಿಗಳನ್ನು ಪರಾಧೀನತೆಯಿಂದ ತಪ್ಪಿಸುವದಕ್ಕೆ ಕ್ರಮ ನಡಿಸಬೇಕಾಗಿತ್ತು. ಸದರೀ ಜಮೀನುಗಳು ಹಾಲಿ ಪರಾಧೀನವಾಗಿರುವವೇ ಇಲ್ಲವೆ ಎಂಬ ವಿಷಯನ್ನು ಡೆಪ್ಯುಟಿ ಕಮೀಷನರವರು ತೃಪ್ತಿಕರವಾಗಿ ವಿಚಾರಿಸಿ, ಪರಾಧೀನವಾಗಿ ಇನ್ನೂ ಇದ್ದಲ್ಲಿ ಅದನ್ನು ತಪ್ಪಿಸುವದಕ್ಕೆ ಕ್ರಮವನ್ನು ಜರಿಗಿಸತಕ್ಕದ್ದು.

Notifications.

ಇಸ್ತಿಹಾರ್‌ನಾಮೆಗಳು.

ನಂ. ೨೯೭೯. ತಾ|| ೨—೯—೧೯೧೦.

ಮಾಗಡಿ ತಾಲ್ಲೂಕು ಶಿರಸ್ತೇದಾರ್ ಬಿ. ನಾರಾಯಣರಾಯರನ್ನು ಪೆನ್ಷನ್ ಮೇಲೆ ರಿಟೈರ್ ಮಾಡಿರುವದರಿಂದ ಅವರ ಕೆಲಸಕ್ಕೆ ಚನ್ನಪಟ್ಟಣದ ತಾಲ್ಲೂಕು ಶಿರಸ್ತೇದಾರ್ ನರಸಿಂಹನಾಯಕರನ್ನು ನೇಮಿಸಿ ಇದೆ.

———o———

ನಂ. ೨೬೭೮, ತಾ|| ೨೯—೮—೧೯೧೦.

ಹೊನ್ನಾಳಿ ತಾಲ್ಲೂಕು ಆಕ್ಟಿಂಗ್ ಅಮಲ್ದಾರ್ ಮೆ|| ಯಂ. ಯೆಸ್. ಹಯಗ್ರೀವಾಚಾರ್ಯರಿಗೆ ೧೯೧೦ನೆ ಇಸವಿ ಜುಲೈ ೨೬ನೆ ತಾರೀಖಿನ ೧೨೬೭ನೆ ನಂಬರಿನಲ್ಲಿ ಕೊಟ್ಟಿದ್ದ ೧೫ ದಿನಗಳ ರಜಾ ಅಲ್ಲದೆ ೧೦ ದಿನಗಳು ಜಾಸ್ತಿಯಾಗಿ ಕೊಟ್ಟಿದೆ.

ಸದರೀಯವರ ಗೈರ್ ಹಾಜರಿಯಲ್ಲಿ ಹಿಂದಿನಂತೆಯೇ ನಡೆಯತಕ್ಕದ್ದು.

———

ನಂ. ೩೦೩೪. ತಾ|| ೪—೯—೧೯೧೦.

ಮೈಸೂರು ಸರ್ವಿಸ್ ರೆಗ್ಯುಲೇಷನ್ ೧೨೨ನೆ ಪ್ರಕರಣದ ಮೇರೆ ಚಳ್ಳಕೆರೆ ತಾಲ್ಲೂಕು ಅಮಲ್ದಾರ್ ಮೆ|| ಯಂ. ಯಸ್. ರಾಮಚಂದ್ರರಾಯರಿಗೆ ಅವರು ಉಪಯೋಗಿಸಿಕೊಳ್ಳುವ ತಾರೀಖು ಲಾಗಾಯತು ೧೫ ದಿನಗಳ ಪ್ರಿವಿಲೇಜ್ ರಜಾ ಮಂಜೂರ್ಮಾಡಿರುತ್ತೆ.

ಅವರ ಗೈರ್ ಹಾಜರಿಯಲ್ಲಿ ತಾಲ್ಲೂಕು ಶಿರಸ್ತೇದಾರ್ ಯಂ. ವೆಂಕಟರಾಯರು ತಾಲ್ಲೂಕು ಛಾರ್ಜಿನಲ್ಲಿರತಕ್ಕದ್ದು.

೧೯೧೦ನೆ ಇಸವಿ ಮೇ ೨ನೆ ತಾರೀಖಿನ ೧೧೦೫೭ನೆ ನಂಬರಿನಲ್ಲಿ ಮೆ|| ಯಂ. ಯಸ್. ರಾಮಚಂದ್ರರಾಯರಿಗೆ ಕೊಟ್ಟಿದ್ದ ೧೫ ದಿನಗಳ ಪ್ರಿವಿಲೇಜ್ ರಜಾ ರದ್ದುಮಾಡಿರುತ್ತೆ.

Occasional Notes.

ವಿವಿಧ ವಿಷಯಗಳು.

೧. ೧೯೧೦ನೆ ಇಸವಿ ಆಗಸ್ಟ್ ಮಾಹೆಯಲ್ಲಿ ಮಂಡ್ಯದ ತಾಲ್ಲೂಕು ಕೊತ್ತತ್ತಿ ಹೋಬಳಿ ಗುತ್ತಲ ಗ್ರಾಮದಲ್ಲಿ ರೈತಾಬಿ ಜನರಿಗೆ ಉಪಯೋಗವಾಗುವಂತೆ ಒಂದು ಪರಸ್ಪರ ಸಹಾಯ ಸಂಘವು ಸ್ಥಾಪಿಸಲ್ಪಟ್ಟು ಅದೇ ಮಾಹೆ ೧೩ನೆ ತಾರೀಖಿನಲ್ಲಿ ರಿಜಿಸ್ಟರ್ ಮಾಡಲ್ಪಟ್ಟಿತು.

೨. ದೊಡ್ಡಬಳ್ಳಾಪುರದ ತಾಲ್ಲೂಕಿನಲ್ಲಿ ರೈತಾಬಿ ಜನರಿಗೆ ಉಪಯೋಗವಾಗುವುದಕ್ಕೆ ಕೆಲವು ಪರಸ್ಪರ ಸಹಾಯ ಸಂಘಗಳನ್ನು ಏರ್ಪಡು ಮಾಡಲು ಕೋಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರ ಆಫೀಸ್ ಸ್ಪೆಷಲ್ ಡೆಪ್ಯುಟಿ ಅಮಲ್ದಾರರವರು ದೊಡ್ಡಬಳ್ಳಾಪುರಕ್ಕೆ ಹೋಗಿರುತ್ತಾರೆ.

V. B. S. & SONS, BANGALORE.—1910.

THE MYSORE

REVENUE & AGRICULTURAL GAZETTE.

ವಾಲ್ಯುಂ ೪.] ಶನಿವಾರ, ೧ನೆ ಅಕ್ಟೋಬರ್ ೧೯೧೦. [ನಂ. ೨೩.

Contents.

1. Co-operative Societies in Rural Parts.
2. Cultivation of Soy-beans.
3. Green Leaf Manure.
4. The Improvement of Cattle.
5. Government Orders.
6. Revenue Commissioner's Circular.
7. Notifications.
8. Occasional Notes.

(i) Cattle Fair at Subramhanya. (ii) Cattle Urine as Manure. (iii) Tree Cottons (iv) Cattle Protection. (v) Poudrette Manure for Dry Crops. (vi) Agricultural Calendar. (vii) Collection of certain Seeds. (viii) Saline Soils etc.

ಅನುಕ್ರಮಣಿಕೆ.

೧. ಪರಸ್ಪರ ಸಹಾಯ ಸಂಘಗಳನ್ನು ಗ್ರಾಮಾಂತರಗಳಲ್ಲಿ ಸ್ಥಾಪಿಸುವದಕ್ಕೆ ಸಲಹೆಗಳು.
೨. ಸೋಯಾ ಅವರೆಯ ಸಾಗುವಳಿ.
೩. ಹಸೀ ಸೊಪ್ಪಿನ ಗೊಬ್ಬರ.
೪. ದನಗಳ ಸುಧಾರಣೆ.
೫. ಸರ್ಕಾರಿ ಹುಕುಂಗಳು.
೬. ರೆವಿನ್ಯೂ ಕಮಿಷನರವರ ಸರ್ಕ್ಯುಲರ್ ಹುಕುಂ.
೭. ಇಷ್ತಿಹಾರುನಾಮೆಗಳು.
೮. ವಿವಿಧ ವಿಷಯಗಳು.

(i) ಸುಬ್ರಹ್ಮಣ್ಯದ ದನಗಳ ಜಾತ್ರೆ. (ii) ದನಗಳ ಗಂಜಳದ ಗೊಬ್ಬರ. (iii) ಮರಹತ್ತಿಗಳು. (iv) ದನಗಳ ಸಂರಕ್ಷಣೆ. (v) ಖುಷ್ಕಿ ಬೆಳೆಗಳಿಗೆ ಪೌಡರೆಟ್ಟೆಂಬ ಗೊಬ್ಬರದ ಪ್ರಯೋಜನ. (vi) ವ್ಯವಸಾಯದ ಪಂಚಾಂಗ. (vii) ಕೆಲವು ಬೀಜಗಳ ಶೇಖರಣೆ. (viii) ಚೌಳು ಭೂಮಿಯನ್ನು ಆಬಾದು ಮಾಡುವದು ವಗೈರೆ.

Co-operative Societies in Rural Parts.

ಪರಸ್ಪರಸಹಾಯ ಸಂಘಗಳನ್ನು ಗ್ರಾಮಾಂತರಗಳಲ್ಲಿ ಸ್ಥಾಪಿಸುವದಕ್ಕೆ ಸಲಹೆಗಳು.

ಗ್ರಾಮಾಂತರಗಳಲ್ಲಿ ಪರಸ್ಪರ ಸಹಾಯ ಸಂಘಗಳನ್ನು ಏರ್ಪಡಿಸು

ಲು ತಿಳಿಯಬೇಕಾದ ವಿಷಯಗಳನ್ನು ಕುರಿತು ಸಂಸ್ಥಾನದ ರಿಜಿಸ್ಟ್ರಾರ್ ವರು ಕೊಟ್ಟಿರುವ ಸಲಹೆಗಳ ಪೈಕಿ ಕೆಲವನ್ನು ಹಿಂದಿನ ಸಂಚಿಕೆಯಲ್ಲಿ ಪ್ರಕಟಪಡಿಸಿದೆಯಷ್ಟೆ. ಈ ಸಂಚಿಕೆಯಲ್ಲಿ ಸದರೀಯವರ ಉಳಿದ ಸಲಹೆಗಳು ವಿವರಿಸಲ್ಪಟ್ಟಿರುತ್ತವೆ.

ಬಂಡವಾಳ.

೧. ಗ್ರಾಮಾಂತರಗಳಲ್ಲಿನ ಅಪರಿಮಿತ ಜವಾಬ್ದಾರಿಯುಳ್ಳ ಪರಸ್ಪರ ಸಹಾಯ ಸಂಘಗಳಿಗೆ ಸಾಲವು ಬೇಕಾಗಿದ್ದಲ್ಲಿ ಸುಲಭವಾಗಿ ದೊರಿಯುತ್ತೆ. ಬೆಂಗಳೂರಿನಲ್ಲಿ ಸ್ಥಾಪಿತವಾಗಿರುವ ಸೆಂಟ್ರಲ್ ಬ್ಯಾಂಕಿನವರು ಸರಿಯಾದ ಖಾತರಿಮೇಲೆ ಕೂಡಿಸಪಟ್ಟಿಗೆ ಮೊಬಲಗನ್ನು ಶೇಕಡ ೭½ ರೂಪಾಯಿ ಬಡ್ಡೀ ದರದ ಮೇಲೆ ಸಾಲ ಕೊಡಲು ಸಿದ್ಧರಾಗಿರುತ್ತಾರೆ. ಸದರಿ ಸಾಲವನ್ನು ಒಂದೆರಡು ವರುಷಗಳಲ್ಲಿಯಾದರೂ, ಒಂದೇ ಗಂಟಿನಲ್ಲಾದರೂ ಅಥವ ಕಂತು ಪೂರ್ವಕವಾಗಿಯಾದರೂ ತೀರಿಸಬಹುದು. ಇದಕ್ಕಿಂತ ಹೆಚ್ಚಾದ ವಾಯಿದೆಮೇಲೆ ಸಾಲವನ್ನು ತೆಗದುಕೊಳ್ಳುವುದು ಸೊಸೈಟಿಯ ಅಭಿವೃದ್ಧಿಗೆ ಒಳ್ಳೇದಲ್ಲ ಯಾಕಂದರೆ, ಹೀಗೆ ಮಾಡುವುದರಿಂದ ಮೆಂಬರುಗಳಲ್ಲಿ ಮಿತವ್ಯಯವು ವೃದ್ಧಿಸುವುದಿಲ್ಲ. ಇದಲ್ಲದೆ ಮೆಂಬರುಗಳಿಂದಲೂ ಮತ್ತು ಇತರರಿಂದಲೂ ಸುಲಭ ಬಡ್ಡಿಮೇಲೆ ಡಿಪಾಜಿಟ್ಟುಗಳನ್ನು ಬರಮಾಡಿಕೊಂಡು ಬಂಡವಾಳವನ್ನು ವೃದ್ಧಿಗೊಳಿಸಬಹುದು. ಮತ್ತು ಷೇರು ಒಂದಕ್ಕೆ ೨-೩ ರೂಪಾಯಿಗಳಂತೆ ಕೆಲವು ಷೇರುಗಳನ್ನು ಗೊತ್ತುಮಾಡಿ ಸುಗ್ಗೀಕಾಲದಲ್ಲಿ ಅಂದರೆ ತಮ್ಮ ಕೈಯಲ್ಲಿ ಹಣವಿರುವ ಕಾಲದಲ್ಲಿ ಮೆಂಬರುಗಳು ಷೇರುದಾರರಾಗುವದಕ್ಕೆ ಅವಕಾಶವನ್ನುಂಟುಮಾಡಿಕೊಟ್ಟು ತನ್ಮೂಲಕವೂ ಬಂಡವಾಳವನ್ನು ಅಭಿವೃದ್ಧಿಗೊಳಿಸಬಹುದು.

ಸಾಲ ಕೊಡುವದು.

೨. ಸರಿಯಾದ ಖಾತರಿಮೇಲೆ ಮೆಂಬರುಗಳಿಗೆ ವಿನಃ ಮತ್ತ್ಯಾರಿಗೂ ಸಾಲ ಕೊಡಲಾಗದು. ಮೊದಲು ಮೊದಲು ಸಾಲದ ಮೊಬಲಗು ಕಮ್ಮಿಯಾಗಿರಬೇಕು. ಕ್ರಮೇಣ ಹೆಚ್ಚಿಸಬಹುದು.

೩. ಸಾಲದ ಉದ್ದೇಶ್ಯಗಳನ್ನು ಚೆನ್ನಾಗಿ ತಿಳಿದುಕೊಂಡು ಆಯಾ ಮೆಂಬರಿನ ಅನುಕೂಲ ಮತ್ತು ಥವೂತ್ತಿಯಮೇಲೆ ಸಾಲ ವಾಪಸು ಬರು

ಷರತ್ತನ್ನು ಮೊದಲೇ ವಿಧಾಯಕ ಮಾಡಿ ಪಂಚಾಯಿತರು ಮೆಂಬರುಗಳಿಗೆ ಸಂಘದಿಂದ ಸಾಲ ಕೊಡಬೇಕು.

೪. ಯಾವಾಗಲೂ ರಾಸು, ಬಂಡಿ, ಬೀಜ, ಗೊಬ್ಬರ ಮುಂತಾದ ಸಾಮಾನುಗಳನ್ನು ಕೊಂಡುಕೊಳ್ಳುವದಕ್ಕೂ, ಜಮೀನಿನಮೇಲೆ ಇರತಕ್ಕ ಭೋಗ್ಯ, ಆಧಾರ ವಗೈರೆಗಳನ್ನು ಬಿಡಿಸಿಕೊಳ್ಳುವದಕ್ಕೂ, ಹೊಸ ಜಮೀನುಗಳನ್ನು ಕೊಂಡುಕೊಳ್ಳುವುದಕ್ಕೂ ಮತ್ತು ಇತರ ವಿಧವಾದ ಕೃಷಿಸಂಬಂಧವಾದ ಕೆಲಸಗಳಿಗೆ ಮಾತ್ರ ಸಾಲಗಳನ್ನು ಕೊಡುವುದು ಒಳ್ಳೇದು. ಹೀಗೆ ಹೇಳಿದ್ದರಿಂದ ಇತರ ವಿಧವಾದ ಕೆಲಸಗಳಿಗೆ ಸಾಲ ಕೊಡುವದಿಲ್ಲವೆಂಬ ಅಭಿಪ್ರಾಯ ಮಾಡಿಕೊಳ್ಳಕೂಡದು. ಯುಕ್ತ ತೋರಿದರೆ ಪಂಚಾಯಿತರು ಮದುವೆ ವಗೈರೆ ಕೆಲಸಗಳ ನಿಮಿತ್ಯಕ್ಕೂ ಸಾಲಗಳನ್ನು ಕೊಡಬಹುದು. ಆದರೆ ಹೀಗೆ ಕೊಡಲ್ಪಡುವ ಸಾಲಗಳು ಕೇವಲ ಕಡಿಮೆಯಾಗಿರುವದು ಲೇಸು. ಯಾವ ಉದ್ದಿಶ್ಯಕ್ಕಾಗಿ ಸಾಲ ಪಡೆಯುತ್ತಾರೋ ಅದೇ ಕೆಲಸಕ್ಕೇನೆ ಆ ಮೊಬಲಗನ್ನು ಉಪಯೋಗಿಸಬೇಕೆಂದು ಪಂಚಾಯಿತರು ತಿಳಿಸಬೇಕು. ಹೀಗೆ ನಡೆಯುತ್ತಾರೆಂಬುದನ್ನು ವಿಶೇಷ ಗಮನಕೊಟ್ಟು ನೋಡುತ್ತಿರಬೇಕು. ಹಾಗೆ ಒಂದುವೇಳೆ ಉದ್ದೇಶಕ್ಕೆ ಮೀರಿದಾರೆಂದು ತಿಳಿದುಬಂದರೆ ಕೂಡ್ಲೆ ಸಾಲವನ್ನು ಹಿಂದಕ್ಕೆ ಬರಮಾಡಿಕೊಳ್ಳಬೇಕು.

ಬಡ್ಡಿ ದರ ಮತ್ತು ನಫೆ.

೫. ಪ್ರಾರಂಭದಲ್ಲಿ ಮೆಂಬರುಗಳಿಗೆ ಕೊಡುವ ಸಾಲದಮೇಲೆ ಬಡ್ಡಿಯನ್ನು ಶೇಕಡ ೧೨ ರೂಪಾಯಿಗಳು ಅಥವಾ ಆ ಜೂಬಾಜಿನಲ್ಲಿರುವ ದರಗಳಂತೆ ವಿಧಿಸಬಹುದು. ಸಂಘದಲ್ಲಿ ಜಖೀರಿ ಫಂಡು ವೃದ್ಧಿಆದ ಹಾಗೆಲ್ಲಾ ಈ ದರವು ಕಮ್ಮಿ ಆಗುತ್ತಾ ಬರಬಹುದು.

೬. ಸಂಘದ ಮೆಂಬರುಗಳಿಂದ ಶೇಕಡ ೧೨ ರೂಪಾಯಿ ಪ್ರಕಾರ ಬಡ್ಡಿ ವಸೂಲ್ ಮಾಡಿದರೆ, ಸಂಘದ ಹೆಸರಿನಲ್ಲಿ ಹೊರಗಿನಿಂದ ತಂದಿರುವ ಸಾಲದಮೇಲೆ ಕೊಡಬೇಕಾದ ಬಡ್ಡಿಯನ್ನು ಶೇಕಡ ೭½ ರೂಪಾಯಿನಂತೆ ಕೊಟ್ಟು, ಮಿಗುವ ೪½ ರೂಪಾಯಿನಲ್ಲಿ, ೧½ ರೂಪಾಯಿಯನ್ನು ಸಾದಿಲ್ವಾರ್ ವಗೈರೆ ಖರ್ಚಿಗಾಗಿ ಉಪಯೋಗಿಸಿದನಂತರ ಉಳಿಯುವ ನಿವ್ವ

ಳ ನಫೆಯು ಶೇಕಡ ೩ ರೂಪಾಯಿಗಳಾಗುತ್ತೆ. ಒಂದು ಸಾಲಿನಲ್ಲಿ ೨೦೦೦ ರೂಪಾಯಿ ಲೇವಾದೇವಿ ನಡೆಸಿದರೆ ಸಾಲ್ ಆಖೈರಿನಲ್ಲಿ ಸುಮಾರು ೬೦ ರೂಪಾಯಿಗಳು ನಿವ್ವಳ ನಫೆಯಾಗಿ ಪರಿಣಮಿಸುವವು. ಇದನ್ನು ರಿಜರ್ವಿಗೆ ತೆಗೆದಿಡುತ್ತಾ ಬಂದರೆ ಸುಮಾರು ೧೫ ವರುಷಗಳಲ್ಲಿ ೧೦೦೦ ರೂಪಾಯಿಗಳಷ್ಟು ಜಖೀರಿ ಫಂಡನ್ನು ಜಮಾಯಿಸಬಹುದು.

ಜಖೇರಿಫಂಡು.

೭. ಮೇಲ್ಕಂಡ ರೀತಿಯಲ್ಲಿ ಜಖೇರಿ ಫಂಡು ಜಮಾಯಿಸುವವರಿಗೂ ಸಂಘದಲ್ಲಿ ಮೆಂಬರುಗಳಿಗೆ ನಫೆಯು ಹಂಚಿಸಲ್ಪಡುವದಿಲ್ಲ. ಜಖೇರಿಫಂಡು ಜಾಸ್ತಿ ಆಗುತ್ತ ಬಂದಹಾಗೆಲ್ಲಾ ಸಾಲದಮೇಲಿನ ಬಡ್ಡಿಯನ್ನು ಸ್ವಲ್ಪ ಸ್ವಲ್ಪ ಕಡಿಮೆ ಮಾಡುತ್ತಾ ಬರಬಹುದು.

೮. ರಿಜರ್ವ್ ಫಂಡು ಹೆಚ್ಚಿದಹಾಗೆಲ್ಲಾ ಸಂಘವು ದೃಢತ್ವವನ್ನು ಹೊಂದುವುದು. ಆದ್ದರಿಂದ ಈ ರಿಜರ್ವ್ ಮೊಬಲಗನ್ನು ಸಂಘದ ಬಂಡವಾಳದ ಜೊತೆಗೆ ಸೇರಿಸದೆ ಕೋಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರು ಒಪ್ಪುವ ರೀತಿಯಲ್ಲಿ ಸೆಂಟ್ರಲ್ ಬ್ಯಾಂಕಿನಲ್ಲಿ ಅಥವಾ ಪೋಸ್ಟ್ ಯಾ ಗೌರ್ನಮೆಂಟ್ ಸೇವಿಂಗ್ಸ್ ಬ್ಯಾಂಕಿನಲ್ಲೂ ಅಥವ ಮತ್ಯಾವ ಕಡೆಯಲ್ಲಾದರೂ ಡಿಪಾಜಿಟ್ಟಾಗಿ ಇಡಬೇಕು.

೯. ಸಂಘದ ಮ್ಯಾನೇಜಿಂಗ್ ಕಮಿಟಿ ಯಾ ಪಂಚಾಯಿತರು ಮೆಂಬರುಗಳಿಂದಲೇ ಚುನಾಯಿಸಲ್ಪಟ್ಟಂಥವರಾಗಬೇಕು.

ಕೆಲಸ ನಡೆಸುವದು.

೧೦. ಪಂಚಾಯಿತರು ಗುಣಶಾಲಿಗಳಾಗಿ ತಮ್ಮ ಗ್ರಾಮದಲ್ಲಿ ಸಕಲರಿಗೂ ತಿಳಿದಂಥವರಾಗಿರಬೇಕು. ದಾಕ್ಷಿಣ್ಯವಿಲ್ಲದೆ ಸಂಘದ ಒಳ ನಿಬಂಧನೆಗಳನ್ನು ಅನುಸರಿಸಿ ಕೆಲಸಕಾರ್ಯಗಳನ್ನು ಒಬ್ಬ ಸೆಕ್ರೆಟರಿ ಮುಖಾಂತರ ನಡೆಸಬೇಕು.

೧೧. ಮೆಂಬರುಗಳನ್ನು ಸಂಘಕ್ಕೆ ಸೇರಿಸಿಕೊಳ್ಳುವದರಲ್ಲಿಯೂ ಮತ್ತು ಸಾಲಕ್ಕೆ ತಕ್ಕ ಖಾತರಿಯನ್ನು ಪಡೆಯುವ ವಿಚಾರದಲ್ಲಿಯೂ ಕೇವಲ ಜಾಗರೂಕರಾಗಿರಬೇಕು.

೧೨. ಮೇಲೆ ವಿವರಿಸಿರುವ ನಿಯಮಗಳನ್ನು ಚೆನ್ನಾಗಿ ತಿಳಿ

ದು ಪರಸ್ಪರ ಸಹಾಯ ಸಂಘ ಒಂದನ್ನು ಸ್ಥಾಪಿಸಬೇಕೆಂದು ಅಪೇಕ್ಷಿಸುವ ಜನಗಳು ತಮ್ಮ ಅಭಿಲಾಷೆಯನ್ನು ಕೊ ಆಪರೇಟಿವ್ ಸೊಸೈಟಿಗಳ ರಿಜಿಸ್ಟ್ರಾರವರಿಗೆ ಲಿಖಿತಮೂಲಕ ತಿಳಿಸಿಕೊಂಡಲ್ಲಿ ಬೇಕಾದ ಒಳ ನಿಬಂಧನೆಗಳನ್ನು ಏರ್ಪಡಿಸಿಕೊಟ್ಟು, ಸೂಕ್ತ ಕಂಡುಬಂದಲ್ಲಿ ಸದರಿ ಸಂಘವನ್ನು ರಿಜಿಸ್ಟರು ಮಾಡುವುದಕ್ಕೆ ತಕ್ಕ ಏರ್ಪಾಡು ಮಾಡಲಾಗುತ್ತೆ.

Cultivation of Soy-beans.*

ಸೋಯಾ ಅವರೆ.

ಈಚೆಗೆ ಅನೇಕ ರೈತರು ಸೋಯಾ ಅವರೆಯನ್ನು ಬೆಳೆ ಮಾಡುವದರಲ್ಲಿ ವಿಶೇಷ ಆಸಕ್ತಿಯನ್ನು ತೋರಿಸುತ್ತಾ ಇರುವದರಿಂದ ಇದರ ಸಾಗುವಳಿ ವಿಷಯವಾಗಿ ನಾಗಪುರದ ವ್ಯವಸಾಯ ಕಲಾಶಾಲೆಯಲ್ಲಿ ಪ್ರಮುಖ ಉಪಾಧ್ಯಾಯರಾಗಿರುವ ಮೆ|| ಆರ್. ಜಿ. ಅರ್ಲ್ ಎಂ.ಎ., ಯವರು ಹೇಳಿರುವದನ್ನು ಕೆಳಗೆ ವಿವರಿಸಿದೆ.

ಸೋಯಾ ಗಿಡಕ್ಕೆ ದಪ್ಪನಾದ ಮತ್ತು ಬಲವಾದ ತಾಯಿ ಬೇರೂ ಗಡುಸಾದ ದಂಟುಗಳೂ ಇರುತ್ತವೆ. ಇದರಲ್ಲಿ ಎಲೆಗಳು ಬಹಳ ಮತ್ತು ಇದರ ಹೂ ಮತ್ತು ಕಾಯಿ ಸಣ್ಣ. ಕೆಲವು ಜಾತಿ ಮಟ್ಟನಾಗಿ ಬೆಳೆದು ಬೇಗ ಫಸಲು ಬಿಡುತ್ತೆ. ಮತ್ತೆ ಕೆಲವು ಜಾತಿಗಳು ಎತ್ತರವಾಗಿ ಬೆಳೆದು ಫಸಲಾಗುವದಕ್ಕೆ ಹೆಚ್ಚು ಕಾಲ ಹಿಡಿಯುವದು.

ಭೂಮಿ:—ಹತ್ತಿ ಮತ್ತು ಜೋಳದ ಫಸಲುಗಳಿಗೆ ಅತ್ಯುತ್ತಮವೆಂದು ಕಂಡುಬಂದಿರುವ ಮತ್ತು ಡಿಶಂಬರುವರಿಗೂ ತಂಪನ್ನು ಬಿಡದೆ ಇಟ್ಟುಕೊಂಡಿರುವಂಥಾ ಎರೆ ನೆಲವು ಸೋಯಾ ಫಸಲಿಗೆ ಬಹು ಉತ್ಕೃಷ್ಟನಾದದ್ದು. ಉಸುಬು ಭೂಮಿಯಲ್ಲಿ ಮಳೆಗಾಲದಲ್ಲಿಮಾತ್ರ ಗಿಡವು ಬಹು ಸೊಂಪಾಗಿ ಬೆಳೆಯುವದು; ಆದರೆ ಕಾಳು ಪಕ್ವಕ್ಕೆ ಬರತಕ್ಕ ಕಾಲಕ್ಕೆ ಸರಿಯಾಗಿ ಗಿಡವು ಒಣಗಲಾರಂಭಿಸುವದು. ನಾಗಪುರದ ವ್ಯವಸಾಯದ ಫಾರಂನಲ್ಲಿರುವ ಎರಡುತರಹೆ ಭೂಮಿಗಳಲ್ಲೂ ಫಸಲಿಟ್ಟದ್ದರಲ್ಲಿ ಉಸುಬು ಪ್ರದೇಶದಲ್ಲಿ ಎಕರೆ ಒಂದಕ್ಕೆ ೩೨ ಪೌಂಡು ಬೀಜ ಹಾಟ್ಟು

---

* ಅಗ್ರಿಕಲ್ಚರಲ್ ಗೆಜೆಟ್, ಏಪ್ರಿಲ್ ೧೯೧೦.

ವಳಿಯಾದದ್ದು ಎರೆ ನೆಲದಲ್ಲಿ ಎಕರೆ ಒಂದಕ್ಕೆ ೩೮೦ ಪೌಂಡು ಹುಟ್ಟುವಳಿಯಾಯಿತು. ಭೂಮಿಯು ಒಳ್ಳೇದಾಗಿದ್ದರೆ ೪೫೦-೫೦೦ ಪೌಂಡುಗಳವರಿಗೂ ಹುಟ್ಟುವಳಿಯಾಗುವದರಲ್ಲಿ ಯಾವ ಸಂಶಯವೂ ಇಲ್ಲ.

ಬಿತ್ತುವ ಕಾಲ:—ಮಳೆಗಳು ಪ್ರಾರಂಭವಾಗುತ್ತಲೆ ಅಂದರೆ ಜುಲೈ ತಿಂಗಳಲ್ಲಿ ಸಾಧ್ಯವಾದಷ್ಟುಮಟ್ಟಿಗೂ ಜಾಗ್ರತೆಯಾಗಿ ಬಿತ್ತಬೇಕು.

ಬೀಜ:—ಜಮೀನನ್ನು ಬಿಸಲು ಕಾಲದಲ್ಲೇ ಉತ್ತು ಚನ್ನಾಗಿ ಹದಮಾಡಿಕೊಂಡಿದ್ದಲ್ಲಿ ಎಕರೆಯೊಂಧಕ್ಕೆ ೨೨-೨೫ ಪೌಂಡು ಬೀಜವಾದರೆ ಸಾಕಾಗುತ್ತೆ. ಬೀಜವನ್ನು ಕೂರಿಗೆಯಿಂದಲೇ ಬಿತ್ತಿದರೆ ಒಳ್ಳೇದು.

ಗೊಬ್ಬರ:—ಸೋಯಾ ಅವರೆಯನ್ನು ಬೆಳೆಯಬೇಕೆಂದಿರುವ ಜಮೀನಿಗೆ ತಿಪ್ಪೆ ಗೊಬ್ಬರವನ್ನಾಗಲಿ ದನಗಳ ಗೊಬ್ಬರವನ್ನಾಗಲಿ ಹೊಸದಾಗಿ ಹಾಕಬೇಕೆಂಬ ಅವಶ್ಯಕವಿಲ್ಲ. ಹಿಂದಿನ ಫಸಲಿಗೋಸ್ಕರ ಹಾಕಿದ್ದ ಗೊಬ್ಬರವೇ ಇದಕ್ಕೂ ಒದಗುತ್ತೆ. ಆದರೆ ರಂಜಕ ದ್ರಾವಕಯುಕ್ತ ಪದಾರ್ಥವನ್ನು (Super phosphate) ಗೊಬ್ಬರವಾಗಿ ಕೊಟ್ಟಲ್ಲಿ ಸೋಯಾ ಅವರೆಯ ಪೈರು ಬಹಳ ಸೊಂಪಾಗಿ ಬೆಳೆಯುವದು.

ಮಧ್ಯವ್ಯವಸಾಯ.—ಸೋಯಾ ಅವರೆಯ ಪೈರು ತಕ್ಕಮಟ್ಟಿಗೆ ಬೆಳೆದು ನೆಲವೆಲ್ಲಾ ಕಾಣದಂತೆ ಮುಚ್ಚಿಕೊಳ್ಳುವವರಿಗೂ ಆಗಾಗ್ಯೆ ಗಿಡಗಳ ಸಾಲುಗಳ ಮಧ್ಯೆ ಕೆತ್ತುತ್ತಾ ಇದ್ದರೆ ಜಮೀನಿನಲ್ಲಿರುವ ತೇವ ಒಣಗಿ ಹೋಗದೆ ನೆಲವು ಶಬ್ಬಿಯಾಗಿರುತ್ತೆ; ಪೈರು ಸೊಂಪಾಗಿ ಬೆಳೆಯುತ್ತೆ.

ಕಟಾವು.—ಕಾಳಿಗೋಸ್ಕರ ಸೊಯಾ ಅವರೆಯನ್ನು ಬಿತ್ತಿದ್ದಲ್ಲಿ ನವಂಬರು ತಿಂಗಳಲ್ಲಿ ಪೈರು ಕಟಾವಿಗೆ ಸಿದ್ಧವಾಗಿರುತ್ತೆ. ಆಗ ಕಟಾವು ಮಾಡಿ ಕಣಕ್ಕೆ ಸಾಗಿಸಿಕೊಂಡು ಅಲ್ಲಿ ಒಣಗಿಸಿ ಕಾಳು ಬಿಡಿಸಿಕೊಳ್ಳಬಹುದು. ಹುರುಳಿಕಾಯಿಯಿಂದ ಕಾಳನ್ನು ಬಿಡಿಸಿಕೊಳ್ಳುವಂತೆಯೇ ಇದರಿಂದಲೂ ಬಿಡಿಸಿಕೊಳ್ಳಬಹುದು. ಕಾಳಿನಜೊತೆಗೆ ಎಕರೆ ಒಂದಕ್ಕೆ ಸುಮಾರು ೧೫೦೦-೬೦೦ ಪೌಂಡು ಹೊಟ್ಟು (ಬೂಸಾ) ಶಿಕ್ಕುತ್ತೆ.

ಸೋಯಾ ಅವರೆಯನ್ನು ಮೇವಿಗೋಸ್ಕರಮಾತ್ರ ಸಾಗುವಳಿ ಮಾಡಿದ್ದಲ್ಲಿ ಬಿತ್ತಿದ ಮೂರು ತಿಂಗಳುಗಳೊಳಗಾಗಿ ಕಟಾವಿಗೆ ಸಿದ್ಧವಾಗು

ತ್ತೆ. ಮೇವು ಒಳ್ಳೆ ಸಾರವುಳ್ಳದ್ದಾಗಿಯೂ ಸುಲಭವಾಗಿ ರಾಸುಗಳಿಂದ ಜೀರ್ಣಿಸಿಕೊಳ್ಳಬಹುದಾಗಿಯೂ ಇರುವದು.

—o—

Green Leaf Manure.

ಹಸಿ (ಸೊಪ್ಪಿನ) ಗೊಬ್ಬರ.

ಹಸಿ ಸೊಪ್ಪನ್ನು ಜಮೀನಿಗೆ ಗೊಬ್ಬರವಾಗಿ ಕೊಡುವದರಲ್ಲಿ ಅದು ನೆಲದಲ್ಲಿ ಬಹಳ ಕೆಳಗೆ ಹೂಳಿಹೋಗುವಂತೆ ಎಂದಿಗೂ ಮಾಡಕೂಡದು. ಜಮೀನಿನ ಮೇಲ್ಮಣ್ಣು ಮರಳಿನ ಮಿಶ್ರತೆಯಿಂದ ಉಸುಬಾಗಿದ್ದಾಗ ಮಾತ್ರ ಗೊಬ್ಬರದಮೇಲೆ ಮಣ್ಣು ಸ್ವಲ್ಪ ಹೆಚ್ಚಾಗಿ ಕೂರುವಂತೆ ಮಾಡಬಹುದು. ಸೊಪ್ಪು ಬಲಿತು ಗಿಡದಲ್ಲಿ ಅರ್ಧಪಾಲು ಎಲೆಗಳೆಲ್ಲಾ ಅರಸಿನ ಬಣ್ಣ ತಿರಿಗಿರುವಾಗ ಗೊಬ್ಬರವಾಗಿ ಉಪಯೋಗಿಸಲ್ಪಡುವದಕ್ಕೆ ಲಾಯಖೆಂದು ತಿಳಿಯಬೇಕು. ಇತರ ಗೊಬ್ಬರಗಳಿಗಿಂತ ಸೊಪ್ಪಿನ ಗೊಬ್ಬರವು ಅತಿ ಜಾಗ್ರತೆಯಾಗಿ ಕೊಳೆಯುವದಕ್ಕೆ ಪ್ರಾರಂಭಿಸುವದರಿಂದಲೂ, ಇದರ ಸಾರವು ಬೇಗ ಜಮೀನಿನಿಂದ ಕೊಚ್ಚಿಹೋಗಬಹುದಾದ್ದರಿಂದಲೂ ಈ ಗೊಬ್ಬರವನ್ನು ಜಮೀನಿಗೆ ಕೊಡುತ್ತಲೇ ಸಾಧ್ಯವಾದಮಟ್ಟಿಗೆ ತರಹೆವಾರಿ ಪೈರುಗಳನ್ನು ಇಟ್ಟು ಬೆಳೆ ಮಾಡಬೇಕು.

ಹಸಿ ಸೊಪ್ಪಿನ ಗೊಬ್ಬರವನ್ನು ಎಂಥಾ ಜಮೀನಿಗೆ ಕೊಟ್ಟರೆ ಹೆಚ್ಚು ಫಲದಾಯಕವಾಗುತ್ತೆಂಬುವದನ್ನು ತಿಳಿದುಕೊಳ್ಳುವದು ಅವಶ್ಯಕ; ಏಕಂದರೆ ಮರಳು ಮಿಶ್ರವಾದ ಉಸುಬಿನಂಥಾ ಜಮೀನಿನಲ್ಲಿ ಈ ಗೊಬ್ಬರದಿಂದ ಆಗುವಷ್ಟು ಪ್ರಯೋಜನವು ಎರೆ ಜಮೀನಿನಲ್ಲಿ ಆಗಲಾರದು. ಉಸುಬಿನ ಜಮೀನಿನಲ್ಲಿ ಸಸ್ಯಾಹಾರಗಳು ಬಹಳ ಕಡಿಮೆಯಾಗಿರುವದರಿಂದಲೂ, ಉಸುಬಿನಲ್ಲಿ ನೀರಿನ ಹಿಡಿತ ಬಹಳ ಕಮ್ಮಿಯಾದ್ದರಿಂದಲೂ, ಬಿಸಲು ಗಾಳಿಗಳಿಂದ ಶೋಷಿಸಲ್ಪಡುವದರಿಂದಲೂ, ಹಸಿ ಸೊಪ್ಪಿನ ಗೊಬ್ಬರದಿಂದ ಉಸಬು ಜಮೀನಿಗೆ ಬಹಳ ಪ್ರಯೋಜನವಾಗುತ್ತೆ. ಜೇಡಿ ಮುಂತಾದ ಬಾಸವಾಸಿ ಮಣ್ಣುಗಳುಳ್ಳ ಜಮೀನಿನ ವಿಷಯವೇ ಬೇರೆ. ಅವುಗಳಿಗೆ ಹಸಿ ಸೊಪ್ಪಿನ ಗೊಬ್ಬರವನ್ನು ಉಸುಬಿನ ಜಮೀನಿಗೆ ಕೊಡುವಂತೆ ಪದೇಪದೇ ಕೊಡಬೇಕಾಗಿರುವದಿಲ್ಲ. ಏಕಂದರೆ, ಅವುಗಳಿಗೆ ನೀರನ್ನು

ಹಿಡಿಯುವ ಶಕ್ತಿಯು ಚೆನ್ನಾಗಿದೆ. ಸಸ್ಯಾಹಾರಗಳನ್ನು ಬೇಗ ಕಳೆದು ಕೊಳ್ಳುವದಿಲ್ಲ. ಆದರೂ ಆಗಾಗ್ಯೆ ಸೊಪ್ಪಿನ ಗೊಬ್ಬರವನ್ನು ಇಂಥಾ ಜಮೀನಿಗೆ ಕೊಡುತ್ತಾ ಇದ್ದರೆ ಭೂಮಿಯ ಸಾರವು ಹೆಚ್ಚುವದಲ್ಲದೆ ಅ ದರಲ್ಲಿರತಕ್ಕ ಸಸ್ಯಾಹಾರಗಳನ್ನು (Potash, Phosphoric Acid etc.) ಸುಲಭವಾಗಿ ಪೈರಿಗೆ ಒದಗುವಹಾಗೆ ಮಾಡುತ್ತೆ.

ಬತ್ತವನ್ನು ಕಟಾವು ಮಾಡುವದಕ್ಕೆ ೧೦ ದಿನ ಮುಂಚೆ ಸಣಬನ್ನು ಜಮೀನಿನಲ್ಲಿ ಬಿತ್ತಬಹುದು. ಹೀಗೆ ಮಾಡಿದಲ್ಲಿ ೬-೮ ವಾರಗಳಲ್ಲಿ ಸಣಬಿ ನಫಸಲು ದನಗಳ ಮೇವಿಗೆ ಯೋಗ್ಯವಾಗುತ್ತೆ. ಆಗ ಅದನ್ನು ಬುಡದಿಂ ದ ಒಂದು ಮೊಳ ಬಿಟ್ಟು ಕತ್ತರಿಸಿಟ್ಟುಕೊಳ್ಳಬೇಕು. ಹೀಗೆ ಕತ್ತರಿಸಿ ದಮೇಲೆ ನಿಲ್ಲುವ ಸಣಬಿನ ಬೇರು ಮತ್ತು ಕೂಳೆಗಳು ಮುಂದಿನ ಬತ್ತದ ಪೈರಿಗೆ ಒಳ್ಳೆ ಗೊಬ್ಬರವಾಗುತ್ತೆ.

ನೀಲಿ ಅಥವ ಕಾಡುನೀಲಿ ಬೀಜವನ್ನು ಬತ್ತದ ಪೈರು ಕಟಾವಾಗು ವದಕ್ಕೆ ಸ್ವಲ್ಪ ಹಿಂದು ಮುಂದು ಬಿತ್ತಿದರೆ ಅದೂ ಕೂಡ ಮುಂದಿನ ಬತ್ತ ದ ಫಸಲಿಗೆ ಒಳ್ಳೇ ಗೊಬ್ಬರವಾಗುತ್ತೆ. ಅವರೆ ಬೀಜವನ್ನು ಏಪ್ರಿಲ್ ಮತ್ತು ಮೇ ತಿಂಗಳುಗಳಲ್ಲಿ ಬರುವ ಮಳೆಗಳೊಂದಿಗೆ ಬಿತ್ತಿ ಜೂನ್ ಜೂ ಲೈ ತಿಂಗಳುಗಳಲ್ಲಿ ಭೂಮಿಯೊಳಕ್ಕೆ ಸೇರಿಹೋಗುವಂತೆ ಉತ್ತುಬಿಟ್ಟ ರೂ ಒಳ್ಳೇ ಗೊಬ್ಬರವಾಗಿ ಇಟ್ಟ ಫಸಲು ಚೆನ್ನಾಗಿ ಆಗುವದು.

The Improvement of Cattle. *

ದನಗಳ ಸುದಾರಣೆ.

ಜಮೀನಿನಲ್ಲಿ ಉತ್ಕೃಷ್ಟವಾದ ಬೆಳೆಯನ್ನು ತೆಗೆಯಬೇಕಾದರೆ ಅದನ್ನು ಆಳವಾಗಿ ಉಳಬೇಕು. ಹೀಗೆ ಉಳಬೇಕಾದರೆ ಒಳ್ಳೇ ಬಲವಾ ದ ಎತ್ತುಗಳಾಗಬೇಕು. ಎತ್ತುಗಳು ಬಲವಾಗಿರಬೇಕಾದರೆ ಹೋರಿ ಕ ರುಗಳು ಗಟ್ಟಿಮುಟ್ಟಾಗಿರುವ ಗೂಳಿ ಮತ್ತು ಹಸುಗಳಿಂದ ಹುಟ್ಟಿ, ಸು ತರ ಪ್ರೌಢಿಯಾಗಿ ಬೆಳೆಯುವವರಿಗೂ ತೃಪ್ತಿಯಿಂದ ಸಾಕಲ್ಪಟ್ಟಿರಬೇಕು.

ಕೆಲವು ಕಡೆಗಳಲ್ಲಿ ಎತ್ತುಗಳು ಬಹಳ ಮೋಟಕಾಗಿರುತ್ತವೆ. ತ

* ಅಗ್ರಿಕಲ್ಚರಲ್ ನ್ಯೂಸ್, ನಾಗಪುರ,—ಏಪ್ರಿಲ್ ೧೯೧೦.

ಪ್ರಾಂತರಗಳಿಂದ ದನಗಳಿಗೆ ಅರಹೊಟ್ಟೆ ಮೇವನ್ನು ಕೊಟ್ಟು ಸಾಕಿದ್ದೇ ಇದಕ್ಕೆ ಕಾರಣವಾಗಿರುತ್ತೆ. ಹುಲ್ಲು ಧಾರಾಳವಾಗಿ ಮತ್ತು ಸ್ವೇಚ್ಛೆಯಾಗಿ ಬೆಳೆಯುತಕ್ಕ ಜಂಗ್ಲಿ ಪ್ರದೇಶದಲ್ಲಿನ ದನಗಳು, ವ್ಯವಸಾಯವು ವಿಶೇಷವಾಗಿ, ಹುಲ್ಲಿನ ಬೆಳೆಯು ಅಪರೂಪವಾದ ಪ್ರದೇಶದ ದನಗಳಿಗಿಂತ ಸಾಧಾರಣವಾಗಿ ಎರಡರಷ್ಟು ಎತ್ತರವಾಗಿಯೂ ಗಾತ್ರವಾಗಿಯೂ ಮತ್ತು ಬಲವಾಗಿಯೂ ಇರುವದನ್ನು ಎಲ್ಲರೂ ನೋಡಿರಬಹುದು. ಆದ್ದರಿಂದ ಹುಲ್ಲು ಬೆಳೆಯುವದು ಕಮ್ಮಿಯಾಗಿರುವ ಪ್ರದೇಶಗಳಲ್ಲಿನ ರೈತರು ಸ್ವಲ್ಪ ಹೆಚ್ಚು ದೇಹಪ್ರಯಾಸವನ್ನು ತೆಗದುಕೊಳ್ಳುವದಕ್ಕೆ ಹಿಂಜರಿಯದೆ ಸಕಾಲದಲ್ಲಿ ಹುಲ್ಲನ್ನು ಕೂಡಿಹಾಕಿಕೊಂಡು ದನಗಳಿಗೆ ಯಥೇಚ್ಛವಾಗಿ ಮೇವು ಕೊಡುತ್ತಾ ಬರಬೇಕು. ಹೀಗೆ ಮಾಡುತ್ತಾ ಬಂದಲ್ಲಿ ಉತ್ತರೋತ್ತರ ದನಗಳು ಉತ್ತಮ ಸ್ಥಿತಿಗೆ ಬರುವದರಲ್ಲಿ ಸಂದೇಹವಿಲ್ಲ.

ದನಗಳಿಗೆ ಮೇವಾಗಿ ಉಪಯೋಗಿಸಲ್ಪಡುವ ಹುಲ್ಲನ್ನು ಸಕಾಲದಲ್ಲಿ ಅಂದರೆ ಇನ್ನು ಹಸಿಯಾಗಿರುವಾಗಲೇ ಕಟಾವು ಮಾಡಿಕೊಳ್ಳಬೇಕು. ಏಕೆಂದರೆ, ಈ ಹುಲ್ಲು ಬಹಳ ಪುಷ್ಟಿಕರವಾಗಿರುವದಲ್ಲದೆ, ಕಟಾವಾದ ಕೂಡ್ಲೆ ಮೆದೆ ಹಾಕಿಕೊಂಡಲ್ಲಿ ವರುಷಗಟ್ಲೆಯಾದರೂ ನಿಸ್ಸಾರವಾಗದೆ ಇರುತ್ತದೆ. ಇದನ್ನು ಮೇವು ಕಮ್ಮಿ ಬೀಳುವ ಬೇಸಿಗೆ ಕಾಲದಲ್ಲಿ ದನಗಳಿಗೆ ಧಾರಾಳವಾಗಿ ಕೊಡುವದಕ್ಕೆ ಉಪಯೋಗಿಸಿಕೊಳ್ಳಬಹುದು.

ಪ್ರತಿಯೊಂದು ಗ್ರಾಮಕ್ಕೂ ಅಷ್ಟಿಷ್ಟು ಗೋಕಾಡು ಇದ್ದೇ ಇರುತ್ತಷ್ಟೆ. ಇದರಲ್ಲಿ ಕೊಂಚ ಭಾಗವನ್ನು ಸಾಲೀಯಾನಾ ಹುಲ್ಲು ಬೆಳೆಯುವದಕ್ಕಾಗಿ ಅಮಾನತ್ತು ಇಟ್ಟುಕೊಂಡು ಮೇಲ್ಕಂಡ ರೀತಿಯಲ್ಲಿ ಹುಲ್ಲು ಕಟಾವು ಮಾಡಿದ ನಂತರ ದನಗಳನ್ನು ಅಟ್ಟುವದು ಒಳ್ಳೇದು. ಹೀಗೆ ಮಾಡುವದು ಸಾಧ್ಯವಾಗದ ಕಡೆಯಲ್ಲಿ ರೈತನು ತನ್ನ ಜಮೀನುಗಳ ಪೈಕಿ ಒಂದೆರಡನ್ನು ಹುಲ್ಲು ಬೆಳೆಗೇನೇ ಪ್ರತಿ ವರುಷವೂ ಇಟ್ಟುಕೊಂಡು ಸಕಾಲದಲ್ಲಿ ಹುಲ್ಲನ್ನು ಕಟಾವು ಮಾಡಿ ಮೆದೆ ಹಾಕಿಕೊಳ್ಳುವದಕ್ಕೆ ಯತ್ನಿಸುವದು ಕ್ಷೇಮಕರವಾಗಿರುತ್ತೆ.

Government Orders.

ಸರ್ಕಾರಿ ಹುಕುಂಗಳು.

I.

ತಾ|| ೯—೯—೧೯೧೦. ನಂ. ಫೈ. ೧೩೭೦—ಬ್ಯಾಂಕಿಂಗ್ ೫೧-೦೯-೨.

ಸನ್ ೧೯೦೬ನೆ ಇಸವಿ ಜನವರಿ ೨೭ನೆ ಮುಕಾಮಿನ ಫೈ. ೪೭೨೫ನೆ ನಂಬರ್ ಸರ್ಕಾರಿ ಇಸ್ತಿಹಾರ್ನಾಮೆಯನ್ನು ರದ್ದುಪಡಿಸಿ, ೧೯೦೫ನೆ ಇಸವಿ ೩ನೆ ನಂಬರ್ ಅನ್ಯೋನ್ಯ ಸಹಾಯಕ ಸಂಘಗಳ ರೆಗ್ಯುಲೇಷನಿನ ೨೫ನೆ ಪ್ರಕರಣದ ಪೈಕಿ (೧) (೩) ಮತ್ತು (೨)ನೆ ಒಳಪ್ರಕರಣಗಳಿಂದ ತಮಗೆ ಕೊಡೋಣಾದ ಅಧಿಕಾರಗಳನ್ನು ಚಲಾಯಿಸುವಲ್ಲಿ, ಸದರಿ ರೆಗ್ಯುಲೇಷನ್ ಅನುಸರಿಸಿ ರಿಜಸ್ಟರ್ ಮಾಡಲ್ಪಟ್ಟಿರುವ ಯಾವ ಅನ್ಯೋನ್ಯ ಸಹಾಯಕ ಸಂಘದಿಂದಲಾಗಲಿ ಅಥವಾ ಸಂಘದಪರವಾಗಿಯಾಗಲಿ, ಅಥವಾ ಅಂಥಾ ಸಂಘದ ಒಬ್ಬ ಆಫೀಸರರಿಂದ ಅಥವಾ ಮೆಂಬರಿಂದ, ಸದರಿ ಸಂಘಕ್ಕೆ ಸಂಬಂಧಪಟ್ಟ ಕೆಲಸ ಕಾರ್ಯಗಳಿಗಾಗಿ ಬರೆದು ಕೊಡಲ್ಪಡುವ ದಸ್ತಾವೇಜುಗಳ ವಿಷಯದಲ್ಲಿ, ತತ್ಕಾಲದಲ್ಲಿ ಜಾರಿಯಲ್ಲಿರುವ ರಿಜಸ್ಟ್ರೇಷನ್ ಕಾನೂನು ಮೇರೆಗೆ ಪಾವತಿ ಮಾಡಬೇಕಾಗುವ ಎಲ್ಲಾ ರುಸುಮುಗಳನ್ನು ಮಾಫ್ ಮಾಡಲು, ಮೈಸೂರು ಶ್ರೀಮನ್ ಮಹಾರಾಜ ರಾಜಾಸಾಹೇಬ್ ಬಹದ್ದರವರ ಸರ್ಕಾರದವರು ಹುಕುಂ ದಯಪಾಲಿಸಿ ಇರುತ್ತಾರೆ. ಪರಂತು ಸರ್ಕಾರದವರು ಇಂಥ ವಿನಾಯಿತಿಯನ್ನು ಯಾವ ಸಂಘದ ವಿಷಯದಲ್ಲಿಯಾದರೂ ಯಾವ ಕಾಲದಲ್ಲಿಯಾದರೂ ರದ್ದು ಮಾಡಬಹುದು.

II.

ಇರೇಬಿನಲ್ಲಿ ನಮೂದಿರುವ ಇನಾಂ ಗ್ರಾಮಗಳಲ್ಲಿ ೩೦೦ ಮನೆ ಅಥವ ೧,೦೦೦ ನಿವಾಸಿಗಳಿಗೆ ಕನಿಷ್ಠ ಇಲ್ಲದೆ ಇರುತ್ತಾಗಿ ಅವುಗಳನ್ನು ಲೋಕಲ್ ಬೋರ್ಡ್ಸ್ ರೆಗ್ಯುಲೇಷನ್ ಪ್ರಕಾರ ಗ್ರಾಮ ಪಂಚಾಯಿತಿ ಯೂನಿಯನ್ನುಗಳಾಗಿ ಶ್ರೀಮನ್ ಮಹಾರಾಜರವರ ಸರ್ಕಾರದವರು ಏರ್ಪಾಡು ಮಾಡಿರುತ್ತಾರೆ.

ತಾಲ್ಲೂಕು.	ಗ್ರಾಮ.
ಪಟ್ಟಣ ...	ಕೊಡ್ಲೂರು.
ನಂಜನಗೂಡು ...	ಹೊಸಕೋಟೆ.
ಚಾಮರಾಜನಗರ	ಬೇಗಲಿ.
,,	ಜನ್ನೂರು.
,,	ದೇವಿರಹಳ್ಳಿ.
ಹೊನ್ನಾಳಿ ...	ಕುಳಗಟ್ಟ.

Revenue Commissioner's Circular.

ರೆವಿನ್ಯೂ ಕಮಿಷನರವರ ಸರ್ಕ್ಯುಲರ್ ಹುಕ್ಕುಂ.

ತಾರೀಖು ೧೬ನೆ ಸೆಪ್ಟಂಬರ್ ೧೯೧೦.

ತೆಂಗಿನ ತೋಟದ ಮಾಲೀಕರುಗಳು ಅಥವಾ ಇತರರು ತಮ್ಮ ತೋಟಗಳಿಗೆ ನೀರನ್ನು ತಿರುಗಿಸಿಕೊಳ್ಳುವ ಉದ್ದೇಶದಿಂದ ಕೆರೆಗಳ ಫೀಡರ್ ಛಾನಲ್ ಯಾನೆ ನೀರು ಬರುವ ಕಾಲುವೆಗಳಿಗೆ ಅಡ್ಡ ಕಟ್ಟೆಗಳನ್ನು ಹಾಕುವದರಿಂದಾಗಲಿ ಅಥವಾ ಸದರಿ ಕಾಲುವೆಗಳಲ್ಲಿ ತೆಂಗು ಯಾ ಇತರ ಮರಗಳನ್ನು ನೆಡುವುದರಿಂದಾಗಲಿ ಒತ್ತುವರಿ ಮಾಡಿಕೊಂಡು ಕರೆಗಳಿಗೆ ನೀರು ಸಲೀಸಾಗಿ ಹೋಗದಂತೆ ಅಡ್ಡಿ ಮಾಡುವದನ್ನು ಕಂಡುಹಿಡಿದು ಸಕಾಲದಲ್ಲಿ ತಪ್ಪಿಸುವದಕ್ಕೋಸ್ಕರ, ರೆವಿನ್ಯೂ ಕಮಿಷನರವರು ಈ ಕೆಳಗೆ ಕಂಡ ಸೂಚನೆಗಳನ್ನು ಅಪ್ಪಣೆ ಕೊಡಿಸಿರುತ್ತಾರೆ:—

ಪ್ರತಿ ವರ್ಷವೂ ಸುಮಾರು ಡಿಟ್ಟಂ ಜಮಾಬಂದಿ ಕಾಲದಲ್ಲಿ ಗ್ರಾಮ ನೌಕರರು ತಮ್ಮ ತಮ್ಮ ಗ್ರಾಮಗಳಲ್ಲಿರತಕ್ಕ ಎಲ್ಲಾ ಫೀಡರ್ ಛಾನಲ್ ಮತ್ತು ಹಳ್ಳಗಳನ್ನೂ ಕ್ರಮವಾಗಿ ಅಜಮಾಯಿಷಿ ಮಾಡಿ, ಹಾಗೆ ಅಜಮಾಯಿಷಿ ಮಾಡಿದ ಬಗ್ಗೆ ಪಹಣಿ ರಿಜಿಸ್ಟರಿನಲ್ಲಿ ಒಂದು ಸರ್ಟಿಫಿಕೇಟ್ ಯಾನೆ ಷರಾ ಬರೆಯುವಂತೆಯೂ, ಮತ್ತು ಸದರಿ ಹಳ್ಳಗಳು ಹೋಗಿ ಸೇರುವ ಕೆರೆಗಳ ಕೆಳಗೆ ಸಾಗುವಳಿಯಾಗತಕ್ಕ ತರೀ ಜಮೀನು ಹಿಡುವಳಿದಾರರ ಪೈಕಿ ಅಕ್ಷರಸ್ಥರಾಗಿರತಕ್ಕ ಕೆಲವು ರೈತರ ರುಜುವನ್ನು ಸದರಿ ಸರ್ಟಿಫಿಕೆಟ್ಟಿಗೆ ಹಾಕಿಸುವಂತೆಯೂ ಮಾಡಬೇಕು. ಶೇಕದಾರರೂ ಅಮಲ್ದಾರರೂ ಬಾಂದು ಪಹಣಿ ಅಜಮಾಯಿಷಿ ಕಾಲದಲ್ಲಿ ಕೆಲವು ಕಾಲುವೆಗಳನ್ನು ಅಜಮಾಯಿಷಿಮಾಡಿ ಗ್ರಾಮ ನೌಕರರ ಅಜಮಾಯಿಷಿಯು ತೃಪ್ತಿಕರವಾಗಿದೆಯೋ ಇಲ್ಲವೋ ಎಂಬುದನ್ನು ನೋಡಬೇಕು. ಮತ್ತು ಹಾಗೆ ಅಜಮಾಯಿಷಿ ಮಾಡಿದ ಸಂಗತಿಯನ್ನು ಪಹಣಿ ರಿಜಿಸ್ಟರಿನಲ್ಲಿ ನಮೂದು ಮಾಡಬೇಕು. ಈ ಕೆಲಸವು ತೆಂಗಿನ ವ್ಯವಸಾಯವು ವಿಶೇಷವಾಗಿ ಆಗುತ್ತಿರುವ ನಮೂನೆ ಡಿಸ್ಟ್ರಿಕ್ಟುಗಳಲ್ಲಿ ಅವಶ್ಯಕವಾದದ್ದು.

ಈ ಸರ್ಕ್ಯುಲರ್ ಮೇರೆ ಅಜಮಾಯಿಷಿ ಮಾಡಬೇಕಾದ ಕಾಲುವೆಗ

ಳ ಪಟ್ಟಿಯೊಂದನ್ನು ಪ್ರತಿ ವರ್ಷವೂ ತಯಾರ್ಮಾಡಿ ಪ್ರತಿ ಗ್ರಾಮದ ದಫ್ತಿ ರಿಜಿಸ್ಟರಿನೊಂದಿಗೆ ಲಗತ್ತಿಸಿರಬೇಕಾದ್ದು ಅವಶ್ಯಕ.

Notifications.

ಇಸ್ತಿಹಾರ್‌ನಾಮೆಗಳು.

೧೯೧೦ನೆ ಜುಲೈ ೧೮ನೆ ಮಾರ್ಕಿನ ರೆ. ೨೬೬—ಲ್ಯಾ.ರೆ. ೪೮೭ ೦೯-೨ನೆ ನಂಬರ್ ಇಸ್ತಿಹಾರ್ನಾಮೆಯಲ್ಲಿ ಅರಕಲ್‌ಗೂಡು ತಾಲ್ಲೂಕಿನ ಅಮಲ್ದಾರ್ ಮೆ|| ವಿ. ಎಸ್. ರಾಜಗೋಪಾಲಾಚಾರ್ಯರಿಗೆ ಕೊಟ್ಟಿದ್ದ ಒಂದು ತಿಂಗಳ ಪ್ರಿವಿಲೇಜ್ ರಜಾವನ್ನು ಇನ್ನೂ ಹತ್ತು ದಿನಗಳವರೆಗೆ ಹೆಚ್ಚಿಸಿದೆ.

೨. ಹಾಲಿ ಇರತಕ್ಕ ಹಂಗಾಮಿ ಏರ್ಪಾಡೇ ಈ ರಜಾ ಕಾಲದಲ್ಲಿಯೂ ಜಾರಿಯಲ್ಲಿರತಕ್ಕದ್ದು.

ರೆವಿನ್ಯು ಕಮಿಷನರವರ ೧೯೧೦ನೆ ಇಸವಿ ಆಗಸ್ಟ್ ೨೬ನೆ ತಾರೀಖಿನ ೨೫೮೬ನೆ ನಂಬರ್ ಇಸ್ತಿಹಾರ್ನಾಮೆಯ ಮೇರೆಗೆ ನಗರ ತಾಲ್ಲೂಕಿನ ಚಾರ್ಜಿನಲ್ಲಿರಬೇಕೆಂದು ಹುಕುಂ ಕೊಡಲ್ಪಟ್ಟ ಇರುವ ಆಕ್ಟಿಂಗ್ ಅಮಲ್ದಾರ್ ಮೆ|| ಡಿ. ಲಕ್ಷ್ಮಣರಾಯರು, ಮೆ|| ಎಂ. ರಾಮಚಂದ್ರರಾಯರು, ಪ್ರಿವಿಲೀಜ್ ರಜಾದಮೇಲೆ ಗೈರುಹಾಜರಾಗಿರುವ ಕಾಲದಲ್ಲಿ ಅಥವಾ ಮತ್ತೊಂದು ಹುಕುಂ ಕೊಡುವ ತನಕ, ಆ ತಾಲ್ಲೂಕಿನ ಅಮಲ್ದಾರ್ ಮತ್ತು ೩ನೆ ತರಗತಿ ಮ್ಯಾಜಿಸ್ಟ್ರೇಟರಾಗಿ ಬದಲಿ ಕೆಲಸ ನೋಡತಕ್ಕದ್ದು.

ಇದರಡಿ ಕಂಡ ಅಮಲ್ದಾರರುಗಳ ವರ್ಗಾವರ್ಗಿಯನ್ನು ಮತ್ತು ನೌಕರರಾತಿಯನ್ನು ಮಂಜೂರ್ಮಾಡಿದೆ:—

ಶ್ರೀನಿವಾಸಪುರ ತಾಲ್ಲೂಕು ಅಮಲ್ದಾರ್ ಮೆ|| ವೈ. ನರಸಿಂಗರಾವ್, ಬಿ.ಎ., ಬಿ.ಎಲ್., ರವರನ್ನು ತೀರ್ಥಹಳ್ಳಿ ತಾಲ್ಲೂಕಿಗೆ ವರ್ಗಾಯಿಸಿದೆ.

ಬೆಂಗಳೂರು ಪೋಲೀಸ್ ಇನ್ಸ್ಪೆಕ್ಟರ್ ಮೆ|| ಸಿ. ಲಕ್ಷ್ಮಣರಾವ್, ಬಿ.ಎ., ಬಿ.ಎಲ್., ರವರನ್ನು ಆಕ್ಟಿಂಗ್ ಅಮಲ್ದಾರ್ ಮತ್ತು ೩ನೆ ತರಗತಿ

ಯು ಮ್ಯಾಜಿಸ್ಟ್ರೇಟರನ್ನಾಗಿ ನೇಮಿಸಿ ಶ್ರೀನಿವಾಸಪುರ ತಾಲ್ಲೂಕಿಗೆ ಕಳುಹಿಸಿರುತ್ತದೆ.

ಮೈಸೂರು ತಾಲ್ಲೂಕು ಅಮಲ್ದಾರ್ ಮೆ|| ಸೈಯದ್ ಯಾಕೂಬ್‌ರವರನ್ನು ಬೆಂಗಳೂರು ಡಿಸ್ಟ್ರಿಕ್ಟ್ ನೆಲಮಂಗಲದ ತಾಲ್ಲೂಕಿಗೆ ವರ್ಗಾಯಿಸಿ ಇರುತ್ತದೆ. (ಕೂಡಲೆ ವರ್ಗಸ್ಥಳಕ್ಕೆ ಹೋಗಿ ಸೇರಬೇಕು).

Occasional Notes.

ವಿವಿಧ ವಿಷಯಗಳು.

೧. ದಕ್ಷಿಣ ಕನರಾ ಜಿಲ್ಲಾ ಉಪ್ಪಿನಂಗಡಿ ತಾಲ್ಲೂಕಿನ ಸುಬ್ರಹ್ಮಣ್ಯ ಗ್ರಾಮದ ಕುಳಗುಂಡದಲ್ಲಿ ಕಾಲಂಪ್ರತಿ ಆಗುವ ಜಾನವಾರು ಸಂತೆಯು ಈ ವರುಷ ಮಾಮೂಲು ಪ್ರಕಾರ ಬರುವ ನವಂಬರ್ ತಿಂಗಳ ತಾರೀಖು ೧೭ಕ್ಕೆ ಶುರು ಆಗಿ ಡಿಸೆಂಬರ್ ತಿಂಗಳ ೨ನೆ ತಾರೀಖಿನವರಿಗೆ ಇರುತ್ತದೆ.

---

೨. ಮಧ್ಯಪ್ರಾಂತ್ಯಗಳ ಉಮರಾರಿಯ ಎಂಬ ಊರಿನಲ್ಲಿರುವ ಪಂಡಿತ ಗಯೆದತ್ತರೆಂಬುವರು ದನಗಳ ಗಂಜಲವನ್ನು ಒಣಮಣ್ಣಿನಮೇಲೆ ಬೀಳುವಂತೆ ಮಾಡಿ ದಾಸ್ತಾನು ಮಾಡಿಕೊಂಡಿದ್ದು ಅದನ್ನು ಬತ್ತದ ಗದ್ದೆಗೆ ಗೊಬ್ಬರವಾಗಿ ಉಪಯೋಗಿಸಿದ್ದರಿಂದ ಪೈರು ಬಹಳ ಸೊಂಪಾಗಿ ಬೆಳೆಯಿತೆಂದು ತಿಳಿಸಿರುತ್ತಾರೆ.—ಅಗ್ರಿಕಲ್ಚರಲ್ ಗಜೆಟ್ ಮೇ ೧೯೧೦.

---

೩. ಮರಹತ್ತಿಗಳ ಪೈಕಿ ಬೋರ್ಬನ್ ಜಾತಿಯು ವಿಸ್ತಾರವಾಗಿ ಹೊಲಗಳಲ್ಲಿ ಸಾಗುವಳಿ ಮಾಡಲು ಲಾಯಖಾಗಿದೆಯೆಂತಲೂ ಇದು ಕೆಬ್ಬೆ ಜಮೀನಿನಲ್ಲಿಯೂ ಉತ್ಕೃಷ್ಟವಾಗಿ ಬೆಳೆಯುವದೆಂತಲೂ ಮತ್ತು ಈ ಜಾತಿ ಹತ್ತಿಯ ಎಳೆಗಳು ತುಂಬಾ ಶ್ಲಾಘ್ಯವಾಗಿಯೂ ಇರುತ್ತೆಂತಲೂ ಮಧ್ಯಪ್ರಾಂತ್ಯಗಳ ವ್ಯವಸಾಯ ಇಲಾಖಾ ಡೆಪ್ಯುಟಿ ಡೈರೆಕ್ಟರವರಾದ ಮೆ|| ಡಿ. ಕ್ಲೌಸ್ಟನ್‌ರವರು ತಿಳಿಸಿರುತ್ತಾರೆ.—ಅಗ್ರಿಕಲ್ಚರಲ್ ಗಜೆಟ್, ಮೇ ೧೯೧೦.

---

೪. ಬೆಂಗಳೂರು ದನಗಳ ಆಸ್ಪತ್ರೆಯಲ್ಲಿ ವೈದ್ಯರಾಗಿರುವ ಮೆ|| ಕೆ.

ಯರ್.ಶ್ರೀನಿವಾಸರ್ ಜೆ.ಬಿ.ಸಿ.ವಿ., ಯವರು ೧೯೧೧ನೆ ಇಸವಿ ಮೈಸೂರು ಕೃಷಿ ಮತ್ತು ಕೈಗಾರಿಕೆ ಪ್ರದರ್ಶನ ಕಾಲದಲ್ಲಿ ದನಗಳ ಸಂರಕ್ಷಣೆ ವಿಷಯವಾಗಿ ಒಂದು ಸರಸವಾದ ಉಪನ್ಯಾಸವನ್ನು ಕೊಟ್ಟಿದ್ದರು. ಸದರಿ ಉಪನ್ಯಾಸವು ರೈತಾಬಿ ಜನಕ್ಕೆಲ್ಲಾ ತಿಳಿಯುವದು ಯುಕ್ತವೆಂದು ನೆನಿಸಿ ಹಜರತ್ ರೆವಿನ್ಯೂ ಕಮೀಷನರವರು ಅದನ್ನು ಒಕ್ಕಲಿಗರ ಪತ್ರಿಕೆಗೆ ಪ್ರಕಟಿಸುವಬಗ್ಗೆ ಕಳುಹಿಸಿಕೊಟ್ಟರು. ಉಪನ್ಯಾಸವು ಭಾಗಭಾಗವಾಗಿ ಆಗಸ್ಟ್ ೩೧, ಸೆಪ್ಟಂಬರ್ ೭ ಮತ್ತು ೧೪ನೆ ತಾರೀಖು ಒಕ್ಕಲಿಗರ ಪತ್ರಿಕೆಯ ಸಂಚಿಕೆಗಳಲ್ಲಿ ಛಾಪಿಸಿರುತ್ತೆ. ವಾಚಕರೆಲ್ಲರೂ ಇದನ್ನು ಓದಿ ಗ್ರಹಿಸುವರೆಂದು ನಂಬಿದೆ.

---

೫. ಖುಷ್ಕಿ ಫಸಲು ಬೆಳೆಯುವಬಗ್ಗೆ ಸಗಣಿ ಗೊಬ್ಬರಕ್ಕೆ ಬದಲಾಗಿ ಯಾವದಾದರೊಂದು ಬೇರೆ ಗೊಬ್ಬರವನ್ನು ಕಂಡುಹಿಡಿಯಲೋಸುಗ ಧಾರ್ವಾಡದ ವ್ಯವಸಾಯದ ಸ್ಟೇಷನಿನಲ್ಲಿ ಅಜಮಾಯಿಷಿಗಳನ್ನು ನಡೆಸುತ್ತಿರುತ್ತಾರೆ. ಇದುವರೆಗೆ ನಡದಿರುವ ಅಜಮಾಯಿಷಿಗಳಿಂದ ಪೌಡ್ರೆಟ್ ಎಂಬ (ಮನುಷ್ಯರ ಮಲಮೂತ್ರಗಳನ್ನು ಒಣಗಿಸಿ ಅದಕ್ಕೆ ಇದ್ದಲಿನ ಪುಡಿಯನ್ನು, ಒಂದು ಬಗೆ ಸುಣ್ಣವನ್ನು ಸೇರಿಸಿ ಚೆರಿಕೆ ಮಾಡಿದ್ದು) ಗೊಬ್ಬರವನ್ನು ಜೋಳ ಮತ್ತು ಹತ್ತಿ ಫಸಲಿಗೆ ಕೊಟ್ಟಲ್ಲಿ ಪೈರು ಬಹು ಬೇಗ ಇದರ ಸಾರವನ್ನು ತೆಗೆದುಕೊಂಡು ಸೊಂಪಾಗಿ ಬೆಳೆಯುವುದಲ್ಲದೆ ಸಾಧಾರಣವಾಗಿ ಇಂಥಾ ಫಸಲಿನ ದಂಟುಗಳಿಗೆ ಬಿದ್ದು ತೂತುಗಳನ್ನು ಮಾಡಿ ಬೆಳೆಯನ್ನು ನಾಶಪಡಿಸುವ ಒಂದು ಜಾತಿ ಹುಳುಗಳ (Stem Borer) ಹಾವಳಿಯೂ ಕೂಡ ತಪ್ಪಬಹುದೆಂದು ಗೊತ್ತು ಹಚ್ಚಿರುತ್ತಾರೆ.

---

೬. ದಕ್ಷಿಣಕನ್ನಡದ ಬೇಸಾಯಕ್ರಮಗಳನ್ನು ತಿದ್ದುಪಾಟು ಮಾಡುವುದಕ್ಕೆ ಅಲ್ಲಿ ಒಂದು ಜಿಲ್ಲಾ ವ್ಯವಸಾಯ ಸಂಘವು ಏರ್ಪಾಟಾಗಿದೆ. ಈ ಸಂಘದಲ್ಲಿ ಹಾಲಿ ೭೪ ಮೆಂಬರುಗಳು ಇರುತ್ತಾರೆ. ಇವಕ್ಕೆ ಮೂರು ಉಪಸಂಘಗಳೂ ಇವೆ. ಸದರಿ ಜಿಲ್ಲಾ ಸಂಘದವರು ಈಗ ನಡೆಯುತ್ತಿರುವ ಸಾಧಾರಣ ಸಂವತ್ಸರಕ್ಕೆ ಕನ್ನಡದಲ್ಲಿ ಒಂದು ವ್ಯವಸಾಯ ಪಂಚಾಂ

ಗವನ್ನು ಛಾಪಿಸಿ ಪ್ರಕಟಪಡಿಸಿರುತ್ತಾರೆ. ಈ ಪಂಚಾಂಗದಲ್ಲಿ ಮೇಲ್ಕಂಡ ಸಂಸ್ಥೆಗಳು ನಡಿಸಿದ ವ್ಯವಸಾಯಕ ಅಜಮಾಯಿಷಿಗಳ ಫಲಿತಾಂಶಗಳು, ಮದರಾಸು ಸರ್ಕಾರದವರು ವ್ಯವಸಾಯವನ್ನು ಅಭಿವೃದ್ಧಿಪಡಿಸಲೋಸುಗ ರೈತರಿಗೆ ತೋರಿಸಿರುವ ರಿಯಾಯಿತಿಗಳ ತಪಶೀಲುಗಳು, ಹಟ್ಟಿ ಗೊಬ್ಬರವನ್ನು ಕೂಡಿಹಾಕಿ ಪೈರಿಗೆ ಕೊಡುವ ಕ್ರಮ, ನಾಟಿಗಳನ್ನು ತಯಾರು ಮಾಡಿ ಅವುಗಳನ್ನು ಜಮೀನಿನಲ್ಲಿ ನೆಡುವಕ್ರಮ, ಗದ್ದೆಗಳಿಗೆ ಹಸಿ ಸೊಪ್ಪು ಗೊಬ್ಬರವನ್ನು ಹಾಕುವ ವಿಧಾನ, ಕಾಡುನೀಲಿ ಅಥವ ಕೊಳಂಜಿ ಗಿಡಗಳನ್ನು ಬೆಳಸಿ ಹಸಿ ಗೊಬ್ಬರವಾಗಿ ಉಪಯೋಗಿಸುವ ರೀತಿ, ಗದ್ದೆಗಳಲ್ಲಿ ಗೊಬ್ಬರಕ್ಕೋಸ್ಕರವೂ ದನಗಳ ಮೇವಿಗೋಸ್ಕರವೂ ಹಸೀ ಸೊಪ್ಪು ಮತ್ತು ಮೇವುಗಳನ್ನು ಬೆಳಸಲಿಕ್ಕೆ ಮದರಾಸು ಸರ್ಕಾರದವರು ಮಾಡಿರುವ ರಿಯಾಯಿತಿಗಳು, ಬೀಜವನ್ನು ಚುನಾಯಿಸುವ ಕ್ರಮ, ಜಾನುವಾರುಗಳನ್ನು ಸಾಕಿ ಸಲಹುವ ಕ್ರಮ, ಹುಲ್ಲುಗಾವಲುಗಳನ್ನು ಹೆಚ್ಚು ಪ್ರಯೋಜನಕಾರಿಗಳಾಗಿ ಮಾಡಿಕೊಳ್ಳುವ ಮತ್ತು ಮೇವುಗಳನ್ನು ಕೂಡಿಹಾಕಿಕೊಳ್ಳುವ ರೀತಿ, ಪೈರುಗಳಿಗೆ ಬೀಳುವ ಹುಳುಗಳನ್ನು ನಾಶಮಾಡುವ ರೀತಿ ಇವೇ ಮೊದಲಾದ ಸಂಗತಿಗಳೂ, ಸ್ವಾರಸ್ಯವಾದ ವ್ಯವಸಾಯಕ ಲೋಕೋಕ್ತಿಗಳೂ ಅಡಗಿ ಇರುತ್ತವೆ.

---

೭. ಸಂಸ್ಥಾನದ ರಾಜಧಾನಿಯು ಶ್ರೀ ಕೃಷ್ಣರಾಜ ಕೃಷಿ ಶಿಲ್ಪಾಭಿವರ್ಧಕ ಸಮಾಜದ ಮ್ಯಾನೇಜಿಂಗ್ ಕಮಿಟಿಯು ಕಳೆದ ತಿಂಗಳು ೧೪ನೆ ತಾರೀಖಿನಲ್ಲಿ ಸಭೆ ಸೇರಿತ್ತು. ಸಮಾಜದ ಪ್ರೆಸಿಡೆಂಟರಾದ ಮೆ|| ಎಂ. ಕಾಂತರಾಜ ಅರಸಿನವರು ಅಗ್ರಾಸನವನ್ನು ವಹಿಸಿದ್ದರು. ಆಗ್ಯೆ ಜಾಯಿಂಟ್ ಸೆಕ್ರೆಟರಿಯವರಾದ ಮೆ|| ಬಾದಾಮಿ ಕೃಷ್ಣರಾಯರು ಸಮಾಜದ ಮೆಂಬರುಗಳ ಉಪಯೋಗಕ್ಕಾಗಿ ಮಾದ್ರಿಗೆ ತರಿಸಿರುವ ಜೆಣ್ಣೆಗಾರ ಜೋಳ, ಛಕ್ಕಲೀಟ ಎಂಬುವ ೧೦ ವಾರದಲ್ಲಿ ಪೈರು ಬರುವ ಧಾನ್ಯ, ೪೦ ದಿವಸದಲ್ಲಿ ಬೆಳೆಯಾಗುವ ಜಾಳೀ ಬತ್ತ, ನೀರೂ ಮಳೆ ಕಡಮೆಯಾದರೂ ಬೆಳೆಯುವ ನಾಲ್ಕು ತರಹಾ ಸಣ್ಣ ಬತ್ತಗಳು, ಎಸರು ಇಟ್ಟು ಬೇಯಿಸದೆ ಬಿಸಿನೀರಿನಲ್ಲಿ ಹಾಕಿ ಮುಚ್ಚಿಟ್ಟರೆ ಅನ್ನವಾಗುವ ದೀದಿಯ ಬತ್ತ, ಬೇಲಿ

ಗಳಿಗೆ ಉಪಯೋಗವಾಗುವ ಮತ್ತು ಒಂದು ವರುಷಕ್ಕೆ ಸುಮಾರು ೮ ಅಡಿ ಬೆಳೆಯುವ ಸೆಸ್‌ಬ್ಯಾನಿಯಾ ಏಜಿಪ್ಟಿಕ ಎಂಬುವ ಗಿಡದ ಬೀಜ, ಹಜೂರ್ ರೆವಿನ್ಯೂ ಕಮಿಷನರ್ ಸಾಹೇಬರು ಕಳುಹಿಸಿಕೊಟ್ಟ ಒಂದು ತಿಂಗಳ ಗಿಡದ ಬೀಜ, ಮತ್ತು ಬತ್ತದ ಪೈರು ಕಟಾವಾಗಿದ್ದಕ್ಕಿಂತ ಮುಂಚೆ ಜಮೀನಿನಲ್ಲಿ ಬಿತ್ತಿ ಬತ್ತ ಕಟಾವಾದಮೇಲೆ ಬೆಳಸಿ ಗೊಬ್ಬರವಾಗಿ ಉಪಯೋಗಿಸಬಹುದಾದ ಒಂದು ತರಹ ಕಾಡುನೀಲೀ ಬೀಜ ಇವುಗಳನ್ನು ಮಿಾಟಿಂಗಿನಲ್ಲಿ ತಂದು ಇಟ್ಟು ಅವುಗಳ ವರ್ಣನೆ, ಬೆಳೆಯತಕ್ಕ ವಿಧಾನ ಮತ್ತು ಅವುಗಳ ಉಪಯೋಗಗಳನ್ನು ಕುರಿತು ಸಂಕ್ಷೇಪವಾಗಿ ತಿಳಿಸಿದರು.

———o———

೮. ೧೮೪೬ರಲ್ಲಿ ಪೂನಾ ಪಟ್ಟಣದಲ್ಲಿ ಶಸ್ತ್ರ ಚಿಕಿತ್ಸಕರಾಗಿದ್ದ ಮಿ|| ಅಲೆಗ್ಸಾಂಡರ್ ಗಿಬ್ಸನ್‌ರವರು ಬೇಸಾಯದ ವಿಷಯದಲ್ಲಿ ಬರೆದಿರುವ ಕೆಲವು ಸಲಹೆಗಳು.

(೧) ಚೌಳುಭೂಮಿಯನ್ನು ಆಬಾದಿಗೆ ತರಬೇಕಾದರೆ ಜಮೀನಿನ ಮೇಲ್ಮಣ್ಣಿನೊಂದಿಗೆ ಸುಣ್ಣವನ್ನಾಗಲಿ ಕೆರೆಗೋಡನ್ನಾಗಲಿ ಬೆರಿಸಬೇಕು. ಜಮೀನಿನಮೇಲೆ ಒಳ್ಳೆ ಮಣ್ಣು ಇದ್ದಲ್ಲಿ ಅದು ಕೊಚ್ಚಿಕೊಂಡು ಹೋಗದಂತೆ ಮಾಡಬೇಕು.

(೨) ಪರದೇಶಗಳಲ್ಲಿ ಯಾವಯಾವ ಪದಾರ್ಥಗಳಿಗೆ ವಿಶೇಷ ಗಿರಾಕಿ ಇದ್ದು ಅಲ್ಲಿ ಬೆಳಿಸುವದಿಲ್ಲವೋ ಅಂಥವುಗಳನ್ನೆ ಫಸಲು ಮಾಡಿರಿ. ಹತ್ತಿ ಸಾಗುವಳಿ ಮಾಡುವದಾದರೆ ಗಿಡಗಳನಡುವೆ ಚನ್ನಾಗಿ ಗಾಳಿ ಸಂಚಾರ ಮಾಡುವಹಾಗೆ ಬೀಜವನ್ನು ದೂರದೂರವಾಗಿ ಬಿತ್ತಿರಿ. ಹತ್ತಿ ಇನ್ನೂ ಗಿಡಗಳಲ್ಲಿರುವಾಗಲೇ ಚನ್ನಾಗಿ ಬಲಿತಿರುವವನ್ನು ನೋಡಿ ಬಿಡಿಸಿರಿ; ಮತ್ತು ಹೀಗೆ ಬಿಡಿಸಿದ್ದನ್ನು ನೆಲದಮೇಲೆ ಬಿದ್ದು ಕೊಳೆಯಾಗಿರುವದರ ಸಂಗಡ ಬೆರಿಸದಿರಿ. ಮಂಜು ಬೀಳುತ್ತಿರುವಾಗ ಅಥವ ಬಿದ್ದಿರುವಾಗ ಹತ್ತಿಯನ್ನು ಗಿಡಗಳಿಂದ ಬಿಡಿಸಕೂಡದು.

V. B. S. & SONS, BANGALORE.—1910.

THE MYSORE

REVENUE & AGRICULTURAL GAZETTE.

ವಾಲ್ಯುಂ ೪.] ಶನಿವಾರ, ೧೫ನೆ ಅಕ್ಟೋಬರ್ ೧೯೧೦. [ನಂ. ೨೪.

Contents.	ಅನುಕ್ರಮಣಿಕೆ.
1. The Origin and Spread of Kole Roga.	೧. ಕೊಳೆ ರೋಗದ ಉತ್ಪತ್ತಿ ಮತ್ತು ಹರಡುವಿಕೆ.
2. Rats Infesting Cocoanut Palms.	೨. ತೆಂಗಿನ ಗಿಡವನ್ನು ಹಾಳುಮಾಡುವ ಇಲಿಗಳನ್ನು ನಾಶಪಡಿಸುವ ವಿಧಾನ.
3. Urine-Earth as Manure.	೩. ಗಂಜಳದ ಮಣ್ಣು ಗೊಬ್ಬರ.
4. Revenue Appeal.	೪. ರೆವಿನ್ಯೂ ಅಪೀಲ್.
5. Government Order.	೫. ಸರ್ಕಾರಿ ಹುಕುಂ.
6. Notification.	೬. ಇಸ್ತಿಹಾರ್‌ನಾಮೆ.
7. Occasional Notes.	೭. ವಿವಿಧ ವಿಷಯಗಳು.
(i) Banana. (ii) Machine for Separating Jawari Grain from the Cob. (iii) Groundnut. (iv) Paper from the Bamboo. (v) Sugar Cane Cultivation. (vi) Seed Selection. (vii) Danger from Old Tree Stems. (viii) Co-operative Societies at Ramohalli.	(i) ಬಾಳೇ ಹಣ್ಣು. (ii) ಜೋಳದ ತೆನೆಯಿಂದ ಕಾಳನ್ನು ಬಿಡಿಸುವ ಯಂತ್ರ. (iii) ನೆಲಗಡ್ಲೆ. (iv) ಬಿದರಿನಿಂದ ಕಾಗದದ ತಯಾರಿ. (v) ಕಬ್ಬಿನಸಾಗುವಳಿ. (vi) ಬೀಜದ ಚುನಾವಣೆ. (vii) ಹಳೇಮರಗಳ ಬುಡ ಮತ್ತು ಮದ್ದುಗಳಿಂದ ಉಂಟಾಗುವ ಅಪಾಯ. (viii) ರಾಮೋಹಳ್ಳಿಯಲ್ಲಿ ಪರಸ್ಪರ ಸಹಾಯಸಂಘದ ಸ್ಥಾಪನೆ.

Origin & Spread of Kole Roga.

ಕೊಳೆ ರೋಗದ ಉತ್ಪತ್ತಿ ಮತ್ತು ಹರಡುವಿಕೆ.

ಮೈಸೂರು ಸಂಸ್ಥಾನದ ಕ್ರಿಮಿ ಶೋಧನ ಇಲಾಖಾ ಮುಖ್ತೇಸರಾದ ಮೆ|| ಲೆಸ್ಲೀ. ಸಿ. ಕೋಲ್ಮೆನ್‌ರವರು ಅಡಿಕೆ ಫಸಲನ್ನು ಹಾಳು

ಮಾಡುವ ಕೊಳೆ ರೋಗವನ್ನು ಪರಿಶೋಧನೆ ಮಾಡಿ ಬರೆದಿರುವ ಪ್ರಸ್ತಕದಲ್ಲಿನ ಮುಖ್ಯಾಂಶಗಳನ್ನು ಕೆಳಗೆ ವಿವರಿಸಿರುತ್ತೆ :—

(೧) ಅಡಿಕೆ ಮರದ ಕೊಳೆ ರೋಗವು ಒಂದು ಪರಪಾತ್ರಿ ಜೀವಿಯಿಂದುಂಟಾಗುವದು.

(೨) ಮುಂಗಾರು ಮಳೆ ಆರಂಭವಾದ ಕೂಡಲೆ ಜುಲೈ ತಿಂಗಳಿನ ಮಧ್ಯೆಯಾಗಲಿ, ಕೊನೆಯಲ್ಲಾಗಲಿ ಈ ರೋಗವು ತಲೆಹಾಕುವದು. ರೋಗ ಹತ್ತಿದ ಗೊಂಚಲುಗಳಿಂದ ಅಡಿಕೆ ಕಾಯಿಗಳು ಕೆಳಕ್ಕೆ ಉದುರುವದೇ ರೋಗ ಬರುವದಕ್ಕೆ ಮೊದಲನೇ ಸೂಚನೆಯು. ಅಂಥಾ ಕಾಯಿಗಳನ್ನು ತೆಗದುಕೊಂಡು ಪರೀಕ್ಷಿಸಿ ನೋಡಿದರೆ ಕಾಯಿಗಳಿಗೆ ಸಹಜವಾದ ಹಸರು ಬಣ್ಣವೆಲ್ಲಾ ಸ್ವಲ್ಪ ಹೆಚ್ಚು ಕಡಮೆ ನಾಶವಾಗಿ ಹೋಗಿರುವದು. ಸಾಧಾರಣವಾಗಿ ಕಾಯಿಯ ತೊಗಟೆಯ ಮೇಲೆ ಮೃದುವಾಗಿ ಬಿಳುಪಾಗಿರುವ ಪದಾರ್ಥ ಒಂದು ಸ್ವಲ್ಪ ಹೆಚ್ಚು ಕಡಮೆ ಕಾಯೆಲ್ಲವನ್ನೂ ಆವರಿಸಿಕೊಂಡು ಇರುವದು. ಇದನ್ನೇ ಕೊಳೆ ರೋಗವೆಂದನ್ನುತ್ತಾರೆ.

(೩) ಈ ಬಿಳೀ ಪದಾರ್ಥದಲ್ಲಿ ಸ್ವಲ್ಪವನ್ನು ಗೀರಿಕೊಂಡು ಒಂದು ತೊಟ್ಟು ನೀರಿನಲ್ಲಿ ಹಾಕಿ ಸೂಕ್ಷ್ಮದರ್ಶ ಯಂತ್ರದಲ್ಲಿಟ್ಟು ನೋಡಿದರೆ ಅದರಲ್ಲಿ ಅನೇಕವಾದ ಬಿಳೀ ನೂಲಿನ ಎಳೆಗಳಿರುವದು ಕಾಣಬರುವದು. ಆ ಬಿಳೀ ನೂಲುಗಳು ಒಂದಕ್ಕೊಂದು ಹೆಣದುಕೊಂಡು ನೀರಿನಲ್ಲಿ ನೆನೆಸಿದ ಹತ್ತಿಯಂತೆಯೋ ಅಥವಾ ಉಣ್ಣೆ ನೂಲಿನಂತೆಯೋ ಇದ್ದು ಕವಲು ಕವಲಾಗಿ ಒಡೆದುಕೊಂಡು ಬಿಡಿಸಲಸಾಧ್ಯವಾದ ತೊಡಕಿನ ಮುದ್ದೆಯಂತೆ ಕಾಣುವವು. ಈ ನೂಲಿನ ಮುದ್ದೆಯಲ್ಲಾ ಜೀವಸಹಿತವಾದ ಒಂದು ಸಸಿಯಾಗಿದೆ. ಈ ಸಸಿಯು ತನ್ನ ಆಹಾರವನ್ನು ಅಡಿಕೆ ಕಾಯಿಂದ ತೆಗದುಕೊಂಡು ಆ ಕಾಯಿಯ ಒಳಗೂ ಮೇಲೂ ಜೀವಿಸುತ್ತಿರುವದು. ಕಾಲಕ್ರಮೇಣ ಆ ಕಾಯಿಯನ್ನೇ ನಾಶಮಾಡಿ ಇತರ ವಿಧವಾದ ಕ್ರಿಮಿ ಮುಂತಾದವುಗಳಿಂದ ಅದನ್ನು ಕೊಳೆಯುವಂತೆ ಮಾಡುವದು.

(೪) ರೋಗ ತಗಲಿದ ಕಾಯಿಯ ತೊಗಟೆಯ ಮೇಲಿರುವ ನೂ

ಉಗಳ ತೊಂತಲನ್ನು ಸ್ವಲ್ಪ ಹುಷಾರಿನಿಂದ ನೋಡಿದರೆ ಆ ತೊಂತಲುಗಳ ಮಧ್ಯದಲ್ಲಿ ಅಂಡಾಕಾರವಾಗಿರುವ ಪದಾರ್ಥಗಳು ಅಲ್ಲೊಂದು ಇಲ್ಲೊಂದಾಗಲಿ, ಅನೇಕವಾಗಿಯಾಗಲಿ ಕಾಣಬರುವವು. ಮರದಲ್ಲಿ ಬಿಡುವ ಹಣ್ಣು ತೊಟ್ಟಿನ ಮೂಲಕ ರೆಂಬೆಗೆ ಹ್ಯಾಗೆ ಸೇರಿಕೊಂಡಿರುವದೋ ಹಾಗೆಯೇ ಆ ಅಂಡಾಕಾರವಾದ ಪದಾರ್ಥಗಳು ಕೂಡ ಆ ನೂಲುಗಳ ಕವಲುಗಳಿಗೆ ಜಂಟಿಯಾಗಿರುವಂತೆ ಕಾಣುವದು. ಅನೇಕಾವರ್ತಿ ಯಾವದಕ್ಕೂ ಜಂಟಿಯಾಗಿಲ್ಲದೆ ಸುಮ್ಮನೆ ಬಿದ್ದಿರುವಂತೆಯೂ ಕಾಣುವವು.

(೪) ಈ ಅಂಡಾಕಾರವಾದ ಪದಾರ್ಥಗಳಲ್ಲಿ (Sporangea) ಕೊಳೇ ರೋಗದ ಬೀಜಗಳು (Spores) ೧೦ರಿಂದ ೫೦ರವರಿಗೆ ಇರುತ್ತವೆ.

(೬) ಈ ಬೀಜಗಳಾದರೋ ಒಂದು ತೊಟ್ಟು ನೀರಿನಲ್ಲಿ ಸಾವಿರಾರು ತುಂಬಿಕೊಂಡಿರುವಷ್ಟು ಸೂಕ್ಷ್ಮವಾಗಿರುವವು. ಆದ್ದರಿಂದ ಇಂಥಾ ಬೀಜಗಳನ್ನುಳ್ಳ ಒಂದು ತೊಟ್ಟು ಮಳೆಯ ನೀರು ರೋಗವಿಲ್ಲದಿರುವ ಅಡಿಕೆ ಕಾಯಿಯಮೇಲೆ ಬಿದ್ದರೆ ಆ ಬೀಜಗಳು ಮೊಳಕೆ ಇಡುವದಕ್ಕೆ ಆಸ್ಪದವಾಗುತ್ತೆ. ಅಡಿಕೆ ಕಾಯಿಯ ತೊಗಟೆಯ ಮೇಲೆಲ್ಲಾ ಅಲ್ಲಲ್ಲಿ ಉಛ್ವಾಸ ನಿಶ್ವಾಸಕ್ಕನುಕೂಲವಾದ ಸಣ್ಣ ರಂಧ್ರಗಳಿರುವವು. ರೋಗದ ಬೀಜಗಳು ನೀರಿನ ಸಹಾಯದಿಂದ ಮೊಳೆತಾಗ ಅವುಗಳಿಂದ ಹೊರಡುವ ನೂಲಿನ ಎಳೆಗಳು ಈ ರಂಧ್ರಗಳ ಮುಖಾಂತರವಾಗಿ ಅಡಿಕೆಯೊಳಕ್ಕೆ ಪ್ರವೇಶಿಸುವವು. ಹೀಗೆ ಒಳಕ್ಕೆ ಹೋಗಿ ಸೇರಿದಾಗ ಆ ನೂಲುಗಳಿಗೆ ಬೇಕಾದಷ್ಟು ಆಹಾರವು ದೊರಕುವದು. ಹೀಗೆ ಆಹಾರವನ್ನು ತೆಗದುಕೊಳ್ಳುತ್ತಾ ಬೆಳೆದು ಕವಲು ಕವಲಾಗಿ ಒಡದುಕೊಂಡು ನೆಲದಲ್ಲಿ ಗಿಡದ ಬೇರುಗಳು ವ್ಯಾಪಿಸುವಂತೆ ಅಡಿಕೆಯಲ್ಲೆಲ್ಲಾ ವ್ಯಾಪಿಸುವವು.

(೭) ಮಳೆಗಾಲದಲ್ಲಿ ಅತಿ ರಭಸದಿಂದ ಬೀಳುವ ಮಳೆಯು ಮೇಲೆ ವಿವರಿಸಿದ ಸೂಕ್ಷ್ಮ ಸಸಿಯ ಸಾವಿರಾರು ಬೀಜಗಳನ್ನು ಒಂದು ಕಾಯಿಯಿಂದ ಇನ್ನೊಂದು ಕಾಯಿಗೆ ಹೊಡೆದುಕೊಂಡು ಹೋಗುತ್ತದೆ. ಆದ್ದರಿಂದ ರೋಗವು ಒಂದರಿಂದ ಒಂದಕ್ಕೆ ಬಹು ಸುಲಭವಾಗಿ ತಗಲುವದು. ಇದೂ ಅಲ್ಲದೆ ರೋಗ ತಗಲಿರುವ ಅಡಿಕೆ ಕಾಯಿಯು, ಪಕ್ಕದಲ್ಲಿ ರೋಗವಿಲ್ಲದಿರುವ ಕಾಯನ್ನು ಮುಟ್ಟಿಕೊಂಡಿದ್ದರೆ ಇದಕ್ಕೂ ಕೂಡ ಮೇಲೆ

ಹೇಳಿದ ನೂಲುಗಳು ಬೆಳೆದುಹೋಗಿ ತೊಗಟೆಯ ಮೇಲಿನ ರಂಧ್ರಗಳ ಮುಖಾಂತರವಾಗಿ ಕಾಯನ್ನು ಪ್ರವೇಶಿಸಿ ರೋಗವನ್ನುಂಟುಮಾಡುವದು.

(೮) ಮಳೆಯ ಜೊತೆಯಲ್ಲಿ ಬಿರುಸಾದ ಗಾಳಿಯು ಯಾವಾಗಲು ಬೀಸುತ್ತಿರುತ್ತೆ. ರೋಗವಿರುವ ಕಾಯಿಯ ಮೇಲೆ ಮಳೆ ಹನಿಗಳು ಬೀಳುತ್ತಲೇ ಸೂಕ್ಷ್ಮ ಸಸಿಯ ಬೀಜಗಳು ಆ ಹನಿಗಳಲ್ಲಿ ತುಂಬಿಕೊಳ್ಳುತ್ತವೆ. ಇಂಥಾ ಹನಿಗಳನ್ನು ಮರದಿಂದ ಮರಕ್ಕೂ, ಗೊಂಚಲಿನಿಂದ ಗೊಂಚಲಿಗೂ ಗಾಳಿಯು ತುಂತುರಿನಂತೆ ಹೊಡೆದುಕೊಂಡು ಹೋಗಬಹುದಾದ್ದರಿಂದ ರೋಗವಿರುವ ಕಡೆಯಿಂದ ರೋಗವಿಲ್ಲದಿರುವ ಕಡೆಗೆ ಆ ಬೀಜಗಳು ಹೋಗಿ ಸೇರುವವು.

(೯) ತೋಟಗಳಲ್ಲಿ ಹಾರಾಡುತ್ತಿರುವ ಹುಳುಗಳು, ಪಕ್ಷಿಗಳು, ರೋಗವಿರುವ ಗೊಂಚಲಿನ ಮೇಲಾಗಲಿ, ಕಾಯಿಯ ಮೇಲಾಗಲಿ ಕುಳಿತುಕೊಳ್ಳಬಹುದು. ಕುಳಿತುಕೊಂಡ ನಂತರ ಹಾರಿ ಹೋಗುವಾಗ ಅವುಗಳ ಕಾಲಿಗೆ ಅಂಟಿಕೊಂಡಿರುವ ರೋಗದ ಬೀಜಗಳನ್ನು ಹೊತ್ತುಕೊಂಡು ಹೋಗುವವು. ಹೀಗೆ ಹೊತ್ತುಕೊಂಡು ಹೋಗಿ ರೋಗವಿಲ್ಲದಿರುವ ಗೊಂಚಲುಗಳ ಮೇಲೆ ಕುಳಿತುಕೊಂಡರೆ ರೋಗದ ಬೀಜಗಳಲ್ಲಿ ಕೆಲವು ಅಲ್ಲಿ ನಿಂತು ರೋಗವು ಹರಡುವದಕ್ಕೆ ಆಸ್ಪದವಾಗುವದು.

(೧೦) ರೋಗದ ಬೀಜಗಳಲ್ಲಿ ಎರಡು ಬಗೆ ಇರುವವು. ಇವುಗಳಲ್ಲಿ ಒಂದು ಬಗೆ ಮಳೆಗಾಲದ ಅಂತ್ಯದಿಂದ ಇನ್ನೊಂದು ಮಳೆಗಾಲವು ಬರುವವರಿಗೂ ಸಾಯದೆ ಬದುಕಿರುವವು. ಇವುಗಳು ರೋಗ ಹತ್ತಿದ ಅಡಿಕೆ ಕಾಯಿಗಳು ನೆಲದ ಮೇಲೆ ಬಿದ್ದಿರುವ ಜಾಗದಲ್ಲೂ ಮರದಮೇಲೆ ನೇತಾಡುತ್ತಿರುವ ಕಡೆಯಲ್ಲೂ ಅಥವಾ ಸುಳಿಗೆ ರೋಗವು ತಗಲಿರುವದರಿಂದ ಸತ್ತು ಹೋಗಿರುವ ಮರಗಳಲ್ಲೂ ಇರಬಹುದು. ಈ ಬೀಜಗಳು ಮೊಳಕೆ ಏಳದೇ ಇದ್ದು ಮಳೆಗಾಲವು ಬಂದ ಒಡನೆಯೇ ಮೊಳೆತು ಬೆಳೆಯುವದಕ್ಕೆ ಆರಂಭಿಸುವವು.

ಮುಂದಿನ ಸಂಚಿಕೆಯಲ್ಲಿ ಕೊಳೇ ರೋಗವನ್ನು ಪರಿಹಾರ ಮಾಡುವ ಸಾಧನಗಳನ್ನು ಕುರಿತು ಬರೆಯಲ್ಪಡುತ್ತದೆ.

Rats Infesting Cocoanut Palms.*

ತೆಂಗಿನ ಗಿಡವನ್ನು ಹಾಳುಮಾಡುವ ಇಲಿಗಳನ್ನು ನಾಶ ಪಡಿಸುವ ವಿಧಾನ.

ಮದರಾಸು ಸರ್ಕಾರದ ಸಸ್ಯ ಶಾಸ್ತ್ರ ವಿದ್ವಾಂಸರಾದ ಡಾಕ್ಟರ್ ಬಾರ್ಬರ್‌ಯವರು ಸಿಲೋನ್ ಸರ್ಕಾರದ ಕ್ರಿಮಿ ಶಾಸ್ತ್ರ ವಿದ್ವಾಂಸರಾದ ಡಾಕ್ಟರ್ ಇ. ಇ. ಗ್ರೀನ್‌ಯವರು ಇಲಿಗಳು ತೆಂಗಿನ ಮರಗಳನ್ನು ಹಾಳು ಮಾಡುವ ವಿಷಯವಾಗಿ ಬರೆದಿರುವ ಕೆಳಗಡೆ ಕಂಡ ತಪಶೀಲುಗಳನ್ನು ಮದರಾಸು ಅಗ್ರಿಕಲ್ಚರಲ್ ಕಮಿಟಿಯವರು ಪ್ರಕಟಿಸಿರುತ್ತಾರೆ.

ತೆಂಗಿನ ತೋಟಗಳನ್ನು ಬಹು ವಿಶೇಷವಾಗಿ ಹಾಳು ಮಾಡುವ ಪ್ರಾಣಿಗಳ ಪೈಕಿ ಇಲಿಯು ಒಂದಾಗಿದೆ. ಇಲಿಗಳು ಸಾಧಾರಣವಾಗಿ ಮರದ ಮಟ್ಟೆಗಳ ಬುಡಗಳಲ್ಲಿನ ಬಲೆಯಹಾಗಿರುವ ಗುಂಜಿನಲ್ಲಿ ಗೂಡುಗಳನ್ನು ಮಾಡಿಕೊಂಡಿರುತ್ತವೆ. ಮರಗಳು ಬಹಳ ಒತ್ತಾಗಿರುವ ತೋಟಗಳಲ್ಲಿ ಒಂದು ಮರದ ಮಟ್ಟೆಯು ಮತ್ತೊಂದು ಮರ ಅಥವ ಮಟ್ಟೆಯನ್ನು ಮುಟ್ಟುವದರಿಂದ ಇಲಿಗಳು ಭೂಮಿಗೆ ಇಳಿದು ಬರದೆ ಮೇಲೆಯೇ ಮರದಿಂದ ಮರಕ್ಕೆ ಸಂಚಾರಮಾಡಿಕೊಂಡಿರಬಹುದು. ಇವುಗಳು ಮರದ ಚಿಗುರು ರೆಂಬೆಗಳನ್ನೂ ಪಕ್ವವಾದ ಕಾಯಿಗಳನ್ನೂ ತಿಂದು ಜೀವಿಸುವವು.

ಪರಿಹಾರ.—ಗರಿಗಳು ಹೊರಡುವ ಜಾಗದಲ್ಲಿ ಇಲಿಗಳ ಗೂಡುಗಳೇನಾದರು ಇದ್ದಲ್ಲಿ ಅವುಗಳನ್ನೆಲ್ಲ ಕಿತ್ತುಹಾಕಿ ಇಲಿಗಳನ್ನೆಲ್ಲಾ ಒಂದಾದರೂ ಮರದಲ್ಲಿ ನಿಲ್ಲದಂತೆ ನಾಶಪಡಿಸಬೇಕು. ಇಲಿ ಕತ್ತರಿಗಳನ್ನಾಗಲಿ ತವಡು, ಶಂಖಪಾಷಾಣ ಮತ್ತು ಬೆಲ್ಲ ಇವುಗಳನ್ನು ಬೆರಸಿದ ಉಂಡೆಗಳನ್ನಾಗಲಿ ಗರಿಗಳಮೇಲೆ ಇಟ್ಟರೆ ಕೆಲವು ಮಾತ್ರ ಸಿಕ್ಕಿಬಿದ್ದು ಸಾಯುವವೇ ಹೊರ್ತು ಇಲಿಗಳೆಲ್ಲಾ ಸಾಯುವದಿಲ್ಲ. ಏಕಂದರೆ ಇಲಿಗಳು ಈ ವಿಧವಾದ ಕೃತ್ರಿಮಗಳನ್ನು ಬೇಗನೆ ತಿಳಿದುಕೊಂಡು ಅವುಗಳ ಗೋಜಿಗೆ ಹೋಗದೇನೇ ಇದ್ದುಬಿಡುವವು.

ಮರದಲ್ಲಿರುವ ಇಲಿಗಳನ್ನೆಲ್ಲಾ ನಾಶಪಡಿಸಿದ ನಂತರ ಕೆಳಗಿನಿಂದ

* ಮದರಾಸು ಅಗ್ರಿಕಲ್ಚರಲ್ ಬುಲಿಟಿನ್, ನಂ. ೭.

ಹೊಸದಾಗಿ ಮರದಮೇಲಕ್ಕೆ ಇಲಿಗಳು ಹೋಗದಂತೆ ಅಡ್ಡಿಯನ್ನು ಮಾಡಬೇಕು. ಹೀಗೆ ಮಾಡುವದಕ್ಕೆ ಮರದ ಸುಮಾರು ನಡು ಭಾಗದಲ್ಲಿ ಈಚಲು ಗರಿಗಳನ್ನು (ಅಥವ ಕೊನೆಯಲ್ಲಿ ಮುಳ್ಳಿರುವ ಬೇರೆ ಜಾತಿ) ಮುಳ್ಳುಗಳು ಕೆಳಮುಖವಾಗಿರುವಂತೆ ಸುತ್ತಬೇಕು. ಅಥವ ಒಂದಡಿ ಅಗಲವಿರುವ ನುಣ್ಣಾನೆ ಜಿಂಕಿನ ತಗಡನ್ನು ಮರದ ಬಡ್ಡಿನ ಸುತ್ತಲು ಮೊಳೆಗಳಿಂದ ಬಿಗಿಸಿದರೂ ಸರಿಯೆ. ಮೊಳೆಗಳ ತಲೆಗಳು ಮಾತ್ರ ಹೊರಗೆ ನಿಂತು ಇಲಿಗಳು ಹತ್ತುವದಕ್ಕೆ ಮೆಟ್ಟಿಲಹಾಗೆ ಆಗದಂತೆ ಅವುಗಳನ್ನು ಚನ್ನಾಗಿ ಒಳಕ್ಕೆ ಬಡಿದು ತಗಡಿನೊಂದಿಗೆ ಸಮವಾಗಿ ಚಪ್ಪಟೆಯಾಗಿರುವಂತೆ ಮಾಡಬೇಕು. ತೂತುಗಳು ಬಿದ್ದಿರುವ ತಗಡುಗಳನ್ನಾಗಲಿ ಟಿನ್ನಿನ ತಗಡುಗಳನ್ನಾಗಲಿ ಉಪಯೋಗಿಸಕೂಡದು. ಮೊಟ್ಟೆಗಳು ಒಣಗಿ ತಗಡನ್ನು ಉಜ್ಜಿಕೊಂಡು ಜೋಲಾಡುತ್ತಿದ್ದರೆ ಇಲಿಗಳು ಇವುಗಳ ಮುಖಾಂತರ ಮೇಲಕ್ಕೆ ಹತ್ತಿಹೋಗುವವಾದ್ದರಿಂದ, ಜೋಲುಬೀಳುವ ಮೆಟ್ಟೆಗಳು ತಗಲದಹಾಗೆ ತಗಡುಗಳನ್ನು ಇನ್ನೂ ಕೆಳಕ್ಕೆ ಬಿಗಿಯಬೇಕು. ತೋಟದಲ್ಲಿ ಮರಗಳು ಬಹಳ ಒತ್ತಾಗಿದ್ದಲ್ಲಿ ಅವುಗಳ ಗರಿಗಳು ಒಂದಕ್ಕೊಂದು ತಗಲುವದರಿಂದ ಮರಗಳನ್ನು ಗುಂಪುಗುಂಪಾಗಿ ವಿಂಗಡಿಸಿಕೊಂಡು, ಒಂದು ಗುಂಪು ಮತ್ತೊಂದು ಗುಂಪನ್ನು ಸೋಕದಂತೆ ಗರಿಗಳನ್ನು ಕತ್ತರಿಸಿಹಾಕಬೇಕು. ಗರಿಗಳು ಒಣಗಿ ಜೋಲುಬಿದ್ದ ಕೂಡಲೆ ಅವುಗಳನ್ನೂ ಕಿತ್ತುಹಾಕಬೇಕು.

ಲಾಕಡಿವ್ ದ್ವೀಪಗಳಲ್ಲಿಯೂ ಕೊಚಿನ್ ರಾಜ್ಯದಲ್ಲಿಯೂ ತೆಂಗಿನ ಮರಗಳಲ್ಲಿನ ಇಲಿಗಳನ್ನು ನಾಶಪಡಿಸಲೋಸುಗ ಅನೇಕರು ಒಟ್ಟು ಕೂಡಿ ಕೆಲವರು ಚೂರಿಗಳನ್ನೂ ದೊಣ್ಣೆಗಳನ್ನು ತೆಗದುಕೊಂಡು ಮರಗಳನ್ನು ಹತ್ತಿ ಗೂಡುಗಳಿಂದ ಇಲಿಗಳನ್ನು ಹೊರಡಿಸಿ ಸಿಕ್ಕಿದವುಗಳನ್ನೆಲ್ಲಾ ಕೊಂದು ಬೇರೆ ಮರಗಳಿಗೆ ಓಡಿಹೋಗುವವುಗಳನ್ನು ದೊಣ್ಣೆಯಿಂದ ಕೆಳಕ್ಕೆ ಕೆಡುವುತ್ತಾರೆ. ಕೆಳಗಿರುವವರು ಬಿದ್ದವುಗಳನ್ನು ಕೂಡಲೆ ಕೊಲ್ಲುತ್ತಾರೆ.

ವೆಸ್ಟಿಂಡಿಯಾ ದ್ವೀಪಗಳಲ್ಲಿ ಕಬ್ಬಿನ ತೋಟಗಳಿಗೆ ಇಲಿಗಳ ಕಾಟವು ಬಹಳವಾಗಿತ್ತು. ಇದರ ನಿವಾರಣೆಗಾಗಿ ಮುಂಗಿಸಿಗಳನ್ನು ತೋಟಗಳ

ಲ್ಲಿ ಸಾಕುತ್ತಾ ಬಂದದ್ದರಿಂದ ಬಹಳಮಟ್ಟಿಗೆ ಇವುಗಳಕಾಟವು ಕಮ್ಮಿ ಯಾಯಿತು. ಆದರೆ ಮುಂಗಸಿಗಳು ಗಿಡಗಳನ್ನು ಹತ್ತಲಾರವಾದ್ದರಿಂದ ಗಿಡಗಳಮೇಲೆಯೇ ಇರುವ ಇಲಿಗಳನ್ನು ಇವು ನಾಶಪಡಿಸಲಾರವು. ಮುಂಗಸಿಗಳಿಗಿಂತಲೂ ಬೆಕ್ಕುಗಳನ್ನು ತೋಟಗಳಲ್ಲಿ ಸಾಕುವದರಿಂದ ಮತ್ತಷ್ಟು ಮೇಲುಂಟು. ಏಕಂದರೆ, ಅವುಗಳನ್ನು ಸಾಕುವದೂ ಕಷ್ಟವಲ್ಲ. ಮತ್ತು ಅವು ಗಿಡಗಳನ್ನೂ ಹತ್ತಬಲ್ಲವು.

ಆಲದ ಮತ್ತು ಅತ್ತಿಯ ಮರಗಳ ಹಾಲಿನ ಚೆಗರಂಟನ್ನು ಬಿದರಿನ ಕಡ್ಡಿಗಳಿಂದ ಮಾಡಿದ ಸಣ್ಣ ಸಣ್ಣ ತಡಿಕೆಗಳಿಗೆ ಬಳಿದು ಗರಿಗಳ ಬುಡದಲ್ಲಿನ ಗುಂಜುಗಳ ನಡುವೆಯೂ, ಗರಿಗಳಮೇಲೂ, ಮರದ ಬುಡದಲ್ಲಿ ನೆಲದಮೇಲೆಯೂ ಇಟ್ಟಲ್ಲಿ ಇಲಿಗಳು ಸಿಕ್ಕುಬೀಳುತ್ತವೆಂದೂ, ಹಾಗೆ ಸಿಕ್ಕಿಬಿದ್ದವುಗಳನ್ನು ಸುಲಭವಾಗಿ ನಾಶಪಡಿಸಬಹುದೆಂದೂ ಕೆಲವರು ಸಲಹೆಯನ್ನೂ ಕೊಟ್ಟಿರುತ್ತಾರೆ.

———o———

Urine-Earth as Manure. *

ಗಂಜಳದ ಮಣ್ಣು ಗೊಬ್ಬರ.

ರೈತನು ತನ್ನ ಜಮೀನುಗಳಿಗೆ ಸಾಕಾದಷ್ಟು ಗೊಬ್ಬರವನ್ನು ಒದಗಿಸಿಕೊಳ್ಳಲಾರದೆ ಹಾಲಿ ಬಹಳ ಕಷ್ಟಪಡುತ್ತಿರುವನು. ಜಮೀನುಗಳು ಬರಬರುತ್ತಾ ನಿಸ್ಸಾರವಾಗುತ್ತಲಿವೆ. ನೀರಿನ ಸರಬರಾಯಿ ಚನ್ನಾಗಿದ್ದು ಗೊಬ್ಬರವು ಸಾಕಾದಷ್ಟು ಇಲ್ಲದ ಕಡೆಗಳಲ್ಲಿ ಹೀಗೆ ಜಮೀನುಗಳು ನಿಸ್ಸಾರವಾಗುತ್ತಿರುವದು ಇನ್ನೂ ಹೆಚ್ಚು. ಈ ಸಂದರ್ಭಗಳಲ್ಲಿ ಕಬ್ಬು ಮುಂತಾದ ವಿಶೇಷ ಆದಾಯಕರವಾದ ಫಸಲುಗಳ ಬೆಳೆಯನ್ನು ಅಭಿವೃದ್ಧಿ ಪಡಿಸುವದಕ್ಕೆ ತುಂಬಾ ಅಡಚಣೆಯಾಗಿರುತ್ತೆ. ಗೊಬ್ಬರಗಳನ್ನು ಕೊಂಡುಕೊಂಡು ಜಮೀನುಗಳಿಗೆ ಹಾಕಬೇಕೆಂದು ಅಪೇಕ್ಷೆಪಡುವವರಿಗೂ ಕೂಡ ಒಳ್ಳೇ ಗೊಬ್ಬರಗಳು ಸಿಕ್ಕುವದಾಗಿಲ್ಲ. ಏಕಂದರೆ, ಗೊಬ್ಬರಗಳನ್ನು ತಯಾರಾಮ್ಮಾಡಿ ವ್ಯಾಪಾರ ಮಾಡುವವರೇ ಅಪರೂಪ.

* ನಾಗಪುರ ವ್ಯವಸಾಯ ಗೆಜೆಟ್, ಏಪ್ರಿಲ್ ೧೯೧೦.

ಯೆಣ್ಣೆ ಹಿಂಡಿಗಳಲ್ಲಿ ಉತ್ಕೃಷ್ಟವಾದ ಗೊಬ್ಬರದ ಗುಣಗಳು ಇರುತ್ತ ವೆಂಬದು ಜನಗಳ ಮಾಹಿತೀಗೆ ಇನ್ನು ಬರವೆ ಇರುತ್ತದೆ.

ಈ ಕಾರಣಗಳಿಂದ ಬೇಸಾಯವನ್ನು ಉತ್ತಮ ಪಡಿಸಿಕೊಳ್ಳಬೇಕೆಂಬುವ ರೈತನಿಗೆ ದನಗಳ ಗೊಬ್ಬರವನ್ನು ಬಿಟ್ಟರೆ ಬೇರೆ ತರಹೆ ಶಿಕ್ಕುವದೇ ತಹಲಿನಲ್ಲಿ ದುರ್ಲಭವಾಗಿದೆ. ಹೀಗಿದ್ದಾಗ್ಯೂ ದನಗಳ ಸಗಣಿಯಿಂದ ಬೆರಣಿಯನ್ನು ಮಾಡಿ ಉರಿಸಿ ಬೂದಿಮಾಡಿ ಆದರ ಜೊತೆಗೆ ಕಸ ಕಡ್ಡಿಗಳನ್ನು ಸೇರಿಸಿ ಕುಪ್ಪೆಗಳನ್ನು ಹಾಕಿಟ್ಟುಕೊಂಡು ಗೊಬ್ಬರವಾಗಿ ಉಪಯೋಗಿಸುತ್ತಾರೆ. ಹೀಗೆ ಸಗಣಿಯನ್ನು ಬೂದಿ ಮಾಡುವದರಿಂದ ಶೇಕಡಾ ೯೭ರಷ್ಟು ಸಸ್ಯಾಹಾರವಾದ ಯವಕ್ಷಾರ ಜನಕ ವಾಯುವು ನಷ್ಟವಾಗಿಹೋಗುವದು. ದನಗಳ ಗಂಜಳವನ್ನಾದರೂ ಕೂಡಿಟ್ಟುಕೊಂಡು ಗೊಬ್ಬರವನ್ನಾಗಿ ಉಪಯೋಗಿಸಿದರೆ ಎಷ್ಟೋ ಉತ್ತಮವಾಗಬಹುದು. ಆದರೆ ಅದನ್ನು ಮಾಡುತ್ತಲೇ ಇಲ್ಲ.

ಒಳ್ಳೇ ಬೇಸಾಯಕ್ಕೆ ಪ್ರಾಪ್ತವಾಗಿರುವ ಮೇಲ್ಕಂಡ ನ್ಯೂನತೆಯನ್ನು ಹೋಗಲಾಡಿಸುವದಕ್ಕೋಸ್ಕರ ದನಗಳ ಗಂಜಳವನ್ನು ಉಳಿಸಿಕೊಳ್ಳುವ ಏರ್ಪಾಟನ್ನು ಮಾಡಿಕೊಳ್ಳಬೇಕು.

ವಿಧಾನ:—ದನಗಳ ಕೊಟ್ಟಿಗೆಯಲ್ಲಿ ಆರು ಅಂಗುಲ ಮಂದ ಒಣಗಿದ ಪುಡಿ ಮಣ್ಣನ್ನು ನೆಲವೆಲ್ಲಾ ಹರಡಿ ಅದರಮೇಲೆ ದನಗಳನ್ನು ಕಟ್ಟಬೇಕು. ನಿತ್ಯವೂ ಬೀಳುವ ಸಗಣಿಯನ್ನು ಆಯಾ ದಿನವೋ ಅಥವ ಮರುದಿನವೋ ಕೊಟಿಗೆಯಿಂದ ಹೊರಕ್ಕೆ ಸಾಗಿಸಿ ಬೇರೆ ಒಂದು ಗುಣಿಯಲ್ಲಿ ಕೂಡಿಹಾಕಿಕೊಳ್ಳಬೇಕು. ಕೊಟ್ಟಿಗೆಯಲ್ಲಿ ಒಣ ಮಣ್ಣು ಒಂದು ತಿಂಗಳವರಿಗೂ ಹೀಗೆ ಇದ್ದುಕೊಂಡು ಬಿದ್ದ ಗಂಜಳವನ್ನೆಲ್ಲಾ ಹೀರಿಕೊಂಡ ಮೇಲೆ ಆ ಮಣ್ಣನ್ನೆಲ್ಲಾ ಗುಡ್ಡೆ ಮಾಡಿ ಸಗಣಿಯನ್ನು ಕೂಡಿಹಾಕುತ್ತಿರುವ ಗುಣಿಯಲ್ಲೇ ರಾಶಿಹಾಕಿ ಭದ್ರಮಾಡಿ ಯಥಾಪ್ರಕಾರ ಬೇರೆ ಮಣ್ಣನ್ನು ಕೊಟ್ಟಿಗೆಯಲ್ಲಿ ಹರಡಿಕೊಳ್ಳಬೇಕು. ಹೀಗೆ ಪ್ರತಿನಿತ್ಯವೂ ಸಗಣಿಯನ್ನು ಹೊರಕ್ಕೆ ಸಾಗಿಸುವದರಿಂದ ಕೊಟ್ಟಿಗೆಯು ಚೊಕ್ಕಟವಾಗಿರುತ್ತದಲ್ಲದೆ ದನಗಳಿಗೆ ಯಾವ ಕೆಡಕೂ ಇಲ್ಲದೆ ಸುಖವಾಗಿರುವವು. ದನಗಳ ಕೆಳಗಿನ ಮಣ್ಣು ಆಗಾಗ್ಯೆ ಹೆಪ್ಪು ಕಟ್ಟಿಕೊಂಡಲ್ಲಿ ಅದನ್ನು ಯಾ

ವದರಿಂದಲಾದರೂ ಕೆರದು ಪುನಃ ಗಂಜಳವನ್ನು ಹೀರುವಂತೆ ಮಾಡುತ್ತಿರಬೇಕು.

ಮೇಲ್ಕಂಡ ವಿಧಾನದಿಂದ ಸಗಣಿ ಗಂಜಲಗಳೆರಡನ್ನೂ ರಕ್ಷಿಸಿಕೊಳ್ಳಬಹುದು. ಗಂಜಲದಲ್ಲಿ ಸುಲಭವಾಗಿ ಒದಗುವ ಸಸ್ಯಾಹಾರವಾದ ಯುವಕ್ಷಾರಜನಕ ವಾಯುವು ಬಹು ವಿಶೇಷವಾಗಿರುವದೆಂಬುವದನ್ನು ಯಾವಾಗಲೂ ನೆನಪಿನಲ್ಲಿ ಇಟ್ಟುಕೊಳ್ಳುವದು ಅವಶ್ಯಕವಾಗಿರುತ್ತೆ.

ಇಲ್ಲಿ ವಿವರಿಸಿರುವ ವಿಧಾನವು ನಾಗಪುರದ ಸರ್ಕಾರಿ ವ್ಯವಸಾಯದ ಅಜಮಾಯಿಷಿ ಜಮೀನುಗಳಲ್ಲಿ ಮೊದಲು ಆಚರಿಸಲ್ಪಟ್ಟು ಗಂಜಳದ ಮಣ್ಣು ಸಗಣಿಗೆ ಸಮಾನವಾದ ಗೊಬ್ಬರವೆಂದು ಕಂಡುಬಂದದ್ದರಿಂದ ಅನೇಕ ರೈತರು ಇದನ್ನು ಅನುಸರಿಸುತ್ತಾ ಇರುತ್ತಾರೆ.

Revenue Appeal.

ರೆವಿನ್ಯೂ ಅಪೀಲ್.

ನಂ. ೧೨. ಸಾಲ್ ೧೯೦೯-೧೯೧೦.

ಅಪೀಲ್ ವಾದಿ. ಹಾಲಪ್ಪ.	*vs.*	ಅಪೀಲ್ ಪ್ರತಿವಾದಿ. ಹಿರಿಯಕ್ಕ.

ಕೇಸಿನ ವಿದ್ಯಮಾನಗಳು :—

ದಾವಣಗೆರೆ ತಾಲ್ಲೂಕು ನಲ್ಕುಂದಾ ಗ್ರಾಮದ ಹಿಂದಿನ ಪಟೇಲಿ ರಿಕಾರ್ಡನ್ನು ಪರಿಶೀಲಿಸಿ ನೋಡಿದ್ದರಿಂದ ಕಂಡುಬರುವದೇನಂದರೆ :— ೧೮೬೩ನೆ ಇಸವಿಯಲ್ಲಿ ಸದರಿ ಗ್ರಾಮದ ಪಟೇಲಿ ನೌಕರಿಗೆ ಹೊಳೆಯಪ್ಪ, ಹಾಲೈಯ್ಯ, ಶಿವಣ್ಣನೆಂಬ ಮೂರುಜನ ಹಕ್ಕುದಾರರು ಇದ್ದುಕೊಂಡು ಇವರ ಪೈಕಿ ಶಿವಣ್ಣನು ನೌಕರಿಯನ್ನು ಮಾಡುತ್ತಿದ್ದನು. ೧೮೭೮ನೆ ಇಸವಿ ಪಕ್ಕಾ ಪೋಟಗಿ ಸೆಟಲ್‌ಮೆಂಟ್ ನಡೆದಾಗ ಶಿವಣ್ಣನ ಸಹೋದರನಾದ ಬಸಪ್ಪನ ಮಗ ಕರಿಯಣ್ಣನ ಹೆಸರಿನಲ್ಲಿ ಸದರಿ ಪಟೇಲಿಯು ರಿಜಿಸ್ಟರಾಯಿತು. ಕರಿಯಣ್ಣನು ಹಿರಿಯಕ್ಕನೆಂಬ ಹೆಂಡತಿಯನ್ನೂ, ಕೆಂಚಪ್ಪ ಮತ್ತು ಬಸಪ್ಪನೆಂಬ ಮಕ್ಕಳನ್ನೂ ಬಿಟ್ಟು ೧೯೦೩ರಲ್ಲಿ ಸತ್ತನು. ಆ ಮೇಲೆ ಕೆಂಚಪ್ಪನು ನೌಕರಿಯನ್ನು ಪಡೆದು ಕೆಲಸ ಮಾಡುತ್ತಾ

೧೯೦೭ನೆ ಇಸವಿ ಫೆಬ್ರವರಿಯಲ್ಲಿ ಮಹದೇವಕ್ಕನೆಂಬ ಹೆಂಡತಿಯನ್ನು ಬಿಟ್ಟು ಅಪುತ್ರವಂತನಾಗಿ ಸತ್ತನು. ಕೂಡ್ಲೆ ಇವನ ತಮ್ಮ ಬಸಪ್ಪನು ಕೆಲಸದಮೇಲೆ ಹಾಜರಾಗಿ ಡಿಸೆಂಬರ್ ತಿಂಗಳವರಿಗೂ ಇದ್ದು ಅದೇ ವರ್ಷದಲ್ಲಿ ಸತ್ತನು. ಅದೇ ಡಿಸೆಂಬರ್ ತಿಂಗಳಲ್ಲಿ ಅತ್ತೆ ಹಿರಿಯಕ್ಕನೂ ಮತ್ತು ಸೊಸೆ ಮಹದೇವಕ್ಕನೂ ತಾಲ್ಲೂಕು ಅಮಲ್‌ದಾರರಲ್ಲಿ ಹಾಜರಾಗಿ ಪಟೇಲಿಯನ್ನು ತಮ್ಮೊಳಗೆ ಯಾರಾದರೊಬ್ಬರ ಹೆಸರಿನಲ್ಲಿ ರಿಜಸ್ಟರ್ ಮಾಡಬೇಕೆಂತಲೂ, ತಾವು ಒಪ್ಪುವ ಒಬ್ಬನನ್ನು ಪಟೇಲಿ ಗುಮಾಸ್ತೆಯಾಗಿ ಮೊಕರರೂರು ಮಾಡಿಸಬೇಕೆಂತಲೂ ಕೇಳಿಕೊಂಡರು. ಇಷ್ಟರಲ್ಲಿ ಮೂಲ ಹಕ್ಕುದಾರ ಶಿವಣ್ಣನ ಮಗನಾದ ಹಾಲಪ್ಪನೆಂಬುವನು ತನ್ನ ತಂದೆ ಅಕ್ಷರಸ್ಥನಲ್ಲದೆಯೂ ಮತ್ತು ಹುಚ್ಚು ಹಿಡಿದವನೂ ಆಗಿದ್ದದ್ದರಿಂದ ಅವನ ಹಕ್ಕನ್ನು ಪಕ್ಕಾ ಪ್ರೋಟಿಗಿ ಸೆಟಲ್‌ಮೆಂಟ್ ಕಾಲದಲ್ಲಿ ಅಂಗೀಕರಿಸಿರಲಿಲ್ಲವೆಂತಲೂ, ಕರಿಯಣ್ಣನ ವಂಶವು ನಿಂತುಹೋಗಿರುವದರಿಂದ ತಾನೇ ಪಟೇಲಿ ನೌಕರಿಗೆ ಹಕ್ಕುದಾರನಾಗಿರುವಂತೆಯೂ ಪ್ರತಿಪಾದಿಸ ಹತ್ತಿದನು. ಆದರೂ ಅಸಿಸ್ಟೆಂಟ್ ಕಮಿಷನರವರ ಕೋರ್ಟಿನಲ್ಲಿ ಮಹದೇವಕ್ಕನ ಹೆಸರಿನಲ್ಲಿ ರಿಜಸ್ಟರ್ ಮಾಡಿ ಆಕೆಯ ತರಫ್ ಗುಮಾಸ್ತೆಯನ್ನು ಗೊತ್ತುಮಾಡಬೇಕೆಂದು ಹುಕುಂ ಆಯಿತು. ಈ ಹುಕುಂ ಮೇಲೆ ಹಾಲಪ್ಪನು ಡೆಪ್ಯೂಟಿ ಕಮಿಷನರವರ ಕೋರ್ಟಿನಲ್ಲಿ ಅಪೀಲ್ ಮಾಡಿಕೊಂಡನು. ಇದೇ ಕಾಲದಲ್ಲಿ ಮೂಲ ಹಕ್ಕುದಾರ ಹೊಳೆಯಪ್ಪನ ಸಹೋದರನ ಮಕ್ಕಳಾದ ಮಹದೇವಪ್ಪ ಮತ್ತು ಮಹದೇವಣ್ಣನೆಂಬುವರು, ಮೂಲ ಹಕ್ಕುದಾರ ಹಾಲೈಯ್ಯನ ಮೊಮ್ಮಗನಾದ ಲಿಂಗಪ್ಪನೆಂಬುವನೂ ಪಟೇಲಿಗೆ ತಾವೂ ಹಕ್ಕುದಾರರೆಂದು ಬಂದರು. ಕಡೆಯಲ್ಲಿ ನೌಕರಿಯನ್ನು ಮಾಡುತ್ತಿದ್ದ ಬಸಪ್ಪನಿಗೆ ಅತ್ಯಂತ ಸಮೀಪ ಜ್ಞಾತಿಯಾಗಿಯೂ, ೧೮೬೪ನೆ ಇಸವಿಯಲ್ಲಿ ಕೆಲಸ ಮಾಡುತ್ತಿದ್ದ ಶಿವಣ್ಣನ ಪೌತ್ರನಾಗಿಯೂ ಇರುವದರಿಂದ, ಮಹದೇವಕ್ಕನ ಹೆಸರಿಗೆ ರಿಜಸ್ಟರಾಗಬೇಕೆಂದು ಮಾಡಿರುವ ಅಸಿಸ್ಟೆಂಟ್ ಕಮಿಷನರವರ ಹುಕುಮನ್ನು ರದ್ದು ಮಾಡಿ ಹಾಲಪ್ಪನ ಹೆಸರಿಗೇನೆ ರಿಜಸ್ಟರಾಗಬೇಕೆಂದು ಡೆಪ್ಯೂಟಿ ಕಮಿಷನರವರು ತೀರ್ಮಾನಿಸಿದರು. ಈ ತೀರ್ಮಾನದ ಮೇಲೆ ಮಹದೇವಕ್ಕನು ರೆವಿನ್ಯೂ ಕಮಿಷನರವರಲ್ಲಿಗೆ ಅಪೀಲ್ ತಂದಳು. ಹೆಂಗಸರಾಗಿರುವ ಮಾತ್ರಕ್ಕೇನೆ ಹಿರಿಯಕ್ಕ

ಗ ಮತ್ತು ಮಹದೇವಕ್ಕನ ಹಕ್ಕುಗಳನ್ನು ನಿರಾಕರಿಸಿರುವದು ನ್ಯಾಯ
ವಾಗಿರುವದಿಲ್ಲವೆಂದೂ, ಹಿಂದೂ ಲಾ ಪ್ರಕಾರ ಪಟೇಲಿ ನೋಡುತ್ತಿದ್ದ ಬ
ಸಪ್ಪನ ತಾಯಿಯಾದ ಹಿರಿಯಕ್ಕನೇ ಹಕ್ಕುದಾರಳಾಗಿರುತ್ತಾಳಲ್ಲದೆ ಬಸ
ಪ್ಪನ ಅಣ್ಣನ ಹೆಂಡತಿಯಾದ ಮಹದೇವಕ್ಕನಿಗಾಗಲಿ, ಇತರರಿಗಾಗಲಿ ಹ
ಕ್ಕು ಇರುವದಿಲ್ಲವೆಂದೂ ರೆವಿನ್ಯೂ ಕಮಿಷನರವರು ವ್ಯವಸ್ಥೆ ಮಾಡಿದ
ರು. ಇವರ ತೀರ್ಮಾನದ ಮೇಲೆ ಹಾಲಪ್ಪನು ಶ್ರೀಮನ್ಮಹಾರಾಜರವರ
ಸರ್ಕಾರದಲ್ಲಿ ಅಪೀಲ್ ತಂದಿರುತ್ತಾನೆ.

ತೀರ್ಮಾನ:—ಕೊನೆಯಲ್ಲಿ ನೌಕರಿ ಮಾಡುತ್ತಿದ್ದ ಬಸಪ್ಪನು ಅವ
ನ ಅಣ್ಣ ಕೆಂಚಪ್ಪನೊಂದಿಗೆ ಅವಿಭಕ್ತನಾಗಿದ್ದನೆಂದು ಹಾಲಪ್ಪನಕಡೆ
ಲಾಯರೇ ಒಪ್ಪಿಕೊಳ್ಳುತ್ತಾರೆ. ಕೆಂಚಪ್ಪನು ಸತ್ತಮೇಲೆ ಅತ್ಯಂತ ಸ
ಮೀಪ ಹಕ್ಕುದಾರನಾಗಿದ್ದ ಸಬಬು ಬಸಪ್ಪನು ನೌಕರಿಯನ್ನು ಹೊಂದಿ
ದ ಹಾಗೆಯೇ ಬಸಪ್ಪನು ಸತ್ತಮೇಲೆಯೂ ಅವನ ನಂತರ ಅತ್ಯಂತ ಸ
ಮೀಪ ಹಕ್ಕುದಾರರಾದವರು ನೌಕರಿಯನ್ನು ಹೊಂದಲು ಅರ್ಹರಾಗಿರು
ತ್ತಾರೆ. ಆದ್ದರಿಂದ ಚರ್ಚಾಸ್ಪದವಾದ ಪಟೇಲಿಗೆ ಫೌತಿ ಬಸಪ್ಪನ ತಾ
ಯಿಯಾದ ಹಿರಿಯಕ್ಕನೇ ಹಕ್ಕುದಾರಳು.

ಬಸಪ್ಪನು ಗ್ರಾಮ ನೌಕರರ ರೆಗ್ಯುಲೇಷನ್ ಜಾರೀಗೆ ಬರುವದರ
ಮುಂಚೆಯೇ ಸತ್ತಿರುವದರಿಂದ ಅದರಲ್ಲಿ ಹೆಂಗಸರಿಗೆ ನೌಕರಿ ಹಕ್ಕು ಇರು
ವದಿಲ್ಲವೆಂದು ವಿಧಿಸಿರುವದು ಪ್ರಕೃತ ಕೇಸಿನಲ್ಲಿ ಲಗಾವಾಗಲಾರದು. ಹಿಂ
ದೂನ ರೂಲ್ಸಿನಲ್ಲಿ ವಿಧವೆಯರ ಮತ್ತು ಹೆಣ್ಣು ಮಕ್ಕಳ ಹಕ್ಕುಗಳನ್ನು
ಒಪ್ಪಿಕೊಂಡಿರುತ್ತೆ. ರೆವಿನ್ಯೂ ಮ್ಯಾನ್ಯುಯಲ್ ೪೮ನೆ ಪುಟದಲ್ಲಿ ಮು
ದ್ರಿಸಿರುವ ವಿಧಾಯಕದ ಮೇರಿಗೆ ಪಟೇಲ್ ನೌಕರಿಯನ್ನು ಮಾಡಲಿಕ್ಕೆ
ಹೆಂಗಸರು ಅಸಮರ್ಥರಾದುದರಿಂದ ಅವರಿಗೆ ಬರಾವರ್ದು ಆಗಕೂಡದೆಂದು
ಅಪೀಲ್ ವಾದಿಯಕಡೆ ಲಾಯರು ವಾದಿಸಿದರು. ಆದರೆ ಅದೇ ವಿಧಾಯಕ
ದ ಮೇರಿಗೆ ಹಕ್ಕುಳ್ಳ ವಿಧವೆಯರು ತಮ್ಮ ಪರವಾಗಿ ಗುಮಾಸ್ತರನ್ನು
ನೇಮಿಸಬಹುದಾಗಿರುತ್ತೆ. ಹಿಂದೂ ಲಾ ಪ್ರಕಾರ ತಾಯಿಯಾದ ಹಿರಿ
ಯಕ್ಕನು ಹಕ್ಕುದಾರಳಾಗಿರುವದರಿಂದ ಅವಳೂ ಹಾಗೆಯೇ ಮಾಡುವದರ
ಲ್ಲಿ ಅಡ್ಡಿ ಏನೂ ತೋರುವದಿಲ್ಲ.

ಮೇಲೆ ವಿವರಿಸಲ್ಪಟ್ಟ ಕಾರಣಗಳಿಂದ ರೆವಿನ್ಯೂ ಕಮಿಷನರವರು ಮಾಡಿರುವ ತೀರ್ಮಾನವು ನ್ಯಾಯವಾಗಿರುತ್ತೆ. ಅಪೀಲ್ ವಜಾ ಮಾಡಿರುತ್ತೆ.

Government Order.

ಸರ್ಕಾರಿ ಹುಕುಂ.

೧೯೦೯ನೆ ಇಸವಿ ಪ್ರಜಾಪ್ರತಿನಿಧಿ ಸಭೆಯಲ್ಲಿ ಕೆಲವರು ಪ್ರತಿನಿಧಿಗಳು:—ಗ್ರಾಮಾಂತರಗಳಲ್ಲಿ ರೈತಾಬಿ ಜನರ ಮನೆಗಳು ಅಕಸ್ಮಾತ್ತಾಗಿ ಸುಟ್ಟುಹೋದಲ್ಲಿ ಅವುಗಳನ್ನು ಪುನಃ ಕಟ್ಟಿಕೊಳ್ಳಲು ೫ ರೂಪಾಯಿ ಬೆಲೆ ಬಾಳುವಷ್ಟರೊಳಗಿನ ಬಿದರು ಮುಂತಾದ ಸಾಮಾನುಗಳನ್ನು ಮಾತ್ರ ಮುಫತ್ತಾಗಿ ಸಹಾಯ ಮಾಡುವದಕ್ಕೆ ಅಮಲ್ದಾರರಿಗೆ ಹಾಲಿ ಅಧಿಕಾರವಿರುತ್ತೆ; ಹೆಚ್ಚಾಗಿ ಸಹಾಯ ಮಾಡಬೇಕಾದ ಸಂದರ್ಭಗಳಲ್ಲಿ ಇನ್ನೂ ಮೇಲ್ಪಟ್ಟ ಅಧಿಕಾರಿಗಳ ಅಪ್ಪಣೆ ಆಗಬೇಕಾಗಿರುವದರಿಂದ ಸಹಾಯ ದೊರೆಯುವದು ಅತಿ ಸಾವಕಾಶವಾಗುವದಕ್ಕೆ ಕಾರಣವಾಗಿದೆ; ಆದಕಾರಣ ಅಮಲ್ದಾರರು ತಮ್ಮ ಸ್ವಂತ ಅಧಿಕಾರದಮೇಲೆಯೇ ೨೫ ರೂಪಾಯಿ ವರಿಗೂ ಸಹಾಯ ಮಾಡುವದಕ್ಕೆ ಹುಕುಂ ಕೊಡಿಸಬೇಕು; ಎಂಬದಾಗಿ ಜಾಹಿರು ಮಾಡಿಕೊಂಡದ್ದರಮೇಲೆ ಶ್ರೀಮನ್ಮಹಾರಾಜರವರ ಸರ್ಕಾರದವರು ಹುಕುಂ ಮಾಡಿರುವದೇನಂದರೆ:—

ಹುಕುಂ ನಂ. ಆರ್. ೧೫೫೭-೬೬. ತಾ|| ೧೦—೯—೧೦.

ಬೆಂಕಿಯಿಂದ ಮನೆಗಳು ಸುಡಲ್ಪಟ್ಟು ಅವುಗಳನ್ನು ಪುನಃ ಕಟ್ಟಿಕೊಳ್ಳುವದಕ್ಕೆ ಸಾಮಾನುಗಳನ್ನು ಒದಗಿಸಿಕೊಡುವ ವಿಚಾರದಲ್ಲಿ ತಹಲ್ ವರಿಗೂ ಡೆಪ್ಯೂಟಿ ಕಮಿಷನರವರು ಚಲಾಯಿಸುತ್ತಿದ್ದ ಅಧಿಕಾರವನ್ನು ಮುಂದೆ ಸಬ್ ಡಿವಿಜನ್ ಆಫೀಸರರೇ ಚಲಾಯಿಸುತ್ತಾ ಒಬ್ಬೊಬ್ಬ ರೈತ ನಿಗೆ ೧೦ ರೂಪಾಯಿವರಿಗಿನ ಬೆಲೆ ಬಾಳುವಷ್ಟು ಸಾಮಾನುಗಳ ಸಹಾ ಯವನ್ನು ಮಂಜೂರುಮಾಡಬಹುದೆಂಬದಾಗಿ ಅಪ್ಪಣೆ ಕೊಟ್ಟಿರುತ್ತೆ. ಇ ದರಿಂದ ಪ್ರತಿನಿಧಿ ಮೆಂಬರುಗಳು ಪ್ರಸ್ತಾಪಿಸಿದ ತೊಂದರೆಯು ಬಹಳಮ ಟ್ಟಿಗೆ ಕಮ್ಮಿಯಾಗಬಹುದೆಂತಲೂ ಸಬ್ ಡಿವಿಜನ್ ಆಫೀಸರರು ಸಹಾಯ

ಕ್ಕಾಗಿ ಗುಜರಾಯಿಸಿಕೊಳ್ಳುವ ಅರ್ಜಿಗಳನ್ನು ಜಾಗ್ರತೆಯಾಗಿ ಫೈಸಲ್ಮಾ
ಡುತ್ತಾರೆಂದೂ ನಂಬಿದೆ.

Notification.

ಇಸ್ತಿಹಾರ್‌ನಾಮೆ.

ನಂ. ಆರ್. ೨೯೧. ತಾ|| ೩—೧೦—೧೯೧೦.

೧೯೧೦ನೆ ಜುಲೈ ೧೮ನೆ ತಾರೀಖಿನ ನಂ. ಆರ್. ೨೭೭—ಎಲ್. ಆರ್. ೧೯-೨೯-೪ನೆ ಇಸ್ತಿಹಾರ್‌ನಾಮೆಯಲ್ಲಿ ಯಳಂದೂರ್ ಜಹಗೀರ್ ಅಮಲ್ದಾರ್ ಮೆ|| ಮಹಮ್ಮದ್ ಪೀರ್ ಬಿ.ಎ., ಯವರಿಗೆ ಕೊಟ್ಟಿದ್ದ ೨ ತಿಂಗಳು ಗಳ ಪ್ರಿವಿಲೇಜ್‌ರಜಾವಲ್ಲದೆ ಇನ್ನೂ ಒಂದು ವಾರದವರಿವಿಗೆ ಹೆಚ್ಚಿಸಿದೆ.

ಹಾಲಿ ಇರತಕ್ಕ ಹಂಗಾಮಿ ಏರ್ಪಾಡೇ ಈ ರಜಾ ಕಾಲದಲ್ಲಿಯೂ ಜಾರಿಯಲ್ಲಿರತಕ್ಕದ್ದು.

Occasional Notes.

ವಿವಿಧ ವಿಷಯಗಳು.

೧. ಫ್ರಾನ್ಸ್ ದೇಶದ ಮುಖ್ಯಪಟ್ಟಣವಾದ ಪ್ಯಾರಿಸ್ ಎಂಬ ಪಟ್ಟಣದಲ್ಲಿ ಬಾಳೆ ಹಣ್ಣಿಗೆ ವಿಶೇಷ ಗಿರಾಕಿ ಇರುತ್ತೆ. ಅಲ್ಲಿನ ಜನರು ಬಾಳೆ ಹಣ್ಣನ್ನು ರೊಟ್ಟಿ ಮತ್ತು ಬೆಣ್ಣೆಯ ಜೊತೆಗೆ ಆಹಾರವಾಗಿ ಉಪಯೋಗಿಸುತ್ತಾರೆ.—ಇಂಡಿಯನ್ ಟ್ರೇಡ್ ಜರ್ನಲ್, ಏಪ್ರಿಲ್ ೪—೧೦—೧೦.

೨. ಜೋಳದ ತೆನೆಗಳಿಂದ ಕಾಳನ್ನು ಬಿಡಿಸುವ ಒಂದು ಯಂತ್ರವನ್ನು ಧೂಲಿಯಾ ವ್ಯವಸಾಯ ಸ್ಟೇಷನ್ನಿನಲ್ಲಿ ಅಜಮಾಯಿಷಿ ಮಾಡಿದರು. ಈ ಎಂತ್ರದಿಂದ ಒಬ್ಬಳೇ ಹೆಂಗಸು ದಿನ ಒಂದಕ್ಕೆ ೮ ಘಂಟೆ ಕೆಲಸ ಮಾಡಿ ೨೦೦ ಪೌಂಡು ಕಾಳನ್ನು ಬಿಡಿಸಿದಳು. ಇದು ಚಾಲ್ತಿಯಲ್ಲಿ ರೈತರು ರೂಢಿಯಾಗಿ ಬಿಡಿಸುವದಕ್ಕಿಂತ ೪ರಷ್ಟು ಹೆಚ್ಚಾಗಿದೆ. ಈ ಎಂತ್ರಕ್ಕೆ ರೂಪಾಯಿ ೭—೮—೦ ಖರೀದಿ.—ಧೂಲಿಯಾ ವ್ಯವಸಾಯದ ಸ್ಟೇಷನ್ ೧೯೦೮-೦೯ನೆ ಸಾಲ್ ರಿಪೋರ್ಟ್.

೩. ಸ್ಪೈಯಿರ್ ಮತ್ತು ಜರ್ಮ ದೇಶಗಳ ಸಣ್ಣ ತರಹೆ ನೇಗಡಲೆಗಳ
ಮಳೆ ಕಮ್ಮಿಯಾಗಿ ಬೀಳುವ ಪ್ರದೇಶಗಳಲ್ಲಿ ಸಾಗುವಳಿ ಮಾಡುವದಕ್ಕೆ
ಕ್ಕವುಗಳಾಗಿವೆ. ಸ್ಪೈಯಿರ್ ಸಣ್ಣ ಜಾತಿಯು ಫಸಲಿಟ್ಟ ೩-೩೩ ತಿಂ
ಳುಗಳೊಳಗಾಗಿ ಕಟಾವಿಗೆ ಸಿದ್ಧವಾಗುತ್ತೆ. ಈ ಜಾತಿಯು ಫಸಲಿಗೆ ನೀ
ರು ಕಟ್ಟುವ ಅವಶ್ಯಕವೇ ಇರುವದಿಲ್ಲ. ಧೂಲಿಯಾ ವ್ಯವಸಾಯದ ಫಾ
ರಂನಲ್ಲಿ ಈ ಜಾತಿಯನ್ನು ಸಾಗುವಳಿ ಮಾಡಿ ರೇಜಿಯಾದದ್ದನ್ನು ನೋ
ಡುವಕ್ಕೆ ಅನೇಕ ರೈತರು ಬಂದಿದ್ದರು. ಇವರೆಲ್ಲರೂ ಬೆಳೆ ಅತ್ಯಂತ ತ
ಪ್ತಿಕರವಾಗಿರುವದನ್ನು ನೋಡಿ ತಮ್ಮತಮ್ಮ ಜಮೀನುಗಳಲ್ಲಿ ಇವುಗಳ
ಬೆಳೆ ಇಡುವ ಉದ್ದಿಶ್ಯ ಫಾರಮಿನ ಅಧ್ಯಕ್ಷರಿಗೆ ಬೀಜಕ್ಕಾಗಿ ವಿಶೇಷವಾ
ದರಖಾಸ್ತುಗಳನ್ನು ಹಾಕಿಕೊಂಡಿರುತ್ತಾರೆ.—ಧೂಲಿಯಾ ವ್ಯವಸಾಯ ಕ್ಷೇ
ತ್ರದ ೦೯-೧೯ನೆ ಸಾಲ್ ರಿಪೋರ್ಟು.

---

೪. ಈಗ ಪ್ರಪಂಚದಲ್ಲಿ ತಯಾರಾಗುತ್ತಿರುವ ಕಾಗದವೆಲ್ಲಾ ಮರಗ
ಳನ್ನು ಯಂತ್ರಗಳ ಸಹಾಯದಿಂದ ಮರ್ದಿಸಿ ಹಾಲಿನಂತೆ ನೌರಾಗಿಯು
ಬೆಳ್ಳಗೂ ಆಗುವ ಸರಿಯಿಂದ ಆಗುತ್ತಿರುವದು. ಇನ್ನುಮೇಲೆ ಇಂಥಾ ಸ
ಯನ್ನು ಮಾಡಿಕೊಳ್ಳುವದಕ್ಕೆ ಮರಗಳ ಬದಲಾಗಿ ಬಿದರನ್ನು ಉಪಯೋ
ಗಿಸ ಹಚ್ಚಿರುತ್ತಾರೆ. ಬಿದರು ಬಹಳಬೇಗ ಬೆಳೆಯತಕ್ಕದ್ದಾದ್ದರಿಂದ ಜ
ಮೀನುಗಳಲ್ಲಿ ಅದನ್ನು ಸಾಗುವಳಿಮಾಡಿ ಸದಾಕಾಲವೂ ಸರಬರಾಯಿ
ಯು ಯಥೇಚ್ಛವಾಗಿರುವಂತೆ ಮಾಡಿಕೊಂಡು ದೊಡ್ಡ ಕಾಗದಗಳ ಕಾ
ರ್ಖಾನೆಗಳನ್ನು ನಡೆಸಬಹುದು. ಫರ್ಮೋಜಾ ದ್ವೀಪದಲ್ಲಿ ಜಪಾನೀಯರ
ಒಂದು ಕಂಪೆನಿಯವರು ೯೦೦೦ ಎಕರೆ ಬಿದರಿನ ಕಾಡನ್ನು ಗುತ್ತಿಗೆಗೆ ತೆ
ಗದುಕೊಂಡು ಕಾಗದವನ್ನು ತಯಾರು ಮಾಡುವದಕ್ಕೆ ಪ್ರಾರಂಭಿಸಿ
ರುತ್ತಾರೆ.—ಇಂಡಿಯನ್ ಟ್ರೇಡ್ ಜರ್ನಲ್, ಏಪ್ರಿಲ್ ೪—೧೦—೧೦.

---

೫. ಬೊಂಬಾಯಾಧಿಪತ್ಯದ ಧೂಲಿಯಾ ಎಂಬ ಊರಿನಲ್ಲಿರುವ ಸ
ರ್ಕಾರಿ ವ್ಯವಸಾಯ ಫಾರಂನಲ್ಲಿ ಕಬ್ಬನ್ನು ಸಾಗುವಳಿ ಮಾಡಲೋಸುಗ
ಜಮೀನಿಗೆಲ್ಲಾ ಹಟ್ಟಿಗೊಬ್ಬರವನ್ನು ಹಾಕಿ ಆಮೇಲೆ ಆ ಜಮೀನನ್ನು
ಮೂರು ತಾಕುಗಳಾಗಿ ವಿಂಗಡಿಸಿಕೊಂಡು ಪೈರನ್ನಿಟ್ಟು ಆಮ ಬೆಳೆಯ

ತ್ತಿರುವಾಗ ಒಂದು ತಾಕಿಗೆ ಹರಳು ಹಿಂಡಿಯನ್ನೂ ಬೇರೊಂದು ತಾಕಿಗೆ
ಕುಸುಬೆ ಹಿಂಡಿಯನ್ನೂ ಮತ್ತೊಂದು ತಾಕಿಗೆ ಬರಿ ಹಟ್ಟಿ ಗೊಬ್ಬರ
ವನ್ನು ಮೇಲೊಗ್ಗೊಬ್ಬರವಾಗಿ ಕೊಡಲ್ಪಟ್ಟಿತು. ಫಸಲು ಕಟಾವಾದಮೇಲೆ
ಒಂದೊಂದು ತಾಕಿನಿಂದ ೧೪೦೦ ಪೌಂಡು ತೂಕದಷ್ಟು ಕಬ್ಬನ್ನು ಆಲೆ
ಯಾಡಿ ಬೆಲ್ಲಮಾಡಿ ನೋಡಿದ್ದರಲ್ಲಿ ಹರಳು ಹಿಂಡಿಯನ್ನು ಕೊಟ್ಟಿದ್ದ ಕ
ಬ್ಬಿನಿಂದ ಬಾಕಿಕಬ್ಬಿಗಿಂತ ಹಾಲು ಕಮ್ಮಿ ಹೊರಟಿದ್ದರೂ ಬೆಲ್ಲ ಹೆಚ್ಚಾಗಿ
ಆಯಿತು. ಬರೀ ಹಟ್ಟಿ ಗೊಬ್ಬರವನ್ನು ಕೊಟ್ಟಿದ್ದ ಕಬ್ಬಿನಿಂದ ಹಾ
ಲು ಹೆಚ್ಚಾಗಿ ಹೊರಟರೂ, ಬೆಲ್ಲದ ಇಳಿತ ಬಾಕಿ ಕಬ್ಬಿಗಿಂತ ಕಮ್ಮಿಯಾ
ಯಿತು.—ಧೂಲಿಯಾ ವ್ಯವಸಾಯ ಸ್ಟೇಷನ್ನಿನ ೧೮-೯ನೆ ಸಾಲ್ ರಿಪೋರ್ಟ್.

———:o:———

೬. ಪ್ರತಿ ವರುಷವೂ ಬತ್ತದ ಪೈರು ಕಟಾವಿಗೆ ಸಿದ್ಧವಾಗುತ್ತಲೇ ಅ
ತ್ಯಂತ ಸೊಂಪಾಗಿ ಬೆಳದಿರುವ ತೆನೆಗಳಿಂದ ಕಾಳನ್ನು ಬಿಡಿಸಿಕೊಂಡು
ಮುಂದಿನ ಫಸಲಿಗೆ ಉಪಯೋಗಿಸುತ್ತಾ ಬಂದಲ್ಲಿ ವರುಷ ವರುಷಕ್ಕೂ
ಪೈರನ್ನು ಉತ್ತಮ ಪಡಿಸಿಕೊಳ್ಳುತ್ತಾ ಬರಬಹುದು. ಈ ವಿಷಯದಲ್ಲಿ
ಮತ್ತೊಂದು ವಿಷಯವನ್ನು ನೆನಪಿನಲ್ಲಿಟ್ಟುಕೊಳ್ಳತಕ್ಕದ್ದಿರುತ್ತೆ. ಅದು
ಯಾವದಂದರೆ, ಯಾವ ಯಾವ ಪೈರು ಬುಡದಲ್ಲಿ ಅತ್ಯಂತ ಹೆಚ್ಚಾಗಿ ಕವ
ಲುಗಳನ್ನು ಒಡೆದು ಅನೇಕ ತೆನೆಗಳನ್ನು ಹೊತ್ತಿರುತ್ತೋ ಅಂಥಾದ್ದರಿಂ
ದಲೆ ಪ್ರತಿವರುಷವೂ ಮುಂದಿನ ಬೀಜವನ್ನು ಬಿಡಿಸಿಕೊಳ್ಳುತ್ತಾ ಬಂದ
ಲ್ಲಿ ಕೆಲವು ವರುಷಗಳ ಮೇಲೆ ಒಂದೇ ಬೀಜದಿಂದ ವಿಶೇಷವಾಗಿ ಕವಲುಗ
ಳು ತೆನೆಗಳು ಆಗುತ್ತಾದ್ದರಿಂದ ಜಮೀನಿನಲ್ಲಿ ಒಂದೊಂದೇ ಮೊಳಕೆಯಾ
ಗಿ ನಾಟಿಹಾಕಿ ಫಸಲು ಮಾಡುವದಕ್ಕೂ ಅನುಕೂಲಿಸುತ್ತೆ. ಇದರಿಂದ
ಬೀಜದ ಖರ್ಚು ಕಮ್ಮಿಯಾಗುವದಲ್ಲದೆ ಎಕರೆ ಒಂದಕ್ಕೆ ಹುಟ್ಟುವಳಿ
ಯೂ ಕೂಡ ಜಾಸ್ತಿಯಾಗುತ್ತಾ ಬರುವದರಲ್ಲಿ ಸಂದೇಹವಿಲ್ಲ.—ಅಗ್ರಿ
ಕಲ್ಚರಲ್ ಮತ್ತು ಇಣ್ಡಸ್ಟ್ರಿಯಲ್ ಪ್ರೋಗ್ರೆಸ್.—ಏಪ್ರಿಲ್ ೧೯೧೦.

———o———

೭. ಟ್ರಿನಿಡಾಡ್ ದ್ವೀಪದಲ್ಲಿನ ಒಂದುನೊಂದು ವ್ಯವಸಾಯಕ ಸಂಘದವ
ರು ಮರಗಳ ಮದ್ದುಗಳಿಂದಲೂ, ಪೂರ್ತಿಯಾಗಿ ಕಡಿಯಲ್ಪಡದೆ ಭೂಮಿ
ಯಲ್ಲಿ ನಿಂತಿರುವ ಮರಗಳ ಬುಡಗಳಿಂದಲೂ ವ್ಯವಸಾಯಕ್ಕೆ ಉಂಟಾ

ಗುವ ಹಾನಿಯನ್ನು ಕುರಿತು ಈ ಕೆಳಗೆ ಕಂಡಂತೆ ತಿಳಿಸಿರುತ್ತಾರೆ:—

ಭೂಮಿಯಮೇಲೆ ಉಳಿದಿರುವ ಮದ್ದುಗಳ ಮತ್ತು ಭೂಮಿಯ ಲ್ಲಿಯೇ ನಿಂತಿರುವ ಹಳೆ ಬುಡಗಳ ಸಮೀಪದಲ್ಲಿ ಬೆಳೆಯುವ ಗಿಡಗಳು ಸ ಲ್ಪ ಹೆಚ್ಚು ಕಡಿಮೆ ಬಹಳ ಜಾಗ್ರತೆಯಾಗಿ ಒಣಗಿಹೋಗುವದು ಪದೇ ಪದೇ ನಮ್ಮ ಗಮನಕ್ಕೆ ಬರುತ್ತಲೆ ಇದೆ. ಹೀಗಾಗುವದು ಏಕೆಂದರೆ, ಇಂಥಾ ಬುಡಗಳು ಮತ್ತು ಮದ್ದುಗಳು ಕಾಲಕ್ರಮೇಣ ಕೊಳೆಯು ಹ ತ್ತುವಕಾರಣ ಅವುಗಳಿಂದ ವಿಷಕರವಾದ ರಸಗಳು ವಗೈರೆ ಹೊರಟು ಆ ಜೂಬಾಜುವಿನಲ್ಲಿ ಬೆಳೆಯುವ ಫಸಲನ್ನು ಕೊಂದು ಹಾಕುವದು. ಅನೇಕಾ ವರ್ತಿ ಹೀಗೆ ಕೊಲ್ಲಲ್ಪಟ್ಟ ಗಿಡಗಳನ್ನು ಮತ್ತು ಅವುಗಳ ಬೇರುಗಳನ್ನು ಪರೀಕ್ಷಿಸಿದಲ್ಲಿ ಅವುಗಳಿಗೆ ಹತ್ತಿರುವ ಬೂದು ಸಂಬಂಧವಾದ ಗೂಡುಗಳ ಯಳೆಗಳು ಹಳೆ ಬುಡಗಳಿಗೂ ಮತ್ತು ಮದ್ದುಗಳಿಗೂ ಹೋಗಿ ಅಂಟಿ ಕೊಂಡಿರುವದು ಗೊತ್ತಾಗುತ್ತೆ. ಆದ್ದರಿಂದ ವ್ಯವಸಾಯಗಾರರು ಸಾಧ್ಯ ವಾದಮಟ್ಟಿಗೂ ಬುಡಗಳನ್ನೂ ಮದ್ದುಗಳನ್ನೂ ಸಾಗುವಳಿ ಜಮೀನಿನಿಂ ದ ಸಾಗಿಸಬೇಕಾದ್ದೊಂದಲ್ಲದೆ, ಬುಡಗಳ ಕೆಳಗೆ ಭೂಮಿಯಲ್ಲಿ ನಿಂತಿರ ಬೇರುಗಳನ್ನೆಲ್ಲಾ ಶೋಧಿಸಿ ತೆಗದುಹಾಕುವದು ಉತ್ತಮ.—ಇಂಡಿಯ ಟ್ರೇಡ್ ಜರ್ನಲ್, ೧೯೧೦.

---

೪. ಈ ಕೆಳಗೆ ನಮೂದಿಸಿರುವ ಕೋಆಪರೇಟಿವ್ ಸೊಸೈಟಿಯ ಮೈಸೂರು ಕೋಆಪರೇಟಿವ್ ಸೊಸೈಟಿಗಳ ರೆಗ್ಯುಲೇಷನ್ ಪ್ರಕ ರಿಜಸ್ಟರು ಮಾಡಲ್ಪಟ್ಟಿರುತ್ತೆ:—

ಹೆಸರು	ಸ್ಥಳ	ರಿಜಸ್ಟರಾದ ತಾರೀಖು.
ರಾಮೋಹಳ್ಳಿ ಅನ್ಯೋನ್ಯ ಸಹಾಯ ಸಂಘ ಲಿಮಿಟೆಡ್.	ರಾಮೋಹಳ್ಳಿ, ಕೆಂಗೇರಿ ಹೋಬಳಿ, ಬೆಂಗಳೂರು ತಾಲ್ಲೂಕು.	೧೯೧೦ನೆ ಇಸವಿ ಸೆಪ್ಟಂಬರ್ ೩ನೆ ತಾರೀಖು.

V. B. S. & SONS, BANGALORE.—1910.